ಕುಲಕಸುಬುಗಳು ಮತ್ತು ಆಧುನಿಕತೆ

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಎಸ್.ವೈ. ತಿಮ್ಮಾರೆಡ್ಡಿ

ಮಾರ್ಗದರ್ಶಕರು

ಡಾ. ಹೆಬ್ಬಾಳೆ ಕೆ. ನಾಗೇಶ್

ಸಹ ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೦

page 6-7

ಕುಲಕಸುಬುಗಳು ಮತ್ತು ಆಧುನಿಕತೆ

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಎಸ್.ವೈ. ತಿಮ್ಮಾರೆಡ್ಡಿ

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಸಹ ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೦

ಮಾರ್ಗದರ್ಶಕರ ದೃಢೀಕರಣ ಪತ್ರ

"ಕುಲಕಸುಬುಗಳು ಮತ್ತು ಆಧುನಿಕತೆ" (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ **ಎಸ್.ವೈ.ತಿಮ್ಮಾರೆಡ್ಡಿ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಹೆಬ್ಬಾಲೆ ಕೆ. ನಾಗೇಶ್
ಸಹ ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ದಿನಾಂಕ : 30-8-2010
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

"ಕುಲಕಸುಬುಗಳು ಮತ್ತು ಆಧುನಿಕತೆ" (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಮಹಾಪ್ರಬಂಧವು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ **ಡಾ. ಹೆಬ್ಬಾಲೆ ಕೆ. ನಾಗೇಶ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಎಸ್.ವೈ. ತಿಮ್ಮಾರೆಡ್ಡಿ
ಸಂಶೋಧಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: 30.8.2010
ಸ್ಥಳ : ವಿದ್ಯಾರಣ್ಯ.

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಲು ಅವಕಾಶ ನೀಡಿದ ಹಿಂದಿನ ಕುಲಪತಿಗಳಾದ ಡಾ. ಬಿ.ಎ.ವಿವೇಕ ರೈ, ಹಾಗೂ ಇಂದಿನ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಕುಲಸಚಿವರ, ಅಧ್ಯಯನಾಂಗದ ನಿರ್ದೇಶಕರ ಸಹಕಾರಕ್ಕೆ ಧನ್ಯವಾದಗಳು.

ಮಹಾಪ್ರಬಂಧದ ರಚನೆಯ ಪ್ರತಿ ಹಂತದಲ್ಲೂ ನನ್ನನ್ನು ಪ್ರೋತ್ಸಾಹಿಸಿ ಸಹಕರಿಸಿ ಆತ್ಮೀಯವಾಗಿ ನಡೆಸಿಕೊಂಡು ಸೂಕ್ತ ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ ಡಾ. ಹೆಬ್ಬಾಲೆ ಕೆ. ನಾಗೇಶ್ ಅವರ ಸಹಕಾರವನ್ನು ಸದಾ ನೆನೆಯುತ್ತೇನೆ.

ಅಧ್ಯಯನಕ್ಕೆ ಸಹಕರಿಸಿದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಸ.ಚಿ.ರಮೇಶ್, ಇಂದಿನ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ, ಡಾ. ಮೊಗಳ್ಳಿ ಗಣೇಶ್ ಅವರ ಸಹಕಾರಕ್ಕೆ ಧನ್ಯವಾದಗಳು.

ನನ್ನನ್ನು ಸಂಶೋಧನೆಗೆ ತೊಡಗುವಂತೆ ಮಾಡಿ, ಅಧ್ಯಯನದ ಅವಧಿಯಲ್ಲಿ ತುಂಬು ಸಹಕಾರ ನೀಡಿದ ಸಹೋದರ ಡಾ. ಎಸ್.ವೈ. ಸೋಮಶೇಖರ್ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಅಧ್ಯಯನಕ್ಕೆ ಪ್ರೋತ್ಸಾಹಿಸಿದ ಬಂಧುಗಳು, ವಿಧಾನ ಪರಿಷತ್ತು ಸದಸ್ಯರಾದ ಶ್ರೀ. ಎನ್.ತಿಪ್ಪಣ್ಣ ಅವರಿಗೆ, ಸಂಶೋಧನೆಗೆ ಬೇಕಾದ ಅಂಕಿ–ಅಂಶಗಳು ಹಾಗೂ ಮಾಹಿತಿಗಳನ್ನು ಒದಗಿಸಿದ ಅಪರ ಜಿಲ್ಲಾಧಿಕಾರಿ ಶ್ರೀ. ಜಿ.ಎನ್.ಶಿವಮೂರ್ತಿ ಹಾಗೂ ತಹಶೀಲ್ದಾರ್ ಶ್ರೀ.ಪಿ.ಎಸ್. ಮಂಜುನಾಥ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸರ್ವ ರೀತಿಯಿಂದಲೂ ಆತ್ಮೀಯತೆಯಿಂದ ಮಾಹಿತಿಗಳನ್ನು ನೀಡಿ ಸಹಕರಿಸಿದ ಕುಲಕಸುಬು ಸಮುದಾಯದವರಿಗೆ ಅಭಾರಿಯಾಗಿದ್ದೇನೆ.

ಮಹಾಪ್ರಬಂಧದ ರಚನೆಯ ಸಂದರ್ಭದಲ್ಲಿ ಗ್ರಂಥಾಲಯದಲ್ಲಿ ಸಹಕರಿಸಿದ ಡಾ. ನಾಗವೇಣಿ, ಡಾ. ರಾಧಾಕೃಷ್ಣ ಮತ್ತು ಸಿಬ್ಬಂದಿ ವರ್ಗದವರನ್ನು ನೆನೆಯುತ್ತೇನೆ.

ಸಂಶೋಧನೆಗೆ ನೆರವಾದ ಪ್ರಾಚಾರ್ಯರಾದ ವಿಜಯನಗರ ಕಾಲೇಜಿನ ಡಾ.ಆರ್.ಮರೇಗೌಡ, ಸಹೋದ್ಯೋಗಿ ಮಿತ್ರರಾದ ಶ್ರೀ. ಹೆಚ್.ಬಿ.ಆನಂದಳ್ಳಿ, ಶ್ರೀ. ಕೆ.ಪ್ರಕಾಶ, ಡಾ. ಎಂ.ಜೆ. ಬಸವರಾಜ್, ಡಾ. ಕೆ.ರೇವಣಸಿದ್ಧಪ್ಪ, ಡಾ. ಕೆ.ಎಂ.ಮಂಜುನಾಥ, ಶ್ರೀ. ಗೋವಿಂದನಾಯ್ಕ್, ಡಾ. ಕೆ.ಸಿ.ತಿಪ್ಪೇಸ್ವಾಮಿ, ಶ್ರೀ. ಸಿ.ಎಂ. ಮಂತ್ರಜಾತಯ್ಯ ಅವರುಗಳನ್ನು ಪ್ರೀತಿಯಿಂದ ನೆನೆಯುತ್ತೇನೆ.


ನನ್ನ ಶ್ರೇಯಸ್ಸಿನ ಪ್ರತಿ ಹಂತದಲ್ಲೂ ನನಗೆ ಉತ್ತೇಜನ ಮತ್ತು ಪ್ರೋತ್ಸಾಹ ನೀಡಿದ ಪೂಜ್ಯ ತಂದೆ ತಾಯಿಯವರಿಗೂ, ಸಹೋದರರಿಗೂ, ನನ್ನ ಶ್ರೀಮತಿ ಲಲಿತಾ ಹಾಗೂ ಮಕ್ಕಳಾದ ಸೌಮ್ಯ, ಸಾಗರ, ಅವರುಗಳ ಸಹಕಾರವನ್ನು ತುಂಬು ಹೃದಯದಿಂದ ನೆನೆಯುತ್ತೇನೆ.

ಮಹಾಪ್ರಬಂಧವನ್ನು ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಶ್ರೀಮತಿ. ಹೆಚ್.ಕೆ.ಭಾರತಿ ಅವರಿಗೆ ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು.

– ಎಸ್.ವೈ. ತಿಮ್ಮಾರೆಡ್ಡಿ

ಪರಿವಿಡಿ

ಬಳ್ಳಾರಿ ಜಿಲ್ಲೆ


ರಾಯಚೂರು
ಸಿರಗುಪ್ಪ
ಆಂಧ್ರಪ್ರದೇಶ
ಕೊಪ್ಪಳ
ಹೊಸಪೇಟೆ
ಬಳ್ಳಾರಿ
ಗದಗ
ಹ.ಬೊ.ಹಳ್ಳಿ
ಸಂಡೂರು
ಹೂ.ಹಡಗಲಿ
ಕೂಡ್ಲಿಗಿ
ಹಾವೇರಿ
ಚಿತ್ರದುರ್ಗ
ದಾವಣಗೆರೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ

ಜಾನಪದ ನಮಗಿಂದು ಹಳ್ಳಿಯ ಹಾಡಾಗಿ ಉಳಿದಿಲ್ಲ. ಜನಪ್ರಿಯ ಪಳೆಯುಳಿಕೆಯೂ ಅಲ್ಲ. ಜಾನಪದ ತುಂಬಾ ವಿಶಾಲವಾದದ್ದು. ಗ್ರಾಮೀಣ ಪ್ರದೇಶದ ಅಕ್ಷರಸ್ಥ ಹಾಗೂ ಅನಕ್ಷರಸ್ಥ ಸಮುದಾಯದ ನಡುವೆ ಬದುಕಿ ಉಳಿದಿರುವ ಹಾಡು, ಕುಣಿತ, ಪ್ರದರ್ಶನ, ಕಲೆ ಮತ್ತು ಹಳೆಯ ಪಳೆಯುಳಿಕೆಯ ಸರಕು ಸರಂಜಾಮುಗಳ ದಾಖಲಾತಿ ಸಂಗ್ರಹವಾಗಿಯಷ್ಟೇ ಉಳಿದಿಲ್ಲ. ಸಂಸ್ಕೃತಿಯೊಂದು ಸ್ಥಿರಬಿಂದುವಲ್ಲ. ಅದು ನಿರಂತರ ಸಾಗುತ್ತಿರುವ ಪ್ರವಾಹ ಎಂಬುದನ್ನು ಒಪ್ಪಿಕೊಂಡು ನಮ್ಮ ಅಧ್ಯಯನ ಸಾಗಿಬರುವುದರಿಂದ ಜಾನಪದದ ಬಗೆಗಿನ ಪರಿಭಾವನೆ ಇದೀಗ ಬದಲಾಗಿದೆ. ಇಂದಿನ ಆಧುನಿಕ, ವೈಜ್ಞಾನಿಕ, ತಾಂತ್ರಿಕತೆ ತಂದ ಸಮಾಜದಲ್ಲಿ ಜಾನಪದ ಹುಟ್ಟುವ ಮೂಲ ಹಿಂದಿನಷ್ಟು ಸಮೃದ್ಧ ಅಲ್ಲದೆ ಹೋಗಬಹುದು. ಆದರೆ ಬದಲಾದ ಸಂದರ್ಭದಲ್ಲಿ ಜಾನಪದ ಇದ್ದೇ ಇರುತ್ತದೆ. ನಿನ್ನೆಯ ರೂಪದಲ್ಲಿ ಅಲ್ಲ, ಇಂದಿನ ಕಾಲಕ್ಕೆ ಹೊಸರೂಪದಲ್ಲಿ, ಜಾನಪದ ವಿಕಾಸಶೀಲ ಅಧ್ಯಯನದ ರೂಪದಲ್ಲಿ ಬೆಳೆಯುತ್ತಿರುವ ಜ್ಞಾನಶಾಖೆಯಾಗಿರುವುದರಿಂದ ಪಾರಂಪರಿಕ ತಿಳುವಳಿಕೆಗಳು ಹೊಸ ರೂಪ ಪಡೆದುಕೊಳ್ಳುತ್ತಿವೆ. ಇಂದು ಜಾನಪದ ವಿಜ್ಞಾನ ಶಾಖೆಯಲ್ಲಿ ಮಾಹಿತಿಗಳ ಸಂಗ್ರಹ, ಪಠ್ಯಗಳ ವಿಶ್ಲೇಷಣೆಯ ಕೆಲಸವಷ್ಟೇ ನಡೆಯುತ್ತಿಲ್ಲ. ಸಮಕಾಲೀನ ಬದುಕಿನಲ್ಲಿ ಅದರ ಕಾರ್ಯ ಹಾಗೂ ಪ್ರಸ್ತುತತೆಯನ್ನು ಶೋಧಿಸುತ್ತಾ ಅದರ ಚಲನಶೀಲತೆಯನ್ನು ಮನ್ನಿಸುತ್ತ ಅದು ತೋರುವ ಬದುಕಿನ ಎಲ್ಲಾ ಬಹುತ್ವಗಳನ್ನು ಒಪ್ಪಿಕೊಳ್ಳುತ್ತ ಅಧ್ಯಯನ ಸಾಗಿಬರುತ್ತದೆ. ಜಾನಪದವು ಸಾಹಿತ್ಯ ವಿಭಾಗದೊಳಗಿನ ಶಾಖೆಯಾಗಿ ಉಳಿಯದೆ, ಅಂತರ್‌ಶಿಸ್ತೀಯ ಅಧ್ಯಯನದಿಂದ

ಬಹು ಆಯಾಮವನ್ನು ಶಾಸ್ತ್ರ ನಿಖರತೆಯನ್ನು ಪಡೆದುಕೊಳ್ಳುತ್ತಿದೆ. ಬುಡಕಟ್ಟು, ಅಭಿವೃದ್ಧಿ, ಪರಿಸರ ಅಧ್ಯಯನ, ಮೌಖಿಕ ಚರಿತ್ರೆ, ವೃತ್ತಿ ಅಥವಾ ಕಸುಬುಗಳ ಅಧ್ಯಯನ, ಆಹಾರ ಪೋಷಣೆ, ವೈದ್ಯ ಪದ್ಧತಿ, ಜಾನಪದ ವೃತ್ತಿ ಮುಂತಾದ ಅನ್ವಯಿಕ ಕ್ಷೇತ್ರಗಳಲ್ಲಿ ಜಾನಪದದ ಬಳಕೆ ಉತ್ತಮ ಫಲಿತಾಂಶ ನೀಡುತ್ತಿದೆ.

ಜಾನಪದ ವಿಜ್ಞಾನ ಪ್ರಾದೇಶಿಕ ಸಾಮಗ್ರಿಗಳನ್ನು ಬಳಸಿಕೊಂಡು ಅಧ್ಯಯನಕ್ಕೊಳ ಪಡಿಸುವುದಾದರೂ, ಅದೊಂದು ಸಾರ್ವತ್ರಿಕ ಅಧ್ಯಯನ ಶಿಸ್ತಾಗಿ ರೂಪುಗೊಳ್ಳುತ್ತಿದೆ. ಹೀಗಾಗಿ ಬೇರೆ ಬೇರೆ ಸಿದ್ಧಾಂತಗಳ ಹಿನ್ನೆಲೆಯಲ್ಲಿ ನಮ್ಮ ಜಾನಪದವನ್ನು ಕಂಡುಕೊಳ್ಳುವ ಪ್ರಯತ್ನ ನಡೆಸಬೇಕಾಗಿದೆ. ಜಾನಪದ ಮೌಖಿಕ ಸಾಹಿತ್ಯ ರೂಪಗಳಂತೆಯೇ ಜಾನಪದದ ವಸ್ತು ಸಂಸ್ಕೃತಿಯ ಅಧ್ಯಯನ ರೂಪುಗೊಳ್ಳಬೇಕಾಗಿದೆ. ವಸ್ತು ಸಂಸ್ಕೃತಿಯು ಕಣ್ಣಿಗೆ ಕಾಣುವಂತಹ ಪ್ರಕಾರಗಳ ಬಗ್ಗೆ ಗಮನ ಕೇಂದ್ರಿಕರಿಸುತ್ತದೆ. ಇದರಲ್ಲಿ ಕಾಲದಿಂದ ಕಾಲಕ್ಕೆ, ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿರುವ ಉತ್ಪಾದನಾ ತಂತ್ರ, ಕುಶಲತೆ ವಿಧಾನ, ಸೂತ್ರಗಳು ಅಧ್ಯಯನದಲ್ಲಿ ಸೇರಿಕೊಳ್ಳುತ್ತವೆ. ವಸ್ತು ಸಂಸ್ಕೃತಿಯ ಅಧ್ಯಯನದಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿರುವ ವೃತ್ತಿಗಳ ಅಧ್ಯಯನ ಮುಖ್ಯವೆನಿಸಿದೆ.

ಬಹುಮುಖ ಸಂಸ್ಕೃತಿಯಾದ ಗ್ರಾಮೀಣ ಭಾರತದಲ್ಲಿ ಹಲವು ಬಗೆಯ ಜೀವನ ಕ್ರಮಗಳು ಸಮ್ಮಿಲನಗೊಂಡಿವೆ. ಗ್ರಾಮೀಣ ಬದುಕಿನಲ್ಲಿ ಪರಂಪರಾಗತವಾಗಿ ಮುಂದುವರಿದುಕೊಂಡು ಬಂದಿರುವ ವೃತ್ತಿಗಳು ಜಾನಪದ ವೃತ್ತಿಗಳಾಗಿವೆ. ಅನಾದಿ ಕಾಲದಿಂದಲೂ ಮಾನವನು ತನ್ನ ಜೀವನಕ್ಕಾಗಿ ಹಲವಾರು ವೃತ್ತಿಗಳನ್ನು ಅಳವಡಿಸಿಕೊಂಡು ತಮಗೆ ಹಾಗೂ ಇತರರಿಗೆ ಅಗತ್ಯವಾದ ವಸ್ತು ಮತ್ತು ಸೇವೆಗಳನ್ನು ಒದಗಿಸುತ್ತಾ ಬಂದಿದ್ದಾನೆ. ಮಾನವನ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದುಕೊಂಡು ಬಂದಿರುವ ವೃತ್ತಿಗಳು ಜಾಗತಿಕ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತಿವೆ. ವೃತ್ತಿಗಳು ಯಾವುದೇ ಭೂಮಿ ಮತ್ತು ಪರಂಪರೆಯ ಪ್ರತೀಕವಾಗಿವೆ. ಗ್ರಾಮೀಣ ಪ್ರದೇಶ ಆಧಾರಿತ ಭಾರತ ದೇಶದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಪದ್ಧತಿಗಳಿಗೆ ಇಂಬು ನೀಡಿ ಪುರಾಣ, ಐತಿಹ್ಯ ಮತ್ತು ಸಾಹಿತ್ಯದಲ್ಲಿ ವೃತ್ತಿ ಅಥವಾ ಕಸುಬುಗಳ ಉಲ್ಲೇಖಗಳಿವೆ.

ವೃತ್ತಿ ಅಥವಾ ಕಸುಬುಗಳ ಉಗಮವನ್ನು ಕುರಿತು ನಿರ್ಧಾರಿತ ಹಾಗೂ ನಿಖರವಾಗಿ ಹೇಳುವುದು ಕಷ್ಟಸಾಧ್ಯ. ವೃತ್ತಿಗಳು ಹಾಗೂ ವಿವಿಧ ಕಲೆಗಳ ವಿಕಾಸಕ್ಕೂ, ಮಾನವನ ಬುದ್ಧಿ ಭಾವಗಳ ಬೆಳವಣಿಗೆಗೂ ನೇರ ಸಂಬಂಧವಿದೆ. ಆರಂಭದಲ್ಲಿ ಮನುಷ್ಯನು ಕಾಡಿನ ಗುಹೆಯಲ್ಲಿ ವಾಸಿಸುತ್ತಿದ್ದ ಅವನಿಗೆ ಹಸಿವು ಬಾಯಾರಿಕೆಗಳಾದಾಗ ಪ್ರಕೃತಿಯ ಮಡಿಲಲ್ಲಿ ಬೆಳೆಯುವ ಕಂದಮೂಲಗಳನ್ನು ತಿನ್ನುತ್ತಿದ್ದ. ಅಲ್ಲಿ ಹರಿಯುವ ನೀರನ್ನು ಕುಡಿಯುತ್ತಿದ್ದ. ಕಾಡಿನಲ್ಲಿ ವಾಸಿಸುತ್ತಿದ್ದ

ಮಾನವನು ಪ್ರಾರಂಭದಲ್ಲಿ ನಗ್ನವಾಗಿರುತ್ತಿದ್ದ. ಅವನಿಗೆ ನಾಚಿಕೆ, ಭಯ, ಆತಂಕ ಇರಲಿಲ್ಲ. ತನ್ನದೇ ಆದ ರೀತಿ-ರಿವಾಜುಗಳಿಂದ ಬದುಕನ್ನು ನಡೆಸುತ್ತಿದ್ದನು. ಹೀಗೆ ಅನೇಕ ವರ್ಷಗಳು ಗತಿಸಿದ ಮೇಲೆ ಅವನು ಆಲೋಚನೆ ಮಾಡುವಷ್ಟರ ಮಟ್ಟಿಗೆ ಅವನ ಬುದ್ಧಿ ವಿಕಾಸ ಹೊಂದುತ್ತಾ ಬಂದಿತು. ಮೊದಲು ಕಂದಮೂಲಗಳನ್ನು ತಿಂದು ಬದುಕುತ್ತಿದ್ದ ಮನುಷ್ಯ ನಂತರ ಕಾಡುಮೃಗಗಳನ್ನು ಬೇಟೆಯಾಡಿ ಅವುಗಳ ಹಸಿ ಮಾಂಸವನ್ನು ತಿನ್ನುವುದನ್ನು ಕಲಿತ. ನಂತರ ಬೆಂಕಿಯನ್ನು ಕಂಡುಹಿಡಿದು ಆಹಾರವನ್ನು ಬೇಯಿಸಿ ತಿನ್ನಲು ಪ್ರಾರಂಭಿಸಿದ. ಒಂಟಿಯಾಗಿ ಜೀವಿಸುತ್ತಿದ್ದ ಮಾನವ ನಂತರ ಗುಂಪಿನಲ್ಲಿ ಜೀವಿಸಲು ಪ್ರಾರಂಭಿಸಿದ. ಗುಂಪುಗಳಲ್ಲಿ ವಾಸಿಸುತ್ತಿದ್ದವನು ಗ್ರಾಮ ಜೀವಿಯಾದ. ಗ್ರಾಮಜೀವಿಯಾಗಿದ್ದವನು ಪಟ್ಟಣ-ನಗರ ವಾಸಿಯಾದನು. ಈ ಎಲ್ಲಾ ಹಂತಗಳಲ್ಲಿಯೂ ಭಾವನಾ ಜೀವಿಯಾಗಿ, ಸಂಘ ಜೀವಿಯಾಗಿ ಹಲವಾರು ಸಂಬಂಧ ಸಂಪರ್ಕಗಳನ್ನು ವಿಸ್ತರಿಸಿಕೊಂಡು ತನ್ನ ಬದುಕುವಿಕೆ, ಇರುವಿಕೆಗಳಲ್ಲಿ ಪರಿವರ್ತನೆಗಳನ್ನು ಕಾಣುತ್ತಾ ಇಂದಿನವರೆಗೂ ಬೆಳೆದುಕೊಂಡು ಬಂದಿದ್ದಾನೆ. ಜೊತೆಗೆ ತನ್ನ ಸುತ್ತಮುತ್ತಲಿನ ಪರಿಸ್ಥಿತಿ, ಪರಿಸರ, ಪರಿಕರಗಳನ್ನು ತನಗಾಗಿ, ತನ್ನವರಿಗಾಗಿ ಬಳಸಿಕೊಳ್ಳುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ.

ಗ್ರಾಮೀಣ ವೃತ್ತಿಗಳಲ್ಲಿ ಮಾನವ ಶ್ರಮವೇ ಮುಖ್ಯವಾದುದು. ಕೆಲಸಕ್ಕೆ ಅನಿವಾರ್ಯವೆನಿಸಿದ ಒಂದೆರಡು ಸರಳ ಯಂತ್ರಗಳನ್ನು ತಾವೇ ರೂಪಿಸಿಕೊಂಡಿರುವುದರಿಂದ ಇವುಗಳನ್ನು ಕೈಕಸುಬುಗಳು ಎಂದು ಕರೆಯಬಹುದು. ಕುಲಕಸುಬು ಮನೆತನದ ಉದ್ಯೋಗವಾಗಿ ಪರಿವರ್ತನೆಗೊಂಡಿದೆ. ಬದುಕಿನಲ್ಲಿ ಪರಂಪರಾಗತವಾಗಿ ರೂಢಿಸಿಕೊಂಡು ಬಂದಂತಹ ಕಸುಬು ಹಾಗೂ ಜಾತಿ ವೃತ್ತಿ ಎಂದೆಲ್ಲಾ ಅರ್ಥೈಸಬಹುದು. ಕೈಕಸುಬು, ಕಲೆಗಾರಿಕೆ, ವೃತ್ತಿ ಕಲೆಗಾರಿಕೆ, ಗುಡಿ ಕೈಗಾರಿಕೆ, ಗೃಹ ಕೈಗಾರಿಕೆ ಎಂಬ ಇತರೆ ಪ್ರಯೋಗಗಳು ಈ ಕಸುಬಿನ ವಿವಿಧಾರ್ಥವನ್ನು ಬಿಂಬಿಸುತ್ತವೆ. ಗ್ರಾಮೀಣ ಪ್ರದೇಶದ ಹಿಂದುಳಿದ ಜನಾಂಗ, ಅಲ್ಪಸಂಖ್ಯಾತರು, ಭೂಮಿ ಇಲ್ಲದವರು, ಬಡವರು ತಮ್ಮ ಜೀವನೋಪಾಯಕ್ಕಾಗಿ ತಲೆತಲಾಂತರದಿಂದ ಕೈಗೊಂಡು, ಮುಂದುವರಿಸಿಕೊಂಡು ಬಂದಿರುವ ವೃತ್ತಿಗಳು ಗ್ರಾಮೀಣ ಪ್ರದೇಶದ ಕುಲಕಸುಬುಗಳೆನ್ನುವರು. ಈ ಕಸುಬು ಅಥವಾ ವೃತ್ತಿಗಳಿಗೆ ಪರಂಪರೆ ಇದೆಯೇ ಹೊರತು ನಿರ್ದಿಷ್ಟ ತರಬೇತಿ ಇಲ್ಲ. ಹೆಚ್ಚಾಗಿ ಕೃಷಿಕನ ಆಶ್ರಯದಲ್ಲಿಯೇ ಬೆಳೆದಂತಹವುಗಳು. ಈ ವೃತ್ತಿಗಳಿಗೆ ಕೃಷಿ ಅಥವಾ ಒಕ್ಕಲುತನವೇ ಕೇಂದ್ರಬಿಂದು. ಗ್ರಹಗಳು ಹಾಗೂ ನಕ್ಷತ್ರಗಳು ಸೂರ್ಯನ ಸುತ್ತ ಸುತ್ತುವಂತೆ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ವೃತ್ತಿಗಳು ಕೃಷಿ ಅವಲಂಬಿತವಾಗಿವೆ. ಇವೆಲ್ಲವು ಕೃಷಿಕನಿಗೆ ಪೂರಕವಾದ ಉದ್ಯೋಗಗಳು. ಕೃಷಿಕನ ಆಶ್ರಯ, ಆಸರೆ ತಪ್ಪಿದಾಗ ನೆಲಕಚ್ಚಿದಂತಹ ಉದಾಹರಣೆಗಳಿವೆ. ಪ್ರಮುಖವಾಗಿ ಮೂಲಭೂತ ಜೀವನಾವಶ್ಯಕತೆಗಳನ್ನು ಪೂರೈಸುವುದಕ್ಕಾಗಿಯೇ ಇವು ಉದಯವಾಗಿವೆ. ಸಾಮಾಜಿಕ ಜೀವನದಲ್ಲಿ ಜಮೀನು ಇಲ್ಲದವನು, ತಮಗೆ ಇಷ್ಟವಾದ, ತನ್ನ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಕುಶಲತೆಗೆ

ಅನುಗುಣವಾಗಿ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ತನ್ನ ಪರಿಣತಿಯನ್ನು ತೋರ್ಪಡಿಸಿಕೊಳ್ಳುತ್ತಾ ಅದನ್ನೇ ತನ್ನ ಉಪಜೀವನದ ವೃತ್ತಿಯನ್ನಾಗಿಸಿಕೊಂಡು ಬಂದ ಒಂದು ವರ್ಗವೇ ಸಮಾಜದಲ್ಲಿ ರೂಪುಗೊಂಡಿದೆ.

ಗ್ರಾಮೀಣ ವೃತ್ತಿಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಅವುಗಳ ಪಾರಂಪರಿಕ ಸಂಗತಿ. ಪ್ರತಿಯೊಂದು ವೃತ್ತಿಗೂ ಅದಕ್ಕೆ ವಿಶಿಷ್ಟವಾದ ಕಚ್ಚಾ ಸಾಮಗ್ರಿ, ಸಂಸ್ಕರಣಾ ವಿಧಾನ ಹಾಗೂ ಕೆಲಸದ ಗುಣಮಟ್ಟವನ್ನು ನಿಷ್ಕರ್ಷಿಸುವ ಮಾನದಂಡಗಳು ಇರುತ್ತವೆ. ಕೆಲಸದ ತರಬೇತಿ ವಿಧಾನವು ಆಯಾ ವೃತ್ತಿಗೆ ವಿಶಿಷ್ಟವಾಗಿರುತ್ತದೆ. ಈ ವೃತ್ತಿಗಳಲ್ಲಿ ಕುಟುಂಬದ ಗಂಡಸರು, ಹೆಂಗಸರು ಹಾಗೂ ಬೇರೆ ಬೇರೆ ವಯೋಮಾನದವರೂ ನಿಗದಿತ ರೀತಿಯಲ್ಲಿ ಭಾಗಿಯಾಗುತ್ತಾರೆ. ಆಯಾಯ ಕುಲಕಸುಬುಗಳಿಗೆ ಪೂರಕವಾಗಿ ಸಮಸ್ಯೆಗಳಿರುವುದು ಸಹಜವೆನಿಸುತ್ತದೆ.

ಜೀವನದ ಬದುಕಿಗೆ ಅಗತ್ಯವಾದ ಉಪಕರಣ, ಸಾಧನ–ಸಲಕರಣೆಗಳನ್ನು ತಯಾರಿಸುವ ವೃತ್ತಿಗಳನ್ನು ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲೂ ಕಾಣಬಹುದು. ಪಶುಸಂಗೋಪನೆ ಮತ್ತು ವ್ಯವಸಾಯ ಮಾಡುವ ಒಕ್ಕಲುತನ, ಬಟ್ಟೆ ಶುಭ್ರಗೊಳಿಸುವ ಮಡಿವಾಳ ವೃತ್ತಿ, ತಲೆಗೂದಲನ್ನು ಕತ್ತರಿಸಿ ಶುಚಿಗೊಳಿಸುವ ಕ್ಷೌರಿಕ ವೃತ್ತಿ, ಬಟ್ಟೆಯನ್ನು ನೇಯುವ ನೇಕಾರಿಕೆ, ಬಟ್ಟೆ ಹೊಲೆಯುವ ಸಿಂಪಿಗಾರಿಕೆ, ಕೌದಿ ಹೊಲಿಯುವ ದೋಶಿಗಾರಿಕೆ, ಗಾದೆ ಹಾಕುವ ಪಿಂಜಾರಿಕೆ, ಮನೆಕಟ್ಟುವ ವಡ್ಡ ಅಥವಾ ಉಪ್ಪಾರಿಕೆ, ಹೊಳೆ ದಾಟಿಸುವ ಅಂಬಿಗ, ಬುಟ್ಟಿ, ಚಾಪೆ ಹೆಣೆಯುವ ಮೇದಾರ, ಹಾಲು ಮಾರುವ ಗೌಳಿಗ, ಕುರಿ ಸಾಕುವ ಕುರುಬ, ಬಳೆ ತಯಾರಿಸುವ ಬಳೆಗಾರ, ಬಣ್ಣ ತಯಾರಿಸುವ ಬಣಗಾರ, ಔಷಧಿ ಕೊಡುವ ವೈದ್ಯ, ಕಲ್ಲು ಕಡೆಯುವ ಕಲ್ಲುಕುಟಿಗ ವೃತ್ತಿ, ಶಿಲ್ಪ ತಯಾರಿಸುವ ಶಿಲ್ಪಗಾರಿಕೆ, ಹಿಡಿನೂಲಿಕೆ ತಯಾರಿಸುವ ಕೊರವಗಾರಿಕೆ, ಸುಣ್ಣ ತಯಾರಿಸುವ ಸುಣ್ಣಗಾರಿಕೆ, ಹೂಪತ್ರೆ ಕೊಡುವ ಹೂಗಾರಿಕೆ, ದೇವದೇವಿಯರ ಪೂಜಿಸುವ ಪೂಜಾರಿಕೆ, ವ್ಯವಸಾಯ ಹಾಗೂ ಗೃಹ ಉಪಯೋಗಿ ಉಪಕರಣಗಳನ್ನು ತಯಾರಿಸುವ ಬಡಗಿತನ, ಕುಡಗೋಲು, ಕೊಡಲಿ ಮುಂತಾದ ಕಬ್ಬಿಣದ ಸಾಧನ ಸಲಕರಣೆಗಳನ್ನು ತಯಾರಿಸುವ ಕಮ್ಮಾರಿಕೆ, ಮಣ್ಣಿನಿಂದ ಕುಡಿಕೆ, ಮಡಿಕೆ ತಯಾರಿಸುವ ಕುಂಬಾರಿಕೆ, ಚಿನ್ನ ಬೆಳ್ಳಿಯ ವಸ್ತು ಒಡವೆಗಳನ್ನು ತಯಾರಿಸುವ ಪತ್ತಾರಿಕೆ, ಊರ ಕಾಯುವ ತಳವಾರಿಕೆ, ಓಲೆ ಹಂಚುವ ಓಲೆಗಾರಿಕೆ, ಚರ್ಮದ ಸಾಮಾನುಗಳನ್ನು ತಯಾರಿಸುವ ಚಮ್ಮಾರಿಕೆ, ಎಣ್ಣೆ ತಯಾರಿಸುವ ಗಾಣಿಗ ವೃತ್ತಿ ಮತ್ತಿತರವು ಹಳ್ಳಿಗಾಡಿನ ಕಸುಬುಗಳಾಗಿವೆ. ತಲೆತಲಾಂತರದಿಂದ ಬೆಳೆದುಕೊಂಡು ಬಂದಿರುವ ಈ ಕುಲಕಸುಬು ಅಥವಾ ಜಾತಿ ಕಸುಬುಗಳು ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳಾದಂತೆ ರೂಪಾಂತರ ಹೊಂದುತ್ತವೆ. ಮೊದಲು ಕುಲಕಸುಬುಗಳು ಕೆಲವೇ ಜಾತಿಗೆ ಸಂಬಂಧಿಸಿದ್ದು, ಇಂದು ಎಲ್ಲಾ ವರ್ಗದ ಜನಜೀವನ ನಿರ್ವಹಣೆಗಾಗಿ ಇವುಗಳನ್ನು ಅವಲಂಬಿಸುವಂತಾಗಿದೆ. ಇಂದು ಇವು ಯಾವುದೇ ಜಾತಿ ಹಾಗೂ ವರ್ಗಕ್ಕೆ ಸೀಮಿತವಾಗಿಲ್ಲ. ಇವುಗಳನ್ನು ರೂಢಿಸಿಕೊಂಡು ಬಂದವರನ್ನು ಕುಲಕಸುಬುದಾರರೆನ್ನುವರು.

ಗ್ರಾಮೀಣ ಕುಲಕಸುಬುದಾರರ ಆರ್ಥಿಕತೆಯು ಅವರ ವೃತ್ತಿ ಮತ್ತು ವ್ಯಾಪಾರವನ್ನು ಅವಲಂಬಿಸಿದೆ. ಕುಲಕಸುಬುದಾರರಲ್ಲಿ ವಸ್ತುವಿನಿಮಯ ಮತ್ತು ಸೇವಾ ವಿನಿಮಯ ಇಂದಿಗೂ ಕಂಡುಬರುತ್ತಿರುವುದು ಗಮನಾರ್ಹ. ಹಿಂದಿನ ಗ್ರಾಮಗಳು ಸ್ವಾವಲಂಬಿ ಘಟಕಗಳಾಗಿದ್ದವು. ಇದು ಸಾಮಾಜಿಕ ಐಕ್ಯತೆಗೆ ಸಾಕ್ಷಿ. ಅವರೆಲ್ಲರೂ ಪರಸ್ಪರಾವಲಂಬಿಗಳು. ಆದ್ದರಿಂದ ಸಹಕಾರ, ಸಂಘಟನೆ ಅಲ್ಲಿ ಅನಿವಾರ್ಯ. ಆದರೆ ತಲೆತಲಾಂತರವಾಗಿ ತಂದೆಯಿಂದ ಮಗನಿಗೆ, ಅತ್ತೆಯಿಂದ ಸೊಸೆಗೆ ಬಳುವಳಿಯಾಗಿ ಬಂದ ಕರಕೌಶಲ್ಯದ ಬಳಿಕೆ ನಿಧಾನವಾಗಿ ಜಾತಿ ಪಂಗಡಗಳಾಗಿ ರೂಪಿತವಾದವು. ಇದರಿಂದ ಸಾಮಾಜಿಕ ಐಕ್ಯತೆ ಮುರಿದುಹೋಗುತ್ತಿದೆ. ಹಣದ ಬಳಕೆ ವಸ್ತು ವಿನಿಮಯ ಪದ್ಧತಿಯ ಅನುಕೂಲಗಳನ್ನು ಮೂಲೆಗುಂಪಾಗಿಸಿದೆ. ಇಂದು ಕಸುಬುದಾರರು ತಯಾರಿಸಿದ ಸರಕು ಸೇವೆಗಳನ್ನು ಹೊತ್ತು ಮಾರಿ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲು ಪರಿತಪಿಸುತ್ತಿದ್ದಾರೆ. ಇದರಿಂದಾಗಿ ಸಾಮಾಜಿಕ ಐಕ್ಯತೆಗೆ ದಕ್ಕೆಯಾಗಿದೆ. ಕೈಗಾರಿಕಾ ಕ್ರಾಂತಿ, ವಸಾಹತುಶಾಹಿ ಆಡಳಿತ, ನಗರೀಕರಣ, ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಪ್ರಕ್ರಿಯೆಗಳು ಪಾರಂಪರಿಕವಾಗಿ ಬಂದ ಕುಲಕಸುಬುಗಳನ್ನು ವಿನಾಶದ ಅಂಚಿಗೆ ನೂಕಿವೆ.

ಕುಲಕಸುಬುದಾರರು ಸಾಮಾಜಿಕ, ಸಾಂಸ್ಕೃತಿಕ ಮತ್ತು ವಿಶಿಷ್ಟ ಪರಂಪರೆಯ ವಾರಸುದಾರರು. ಆದರೆ ಬದಲಾಗುತ್ತಿರುವ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯಲ್ಲಿ ಕುಲಕಸುಬು ಮತ್ತು ಅವರ ಪರಂಪರೆಯು ವಿನಾಶದ ಅಂಚಿಗೆ ತಲುಪಿವೆ. ಇದರಿಂದ ಸಮಾಜದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿದೆ. ಬಡತನದ ಪ್ರಮಾಣ ಕೂಡ ಹೆಚ್ಚು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕುಲಕಸುಬುಗಳನ್ನು ಉಳಿಸುವುದು, ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಕಾಪಾಡುವುದು ಇಂದು ಅತ್ಯಗತ್ಯವಾಗಿದೆ.

ಅಧ್ಯಯನದ ಉದ್ದೇಶ:

ಜಾನಪದವು ಎಲ್ಲ ಬಗೆಯ ಅಧ್ಯಯನ ಶಿಸ್ತುಗಳ ಮೂಲ ಸೆಲೆ. ಇದರೊಂದಿಗೆ ವಿವಿಧ ಸಮಾಜವಿಜ್ಞಾನಗಳ ಸಿದ್ಧಾಂತಗಳಿಗೆ ಆಧಾರವನ್ನಾಗಿ ಜಾನಪದವನ್ನು ಬಳಸಿಕೊಳ್ಳಲಾಗುತ್ತಿದೆ. ಭಾರತೀಯ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಜಾನಪದವೇ ಒಂದು ದೊಡ್ಡ ಆಕರ. ಜಾನಪದವು ರೂಪುಗೊಳ್ಳಲು ಭೌತಿಕತೆ ಅವಶ್ಯವೆಂಬ ನಿಲುವು ಪ್ರಚಲಿತಗೊಂಡಂತೆಲ್ಲಾ ಅದರ ಅಧ್ಯಯನಕ್ಕೆ ತುಂಬಾ ಮಹತ್ವ ಬಂದಿದೆ.

ಭಾರತವು ಮೂಲತಃ ಗ್ರಾಮೀಣ ಪರಿಸರವನ್ನು ಒಳಗೊಂಡ ದೇಶ. ಭಾರತದ ಅಭಿವೃದ್ಧಿ ಹಳ್ಳಿಯ ಅಭಿವೃದ್ಧಿಯನ್ನೇ ಅವಲಂಬಿಸಿದೆ. ಶೇ.೪೦ಕ್ಕಿಂತ ಹೆಚ್ಚು ಅನಕ್ಷರಸ್ಥರಿಂದ ತುಂಬಿರುವ ಇಂದಿನ ಗ್ರಾಮಜೀವನದಲ್ಲಿ ಪರಂಪರಾಗತವಾದ ಮೌಢ್ಯ, ಅಂಧ ಸಂಪ್ರದಾಯ, ಅಜ್ಞಾನ ಮತ್ತು ಅವೈಚಾರಿಕತೆಗಳು ಮನೆಮಾಡಿವೆ. ಈ ಜನರ ಜೀವನಕ್ರಮ, ಕಸುಬು, ಆಲೋಚನಾ ರೀತಿಗಳೆಲ್ಲವೂ

ಪ್ರಾಚೀನ ನಂಬಿಕೆ ಮತ್ತು ಆಚರಣೆಗಳ ಮೇಲೆ ಆಧಾರವಾಗಿವೆ. ಆದರೆ ಆದಿಮ ಕಾಲದ ಗ್ರಾಮಜೀವನವನ್ನು ಅವಲೋಕಿಸಿದರೆ ಅದು ಸ್ವತಂತ್ರವೂ, ಸ್ವಾವಲಂಬನಾಶೀಲವೂ, ನಿಸರ್ಗ ಆಧಾರಿತ ಆಗಿತ್ತೆಂಬುದಂತೂ ಸ್ಪಷ್ಟ.

ಪ್ರಸ್ತುತ ಅಧ್ಯಯನವು "ಕುಲಕಸುಬುಗಳು ಮತ್ತು ಆಧುನಿಕತೆ"(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯಡಿಯಲ್ಲಿ ಜಾನಪದೀಯ ಅಂಶಗಳನ್ನು ಅಳವಡಿಸಿಕೊಂಡಿದೆ. ಈ ಅಧ್ಯಯನದಲ್ಲಿ ಅಧ್ಯಯನ ಪ್ರದೇಶದ ಸಾಮಾಜಿಕ, ಆರ್ಥಿಕ, ನೈಸರ್ಗಿಕ, ಶೈಕ್ಷಣಿಕ, ಧಾರ್ಮಿಕ, ರಾಜಕೀಯ ಸ್ಥಿತಿಗತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕುಲಕಸುಬುಗಳ ಪರಿಕಲ್ಪನೆ ಕುರಿತಂತೆ ಅವುಗಳ ಹುಟ್ಟು, ಐತಿಹಾಸಿಕ ಬೆಳವಣಿಗೆ, ವಿಕಾಸದ ಹಾದಿ, ರೂಪಾಂತರ ಅವುಗಳ ಪ್ರಸ್ತುತ ಸ್ಥಿತಿಗತಿ ಅವುಗಳಲ್ಲಿನ ಮೂಲ ಸ್ವರೂಪ ಹಾಗೂ ವ್ಯಾಪ್ತಿ ಅರಿಯುವುದು, ಕುಲಕಸುಬುದಾರರ ಸಾಮಾಜಿಕ ಆರ್ಥಿಕ ಸ್ಥಿತಿಗತಿ ರೂಢಿ ಸಂಪ್ರದಾಯಗಳನ್ನು ಪರಿಶೀಲಿಸುವುದು, ಕುಲಕಸುಬುಗಳ ವರ್ಗೀಕರಣ, ವಸ್ತುಗಳ ತಯಾರಿಕೆಗೆ ಆಯ್ಕೆ ಮಾಡಿಕೊಂಡ ವಿಧಾನಗಳಿಂದ ಹಿಡಿದು ಆ ವಸ್ತುಗಳ ತಯಾರಾಗುವ ಹಂತದವರೆಗೂ ನಡೆಯುವ ಪ್ರಕ್ರಿಯೆಗಳನ್ನು ಮತ್ತು ಬಳಸಲಾಗುವ ಉಪಕರಣಗಳ ಕುರಿತು ಅಧ್ಯಯನ ಮಾಡುವುದು, ಕುಲಕಸುಬುದಾರರ ಕಲಾಕೌಶಲ್ಯತೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸರಕುಗಳ ಮಾರಾಟದ ವಿಧಾನಗಳನ್ನು ಅರಿಯುವುದು ಅಧ್ಯಯನದ ಪ್ರಮುಖ ಉದ್ದೇಶ.

ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಕೈಗಾರೀಕರಣ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳು ಇಂದಿನ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯ ಮೇಲೆ ಗಾಢವಾದ ಪರಿಣಾಮ ಬೀರುತ್ತಿವೆ. ಇಂದು ಕುಲಕಸುಬುಗಳು ಆಧುನೀಕರಣ ಮತ್ತು ಜಾಗತೀಕರಣದ ಸಂಕೋಲೆಯಲ್ಲಿ ಸಿಲುಕಿ ಎದುರಿಸುತ್ತಿರುವ ಸನ್ನಿವೇಶವನ್ನು ವಿಶ್ಲೇಷಿಸುವ ಅನಿವಾರ್ಯತೆಯಿದೆ. ಅಲ್ಲದೆ ಬದಲಾಗುತ್ತಿರುವ ಸನ್ನಿವೇಶಕ್ಕೆ ತಕ್ಕಂತೆ ಕುಲಕಸುಬುಗಳನ್ನು ರೂಪಾಂತರಿಸುವ ವಿಧಾನಗಳನ್ನು ಅರಿಯಬೇಕು. ಪ್ರಸ್ತುತ ಸಮಾಜದಲ್ಲಿ ಉಳಿದುಕೊಂಡು ಬಂದಿರುವ ಕುಲಕಸುಬಗಳ ಬಗ್ಗೆ ಪೂರ್ಣ ಮಾಹಿತಿಗಳನ್ನು ಸಂಗ್ರಹಿಸಿ ಅವುಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಗಮನಹರಿಸುವುದು ಅಗತ್ಯವಾಗಿದೆ. ಕುಲಕಸುಬುದಾರರ ಶೈಕ್ಷಣಿಕ ಮಟ್ಟ, ಸಾಮಾಜಿಕ ಸ್ಥಾನಮಾನ ಆದಾಯದ ವಿವಿಧ ಮೂಲಗಳನ್ನು ಪರಿಶೀಲಿಸುವುದು ಅಗತ್ಯ. ಹಿಂದಿನ ಕಾಲದಲ್ಲಿ ಕೆಲವೇ ವರ್ಗದವರಿಗೆ ಸೀಮಿತವಾಗಿದ್ದ ಕುಲಕಸುಬುಗಳು ಇಂದು ಎಲ್ಲ ವರ್ಗದವರೂ ಅನುಸರಿಸುವಂತಾಗಿದೆ. ಇಂತಹ ಸಂದರ್ಭದಲ್ಲಿ ಜನಪದರ ಪ್ರಮುಖ ಕುಲಕಸುಬುಗಳ ಸ್ಥಿತಿಗತಿಯನ್ನು ಇಲ್ಲಿ ವಿಶ್ಲೇಷಿಸಲು ಯತ್ನಿಸಲಾಗಿದೆ.

ಇದುವರೆಗಿನ ಅಧ್ಯಯನ ಹಾಗೂ ಸಂಶೋಧನೆಗಳು ಕುಲಕಸುಬುದಾರರ ಕುರಿತು ಅವರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆದರೆ ಕುಲಕಸುಬುಗಳು ಪ್ರಸ್ತುತ ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಕುಲಕಸುಬುಗಳ ಸ್ಥಿತಿಗತಿಯನ್ನು

ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸುವುದು ಮತ್ತು ಅವುಗಳ ಪ್ರಾಮುಖ್ಯತೆ, ರೂಪಾಂತರದ ಸಮಸ್ಯೆ ಹಾಗೂ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು, ಸರಕಾರ ಜಾರಿಗೊಳಿಸಿರುವ ಸುಧಾರಣಾ ಕ್ರಮಗಳನ್ನು ಪರಿಶೀಲಿಸಿ ವಿಶ್ಲೇಷಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶ.

ಈ ಹಿನ್ನೆಲೆಯಲ್ಲಿ ಸಂಶೋಧನೆಯ ಉದ್ದೇಶ ಮತ್ತು ಆಶಯಗಳನ್ನು ಕಾರ್ಯಗತಗೊಳಿಸಲು ಈ ಕೆಳಕಂಡ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

- ಅನ್ವೇಷಣೆ/ಶೋಧನೆ (Exploration)
- ಪ್ರಯೋಗಾತ್ಮಕ ಅಥವಾ ಅನುಭವಾತ್ಮಕ ವಿಶ್ಲೇಷಣೆ (Experimentation)
- ಶಾಬ್ಧಿಕ ವರ್ಣನೆ ಮತ್ತು ಸತ್ಯತೆ (Discription)
- ತಪಾಸಣೆ ಅಥವಾ ವಿಶ್ಲೇಷಣೆ (Diagonisis)

ಈ ಮೇಲಿನ ಅಂಶಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡು ಸಾಮಾನ್ಯ ಸರ್ವೇಕ್ಷಣೆ, ಅಂಕಿ-ಅಂಶಗಳ ಸಂಗ್ರಹ ಹಾಗೂ ವಿಷಯ ವಸ್ತುವಿನ ವಿಶ್ಲೇಷಣೆಯ ಮೂಲಕ ಕಟ್ಟಿಕೊಡುವ ಪ್ರಯತ್ನ ಪ್ರಸ್ತುತ ಮಹಾಪ್ರಬಂಧದ್ದು.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯ ಗ್ರಾಮ ಹಾಗೂ ನಗರಗಳ ಸಮೀಕ್ಷೆಯಲ್ಲಿ ಲಭ್ಯವಾಗಿರುವ ಮಾಹಿತಿಗಳನ್ನು ಅಧ್ಯಯನಗಳಿಗೆ ಬಳಸಿಕೊಳ್ಳಲಾಗಿದೆ. ಕುಲಕಸುಬುಗಳ ಕುರಿತು ಇದುವರೆಗೂ ನಡೆಸಿದ ಅಧ್ಯಯನದ ಅಂಕಿ-ಅಂಶಗಳು, ವರದಿಗಳು, ಸಾಹಿತ್ಯಿಕ ಗ್ರಂಥಗಳು, ಸರಕಾರ ಪ್ರಕಟಿಸಿರುವ ಅಂಕಿ-ಅಂಶ ಹಾಗೂ ಮಾಹಿತಿಗಳು, ಸರಕಾರ ಹಾಗೂ ಸಂಘ-ಸಂಸ್ಥೆಗಳ ಸಮೀಕ್ಷಾ ವರದಿಗಳು, ವಿವಿಧ ಪತ್ರಿಕೆ ಹಾಗೂ ನಿಯತಕಾಲಿಕೆ ಪ್ರಕಟವಾದ ಹಾಗೂ ಪ್ರಕಟವಾಗಿಲ್ಲದ ಲೇಖನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯದ ಮೂಲಕ ಬಳ್ಳಾರಿ ಜಿಲ್ಲೆಯ ಕುಲಕಸುಬುಗಳಿಗೆ ಸಂಬಂಧಿಸಿದಂತೆ ಎಲ್ಲ ಬಗೆಯ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಮುಖ ಕುಲಕಸುಬುಗಳನ್ನು ಸಮೀಕ್ಷಾ ವಿಧಾನದಿಂದ ಗುರುತಿಸಿ, ಕುಲಕಸುಬುದಾರರ ಶೈಕ್ಷಣಿಕ ಮಟ್ಟ, ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಪ್ರಶ್ನಾವಳಿಗಳ ಮುಖೇನ ಮಾಹಿತಿ ಸಂಗ್ರಹಿಸಲಾಗಿದೆ. ಅನ್ವೇಷಣೆ/ಶೋಧನೆ, ಪ್ರಯೋಗಾತ್ಮಕ ಅಥವಾ ಅನುಭವಾತ್ಮಕ ವಿಶ್ಲೇಷಣೆ, ಶಾಬ್ಧಿಕ ವರ್ಣನೆ ಅಥವಾ ಸತ್ಯತೆ ತಪಾಸಣೆ ಅಥವಾ ವಿಶ್ಲೇಷಣೆ ಅಂಶಗಳನ್ನು ಬಳಸಿಕೊಂಡು ವೈಜ್ಞಾನಿಕ ದೃಷ್ಟಿಕೋನವನ್ನಾಧರಿಸಿ ಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

"ಕುಲಕಸುಬುಗಳು ಮತ್ತು ಆಧುನಿಕತೆ" ಕುರಿತ ಪ್ರಸ್ತುತ ಮಹಾಪ್ರಬಂಧದಲ್ಲಿ ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯು ತನ್ನದೇ ಆದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ವಿಜಯನಗರದ ಅರಸರು ಸುಮಾರು ೨೫೦ ವರ್ಷಗಳಷ್ಟು ಕಾಲ ಆಳಿದ ಪ್ರದೇಶವಿದು. ರಾಜಧಾನಿ ಹಂಪಿ ಹೊಸಪೇಟೆ ತಾಲ್ಲೂಕಿನಲ್ಲಿದೆ. ಇಲ್ಲಿ ವೈವಿಧ್ಯಮಯವಾದ ವೃತ್ತಿಗಳು ಪ್ರಸಿದ್ಧಿ ಪಡೆದಿವೆ ಎಂಬುದು ದಾಖಲೆಗಳಲ್ಲಿ ಸ್ಪಷ್ಟವಾಗುತ್ತದೆ. ಜಿಲ್ಲೆಯು ತುಂಗಭದ್ರಾ ಅಣೆಕಟ್ಟಿನಿಂದಾಗಿ ಕೃಷಿ ಚಟುವಟಿಕೆಗಳು ಹಾಗೂ ಕೃಷಿಯನ್ನು ಅವಲಂಬಿಸಿದ ವಿವಿಧ ವೃತ್ತಿಗಳು ವ್ಯಾಪಕವಾಗಿ ಬೆಳೆದುನಿಂತಿವೆ. ಜಿಲ್ಲೆಯಲ್ಲಿ ಅಪಾರವಾದ ಉತ್ತಮ ಗುಣಮಟ್ಟದ ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರು ಲಭ್ಯವಿದೆ. ಒಂದು ಕಡೆ ಗಣಿಗಾರಿಕೆ ಹಾಗೂ ಕಬ್ಬಿಣ–ಉಕ್ಕಿನ ಬೃಹತ್ ಕೈಗಾರಿಕೆಗಳು ಜಿಲ್ಲೆಯಲ್ಲಿ ಹೆಚ್ಚು ಹೆಚ್ಚಾಗಿ ಸ್ಥಾಪನೆಯಾಗುತ್ತಿವೆ. ಇದು ಸಣ್ಣಪುಟ್ಟ ವೃತ್ತಿ ಹಾಗೂ ವೃತ್ತಿಗಾರರ ಮೇಲೆ ಪ್ರಭಾವ ಬೀರಲಿದೆ. ಇದರ ಜೊತೆಗೆ ಜಿಲ್ಲೆಯ ಬಯಲು ಪ್ರದೇಶಗಳಲ್ಲಿ ಈಗಲೂ ಹಲವಾರು ಕುಲಕಸುಬುಗಳು ಚಾಲನೆಯಲ್ಲಿರುವುದು ಕಂಡುಬಂದಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಏಳು ತಾಲ್ಲೂಕು ಪ್ರದೇಶಗಳನ್ನು ಹೊಂದಿರುವ, ಸಂಪನ್ಮೂಲಗಳಿಂದ ತನ್ನದೇ ಆದ ವಿಶೇಷ ಸ್ಥಾನಮಾನಗಳನ್ನು ಪಡೆದಿರುವ ಬಳ್ಳಾರಿ ಜಿಲ್ಲೆಯಲ್ಲಿನ ಕುಲಕಸುಬುಗಳನ್ನು ಹಾಗೂ ಪ್ರಾಮುಖ್ಯ ಹೊಂದಿರುವ ಮತ್ತು ಪ್ರಸ್ತುತ ಕಾಣಬರುವ ಕುಲಕಸುಬುಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಅವುಗಳ ಸಮಸ್ಯೆ ಹಾಗೂ ಸವಾಲುಗಳು, ಸರಕಾರ ಜಾರಿಗೊಳಿಸಿರುವ ಸುಧಾರಣಾ ಕ್ರಮಗಳ ಕುರಿತು ಸಮಗ್ರವಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಹಾಗೆಯೇ ಕುಲಕಸುಬುಗಳಲ್ಲಿನ ಸೂಕ್ಷ್ಮ ಅಂಶಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲು ಹೆಚ್ಚಿನ ಮಹತ್ವ ಕೊಡಲಾಗಿದೆ. ಒಟ್ಟಿನಲ್ಲಿ ಸಮಕಾಲೀನ ಸಂದರ್ಭದಲ್ಲಿ ಕುಲಕಸುಬುಗಳ ಪಾತ್ರ ಮತ್ತು ಮಹತ್ವವನ್ನು ಕುರಿತು ವಿವರಿಸಿ ವಿಶ್ಲೇಷಿಸುವ ಪ್ರಯತ್ನವಿದು.

ಅಧ್ಯಯನದ ಗ್ರಹಿಕೆಗಳು

* ಕುಲಕಸುಬುದಾರರು ಅನಕ್ಷರಸ್ಥರು, ಅವಿದ್ಯಾವಂತರು ಹಾಗೂ ಅತ್ಯಂತ ಹಿಂದುಳಿದ ವರ್ಗದಿಂದ ಬಂದವರಾಗಿದ್ದಾರೆ.
* ಸಾಮಾಜಿಕ ಭದ್ರತಾ ಸೌಲಭ್ಯಗಳು ಲಭ್ಯವಾಗುತ್ತಿಲ್ಲ.
* ಕುಲಕಸುಬು/ಕುಲಕಸುಬುದಾರರ ಕಾಪಾಡುವಲ್ಲಿ ಸರಕಾರ, ವಿವಿಧ ಇಲಾಖೆಗಳ ಸೇವೆ ತೃಪ್ತಿಕರವಾಗಿಲ್ಲ.
* ಕುಲಕಸುಬುದಾರರಿಗೆ ಪರ್ಯಾಯ ಉದ್ಯೋಗವಕಾಶಗಳು ತುಂಬಾ ಕಡಿಮೆ.
* ಕುಲಕಸುಬುದಾರರಲ್ಲಿ ಉತ್ತಮ ಸಂಘಟನೆಗಳಿಲ್ಲ.

ಸಂಶೋಧನೆಯುದ್ದಕ್ಕೂ ಈ ಮೇಲಿನ ಪೂರ್ವ ಕಲ್ಪನೆಗಳ ಸ್ಪಷ್ಟತೆ, ಅನುಷ್ಠಾನ, ಉಲ್ಲಂಘನೆಯ ಕ್ರಮಗಳನ್ನು ಅವಲೋಕಿಸುವ, ವಿಶ್ಲೇಷಿಸುವ ಮತ್ತು ಚರ್ಚಿಸುವ ಕಾರ್ಯ ಚಟುವಟಿಕೆಯು ಕ್ಷೇತ್ರ ಕಾರ್ಯದುದ್ದಕ್ಕೂ ನಡೆದಿದೆ.

ಅಂಕಿ-ಅಂಶಗಳ ಸಂಗ್ರಹ

ಸಂಶೋಧನೆಗೆ ಅವಶ್ಯಕವಾದ ಮಾಹಿತಿಗಳನ್ನು ಕುಲಕಸುಬುದಾರರು, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಂಘಟನೆಯ ಮುಖಂಡರಿಂದ ವಿಷಯವನ್ನು ಪ್ರಥಮವಾಗಿ ಸಂಗ್ರಹಿಸಲು, ಪ್ರಶ್ನಾವಳಿ, ಸಂದರ್ಶನ ಹಾಗೂ ಅವಲೋಕನ ಇತ್ಯಾದಿ ಸಂಶೋಧನಾ ತಂತ್ರಗಳನ್ನು ಬಳಸಲಾಗಿದೆ. ಹಾಗೆಯೇ ಕುಲಕಸುಬುಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಸ್ಥಿತಿಗತಿ, ನೀತಿ ನಿಯಮಗಳ ಬಗ್ಗೆ ಮಾಹಿತಿ ಪಡೆಯಲು ವಿವಿಧ ಕಡೆಗಳಲ್ಲಿ ನಡೆದ ಸಭೆ, ಸಮಾರಂಭ, ವಿಚಾರ ಸಂಕಿರಣ, ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸಿ ಅನೇಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಬಳ್ಳಾರಿ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿರುವ ವಿವಿಧ ಪ್ರಮುಖ ಕುಲಕಸುಬುಗಳನ್ನು ಛಾಯಾಚಿತ್ರಗಳಲ್ಲಿ ಸೆರೆಹಿಡಿಯಲಾಗಿದೆ.

ಈ ಸಂಶೋಧನೆಯ ಅಧ್ಯಯನಕ್ಕೆ ಮೀಸಲಾದ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಮತ್ತು ರಚನಾತ್ಮಕ ವೈವಿಧ್ಯತೆಗಳ ಬಗ್ಗೆ ಲಭ್ಯವಿದ್ದ ಅಂಕಿ-ಅಂಶಗಳನ್ನು ಪ್ರಾಥಮಿಕ ಹಾಗೂ ಆನುಷಂಗಿಕ ಮೂಲಗಳಿಂದ ದೊರೆತ ಮಾಹಿತಿಗಳೊಂದಿಗೆ ಮೌಖಿಕ ಹಾಗೂ ಅನುಭವಾತ್ಮಕವಾಗಿ ಕಂಡುಕೊಂಡ ಮಾಹಿತಿಗಳನ್ನು ಆಕರವಾಗಿಟ್ಟುಕೊಂಡು ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಯನದ ವಿನ್ಯಾಸ

'ಕುಲಕಸುಬುಗಳು ಮತ್ತು ಅಧುನಿಕತೆ' (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯನ್ನು ಹೊಂದಿರುವ ಪ್ರಸ್ತುತ ಮಹಾಪ್ರಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ ಒಂದರಲ್ಲಿ ಕುಲಕಸುಬುಗಳು ಮತ್ತು ಆಧುನಿಕತೆ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪವನ್ನು ವಿವರಿಸಲಾಗಿದೆ. ಅಲ್ಲದೆ ಇಲ್ಲಿ ಅಧ್ಯಯನದ ವಿಧಿವಿಧಾನ, ಮಿತಿಗಳು ಮತ್ತು ಅಧ್ಯಯನದ ವಿನ್ಯಾಸಗಳಿವೆ.

ಅಧ್ಯಾಯ ಎರಡರಲ್ಲಿ ಬಳ್ಳಾರಿ ಜಿಲ್ಲೆಯ ಭೌಗೋಳಿಕತೆಯ ಅವಲೋಕನವಿದೆ. ಈ ಅಧ್ಯಾಯದಲ್ಲಿ ಬಳ್ಳಾರಿ ಪದನಿಷ್ಪತ್ತಿ, ಜಿಲ್ಲೆಯ ಭೌಗೋಳಿಕ ಅಂಶಗಳು ಹಾಗೂ ಜಿಲ್ಲೆಯ ಐತಿಹಾಸಿಕ ಹಿನ್ನೆಲೆಯ ವಿಶ್ಲೇಷಣೆ ಮಾಡಲಾಗಿದೆ. ಜಿಲ್ಲೆಯ ಆರ್ಥಿಕತೆಗೆ ಸಂಬಂಧಿಸಿದಂತೆ ಪ್ರಾಕೃತಿಕ ಮತ್ತು ಖನಿಜ ಸಂಪತ್ತನ್ನು ವಿವರಿಸಲಾಗಿದೆ. ಜಿಲ್ಲೆಯ ಪ್ರಮುಖ ಉದ್ಯೋಗಗಳಾದ ಕೃಷಿ, ಕೈಗಾರಿಕೆ, ಬ್ಯಾಂಕಿಂಗ್ ಹಾಗೂ ಸಾರಿಗೆ ಸಂಪರ್ಕಕ್ಕೆ ಸಂಬಂಧಿಸಿದ ಸಂಗತಿಗಳನ್ನು ಅಂಕಿ-ಅಂಶಗಳ ಮೂಲಕ ವಿಶ್ಲೇಷಿಸಲು ಯತ್ನಿಸಲಾಗಿದೆ. ಜಿಲ್ಲೆಯ ಸಾಹಿತ್ಯಿಕ ಹಾಗೂ ಧಾರ್ಮಿಕ ವಿವರಗಳನ್ನೂ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಜನಪದರು ಮತ್ತು ಕುಲಕಸುಬುಗಳ ಪರಿಕಲ್ಪನೆಯಿದ್ದು, ಇಲ್ಲಿ ವಿವಿಧ ಜನಪದ ತಜ್ಞರು ಜನಪದ ಹಾಗೂ ಜಾನಪದಕ್ಕೆ ನೀಡಿರುವ ಅರ್ಥ ಮತ್ತು ವ್ಯಾಖ್ಯಾನಗಳಿವೆ. ಕುಲಕಸುಬು ಪದನಿಷ್ಪತ್ತಿ ಮತ್ತು ಕುಲಕಸುಬುಗಳು ಬೆಳೆದುಬಂದ ದಾರಿಯನ್ನು ವಿವರಿಸಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿರುವ ಪ್ರಮುಖ ಕುಲಕಸುಬುಗಳಾದ ಕುಂಬಾರಿಕೆ, ಕಮ್ಮಾರಿಕೆ, ಪತ್ತಾರಿಕೆ, ಬಡಗಿವೃತ್ತಿ, ಶಿಲ್ಪಗಾರಿಕೆ, ನೇಕಾರಿಕೆ, ಮೇದಾರಿಕೆ, ಗಾಣಗಾರಿಕೆ, ಚಮ್ಮಾರಿಕೆ, ಕಲ್ಲುಕುಟಿಗತನ, ಸುಣ್ಣಗಾರಿಕೆ, ಬಳೆಗಾರಿಕೆ, ಕ್ಷೌರಿಕ ವೃತ್ತಿ, ಮಡಿವಾಳವೃತ್ತಿ, ಪೂಜಾರಿಕೆ, ವೈದ್ಯಗಾರಿಕೆ, ತಳವಾರಿಕೆ, ಮುಂತಾದ ಕುಲಕಸುಬುಗಳ ಸ್ಥಿತಿಗತಿಗಳ ಕೂಲಂಕಶ ಅಧ್ಯಯನವಿದು. ಇಲ್ಲಿ ಮುಖ್ಯವಾಗಿ ಕುಲಕಸುಬುಗಳ ಹಿನ್ನೆಲೆ, ಉತ್ಪಾದನಾ ವಿಧಾನಗಳು, ತಯಾರಿಕಾ ವಸ್ತುಗಳು ಮತ್ತು ಅವುಗಳಲ್ಲಿರುವ ಅಡ್ಡಿ ಆತಂಕಗಳನ್ನು ಕುರಿತು ವಿವರಿಸಿ ವಿಶ್ಲೇಷಿಸಿದೆ. ಅಲ್ಲದೆ ಕುಲಕಸುಬುದಾರರು ತಯಾರಿಸಿದ ಸರಕುಗಳ ಮಾರುಕಟ್ಟೆಯ ಸ್ಥಿತಿಗತಿಗಳ ಕುರಿತ ಚರ್ಚೆಯೂ ಇಲ್ಲಿದೆ.

ಸಮಾಜೋ-ಆರ್ಥಿಕ ನೆಲೆಯಲ್ಲಿ ಕುಲಕಸುಬುಗಳ ಮಹತ್ವವನ್ನು ಕುರಿತ ಅಧ್ಯಾಯ ನಾಲ್ಕನೆಯದು. ಇದರಲ್ಲಿ ಕುಲಕಸುಬುಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ವಿವರಣೆಯಿದೆ.

ಅಧ್ಯಾಯ ಐದರಲ್ಲಿ ಕುಲಕಸುಬುಗಳು ಮತ್ತು ಆಧುನಿಕತೆಗೆ ಸಂಬಂಧಿಸಿದಂತೆ ವಿವರಣೆ ನೀಡಲಾಗಿದೆ. ಇಲ್ಲಿ ಜಾಗತೀಕರಣದ ಅಂಶಗಳನ್ನು ವಿಶ್ಲೇಷಿಸುವುದರ ಜೊತೆಗೆ ಅದರಿಂದ ಕುಲಕಸುಬುಗಳ ಮೇಲೆ ಉಂಟಾಗಿರುವ ಪರಿಣಾಮಗಳು ಹಾಗೂ ಕುಲಕಸುಬುಗಳ ಸ್ಥಿತ್ಯಂತರವನ್ನು ಕುರಿತು ವಿವರವಿದೆ.

ಅಧ್ಯಾಯ ಆರು ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಕುಲಕಸುಬುಗಳು ಎದುರಿಸುವ ಪ್ರಮುಖ ಸಮಸ್ಯೆಗಳಾದ ಹಣಕಾಸು, ಸಾರಿಗೆ-ಸಂಪರ್ಕ, ಕಚ್ಚಾವಸ್ತುಗಳು, ಮಾರುಕಟ್ಟೆ, ವಸತಿ, ಉಗ್ರಾಣ, ಪೈಪೋಟಿ, ತಂತ್ರಜ್ಞಾನ, ಉಪಕರಣಗಳ ಕೊರತೆಗೆ ಸಂಬಂಧಿಸಿದೆ. ಕುಲಕಸುಬುಗಳ ಬೆಳವಣಿಗೆಗೆ ಇರುವ ಅವಕಾಶ, ಅಡ್ಡಿ-ಆತಂಕಗಳ ವಿಶ್ಲೇಷಣೆಯಿದೆ. ಕುಲಕಸುಬಿನ ಸಮಸ್ಯೆಗಳ ನಿರ್ವಹಣೆಗೆ ಸರಕಾರ ಕೈಗೊಂಡಿರುವ ಸುಧಾರಣಾ ಕ್ರಮ ಮತ್ತು ಪರಿಹಾರಗಳು ಹಾಗೂ ಸರಕಾರದ ಪ್ರಮುಖ ಯೋಜನೆಗಳ ಕುರಿತು ಇಲ್ಲಿ ವಿಶ್ಲೇಷಿಸಲು ಯತ್ನಿಸಲಾಗಿದೆ.

ಅಧ್ಯಾಯ ಏಳು ಉಪಸಂಹಾರ. ಇದು ಇಡೀ ಅಧ್ಯಯನದ ಸಂಕ್ಷಿಪ್ತ ರೂಪ. ಅಧ್ಯಯನದಲ್ಲಿ ಕಂಡುಕೊಂಡು ಪ್ರಮುಖ ಫಲಿತಗಳು, ಉಪಯುಕ್ತ ಸಲಹೆಗಳು ಮತ್ತು ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ತಿಳಿಸಲಾಗಿದೆ.

ಅನುಬಂಧದಲ್ಲಿ ಜಿಲ್ಲೆಯ ನಕ್ಷೆ, ಕೋಷ್ಟಕ, ವೃತ್ತಿ ಪದಕೋಶ, ಪ್ರಶ್ನಾವಳಿ-ಮಾದರಿ, ವಕ್ತೃಗಳ ವಿವರ, ಪರಾಮರ್ಶನ ಗ್ರಂಥಗಳು ಮತ್ತು ಪ್ರಮುಖ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ.

ಅಧ್ಯಾಯ ೨

ಬಳ್ಳಾರಿ ಜಿಲ್ಲೆಯ ಭೌಗೋಳಿಕ ಅವಲೋಕನ

ತ೨.೧. ಬಳ್ಳಾರಿ ಪದನಿಷ್ಪತ್ತಿ

೨.೨. ಭೌಗೋಳಿಕತೆ

೨.೩. ಐತಿಹಾಸಿಕ ಹಿನ್ನೆಲೆ

೨.೪. ಆರ್ಥಿಕತೆ

- ನೈಸರ್ಗಿಕ ಮತ್ತು ಖನಿಜ ಸಂಪತ್ತು
- ಕೃಷಿ
- ಕೈಗಾರಿಕೆಗಳು
- ಬ್ಯಾಂಕಿಂಗ್
- ಸಾರಿಗೆ–ಸಂಪರ್ಕ

೨.೫. ಸಾಮಾಜಿಕತೆ

- ಶಿಕ್ಷಣ
- ಆರೋಗ್ಯ

೨.೬. ಸಾಹಿತ್ಯ

೨.೭. ಧಾರ್ಮಿಕತೆ

ಬಳ್ಳಾರಿ ಜಿಲ್ಲೆಯ ಭೌಗೋಳಿಕ ಅವಲೋಕನ

ಬಳ್ಳಾರಿ ಪದನಿಷ್ಪತ್ತಿ:

ಬಳ್ಳಾರಿ ಜಿಲ್ಲಾ ಕೇಂದ್ರ ಹಾಗೂ ಆಡಳಿತದ ಕಾರ್ಯಸ್ಥಾನ. ಬಳ್ಳಾರಿ ಪದ ಕುರಿತು ಹಲವಾರು ಸೈದ್ಧಾಂತಿಕ ರೂಪರೇಶೆಗಳನ್ನು ನೀಡಬಹುದು. ಬಳ್ಳಾರಿ ಪದ ನಿಷ್ಪತ್ತಿ ವೈಶಿಷ್ಟ ಪೂರ್ಣವಾಗಿದೆ. ಬಳ್ಳಾರಿ ಪದವನ್ನು ಹನ್ನೆರಡನೇ ಶತಮಾನದಲ್ಲಿ ಬಳಕೆ ಮಾಡಿರುವುದನ್ನು ಪತ್ತೆ ಹಚ್ಚಲಾಗಿದೆ. ಅದಕ್ಕೂ ಹಿಂದಿನ ಇತಿಹಾಸವನ್ನು ನಿಖರವಾಗಿ ಪತ್ತೆ ಹಚ್ಚುವುದು ಕಷ್ಟಕರ. ಕ್ರಿ.ಶ.೧೧೩೧ರ ಬೇಲೂರು ಶಾಸನದಲ್ಲಿ ಬಳ್ಳಾರಿ ಪದವನ್ನು ಬಳಸಿರುವುದು ಕಂಡುಬಂದಿದೆ. ಶಿಂದಿಗೆರೆ, ಕೋಳೂರು, ಕುರುಗೋಡು ಶಾಸನಗಳಲ್ಲಿ ಬಲ್ಲಾರಿ ಪದ ಬಳಸಲಾಗಿದೆ.[೧] ಕ್ರಿ.ಶ. ೧೧೬೧ರ ಹೊಯ್ಸಳರ ಶಾಸನ, ಕ್ರಿ.ಶ.೧೧೭೮ರ ನಾಗಮಂಗಲ ಮತ್ತು ಕ್ರಿ.ಶ.೧೧೮೩ರ ಶಾಸನಗಳಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನ ಬಳ್ಳಾರಿ ಎಂಬ ಸ್ಥಳವನ್ನು ವಶಪಡಿಸಿಕೊಂಡಿದ್ದ ಎಂದು ತಿಳಿಸಿದೆ.[೨] ವಿವಿಧ ಸ್ಥಳ ಮಾಹಿತಿ ಸಂಗ್ರಹವನ್ನು ಪರಿಶೀಲಿಸಿದಾಗ ಹಿಂದಿನ ಬಲ್ಲಾರಿ ಈಗಿನ ಬಳ್ಳಾರಿ ಎಂಬುದು ಸ್ಪಷ್ಟವಾಗುತ್ತದೆ.

ಬಳಾರಿ ಎಂಬ ಪದವು ಬಸವ ಪುರಾಣಕತೆಗಳಲ್ಲಿ ಉಲ್ಲೇಖವಾಗಿದೆ. ಬಲ್ಲೇಶ ಮಲ್ಲಯ್ಯ (Bhallesha Mallaya) ಎಂಬ ಶಿವಭಕ್ತ ಕೊಳೂರು(Kolur) ಎಂಬ ಸ್ಥಳದಲ್ಲಿ ಶಿವಲಿಂಗವನ್ನು ಪೂಜಿಸುತ್ತಿದ್ದ. ಲಿಂಗಕ್ಕೆ ಪೂಜೆ ಹಾಗೂ ನೈವೇದ್ಯ ಮಾಡದೆ ಊಟವನ್ನು ಸೇವಿಸುತ್ತಿರಲಿಲ್ಲ. ಒಮ್ಮೆ ಮಲ್ಲೇಶ(ಶಿವ)ನನ್ನು ಕಾಣುವ ಆಸೆಯಾಯಿತು. ಮಲ್ಲೇಶ(ಶಿವ)ನು ಭಕ್ತನ ಆಸೆಯನ್ನು ಈಡೇರಿಸಲು ಬಳ್ಳ (Balla) ರೂಪದಲ್ಲಿ ಪ್ರತ್ಯಕ್ಷನಾದ. ಬಳ್ಳ ಎಂದರೆ ಸೇರು. ಇದನ್ನು

ಧಾನ್ಯವನ್ನು ಅಳೆಯಲು ಬಳಸುತ್ತಾರೆ. ಮಲ್ಲೇಶ ಪ್ರತ್ಯಕ್ಷವಾದ ಸ್ಥಳವನ್ನು ಬಳ್ಳಾ ಎಂದು ನಂತರ ಬಳ್ಳಾರಿಯಾಗಿ ಬಳಸಲ್ಪಡುತ್ತಿದೆ. ಕರ್ನಾಟಕದ ಕನ್ನಡ ಕಲಿ ಸರ್ಪಭೂಷಣ ಶಿವಯೋಗಿ ತಮ್ಮ ಹಾಡುಗಳಲ್ಲಿ ಈ ಕಥೆಯನ್ನು ವ್ಯಕ್ತಪಡಿಸಿದ್ದಾರೆ.[೩]

೧೯೭೨ರಲ್ಲಿ ಪ್ರಕಟವಾದ ಮೈಸೂರು ರಾಜ್ಯ ಗೆಝೆಟಿಯರ್‌ನ ಬಳ್ಳಾರಿ ಜಿಲ್ಲೆಯಲ್ಲಿ ಉಲ್ಲೇಖಿಸಿದಂತೆ The name of Bellary with goddess durgamma, whose temple is in Gandhinagar. In poet Janna's Yashodhara charithe, the word Balari (ಬಳ್ಳಾರಿ) is used to mean a goddess and the town is said to have derived its name from this word because Durgamma had manifested her self in this town.[೪]

ಜನ್ನನ ಯಶೋಧರ ಚರಿತೆಯು ಉಲ್ಲೇಖಿಸಿದಂತೆ ಬಳ್ಳಾರಿ ನಗರ ದೇವತೆಯಾದ ದುರ್ಗಮ್ಮ ನಿಂದಾಗಿ ಬಳ್ಳಾರಿ ಎಂಬ ಪದ ಬಳಕೆಯಾಗಿದೆ.

೧೯೦೪ರಲ್ಲಿ ಪ್ರಕಟವಾದ ಬಳ್ಳಾರಿ ಜಿಲ್ಲಾ ಗೆಝೆಟಿಯರ್‌ನಲ್ಲಿ ತಿಳಿಸಿರುವಂತೆ The origin of the name is connected with the defeat and death at the hands of Indra, of Bala, a demon king who was harrasing the devakanya. The place where he was slain came to be known as 'Bala-hari' meaning "The defeat of Bala". It could be also Bala+Ari (enemy of Bala). It may be noted also that 'Bhalari (ಭಳಾರಿ) which is derived from sanskrit' Bhatari (Bhata+ari = enemy of demon) occurs in inscriptions. ಇಂದು ಕೂಡ ಕನ್ನಡದಲ್ಲಿ ಮಾತನಾಡುವಾಗ ಹಾಗೂ ಬರಹದಲ್ಲಿ ಬಳ್ಳಾರಿ ಎಂದೇ ಬಳಸಲಾಗುತ್ತದೆ. ಆಂಗ್ಲ ಭಾಷೆಯಲ್ಲಿ Ballari ಯು Bellary ಎಂದಾಗಿದೆ.[೫]

ಕಿಟಲ್ ಶಬ್ದಕೋಶದಲ್ಲಿ ಬಳರಿ, ಬಳಾರಿ ಎಂಬುದಕ್ಕೆ The demon Balari or Mahakali ಎಂದಿದೆ. ಹೆನ್ರಿವೈಟ್‌ರವರು The demon Balari or Mahakaliಯ ವಿವರಣೆ ನೀಡಿದ್ದಾರೆ. The Mahakali is the South Indian Village Goddess. Durga is one of the many name of Kali, the wife of shiva. ಶಿವನ ಹೆಂಡತಿಯಾದ ಪಾರ್ವತಿಯ ವಿವಿಧ ಅವತಾರಗಳಲ್ಲಿ ಬಳರಿ ಒಂದಾಗಿದೆ.[೬]

ಬಳಾರಿಯು ಸಂಸ್ಕೃತ ಪದ ಎನ್ನುವುದಾದರೆ ಆ ಪದವನ್ನು ವಿಭಜಿಸಿದಾಗ ಬಲ+ಅರಿ Bala+ari= enemy of demon ಎಂದು ಅರ್ಥೈಸಬಹುದು. ಆದರೆ ಇದು ಹೆಣ್ಣು ದೇವತೆ

ಎಂಬ ಅರ್ಥನೀಡಲಾರದು. ಇಲ್ಲಿ ಬಲ ಎಂಬ ರಾಕ್ಷಸನನ್ನು ಇಂದ್ರನು ಕೊಂದ ಇಲ್ಲವೆ ರಾಕ್ಷಸನ ವೈರಿ ಎಂದು ಸೂಚಿಸುತ್ತದೆ.

ಬಳರಿ ಎಂಬ ಪದವು ಭಟಾರಿ>ಭಡಾರಿ>ಭಳಾರಿ>ಬಳರಿ>ಬಳ್ಳಾರಿ ಎಂದಾಗಿರಬೇಕು. ಮೇಲೆ ಸೂಚಿಸಿದಂತೆ ಕೇಶಿರಾಜನ ಶಬ್ದಮಣಿದರ್ಪಣ ಕೃತಿಯಲ್ಲಿಯ ಸೂತ್ರದಂತೆ 'ಟ'ಕಾರವು 'ಡ'ಕಾರ ಆದೇಶವಾಗಿ ಬಳಸಲ್ಪಟ್ಟಿರಬೇಕು. ನಂತರ 'ಡ್' ಅಂದರೆ "ಡಕಾರಂ ಬೆಟ್ಟಿಸ್ತಾಗಿ ಉಚ್ಚರಿಸಿದೊಡೆ 'ಳ' ಕಾರಂಬರೆಗುಂ" ಎಂದಂತೆ ಡ>ಳ ಆಗಿರಬೇಕು. ಗ್ರಾಮೀಣ ಜನರಲ್ಲಿ ಭಡಾರಿ ಶಬ್ದವು ಸರ್ವೇಸಾಮಾನ್ಯವಾಗಿದೆ. ಭಡಾರಿಯಂತಿರುವವಳು, ಭಡಾಯಿ ಕೊಚ್ಚಿಕೊಳ್ಳುವವಳು, ಸ್ವಸಾಮರ್ಥ್ಯದಿಂದ ನಿಲುವು ಕೈಗೊಳ್ಳುವವಳು ಎಂದಾಗುತ್ತದೆ.[೬] ಇದಲ್ಲದೆ ಊರಿನ ಹೆಸರು ದೇವತೆಗಳ ಹೆಸರಿನಿಂದ ಆರಂಭವಾದಂತೆ ಉದಾಹರಣೆಗೆ ಮಲಪನಗುಡಿ, ಅನಂತಶಯನಗುಡಿ, ಬಸವನದುರ್ಗ, ರಾಮದುರ್ಗ ಆದಂತೆ ಬಳ್ಳಾರಿ ದುರ್ಗಮ್ಮ ಎಂದು ಬಳಸಲಾಗುತ್ತದೆ.

ಬಳ್ಳಾರಿ ಪದದ ಉಲ್ಲೇಖವು ಶಾಸನ, ಕಾವ್ಯ, ಜನಪದ ಗೀತೆ ಹಾಗೂ ದಂತಕಥೆಗಳಲ್ಲಿ ಕಂಡುಬರುವುದು. ಸ್ಕಂದ ಪುರಾಣದಲ್ಲಿ ಬಳ್ಳಾರಿ ಪ್ರದೇಶವನ್ನು 'ಲೋಹಾಚಲ' ಎಂದು ಕರೆಯಲಾಗಿದೆ. ಪ್ರಾಚೀನ ಕಾವ್ಯಗಳಲ್ಲಿ 'ಜಂಬೂದ್ವೀಪ' ಎಂದು ಕರೆಯುತ್ತಿದ್ದರು. ಬಳ್ಳಾರಿ ಪದವು ಉಗ್ರ ಸ್ತ್ರೀಸೂಚಕ, ವ್ಯಕ್ತಿ-ಸೂಚಕ, ರಾಕ್ಷಸ ಸೂಚಕ, ಶಿವಶರಣರ ಸೂಚಕವಾಗಿ ಬಳಕೆಯಾಗಿದೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬಳರಿ-ಬಳಾರಿ ಪದ ಬಳಕೆಯಾಗಿದೆ. ಅವುಗಳಲ್ಲಿ ಕ್ರಿ.ಶ. ೧೦೪೦ರ ಚಂದ್ರರಾಜನ ಮದನ ತಿಲಕವೆಂಬ ಕಾಮಶಾಸ್ತ್ರ ಗ್ರಂಥದಲ್ಲಿ ಈ ರೀತಿ ನಿರೂಪಿತವಾಗಿದೆ.

ಬಳರಿಯ ನೋಂಪಿಗೆ ಬೀದಿಗೆ
ಮುಳಿವರ ಮನೆಗಳ್ಗೆ ಮಧ್ಯ ಪೀಗಳಲ್ಲಿಗೆ
ಕೋಮಳೆಯಂ ಪೋಗಲಿತ್ತಡೆ
ಬಳರಿಗೆ ಪುಯ್ಯಲಿಡವೋದ ಕುರಿಯಂತಕ್ಕಂ[೭] (ಮದನತಿಲಕ)

ಗೌರವಸ್ಥ ಸ್ತ್ರೀಯರು ಉಗ್ರ ಸ್ವರೂಪದ ಬಳರಿಯ ಕಂಡು ಭ್ರಾಂತಿಗೊಳಗಾಗಬಹುದೆಂದು ಬಳರಿನೋಂಪಿಗೆ ಹೋಗಕೂಡದೆಂದು ತಿಳಿಸುತ್ತದೆ. ಬಳರಿಯ ದೇವತೆಯ ಬಗ್ಗೆ ಜನಸಾಮಾನ್ಯರಿಗೆ ಚಿರಪರಿಚಿತ ಹಾಗೂ ಅಲ್ಲಿ ಜರುಗುವ ಕುರಿಬಲಿಯನ್ನು ಕವಿ ಗಮನಿಸಿರಬೇಕೆಂದು ತಿಳಿಯುತ್ತದೆ. ಇದರಿಂದಾಗಿ ಕುಲವಧುವನ್ನು ಬಳರಿ ನೋಂಪಿಗೆ ಹೋಗಕೂಡದೆಂದು ನಿಷೇಧಿಸಿರುವುದು ವ್ಯಕ್ತವಾಗುತ್ತದೆ.

ಕ್ರಿ.ಶ ೧೧೦೦ರಲ್ಲಿ ಬ್ರಹ್ಮಶಿವನ 'ಸಮಯ ಪರೀಕ್ಷೆ' ಎಂಬ ಕೃತಿಯಲ್ಲಿ ಬಳರಿ ಎಂಬ ಪದ ಅನೇಕ ಬಾರಿ ಬಳಕೆಯಾಗಿದೆ.

ಎಕ್ಕಲದೇವಿಗಮಮಾ
ಲಕ್ಕನಿಗಂ ಬನದ ಬಳರಿಗಂ ಮೈಲಾರಂ
ಗಶ್ಯದೆ ಜಾತ್ರೆಯನಾಶ್ವಂ
ಮಕ್ಕಳಗಂ ಜೈನನಲ್ಲನೆಂತು ಕಾಳಂ (ನಾಗಯ್ಯ ಜೆ.ಎಂ., ಪು.೩)

ಈ ಮೇಲಿನ ಪದ್ಯದಲ್ಲಿ ಬಳಸಿದ ಎಕ್ಕಲದೇವಿಗೆ ಮಾಲಕ್ಕನಿಗೆ, ಬನದ ಬಳರಿಗೆ ಮೈಲಾರಿಗೆ ಅಳುಕದೆ ಜಾತ್ರೆಯನ್ನು ಮಾಡುವವರಿಗೆ ಬ್ರಹ್ಮಶಿವನು ಖಂಡಿಸಿದ್ದಾನೆ. ಬ್ರಹ್ಮಶಿವನ ಇದೇ ಕೃತಿಯಲ್ಲಿ ಬಂಧು-ವರ್ಮನನ್ನು ಸ್ತುತಿಸಿದ್ದರಿಂದ ಆತನ ಜೀವನ ಸಂಶೋಧನೆಯಲ್ಲಿ ಗಿರಿವಾಸಿನಿ ಎಂಬ ಉಕ್ತಿ ಕಂಡುಬರುತ್ತದೆ. ಇದರಿಂದ ಪ್ರೇರಣೆಗೊಂಡ ಬ್ರಹ್ಮಶಿವನು ಗಿರಿವಾಸದಲ್ಲಿರುವವಳು ಎಂಬಂತೆ ಅರ್ಥೈಸಿ ಬನದ ಬಳಾರಿಯಾಗಿ ಬಳಸಿರಬಹುದು.

ಕ್ರಿ.ಶ.೧೨೩೦ ಜನ್ನನ ಯಶೋಧರ ಚರಿತೆಯಲ್ಲಿ ಪ್ರಸ್ತಾಪಿತವಾದಂತೆ ರಾಜಪುರ ಪಟ್ಟಣದ ದಕ್ಷಿಣ ದಿಕ್ಕಿನಲ್ಲಿ ಜೀವಹತಿಯಿಂದ ಸುಖಪಡುವ ಪಾಪುಕುಳಾ ಪಂಡಿತೆ ಚಂಡಮಾರಿ ದೇವತೆ ಇದ್ದಳು. ಅಶ್ವಯುಜ ಚೈತ್ರಮಾಸದಲ್ಲಿ ಜಾತ್ರೆ ಮಾಡದಿದ್ದರೆ ಊರ ಜನರನ್ನೆ ನಾಶಮಾಡುತ್ತಿದ್ದಳು. (ಹಿರೇಮಠ, ಎಸ್.ಎಸ್., ಸಾಧನೆ-ತ್ರೈಮಾಸಿಕ, ೧೯೭೮) ಕಾವ್ಯದಲ್ಲಿಯೇ ಮುಂದುವರಿದು ಹೇಳುವ ಜನ್ನನು ಚಂಡಕರ್ಮನೆಂಬ ತಳವಾರನು ರಾಜನ ಅಪ್ಪಣೆಯಂತೆ ಉತ್ತಮ ಲಕ್ಷಣದ ಮಾನವ ಜೋಡಿಯನ್ನು ಬಲಿ ನೀಡಲು 'ಬಳರಿಯ ಬನದಿಂದ ಪೊನಮಟ್ಟನು' ಎಂದಿದೆ. ಇದಲ್ಲದೆ ಬಲಿ ನೀಡದೇ ಇದ್ದುದಕ್ಕೆ ಹಿಟ್ಟಿನ ಕೋಳಿಯನ್ನು ಬಲಿ ನೀಡಿದ ಪ್ರಸಂಗವು ಕಾಣಸಿಗುತ್ತದೆ. ಕ್ರಿ.ಶ.೧೩೬೯ರ ಭೀಮಕವಿಯ ಬಸವಪುರಾಣದಲ್ಲಿ 'ದಿಟ್ಟ ಬಳಹರಿ ಮಾರಿಗೆ' ಎಂದಿದ್ದರೆ, ಕ್ರಿ.ಶ.೧೪೫೦ರ ಚುತುರಾಸ್ಯ ನಿಘಂಟಿನಲ್ಲಿ 'ಬಳಾರಿ-ಮಹಾಕಾಳಿ' ಎಂದು ಬಳಸಲಾಗಿದೆ. ಕ್ರಿ.ಶ.೧೪೫೦ರ ರಾಜಶೇಖರ ವಿಳಾಸ ಕೃತಿಯಲ್ಲಿ ಒಬ್ಬ ಸೂಳೆಯು ಮೋಸ ಮಾಡಿದ ವ್ಯಕ್ತಿಯೋರ್ವನಿಗೆ ಬಲಿಕಟ್ಟಿ ಮನ್ಮಥ ಬಳಾರಿಗೆ ದೊಡ್ಡ ಕುರಿಮಾಡಿ ಕಡಿಯುತ್ತೇನೆ... ಈ ವಾಕ್ಯದಲ್ಲಿ 'ಮನ್ಮಥ ಬಳಾರಿ' ಎಂಬ ಪದ ವಿಶೇಷವಾಗಿ ಬಳಸಲ್ಪಟ್ಟಿದೆ.

೨.೨. ಜಿಲ್ಲೆಯ ಭೌಗೋಳಿಕತೆ

ಬಳ್ಳಾರಿ ಜಿಲ್ಲೆಯು ಕರ್ನಾಟಕ ರಾಜ್ಯದ ಪೂರ್ವ ಮಧ್ಯ ಭಾಗದಲ್ಲಿದೆ. ಇದು ನೈರುತ್ಯ ಮತ್ತು ಈಶಾನ್ಯ ದಿಕ್ಕುಗಳ ನಡುವೆ ಚಾಚಿಕೊಂಡಿದೆ. ಇದು ಸರಿಯಾಗಿ ಕರ್ನಾಟಕದ ಮಧ್ಯ ಭಾಗದಲ್ಲಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯನ್ನು ಗಮನಿಸಿದಾಗ ನೈರುತ್ಯ ದಿಕ್ಕಿನ ಹಗರಿಬೊಮ್ಮನಹಳ್ಳಿ ತಾಲೂಕು ಕಲ್ಲಹಳ್ಳಿ ಎಂಬ ಗ್ರಾಮದಿಂದ ಈಶಾನ್ಯ ದಿಕ್ಕಿನ ಶಿರುಗುಪ್ಪ ತಾಲೂಕಿನ ತಸಲಕೂಡಲೂರು ಎಂಬ ಗ್ರಾಮದವರೆಗೆ ೧೮೭ ಕಿ.ಮೀ ಉದ್ದ, ಪೂರ್ವ ಪಶ್ಚಿಮವಾಗಿ ಬಳ್ಳಾರಿ ತಾಲೂಕಿನ ಕಾರೆಕಲ್ಲು-ವೀರಾಪುರದಿಂದ ಹಡಗಲಿ ತಾಲೂಕಿನ ಹಿರೇಬನ್ನಿಹಟ್ಟಿಯವರೆಗೆ

೧೬೧ ಕಿ.ಮೀ ಅಗಲವಾಗಿ ಹರಡಿಕೊಂಡಿದೆ. ಬ್ರಿಟಿಷರ ಆಳ್ವಿಕೆ ಕಾಲದಲ್ಲಿ ಮದ್ರಾಸ್ ಪ್ರಾಂತ್ಯದ ಬಹುದೊಡ್ಡ ಜಿಲ್ಲೆಯಾಗಿದ್ದಿತು. ೧೯೫೧ಕ್ಕೆ ಮೊದಲು ಜಿಲ್ಲೆಯು ೧೨ ತಾಲೂಕುಗಳನ್ನು ಹೊಂದಿದ್ದು ಅವುಗಳಲ್ಲಿ ಬಳ್ಳಾರಿ, ಶಿರುಗುಪ್ಪ, ಸಂಡೂರು, ಹೊಸಪೇಟೆ, ಹಡಗಲಿ, ಕೂಡ್ಲಿಗಿ, ಹರಪನಹಳ್ಳಿ ಮತ್ತು ಈಗಿನ ಆಂಧ್ರಪ್ರದೇಶದ ಆಲೂರು, ಆದೋನಿ ಮತ್ತು ರಾಯದುರ್ಗ ತಾಲೂಕುಗಳನ್ನು ಹೊಂದಿತ್ತು. ೧೯೫೩ರ ರಾಜ್ಯ ಪುನರ್ ವಿಂಗಡನೆ ಸಂದರ್ಭದಲ್ಲಿ ಪ್ರಾಂತವಾಗಿ ಪ್ರತ್ಯೇಕಗೊಂಡಾಗ ಬಳ್ಳಾರಿ ಜಿಲ್ಲೆಗೆ ಸೇರಿದ್ದ ಆಲೂರು, ಆದೋನಿ ಮತ್ತು ರಾಯದುರ್ಗ ತಾಲೂಕುಗಳನ್ನು ಆಂಧ್ರಪ್ರದೇಶ ರಾಜ್ಯಕ್ಕೆ ಸೇರಿಸಲಾಯಿತು. ರಾಜ್ಯ ವಿಂಗಡನೆಯ ಸಂದರ್ಭದಲ್ಲಿ ಬಳ್ಳಾರಿ ಕನ್ನಡಿಗರ ಮತ್ತು ಆಂಧ್ರ ತೆಲುಗು ಭಾಷಿಕರ ನಡುವೆ ಸಾಕಷ್ಟು ವಾದ-ವಿವಾದಗಳು ಸಂಭವಿಸಿದ್ದವು. ಕರ್ನಾಟಕದಲ್ಲಿ ೧೯೯೭ರಲ್ಲಿ ಹೊಸಜಿಲ್ಲೆಗಳ ರಚನೆಯ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಗೆ ಸೇರಿಸಿದ್ದ ಹರಪನಹಳ್ಳಿ ತಾಲೂಕನ್ನು ದಾವಣಗೆರೆ ಜಿಲ್ಲೆಗೆ ಸೇರಿಸಲಾಯಿತು. ಹೀಗಾಗಿ ಪ್ರಸ್ತುತ ಬಳ್ಳಾರಿ ಜಿಲ್ಲೆಯು ಏಳು ತಾಲೂಕುಗಳನ್ನು ಹೊಂದಿದೆ.

ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೮೪೨೦ ಚ.ಕಿ.ಮೀ ಇದ್ದು ರಾಜ್ಯದ ವಿಸ್ತೀರ್ಣದಲ್ಲಿ ಶೇ.೬ ರಷ್ಟು ಪಾಲನ್ನು ಹೊಂದಿದೆ. ವಿಸ್ತೀರ್ಣದಲ್ಲಿ ರಾಜ್ಯದಲ್ಲಿ ೧೧ನೆಯ ಸ್ಥಾನದಲ್ಲಿದೆ. ಬಳ್ಳಾರಿ ಜಿಲ್ಲೆಯು ಪೂರ್ವ ರೇಖಾಂಶ ೭೫° ೪೦-೭೦" ಹಾಗೂ ಉತ್ತರ ರೇಖಾಂಶ ೪೦° ೩೦-೧೫ ೫೦" ರ ನಡುವೆ ಇದೆ. ಜಿಲ್ಲೆಯ ಉತ್ತರಕ್ಕೆ ಕೊಪ್ಪಳ ಮತ್ತು ರಾಯಚೂರು ಜಿಲ್ಲೆ, ದಕ್ಷಿಣಕ್ಕೆ ಚಿತ್ರದುರ್ಗ, ದಾವಣಗೆರೆ, ಪಶ್ಚಿಮಕ್ಕೆ ಗದಗ ಜಿಲ್ಲೆ ಮತ್ತು ಪೂರ್ವಕ್ಕೆ ಆಂಧ್ರ ಪ್ರದೇಶದ ಅನಂತಪುರ ಗಡಿಜಿಲ್ಲೆಗಳಾಗಿವೆ.

ಬಳ್ಳಾರಿ ಜಿಲ್ಲೆಯು ಪಶ್ಚಿಮ ವಾಯುವ್ಯದಿಂದ ಉತ್ತರ ಮತ್ತು ಈಶಾನ್ಯದ ಗಡಿಭಾಗದವರೆಗೆ ತುಂಗಭದ್ರಾ ನದಿಯ ಹರಿವು ಇದೆ. ತುಂಗಾಭದ್ರಾ ನದಿಯು ಬಳ್ಳಾರಿ ಜಿಲ್ಲೆಯನ್ನು ಗದಗ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಿಂದ ಬೇರ್ಪಡಿಸಿದೆ. ಆದರೆ ವಾಯುವ್ಯದಿಂದ ಆಗ್ನೇಯದವರೆಗೂ ಹಬ್ಬಿರುವ ಸಂಡೂರು ಬೆಟ್ಟಗುಡ್ಡಗಳು ಜಿಲ್ಲೆಯನ್ನು ಪೂರ್ವ ಪಶ್ಚಿಮವಾಗಿ ಎರಡು ಪ್ರಮುಖ ಭೌಗೋಳಿಕ ವಿಭಾಗಗಳನ್ನಾಗಿ ವಿಂಗಡನೆ ಮಾಡಿದೆ. ಜಿಲ್ಲೆಯ ಪೂರ್ವಭಾಗವು ಸಮತಟ್ಟಾದ ಕಪ್ಪು ಭೂಮಿಯನ್ನು ಹೊಂದಿದ್ದು ಕೃಷಿಗೆ ಅನುಕೂಲಕರವಾಗಿದೆ. ಈ ಭಾಗದಲ್ಲಿ ಅಲ್ಲಲ್ಲಿ ಕಲ್ಲು ಬೆಟ್ಟ ಗುಡ್ಡಗಳು ಕಾಣಸಿಗುತ್ತವೆ. ಪಶ್ಚಿಮ ಭಾಗದಲ್ಲಿ ಕಪ್ಪು ಮಣ್ಣಿನ ಹಾಗೂ ಕೆಂಪು ಮಿಶ್ರಿತ ಮಣ್ಣಿನ ಬಯಲು ಪ್ರದೇಶವಿದೆ. ಜಿಲ್ಲೆಯ ಹಡಗಲಿ ತಾಲೂಕು ಬಿಟ್ಟರೆ ಉಳಿದೆಡೆ ಕಾಡು ಗುಡ್ಡ ಬೆಟ್ಟ ಪ್ರದೇಶಗಳಿಂದ ಆವೃತವಾಗಿವೆ.

ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗವು ಪೂರ್ವಭಾಗಕ್ಕಿಂತಲು ಎತ್ತರವಾಗಿದ್ದು ಇಲ್ಲಿ ಮಳೆಯ ಪ್ರಮಾಣ ತುಸು ಹೆಚ್ಚಾಗಿದೆ. ಜಿಲ್ಲೆಯು ಹವಮಾನ ದೃಷ್ಟಿಯಿಂದ ಅತಿ ಉಷ್ಣವಲಯವಾಗಿದೆ.

ಜಿಲ್ಲೆಯ ಪೂರ್ವ ಭಾಗದಲ್ಲಿ ಮಳೆಯ ಪ್ರಮಾಣ ತೀರ ಕಡಿಮೆ. ಶುಷ್ಕ ವಾತಾವರಣದಿಂದ ಕೂಡಿದ ಪೂರ್ವ ಭಾಗದಲ್ಲಿ ಹೆಚ್ಚು ಅರಣ್ಯ ಪ್ರದೇಶವಿದೆ. ತುಂಗಭದ್ರಾ ನದಿಯ ಮಲ್ಲಾಪುರ ಬಳಿಯವರೆಗೂ ಸಂಡೂರು ಬೆಟ್ಟದ ಸಾಲು ಆಗ್ನೇಯದ ಕಡೆಗೆ ಸುಮಾರು ೪೮ ಕಿ.ಮೀ ದೂರ ವಿಸ್ತಾರವಾಗಿದೆ. ಈ ಬೆಟ್ಟಗಳ ಮಧ್ಯಭಾಗದಲ್ಲಿ ನಾರಿಹಳ್ಳದ ಕಮರಿಗಳಿವೆ. ಸಂಡೂರಿಗೆ ಮುಕುಟ ಪ್ರಾಯವಾಗಿರುವ ಕುಮಾರ ಸ್ವಾಮಿ ದೇವಾಲಯವು ಸಮುದ್ರ ಮಟ್ಟದಿಂದ ೧೦೩೬ ಮೀ. ಎತ್ತರದಲ್ಲಿದೆ. ಇದರ ಮಧ್ಯದಲ್ಲಿರುವ ರಾಮನಮಲೈ ೯೯೨ ಮೀ. ಹಾಗೂ ಜಂಭುನಾಥ ಬೆಟ್ಟವು ೯೦೮ ಮೀ. ಎತ್ತರದಲ್ಲಿದೆ.

ಸಂಡೂರಿನ ವಾಯವ್ಯದಿಂದ ಆಗ್ನೇಯದವರೆಗೆ ಹಬ್ಬಿರುವ ಸುಗ್ಗಮಹದೇವನ ಬೆಟ್ಟ ಶ್ರೇಣಿಯು ದರೋಜಿ ಕೆರೆಯವರೆಗೂ ೪೨ ಕಿ.ಮೀ.ಗಳಷ್ಟು ಉದ್ದ ಆವರಿಸಿಕೊಂಡಿದೆ. ಇದರ ಎತ್ತರ ೧೦೦೦ ಮೀ. ಇದೆ. ಈ ಭಾಗದ ನೈರುತ್ಯಕ್ಕೆ ೪೮ ಕಿ.ಮೀ. ದೂರದಲ್ಲಿರುವ ಮಲ್ಲಪ್ಪನ ಗುಡ್ಡದ ಶ್ರೇಣಿಯು ಹಡಗಲಿ, ಹರಪನಹಳ್ಳಿಯವರೆಗೂ ವ್ಯಾಪಿಸಿದೆ. ಇದು ತುಂಗಭದ್ರಾ ನದಿಯ ಬಳಿ ಹೊನ್ನೂರಿನ ಹತ್ತಿರ ಆರಂಭವಾಗಿ ಆಗ್ನೇಯಕ್ಕೆ ಸುಮಾರು ೪೦ ಕಿ.ಮೀ. ದೂರದವರೆಗೂ ವ್ಯಾಪಿಸಿದೆ.

ಮಲ್ಲಪ್ಪನ ಗುಡ್ಡಬೆಟ್ಟಗಳ ಶ್ರೇಣಿಯು ಕಲ್ಲಹಳ್ಳಿ ಗುಡ್ಡದವರೆಗೂ ವ್ಯಾಪಿಸಿದೆ. ಈ ಗುಡ್ಡಗಳಲ್ಲಿ ಕಲ್ಲಹಳ್ಳಿ ಗುಡ್ಡವು ೮೫೩ ಮೀ. ಹಾಗೂ ನರಸಿಂಹದೇವರ ಗುಡ್ಡವು ೭೭೫ ಮೀ. ಎತ್ತರ ಹೊಂದಿವೆ. ಕೂಡ್ಲಿಗಿ ಬೆಟ್ಟದ ಶ್ರೇಣಿಯು ಉತ್ತರ ಮತ್ತು ಪೂರ್ವಭಾಗಕ್ಕೆ ವ್ಯಾಪಿಸಿದೆ. ಇದರಲ್ಲಿ ಆನೇಕಲ್ಲು ದುರ್ಗವು ೭೨೪ಮೀ. ಜರಿಮಲೆ ದುರ್ಗವು ೮೩೮ ಮೀ. ಎತ್ತರವಿದೆ. ಸಂಡೂರಿನ ಚೋರನೂರು ಸಮೀಪ ಗುಡಿಕೋಟೆ ಶ್ರೇಣಿಯಿಂದ ಪ್ರಾರಂಭವಾಗಿ ಕೂಡ್ಲಿಗಿ ತಾಲೂಕಿನ ಗುಡೆಕೋಟೆಯವರೆಗೂ ಹಬ್ಬಿ ಚಿನ್ನಹಗರಿ ಕಣಿವೆ ದಾಟಿ ಚಿತ್ರದುರ್ಗದ ಪ್ರದೇಶದಲ್ಲಿ ಹಾಯುತ್ತದೆ. ಇದರ ದಕ್ಷಿಣ ಭಾಗದಲ್ಲಿರುವ ಕೈಲಾಸಗೊಂಡ ಶಿಖರವು ೯೧೭.ಮೀ ಎತ್ತರವಿದೆ. ಈ ಪ್ರದೇಶ ಹೆಚ್ಚು ಅರಣ್ಯಭರಿತವಾಗಿದೆ. ಬಳ್ಳಾರಿ ಜಿಲ್ಲೆಯು ಹೆಚ್ಚು ಗುಡ್ಡ ಬೆಟ್ಟ ಪ್ರದೇಶಗಳಿಂದ ಹಾಗೂ ಅಮೂಲ್ಯವಾದ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳಿಂದ ಕೂಡಿದ ಪ್ರದೇಶ. ಸಂಡೂರು ಬೆಟ್ಟಗುಡ್ಡ ಪರಿಸರವು ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ನೋಡಲು ಬಲು ಸೊಗಸು. ಸಂಡೂರು ಪ್ರದೇಶವನ್ನು ಬಳ್ಳಾರಿ ಜಿಲ್ಲೆಯ ಮಲೆನಾಡು ಎಂದೇ ಕರೆಯಲಾಗುತ್ತದೆ.

ಅತೀ ಉಷ್ಣ ಪ್ರದೇಶದಿಂದ ಕೂಡಿರುವ ಬಳ್ಳಾರಿ ಜಿಲ್ಲೆಗೆ ತುಂಗಭದ್ರಾ ನದಿಯು ವರವಾಗಿದೆ. ಈ ನದಿಯು ಜಿಲ್ಲೆಯಲ್ಲಿ ೩೨೦ ಕಿ.ಮೀ.ನಷ್ಟು ದೂರ ಹರಿಯುತ್ತದೆ. ನೀರಾವರಿ ಕೃಷಿ ಅಭಿವೃದ್ಧಿಗೆ ಈ ನದಿಯು ಬೆನ್ನೆಲುಬಾಗಿದೆ. ಈ ನದಿಯು ಹರಪನಹಳ್ಳಿ ತಾಲೂಕಿನ ಕಡತಿ ಗ್ರಾಮದಿಂದ ಪ್ರವೇಶಿಸಿ ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಸಿರುಗುಪ್ಪ, ಬಳ್ಳಾರಿ ತಾಲೂಕುಗಳಲ್ಲಿ

ಹರಿದು ಆಂಧ್ರಪ್ರದೇಶದಲ್ಲಿ ಕೃಷ್ಣಾನದಿಯನ್ನು ಸೇರಿರುವುದು. ತುಂಗಭದ್ರಾ ನದಿಗೆ ವೇದಾವತಿ, ಹಗರಿ, ಚಿಕ್ಕಹಗರಿಗಳು ಉಪನದಿಗಳಾಗಿವೆ. ತುಂಗಭದ್ರಾ ನದಿ ಇಕ್ಕೆಲಗಳಲ್ಲಿ ನೀರಾವರಿ ವ್ಯಾಪಕವಾಗಿದೆ.

ತುಂಗಭದ್ರಾ ನದಿಗೆ ಮಲ್ಲಾಪುರದ ಬಳಿ ಅಣೆಕಟ್ಟು ನಿರ್ಮಿಸಲಾಗಿದೆ. ತುಂಗಭದ್ರಾ ಅಣೆಕಟ್ಟನ್ನು ಜುಲೈ ೧, ೧೯೫೩ರಂದು ಉದ್ಘಾಟಿಸಲಾಗಿದೆ. ತುಂಗಭದ್ರಾ ಅಣೆಕಟ್ಟಿನ ವಿವಿಧ ಕಾಲುವೆಗಳಲ್ಲಿ ನೀರನ್ನು ಹರಿಸುವುದರ ಮೂಲಕ ಬಳ್ಳಾರಿ ರಾಯಚೂರು ಹಾಗೂ ಕರ್ನೂಲು ಜಿಲ್ಲೆಗಳ ಲಕ್ಷಾಂತರ ಎಕರೆ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ವೈವಿಧ್ಯಮಯವಾದ ಬೆಳೆಗಳನ್ನು ಬೆಳೆಯಲು ಅವಕಾಶ ನೀಡಿ ರೈತರ ಬಾಳನ್ನು ಇದು ಹಸನುಗೊಳಿಸಿದೆ. ಈ ಜಲಾಶಯದಿಂದ ವಿವಿಧ ನಗರ ಪ್ರದೇಶಗಳಿಗೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಪೂರೈಸಲಾಗುತ್ತದೆ. ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಯಲ್ಲಿ ತುಂಗಭದ್ರೆಯ ಪಾಲು ಅಪಾರ. ತುಂಗಭದ್ರಾ ಅಣೆಕಟ್ಟನ್ನು ಬಿಟ್ಟರೆ ಜಿಲ್ಲೆಯಲ್ಲಿ ಹಲವಾರು ಸಣ್ಣಪುಟ್ಟ ಜಲಾಶಯ, ಕೆರೆ, ಕಟ್ಟೆಗಳು, ಕುಡಿಯುವ ನೀರು ಹಾಗೂ ನೀರಾವರಿ ಸೌಲಭ್ಯವನ್ನು ಒದಗಿಸಿವೆ.

ಬಳ್ಳಾರಿ ಜಿಲ್ಲೆಯು ಹಡಗಲಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಸಂಡೂರು, ಸಿರುಗುಪ್ಪ ಹಾಗೂ ಬಳ್ಳಾರಿ ಒಟ್ಟು ಏಳು ತಾಲೂಕುಗಳನ್ನು ಹೊಂದಿದೆ. ಜಿಲ್ಲೆಯಲ್ಲಿ ೧೧ ಪಟ್ಟಣಗಳು, ೬೨೩ ಗ್ರಾಮಗಳನ್ನು ಒಳಗೊಂಡಿದೆ. ೨೦೦೧ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೨೦,೨೫,೨೪೨ ಇದ್ದು ರಾಜ್ಯದ ಜನಸಂಖ್ಯೆಯಲ್ಲಿ ಶೇ. ೩.೮೪ರಷ್ಟು ಪ್ರಮಾಣವನ್ನು ಹೊಂದಿದೆ. ಜನಸಂಖ್ಯೆಯಲ್ಲಿ ರಾಜ್ಯದ ೭ನೇ ಸ್ಥಾನದಲ್ಲಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಜನಸಂಖ್ಯೆಯು ೧೩,೧೯,೨೩೯(ಶೇ ೬೫.೧೩), ನಗರ ಜನಸಂಖ್ಯೆ ೭,೦೬,೦೦೩(೩೪:೮೭)ರಷ್ಟಿದೆ. ೨೦೦೧ರ ಜನಗಣತಿಯ ಪ್ರಕಾರ ಶೇ ೨೭.೭೨ ರಷ್ಟು, ರಾಜ್ಯದ ಒಟ್ಟು ಪರಿಶಿಷ್ಟರಲ್ಲಿ ಜಿಲ್ಲೆಯದ್ದು ೪.೯೪ ರಷ್ಟಿದೆ.

೨.೩. ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

ಇತಿಹಾಸವನ್ನು ಹುಡುಕಿಕೊಳ್ಳದ ಜನಾಂಗವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಈ ಕ್ರಿಯೆ ಜಗತ್ತಿನಾದ್ಯಾಂತ ಜರುಗುತ್ತಾ ಬಂದಿದೆ. (ಎಂ.ಎಂ.ಕಲಬುರ್ಗಿ, ಪ್ರಸ್ತಾವನೆ, ೧೯೮೪) ಎಂಬುದು ಪ್ರಸ್ತುತದಲ್ಲಿ ಗೊಂದಲಕ್ಕೀಡುಮಾಡುವ ಸಂಗತಿಯಾದರೂ ಸಹ ಇದನ್ನೇ ಅಳವಡಿಸಿಕೊಂಡಿರುವುದು ಗಮನಕ್ಕೆ ಬರುತ್ತದೆ. ಅಂತೆಯೇ ಬಳ್ಳಾರಿ ಜಿಲ್ಲೆಯು ಐತಿಹಾಸಿಕ ಮಹತ್ವವನ್ನು ಹೊಂದಿದೆ. ಪ್ರಾಚ್ಯ ಸಂಶೋಧನೆಯಿಂದ ದೊರೆತ ಮಾಹಿತಿಗಳಿಂದ ಹಳೆಯ ಶಿಲಾಯುಗದಿಂದ, ಕಬ್ಬಿಣದ ಯುಗದವರೆಗಿನ ಪಳೆಯುಳಿಕೆಗಳು ಜಿಲ್ಲೆಯ ಕಪ್ಪಗಲ್ಲು, ಸಂಗನಕಲ್ಲು, ತೆಕ್ಕಲುಕೋಟೆ, ಗಾದಿಗನೂರು, ಹಂಪೆ ಮುಂತಾದೆಡೆ ಆದಿ ಮಾನವನಿಗೆ ಸಂಬಂಧಿಸಿದ ಶಿಲಾಯುಧಗಳು, ಮಡಿಕೆ-ಕುಡಿಕೆ, ಗವಿ ವರ್ಣ ಚಿತ್ರಗಳು ಹಾಗೂ ಬೂದಿಗುಡ್ಡಗಳು ಬೆಳಕಿಗೆ ಬಂದಿವೆ. ಇತ್ತೀಚೆಗೆ ಬೈಲುವದ್ದಿಗೆರೆ,

ಗುಂಡ್ಲುವದ್ದೀಗೆರೆ, ಕಾಕುಬಾಳು, ಧರ್ಮದಗುಡ್ಡ ಹಾಗೂ ಕಮಲಾಪುರದ ವಿದ್ಯಾರಣ್ಯದಲ್ಲಿ ಶಿಲಾಯುಗದ ವರ್ಣಚಿತ್ರ ಮತ್ತಿತರ ಅವಶೇಷಗಳು ದೊರೆತಿವೆ.

ಮಹಾಕಾವ್ಯಗಳು, ಸ್ಥಳಪುರಾಣ ಹಾಗೂ ಐತಿಹ್ಯಗಳ ಹಿನ್ನೆಲೆಯಲ್ಲಿ ಹಂಪೆಗೆ ತನ್ನದೇ ಆದ ಚರಿತ್ರೆ ಇದೆ. ಮೊದಲಿಗೆ ಹಂಪೆಯು ರಾಮಾಯಣ ಕಾಲದಲ್ಲಿ ಕಿಷ್ಕಿಂದ ಎಂಬ ಹೆಸರು ಪಡೆದಿತ್ತು ಅಲ್ಲದೆ ಹಲವು ಮಹಾಕಾವ್ಯಗಳಲ್ಲಿ ಹೇಮಕೂಟ, ಮಾತಂಗಪರ್ವತ, ವಿರೂಪಾಕ್ಷಪುರ, ಪಂಪಾಪುರ, ಪಂಪಾಸರೋವರ, ಪಂಪತೀರ್ಥ ಎಂದು ಕರೆಯಲಾಗಿದೆ. ಪಂಪಾಮಹಾತ್ಮೆಯ ಸ್ಥಳ ಪುರಾಣದ ಉಲ್ಲೇಖದಂತೆ ಬ್ರಹ್ಮನ ಮಗಳಾದ ಪಂಪಾಂಬಿಕೆಯು ಹಂಪೆಯಲ್ಲಿ ತಪಸ್ಸು ಮಾಡಿ ವಿರೂಪಾಕ್ಷನನ್ನು ಒಲಿಸಿಕೊಂಡ ಸ್ಥಳಕ್ಕೆ ಪಂಪಾಕ್ಷೇತ್ರ ಎಂದು ಕರೆಯುತ್ತಿದ್ದರು. ಇಲ್ಲಿರುವ ತುಂಗಾಭದ್ರಾ ನದಿಯನ್ನು ಪಂಪಾತೀರ್ಥ, ಹಂಪಾತೀರ್ಥ ಎಂದು ಕರೆಯಲಾಗಿದೆ. ಪಂಪಾಂಬಿಕೆ ಮತ್ತು ಪಂಪಾಪತಿಯರ ವಿವಾಹದ ಸ್ಥಳವು ಹಂಪೆಯಲ್ಲಿರುವ ಹೇಮಕೂಟವೆಂದು ಹೇಳಲಾಗಿದೆ.

ಶಾಸನಗಳು ಒಂದು ಪ್ರದೇಶದ ಪ್ರಾಚೀನ ಇತಿಹಾಸವನ್ನು ತಿಳಿಸುವಲ್ಲಿ ಮೂಕ ಸಾಕ್ಷಿಗಳಾಗಿವೆ. ಕ್ರಿಪೂ. ೩ನೇ ಶತಮಾನದಲ್ಲಿ ಈ ಪ್ರದೇಶವು ಮೌರ್ಯರ ಆಳ್ವಿಕೆಗೆ ಒಳಗಾಗಿತ್ತೆಂದು ಹೇಳಬಹುದು. ಅಶೋಕನಿಗೆ ಸಂಬಂಧಿಸಿದ ಶಾಸನಗಳು ಬಳ್ಳಾರಿ ಜಿಲ್ಲೆಯ ಉದೇಗೊಳಂ ಮತ್ತು ನಿಟ್ಟೂರಿನಲ್ಲಿ ದೊರೆತಿವೆ. ಇವರ ನಂತರ ಶಾತವಾಹನರು ಈ ಪ್ರದೇಶವನ್ನು ಆಳಿದ್ದಾರೆ. ನಂತರ ಈ ಜಿಲ್ಲೆ ಪಲ್ಲವರ ಆಳ್ವಿಕೆಗೆ ಒಳಗಾಯಿತು. ಇವರನ್ನು ಹಿರೇಹಡಗಲಿಯಲ್ಲಿ ದೊರೆತ ತಾಮ್ರಶಾಸನದಲ್ಲಿ 'ಸಾತಹನಿರಠ್ಠ' ಎಂದು ಕರೆಯಲಾಗಿದೆ. ಇತ್ತೀಚೆಗೆ ಹಂಪೆಯ ಉತ್ಖನನದಲ್ಲಿ ಕ್ರಿ.ಶ. ೧-೨ ನೇ ಶತಮಾನದ ಪ್ರಾಕೃತ ಶಾಸನ ಹಾಗೂ ಬೌದ್ಧ ಶಿಲ್ಪಫಲಕಗಳು ದೊರೆತಿವೆ. ಇದರ ನಂತರ ಆಳ್ವಿಕೆ ನಡೆಸಿದ ಬನವಾಸಿಯ ಕದಂಬರು ಈಗಿನ ಹರಪನಹಳ್ಳಿ ತಾಲೂಕಿನ ಉಚ್ಚಂಗಿ ದುರ್ಗವನ್ನು ಉಪರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.

ಉಚ್ಚಂಗಿಯು ಬನವಾಸಿ ೧೨೦೦ ರಲ್ಲಿ ಸೇರ್ಪಡೆಯಾಗಿತ್ತು. ನಂತರ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಗಂಗರು, ಹೊಯ್ಸಳರು ಮತ್ತು ಸೇವುಣರು ಬಳ್ಳಾರಿ ಪ್ರದೇಶವನ್ನಾಳಿದರು. ಕ್ರಿ.ಶ.೭೧೫ರ ಶಾಸನವೊಂದರಲ್ಲಿ 'ದುಗ್ಗಮಾರ ಎರೆಯಪ್ಪನ್... ಕಂಪಲಿಗೆ ಪಡೆವೋದಲ್ಲಿ ಪಾಂಡಪ್ಪನೆಂಬುವನು ಕಾಳೆಗದೊಳ್' ಸತ್ತಲ್ಲಿ ಎಂದಿದೆ.(ಹೆರೆಂಜೆ ಕೃಷ್ಣಭಟ್ ಪುಟ ೯೦೫, ೧೯೯೫) ಶ್ರೀಪುರಷನ ಮಗನಾದ ದುಗ್ಗಮಾರನು ಸತ್ತ ಪಾಂಡಪ್ಪನಿಗೆ ದತ್ತಿ ನೀಡಿದನೆಂದಿದೆ. ಕ್ರಿ.ಶ.೧೦೨೨ರ ಶಾಸನದಂತೆ ಜಗದೇಕಮಲ್ಲನೆಂಬ ನೊಳಂಬ ಪಲ್ಲವ ರಾಜನು 'ಕಪಲಿಯಲಾಪನಂ ಗೆಯ್ದು ರಾಜ್ಯಂಗೈಯುತ್ತಿರಲು ಎಂದಿದೆ.' ಇಲ್ಲಿ ಬಳಕೆಯಾದ ಕಪಲೆಯೇ ಬಳ್ಳಾರಿ ಜಿಲ್ಲೆಯ ಕಂಪಲಿಯೆಂಬ ಊರಾಗಿದೆ.(ಹೆರೆಂಜೆ ಕೃಷ್ಣಭಟ್ ಪು-೯೦೫, ೧೯೯೫) ಕ್ರಿ.ಶ.೧೦೫೫ರ ಕೋಗಳಿಯ

ಶಾಸನವು ಗಂಗದೊರೆ ದುರ್ವಿನೀತನು ಬಸದಿಯನ್ನು ನಿರ್ಮಿಸಿದನೆನ್ನುತ್ತದೆ. ಕ್ರಿ.ಶ.೧೦೪೫ರ ಮೋರಿಗೇರಿ ಶಾಸನವು ತ್ರೈಲೋಕ್ಯಮಲ್ಲ ನನ್ನಿನೊಳಂಬನು ಬಲ್ಲಕುಂದೆ-೩೦೦, ಕೋಗಳಿ-೫೦೦, ಕದಂಬಳಿಗೆ-೧೦೦೦, ಕುಡಿಹಾರ-೭೦ನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕ್ರಿ.ಶ.೯೮೭ರ ಬಾಗಳಿ ಶಾಸನ, ಕ್ರಿ.ಶ.೧೦೭೧ರ ಹೂವಿನಹಡಗಲಿಯ ಶಾಸನ ಹಾಗೂ ಕ್ರಿ.ಶ.೧೧೦೬ರ ಶಾಸನಗಳಿಂದ ಕದಂಬರು ಈ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದರೆಂಬುದು ಸ್ಪಷ್ಟ. ಪಲ್ಲವರು ಬಳ್ಳಾರಿಯನ್ನು ನೊಳಂಬವಾಡಿಯ ಭಾಗವನ್ನಾಗಿ ಮಾಡಿಕೊಂಡು ಆಳುತ್ತಿದ್ದರು. ಈ ಎಲ್ಲ ಶಾಸನಗಳಿಂದ ಬಳ್ಳಾರಿ ಜಿಲ್ಲೆಯು ವಿವಿಧ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತೆಂಬುದು ತಿಳಿದುಬರುತ್ತದೆ.

ಕುಮ್ಮಟದುರ್ಗದ ಕಂಪಲಿದೇವನು ಬಳ್ಳಾರಿ ಜಿಲ್ಲೆಯ ರಾಮನ ಮಲೆದುರ್ಗವನ್ನು ಮತ್ತೊಂದು ರಾಜಧಾನಿಯನ್ನಾಗಿ ಮಡಿಕೊಂಡು ಈ ಪ್ರದೇಶವನ್ನು ಅಳಿದನು. ಇವನ ಮಗನಾದ ಕುಮಾರ ರಾಮನು ತನ್ನ ಶೌರ್ಯದಿಂದಾಗಿ ದೈವತ್ವವನ್ನು ಪಡೆದಿದ್ದಾನೆ. ಕುಮಾರರಾಮನು ತುಘಲಕ್ ಸೈನ್ಯದೊಂದಿಗೆ ಹೋರಾಡಿ ಮೃತಪಟ್ಟನು. ಈತನಿಗೆ ಸಂಬಂಧಪಟ್ಟಂತೆ ದೇವಾಲಯಗಳು, ವೀರಗಲ್ಲು, ಶಾಸನ ಹಾಗೂ ದೇವಾಲಯವೊಂದು ಸಂಡೂರಿನ ರಾಮನಮಲೆ ದುರ್ಗದಲ್ಲಿ ಕಂಡುಬರುತ್ತದೆ.

ಕುಮ್ಮಟದುರ್ಗದ ಅವಸಾನವು ಬೃಹತ್ ವಿಜಯನಗರ ಸಾಮ್ರಾಜ್ಯದ ಹುಟ್ಟಿಗೆ ಕಾರಣವಾಯಿತು. ಇದಕ್ಕೆ ಹೊಯ್ಸಳರ ಉದಾರವಾದ ಪ್ರೋತ್ಸಾಹ ಸಹಕಾರಗಳೇ ಕಾರಣ. ವಿಜಯನಗರ ಸಾಮ್ರಾಜ್ಯವು ವಿಜಯನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ೨೫೦ ವರ್ಷಗಳ ಕಾಲ ಆಳ್ವಿಕೆ ನಡೆಸಿತು. ನಾಲ್ಕು ವಂಶಗಳಾದ ಸಂಗಮ, ಸಾಳ್ವ, ತುಳು ಮತ್ತು ಅರವೀಡು ವಂಶಸ್ಥರು ಈ ಸಾಮ್ರಾಜ್ಯದ ಆಳ್ವಿಕೆಯನ್ನು ನಡೆಸಿದರು. ಇದು ಕ್ರಿ.ಶ.೧೫೬೫ರ ರಕ್ಕಸಗಿ ತಂಗಡಗಿ ಯುದ್ದದಿಂದ ಪತನವಾಯಿತು. ನಂತರದ ಕಾಲದಲ್ಲಿ ಹರಪನಹಳ್ಳಿ ಮೊದಲುಗೊಂಡು ಅನೇಕ ಪಾಳೆಗಾರರ ಆಳ್ವಿಕೆಯಲ್ಲಿ ಹಂಚಿಹೋಯಿತು. ಷಾಹಿ ಸುಲ್ತಾನರನ್ನು ಹೊಡೆದೋಡಿಸಿದ ಕುರುಬರ ಹಂಡೆ ಹನುಮಪ್ಪನಾಯಕನಿಗೆ ಬಳ್ಳಾರಿ ಪ್ರಾಂತವು ದೊರೆಯಿತು. ನಂತರ ಜಿಲ್ಲೆಯು ಮೊಗಲರು ಮತ್ತು ಮರಾಠರ ಆಳ್ವಿಕೆಗೆ ಒಳಪಟ್ಟಿತು.

ನಂತರದ ಶತಮಾನದಲ್ಲಿ ಮೈಸೂರಿನ ಹೈದರಾಲಿ ಮತ್ತು ಅವನ ಮಗ ಟಿಪ್ಪುಸುಲ್ತಾನನು ಬಳ್ಳಾರಿಯನ್ನು ತಮ್ಮ ಆಧೀನಕ್ಕೆ ತೆಗೆದುಕೊಂಡು ಆಳ್ವಿಕೆ ನಡೆಸಿದರು. ಟಿಪ್ಪು ಪತನವಾದ ನಂತರ ಬಳ್ಳಾರಿ ಪ್ರಾಂತವು ಬ್ರಿಟಿಷರ ವಶವಾಯಿತು. ಬ್ರಿಟಿಷರ ವಶವಾದ ಬಳ್ಳಾರಿ ಪ್ರದೇಶವು ಮದರಾಸು ಪ್ರಾಂತದಲ್ಲಿ ವಿಲೀನವಾಯಿತು. ೧೯೫೩ರ ಸುಮಾರಿನಲ್ಲಿ ಪ್ರಾಂತೀಯ ವಿಂಗಡಣೆಯಿಂದ ಬಳ್ಳಾರಿ ಜಿಲ್ಲೆಯಲ್ಲಿದ್ದ ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳು ಆಂಧ್ರಪ್ರದೇಶಕ್ಕೆ

ಸೇರ್ಪಡೆಯಾದವು. ಅಗ ಬಳ್ಳಾರಿಯು ಎಂಟು ತಾಲೂಕುಗಳನ್ನುಳ್ಳ ಜಿಲ್ಲೆಯಾಯಿತು. ಅವುಗಳೆಂದರೆ ಬಳ್ಳಾರಿ, ಸಿರುಗುಪ್ಪ, ಸಂಡೂರು, ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿಗಳು. ೧೯೯೨ರ ದಾವಣಗೆರೆ ಜಿಲ್ಲೆಯ ಸ್ಥಾಪನೆಯಿಂದಾಗಿ ಹರಪನಹಳ್ಳಿ ತಾಲೂಕು ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾಯಿತು.

ಬಳ್ಳಾರಿ ಜಿಲ್ಲೆಯು ಚಾರಿತ್ರಿಕವಾಗಿ ದಕ್ಷಿಣ ಭಾರತದಲ್ಲೆ ವಿಶಿಷ್ಟ ಸ್ಥಾನ ಪಡೆದಿದೆ. ಪ್ರಾಚೀನ, ಮಧ್ಯಕಾಲೀನ ಹಾಗೂ ಅಧುನಿಕ ಕಾಲಗಳಲ್ಲಿ ತನ್ನದೇ ಆದ ಚಾರಿತ್ರಿಕ ಘಟನಾವಳಿಗಳಿಂದ ಚರಿತ್ರಕಾರರ ಗಮನ ಸೆಳೆದಿದೆ. ಇಂದು ಜಿಲ್ಲೆಯಲ್ಲಿ ಲಭ್ಯವಿರುವ ಅಮೂಲ್ಯವಾದ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನಿಂದಾಗಿ ಜಿಲ್ಲೆಯು ವಿಶ್ವವಿಖ್ಯಾತಿ ಹೊಂದಿದೆ.

೨.೪. ಆರ್ಥಿಕತೆ

೧. ನೈಸರ್ಗಿಕ ಮತ್ತು ಖನಿಜ ಸಂಪತ್ತು

ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಸಂಡೂರು, ಬಳ್ಳಾರಿ ಹಾಗೂ ಹಡಗಲಿ ತಾಲೂಕುಗಳು ವಿವಿಧ ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದ್ದು ವಿಶ್ವಮಾನ್ಯತೆ ಪಡೆದುಕೊಂಡಿವೆ. ಬಳ್ಳಾರಿ ಜಿಲ್ಲೆಯಿಂದ ವಿದೇಶಕ್ಕೆ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ಅದಿರು ರಫ್ತಾಗುತ್ತಿದೆ. ಜಿಲ್ಲೆಯಲ್ಲಿ ಗ್ರಾನೈಟ್, ಮ್ಯಾಗ್ನಸೈಟ್, ಜೇಡಿಮಣ್ಣು, ಬೆಣಚುಕಲ್ಲು, ಕಲ್ನಾರು, ತಾಮ್ರ, ಸೀಸ, ಚಿನ್ನ, ಜಿಪ್ಸಮ್, ಸುಣ್ಣದಕಲ್ಲು, ರೆಡ್‌ಆಕ್ಸೈಡ್, ಸೂಜಿಗಲ್ಲು, ವಜ್ರ, ಶಿಲಾಸ್ಪಟಿಕ ಮುಂತಾದ ಅಮೂಲ್ಯವಾದ ಖನಿಜ ಸಂಪನ್ಮೂಲಗಳು ಲಭ್ಯವಿದೆ. ಸಂಡೂರು ಬೆಟ್ಟಗುಡ್ಡ ಪ್ರದೇಶ ಅರಣ್ಯದಿಂದ ಕೂಡಿದೆ. ಬಯಲು ಪ್ರದೇಶಗಳಲ್ಲಿ ಕುರುಚಲು ಗಿಡಗಳನ್ನು ಹೆಚ್ಚಾಗಿ ಕಾಣಬಹುದು. ಬಳ್ಳಾರಿ ಜಿಲ್ಲೆಯಲ್ಲಿ ೭೮೨ ಮಿಲಿಯನ್ ಟನ್‌ನಷ್ಟು ಕಬ್ಬಿಣದ ಅದಿರಿನ ನಿಕ್ಷೇಪವಿದೆ ಎಂದು ಅಂದಾಜಿಸಲಾಗಿದೆ. ಮ್ಯಾಂಗನಿಸ್ ಅದಿರು ಬಳ್ಳಾರಿ, ಸಂಡೂರು ಮತ್ತು ಹೊಸಪೇಟೆ ಬೆಟ್ಟಗುಡ್ಡ ಪ್ರದೇಶಗಳಲ್ಲಿ ಅಪಾರ ಪ್ರಮಾಣದಲ್ಲಿ ಲಭ್ಯವಿದೆ. ಚಿನ್ನ ಮತ್ತು ತಾಮ್ರ ಸಂಡೂರು ಮತ್ತು ಹಡಗಲಿ ಪ್ರದೇಶದಲ್ಲಿರುವುದನ್ನು ಪತ್ತೆಹಚ್ಚಲಾಗಿದೆ.

ಬಳ್ಳಾರಿ ಜಿಲ್ಲೆ ಉಷ್ಣ ಹವಾಗುಣ ಹೊಂದಿರುವುದರಿಂದ ಅರಣ್ಯ ಪ್ರದೇಶದ ಪ್ರಮಾಣ ಕಡಿಮೆ. ಹೊಸಪೇಟೆ ಹಾಗೂ ಸಂಡೂರು ಪ್ರದೇಶಗಳಲ್ಲಿ ಅರಣ್ಯವನ್ನು ಕಾಣಬಹುದು. ಬಳ್ಳಾರಿ ಜಿಲ್ಲೆಯ ಅರಣ್ಯ ಪ್ರದೇಶದ ವಿಸ್ತೀರ್ಣ ೯೭,೦೧೭ ಹೆಕ್ಟೇರುಗಳಷ್ಟಿದೆ. ಅರಣ್ಯಗಳಲ್ಲಿ ಬಿದಿರು, ಶ್ರೀಗಂಧ, ತೇಗ, ನಂದಿ, ದೇವದಾರು ಹಾಗೂ ಇತರೆ ವಿವಿಧ ಜಾತಿಯ ಮರಗಿಡಗಳನ್ನು ಕಾಣಬಹುದು. ಸಂಡೂರು ಅರಣ್ಯ ಪ್ರದೇಶದಲ್ಲಿ ಔಷಧಿ ಸಸ್ಯಗಳ ಸಂಪತ್ತು ಹೇರಳವಾಗಿ ಲಭ್ಯವಾಗುತ್ತಿದೆ. ಅರಣ್ಯ ಪ್ರದೇಶಗಳಲ್ಲಿ ಜೇನುತುಪ್ಪ, ಅಂಟು, ರಾಳ, ಎಣ್ಣೆ, ಉರುವಲಿಗೆ ಕಟ್ಟಿಗೆ, ಪೀಠೋಪಕರಣಗಳಿಗೆ ಬೆತ್ತ ಹಾಗೂ ಬಿದಿರು ಮತ್ತು ಮರ ದೊರೆಯುತ್ತವೆ. ಇತ್ತೀಚಿನ ವರ್ಷಗಳಲ್ಲಿ

ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು ತೆಗೆಯುವ ಪ್ರಮಾಣ ಹೆಚ್ಚಾಗಿರುವುದರಿಂದ ಅರಣ್ಯ ನಾಶವಾಗುತ್ತಿದೆ. ಬಳ್ಳಾರಿ ಜಿಲ್ಲಾ ಆಡಳಿತವು ೧೯೮೮ ರಲ್ಲಿ ವಿಶ್ವಬ್ಯಾಂಕಿನ ನೆರವಿನಿಂದ ಅರಣ್ಯ ಬೆಳೆಸುವ ಮತ್ತು ಸಂರಕ್ಷಣೆ ಮಾಡುವ ಯೋಜನೆಯನ್ನು ಜಾರಿಗೆ ತಂದಿದೆ. ಸರಕಾರಿ ಜಾಗಗಳಲ್ಲಿ ಸಸಿಗಳನ್ನು ನೆಡುವ ಹಾಗೂ ಕಾಯ್ದಿಟ್ಟ ಅರಣ್ಯ ಪ್ರದೇಶವನ್ನು ಅಭಿವೃದ್ಧಿಪಡಿಸುವ ಕಾರ್ಯಗಳನ್ನು ಅರಣ್ಯ ಇಲಾಖೆ ಮಾಡುತ್ತಿದೆ. ಗಣಿಕಂಪನಿಗಳು ಅರಣ್ಯ ಬೆಳೆಸುವಲ್ಲಿ ವಿವಿಧ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುತ್ತಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಿರುವ ಭೂಪ್ರದೇಶದಲ್ಲಿ ಹೆಚ್ಚಿನ ಭೂಮಿಯನ್ನು ಕೃಷಿಗೆ ಬಳಸಲಾಗುತ್ತದೆ. ಜಿಲ್ಲೆಯಲ್ಲಿ ನೀರಾವರಿ ಪ್ರದೇಶದಲ್ಲಿ ಹೆಚ್ಚಾಗಿ, ಭತ್ತ, ಕಬ್ಬು, ಬಾಳೆ, ಶೇಂಗಾ, ಹತ್ತಿ ಬೆಳೆಯಲಾಗುತ್ತದೆ. ಮಳೆಯಾಶ್ರಿತ ಪ್ರದೇಶದಲ್ಲಿ ಜೋಳ, ರಾಗಿ, ಸಜ್ಜೆ, ಬೇಳೆಕಾಳುಗಳು, ಸೂರ್ಯಕಾಂತಿ, ಕುಸುಬೆ, ಕಡಲೆ, ಈರುಳ್ಳಿ, ಮೆಣಸಿನಕಾಯಿ ಹಾಗೂ ವಿವಿಧ ತರಕಾರಿ ಬೆಳೆಗಳನ್ನು ಬೆಳೆಯುವುದು ಸಾಮಾನ್ಯ.

ತುಂಗಭದ್ರಾ ನದಿಯು ಜಿಲ್ಲೆಯ ಮೇರೆಯಾಗಿ ಹರಿಯುತ್ತಿರುವುದು ಹಾಗೂ ಮಲ್ಲಾಪುರ ಗ್ರಾಮದಲ್ಲಿ ಅಣೆಕಟ್ಟನ್ನು ನಿರ್ಮಾಣ ಮಾಡಿ ಕಾಲುವೆಗಳ ಮೂಲಕ ಕೃಷಿ ಭೂಮಿಗೆ ನೀರು ಹರಿಸುತ್ತಿರುವುದರಿಂದ ಜಿಲ್ಲೆಯ ಹೊಸಪೇಟೆ, ಸಿರುಗುಪ್ಪ, ಸಂಡೂರು ಹಾಗೂ ಬಳ್ಳಾರಿ ತಾಲೂಕುಗಳ ಹೆಚ್ಚಿನ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯ ಒದಗಿಸಿಕೊಟ್ಟಿದೆ. ತುಂಗಭದ್ರಾ ನದಿಯು ಜಿಲ್ಲೆಯಲ್ಲಿ ಸುಮಾರು ೩೨೦ ಕಿ.ಮೀ. ಉದ್ದವಾಗಿ ಹರಿವು ಇದೆ. ನದಿಗೆ ಹಲವಾರು ಕಡೆ ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ. ಇದರಿಂದ ದಕ್ಷಿಣ ಕರ್ನಾಟಕದ ಜಿಲ್ಲೆಗಳು ಬಳ್ಳಾರಿ ಜಿಲ್ಲೆಯ ಮೂಲಕ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಸಂಪರ್ಕ ಪಡೆಯಲು ನೆರವಾಗಿವೆ. ಜಿಲ್ಲೆಯಲ್ಲಿ ಹಗರಿ ಮತ್ತು ಚಿನ್ನಹಗರಿ ನದಿಗಳು ತುಂಗಭದ್ರ ನದಿಯ ಉಪನದಿಗಳು. ಇಲ್ಲಿ ಕಂಡುಬರುವ ಪ್ರಮುಖ ನದಿಗಳೊಂದಿಗೆ ದೊಡ್ಡ ದೊಡ್ಡ ಹಳ್ಳಗಳಿವೆ. ಇದರಲ್ಲಿ ಸಂಡೂರಿನ ನಾರಿಹಳ್ಳಕ್ಕೆ ಅಣೆಕಟ್ಟು ಕಟ್ಟಲಾಗಿದೆ. ಹಗ್ಗನೂರು ಹಳ್ಳ, ಹಂಪಸಾಗರ ಹಳ್ಳ, ಹಂಪಾಪಟ್ಟಣ, ಬೆಟ್ಟದಹುಣಸಿಹಳ್ಳ, ಗೌರಿಪುರ ಹಳ್ಳಗಳ ಹರಿವಿನಿಂದ ರೈತರ ಕೃಷಿಗೆ ಅನುಕೂಲ ಕಲ್ಪಿಸಿದಂತಾಗಿದೆ. ಜಿಲ್ಲೆಯಲ್ಲಿ ೧೯೫೩ರಲ್ಲಿ ತುಂಗಭದ್ರ ಯೋಜನೆ ಆರಂಭವಾಗಿ ಜಿಲ್ಲೆಯ ಹಸಿರುಕ್ರಾಂತಿಗೆ ನಾಂದಿಯಾಗಿದೆ. ೨೦೦೬-೦೭ರ ವಾರ್ಷಿಕ ವರದಿಯ ಪ್ರಕಾರ ಜಿಲ್ಲೆಯಲ್ಲಿ ನೀರಾವರಿಯಾದ ಒಟ್ಟು ಪ್ರದೇಶ ೨,೪೭,೮೪೯ ಹೆಕ್ಟೇರ್. ನೀರಾವರಿಯಾದ ನಿವ್ವಳ ಪ್ರದೇಶ ೧,೭೩,೭೧೫ ಹೆಕ್ಟೇರ್ ೨೦೦೬-೦೭ರಲ್ಲಿ ಜಿಲ್ಲೆಯಲ್ಲಿ ೫,೯೫,೬೮೭ ಹೆಕ್ಟೇರ್ ಪ್ರದೇಶ ಬಿತ್ತನೆಗೊಳಪಟ್ಟಿದೆ.

ತುಂಗಭದ್ರಾ ಅಣೆಕಟ್ಟಿನ ನಿರ್ಮಾಣದಿಂದಾಗಿ ನೂರಾರು ಹಳ್ಳಿಗಳು ಹಾಗೂ ಫಲವತ್ತಾದ ಭೂಮಿ ಮುಳುಗಡೆಯಾಗಿದೆ. ನದಿ ಕಣಿವೆ ಯೋಜನೆಗಳನ್ನು ಜಾರಿಗೆ ತರುವುದು ಕಷ್ಟಕರ,

ಅದರಲ್ಲೂ ಅಂತರ ರಾಜ್ಯ ನೀರಾವರಿ ಯೋಜನೆಗಳನ್ನು ಜಾರಿಗೆ ತರುವುದು ಇನ್ನೂ ಕಷ್ಟದ ಕೆಲಸ ತುಂಗಭದ್ರಾ ನದಿ ಕಣಿವೆಯೋಜನೆ ವಿವಿಧೋದ್ದೇಶ ಯೋಜನೆ. ಈ ಯೋಜನೆಯನ್ನು ಮೈಸೂರು ಮತ್ತು ಆಂಧ್ರ ಸರಕಾರಗಳ ಸಹಯೋಗದಿಂದ ನಿರ್ಮಿಸಲಾಗಿದೆ. ತುಂಗಭದ್ರ ಅಣಿಕಟ್ಟು ಪ್ರದೇಶದಲ್ಲಿ ೧೩೩ ಟಿ.ಎಂ.ಸಿ ಅಡಿ ನೀರು ಸಂಗ್ರಹಿಸಲಾಗುತ್ತದೆ. ತುಂಗಭದ್ರ ಅಣಿಕಟ್ಟು ಪ್ರದೇಶದಲ್ಲಿ ಮುಳುಗಡೆಯಾದ ಹಳ್ಳಿಗಳು ೧೦೭. ಭೂ ಸ್ವಾಧೀನಕ್ಕಾಗಿ ಸರಕಾರ ಮಾರ್ಚ್ ೩೧ ರವರೆಗೆ ಸುಮಾರು ३,೭೫,೬೦,೩೬೫ ರೂಪಾಯಿಗಳನ್ನು ಖರ್ಚು ಮಾಡಿದೆ. ೧೦೭ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ೧೫,೦೦೦ ಕುಟುಂಬಗಳ ೮೦,೦೦೦ ಜನರನ್ನು ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಿ ಸ್ಥಳಾಂತರಿಸಲಾಗಿದೆ. ನಿಯಮಾವಳಿಯ ಪ್ರಕಾರ ಪುನರ್ವಸತಿ ಹಳ್ಳಿಗಳಲ್ಲಿ ಮೂಲಭೂತ ಸೌಲಭ್ಯಗಳೆಲ್ಲವನ್ನು ಒದಗಿಸಿ ಕೊಡಬೇಕೆಂಬ ನಿಯಮವಿದೆ. ಪುನರ್ವಸತಿ ಹಳ್ಳಿಗಳ ಜನರ ಜೀವನ, ಉದ್ಯೋಗ, ಸ್ಥಿತಿಗತಿಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಅವಶ್ಯಕತೆ ಇದೆ. ೧೦೭ ಹಳ್ಳಿಗಳಲ್ಲಿದ್ದ ವಿವಿಧ ಕುಲಕಸುಬುದಾರರು ಇಂದು ಹೇಗೆ ತಮ್ಮ ಜೀವನ ರೂಪಿಸಿಕೊಂಡಿದ್ದಾರೆ ಎಂಬುದನ್ನು ಅಧ್ಯಯನ ಮಾಡುವುದು ಅಗತ್ಯವೆನಿಸಿದೆ.

ಬಳ್ಳಾರಿ ಜಿಲ್ಲೆಯ ವಿವಿಧ ಸಂಪನ್ಮೂಲಗಳ ಆಗರ. ಈ ಭಾಗದಲ್ಲಿ ವೈವಿಧ್ಯಮಯವಾದ ಖನಿಜ ಸಂಪನ್ಮೂಲಗಳು ಲಭ್ಯವಿದೆ. ಜಿಲ್ಲೆಯ ಭೂಪ್ರದೇಶದಲ್ಲಿ ಸುಮಾರು ೧೮ನೇ ಶತಮಾನದ ಕೊನೆಯ ಭಾಗದಿಂದಲೇ ಗಣಿಗಾರಿಕೆಯ ಪ್ರಕ್ರಿಯೆಗಳು ಆರಂಭವಾದ ಬಗ್ಗೆ ಇತಿಹಾಸದುದ್ದಕ್ಕೂ ಅನೇಕ ದಾಖಲೆಗಳು ಕಂಡು ಬರುತ್ತವೆ. ಪ್ರಾರಂಭದಲ್ಲಿ ಗಣಿಗಾರಿಕೆ ಚಟುವಟಿಕೆಗಳು, ಸಂಶೋಧನೆ ಅಥವಾ ಆವಿಷ್ಕಾರಗಳ ರೂಪದಲ್ಲಿ ಕಂಡುಬಂದರೂ ಒಂದು ವ್ಯವಸ್ಥಿತ ರೀತಿಯಲ್ಲಿ ಗಣಿ ಉತ್ಪಾದನಾ ಚಟುವಟಿಕೆಗಳು ಅರಂಭಗೊಂಡಿದ್ದು ಬ್ರಿಟಿಷರ ಆಳ್ವಿಕೆಯಲ್ಲಿ ಎಂಬುದಾಗಿ ತಿಳಿದುಬರುತ್ತದೆ. ೧೯೦೪-೦೫ರಲ್ಲಿ General Sandur mining company ಗಣಿಗಾರಿಕೆ ಕೈಗೊಂಡಿದೆ. ದೇವಗಿರಿ, ಕಮತ್ತೂರು, ಸುಬ್ರಾಯನಹಳ್ಳಿ, ತುಮಟಿ ತಾಂಡಾ, ಗುಂಡಾ ತಾಂಡಾ ಇತ್ಯಾದಿ ಗ್ರಾಮಗಳಲ್ಲಿ ಮಾಹಿತಿ ದೊರೆಯುತ್ತದೆ.

ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ದೊರೆಯುತ್ತಿರುವ ಕಬ್ಬಿಣ ಮತ್ತು ಮ್ಯಾಂಗನಿಸ್ ಖನಿಜಗಳು ಗುಣಮಟ್ಟದಲ್ಲಿ ವಿಶ್ವಖ್ಯಾತಿ ಪಡೆದುಕೊಂಡಿದೆ. ಜಿಲ್ಲೆಯ ಪೂರ್ವಭಾಗದ ತಾಲೂಕುಗಳಾದ ಸಂಡೂರು, ಹೊಸಪೇಟೆ, ಬಳ್ಳಾರಿ, ಅತಿ ಹೆಚ್ಚು ಕಬ್ಬಿಣ ಮತ್ತು ಮ್ಯಾಂಗನಿಸ್ ಅದಿರಿನ ನಿಕ್ಷೇಪಗಳಿರುವುದು ಪತ್ತೆಯಾಗಿದೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಈ ಪ್ರದೇಶಗಳ ಭೂಗರ್ಭದಲ್ಲಿ ಅಡಗಿರುವ ಖನಿಜ ಸಂಪನ್ಮೂಲಗಳ ಆಧಾರದ ಮೇಲೆ ಜಿಲ್ಲೆಯ ಭೌಗೋಳಿಕ ಪ್ರದೇಶವನ್ನು ಮೂರು

ವಲಯಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳಲ್ಲಿ ಜಿಲ್ಲೆಯ ಶೇ. ೬೦ಕ್ಕಿಂತಲೂ ಹೆಚ್ಚು ಕಬ್ಬಿಣದ ಅದಿರು, ಸಂಡೂರು ತಾಲೂಕು ವ್ಯಾಪ್ತಿಯಲ್ಲಿ ಕೇಂದ್ರೀಕರಣಗೊಂಡಿದ್ದರೆ, ಹೊಸಪೇಟೆ ವ್ಯಾಪ್ತಿಯಲ್ಲಿ ಶೇ.೩೫ರಷ್ಟು, ಬಳ್ಳಾರಿ ವ್ಯಾಪ್ತಿಯಲ್ಲಿ ಶೇ.೧೫ರಷ್ಟು ಹಂಚಿಕೆಯಾಗಿದೆ. ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಸರಾಸರಿ ವಿಸ್ತೀರ್ಣ ೧೦,೨೬೩ ಕಿ.ಮೀ.ಗಳಷ್ಟಿದೆ.

ಬಳ್ಳಾರಿ ಜಿಲ್ಲೆಯಾದ್ಯಾಂತ ಕಬ್ಬಿಣ ಮತ್ತು ಮ್ಯಾಂಗನಿಸ್ ಅದರಿನ ಜೊತೆಗೆ ಬೇರೆ ಬೇರೆ ಖನಿಜ ಸಂಪನ್ಮೂಲಗಳು ಅಭ್ಯವಿದ್ದು ಅವುಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡರೆ, ಜಿಲ್ಲೆಯ ಅಭಿವೃದ್ಧಿ ಸಾಧಿಸುವುದು ಸುಲಭವೆಂಬುದರಲ್ಲಿ ಸಂದೇಹವಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ ಕಬ್ಬಿಣದ ಅದಿರು ಸಂಡೂರು, ಹೊಸಪೇಟೆ ಹಾಗೂ ಬಳ್ಳಾರಿ ತಾಲೂಕಿನ ದೋಣಿಮಲ್ಯೆ ಶ್ರೇಣಿ, ಕುಮಾರಸ್ವಾಮಿ ಬೆಟ್ಟದ ಶ್ರೇಣಿ, ರಾಮನದುರ್ಗ ಶ್ರೇಣಿ, ತಿಮ್ಮಪ್ಪನ ಗುಡ್ಡದ ಶ್ರೇಣಿ, ಎತ್ತಿನ ಹಳ್ಳಶ್ರೇಣಿ ರಾಮಗಡ ಹಾಗೂ ಬೆಳಗಲ್ಲು ಶ್ರೇಣಿಗಳಲ್ಲಿ ಕಂಡುಬರುತ್ತದೆ.

ಮ್ಯಾಂಗನಿಸ್ ಅದಿರು ಸಂಡೂರು ತಾಲೂಕಿನ ದೇವಗಿರಿ, ರಾಮನಗಿರಿ, ಸುಬ್ರಾಯನಹಳ್ಳಿ ಮತ್ತು ಕಂಡಿಕೇರಿ ಪ್ರದೇಶಗಳಲ್ಲಿ ಲಭ್ಯವಿದೆ. ಸೀಸದ ಅದಿರು ಸಂಡೂರು ಮತ್ತು ಹೊಸಪೇಟೆ ತಾಲೂಕಿನ ತೋರಣಗಲ್ಲು ಮತ್ತು ಮೆಟ್ರಿ ಪ್ರದೇಶಗಳಲ್ಲಿ ದೊರೆಯುತ್ತದೆ. ತಾಮ್ರದ ಅದಿರು ಮತ್ತು ಚಿನ್ನದ ಅದಿರು ಸಂಡೂರಿನ ದರೋಜಿ ತಾರಾನಗರ ಮತ್ತು ಎತ್ತಿನಹಟ್ಟಿ ಪ್ರದೇಶಗಳಲ್ಲಿ ಲಭ್ಯವಿದೆ. ಜೇಡಿಮಣ್ಣು ಮತ್ತು ಸುಣ್ಣದ ಕಲ್ಲು ಸಂಡೂರು, ಬಳ್ಳಾರಿ ಮತ್ತು ಹಡಗಲಿ ತಾಲೂಕಿನ, ಕುಮಾರಸ್ವಾಮಿ ಗುಡಿ, ತಿಮ್ಮಪ್ಪಗುಡಿ, ಬೆಳಗಲ್ ಮತ್ತು ಬಿರಬ್ಬಿ ಪ್ರದೇಶಗಳಲ್ಲಿ ದೊರೆಯುತ್ತದೆ. ರೆಡ್‌ಆಕ್ಸೈಡ್ ಸಂಡೂರು, ಬಳ್ಳಾರಿ ಮತ್ತು ಹೊಸಪೇಟೆ ತಾಲೂಕಿನ ರಾಮಗಡ, ಜಾನಿಕುಂಟೆ, ಬೆಳಗಲ್, ಜಂಬನಾಥನಗುಡ್ಡ ವ್ಯಾಸನಕೆರೆ, ಕರಡಿಹಳ್ಳಿ ಮತ್ತು ವಿಠಲಾಪುರಗಳಲ್ಲಿ ಅಪಾರವಾದ ನಿಕ್ಷೇಪವಿದೆ. ವಜ್ರ ಮತ್ತು ಸೂಜಿಗಲ್ಲು ಹಡಗಲಿ ಮತ್ತು ಸಂಡೂರು ತಾಲೂಕಿನ ದೇವಗೊಂಡನಹಳ್ಳಿ ಮತ್ತು ತೋರಣಗಲ್ಲು ಪ್ರದೇಶಗಳಲ್ಲಿ ಲಭ್ಯವಾಗುತ್ತದೆ. ಶಿಲಾಸ್ಪಟಿಕದ ಹರಳು ಸಂಡೂರು ತಾಲೂಕಿನ ತಿಮ್ಮಪ್ಪನ ಗುಡಿ, ಭೈರವತೀರ್ಥ ಮತ್ತು ಲಿಂಗದಳ್ಳಿಯಲ್ಲಿ ದೊರೆಯುತ್ತದೆ. ಕಟ್ಟಡಗಳ ಸಲಕರಣಿ ಹಾಗೂ ಆಭರಣಗಳಿಗೆ ಬಳಸುವ ಕಲ್ಲುಗಳು ಸಂಡೂರು, ಬಳ್ಳಾರಿ ಹಾಗೂ ಹೊಸಪೇಟೆ ತಾಲೂಕಿನ ಬಂಡ್ರಿ, ತೋರಣಗಲ್ಲು, ದರೋಜಿ, ಹೊಸಪೇಟೆ, ಹಂಪಿ, ಕಮಲಾಪುರ ಪ್ರದೇಶಗಳಲ್ಲಿ ದೊರೆಯುತ್ತದೆ.

ಖನಿಜ ಸಂಪನ್ಮೂಲಗಳು ಆಯಾ ರಾಷ್ಟ್ರಗಳ ಸಂಪತ್ತಿನ ಖಜಾನೆಗಳಿದ್ದಂತೆ ಎಂದು ಕ್ರಿ.ಪೂ.೪ನೇ ಶತಮಾನದಲ್ಲಿ ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ವಿಶ್ಲೇಷಿಸಿದ್ದಾನೆ.

ವಿಶ್ವದ ಇತಿಹಾಸದಲ್ಲಿ ಮ್ಯಾಂಗನಿಸ್‌ನ್ನು ಪ್ರಪ್ರಥಮವಾಗಿ ಕ್ರಿ.ಶ.೧೭೭೪ರಲ್ಲಿ ಪತ್ತೆಹಚ್ಚಲಾಯಿತು. ಬಳ್ಳಾರಿ ಜಿಲ್ಲೆಯಲ್ಲಿರುವ ಮ್ಯಾಂಗನಿಸ್ ಅದಿರು ೧೯೯೮ ರಲ್ಲಿ ೧೭೪೯.೪೯ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದು ೨೦೦೩ ರಲ್ಲಿ ಅವರ ಪ್ರಮಾಣವು ೧೯೪೩.೧೪ ಹೆಕ್ಟೇರ್ ಪ್ರದೇಶದಲ್ಲಿ ವ್ಯಾಪಿಸಿದೆ. ಮ್ಯಾಂಗನಿಸ್ ಅದಿರಿನ ಒಟ್ಟು ಉತ್ಪಾದನೆಯ ಪ್ರಮಾಣವನ್ನು ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು.

ವರ್ಷ	ಬಳ್ಳಾರಿ
೧೯೯೬-೯೭	೨೭೩೭೮೩
೧೯೯೯-೦೦	೨೭,೨೮,೫೫
೨೦೦೩-೦೪	೩,೨೬,೪೯೨

೧೯೯೯ರ mineral commodity Summaries ಮೂಲದ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ೭೮೨ ದಶಲಕ್ಷ ಟನ್ ಕಬ್ಬಿಣದ ಅದಿರಿನ ನಿಕ್ಷೇಪವಿದೆ ಎಂದು ಅಂದಾಜಿಸಲಾಗಿದೆ. ಬಳ್ಳಾರಿ ಜಿಲ್ಲೆಯಿಂದ ಮಾರಾಟವಾದ ಕಬ್ಬಿಣದ ಅದಿರಿನ ಪ್ರಮಾಣವು ಸಂಡೂರು ಪ್ರದೇಶದಿಂದ ೧೯೯೮ರಲ್ಲಿ ೮೧,೯೩,೦೩೩ ಲಕ್ಷ ಟನ್ ಮತ್ತು ೨೦೦೩ರಲ್ಲಿ ೧,೩೪,೬೫,೪೨೬ ಲಕ್ಷ ಟನ್‌ಗಳಷ್ಟು ಮಾರಾಟ ಮಾಡಲಾಗಿದೆ.

ಹೊಸಪೇಟೆ ಭಾಗದಲ್ಲಿ ೧೯೯೮ರಲ್ಲಿ ೨೯,೮೪,೯೯೯ ಲಕ್ಷ ಟನ್, ೨೦೦೩ರಲ್ಲಿ ೭೪,೩೬,೨೫೪ ಲಕ್ಷ ಟನ್ ಮತ್ತು ಬಳ್ಳಾರಿ ಪ್ರದೇಶದಿಂದ ೧೯೯೮ರಲ್ಲಿ ೧,೨೬,೬೦೬ ಲಕ್ಷ ಟನ್ ಮತ್ತು ೨೦೦೩ರಲ್ಲಿ ೧,೨೮,೭೬೪ ಲಕ್ಷ ಟನ್‌ಗಳಷ್ಟು ಕಬ್ಬಿಣದ ಅದಿರನ್ನು ಮಾರಾಟವಾಗಿದೆ.

೨. ಕೃಷಿ

ಭಾರತ ಕೃಷಿ ಪ್ರಧಾನ ದೇಶ. ಇಲ್ಲಿನ ಶೇ. ೬೦ಕ್ಕಿಂತ ಹೆಚ್ಚಿನ ಜನಸಂಖ್ಯೆ ತಮ್ಮ ಜೀವನದ ಕಸಬನ್ನಾಗಿ ಕೃಷಿಯನ್ನು ಅಳವಡಿಸಿಕೊಂಡಿದ್ದಾರೆ. ಅಂತೆಯೇ ಬಳ್ಳಾರಿ ಜಿಲ್ಲೆಯು ಇದಕ್ಕೆ ಹೊರತಾಗಿಲ್ಲ. ಜಿಲ್ಲೆಯ ಜನರ ಮೂಲ ಕಸುಬು ಒಕ್ಕಲುತನ ಆಗಿದೆ. ಬಳ್ಳಾರಿ ಜಿಲ್ಲೆ ಏಳು ತಾಲೂಕುಗಳನ್ನು ಹೊಂದಿದ್ದು ೮೧೩೧೯೬ ಹೆಕ್ಟೆರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಈ ಭೂ ವಿಸ್ತೀರ್ಣದಲ್ಲಿ ೯೭,೧೯೬ ಹೆಕ್ಟೇರ್ ಪ್ರದೇಶ ಅರಣ್ಯವನ್ನು ಹೊಂದಿದೆ. ಜಿಲ್ಲೆಯಲ್ಲಿ ವ್ಯವಸಾಯೇತರ ಅಂದರೆ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ ೧,೨೨,೦೮೦ ಹೆಕ್ಟೇರ್, ಸಾಗುವಳಿಗೆ ಯೋಗ್ಯವಾದ ಬಂಜರುಭೂಮಿ ೨೪,೮೩೯ ಹೆಕ್ಟೇರ್, ಖಾಯಂ ಗೋಮಾಳ ೫೪೭೨ ಹೆಕ್ಟೇರ್ ಹಾಗೂ ವೃಕ್ಷ ಮತ್ತು ತೋಪುಗಳಿರುವ ಪ್ರದೇಶ ೩,೫೬೪ ಹೆಕ್ಟೇರ್ ಅಂದರೆ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ ೩೩,೮೭೫ ಹೆಕ್ಟೇರ್. ಜಿಲ್ಲೆಯಲ್ಲಿ ೧,೦೦,೯೭೪ ಹೆಕ್ಟೇರ್ ಬೀಳು ಭೂಮಿ ಇದೆ. ಒಂದು ಮತ್ತು ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗುವ ಪ್ರದೇಶ ಸುಮಾರು ೫,೯೫,೦೮೭ ಹೆಕ್ಟೇರ್.

ಜಿಲ್ಲೆಯಲ್ಲಿ ೨೦೦೫-೦೬ರ ಅಂಕಿ-ಅಂಶಗಳ ಪ್ರಕಾರ ಜಿಲ್ಲೆಯ ಏಳು ತಾಲೂಕುಗಳಲ್ಲಿ ನೀರಾವರಿಗೊಳಗಾದ ಒಟ್ಟು ಭೂಪ್ರದೇಶ ಸುಮಾರು ೧೭೩೭೧೫ ಹೆಕ್ಟೇರ್. ಇದರಲ್ಲಿ ಕಾಲುವೆ ನೀರಾವರಿಗೆ ಒಳಪಟ್ಟ ಪ್ರದೇಶ ೮೦,೯೯೧ ಹೆಕ್ಟೇರ್. ಕೆರೆ ನೀರಾವರಿಗೆ ಒಳಪಟ್ಟ ಪ್ರದೇಶ ೨೩೫೮ ಹೆಕ್ಟೇರ್. ತೆರೆದ ಬಾವಿಗಳಿಂದ ಸುಮಾರು ೧೦,೭೧೨ ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಕೊಳವೆ ಬಾವಿಗಳ ನೀರಾವರಿಗೆ ಒಳಪಟ್ಟ ಪ್ರದೇಶ ೫೬೨೬೮ ಹೆಕ್ಟೇರ್. ಏತ ನೀರಾವರಿ ಯೋಜನೆಗೆ ಒಳಪಟ್ಟ ಭೂಪ್ರದೇಶ ೧೬,೦೦೧ ಹೆಕ್ಟೇರ್ ಹಾಗೂ ಇತರೆ ಮೂಲಗಳಿಂದ ಸುಮಾರು ೭೯೮೫ ಹೆಕ್ಟೇರ್ ಪ್ರದೇಶ ಜಿಲ್ಲೆಯಲ್ಲಿ ನೀರಾವರಿಗೆ ಒಳಪಟ್ಟಿದೆ. ಜಿಲ್ಲೆಯಲ್ಲಿ ೨೦೦೦-೦೧ರ ಅಂಕಿ ಅಂಶಗಳ ಪ್ರಕಾರ ೨,೩೬,೭೪೦ ಹಿಡುವಳಿದಾರರು ಸುಮಾರು ೫,೪೩,೪೮೮ ಹಕ್ಟೇರ್ ಪ್ರದೇಶದ ಒಡೆತನಕ್ಕೆ ಒಳಪಟ್ಟಿದ್ದಾರೆ. ಇದರಲ್ಲಿ ಜಿಲ್ಲೆಯ ಅತಿ ಸಣ್ಣ ಹಿಡುವಳಿದಾರರು ೮೦,೫೦೬. ಇವರ ಒಡೆತನಕ್ಕೆ ಒಳಪಟ್ಟಿರುವ ಭೂಪ್ರದೇಶ ೪೨,೨೧೩ ಹೆಕ್ಟೆರ್. ೬೬,೬೯ ಸಣ್ಣ ಹಿಡುವಳಿದಾರರು ೧೪೮,೯೯ ಹೆಕ್ಟೇರ್ ಭೂಮಿ ಹೊಂದಿರುವ ಅರೆ ಮಧ್ಯಮ ಹಿಡುವಳಿದಾರರಿದ್ದಾರೆ. ೪ ರಿಂದ ೧೦ ಹೆಕ್ಟೇರ್ ಭೂಪ್ರದೇಶ ಹೊಂದಿರುವ ಮಧ್ಯಮ ಹಿಡುವಳಿದಾರರು ೩೧೦೭೬ ಇವರು ಹೊಂದಿರುವ ಭೂಹಿಡುವಳಿ ಪ್ರದೇಶ ೧,೮೨,೮೪೫ ಹೆಕ್ಟೇರ್ ಆಗಿದೆ. ಜಿಲ್ಲೆಯಲ್ಲಿ ೧೦ಹೆಕ್ಟೆರ್‌ಗಿಂತಲೂ ಹೆಚ್ಚು ಹಿಡುವಳಿ ಪ್ರದೇಶ ಹೊಂದಿರುವ ದೊಡ್ಡ ರೈತರ ಸಂಖ್ಯೆ ೫೦೪೪. ಅವರ ಒಡೆತನಕ್ಕೆ ಒಳಪಟ್ಟಿರುವ ಉಳುಮೆ ಭೂಮಿ ಸುಮಾರು ೭೨,೩೨೭ ಹೆಕ್ಟೆರ್.

ಈ ಮೇಲಿನ ಅಂಕಿ ಅಂಶಗಳನ್ನು ವಿಶ್ಲೇಷಿಸಿದಾಗ ಅತಿ ಹೆಚ್ಚು ಸಂಖ್ಯೆಯಲ್ಲಿರುವ ಅತಿ ಸಣ್ಣ ಹಿಡುವಳಿದಾರರು ಅಂದರೆ ೮೦,೫೦೬ ಹಿಡುವಳಿದಾರರು ಕೇವಲ ೪೨,೨೧೩ ಹೆಕ್ಟೇರ್ ಭೂ ಹಿಡುವಳಿ ಹೊಂದಿದ್ದರೆ, ಕೇವಲ ೫೦೪೪ ದೊಡ್ಡ ಹಿಡುವಳಿದಾರರು ೭೨,೩೨೭ ಹೆಕ್ಟೇರ್ ಭೂ ಪ್ರದೇಶದ ಒಡೆತನ ಹೊಂದಿದ್ದಾರೆ. ಜಿಲ್ಲೆಯಲ್ಲಿ ಮಧ್ಯಮ ಪ್ರಮಾಣದ ಭೂಪ್ರದೇಶ ಹೊಂದಿದ್ದಾರೆ. ಜಿಲ್ಲೆಯಲ್ಲಿ ಮಧ್ಯಮ ಪ್ರಮಾಣದ ಭೂ ಹಿಡುವಳಿ ಹೊಂದಿರುವವರು ಸುಮಾರು ೧,೮೨,೮೪೫ ಹೆಕ್ಟೆರ್ ಭೂಪ್ರದೇಶದ ಒಡೆತನ ಹೊಂದಿರುವರು.

ಜಿಲ್ಲೆಯಲ್ಲಿ ಕೆಂಪು ಹಾಗೂ ಕಪ್ಪು ಭೂಮಿ ಲಭ್ಯವಿರುವುದರಿಂದ ವೈವಿದ್ಯಮಯವಾದ ಬೆಳೆಗಳನ್ನು ರೈತರು ಬೆಳೆಯುತ್ತಿದ್ದಾರೆ. ಜಿಲ್ಲೆಯಲ್ಲಿ ಕಾಲುವೆ, ಕೆರೆ ಹಾಗೂ ಬಾವಿ ನೀರಾವರಿ ವ್ಯವಸ್ಥೆ ಹೊಂದಿರುವುದು ವಿವಿಧ ಬೆಳೆಗಳನ್ನು ಬೆಳೆಯಲು ರೈತರಿಗೆ ಅನುಕೂಲವಾಗಿದೆ. ಜಿಲ್ಲೆಯ ಹೊಸಪೇಟೆ, ಸಿರುಗುಪ್ಪ, ಕುರುಗೋಡು ಹಾಗೂ ಬಳ್ಳಾರಿ ತಾಲ್ಲೂಕಿನ ಹೆಚ್ಚು ಪ್ರದೇಶಗಳು ತುಂಗಭದ್ರಾ ಅಣೆಕಟ್ಟೆಯಿಂದ ಕಾಲುವೆಗಳ ಮೂಲಕ ನೀರು ಪಡೆಯುತ್ತಿರುವುದರಿಂದ ಈ ಪ್ರದೇಶಗಳಲ್ಲಿ ಹೆಚ್ಚಾಗಿ ಭತ್ತ, ಕಬ್ಬು, ಬಾಳೆ, ಎಣ್ಣೆ ಬೀಜದ ಬೆಳೆಗಳನ್ನು ಬೆಳೆಯಲಾಗುತ್ತದೆ.

ಜಿಲ್ಲೆಯ ಉಳಿದ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಜೋಳ, ರಾಗಿ, ಸಜ್ಜೆ, ನವಣೆ, ಮುಸುಕಿನ ಜೋಳ, ಗೋಧಿ, ತೊಗರಿ, ಕಡಲೆ, ಶೇಂಗಾ, ಸೂರ್ಯಕಾಂತಿ, ಹತ್ತಿ, ತಂಬಾಕು, ಕುಸುಬೆ ಹಾಗೂ ವಿವಿಧ ರೀತಿಯ ದ್ವಿದಳ ಹಾಗೂ ಏಕದಳ ದಾನ್ಯಗಳನ್ನು ಬೆಳೆಯುತ್ತಾರೆ. ಅರೆ ನೀರಾವರಿ ಪ್ರದೇಶಗಳಲ್ಲಿ ತರಕಾರಿ, ಹಣ್ಣು ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತದೆ. ಜಿಲ್ಲೆಯ ಪೂರ್ವ ಮತ್ತು ಪಶ್ಚಿಮ ಭಾಗದ ತಾಲೂಕುಗಳ ಕಪ್ಪು ಮಣ್ಣು ಪ್ರದೇಶವನ್ನು ಹೊಂದಿದ್ದು ಹತ್ತಿ ಗೋಧಿ ಬೆಳೆಗಳನ್ನು ಬೆಳೆಯಲು ಹೆಚ್ಚು ಸೂಕ್ತವಾಗಿದೆ.

ಜಿಲ್ಲೆಯಲ್ಲಿ ಸುಮಾರು ೧೦೪೧ ಹೆಕ್ಟೇರ್ ಭೂಪ್ರದೇಶದಲ್ಲಿ ಹಿಪ್ಪು ನೇರಳೆ ಬೆಳೆಯನ್ನು ಬೆಳೆಯಲಾಗುತ್ತಿದ್ದು, ಸುಮಾರು ೧೯೨೭ ರೈತರು ರೇಷ್ಮೆಗೂಡು ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ೨೦೦೭ರಲ್ಲಿ ಜಿಲ್ಲೆಯಲ್ಲಿ ಸುಮಾರು ೯೦೬.೭೦ ಲಕ್ಷ ಮೌಲ್ಯದ ರೇಷ್ಮೆ ಗೂಡನ್ನು ಉತ್ಪಾದಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ವಿಶಾಲವಾದ ಬಯಲು ಪ್ರದೇಶ ಹಾಗೂ ಬೆಟ್ಟಗುಡ್ಡ ಪ್ರದೇಶಗಳಿಂದ ಕೂಡಿರುವುದರಿಂದ ಪಶುಪಾಲನೆಗೆ ಯೋಗ್ಯವಾಗಿದೆ. ಇದರಿಂದ ಜಿಲ್ಲೆ ಪಶುಪಾಲನೆಗೆ ಹೆಸರುವಾಸಿ. ೨೦೦೩-೦೪ರ ಜಾನುವಾರು ಗಣತಿಯ ಪ್ರಕಾರ ಜಿಲ್ಲೆಯಲ್ಲಿ ದನಕರು, ಕುರಿ, ಮೇಕೆ ಹಾಗೂ ಎಮ್ಮೆಗಳ ಸಂಖ್ಯೆ ಒಟ್ಟು ೯,೫೩,೪೯೨. ಸರಕಾರವು ಹೈನುಗಾರಿಕೆಗೆ ಹೆಚ್ಚು ಪ್ರೋತ್ಸಾಹಿಸುತ್ತಿರುವುದು ಪಶುಪಾಲನೆ ಪ್ರಮಾಣ ಹೆಚ್ಚಲು ಕಾರಣ. ಜಿಲ್ಲೆಯಲ್ಲಿ ಹೈನುಗಾರಿಕೆ ಹೆಚ್ಚು ಪ್ರಾಶಸ್ತ್ಯವನ್ನು ಪಡೆದುಕೊಳ್ಳುತ್ತಿದೆ. ಬಳ್ಳಾರಿ ಹಾಲು ಉತ್ಪಾದಕರ ಸಂಘದ ಮೂಲಕ ಹೈನುಗಾರಿಕೆ ಅಭಿವೃದ್ಧಿಗೆ ನೆರವು ನೀಡಲಾಗುತ್ತದೆ. ಬಳ್ಳಾರಿ ಕ್ಷೇತ್ರದ ಶಾಸಕರಾದ ಶ್ರೀ. ಸೋಮಶೇಖರ ರೆಡ್ಡಿಯವರು, Karnataka Milk Federation ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಹಂದಿ, ಮೊಲ, ನಾಯಿ, ಮತ್ತು ಕೋಳಿ ಸಾಕಾಣಿಗೆ ಸರಕಾರ ದನಸಹಾಯ ನೀಡಿ ಪ್ರೋತ್ಸಾಹಿಸುತ್ತಿದೆ.

ಜಿಲ್ಲೆಯ ನದಿ, ಕೆರೆ, ಕಾಲುವೆ, ಅಣೆಕಟ್ಟು, ಹಳ್ಳ ಕೊಳ್ಳ, ಕಟ್ಟೆಗಳಲ್ಲಿ ಮೀನು ಸಾಕಾಣಿಕೆ ನಡೆಯುತ್ತಿದೆ. ಇದಕ್ಕೆ ಸರಕಾರವು ವಿವಿಧ ರೀತಿಯ ಸಹಾಯ ಹಾಗೂ ಸಹಕಾರಗಳನ್ನು ನೀಡುತ್ತಿರುವುದು ಗಮನಾರ್ಹ.

೩. ಕೈಗಾರಿಕೆಗಳು

ಬಳ್ಳಾರಿ ಜಿಲ್ಲೆಯಲ್ಲಿ ಕೃಷಿ ಆಧಾರಿತ ಹಾಗೂ ಖನಿಜಾಧಾರಿತ ಕಚ್ಚಾವಸ್ತುಗಳನ್ನು ಬಳಸಿಕೊಳ್ಳುವ ಸಕ್ಕರೆ, ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಗಳು ಹೆಚ್ಚು ಪ್ರಮುಖವಾಗಿವೆ. ಜಿಲ್ಲೆಯಲ್ಲಿ ಬಟ್ಟೆ, ರಸಾಯನಿಕ, ಇಂಜಿನಿಯರಿಂಗ್, ಆಟೋಮೊಬೈಲ್ಸ್ ಪೆರೆಸ್ ಮತ್ತು ನಾನ್‌ಪೆರೆಸ್ ಆಹಾರ ಮತ್ತು ಮಾದಕ ವಸ್ತುಗಳನ್ನು ತಯಾರಿಸುವ ಉದ್ದಿಮೆಗಳನ್ನು ಕಾಣಬಹುದು.

ಜಿಲ್ಲೆಯಲ್ಲಿ ಕೈಗಾರಿಕೆಗಳು ಹೆಚ್ಚಾಗಿ ಬಳ್ಳಾರಿ ಮತ್ತು ಹೊಸಪೇಟೆ ನಗರಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಜಿಲ್ಲೆಯ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ಕಣಜವಾಗಿರುವುದರಿಂದ ಜಿಂದಾಲ್ (JSW), ಬಳ್ಳಾರಿ ಸ್ಟೀಲ್ಸ್, ಎಂ.ಬಿಟಿ.ಯಂತಹ ಬೃಹತ್ ಕಬ್ಬಿಣ-ಉಕ್ಕಿನ ಉದ್ದಿಮೆಗಳು ಇನ್ನೂ ಮುಂತಾದವುಗಳು ಕಾರ್ಯನಿರ್ವಹಿಸುತ್ತವೆ.

ಹೊಸಪೇಟೆ ಮತ್ತು ಕಂಪ್ಲಿಯಲ್ಲಿ ಸಕ್ಕರೆ ಉದ್ದಿಮೆಗಳು ಹಾಗೂ ಬಳ್ಳಾರಿ, ಹೊಸಪೇಟೆ, ಕಂಪ್ಲಿ ಸಿರುಗುಪ್ಪ ನಗರಗಳಲ್ಲಿ ರೈಸ್ ಮಿಲ್‌ಗಳು ಕಾರ್ಯನಿರ್ವಹಿಸುತ್ತವೆ. ಇತ್ತೀಚಿಗೆ ಹತ್ತಿ ಬೆಳೆಯುವ ಪ್ರದೇಶ ಕಡಿಮೆಯಾಗಿರುವುದರಿಂದ ಹತ್ತಿ ಬಟ್ಟೆ ಉದ್ದಿಮೆಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಜಿಲ್ಲೆಯ ವಿವಿಧ ನಗರ ಪ್ರದೇಶಗಳಲ್ಲಿ ಏಳು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಉದ್ದಿಮೆಗಳು, ಆರು ರಾಸಾಯನಿಕ ಉದ್ದಿಮೆಗಳು, ೮೩ ಆಹಾರ ಮತ್ತು ಮಾದಕ ವಸ್ತುಗಳನ್ನು ತಯಾರಿಸುತ್ತಿರುವ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಬಳ್ಳಾರಿ ಜಿಲ್ಲೆಯಲ್ಲಿ ೭೫ ಬಟ್ಟೆ ಉದ್ದಿಮೆಗಳು, ೧೫ ರಸಾಯನಿಕ ಉದ್ದಿಮೆಗಳು, ೬ ಇಂಜನಿಯರಿಂಗ್ ಉದ್ದಿಮೆಗಳು ೩೧೨ ಇತರೆ ಸಣ್ಣ ಪುಟ್ಟ ಉದ್ದಿಮೆಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ೧೯೭೫ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ, ಉದ್ಯಮಶೀಲರಿಗೆ ತರಬೇತಿ ಹಾಗೂ ಮಾಹಿತಿಯನ್ನು ಒದಗಿಸಲು, ಹಣಕಾಸು, ಕಚ್ಚಾವಸ್ತು ಹಾಗೂ ಇತರೆ ಸಹಾಯ ಸಹಕಾರಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ ಪೂರೈಸುತ್ತಿದೆ. ೨೦೦೭ರ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯ ಕೈಗಾರಿಕಾ ಕೇಂದ್ರದಲ್ಲಿ ನೊಂದಾಯಿಸಲ್ಪಟ್ಟ ಪ್ರಮುಖ ಸಣ್ಣ ಕೈಗಾರಿಕಾ ಘಟಕಗಳೆಂದರೆ ಗ್ಲಾಸ್ ಮತ್ತು ಸಿರಾಮಿಕ್ಸ್, ಜಾಬ್‌ವರ್ಕ್ ಮತ್ತು ರಿಪೇರಿ, ಚರ್ಮ, ಮೆಕಾನಿಕ್ ಇಂಜಿನಿಯರಿಂಗ್, ಕಾಗದ ಮತ್ತು ಮುದ್ರಣ, ರಬ್ಬರ್ ಮತ್ತು ಪ್ಲಾಸ್ಟಿಕ್, ಟೆಕ್ಸ್‌ಟೈಲ್ಸ್, ಮರ ಇತ್ಯಾದಿ ಘಟಕಗಳು ನೊಂದಾಯಿಸಲ್ಪಟ್ಟಿವೆ.

ಜಿಲ್ಲೆಯಲ್ಲಿ ೫೨ ಗ್ಲಾಸ್ ಮತ್ತು ಸಿರಾಮಿಕ್ಸ್ ಘಟಕಗಳು, ೧೨೫ ಜಾಬ್‌ವರ್ಕ್ಸ್ ರಿಪೇರಿ ಘಟಕಗಳು, ೨೩ ಮೆಕಾನಿಕಲ್ ಇಂಜಿನಿಯರಿಂಗ್ ಘಟಕಗಳು, ೭ ಕಾಗದ ಮತ್ತು ಮುದ್ರಣ, ೧೨ ರಬ್ಬರ್ ಮತ್ತು ಪ್ಲಾಸ್ಟಿಕ್, ೧೫೫ ಟೆಕ್ಸಟೈಲ್, ೧೮ ಮರ ಹಾಗೂ ೬೨ ಇತರೆ ಅಂದರೆ ಜಿಲ್ಲೆಯಲ್ಲಿ ಒಟ್ಟು ೫೫೧ ವಿವಿಧ ಸಣ್ಣ ಉದ್ದಿಮೆಗಳು, ಘಟಕಗಳು ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೋಂದಾಯಿಸಲ್ಪಟ್ಟಿವೆ. ಈ ಘಟಕಗಳಲ್ಲಿ ಸಾವಿರಾರು ಉದ್ಯೋಗಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

೪. ಬ್ಯಾಂಕಿಂಗ್

ಆರ್ಥಿಕಾಭಿವೃದ್ಧಿಗೆ ನೆರವಾಗುವ ಮೂಲಭೂತ ಸೌಲಭ್ಯಗಳಲ್ಲಿ ಬ್ಯಾಂಕಿಂಗ್ ಅತ್ಯಂತ ಪ್ರಮುಖವಾದದ್ದು. ಬ್ಯಾಂಕುಗಳು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಠೇವಣಿ ಸಂಗ್ರಹಿಸುವುದರ

ಜೊತೆಗೆ ಸಾಲ ಸೌಲಭ್ಯಗಳನ್ನು ನೀಡುವುದರ ಮೂಲಕ ಕೃಷಿ, ಕೈಗಾರಿಕೆ ಹಾಗೂ ಸೇವಾ ವಲಯಗಳು ಅಭಿವೃದ್ದಿಗೆ ನೆರವಾಗುತ್ತಿವೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಮುಖ ರಾಷ್ಟ್ರಿಕೃತ ಮತ್ತು ಅಲ್ಲದ ಬ್ಯಾಂಕುಗಳು ೧೩೪, ಶಾಖೆಗಳನ್ನು ತೆರಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯ ಪ್ರಗತಿ ಗ್ರಾಮೀಣ ಬ್ಯಾಂಕು ಜಿಲ್ಲೆಯಾದ್ಯಾಂತ ೬೫ ಶಾಖೆಗಳನ್ನು ತೆರೆದು ಬ್ಯಾಂಕು ವ್ಯವಹಾರ ನಡೆಸುತ್ತಿವೆ. ಜಿಲ್ಲೆಯಲ್ಲಿ ಭೂಅಭಿವೃದ್ಧಿ ಬ್ಯಾಂಕು ಹಲವಾರು ಶಾಖೆಗಳನ್ನು ತೆರೆದು ಕೃಷಿಕರಿಗೆ ಸಾಲ ಸೌಲಭ್ಯಗಳನ್ನು ನೀಡುತ್ರಿವೆ ಜಿಲ್ಲೆಯಲ್ಲಿ ೧೪೭ ವ್ಯವಸಾಯ ಸಹಕಾರ ಸಂಘಗಳು, ೭೧೭ ಇತರೆ ಸಹಕಾರ ಸಂಘಗಳು ಒಟ್ಟು ೧೧೧೪ ಸಂಘಗಳು ಸುಮಾರು ೩,೯೯,೨೬೦ ಸದಸ್ಯರನ್ನು ಒಳಗೊಂಡು ಜಿಲ್ಲೆಯಾದ್ಯಾಂತ ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿರುವ ಬ್ಯಾಂಕು ಹಾಗೂ ಸಹಕಾರ ಸಂಘಗಳು ಕೃಷಿ, ಕೈಗಾರಿಕೆ ಹಾಗೂ ಸೇವಾ ವಲಯಗಳ ಅಭಿವೃದ್ಧಿಗೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡುವುದರ ಮೂಲಕ ಜಿಲ್ಲೆಯ ಅಭಿವೃದ್ದಿಗೆ ನೆರವಾಗುತ್ತಿವೆ.

೫. ಸಾರಿಗೆ ಮತ್ತು ಸಂಪರ್ಕ

ಬಳ್ಳಾರಿ ಜಿಲ್ಲೆಯು ೮೪೨೦.೨೫.ಕಿ.ಮೀ ವಿಸ್ತೀರ್ಣ ಹೊಂದಿದೆ. ಜಿಲ್ಲೆಯಲ್ಲಿ ಜನವಸತಿ ಇರುವ ೫೨೪ ಮತ್ತು ಜನವಸತಿ ಇಲ್ಲದಿರುವ ೩೦ ಗ್ರಾಮಗಳು ಅಂದರೆ ಒಟ್ಟು ೫೫೪ ಗ್ರಾಮಗಳನ್ನು ಹಾಗೂ ನಗರ ಪ್ರದೇಶಗಳನ್ನು ಹೊಂದಿರುವ ಜಿಲ್ಲೆ.

ಜಿಲ್ಲೆಯ ಅಭಿವೃದ್ಧಿಗೆ ಸಾರಿಗೆ-ಸಂಪರ್ಕದ ಕೊಡುಗೆ ಅಪಾರವಾಗಿದೆ. ಜಿಲ್ಲೆಯ ರಸ್ತೆ ಸಾರಿಗೆ, ರೈಲು ಸಾರಿಗೆ ಹಾಗೂ ವಾಯು ಸಾರಿಗೆ ಮತ್ತು ವ್ಯಾಪಕವಾಗಿ ಅಂಚೆ ಮತ್ತು ತಂತಿ ಹಾಗೂ ದೂರವಾಣಿ ಸೌಲಭ್ಯವನ್ನು ಹೊಂದಿದೆ.

೨೦೦೭ರ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿ೨೨೨.೧೦ ಕಿ. ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ, ೬೩೩.೪೫ ಕಿ.ಮೀ. ರಾಜ್ಯ ಹೆದ್ದಾರಿ, ೧೩೨೧.೫೩ ಕಿ.ಮೀ. ಮುಖ್ಯ ಜಿಲ್ಲಾ ರಸ್ತೆ, ೭೮.೫೦ ಕಿ.ಮೀ. ಇತರೆ ಜಿಲ್ಲಾ ರಸ್ತೆ, ೧,೨೦೦.೬೫ ಕಿ.ಮೀ ಹಳ್ಳಿ ರಸ್ತೆ, ೨೫೮೮.೬೫ ತುಂಗಭದ್ರಾ ಬೋರ್ಡ್ ೪೧೫.೦೦ ಕಿ.ಮೀ. ಮುನಿಸಿಪಾಲಿಟಿ ರಸ್ತೆಗಳನ್ನೂ, ೪೦೧.೦೦ ಕಿ.ಮೀ. ನೀರಾವರಿ ಇಲಾಖೆ, ೧೫ ಕಿ.ಮೀ ಅರಣ್ಯ ರಸ್ತೆಗಳನ್ನು ನಿರ್ಮಿಸಿದ್ದು, ಜಿಲ್ಲೆಯಲ್ಲಿ ಒಟ್ಟಾರೆಯಾಗಿ ೬೯೪೨.೩೮ ಕಿ.ಮೀ ಉದ್ದದ ರಸ್ತೆಗಳನ್ನು ನಿರ್ಮಿಸಿ ನಿರ್ವಹಿಸಲಾಗುತ್ತಿದೆ. ಇದರಲ್ಲಿ ೨೦೧೫.೬೫ ಕಿ.ಮೀ. ಪಕ್ಕಾ ರಸ್ತೆಗಳು ನಿರ್ಮಾಣವಾಗಿವೆ. ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೧೩ ಮತ್ತು ೬೭ ಹಾಯ್ದುಹೋಗಿವೆ.

ಜಿಲ್ಲೆಯಲ್ಲಿ ೩೯೨ ಅಂಚೆ ಕಛೇರಿಗಳು ಕಾರ್ಯನಿರ್ವಹಿಸುತ್ತವೆ. ಬಳ್ಳಾರಿ ಮತ್ತು ಹೊಸಪೇಟೆಯಲ್ಲಿ ತಂತಿ ಕಛೇರಿಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯ ಏಳು ತಾಲೂಕುಗಳಲ್ಲಿ ಒಟ್ಟು ೧೦೧ ದೂರವಾಣಿ ವಿನಿಮಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ಮೊಬೈಲ್ ಸೌಲಭ್ಯವನ್ನು ಭಾರತೀಯ ದೂರ ಸಂಪರ್ಕ ನಿಗಮ, ಸ್ಪೈಸ್, ಟಾಟಾ ಇಂಡಿಕಾಂ, ಏರ್‌ಟೆಲ್, ರಿಲಿಯನ್ಸ್ ಇತ್ಯಾದಿ ಕಂಪನಿಗಳು ಉತ್ತಮ ಸೌಲಭ್ಯವನ್ನು ಒದಗಿಸುತ್ತಿರುವುದರಿಂದ ಜಿಲ್ಲೆಯ ಸ್ಥಿರ ದೂರವಾಣಿಗಳ ಸಂಖ್ಯೆ ಕಡಿಮೆಯಾಗಿದೆ. ಇಂದು ೫೦,೯೯೧ ಜನರು ದೂರವಾಣಿ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಜಿಲ್ಲೆಯಲ್ಲಿ ಸಂಪರ್ಕ ಅಭಿವೃದ್ಧಿ ಹೊಂದಿದಂತೆ ಉತ್ತಮ ಸಾರಿಗೆ ವ್ಯವಸ್ಥೆಯು ಅಭಿವೃದ್ಧಿಯಾಗಬೇಕಾದ ಅವಶ್ಯಕತೆ ಇದೆ.

ಜಿಲ್ಲೆಯಲ್ಲಿ ಬಳ್ಳಾರಿ, ತೋರಣಗಲ್ಲು ಮತ್ತು ಹೊಸಪೇಟೆಗಳಲ್ಲಿ ಸಣ್ಣ ಪ್ರಮಾಣದ ವಿಮಾನಗಳು ಇಳಿಯಲು ವ್ಯವಸ್ಥೆಯಿದೆ. ತೋರಣಗಲ್ಲು ಖಾಸಗಿ ವಿಮಾನ ನಿಲ್ದಾಣ ಇಂದು ಹೆಚ್ಚಾಗಿ ಬಳಸಲ್ಪಡುತ್ತದೆ. ಇಂದಿನ ಸರ್ಕಾರ ಬಳ್ಳಾರಿ ಹತ್ತಿರ ಸಿರಿವಾರ ಗ್ರಾಮದಲ್ಲಿ ಆಧುನಿಕ ವಿಮಾನ ನಿಲ್ದಾಣವನ್ನು ನಿರ್ಮಿಸಲು ಪ್ರಯತ್ನ ನಡೆಸಿದೆ. ಆದರೆ ರೈತ ಹಾಗೂ ಇತರೆ ಸಂಘಗಳ ಹೋರಾಟದಿಂದಾಗಿ ಈ ವಿಮಾನ ನಿಲ್ದಾಣದ ಕಾರ್ಯ ಚಟುವಟಿಕೆಗಳು ನಿಧಾನಗತಿಯಲ್ಲಿ ಜರುಗುತ್ತಿವೆ. ಜಿಲ್ಲೆಯ ಅಂತರರಾಷ್ಟ್ರೀಯ ಖ್ಯಾತಿಯ ಹಂಪೆ ನೋಡಲು ದೇಶ ವಿದೇಶಗಳಿಂದ ಬರುವ ಪ್ರವಾಸಿಗರನ್ನು ಆಕರ್ಷಿಸಲು ವಿಮಾನ ಸಾರಿಗೆ ಸೌಲಭ್ಯ ಅತ್ಯಗತ್ಯ.

೨.೫. ಸಾಮಾಜಿಕತೆ

೧. ಶಿಕ್ಷಣ

ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿರುವ ಗಡಿನಾಡು ಪ್ರದೇಶವಾದ ಬಳ್ಳಾರಿ ಜಿಲ್ಲೆಯು ಶೈಕ್ಷಣಿಕ ದೃಷ್ಟಿಯಿಂದ ತುಂಬಾ ಹಿಂದುಳಿದ ಜಿಲ್ಲೆ. ಇದು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷ್ ಆಳ್ವಿಕೆಯ ಕಾಲದಲ್ಲಿ ಕನ್ನಡಿಗರೇ ಹೆಚ್ಚಾಗಿ ವಾಸಿಸುವ ಪ್ರದೇಶವಾಗಿದ್ದರಿಂದ ಬ್ರಿಟಿಷ್ ಸರಕಾರದ ನಿರ್ಲಕ್ಷಕ್ಕೆ ಒಳಗಾಗಿತ್ತು. ತೆಲುಗು ಆಡಳಿತದ ಭಾಷೆ ಆಗಿದ್ದರೂ ಕನ್ನಡ ಹಾಗೂ ತೆಲುಗು ಮಾತನ್ನು ಆಡುವ ಜನ ಇಲ್ಲಿ ಹೆಚ್ಚಾಗಿ ವಾಸವಾಗಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಜಿಲ್ಲೆಯಾದ್ಯಂತ ಬಹುತೇಕ ಎಲ್ಲಾ ದೊಡ್ಡ ಗ್ರಾಮಗಳಲ್ಲಿ ಇಂಡೋಜಿನಿಯಸ್ ಮಾದರಿಯ ಎಲಿಮೆಂಟರಿ ಶಾಲೆಗಳು ಶಿಕ್ಷಣವನ್ನು ನೀಡುತ್ತಿದ್ದವು. ಈ ಶಾಲೆಗಳು ಅಯ್ಯನವರ ಮಠ, ಸಾಲಿಮಠಗಳು ಅಥವಾ ಓದುವ ಮಠಗಳೆಂದು ಕರೆಯಿಸಿಕೊಳ್ಳುತ್ತಿದ್ದವು. ಮಠ, ಮಂದಿರಗಳು, ಖಾಸಗೀ ವ್ಯಕ್ತಿಗಳು, ಆಸಕ್ತ ಊರಿನ ಪ್ರಮುಖರು ಅಥವಾ ಶಿಕ್ಷಕರೇ ತಮ್ಮ ಮನೆಗಳಲ್ಲಿ ಈ ಶಿಕ್ಷಣವನ್ನು ನೀಡುತ್ತಿದ್ದರು. ಶಾಲೆಗಳಲ್ಲಿ ಓದುವುದು, ಬರೆಯುವುದು, ಅಂಕಗಣಿತ, ನೀತಿಪಾಠಗಳನ್ನು ಹೇಳಿಕೊಡುತ್ತಿದ್ದರು. ಅಂದು ಶಿಕ್ಷಣ ಸೌಲಭ್ಯಗಳು ಕೇವಲ ಮೇಲ್ಜಾತಿಯವರಿಗೆ ಮೀಸಲಾಗಿದ್ದು, ಮಹಿಳೆ ಮತ್ತು ಇತರೆ ಹಿಂದುಳಿದ ಕೆಳಜಾತಿಯವರಿಗೆ ಶಿಕ್ಷಣ ಸೌಲಭ್ಯವಿರಲಿಲ್ಲ.

ಬಳ್ಳಾರಿ ಜಿಲ್ಲೆಯು ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ಬಳಿಕ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಸುಧಾರಣೆಗಳಾದವು. ಕ್ರಿ.ಶ.೧೮೨೩ರಲ್ಲಿ ಬಳ್ಳಾರಿ ಜಿಲ್ಲೆಯ ಅಂದಿನ ಕಲೆಕ್ಟರ್ ಆಗಿದ್ದ ಸರ್ ಥಾಮಸ್ ಮನ್ರೋ ಅವರು ಒಂದು ಸಮಿತಿಯನ್ನು ರಚಿಸಿ, ಜಿಲ್ಲೆಯಾದ್ಯಾಂತ ಪ್ರವಾಸ ಕೈಗೊಂಡು ಶೈಕ್ಷಣಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಮದ್ರಾಸ್ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದರು. ಇವರ ಶಿಪಾರಸ್ಸಿನ ಮೇಲೆ ಜಿಲ್ಲೆಯಲ್ಲಿ ಒಂದು ಕಲೆಕ್ಟೊರೇಟ್ ಶಾಲೆ ಮತ್ತು ಎರಡು ತಹಸೀಲ್ದಾರಿ ಶಾಲೆಗಳನ್ನು ಸ್ಥಾಪಿಸಲಾಯಿತು. ಆದರೆ ಈ ಶಾಲೆಗಳು ನಿರೀಕ್ಷಿಸಿದ ಫಲವೇನನ್ನೂ ಕೊಡದ ಕಾರಣ ಮದ್ರಾಸ್ ಸರಕಾರ ಅವುಗಳನ್ನು ರದ್ದುಮಾಡಿತು.

ಕ್ರಿ.ಶ ೧೮೫೪ರ ಚಾರ್ಲಸ್ ಉಡ್ಸ್ ವರದಿಯ ಮೇರೆಗೆ ಜಿಲ್ಲೆಯಾದ್ಯಂತ ಎಲಿಮೆಂಟರಿ ಶಾಲೆಗಳು ಆರಂಭವಾದವು. ಕ್ರಿಶ್ಚಿಯನ್ ಮಿಷನರಿಗಳು ಮತ್ತು ಖಾಸಗಿ ಸಂಸ್ಥೆಗಳು ಸಹ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದವು. ೧೯ನೇ ಶತಮಾನದ ಮಧ್ಯಭಾಗದಲ್ಲಿ ಜಿಲ್ಲೆಯಾದ್ಯಾಂತ ಕೇವಲ ಮೂರು ಹಿರಿಯ ಮಾಧ್ಯಮಿಕ ಶಾಲೆಗಳಿದ್ದವು. ಅವುಗಳಲ್ಲಿ ಮೊದಲನೇ 'ಪ್ರಾವಿನ್ಸಿಯಲ್ ಶಾಲೆ'ಯನ್ನು ಬಳ್ಳಾರಿಯ ಮುನ್ಸಿಪಾಲಿಟಿ (೧೮೫೫) ನೋಡಿಕೊಳ್ಳುತ್ತಿತ್ತು. ಎರಡನೇ ಶಾಲೆಯನ್ನು ಹರಪನಹಳ್ಳಿಯ ತಾಲ್ಲೂಕು ಬೋರ್ಡು ನೋಡಿಕೊಳ್ಳುತ್ತಿತ್ತು. ಮೂರನೆಯದು ಬಳ್ಳಾರಿಯ ಪ್ರತಿಷ್ಠಿತ ವಾರ್ಡ್ಲಾ ಕಾಲೇಜ್ ಆಗಿತ್ತು. ತಾಲೂಕು ಮಂಡಳಿಗಳು ಹೊಸಪೇಟೆ, ಸಂಡೂರುಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದವು.

ಕ್ರಿ.ಶ. ೧೮೭೯ರಲ್ಲಿ ಬಳ್ಳಾರಿ ನಗರದಲ್ಲಿ ಜಿಲ್ಲಾ ಮಂಡಳಿಯು ಶಿಕ್ಷಕರ ತರಬೇತಿ ಶಾಲೆಯನ್ನು ಪ್ರಾರಂಭಿಸಿತು. ಕ್ರಿ.ಶ. ೧೯೨೩ರಲ್ಲಿ ಸರಕಾರವು ಪೂರ್ವ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವ ಅವಶ್ಯಕತೆಯನ್ನು ಮನಗಂಡು ಈಗಾಗಲೇ ಅಸ್ಥಿತ್ವದಲ್ಲಿದ್ದ ಇಂಡೋಜಿನಿಯಸ್ ಮಾದರಿಯ ಶಾಲೆಗಳನ್ನು ಸುಧಾರಿಸುವ ಮತ್ತು ಸ್ಥಳೀಯ ಮಂಡಳಿಯ ಸಹಾಯದಿಂದ ಶಾಲೆಗಳು ಇಲ್ಲದೇ ಇರುವ ಪ್ರದೇಶಗಳಲ್ಲಿ ಹೊಸಶಾಲೆಗಳನ್ನು ಸ್ಥಾಪಿಸಲು ಪ್ರಾರಂಭಿಸಿತು. ಸರಕಾರವು ಶಾಲೆಗಳನ್ನು ತೆರೆಯಲು ಮುಂದೆ ಬರುವ ಖಾಸಗಿ ಸಂಸ್ಥೆಗಳಿಗೆ ಧನಸಹಾಯ ನೀಡಲು ಪ್ರಾರಂಭಿಸಿತು. ಕ್ರಿ.ಶ.೧೭೫೩ರಲ್ಲಿ ಹೊಸ ಮೈಸೂರು ರಾಜ್ಯಕ್ಕೆ ಸೇರ್ಪಡೆಯಾದಾಗ ಜಿಲ್ಲೆಯಲ್ಲಿ ೪೬೪ ಎಲಿಮೆಂಟರಿ ಶಾಲೆಗಳು, ೧೭ ಮಾಧ್ಯಮಿಕ ಶಾಲೆಗಳು ವಿವಿಧ ಆಡಳಿತ ಮಂಡಳಿಗಳ ನಿಯಂತ್ರಣದಲ್ಲಿ ಅಸ್ಥಿತ್ವದಲ್ಲಿದ್ದವು.

ಕ್ರಿ.ಶ.೧೯೫೩ರಲ್ಲಿ ಕಿರಿಯ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ೩೩,೮೦೦ ವಿದ್ಯಾರ್ಥಿಗಳು ಮತ್ತು ಹಿರಿಯ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ೪೬೦೬ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಕ್ರಿ.ಶ. ೧೯೫೬ರ ಡಿಸೆಂಬರ್‌ನಲ್ಲಿ ಭಾರತ ಸರ್ಕಾರವು ಶೈಕ್ಷಣಿಕ ಸಲಹಾ

ಸಮಿತಿಯನ್ನು ರಚಿಸಿ ಹೊಸದಾಗಿ ರೂಪಗೊಂಡ ರಾಜ್ಯಕ್ಕೆ ವ್ಯವಸ್ಥಿತವಾದ ಪಠ್ಯಕ್ರಮ ಮತ್ತು ಸಾಮಾನ್ಯ ಶಿಕ್ಷಣ ಮಾದರಿಯನ್ನು ಕಾರ್ಯ ರೂಪಕ್ಕೆ ತರಲಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯಪೂರ್ವದಿಂದಲೂ ವೀರಶೈವ ಮಠಗಳು, ಕ್ರಿಶ್ಚಿಯನ್ ಮಿಷನರಿಗಳು ಹಾಗೂ ಇತರೆ ಸಂಘ ಸಂಸ್ಥೆಗಳು ಶೈಕ್ಷಣಿಕ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಮಹತ್ತರವಾದದ್ದು. ಜಿಲ್ಲೆಯಲ್ಲಿ ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘ, ಉಜ್ಜಯನಿ ಶ್ರೀ ಜಗದ್ಗುರು ಸದ್ಧರ್ಮ ಸಿಂಹಾಸನ ಸಂಸ್ಥೆ, ಜ್ಞಾನಗುರು ವಿದ್ಯಾಪೀಠ, ಟಿ.ಎಂ.ಎ.ಇ ಶಿಕ್ಷಣ ಸಂಸ್ಥೆ ಹರಪನಹಳ್ಳಿ, ಹೊಸಪೇಟೆಯ ಥಿಯೋಸಾಫಿಕಲ್ ಸೊಸೈಟಿ, ಎಸ್.ಇ.ಎಸ್ ಶಿಕ್ಷಣ ಸಂಸ್ಥೆ ಸಂಡೂರು, ಶ್ರೀ ಸಿದ್ಧಲಿಂಗೇಶ್ವರ ಶಿಕ್ಷಣ ಕಾನಾಮಡಗು, ತುಂಗಭದ್ರಾ ಶಿಕ್ಷಣ ಸಂಸ್ಥೆ ಕೊಟ್ಟೂರು, ಎಸ್,ಇ,ಎಸ್, ಶಿಕ್ಷಣ ಸಂಸ್ಥೆ ಸಿರುಗುಪ್ಪಾ, ರೇಣುಕಾ ವಿದ್ಯಾಸಂಸ್ಥೆ ಹಗರಿಬೊಮ್ಮನಹಳ್ಳಿ, ಶರಭೇಶ್ವರ ವಿದ್ಯಾಸಂಸ್ಥೆ ಬಳ್ಳಾರಿ, ಇನ್ನೂ ಮುಂತಾದ ಪ್ರತಿಷ್ಠಿತ ಖಾಸಗಿ ಸಂಸ್ಥೆಗಳು ಜಿಲ್ಲೆಯಲ್ಲಿ ಪ್ರಾಥಮಿಕ, ಪ್ರೌಢ, ಕಾಲೇಜು ಮಟ್ಟದ ಉನ್ನತ ಶಿಕ್ಷಣ, ಸೇರಿದಂತೆ, ಕಾನೂನು, ತಾಂತ್ರಿಕ, ಶಿಕ್ಷಣ, ವೈದ್ಯಕೀಯ, ಔಷಧೀಯ ಮತ್ತು ಇತರೆ ವೃತ್ತಿಪರ ಶಿಕ್ಷಣವನ್ನು ನೀಡುತ್ತಿವೆ.

ಕರ್ನಾಟಕದ ಕೆಲವೇ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲೊಂದಾದ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘವು ಕ್ರಿ.ಶ.೧೯೨೪ ರಲ್ಲಿ ಪ್ರಪ್ರಥಮವಾಗಿ 'ಹೀರದ ಸೂಗಮ್ಮ ಸ್ಮಾರಕ ಪ್ರಾಥಮಿಕ ಶಾಲೆ' ಮತ್ತು ಶೆಟ್ಟರ ಗುರುಶಾಂತಪ್ಪ ಪ್ರೌಢಶಾಲೆ(೧೯೪೨) ಬಳ್ಳಾರಿಯಲ್ಲಿ ಸ್ಥಾಪಿಸುವುದರ ಮೂಲಕ ತನ್ನ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸಿತು. ಅದು ಇಂದು ಪ್ರಾಥಮಿಕ, ಪ್ರೌಢ ಶಿಕ್ಷಣ ಸೇರಿದಂತೆ ಪದವಿ, ಸ್ನಾತಕೋತ್ತರ ಪದವಿ, ಕಾನೂನು, ತಾಂತ್ರಿಕ, ವೈದ್ಯಕೀಯ, ಔಷಧೀಯ ಹಾಗೂ ಹಲವಾರು ವೃತ್ತಿಪರ ತರಬೇತಿ ಸಂಸ್ಥೆಗಳನ್ನು ನಡೆಸುವುದರ ಮೂಲಕ ಇಂದು ಹೆಮ್ಮರವಾಗಿ ಬೆಳೆದಿದೆ. ಕ್ರಿ.ಶ.೧೯೫೦ರವರೆಗೂ ಕೇವಲ ಬಳ್ಳಾರಿ ನಗರಕ್ಕೆ ಸೀಮಿತವಾಗಿದ್ದ ಸಂಘದ ಶೈಕ್ಷಣಿಕ ಕಾರ್ಯಚಟುವಟಿಕೆಗಳು ಬಳ್ಳಾರಿ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಹಾಗೂ ರಾಯಚೂರು ಮತ್ತು ದಾವಣಗೆರೆ ಜಿಲ್ಲೆಗಳಿಗೂ ವಿಸ್ತರಿಸಿದೆ. ವಿ.ವಿ.ಸಂಘದ ವ್ಯಾಪ್ತಿಯಲ್ಲಿ ಇಂದು ೩ ಪ್ರಾಥಮಿಕ ಶಾಲೆಗಳು, ೫ ಪ್ರೌಢಶಾಲೆಗಳು, ೪ ಸಂಯುಕ್ತ ಪದವಿ ಪೂರ್ವ ಕಾಲೇಜುಗಳು, ೧ ಪಾಲಿಟೆಕ್ನಿಕ್, ೨ ಇಂಜಿನಿಯರಿಂಗ್ ಕಾಲೇಜುಗಳು, ೬ ಪ್ರಥಮ ದರ್ಜೆ ಕಾಲೇಜುಗಳು, ೨ ಔಷಧೀಯ ಮಹಾವಿದ್ಯಾಲಯಗಳು, ೨ ಶಿಕ್ಷಣ ಮಹಾವಿದ್ಯಾಲಯಗಳು, ೧ ಶಿಕ್ಷಕರ ತರಬೇತಿ ಕೇಂದ್ರ, ೧ ಕಾನೂನು ಮಹಾವಿದ್ಯಾಲಯ ೩ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ೬ ವಸತಿ ನಿಲಯಗಳು ಜಿಲ್ಲೆಯಾದ್ಯಂತ ಸೇವೆ ಸಲ್ಲಿಸುತ್ತಿವೆ.

ಬಳ್ಳಾರಿಯ 'ಶರಭೇಶ್ವರ ವಿದ್ಯಾಪೀಠ' ೧೯೭೭ರಲ್ಲಿ ಸ್ಥಾಪನೆಗೊಂಡು ಜಿಲ್ಲೆಯಲ್ಲಿ ಹಾಗೂ ವಿವಿಧೆಡೆ ಒಟ್ಟು ೫೫ ಪ್ರಾಥಮಿಕ ಮತ್ತು ಪದವಿ ಮಟ್ಟದ ಶೈಕ್ಷಣಿಕ ಸಂಸ್ಥೆಗಳನ್ನು ಒಳಗೊಂಡಿದೆ.

ಮಾತಾ ಶಿಕ್ಷಣ ಸಂಸ್ಥೆ, ಬಳ್ಳಾರಿ ಎಜುಕೇಶನ್ ಸೊಸೈಟಿ, ಸಾಯಿ ಶಿಕ್ಷಣ ಸಂಸ್ಥೆ, ವಿವೇಕಾನಂದ ಶಿಕ್ಷಣ ಸಂಸ್ಥೆ, ಶಾರದ ವಿದ್ಯಾಪೀಠ, ವಾಸವಿ ಶಿಕ್ಷಣ ಸಂಸ್ಥೆ, ಮಾರ್ಕಂಡೇಶ್ವರ ಶಿಕ್ಷಣ ಸಂಸ್ಥೆ ಇತ್ಯಾದಿ ಸಂಸ್ಥೆಗಳು ಬಳ್ಳಾರಿ ನಗರದಲ್ಲಿ ಶೈಕ್ಷಣಿಕ ಸೇವೆಯನ್ನು ಸಲ್ಲಿಸುತ್ತಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಘ ಸಂಸ್ಥೆಗಳು, ವಸತಿ, ನಿಲಯ ಹಾಗೂ ಶಾಲಾ ಕಾಲೇಜುಗಳನ್ನು ನಡೆಸುತ್ತಿವೆ.

ಶೈಕ್ಷಣಿಕ ಕ್ಷೇತ್ರದಲ್ಲಿ ಜಿಲ್ಲೆಯ ಅಲ್ಪಸಂಖ್ಯಾತ ಸಮುದಾಯಗಳು ಕೂಡ ತಮ್ಮ ಕೊಡುಗೆ ಸಲ್ಲಿಸುತ್ತಿವೆ. ಕ್ರಿ.ಶ. ೧೮೪೬ರಲ್ಲಿಯೇ ಲಂಡನ್ನಿನ ಕ್ರಿಶ್ಚಿಯನ್ ಮಿಷನರಿ ಸಂಸ್ಥೆಯಿಂದ ಸ್ಥಾಪಿತವಾದ 'ವಾರ್ಡ್ಲಾ ಹೈಸ್ಕೂಲ್' ಜಿಲ್ಲೆಯ ಪ್ರಪ್ರಥಮ ಪ್ರೌಢಶಾಲೆ. ಅನಂತರ 'ಸಂತ ಜಾನ್ಸ ಪ್ರೌಢಶಾಲೆ' (೧೮೭೦), ಬಳ್ಳಾರಿಯ ರೋಮನ್ ಕೆಥೋಲಿಕ್ ಮಿಷನ್ನಿನ ಸಂತ ಜೋಸೆಫ್ ಶಾಲೆ (೧೯೬೧), ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ಅಸ್ತಿತ್ವ ತಳೆದ ಗುಡ್‌ಶಫರ್ಡ್‌ನನ್ಸಗಳಿಂದ ನಡೆಸಲ್ಪಡುವ 'ಸಂತ ಫಿಲೋಮಿನ ಶಾಲೆ' (೧೮೮೫) ಹಾಗೂ ಲಂಡನ್ ಮಿಷನರಿ ಸಂತ ಪ್ರಾನ್ಸಿಸ್ ಝೇವಿಯರನ ಶಾಲೆ ಇವೇ ಮೊದಲಾದ ಹಳೆಯ ವಿದ್ಯಾಕೇಂದ್ರಗಳಾಗಿವೆ. ಇತ್ತೀಚೆಗೆ ನಂದಾಶಿಕ್ಷಣ ಸಂಸ್ಥೆ ಮತ್ತು ಚೇತನ ಶಿಕ್ಷಣ ಸಂಸ್ಥೆ ಹಾಗೂ ಪಿಪಲ್ ಟ್ರೀ ಶಿಕ್ಷಣ ಸಂಸ್ಥೆಗಳು ಪ್ರಾಥಮಿಕ ಹಂತದಿಂದ ಪದವಿಪೂರ್ವ ಕಾಲೇಜುಗಳವರೆಗೆ ಶಿಕ್ಷಣ ನೀಡುತ್ತಿವೆ.

ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಅವರ ವಿದ್ಯಾಭ್ಯಾಸಕ್ಕಾಗಿ ಮುಸ್ಲಿಂ ಸಂಘ ಸಂಸ್ಥೆಗಳು ೧೯೪೬ರಿಂದಲೇ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಸ್ಥಾಪಿಸಿ ಶಿಕ್ಷಣ ಸೇವೆಯನ್ನು ಮಾಡುತ್ತಿವೆ.

ಈ ಮೇಲಿನ ಖಾಸಗಿ ಒಡೆತನದ ಶೈಕ್ಷಣಿಕ ಸಂಸ್ಥೆಗಳಲ್ಲದೇ ಇನ್ನೂ ಹಲವಾರು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಕೂಡ ಜಿಲ್ಲೆಯಲ್ಲಿ ಶೈಕ್ಷಣಿಕ ಪ್ರಗತಿಗೆ ಕಾರಣೀಭೂತವಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಸರ್ಕಾರಿ ಪದವಿ ಪೂರ್ವ ಕಾಲೇಜು (೧೮೫೪), ಸರ್ಕಾರಿ ಮಹಿಳೆಯರ ಸಂಯುಕ್ತ ಪದವಿ ಪೂರ್ವ ಕಾಲೇಜು, (೧೯೦೪) ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು (೧೯೪೮), ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ (೧೯೫೭), ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ (೧೯೫೯), ತಾರನಾಥ ಆಯುರ್ವೇದಿಕ್ ವಿದ್ಯಾಸಂಸ್ಥೆ, (೧೯೪೭), ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ (೧೯೬೧) ಹಾಗೂ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಪ್ರಮುಖ ಊರುಗಳಲ್ಲಿ ಪದವಿ ಕಾಲೇಜುಗಳನ್ನು ನಡೆಸುವುದರ ಮೂಲಕ ಜಿಲ್ಲೆಯ ವಿದ್ಯಾಕಾಂಕ್ಷಿಗಳ ಜ್ಞಾನದಾಹವನ್ನು ತಣಿಸುವಲ್ಲಿ ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತಿವೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಸಂಡೂರು, ಸಿರುಗುಪ್ಪ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಕೊಟ್ಟೂರು, ಪ್ರದೇಶಗಳಲ್ಲಿ ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳು ಪ್ರಾಥಮಿಕ

ಶಾಲೆಯಿಂದ ಹಿಡಿದು ಉನ್ನತ ಪದವಿ ಕಾಲೇಜುಗಳನ್ನು ಸ್ಥಾಪಿಸಿ ಶಿಕ್ಷಣವನ್ನು ವ್ಯಾಪಕವಾಗಿ ವಿಸ್ತರಿಸಿವೆ. ೨೦೦೪-೦೫ರಲ್ಲಿ ಜಿಲ್ಲೆಯು ಒಟ್ಟು ೧೬೨೭ ಪ್ರಾಥಮಿಕ ಶಾಲೆಗಳನ್ನು ಹೊಂದಿದ್ದು, ಅವುಗಳಲ್ಲಿ ೧೨೭೦ ಸರ್ಕಾರಿ ಶಾಲೆಗಳು ಮತ್ತು ೩೫೭ ಖಾಸಗಿ ಶಾಲೆಗಳಾಗಿವೆ. ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ೬೮೬೮ ಶಿಕ್ಷಕರು ಸೇವಾನಿರತರಾಗಿದ್ದು, ಒಟ್ಟು ೩.೨೧.೯೨ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

೨೦೦೪-೦೫ರಲ್ಲಿ ಬಳ್ಳಾರಿ ಜಿಲ್ಲೆಯ ಒಟ್ಟು ೨೨೭ ಪ್ರೌಢಶಾಲೆಗಳನ್ನು ಹೊಂದಿದ್ದು ಅವುಗಳಲ್ಲಿ ೮೧ ಸರಕಾರಿ ಶಾಲೆಗಳು ಮತ್ತು ೧೪೬ ಖಾಸಗಿ ಶಾಲೆಗಳಾಗಿವೆ. ಜಿಲ್ಲೆಯಲ್ಲಿ ಸುಮಾರು ೧೦೪೨ ಶಿಕ್ಷಕರು ಜಿಲ್ಲೆಯ ವಿವಿಧ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮತ್ತು ೬೯೯೧ ವಿದ್ಯಾರ್ಥಿಗಳು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಪದವಿಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು ೫೮ ಪದವಿ ಪೂರ್ವ ಕಾಲೇಜುಗಳಿದ್ದು, ಅವುಗಳಲ್ಲಿ ೩೭ ಖಾಸಗಿ ಕಾಲೇಜುಗಳಾಗಿದ್ದು, ೨೧ ಸರ್ಕಾರಿ ಕಾಲೇಜುಗಳಾಗಿವೆ.

ಬಳ್ಳಾರಿ ಜಿಲ್ಲೆಯು ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣದಲ್ಲಿಯೂ ಇತ್ತೀಚಿನ ಎರಡು ದಶಕಗಳಿಂದಲೂ ಸಾಕಷ್ಟು ಪ್ರಗತಿಯನ್ನು ಸಾಧಿಸುತ್ತದೆ. ೨೦೦೪-೦೫ರಲ್ಲಿ ಸಾಮಾನ್ಯ ಶಿಕ್ಷಣ ನೀಡುವ ಸಂಸ್ಥೆಗಳು ೨೦, ಸ್ವಾತಂತ್ರ್ಯದ ನಂತರ ಜಿಲ್ಲೆಯ ಪದವಿ ಹಂತದ ಶಿಕ್ಷಣ ಪ್ರಸಾರ ಮಾಡುವ ಕೆಲಸವನ್ನು ಮೊಟ್ಟಮೊದಲು ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘವು ಕೈಗೆತ್ತಿಕೊಂಡು ಅಂದಿನಿಂದ ಇಂದಿನವರೆಗೆ ಈ ಭಾಗದ ಬಡ ವಿದ್ಯಾರ್ಥಿಗಳಿಗೆ ವರದಾನವಾಗಿ ಪರಿಣಮಿಸಿದೆ. ಬಹುತೇಕ ಪದವಿ ಶಿಕ್ಷಣ ಸಂಸ್ಥೆಗಳಲ್ಲಿ ಕಲಾ, ವಿಜ್ಞಾನ, ವಾಣಿಜ್ಯ, ವ್ಯವಹಾರ ನಿರ್ವಹಣೆ ವಿಭಾಗಗಳಿದ್ದು, ಇಂದಿನ ಆಧುನಿಕ ದಿನಗಳ ವಿಜ್ಞಾನ ವಿಭಾಗದ ಬೇಡಿಕೆಯ ವಿಷಯಗಳಾದ ಬಯೋಟೆಕ್ನೊಲಾಜಿ, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್‌ಗಳಂತಹ ವಿಷಯಗಳನ್ನು ಹೊಂದಿವೆ.

ಜಿಲ್ಲೆಯಲ್ಲಿ ದೈಹಿಕ ಶಿಕ್ಷಣ ನೀಡುವ ಸಂಸ್ಥೆ ಗಳು, ಶಿಕ್ಷಕರ ತರಬೇತಿ ನೀಡುವ ಸಂಸ್ಥೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಬಳ್ಳಾರಿಯಲ್ಲಿ ಕಾನೂನು ಮಹಾವಿದ್ಯಾಲಯ ೧೯೭೫ರಲ್ಲಿ ಸ್ಥಾಪನೆಯಾಗಿದ್ದು, ಉತ್ತಮ ಕಾನೂನು ಪದವೀಧರರನ್ನು ಸೃಷ್ಠಿ ಮಾಡುತ್ತಿದೆ.

ಜಿಲ್ಲೆಯಲ್ಲಿ ೫ ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ಹಲವಾರು ಕೈಗಾರಿಕಾ ತರಬೇತಿ ಕೇಂದ್ರ್ರಗಳು ಕಾರ್ಯನಿರ್ವಹಿಸುತ್ತವೆ. ಪದವಿ ಹಂತದ ತಾಂತ್ರಿಕ ಶಿಕ್ಷಣಕ್ಕೋಸ್ಕರ ಜಿಲ್ಲೆಯಲ್ಲಿ ನಾಲ್ಕು ತಾಂತ್ರಿಕ ಮಹಾವಿದ್ಯಾಲಯಗಳು ವೈಜ್ಞಾನಿಕ ಯುಗದ ಬೇಡಿಕೆಗಳಿಗೆ ತಕ್ಕಂತೆ ವಿವಿಧ ವಿಭಾಗಗಳನ್ನು ಹೊಂದಿ ಉತ್ತಮ ಶಿಕ್ಷಣಕ್ಕೆ ಅವಕಾಶ ಮಾಡಿಕೊಡುತ್ತವೆ. ಗಣಿಗಾರಿಕೆಗೆ

ಹೆಸರುವಾಸಿಯಾದ ಬಳ್ಳಾರಿ ಜಿಲ್ಲೆ ತಾಂತ್ರಿಕ ಪದವಿ ಪಡೆದವರಿಗೆ ಹೆಚ್ಚು ಉದ್ಯೋಗ ಅವಕಾಶಗಳನ್ನು ಒದಗಿಸಿಕೊಡುತ್ತಿದೆ. ವಿವಿಧ ಕೈಗಾರಿಕೆಗಳಲ್ಲಿ ತಾಂತ್ರಿಕ ಪದವೀಧರರು ಕಾರ್ಯನಿರ್ವಹಿಸುತ್ತಿದ್ದಾರೆ.

ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಹಾಗೂ ಶಿರುಗುಪ್ಪದಲ್ಲಿ ಡಿ.ಫಾರ್ಮ ಮತ್ತು ಬಿ.ಫಾರ್ಮ ಔಷಧೀಯ ಮಹಾವಿದ್ಯಾಲಯಗಳು ಮತ್ತು ಬಳ್ಳಾರಿ ಹೊಸಪೇಟೆಗಳಲ್ಲಿ ನರ್ಸಿಂಗ್ ತರಬೇತಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

ಕರ್ನಾಟಕದ ಪ್ರಸಿದ್ಧ ವೈದ್ಯಕೀಯ ಕಾಲೇಜುಗಳಲ್ಲಿ ಒಂದಾದ ಬಳ್ಳಾರಿಯ 'ವಿಜಯನಗರ ಸರ್ಕಾರಿ ವೈದ್ಯಕಿಯ ಕಾಲೇಜು' ೧೯೬೧ರಲ್ಲಿ ಕೇವಲ ೨೫ ವಿದ್ಯಾರ್ಥಿಗಳೊಂದಿಗೆ ವೀರಶೈವ ಕಾಲೇಜಿನ ಆವರಣದಲ್ಲಿ ಪ್ರಾರಂಭವಾಯಿತು. ಇಂದು ಈ ಮಹಾವಿದ್ಯಾಲಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಈ ಮಹಾವಿದ್ಯಾಲಯ ಸ್ನಾತಕೋತ್ತರ ಪದವಿಗೂ ಅವಕಾಶ ಮಾಡಿಕೊಟ್ಟಿದೆ. ೨೦೦೯-೧೦ನೇ ಸಾಲಿಗೆ ದಂತ ವೈದ್ಯ ಕಾಲೇಜನ್ನು ಇದೇ ಅವರಣದಲ್ಲಿ ಪ್ರಾರಂಭಿಸಲಾಗಿದೆ. ಬಳ್ಳಾರಿಯಲ್ಲಿ ೧೯೪೭ರಲ್ಲಿ ತಾರನಾಥ ಆಯುರ್ವೇದಿಕ್ ಕಾಲೇಜು ಕಾರ್ಯ ಆರಂಭಮಾಡಿದೆ. ಇಂದು ಈ ಮಹಾವಿದ್ಯಾಲಯ ಸರ್ಕಾರದ ಆಧೀನದಲ್ಲಿ ಕಾರ್ಯ ನಿರ್ವಹಿಸುವ ಪ್ರತಿಷ್ಠಿತ ಸಂಸ್ಥೆಯಾಗಿದೆ. ಕ್ರಿ.ಶ. ೧೯೯೧ರಲ್ಲಿ ತೆಗ್ಗಿನಮಠ ಸಂಸ್ಥೆಯು ಹೊಸಪೇಟೆಯಲ್ಲಿ ಆಯುರ್ವೇದ ವೈದ್ಯಕೀಯ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಈ ಭಾಗದ ವಿದ್ಯಾರ್ಥಿಗಳು ಬಿ.ಎ.ಎಂ.ಎಸ್ ಪದವಿಯನ್ನು ಪಡೆಯುವ ಅವಕಾಶ ನೀಡಿತು.

ಸಾಮಾನ್ಯ ಸ್ನಾತಕೋತ್ತರ ಶಿಕ್ಷಣವನ್ನು ಈ ಪ್ರಾಂತ್ಯದಲ್ಲಿ ಅಭಿವೃದ್ಧಿಗೊಳಿಸುವುದಕ್ಕೋಸ್ಕರ ಕರ್ನಾಟಕ ವಿಶ್ವವಿದ್ಯಾಲಯವು ೧೯೭೮ರಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಕೃಷ್ಣದೇವರಾಯನಗರ (ನಂದಿಹಳ್ಳಿ)ದಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಿತು. ಆ ನಂತರ ೧೯೭೮ರಲ್ಲಿ ಇದು ಗುಲ್ಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿತ್ತು. ಈ ಕೇಂದ್ರದಲ್ಲಿ ಭೂಗರ್ಭಶಾಸ್ತ್ರ, ಮಿನರಲ್ ಪ್ರೊಸೆಸಿಂಗ್, ಮಿನರಲ್ ಎಕ್ಸ್‌ಪ್ಲೊರೇಶನ್ ಎಂಬ ವಿಭಾಗಗಳನ್ನು ಕನ್ನಡ ಹಾಗೂ ಸಮಾಜ ಕಬ್ಬಿಣ ವಿಭಾಗಗಳನ್ನು ಹೊಂದಿದೆ. ಬಳ್ಳಾರಿಯಲ್ಲಿಯು ಸ್ನಾತಕೋತ್ತರ ಕೇಂದ್ರವು ಇಂಡಸ್ಟ್ರಿಯಲ್ ಕೆಮಿಸ್ಟ್ರಿ ಹಾಗೂ ಎಂ.ಬಿ.ಎ ವಿಭಾಗದಲ್ಲಿ ಶಿಕ್ಷಣ ನೀಡುತ್ತದೆ. ಆನಂತರ ಕನಾಟಕದ ನಾಡು, ನುಡಿ, ಕಲೆ, ಸಂಸ್ಕೃತಿಯ ಅಧ್ಯಯನ ಮತ್ತು ಸಂಶೋಧನೆಗಾಗಿ ರೂಪ ತಾಳಿದ ಸಂಸ್ಥೆ 'ಹಂಪೆಯ ಕನ್ನಡ ವಿಶ್ವವಿದ್ಯಾಲಯ'ವು ೧೯೯೧ರಲ್ಲಿ ಪ್ರಾರಂಭವಾಯಿತು. ವಿಶ್ವವಿದ್ಯಾಲಯವು ಇಂದು ವಿವಿಧ ವಿಷಯಗಳಲ್ಲಿ ಸಂಶೋಧನ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಸಾವಿರಾರು ಗ್ರಂಥಗಳನ್ನು ಕನ್ನಡದಲ್ಲಿ ಪ್ರಕಟಿಸಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಮನಸ್ಸುಗಳನ್ನು ಬೆಸೆಯುವಲ್ಲಿ ಕಾರ್ಯಶೀಲವಾಗಿದೆ. ಬಳ್ಳಾರಿಯಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವನ್ನು ಇತ್ತೀಚೆಗೆ ಸ್ಥಾಪಿಸಲಾಗಿದೆ.

ಬಳ್ಳಾರಿ ಜಿಲ್ಲೆಯೂ ಒಂದು ಕಡೆ ಶ್ರೀಮಂತ ಗಣಿಗಾರಿಕೆಯಿಂದ ಬೃಹತ್ ಕಬ್ಬಿಣ-ಉಕ್ಕು ಕೈಗಾರಿಕೆಗಳಿಂದಾಗಿ ಹೆಸರು ಪಡೆದಿದ್ದರೆ ಮತ್ತೊಂದು ಕಡೆ ತುಂಗಭದ್ರ ಜಲಾಶಯದಿಂದಾಗಿ ಜಿಲ್ಲೆಯ ವಿವಿಧ ಪ್ರದೇಶವು ವರ್ಷದ ಎಲ್ಲಾ ಕಾಲದಲ್ಲಿಯೂ ಹಚ್ಚಹಸಿರಾಗಿ ವೈವಿಧ್ಯಮಯ ಬೆಳೆಗಳಿಂದಾಗಿ ಕಂಗೊಳಿಸುತ್ತಿದೆ. ಇಷ್ಟೆಲ್ಲಾ ಸಿರಿ ಸಂಪತ್ತು ಜಿಲ್ಲೆಯಲ್ಲಿದ್ದರೂ ಜಿಲ್ಲೆಯು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶವೆಂದು ಗುರುತಿಸಿಕೊಂಡಿದೆ. ಆದರೂ ಸರ್ಕಾರ ಹಾಗೂ ಖಾಸಗಿ ಸಂಘ ಸಂಸ್ಥೆಗಳು ಶಿಕ್ಷಣ ವಿಸ್ತರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಶೈಕ್ಷಣಿಕವಾಗಿ ಜಿಲ್ಲೆಯು ಸಾಧಿಸಬೇಕಾದ್ದು ಸಾಕಷ್ಟಿದ್ದರೂ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹವಾದ ಸಾಧನೆಯತ್ತ ಧಾಪುಗಾಲಿಟ್ಟಿದೆ. ಜಿಲ್ಲೆ ಶೈಕ್ಷಣಿಕವಾಗಿ ಬೆಳೆಯಲು ಇಲ್ಲಿನ ರಾಜಕಾರಣಿಗಳು ತುಂಬಾ ಶ್ರಮಿಸಬೇಕಾದ ಅಗತ್ಯವಿದೆ.

೨. ಆರೋಗ್ಯ

ಆರ್ಥಿಕ ಅಭಿವೃದ್ಧಿಯು ಮೂಲಭೂತ ಸೌಲಭ್ಯಗಳಾದ ಸಾರಿಗೆ-ಸಂಪರ್ಕ, ವಿದ್ಯುತ್, ಬ್ಯಾಂಕಿಂಗ್, ವಿಮೆ, ಮಾರುಕಟ್ಟೆ ವ್ಯವಸ್ಥೆ, ಶಿಕ್ಷಣ ಹಾಗೂ ಆರೋಗ್ಯ ಇವುಗಳ ಮೇಲೆ ಅವಲಂಬಿಸಿದೆ.

ಶಿಕ್ಷಣದಂತೆ ಆರೋಗ್ಯವು ಮೂಲಭೂತವಾದುದು. ಜಿಲ್ಲೆಯಲ್ಲಿ ಸಂಡೂರು ಪ್ರದೇಶವನ್ನು ಹೊರತುಪಡಿಸಿದರೆ ಇತರೆ ಎಲ್ಲಾ ಪ್ರದೇಶಗಳು ಹೆಚ್ಚಿನ ಉಷ್ಣಾಂಶವನ್ನು ಹೊಂದಿವೆ. ವ್ಯವಸಾಯ, ಗಣಿಗಾರಿಕೆ, ಉದ್ಯಮ ಹಾಗೂ ಇತರೆ ಸೇವಾವಲಯದಲ್ಲಿ ಕಾರ್ಯನಿರ್ವಹಿಸುವ ಜನರಿಗೆ ಉತ್ತಮ ಆರೋಗ್ಯ ಸೌಲಭ್ಯದ ಅವಶ್ಯಕತೆ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ಇಂದು ೮೫ ಆಲೋಪತಿ ಆಸ್ಪತ್ರೆಗಳು ೭೬ ಖಾಸಗಿ ಆಸ್ಪತ್ರೆಗಳು ಜಿಲ್ಲೆಯಾದ್ಯಂತ ಕಾರ್ಯನಿರ್ವಹಿಸುತ್ತವೆ. ಜಿಲ್ಲೆಯಲ್ಲಿ ೩ ಸಮುದಾಯ ಆರೋಗ್ಯ ಕೇಂದ್ರಗಳು, ೧೧ ಚಿಕಿತ್ಸಾಲಯಗಳು, ೫೪ ಕುಟುಂಬ ಕಬ್ಬಿಣ ಕೇಂದ್ರಗಳು, ೭ ರಕ್ತ ನಿಧಿ ಕೇಂದ್ರಗಳು ಮತ್ತು ಸುಮಾರು ೭೪೧ ಔಷಧಿ ಅಂಗಡಿಗಳು ಜಿಲ್ಲೆಯ ಜನರ ಆರೋಗ್ಯ ಕಾಪಾಡಲು ಕಾರ್ಯನಿರ್ವಹಿಸುತ್ತಿವೆ. ಇಂದು ಜನರ ಉತ್ತಮ ಆರೋಗ್ಯ ನೋಡಿಕೊಳ್ಳಲು ಅತ್ಯಾಧುನಿಕವಾದ ಚಿಕಿತ್ಸೆಯನ್ನು ನೀಡುವ ಆಸ್ಪತ್ರೆಗಳ ಸ್ಥಾಪನೆಯ ಅಗತ್ಯವಿದೆ.

ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಏಡ್ಸ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕುಷ್ಠರೋಗ, ಕ್ಯಾನ್ಸರ್, ಟಿ.ಬಿ ಹಾಗೂ ಮಲೇರಿಯಾ ರೋಗಗಳು ಉಲ್ಬಣಗೊಳ್ಳುತ್ತಿವೆ. ವಿವಿಧ ಮಾರಕ ರೋಗಗಳ ನಿವಾರಣೆಗಾಗಿ ಸರಕಾರ ಖಾಸಗಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿವೆ. ಜನರಿಗೆ ಉತ್ತಮ ಆರೋಗ್ಯದ ಮಾಹಿತಿಗಳನ್ನು ನೀಡುವುದರ ಮೂಲಕ ಉತ್ತಮ ಆರೋಗ್ಯಕರ ಜೀವನ ನಡೆಸಲು ನೆರವಾಗಬಹುದು.

೨.೬. ಸಾಹಿತ್ಯ

ಬಳ್ಳಾರಿ ಜಿಲ್ಲೆಯು ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದೆ. ಜಿಲ್ಲೆಯಲ್ಲಿ ಕನ್ನಡ, ತೆಲುಗು ಹಾಗೂ ಸಂಸ್ಕೃತ ಭಾಷೆಗಳಲ್ಲಿ ಸಾಹಿತ್ಯ ರಚನೆಯಾಗಿದೆ. ಸಂಸ್ಕೃತದ ಕವಿಗಳಲ್ಲಿ ಮತಂಗ

ಮುನಿಯ 'ಬೃಹದ್ದೇಶಿ' ಗ್ರಂಥವನ್ನು ಗುರುತಿಸಬಹುದು. ಕನ್ನಡದಲ್ಲಿ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯ ವಿಭಾಗದಲ್ಲಿ ಜಿಲ್ಲೆಯಲ್ಲಿ ಹಲವಾರು ಸಾಹಿತಿಗಳು ಕಾಣಸಿಗುತ್ತಾರೆ. ಹಳಗನ್ನಡ ಸಾಹಿತ್ಯದಲ್ಲಿ ಮೊದಲ ಗದ್ಯ ಕವಿಯೆಂಬ ಖ್ಯಾತಿ ಪಡೆದ ಶಿವಕೋಟ್ಯಾಚಾರ್ಯರು ಬಳ್ಳಾರಿಯ ಕೋಗಳಿ ನಾಡಿನವರು. ಇವರು ಕನ್ನಡದ ಪ್ರಥಮ ಕವಿ. ಇವರು ಬರೆದ 'ವಡ್ಡರಾಧನೆ' ಗದ್ಯಾಕೃತಿಯು ತುಂಬಾ ಉತ್ಕೃಷ್ಟವಾದುದು. ಕ್ರಿ.ಶ. ೧೧೪೦ರ ಕಾಲಾವಧಿಯಲ್ಲಿದ್ದನೆಂದು ಹೇಳಲಾದ ಶಿವಶರಣ ಬಳ್ಳೇಶ ಮಲ್ಲಯ್ಯನು ಆದ್ಯವಚನಕಾರನೆಂದು ಗುರುತಿಸಲಾಗಿದೆ. ಇವರು ಬರೆದ ವಚನಗಳಲ್ಲಿ 'ಬಳ್ಳೇಶ್ವರ'ನೆಂಬ ನಾಮಾಂಕಿತವಿದೆ. ಈತನ ಹೆಸರಿನಿಂದಲೇ ಬಳ್ಳಾರಿ ಎಂಬ ಹೆಸರು ಬಂದಿರಬೇಕೆಂಬ ಐತಿಹ್ಯವೊಂದು ಪ್ರಚಲಿತದಲ್ಲಿದೆ. ಕ್ರಿ.ಶ.೧೦೪೦ರಿಂದ ೨೦ನೇ ಶತಮಾನದ ದಮ್ಮೂರ ವೆಂಕಟಪ್ಪನವರಿಗೂ ೬೮ ಶಿವಶರಣರನ್ನು ಶಾಂತರಸರು ಗುರುತಿಸಿದ್ದಾರೆ. (ಶಾಂತರಸ, ಪುಟ ೧೧, ೧೯೭೫) ಬಸವಯುಗದ ಕಾಲಪಟ್ಟದಲ್ಲಿ ಸಾಹಿತ್ಯವಲಯದಲ್ಲಿ ಕ್ರಾಂತಿ ಮಾಡಿದ ಇಬ್ಬರು ಕವಿಗಳು ಕಂಡುಬರುತ್ತಾರೆ. ವಿಜಯನಗರದ ಅರಸರ ಕಾಲದಲ್ಲಿ ಧಾರ್ಮಿಕ ಕೃತಿಗಳನ್ನು ರಚಿಸುವುದರ ಮೂಲಕ ಸಾಹಿತ್ಯ ರಚಿಸಿದ್ದಾರೆ. ಹರಿಹರನು ತನ್ನ 'ರಗಳೆ'ಯಲ್ಲಿ ರಾಘವಂಕನು 'ಷಟ್ಪದಿ' ಪ್ರಕಾರಗಳಲ್ಲಿ ಕೃತಿ ರಚಿಸಿದರು. ಹರಿಹರನು ಬಸವರಾಜದೇವರ ರಗಳೆ, ಗಿರಿಜಾಕಲ್ಯಾಣ, ರಕ್ಷಾಶತಕ ಮತ್ತು ಪಂಪಶತಕಗಳನ್ನು ರಚಿಸಿದ್ದಾರೆ. ರಾಘವಾಂಕನು ಹರಿಶ್ಚಂದ್ರಕಾವ್ಯ, ಸಿದ್ಧರಾಮಪುರಾಣಗಳನ್ನು ರಚಿಸಿದನು. ೧೪ನೇ ಶತಮಾನದಲ್ಲಿ ಮಂಗ ರಾಜನ ಖಗೇಂದ್ರಮಣಿ ದರ್ಪಣವು ರಚನೆಯಾಗಿರುವುದು ಕಂಡುಬರುತ್ತದೆ.

ವಿಜಯನಗರ ಸಾಮ್ರಾಜ್ಯದ ಸಂಗಮ ವಂಶದ ದೊರೆ ಪ್ರೌಢದೇವರಾಯನ ಆಳ್ವಿಕೆಯಲ್ಲಿ ೧೦೧ ವಿರಕ್ತರು ಇದ್ದರು. ಅವರಲ್ಲಿ ಲಕ್ಕಣ್ಣ ದಂಡೇಶ ಮತ್ತು ಚಾಮರಸರ ಪ್ರಮುಖರು. ಲಕ್ಕಣ್ಣ ದಂಡೇಶನ ಶಿವಾತತ್ವ ಚಿಂತಾಮಣಿ ಹಾಗೂ ಚಾಮರಸನ ಪ್ರಭುಲಿಂಗಲೀಲೆ ಪ್ರಮುಖ ಸಾಹಿತ್ಯ ಕೃತಿಗಳು. ಕಲ್ಲುಮಠದ 'ಪ್ರಭುದೇವನ' ಲಿಂಗಲೀಲಾ ವಿಲಾಸ, ಬತ್ತಲೇಶ್ವರನ ರಾಮಾಯಣ, ಕರಸ್ಥಳನಾಗಿದೇವನ ತ್ರಿಪದಿ ಹಾಗೂ ಚಂದ್ರಕವಿಯ 'ಗುರುಮೂರ್ತಿ ಶತಕ' ಮುಂತಾದವು ರಚನೆಯಗಿವೆ. ಬುಕ್ಕರಾಯನ ಮಗ ಕಂಪಣನ ಹೆಂಡತಿ ಗಂಗಾದೇವಿಯು ಸಂಸ್ಕೃತದಲ್ಲಿ 'ಮಧುರಾವಿಜಯಂ' ಅಥವಾ 'ವೀರಕಂಪಣರಾಯ ಚರಿತೆ' ಬರೆದಿದ್ದಳು. ಇವಳನ್ನು ಸಂಸ್ಕೃತದಲ್ಲಿ ಮೊಟ್ಟಮೊದಲು ಕೃತಿ ರಚಿಸಿದ ಮಹಿಳಾ ಲೇಖಕಿ ಎನ್ನಬಹುದು.

ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಅಷ್ಟದಿಗ್ಗಜರು ಇದ್ದರು. ಕೃಷ್ಣದೇವರಾಯ ಸ್ವತಃ ಕವಿಯಾಗಿದ್ದನು. ಅವನೇ ಹಲವಾರು ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ 'ಆಮುಕ್ತಮಾಲ್ಯದ', ಹಾಗೂ 'ಜಾಂಬವತಿ ಕಲ್ಯಾಣ' ಪ್ರಮುಖವಾದವು. ಈತನ ಆಸ್ಥಾನದಲ್ಲಿ ಅಲ್ಲಸಾನಿ ಪೆದ್ದಣ್ಣ, ನಂದಿ ತಿಮ್ಮಣ್ಣ, ದೂರ್ಜಟಿ, ರಾಮಭಕ್ತ ಕವಿ, ಪೊನ್ನ ವೀರಭದ್ರ, ಡಿಂಡಿಮ ರಾಜನಾಥ,

ತಿಮ್ಮರಸು, ಪಿಂಗಳಸೂರನ ಮುಂತಾದವರು ಸಾಹಿತ್ಯ ರಚನೆ ಮಾಡಿದ್ದಾರೆ. ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ ಪ್ರಮುಖ ಸಾಹಿತ್ಯ ಕೃತಿ. ವಿದ್ಯಾರಣ್ಯ, ವ್ಯಾಸರಾಯ, ಶ್ರೀಪಾದರಾಯರು, ಪುರಂದರದಾಸರು, ಕನಕದಾಸರು, ಸರ್ಪಭೂಷಣ ಶಿವಯೋಗಿಗಳು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ರಚಿಸಿದವರಲ್ಲಿ ಪ್ರಮುಖರು. ಇವರಲ್ಲಿ ವ್ಯಾಸರಾಯರು, ಕನಕದಾಸರು ಪುರಂದರದಾಸರು ಹೊರಗಿನವರಾದರೂ ಹಂಪೆಯಲ್ಲಿ ಕೃತಿ ರಚನೆಗೆ ತೊಡಗಿದರು. ಇವರು ದಾಸ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವಾದದ್ದು.

೧೬ನೇ ಶತಮಾನದಲ್ಲಿ ಅಚ್ಯುತರಾಯನ ಆಸ್ತಾನದಲ್ಲಿ ಕೃಷ್ಣದೇವರಾಯನ ಮಗಳಾದ ತಿರುಮಲಾಂಬಿಕೆಯು 'ವರದಾಂಬಿಕಾ ಪರಿಣಯ' ಎಂಬ ಚಂಪುಕಾವ್ಯ ರಚಿಸಿದಳು. ಇದೇ ಅವಧಿಯಲ್ಲಿ ಮಧುರವಾಣಿ ಎಂಬ ಕವಿಯತ್ರಿ ಇದ್ದಳು. ಚಾಟುವಿಠಲನಾಥನ ಭಾಗವತ, ಅದೃಶ್ಯ ಕವಿಯ ಪ್ರೌಢರಾಯ ಕಾವ್ಯ, ದೇವರಾಜನ ಸೊಬಗಿನ ಸೋನೆ, ಅಮರಶತಕಗಳು ರಚನೆಯಾದವು. ೧೮ನೇ ಶತಮಾನದಲ್ಲಿ ಶಂಕರ ಕವಿಯ 'ಚೋರಬಸವ ಚರಿತೆ', ೧೯ನೇ ಶತಮಾನದಲ್ಲಿ ಹಲವಾರು ಸಾಹಿತ್ಯ ಕೃತಿಗಳು ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ರಚನೆಯಾಗಿವೆ. ಆಂಧ್ರ-ಕರ್ನಾಟಕ ಪಿತಾಮಹಾನೆನಿಸಿದ ಕೃಷ್ಣಮಾಚಾರಲು, ಕೋಲಾಚಲಂ ಶ್ರೀನಿವಾಸರಾವ್ ಹಾಗೂ ಕರಿಬಸವಪ್ಪ ಶಾಸ್ತ್ರೀಗಳು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

೧೯ನೇ ಶತಮಾನದಲ್ಲಿ ಜಿಲ್ಲೆಯಲ್ಲಿ ಅನೇಕ ಶಿವಶರಣರು, ಅನುಭಾವಿಗಳು ಅಪರೂಪದ ಸಾಹಿತ್ಯ ಹಾಗೂ ಧಾರ್ಮಿಕ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಚಿದಾನಂದರ ಅವಧೂತ ಚೆನ್ನವೀರೇಶ, ಕುರುಗೋಡು ಬಸವ, ಕುರುಗೋಡು ನೀಲಮ್ಮ, ಗದ್ದಿಕೇರಿ ದೊಡ್ಡ ಬಸಪ್ಪ, ಮೈಲಾರ ಬಸವಲಿಂಗದೇವರು, ಚಿತ್ತವಾಡಿಗಿ ಕಲ್ಮಟೇಶ್ವರ, ಕಾನಾಮಡುಗು ಶರಣರು, ಗೊಳ್ಳಂ ಗಾದಿಲಿಂಗಪ್ಪ, ಕುಡುತಿನಿ ನಯನಸ್ವಾಮಿ, ಬಸವಣ್ಣ, ಬಳ್ಳಾರಿ ಎರ್ರಿತಾತ, ಆದವಾನಿ ಲಕ್ಷ್ಮಣ, ಶಿವರಾಮ ಅವದೂತ, ಗಡಿಗಿ ಪರಪ್ಪ, ದಮ್ಮೂರ ವೆಂಕಪ್ಪ ಗೋಣಿ ಬಸವೇಶ್ವರ, ಮುಂತಾದವರು. ಈ ಶತಮಾನದ ಅಂತ್ಯದಲ್ಲಿ ಹರಪನಹಳ್ಳಿ ಭೀಮವ್ವ 'ಭೀಮೇಶ ಕೃಷ್ಣ' ಎಂಬ ಅಂಕಿತದಿಂದ ಕೀರ್ತನೆ ಹಾಗೂ ಗೀತೆಗಳನ್ನು ರಚಿಸಿದ್ದಾರೆ.

೨೦ನೇ ಶತಮಾನದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ವೈ. ನಾಗೇಶಶಾಸ್ತ್ರೀ ಸರ್ವದರ್ಶನತೀರ್ಥರು ಕನ್ನಡ, ತೆಲುಗು, ಮರಾಠಿ, ಹಿಂದಿ, ಬಂಗಾಲಿ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ವೈ.ನಾಗೇಶಶಾಸ್ತ್ರಿಯವರು ಗವಿಸಿದ್ದೇಶ್ವರ ಪುರಾಣ, ಷಟ್‌ಸಲ ಸಿದ್ಧಾಂತ, ಅರ್ಧನಾರೀಶ್ವರ ಪುರಾಣ, ವಿಜಯನಗರ ಅಭ್ಯುದಯ, ನೀತಿಚಿಂತಾಮಣಿ ಕೃತಿಗಳನ್ನು ರಚಿಸಿದ್ದಾರೆ. ಬೈಲೂರಿನ ಗುರುಸಂಗಮೇಶ್ವರ ಶಾಸ್ತ್ರಿಗಳು ಕನ್ನಡ ಪಂಡಿತರಾಗಿ ಇಂಗ್ಲಿಷ್ ಹಾಗೂ ತೆಲುಗು

ಸಾಹಿತಿಗಳಾಗಿದ್ದರು. ಪಿ.ಶ್ಯಾಮರಾಯನು ಆದಿಶಂಕರರಾಚಾರ್ಯರ ಆನಂದಲಹರಿಯನ್ನು ಅನುವಾದಿಸಿದ್ದರು.

ಬಳ್ಳಾರಿ ಹಾಸ್ಯ ಸಾಹಿತಿ ಆರ್. ಭೀಮಸೇನ್‌ರಾವ್ ಅವರು ಬೀಚಿ ಎಂಬ ಕಾವ್ಯನಾಮದಿಂದ ಸಾಹಿತ್ಯ ರಚನೆ ಮಾಡಿದ್ದಾರೆ. ಇವರ ತಿಮ್ಮನ ಪದಗಳು ಇಂದಿಗೂ ಮಾದರಿಯಾಗಿವೆ. ಅಲ್ಲದೆ ಇವರ ಕನ್ನಡ ಎಮ್ಮೆ ಹಾಗೂ ಹಲವಾರು ಹಾಸ್ಯ ಪ್ರಸಂಗಗಳ ತುಣುಕುಗಳಂತೂ ಮನ ಪುಳುಕಿತವಾಗುವಂತೆ ಮಾಡುತ್ತವೆ. ಶ್ರೇಷ್ಠ ನಾಟಕಕಾರರು, ಗಮಕಿಗಳೂ ಆದ ಜೋಳದ ರಾಶಿ ದೊಡ್ಡನಗೌಡರು ಕನ್ನಡ, ತೆಲುಗು ಹಾಗೂ ಸಂಸ್ಕೃತಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿದ್ದರು. ಇವರೊಂದಿಗೆ ಕಪ್ಪಗಲ್ ಸಂಜೀವಮೂರ್ತಿ, ಸೋಗಿ ಭಾಸ್ಕರಾಚಾರ್ಯ, ಹಿ.ಮ.ನಾಗಯ್ಯ ಕೊ.ಚೆನ್ನಬಸಪ್ಪ ಮುಂತಾದ ಸಾಹಿತಿಗಳು ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಇವರಲ್ಲದೆ ಭಾರತದ ರಾಷ್ಟ್ರಪತಿಗಳಾಗಿದ್ದ ವಿ.ವಿ.ಗಿರಿಯವರ ಪತ್ನಿ ಸರಸ್ವತಿಬಾಯಿಯವರು ಬಳ್ಳಾರಿಯ ಸಂಪರ್ಕವಿಟ್ಟುಕೊಂಡವರು. ಇವರು ಹಲವಾರು ತೆಲುಗು ಭಕ್ತಿಗೀತೆಗಳನ್ನು ರಚಿಸಿದ್ದಾರೆ. ಇದರ ಜೊತೆಗೆ ಬೀಜಾಕ್ಷರಮಾಲೆ, ಶೈವಸ್ತುತಿ, ಜೀವಿ ಸ್ವರ್ಗ ಭೀಮ ಮೊದಲಾದ ಕೃತಿಗಳನ್ನು ರಚಿಸಿದರು. ಅಲ್ಲದೆ ಬೆಳಗೆರೆ ಜಾನಕಮ್ಮನವರು ಕಥೆ, ಕಾವ್ಯ, ರಚಿಸಿದರೆ ಬಳೆಗಾರ ಲಕ್ಕಮ್ಮ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ರಾಮಸಾಗರದ ವೆಂಕಣ್ಣನವರು ಪಂಡಿತರಾಗಿದ್ದರು. ಇತ್ತೀಚಿಗೆ ಹಲವಾರು ನವ್ಯ ಕವಿಗಳು ವಿವಿಧ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡುತ್ತಿದ್ದಾರೆ.

ಬಳ್ಳಾರಿ ಜಿಲ್ಲೆಯು ಕರ್ನಾಟಕ ಸಂಗೀತ, ನಾಟಕರಂಗ, ಪತ್ರಿಕೋದ್ಯಮ, ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಹೆಸರು ಪಡೆದಿದೆ.

೨.೭. ಧಾರ್ಮಿಕತೆ:

ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲಾ ಧರ್ಮಿಯ ಜನರು ವಾಸವಾಗಿದ್ದಾರೆ. ಜಿಲ್ಲೆ ಧರ್ಮ ಸಾಮರಸ್ಯಕ್ಕೆ ಪ್ರತೀಕವಾಗಿದೆ. ಇಲ್ಲಿ ಧರ್ಮದ ಆಚಾರಕರಲ್ಲಿ ಧಾರ್ಮಿಕ ವೈಷಮ್ಯವಿಲ್ಲ. ಒಂದು ಧರ್ಮದವರು ಇತರೆ ಧರ್ಮದ ದೇವಾಲಯಗಳಿಗೆ ದಾನ ದತ್ತಿ ಬಿಟ್ಟಿದ್ದಾರೆ. ಹೀಗಾಗಿ ಇಲ್ಲಿ ಸರ್ವಧರ್ಮ ಸಮನ್ವಯವನ್ನು ಕಾಣುತ್ತೇವೆ. (ನಾಗಯ್ಯ ಜೆ.ಎಂ, ಪುಟ.೪೬, ೧೯೯೧) ವಿಜಯನಗರ ಅರಸರ ಆಸ್ಥಾನದಲ್ಲಿ ಸರ್ವಧರ್ಮದವರಿಗೂ ಸಮಾನ ಅವಕಾಶ ಕಲ್ಪಿಸಿಕೊಟ್ಟಿತ್ತು ಎಂದು ತಿಳಿದುಬರುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿ ಜೈನ, ಶೈವ, ವೈಷ್ಣವ, ಮುಸ್ಲಿಮರಿಗೆ ಸಂಬಂಧಿಸಿದ ಗುಡಿ-ಗುಂಡಾರಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಜಿಲ್ಲೆಯಲ್ಲಿ ಅಶೋಕನ ಕಾಲದಲ್ಲಿ ಬೌದ್ಧ ಧರ್ಮ ಪ್ರಸಾರ ನಡೆದಿತ್ತೆಂದು ತಿಳಿದುಬರುತ್ತದೆ. ಕೊಗಳಿ ಕ್ರಿ.ಶ. ೧೧೫೫ ಶಾಸನದಲ್ಲಿ ಜೈನ ಧರ್ಮಕ್ಕೆ ರಾಜಾಶ್ರಯ ನೀಡಲಾಗಿತ್ತು ಎಂದು ತಿಳಿಸುತ್ತದೆ. ಬಾಗಳಿ, ಸಂಡೂರು, ಕುರುಗೋಡು, ಮೋರಿಗೆರೆ, ನಂದಿಬೇವೂರು,

ಹೇಮಕೂಟದಲ್ಲಿರುವ ಜಿನಬಸದಿಗಳು ಕಾಣಸಿಗುತ್ತವೆ. ಕುರುಗೋಡಿನ ಕ್ರಿಶ ೧೫೪೫ರ ಶಾಸನವೊಂದು ಜೈನಬಸದಿಗಾಗಿ ಸ್ಥಳದಾನ ನೀಡಿದ ವಿವರಗಳನ್ನು ನೀಡುತ್ತದೆ.

ವಿಜಯನಗರ ರಾಜರುಗಳ ಆಡಳಿತದ ಮುನ್ನ ಶೈವ ಧರ್ಮವು ಇತರೆ ಧರ್ಮಗಳಿಗಿಂತಲೂ ಅಧಿಕ ಪ್ರಸಾರವನ್ನು ಹೊಂದಿತ್ತು. ಇಲ್ಲಿ ಲಕುಲೀಶ, ಪಾಶುಪತ, ಕಾಪಾಲಿಕ, ಆಘೋರಿಗಳು, ತಮ್ಮ ತಾಣವನ್ನಾಗಿರಿಸಿಕೊಂಡಿದ್ದಕ್ಕೆ ಕ್ರಿಶ ೧೦೪೫ರ ಮೋರಿಗೇರಿ ಶಾಸನ ದಾಖಲೆ ಒದಗಿಸುತ್ತದೆ. ಕಾಳಮುಖರಿಗೆ ಸಂಬಂಧಿಸಿದ ಅನೇಕ ಮಠಗಳು ಇಲ್ಲಿ ಇದ್ದವು. ಅವುಗಳಲ್ಲಿ ಕ್ರಿ ಶ. ೧೧೧೧ಕ್ಕೆ ಸಂಬಂಧಪಟ್ಟ ಶಾಸನದಲ್ಲಿ ಕಾಳಾಮುಖಸ್ಥಾನ ಕರ್ತಾರ ಮಠ ಎಂದಿದೆ. ಇದರೊಂದಿಗೆ ಹಿರೇಕುರುವರ್ತಿಯು ಶೈವ ಕೇಂದ್ರವಾಗಿತ್ತು. ಸಿರುಗುಪ್ಪ, ಕೂಡ್ಲಿಗಿ, ಉಜ್ಜಿನಿಯ ಕೇಂದ್ರಗಳು ಈಗಲೂ ಶೈವರಿಗೆ ಸಂಬಂಧಿಸಿದ ಗುಡಿ ಹಾಗೂ ಮಠಗಳನ್ನು ಹೊಂದಿವೆ. ವಿಜಯನಗರ ಅರಸರಲ್ಲಿ ಇಮ್ಮಡಿ ದೇವರಾಯನ ಆಸ್ಥಾನದಲ್ಲಿ ನೂರೊಂದು ವಿರಕ್ತರು ಇದ್ದರೆಂದು, ಅವರೆಲ್ಲರೂ ಶರಣರ ಕುರಿತಾಗಿ ಕೃತಿರಚನೆಗೆ ತೊಡಗಿದ್ದ ವಿಷಯ ಕಾವ್ಯಗಳಿಂದ ತಿಳಿದುಬರುತ್ತದೆ. ಕೊಟ್ಟೂರಿನ ಕೊಟ್ಟೂರೇಶ್ವರ, ಕೋಲುಶಾಂತಯ್ಯ, ಗೋಣಿ ಬಸವೇಶ್ವರರ ಸ್ಥಳಗಳು ಪವಿತ್ರ ಶೈವ ಆರಾಧನಾ ಸ್ಥಳಗಳಾಗಿವೆ. ವೈಷ್ಣವ ಧರ್ಮವು ಆರಂಭದಲ್ಲಿ ಪ್ರಾಬಲ್ಯ ಪಡೆಯಲಿಲ್ಲ. ಇದಕ್ಕೆ ವಿಜಯನಗರ ಸಾಮ್ರಾಜ್ಯದಲ್ಲಿ ಉತ್ತಮ ಸ್ಥಾನ ದೊರಕಿತು. ಆದರೂ ಅಲ್ಲಲ್ಲಿ ಕೆಲವು ಶಾಸನಗಳು ವೈಷ್ಣವ ಧರ್ಮಕ್ಕೆ ಉತ್ತೇಜನ ನೀಡಿ ದೇವಾಲಯ ನಿರ್ಮಿಸಿದ್ದಕ್ಕೆ ಪುರಾವೆ ನೀಡುತ್ತದೆ. ಕ್ರಿ.ಶ ೧೫೧೮ರ ಶಾಸನವೊಂದರಲ್ಲಿ ಕೃಷ್ಣದೇವರಾಯನ ರಾಣಿ ತಿರುಮಲಾದೇವಿಗೆ ಪುಣ್ಯವಾಗಲೆಂದು ತಿರುಮಲರಾಯ ದೇವಾಲಯವನ್ನು ಕಟ್ಟಿಸಿ ಭೂದಾನ ನೀಡಲಾಗಿದೆ. ನಾಗೇನಹಳ್ಳಿಯ ಶಾಸನವೊಂದರಲ್ಲಿ ಶೇಷಶಯನ ದೇವಾಲಯ ನಿರ್ಮಿಸಿ ಆ ಊರನ್ನು ಅಗ್ರಹಾರವನ್ನಾಗಿ ಪರಿವರ್ತಿಸಿದನೆಂದು ತಿಳಿದುಬರುತ್ತದೆ.

ವಿಜಯನಗರ ಸಾಮ್ರಾಜ್ಯ ಸರ್ವಧರ್ಮ ಸಮನ್ವಯಕ್ಕೆ ಪ್ರಮುಖ ನೆಲೆಯಾಗಿತ್ತೆಂಬುದು ಘಟ್ಟದ ಕೆಳಗಿನ ಗೋರಿ ಅಥವಾ ಗೋರಿ ಕೆಳಗಣ ಗ್ರಾಮ ಎಂಬ ಸ್ಥಳದಲ್ಲಿ ಹೆಚ್ಚಾಗಿ ಮುಸ್ಲಿಂ ಗೋರಿಗಳು ಕಂಡುಂಬರುತ್ತವೆ. ಅಲ್ಲದೆ ಇಮ್ಮಡಿ ದೇವರಾಯನು ಕುರಾನ್ ಪ್ರಕಟಿಸಿ ಅದರ ತತ್ವದಂತೆ ಪಾಲಿಸಲು ತಿಳಿಸುತ್ತಿದ್ದನು. ಹೊಸಪೇಟೆ ಹಾಗೂ ಕಡ್ಡಿರಾಂಪುರದಲ್ಲಿ ವಿಜಯನಗರ ಕಾಲದ ಬೃಹತ್ ಗೋರಿಗಳು ನೋಡಸಿಗುತ್ತವೆ.

ಅಡಿಟಿಪ್ಪಣಿಗಳು:

೧. ಜೆ.ಎಂ. ನಾಗಯ್ಯ, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪುಟ–೧.

೨. ಅದೇ, ಪುಟ–೧

೩. ಅದೇ, ಪುಟ–೨

೪. ಎಸ್.ಎಸ್.ಹಿರೇಮಠ, ಜನಪದ ಸಮಾಜ ಸಂಸ್ಕೃತಿ, ಪುಟ-೭೨

೫. Gazetteer of India, Mysore State, Bellary Dist, 1972, P-1-2

೬. ಎಸ್.ಎಸ್.ಹಿರೇಮಠ, ಜನಪದ ಸಮಾಜ ಸಂಸ್ಕೃತಿ, ಪುಟ-೭೨.

೭. ಅದೇ, ಪುಟ-೭೨.

೮. ಜೆ.ಎಂ.ನಾಗಯ್ಯ, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪುಟ-೪.

೯. ಅದೇ, ಪುಟ-೩

೧೦. ರವೀಂದ್ರನಾಥ, ಕೆ., ಬಳ್ಳಾರಿ ಜಿಲ್ಲಾ ದರ್ಶನ, ೨೦೦೪.

೧೧. ಬಳ್ಳಾರಿ ಜಿಲ್ಲಾ ಅಂಕಿ-ಅಂಶಗಳ ನೋಟ, ೨೦೦೬-೦೭.

೧೨. Industries Potintial Survey Report, Bellary Dist, 2000.

ಅಧ್ಯಾಯ ೩

ಜನಪದರು ಮತ್ತು ಕುಲಕಸುಬುಗಳ ಪರಿಕಲ್ಪನೆ

ಜನಪದರು ಮತ್ತು ಕುಲಕಸುಬುಗಳ ಅವಲೋಕನ

೩.೧. ಜನಪದ, ಜಾನಪದ ವ್ಯಾಖ್ಯಾನಗಳು

ಮಾನವ ಸಂಸ್ಕೃತಿಯ ಅಧ್ಯಯನ ಮಾನವಿಕ ಜ್ಞಾನಶಾಖೆಗಳಲ್ಲಿ ಒಂದಾದ ಮಾನವಶಾಸ್ತ್ರದ ಅಂಗ. ಮಾನವಶಾಸ್ತ್ರವು ಸಂಸ್ಕೃತಿಯ ವಿವಿಧ ಸ್ಥರಗಳನ್ನು ಅಭ್ಯಸಿಸುವ ಸಲುವಾಗಿ ಮಾನವನ ಎಲ್ಲಾ ಕ್ಷೇತ್ರಗಳಿಂದಲೂ ತನ್ನ ಬೆಳವಣಿಗೆಗೆ ವಸ್ತು ಸ್ವೀಕರಿಸುತ್ತದೆ. ೧೮೬೫ರಲ್ಲಿ ಸರ್ ಎಡ್ವರ್ಡ್ ಟೈಲರ್ Culture ಎಂಬ ಪದವನ್ನು ಸೃಷ್ಟಿಸಿ ಅದಕ್ಕೆ ಒಂದು ವ್ಯಾಖ್ಯಾನವನ್ನು ನೀಡಿದ್ದಾನೆ. ಅದೇಂದರೆ "That complex whole which includes knowledge belief art morals, law customs and any other capabilities and Habits acquired by man as a member of society."[೧] ಸಂಸ್ಕೃತಿ ಮಾನವನು ಗಳಿಸಿಕೊಂಡ ಸಮಸ್ತ ವಿಷಯಗಳನ್ನು ಒಳಗೊಳ್ಳುತ್ತದೆ. ಕಲಿಕೆಯ ವಿವಿಧ ಮೂಲಗಳಿಂದ ತಲೆಮಾರಿನಿಂದ ತಲೆಮಾರಿಗೆ ತಾನು ಅಂತರ್ಗತಗೊಳಿಸಿಕೊಂಡ ಒಂದು ವಿಶಿಷ್ಠ ವಿಷಯಗಳು ಸಾಂಸ್ಕೃತಿಕ ಮಾನವಶಾಸ್ತ್ರದಲ್ಲಿ ಸೇರಿಕೊಳ್ಳುತ್ತವೆ.

ಮಾನವಶಾಸ್ತ್ರಜ್ಞನ ದೃಷ್ಟಿಯಿಂದ ಸಂಸ್ಕೃತಿ ಎನ್ನುವುದು ಮಾನವನ ಸಮಸ್ತ ಸಾಮಾಜಿಕ ಪರಂಪರೆಯನ್ನು ಚಿತ್ರಿಸುತ್ತದೆ. ನಮ್ಮ ದಿನನಿತ್ಯದ ರೀತಿ, ನೀತಿ, ಆಚಾರ, ವಿಚಾರ, ಕಲೆ, ಸಾಹಿತ್ಯ, ಧರ್ಮ, ಮನರಂಜನೆ ಮುಂತಾದವುಗಳ ವಲಯದಲ್ಲಿ ಸಂಸ್ಕೃತಿ ನೆಲೆಯನ್ನು ಕಾಣಬಹುದು.

ಆದಿಮಾನವನ ಬದುಕನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲಿದಾಗ ಅವನ ಸಾಧನೆಗಳೆಲ್ಲವೂ ಸಂಸ್ಕೃತಿ ಎಂಬ ಪದದ ವ್ಯಾಪ್ತಿಗೆ ಒಳಪಡುತ್ತವೆ. ಮಾನವ ತನ್ನ ವಿಕಾಸದ ಹಾದಿಯಲ್ಲಿ

ನಡೆಯುವಾಗ ತನ್ನ ಬದುಕಿಗೆ ಅವಶ್ಯವೆನಿಸುವ ಹೊಸ ಹೊಸ ವಸ್ತುಗಳನ್ನು ಶೋಧಿಸುತ್ತ ನಡೆದ ಅವನಿಗೆ ಭಾಷೆಗೂ ಮೊದಲು ಚಿತ್ರ ಸಂಕೇತಗಳು, ಭಾಷೆಯ ಸಾಧನೆ, ಬೆಂಕಿಯನ್ನು ಕಂಡುಕೊಂಡಿದ್ದು, ಬೇಟೆಯಾಡಿ ಬದುಕುತ್ತಿದ್ದವನು ಪಶುಪಾಲನೆ ಹಾಗೂ ಕೃಷಿಯನ್ನು ರೂಢಿಸಿಕೊಂಡಿದ್ದು, ಅವನು ಹಾಡು, ಕುಣಿತ, ಪ್ರಕೃತಿಯ ದೈವಶಕ್ತಿಯ ಎದುರಿನಲ್ಲಿ ಅಂಜಿ, ಅಳುಕಿ, ಹೋರಾಡಿ ಬೆಳೆದು ಬಂದಾಗ ರೂಢಿಸಿಕೊಂಡು ಸಂಪ್ರದಾಯ, ನಂಬಿಕೆ, ಉಪಾಸನೆ, ಆಚಾರಗಳನ್ನು ಗಮನಿಸಿದಾಗ ನಾಗರೀಕತೆ ಮತ್ತು ಸಂಸ್ಕೃತಿಗಳಲ್ಲಿ ವಿಶೇಷ ಅಂತರ ಕಂಡುಬರುವುದಿಲ್ಲ.

ಜಾನಪದದ ಬೇರನ್ನು ನಾವು ಇಲ್ಲಿಂದ ಗುರುತಿಸಬೇಕಾಗುತ್ತದೆ. ಮಾನವನ ಉದಯವಾದೊಡನೆಯೇ ಜಾನಪದದ ಉದಯವೂ ಆಯಿತು. ಅವನು ನಡೆದ ದಾರಿ, ನುಡಿದ ಹಾಡು, ಪಡೆದ ಸಾಧನ ಸಲಕರಣೆ ಎಲ್ಲವೂ ಬೆಳೆದಂತೆ, ಸಂಸ್ಕೃತಿ ವಿಕಾಸವಾದಂತೆ, ಜ್ಞಾನಸಾಧನೆ ಸಂವರ್ಧನೆಗೊಂಡಂತೆ ತಾವು ಬೆಳೆದವು. ಅವನ ಬದುಕಿನೊಡನೆ ಒಂದಲ್ಲ ಒಂದು ರೀತಿಯಲ್ಲಿ ಅವಿನಾವಸಂಬಂಧವನ್ನು ಉಳಿಸಿಕೊಂಡು ಬಂದವು.

ಜಾನಪದ ಎಂದರೇನು? ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಖಚಿತವಾದ ಅಭಿಪ್ರಾಯ ಇನ್ನೂ ಮೂಡಿಲ್ಲ. ಮಾನವಶಾಸ್ತ್ರದ ದೃಷ್ಟಿಯಿಂದ ಕೆಲವರು ಸಾಹಿತ್ಯ ದೃಷ್ಟಿಯಿಂದ ಕೆಲವರು ಜನಪದಕ್ಕೆ ವಿವರಣೆ ನೀಡಲು ಪ್ರಯತ್ನಿಸಿದ್ದಾರೆ. ಜಾನಪದ ಸಂಗ್ರಹ ಪಾಶ್ಚಾತ್ಯ ದೇಶಗಳಲ್ಲಿ ನೂರಾರು ವರ್ಷಗಳಿಂದ ನಡೆಯುತ್ತಿದ್ದರೂ ಆ ಶಾಸ್ತ್ರಕ್ಕೆ ಹೊಸ ಹೆಸರೊಂದು ಸೃಷ್ಟಿಯಾದದ್ದು ೨೦ನೇ ಶತಮಾನದಲ್ಲಿ. ಜನಪ್ರಿಯ ಪಳಿಯುಳಿಕೆಗಳು (Popular Antiquities) ಹಾಗೂ ಜನಪ್ರಿಯ ಸಾಹಿತ್ಯ (Popular Literature) ಎಂದು ಕರೆಯಲ್ಪಡುತ್ತದೆ. ಸಮಗ್ರ ವಿಷಯಗಳಿಗೆ Folklore ಎಂಬ ಪದವನ್ನು ಡಬ್ಲ್ಯೂ.ಜೆ. ಥಾಮ್ಸ್ ೧೮೪೬ರಲ್ಲಿ ಸೃಷ್ಟಿಸಿದ.[೨] ಈ ಹೆಸರಿನ ಸೃಷ್ಟಿ ತೀರ ಇತ್ತೀಚಿನದಾದರೂ ಜಾನಪದ ಮಾನವನ ಉದಯದಷ್ಟೆ ಹಳೆಯದು.

Folklore ನ್ನು ಕುರಿತ ಇದುವರೆಗಿನ ವಿವರಣೆಗಳಲ್ಲಿ 'Folk' ಗಿಂತ 'lore' ನ್ನು ಕುರಿತ ವಿವೇಚನೆಗಳೆ ಹೆಚ್ಚಾಗಿವೆ. ಜಾನಪದದ ನಿರ್ದಿಷ್ಟ ಸ್ವರೂಪವನ್ನು ಗುರುತಿಸಿದಾಗ ಈ 'Folk' ಶಬ್ದ ಕೂಡ ಮುಖ್ಯವಾದುದ್ದೆ. ಇಂಗ್ಲೀಷಿನ ಪ್ರಸಿದ್ಧ ಅರ್ಥಕೋಶಗಳು 'Folk' ಎನ್ನುವುದಕ್ಕೆ ಅನೇಕ ಅರ್ಥಗಳನ್ನು ಕೊಡುತ್ತವೆ. ಆಕ್ಸಪರ್ಡ್ ಅರ್ಥಕೋಶದ ಪ್ರಕಾರ-ಒಂದು ಮೂಲಕ್ಕೆ ಸೇರಿದ, ತಮ್ಮದೇ ಆದ ಪ್ರದೇಶ ಅಥವಾ ರಾಜ್ಯವನ್ನು ಪಡೆದ ಒಂದು ಜನಾಂಗಗಳ ಗುಂಪು. ತನ್ನದೇ ಆದ ಒಂದು ಸಮೂಹದ ಗುಣವನ್ನು ಪಡೆದುಕೊಂಡ ತನ್ನದೇ ಆದ ಸಂಪ್ರದಾಯ, ಕಲೆ, ಕೈಗಾರಿಕೆ, ಐತಿಹ್ಯ ನಂಬಿಕೆಗಳನ್ನು ತಲೆಮಾರಿನಿಂದ ತಲೆಮಾರಿಗೆ ಬದಲಾಗದಂತೆ ಉಳಿಸಿಕೊಂಡು ಬಂದ ಜನಸಮೂಹ.

ಸುಪ್ರಸಿದ್ಧ ಜಾನಪದ ವಿದ್ವಾಂಸ ರಾಲ್ಫ್ ಸ್ಟೀಲ್ ಬಾಗ್ಸ್ ನೀಡಿದ ಜನಪದದ ವ್ಯಾಖ್ಯಾನ ಈ ರೀತಿ ಇದೆ. " As a body materials Folklore in the lore, erudiction, knowledge or teachings of folk large social unit, kind red group, tribe, race or nation, primitive or civilized throughout its history."[೩]

ಮೂಲ ನಿವಾಸಿಗಳ ಅಥವಾ ನಾಗರಿಕರ ಯಾವ ವರ್ಗವಾದರೂ 'Folk' ಆಗಬಹುದು. ಪರಸ್ಪರ ಸಂಬಂಧವನ್ನು ಸಾಧಿಸಿಕೊಳ್ಳುವ ಸೂತ್ರವೊಂದರಿಂದ ಇವರೆಲ್ಲ ಬದ್ಧವಾಗಿರಬೇಕು.

Alan Dundes ಅವರ "The term 'Folk' can refer to any group of people whatsoever who share atleast one common factor'"[೪] ಎಂಬ ಅಭಿಪ್ರಾಯ ಜನಪದದ ಸ್ಪಷ್ಟ ಕಲ್ಪನೆಯನ್ನು ನೀಡುತ್ತದೆ.

ಸಾವಿರಾರು ಜೀವ ಸಂಕುಲಗಳ ನಡುವೆ ಮನುಷ್ಯ ಸೃಷ್ಟಿಯಾಗಿದ್ದಾನೆ. ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಸಮುದಾಯವು ತಳವೂರಿದ್ದೇ ಜನಪದವೆನ್ನಬಹುದು. ಜನರಿಗೆ ಸಂಬಂಧಪಟ್ಟಿದ್ದೆಲ್ಲವೂ ಜನಪದ ಎಂಬುದು ಬಹಳ ವರ್ಷಗಳಿಂದ ಚಲಾವಣೆಯಲ್ಲಿದೆ. ಜನಪದ ಶಬ್ದ ಸರಳವೂ ಹೌದು, ಸಂಕೀರ್ಣವೂ ಹೌದು. ಇದರಲ್ಲಿ ಜನ, ಜನರ ಭಾಷೆ, ಸ್ಥಳ, ದೇಶ, ಜಾತಿ, ಪಂಗಡ, ಆಚಾರ, ವಿಚಾರ, ಕಲೆ, ಸಾಹಿತ್ಯ, ವೃತ್ತಿ ಮೊದಲಾದವು ಅಡಕವಾಗಿವೆ. ಜನಪದ ನಿಂತ ನೀರಲ್ಲ. ಸಂಚಲನೆ, ಪರಿವರ್ತನೆ, ಸ್ವೀಕಾರ, ಕೊಡುಕೊಳೆ ಅದರ ಮೂಲ ಮಂತ್ರ. ಜನಪದ ಎಂಬ ಶಬ್ದಕ್ಕೆ ಹಳ್ಳಿಗಾಡು, ಬುಡಕಟ್ಟು ಎಂಬ ಅರ್ಥವಿದೆ.

ಶಾಂತಾದೇವಿ ಮಾಳವಾಡರ ಪ್ರಕಾರ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಜನಪದ ಸಾಹಿತ್ಯವಿದೆ. ಆ ಸಂಸ್ಕೃತಿಯ ಮೂಲಕ ಅಲ್ಲಿನ ಜನರ ಸಂಸ್ಕೃತಿಯನ್ನರಿಯಬಹುದು. ಅಲ್ಲದೇ ಜೀವನವು ಅರ್ಥಸೃಷ್ಟಿ, ಸಾಹಿತ್ಯವು ಶಬ್ದ ಸೃಷ್ಟಿ, ಜೀವನ ಅರ್ಥವನ್ನು ಸಾಹಿತ್ಯವು ಶಬ್ದಗಳಲ್ಲಿ ಮೂಡಿಸುವುದು.[೫] ಪ್ರಪಂಚದ ಪ್ರತಿಯೊಂದು ದೇಶದಲ್ಲಿಯೂ ನಾಗರೀಕತೆಯ ಪ್ರಭಾವಕ್ಕೊಳಗಾಗದ, ಸಂಸ್ಕೃತರಾದ ಅಶಿಕ್ಷಿತ ಜನಾಂಗಗಳಿರುತ್ತವೆ. ಅದಕ್ಕೆ ತನ್ನದೇ ಆದ ರೂಢಿ ಸಂಪ್ರದಾಯಗಳಿರುತ್ತವೆ. ರೀತಿ, ನೀತಿ, ವಿಧಿ ನಿಷೇಧಗಳಿರುತ್ತವೆ. ಕಥೆ, ಹಾಡು, ಒಡುಮ, ಒಗಟು, ಗಾದೆ, ಯಕ್ಷಗಾನ, ಬಯಲಾಟ, ಸಣ್ಣಾಟಗಳಿರುತ್ತವೆ. ವೈದ್ಯಮೂಲ, ಮಂತ್ರಗಳೂ ಇರುತ್ತವೆ. ಇವೆಲ್ಲಾ ಗ್ರಂಥಸ್ಥವಾಗದೆ ಉಳಿದಿರುವ ಬಾಯಿಂದ ಬಾಯಿಗೆ ಹರಿದುಬರುವಂತಹ ಕ್ರಿಯೆಗೆ ಜಾನಪದವೆನ್ನಲಾಗಿದೆ. ಇದು ಜನಸಾಮಾನ್ಯರ ಸಮಸ್ತ ತಿಳುವಳಿಕೆಯನ್ನು ಒಳಗೊಂಡಿರುತ್ತವೆ.[೬]

ಬಹುಪಾಲು ಅನಕ್ಷರಸ್ಥ ಜನಸಮೂಹದಿಂದಲೇ ತುಂಬಿರುವ ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ, ಜನತೆಯ ಸಮಗ್ರ ಅನುಭವ, ಆಲೋಚನೆಯ ಘನಿಭೂತ ಸ್ಥಿತಿಯ ಜಾನಪದವು

ನಿತ್ಯ ನಿರಂತರವಾಗಿ ತನ್ನ ಜೀವಂತಿಕೆಯನ್ನು ಕಂಠಸ್ಥ ಸಂಪ್ರದಾಯದ ಮೂಲಕ, ಆಯಾಯ ಪ್ರದೇಶ ಭಾಷೆ ಮತ್ತು ಜನಾಂಗದ ಜೀವಾಳದ ಹಿನ್ನೆಲೆಯಲ್ಲಿ ಉಳಿಸಿಕೊಳ್ಳುತ್ತಲೇ ಬರುತ್ತಿದೆ. ಜನಪದರ ಒಳಸುಳಿ ಮತ್ತು ಸ್ವಭಾವಗಳು ಇದ್ದಕ್ಕಿದ್ದಂತೆ ಪ್ರಕಟಗೊಳ್ಳುವುದಿಲ್ಲ. ಅವುಗಳಿಗೆ ಒಂದು ಒಳಒತ್ತಡ ಇರುತ್ತದೆ. ಒಳಒತ್ತಡವನ್ನು ಪ್ರಚೋದಿಸುವಂತೆ ಹೊರ ಒತ್ತಡಗಳೂ ಇರುತ್ತವೆ. ಹೀಗೆ ಒಳ-ಹೊರ ಒತ್ತಡಗಳು ಒಂದು ಇತಿಹಾಸ, ಜಾನಪದದ ಸ್ವಭಾವ, ಲಕ್ಷಣಗಳನ್ನು ಒಂದು ನಿರ್ದಿಷ್ಟ ವಿನ್ಯಾಸವನ್ನಾಗಿ ಮೂಡಿಸುತ್ತವೆ. ಇಂತಹ ಜಾನಪದ ವಿನ್ಯಾಸ ಕೇವಲ ಒಬ್ಬ ವ್ಯಕ್ತಿಯದಾಗಿರದೇ ಸಮೂಹದ್ದಾಗಿರುತ್ತದೆ. ಜನಪದರು ತಾವು ಬದುಕುತ್ತಿರುವ ಸುತ್ತಲಿನ ಸಮಾಜ ಮತ್ತು ಸಂಸ್ಕೃತಿಯಿಂದ ಪ್ರೇರೇಪಿತರಾಗಿರುತ್ತಾರೆ. ಏಕೆಂದರೆ ವ್ಯಕ್ತಿ ಸಮಾಜ ಮತ್ತು ಸಂಸ್ಕೃತಿಯಿಂದ ಈ ಸಂಬಂಧಗಳು ಒಂದಕ್ಕೊಂದು ತುಂಬಾ ಗಾಢವಾಗಿರುತ್ತದೆ.

ಭಾರತದಲ್ಲಿರುವಷ್ಟು ವೈವಿಧ್ಯಮಯ ಜನಪದ ಸಂಪತ್ತು ಜಗತ್ತಿನ ಯಾವುದೇ ರಾಷ್ಟ್ರದಲ್ಲಿ ಇಲ್ಲ. "ಹರಿಯ ಬಸಿರಿನಲ್ಲಿ ಬ್ರಹ್ಮಾಂಡ ಅಡಗಿರುವಂತೆ ಜಾನಪದ ಕುಕ್ಷಿಯಲ್ಲಿ ಜಗತ್ತೆಲ್ಲಾ ಹುದುಗಿದೆ."[೭] ಎಂದು ಜಾನಪದವನ್ನು ಕುರಿತು ದೇ. ಜವರೇಗೌಡರು ಹೇಳಿದ್ದಾರೆ.

ಜಾನಪದವೆಂಬುದು ಹೇಗೆ ನಿಷ್ಪತ್ತಿಯಾಯಿತು? ಇದರ ಮೂಲಕತೃ ಯಾರು? ಎಂಬುದಕ್ಕೆ ಒಂದು ಕುತೂಹಲಕಾರವಾದ ಕಥೆಯೊಂದನ್ನು ಎಸ್.ಆರ್.ನಾಯಕ್ ಅವರು ತಮ್ಮ ಜಾನಪದ ಸಿಂಹಾವಲೋಕನದಲ್ಲಿ ಹೀಗೆ ಹೇಳಿದ್ದಾರೆ, ಬೃಹತ್ ಕಥೆಯ ಗುಣಾಢ್ಯನು ವಿಂಧ್ಯದಲ್ಲಿ ಸಂಪರ್ಕಿಸಿದ ಮಾನವೇತರ ಯಕ್ಷರಾಕ್ಷಸ ಪಿಶಾಚಿಗಳು ಇನ್ನಾರು ಆಗಿರದೇ ಸಂಸ್ಕಾರಹೀನ ಕಾಡಾಡಿಗಳಾಗಿದ್ದರಂತೆ. ಗುಣಾಢ್ಯನು ಈ ಕಾಡಾಡಿಗಳ ಪೈಶಾಚಿಕ ಭಾಷೆಯನ್ನು ಕಲಿತನಂತೆ, ಕಾಣಭೂತಿಯೆಂಬ ಪಿಶಾಚಿಯಿಂದ ವರರುಚಿಯ ಕಥಾ ಸಮೂಹವನ್ನು ಇನ್ನಿತರ ವಿಂಧ್ಯವಾಸಿ ಕಾಡಾಡಿಗಳ ನಾಲಿಗೆಯ ಮೇಲಿದ್ದ ಲಕ್ಷಾಂತರ ಕಥೆಗಳನ್ನು ಸಂಗ್ರಹಿಸಿ, ಬೃಹತ್ ಕಥಾ ಸಂಹಿತೆಯನ್ನು ಸಿದ್ಧಪಡಿಸಿದನಂತೆ. ಏಳು ಲಕ್ಷ ಶ್ಲೋಕಗಳಿಂದ, ಏಳು ಸಂಪುಟದ ಗಾತ್ರ ಹಾಗೂ ವ್ಯಾಪ್ತಿಯನ್ನು ಪಡೆದ ಗ್ರಂಥ ಇದಾಗಿತ್ತಂತೆ. ಸಂಸ್ಕಾರಹೀನ ಪೈಶಾಚಿಕ ಭಾಷೆಯಲ್ಲಿದ್ದುದರಿಂದ ಶಾತವಾಹನ ದೊರೆ ಈ ಗ್ರಂಥಕ್ಕೆ ಗೌರವ ನೀಡಲಿಲ್ಲವಂತೆ. ರಾಜಮಾನ್ಯತೆ ದೊರಕದ ಕಾರಣ ವಿಹ್ವಲಗೊಂಡ ಮನಸ್ಸಿನವನಾಗಿ ಎಲ್ಲಾ ಕಥೆಗಳನ್ನು ಒಂದೊಂದನ್ನಾಗಿ ತನ್ನ ಶಿಷ್ಯರಿಗೆ ಓದಿ ಅವುಗಳನ್ನು ಮತ್ತೊಬ್ಬರಿಗೆ ತಿಳಿಸುವಂತೆ ಹೇಳಿದನಂತೆ. ಈ ಗುಣಾಢ್ಯನ ಕಥೆಯೇ ಭಾರತದ ಪ್ರಪ್ರಥಮ ಜಾನಪದ ಕಥೆಗಳ ಸಂಕಲನ. ಇವನೇ ಪ್ರಥಮ ಜಾನಪದ ಸಂಕಲನಕಾರ.

ಜಾನಪದವು ನಮ್ಮ ಬದುಕಿನಿಂದ ಬೇರೆಯಾಗಿ ನಿಂತಿಲ್ಲ. ಜಾನಪದ ನಿಜವಾದ ಬದುಕಿನ ದಾರಿಯನ್ನು ಮತ್ತು ಅದರ ನಿಲುವನ್ನು ನಿಚ್ಚಲಗೊಳಿಸುವುದೇ ಅದರ ಕೆಲಸ. ಜಾನಪದದ ಕಲೆ,

ಸಾಹಿತ್ಯ, ಹಾಡು, ಕಥೆ ಮುಂತಾದವುಗಳು ವ್ಯಕ್ತಿಯ ಒಳ ಅರಳುವಿಕೆಯ ಮೂಲಕ ಅವನ ಹೊರವಲಯವನ್ನು ಹಿಗ್ಗಿಸುತ್ತದೆ. ಮನುಷ್ಯ ಮನುಷ್ಯ ಸಂಬಂಧಗಳ ನಡುವಿರುವ ಬೇಲಿಯನ್ನು ಕಿತ್ತೆಸೆದು ಬಾಂಧವ್ಯವನ್ನು ಬೆಸೆಯುವ ಕೆಲಸವೇ ಇದರದು.

ಪಾಟರ್ ಜನಪದದ ಬಗ್ಗೆ ಹೀಗೆ ಹೇಳುತ್ತಾನೆ, ಇದು ಒಬ್ಬ ವ್ಯಕ್ತಿಯ ಬದುಕು ಮತ್ತು ಅವನ ಸುತ್ತಲಿನ ಸಮಾಜವನ್ನು ಒಳಗೊಂಡಿರುತ್ತದೆ. ಗತಕಾಲದ ನೆನಪುಗಳ ಜೀವನದಲ್ಲಿ ಮನುಷ್ಯರಿಗಲ್ಲದಿದ್ದರೆ ಆತನ ವರ್ತಮಾನ ಪರಿಪೂರ್ಣವಾಗಲಾರದು.

ಅದೇ ನಾಗರೀಕತೆ ಎಂಬ ಏಣಿಯ ಮೆಟ್ಟಿಲನ್ನು ಹತ್ತಿ ಮಾನವ ಜಾನಪದ ಸಂಪ್ರದಾಯವೆಂಬ ಕೆಳಗಿನ ನೆಲವನ್ನು ಒಮ್ಮೆ ತಿರುಗಿ ನೋಡಿದಾಗ ಅದರ ಗಟ್ಟಿಯಾದ ಪಳೆಯುಳಿಕೆಯ ಬಗ್ಗೆ ಅರ್ಥವಾಗುತ್ತದೆ ಎಂದಿದ್ದಾನೆ. ಒಂದು ಜನಾಂಗ ಅಥವಾ ಜನಸಮೂಹವನ್ನು ಜಾನಪದ ಎಂದು ಕರೆಯಲಾಗುತ್ತದೆ. ಆಯಾ ದೇಶಗಳಲ್ಲಿನ ಜನಾಂಗಗಳಿಗೆ ನಾಗರೀಕತೆಯ ಸಂಪರ್ಕವಿಲ್ಲದ್ದರಿಂದ ಅಜಗಜಾಂತರವಾಯಿತು. ಇಂತಹ ಜನಾಂಗಗಳಲ್ಲಿರುವ ಸಾಹಿತ್ಯವನ್ನು ಅಧ್ಯಯನ ಮಾಡುವುದೇ ಜಾನಪದ. ಅಂದರೆ ಜನಪದ ಒಂದು ಜನಾಂಗವನ್ನು ಸೂಚಿಸುವ ನಾಮಪದವಾದರೆ, ಜಾನಪದ ಅಂತಹ ಜನಾಂಗದ ಜೀವನ ವಿಧಾನವನ್ನು ಹೇಳುವ ಸಂಸ್ಕೃತಿಯಾಗಿದೆ.[೮]

ಜಾನಪದವೆಂಬುದು ಸಾಯಬಯಸುವ ಜೀವಂತ ಪಳೆಯುಳಿಕೆ. ಇದು ಶತಶತಮಾನಗಳ ಮತ್ತು ಯುಗಾಂತರಗಳ ದೀರ್ಘಾವಧಿಯಲ್ಲಿ ಗಳಿಸಿಕೊಂಡಂತಹ ಹಾಗೂ ಆಯಾ ಯುಗಧರ್ಮಗಳನ್ನು ಸಾರವಾಗಿ ಬದಲಾಗದೆ ಹಿಂದೆ ಬಿದ್ದಂತಹ ಮಾನವಾನುಭವ. 'ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಹಿಂಜರಿಕೆಯ ಫಲ' ಎಂದು ಚಾರ್ಲ್ಸ್ ಫ್ರಾನ್ಸಿಸ್ ಪಾಟರ್ ಹೇಳಿದ್ದಾರೆ.[೯]

ಹಿಂದಿನ ಕಾಲದಲ್ಲೆಲ್ಲಾ ಬದಲಾವಣೆಯು ಮಂದಗತಿಯಿಂದಾಗಿ ಮತ್ತೆಮತ್ತೆ ತಲೆದೋರುತ್ತಿದ್ದುದರ ಫಲವಾಗಿ ಪ್ರಾಚೀನ ಸಂಪ್ರದಾಯಗಳು ಮತ್ತು ನಂಬಿಕೆಗಳು ರೂಪುಗೊಳ್ಳಲು ದೀರ್ಘಾವಧಿ ಹಿಡಿಯುತ್ತಿತ್ತು. ಅವು ಜನಾಂಗಿಕ ಸುಪ್ತ ಪ್ರಜ್ಞೆಯೊಳಗೆ ಆಳವಾಗಿ ಬೇರೂರಲು ಸಮಯ ಬೇಕಾಗುತ್ತಿತ್ತು.

ಈ ಬಗೆಯ ಪುರಾತನ ನಮೂನೆ ಮತ್ತು ಮಂಡಲಗಳು ಕೈಯಿಂದ ನುಣುಪುಗೊಳಿಸ್ಪಲ್ಪಟ್ಟು, ಮರಗೆಲಸದ ಸಲಕರಣೆಗಳಂತೆ ಪರಿಪಕ್ವತೆ ಮತ್ತು ಮೃದುತ್ವಗಳನ್ನು ಪಡೆದಿದ್ದು, ಅನಂತರದ ನಾಗರೀಕತೆಯ ತೀವ್ರತರ ನವ ಆಘಾತಗಳನ್ನು ಸಹಿಸಿಕೊಂಡು ಅವು ಉಳಿದುಕೊಂಡು ಬಂದಿರುತ್ತವೆ. ಅವನ್ನು ನಾವು ಆಕಸ್ಮತ್ತಾಗಿ ಪತ್ತೆ ಹಚ್ಚಿದಾಗ ತಮ್ಮ ಅಪೂರ್ವ ಸೌಂದರ್ಯದಿಂದ ನಮ್ಮ ಬೆರಗುಗೊಳಿಸತಕ್ಕ ವಸ್ತು ಸಂಗತಿಗಳು ಅವಾಗಿರುತ್ತವೆ. ಅವುಗಳನ್ನು ಪ್ರಕೃತಿಗೆ ಸಮೀಪವಾಗಿ

ಸಾವಧಾನದಿಂದ ರೂಪಿಸಿದ ಕಾರಣ, ಅವು ಸುಂದರವಾಗಿರುವುದರ ಜೊತೆಗೆ ಪ್ರಕೃತಿಯ ಸಮದಾತ ಸ್ಥಿತಿ ಮತ್ತು ಸರಳತೆಗಳನ್ನು ಒಡಮೂಡಿಸಿಕೊಂಡಿರುತ್ತವೆ. ಹೀಗಾಗಿ ಜನಪದ ವಿಷಯವು ಒಂದು ದೃಷ್ಟಿಯಿಂದ ಹಿಂದೆ ಪುರಾತನ ಸಂಗತಿಗಳನ್ನು ನಾವು ಹೇಗೆ ಬಳಸುತ್ತಿದ್ದೆವು ಮತ್ತು ಈಗ ಅವನ್ನು ಹೇಗೆ ಬಳಸಬಹುದು ಎಂಬುದನ್ನು ಕುರಿತದ್ದೇ ಆಗಿದೆ. ಎಂತಲೇ ಜಾನಪದ ಕ್ಷೇತ್ರ ಮಕ್ಕಳ ರಸೋಲ್ಲಾಸ ಕ್ಷೇತ್ರವಾಗಿದೆ. ಏಕೆಂದರೆ ಅದರ ಒಂದು ಜನಾಂಗದ ಬಾಲ್ಯಾವಸ್ಥೆಯ ಕಾವ್ಯಾತ್ಮಕ ವಿವೇಕವಾಗಿರುತ್ತದೆ. ಹಾಗೆಯೇ ಹಿರಿಯರು ತಮ್ಮ ಜೀವನ ಚಕ್ರವನ್ನು ಪೂರ್ಣಗೊಳಿಸುವುದಿಲ್ಲ. ತುಂಬಾ ಸರಳತೆಯ ಮೂಲಕ ತಮ್ಮ ಯೌವ್ವನವನ್ನು ಪುನರುಜ್ಜೀವಿಸುವುದಿಲ್ಲ. ಜಾನಪದ ಕ್ಷೇತ್ರವು ಆನಂದದಾಯಕವಾಗಿರುತ್ತದೆ.

ಬಾಲಕರ ಜೊತೆ ಪ್ರಬಲವಾದ ಸ್ತ್ರೀಲಕ್ಷಣವು ಕೂಡ ಜಾನಪದ ಕ್ಷೇತ್ರದಲ್ಲಿ ನಿಚ್ಚಳವಾಗಿದೆ. ಹೇಗೆಂದರೆ ಈ ಕ್ಷೇತ್ರದ ಉಗಮ ಮಾನವನಲ್ಲಿ ವೈಚಾರಿಕತೆ ಮೊಳೆಯುವ ಪೂರ್ವದಲ್ಲಿಯೇ ಆಗಿರುತ್ತಿದ್ದು ಅದು ಮಾನವನ ಮೂಲ ಪ್ರೇರಣೆ ಮತ್ತು ಪ್ರತಿಭಾ ವಲಯಗಳಿಗೆ ಸಂಬಂಧಿಸಿರುತ್ತವೆ. ಜಾನಪದ ಕ್ಷೇತ್ರ ಅತ್ಯಂತ ಅತಾರ್ಕಿಕವೂ ತುಂಬಾ ಭಾವುಕವೂ ಆದಂತಹದ್ದು. ಎಂತಲೇ ಅದರ ಬಹುಪಾಲನ್ನು ಅಜ್ಜಿಯ ಕಥೆಗಳು ಎಂದು ಕರೆದಿರುವುದು ಸಮಂಜಸವಾಗಿದೆ. ಏಕೆಂದರೆ ಸ್ತ್ರೀಯರು ನಂಬಿಕೆ, ಧಾರ್ಮಿಕಾಚರಣೆ, ಮೂಢನಂಬಿಕೆ ಮತ್ತು ಸಂಪ್ರದಾಯ ಮೊದಲಾದ ಪಾರಂಪರಿಕ ಸಂಗತಿಗಳ ಸದಾ ಸಂರಕ್ಷಕರೂ, ವಾರಸುದಾರರೂ ಅವುಗಳ ಮೂಲರೂಪ ಸಂಗೋಪನಾಸಕ್ತಿಯರು ಆಗಿದ್ದಾರೆ. ಅನುಭವಿಕ ಜಾನಪದ ತಜ್ಞನೊಬ್ಬನು ಎಂದಿಗೂ ಪ್ರಾಚೀನ ಜೀವನವನ್ನು ಸಂಧಾನಮಾರ್ಗದ ಪೋಷಕನಾಗಲಾರನು.

ಜೊನಾಸ್ ಬೇಲೀಸ್ ಎಂಬ ವಿದ್ವಾಂಸರು "Folklore is not a science about a folk, but the traditional folk science and folk poetry" ಜಾನಪದ ಜನಪದವನ್ನು ಕುರಿತ ಜ್ಞಾನವಲ್ಲ, ಅದು ಪರಂಪರಾಗತ ಜನಪದ ವಿಜ್ಞಾನ ಮತ್ತು ಜನಪದ ಕಾವ್ಯ ಎಂದಿದ್ದಾರೆ.

ಮೇರಿಯಸ್ ಬಾರ್ಬೊ ಅವರು "ಗ್ರಂಥಸ್ಥ ಮೂಲಕ್ಕೆ, ಮುದ್ರಣಕ್ಕೆ ಶಾಲಾ ಉಪಾಧ್ಯಾಯರಿಗೆ ಸಂಬಂಧಪಡದೇ ತಲೆಮಾರಿನಿಂದ ತಲೆಮಾರಿಗೆ ಹಿರಿಯರಿಂದ ಕಿರಿಯರಿಗೆ, ನಿದರ್ಶನ ಮೂಲಕ ಅಥವಾ ಮಾತಿನ ಮೂಲಕ ಸಾಗಿಬರುವ ಹಿಂದಿನ ಜ್ಞಾನ, ಅನುಭವ ಜಾಣ್ಮೆ, ಕೌಶಲ್ಯ, ಹವ್ಯಾಸ ಹಾಗೂ ಆಚರಣೆಗಳೆಲ್ಲಾ ಜಾನಪದ ಎಂದು ಹೇಳಿದ್ದಾರೆ.[೧೦]

ರಿಚರ್ಡ್ ಎಂ. ಡಾರ್ಸ್‌ನ ಅವರು "ಜಾನಪದ ಭೂತಕಾಲದ ಪ್ರತಿಧ್ವನಿಯಾಗಿರುವಂತೆ, ವರ್ತಮಾನ ಕಾಲದ ಕಸುವುಳ್ಳ ಧ್ವನಿಯೂ ಆಗಿದೆ. ಜಾನಪದ ಪರಿಕಲ್ಪನೆಯ ಬಗೆಗೆ ಸ್ಪಷ್ಟವಾಗಿ ತಿಳಿದುಕೊಂಡಿದ್ದ ಇವರ ಪ್ರಕಾರ ಜಾನಪದ ಜೀವಂತವಾದ, ಸ್ವತಂತ್ರವಾದ, ಪರಿಷ್ಕೃತವಾದ ಅಧ್ಯಯನಕ್ಕೆ ಯೋಗ್ಯವಾದ ಅತ್ಯಾಧುನಿಕವಾದ ಜ್ಞಾನದ ಕ್ಷೇತ್ರವಾಗಿದೆ" ಎಂದಿದ್ದಾರೆ.[೧೧]

ಅನೇಕರು ತಮ್ಮ ಬದುಕಿನಲ್ಲಿ ಹೊಸ ಸಾಮರಸ್ಯವೊಂದರ ಮೂಲಕ ಸಮ್ಮಿಶ್ರ ಸಂಸ್ಕೃತಿಯನ್ನು ಸೃಷ್ಟಿಸಬಲ್ಲರು. ಯಾವ ಆಸ್ಥಾನದ ಕವಿಗಳಿಗೂ ಕಡಿಮೆ ಇಲ್ಲದ ಈ ಜನಪದರು ತಮ್ಮ ಹೆಸರನ್ನು ಎಲ್ಲಿಯೂ ಹೇಳಿಕೊಳ್ಳದೆ ಕಾಡು ಕುಸುಮದಂತೆ ಅರಳಿ ಪರಿಮಳ ಸೂಸಿದ್ದಾರೆ. ಇವರು ಯಾರನ್ನು ವೈಯಕ್ತಿಕವಾಗಿ ಹೊಗಳದೆ, ದೇವ, ದೇವಿ ಹಾಗೂ ತಮ್ಮ ಆರಾಧ್ಯ ದೈವಗಳ ಮೇಲೆ ಶ್ರದ್ಧಾಭಕ್ತಿಯನ್ನಿರಿಸಿ ಸಹಜವಾಗಿ ತಮ್ಮ ಕಾವ್ಯ, ಕಥನ, ಹಾಡು, ಒಗಟು ಇತ್ಯಾದಿಗಳನ್ನು ರಚಿಸಿದ್ದಾರೆ. ಅವರ ಚಿಂತನೆಯಲ್ಲಿ ನೈಜ ವಿಚಾರಧಾರೆಗಳನ್ನು ಕಾಣಬಹುದು.

'ಜಾನಪದ ಸಾಹಿತ್ಯ ನಿರಾಭರಣ ಸುಂದರಿ, ಅದಕ್ಕೆ ಅಲಂಕಾರದ ಭಾರವಿಲ್ಲ, ಪರಂಪರೆಯ ಗುಲಾಮತನವಿಲ್ಲ, ಸಮಯಾದಿಗಳ ಜಂಜಾಟವಿಲ್ಲ, ಅನುಕರಣೆಗಳ ಮುದವತ್ತಿಲ್ಲ. ನಿತ್ಯ ನಿಸರ್ಗಕ್ಕೆ ಸದಾ ಕಣ್ಣು ತೆರೆದಿದೆ. ಅದರಲ್ಲಿ ಸುಳಿದಾಡುತ್ತಿರುವ ಜನವಾಣಿ, ಕುಣಿದಾಡುತ್ತಿರುವ ಜನಜೀವನ ಉಸಿರಾಡುತ್ತಿರುವುದು ನಮ್ಮ ಸಂಸ್ಕೃತಿ' ಎಂದು ಬಿ.ಎಸ್.ಗದ್ದಗಿಮಠ ಅವರು ತಮ್ಮ ಜಾನಪದ ಗೀತೆಗಳು ಪುಸ್ತಕದಲ್ಲಿ ಹೇಳಿದ್ದಾರೆ. ಶಿಷ್ಟ ಸಂಸ್ಕೃತಿಯ ಪ್ರತಿಯೊಂದು ಸಾಂಸ್ಕೃತಿಕ ಸೃಷ್ಟಿಯೂ ಸಹ ಮೇಲಿನಿಂದ ಹೇರಲ್ಪಟ್ಟಿದೆ. ರಾಜ, ಪುರೋಹಿತ, ರಾಜನೀತಿಜ್ಞರಿಂದ ಈ ಶಿಷ್ಟ ಸಂಸ್ಕೃತಿಯು ನಿಯಂತ್ರಿಸಲ್ಪಟ್ಟು ವ್ಯಕ್ತಿಗಳನ್ನು ತನ್ನ ಆವರಣಕ್ಕೆ ಸೆಳೆದುಕೊಳ್ಳುತ್ತಿರುತ್ತದೆ. ಆದರೆ ಜನಪದ ಸಂಸ್ಕೃತಿಯು ತನ್ನ ಒಟ್ಟು ಸಮುದಾಯದ ಮೂಲಕ ಸ್ವೀಕರಿಸಿದ ಸಂಪ್ರದಾಯ, ನಂಬಿಕೆ, ಹಾಡು, ಕುಶಲ ಕೈಗಾರಿಕೆ ಮುಂತಾದ ಅಂದಿನ ವ್ಯಾಪ್ತಿಯಲ್ಲಿ ವ್ಯಕ್ತಿಯನ್ನು ಪಳಗಿಸುತ್ತಿರುತ್ತದೆ. ಎಷ್ಟೋ ವೇಳೆ ನಮ್ಮ ಶಿಷ್ಟ ರಚನೆ, ಅಭಿವ್ಯಕ್ತಿಗಳು ಮತ್ತು ಜನಪದ ಕಲಾತ್ಮಕ ಅಭಿವ್ಯಕ್ತಿಗಳ ನಡುವೆ ಸ್ಪಷ್ಟ ಗೆರೆಗಳನ್ನು ಎಳೆಯಲು ಆಗುವುದಿಲ್ಲ. ಜಾನಪದ ಸಾಹಿತ್ಯ ರೂಪಕಗಳು ಶಿಷ್ಟ ಸಾಹಿತ್ಯ ರೂಪಕಗಳಿಗಿಂತ ಕಳೆಯವು ಎಂದು ಬಗೆಯಬಾರದು. ಅಷ್ಟೇ ಅಲ್ಲ ಮಾನವೀಯ ಚಟುವಟಿಕೆಗಳಲ್ಲಿಯೂ ಅವರ ಮೇಲ್ಮೈಯನ್ನು ಅನಕರ್ಷಿದಂತಾಗುತ್ತದೆ.

ಶಿಷ್ಟಪದ ದೇವರನ್ನು ತಂದೆ-ತಾಯಿ ಎಂಬ ಅಲೌಕಿಕತೆಯನ್ನು ಸಾರಿದರೆ, ಜಾನಪದ ತಂದೆ-ತಾಯಿಗಳೇ ಪ್ರತ್ಯಕ್ಷ ದೇವರು ಎಂದು ಸಾರುತ್ತದೆ. ಶಿಷ್ಟ ಸಂಸ್ಕೃತಿ ಎಂದರೆ ಸಿದ್ಧ ಸಂಸ್ಕೃತಿ. ಶಿಷ್ಟ ಸಾಹಿತ್ಯ ಕಟ್ಟಿದವನ ಕೃತಿಯಾಗಿ ನಿಂತರೆ, ಜನಪದ ನಡೆನುಡಿಗಳಲ್ಲಿ ಪಾರದರ್ಶಕತೆ ಇರುವುದರಿಂದ ಅಲ್ಲಿ ಕವಿ ಕೃತಿಗಳ ಮಧ್ಯೆ ಅಂತರ ಕಡಿಮೆ. ಶಿಷ್ಟಪದದಲ್ಲಿ ಈ ಅಂತರ ಜಾಸ್ತಿ. ಜಾನಪದ ಸಾಹಿತ್ಯ ಸೌಂದರ್ಯಕ್ಕಿಂತ ಸಂದೇಶಕ್ಕೆ, ಬಾಹ್ಯವೇಶಕ್ಕಿಂತ ಭಾವಾವೇಶಕ್ಕೆ ಪ್ರಾಧಾನ್ಯತೆ ನೀಡುವುದು.

ಇಂಗ್ಲೀಷ್‌ನ ಬುಕ್‌ಲೋರ್ (Booklore) ಪದಕ್ಕೆ ಕನ್ನಡದಲ್ಲಿ ಶಿಷ್ಟಪದ ಅಥವಾ ಗ್ರಂಥಪದ ಎಂಬ ಶಬ್ದವು ಸಂವಾದಿಯಾಗಿ ಬಳಕೆಗೊಂಡಿದೆ. ಅಕ್ಷರದಿಂದ ವೈಯಕ್ತಿಕ ರಚನೆಗಳನ್ನು ಶಿಷ್ಟಪದವೆಂದು ಕರೆಯಲಾಗುತ್ತದೆ. ಶಿಷ್ಟ ಎಂದರೆ ಸಜ್ಜನ, ಸಂಪ್ರದಾಯ ಎಂದು ಕರೆಯಲಾಗಿದೆ.

ಶಿಷ್ಟ ಎಂದರೆ ಒಂದು ಪರಂಪರೆಯ ಪಳೆಯುಳಿಕೆಯಲ್ಲಿ ಸ್ವಲ್ಪ ಬದಲಾವಣೆ ಪಡೆದದ್ದು ಎಂದರ್ಥ. ವೈದಿಕರು ತಮ್ಮದೇ ಆದ ನೀತಿ ನಿಯಮಗಳನ್ನು ಲೆಕ್ಕಾಚಾರದ ಅಲೆಯಲ್ಲಿ ರೂಢಿಗತಗೊಳಿಸಿ ಒಂದು ಚೌಕಟ್ಟನ್ನು ನಿರ್ಮಿಸಿದ್ದರು. ಅದರಂತೆ ಸಾಹಿತ್ಯ, ಕಲೆ, ನೃತ್ಯ, ಸಂಗೀತ, ಹಾಡು ಮುಂತಾದವುಗಳೆಲ್ಲ ಶಿಷ್ಟ ಸಂಸ್ಕೃತಿಯ ತಳಹದಿಯ ಮೇಲೆ ನಿರ್ಮಾಣಗೊಂಡಿವೆ. ಕಲೆಗಾಗಿ ಎಂಬ ಮಾತು ಕಲೆ, ಸಾಹಿತ್ಯ, ಸಂಗೀತ ಸಾಧ್ಯತೆಗಳನ್ನು ಮೊಟುಕುಗೊಳಿಸುವುದೇ ಆಗಿದೆ. ಇಂತಹ ಸಾಹಿತ್ಯ, ಕಲೆ, ಸಂಗೀತ ಮುಂತಾದವುಗಳೆಲ್ಲಾ ಶಿಷ್ಟ ಸಂಸ್ಕೃತಿ ಚೌಕಟ್ಟಿನೊಳಗೆ ನರಳಿ ಅನೇಕ ಇತಿಮಿತಿಗಳನ್ನು ಪಡೆದುಕೊಂಡಿವೆ. ಅಕ್ಷರ-ಅನಕ್ಷರ ಪರಂಪರೆಯನ್ನು ನಾವು ಶಿಷ್ಟಪದ ಎಂದು ಗುರುತಿಸುತ್ತೇವೆ. ಇದರಲ್ಲಿ ಮೊದಲನೆಯ ಶಿಷ್ಟಪದವು ಸ್ವಲ್ಪ ಅಪಾಯಕಾರಿಯಾಗಿದೆ. ಮಾತ್ರವಲ್ಲ, ತನ್ನ ನೆಲೆಯಲ್ಲಿ ನಿಂತೇ ಅದು ಜಾನಪದವನ್ನು ವ್ಯಾಖ್ಯಾನಿಸುತ್ತದೆ. ಇದು ಅಕ್ಷರ ಪರವಾಗಿರುವವರ ಅರ್ಥ.

ಜಾನಪದ ಸಾಹಿತ್ಯವು ಭಾಷೆಯಷ್ಟೇ ಪ್ರಾಚೀನ. ಶಿಷ್ಟ ಪದ ಸಾಹಿತ್ಯವು ಅದರ ಬರಹದಷ್ಟು ಪ್ರಾಚೀನವೆಂದು ಹೇಳಬಹುದು. ಯಾವುದೇ ಗ್ರಂಥಸ್ಥ ಭಾಷೆಯಲ್ಲಿ ಜನಪದ ಸಾಹಿತ್ಯ ಹುಟ್ಟಿ ಎಷ್ಟೋ ವರ್ಷಗಳು ಕಳೆದ ಬಳಿಕ ಶಿಷ್ಟಪದ ಸಾಹಿತ್ಯ ಹುಟ್ಟಿಕೊಂಡಿದೆ. ಹಿಂದೆ ಮಾರ್ಗ ಸಂಪ್ರದಾಯವು ಸಾಹಿತ್ಯದಲ್ಲಿ ಸಮಗ್ರತೆಯನ್ನು ತರಬೇಕೆಂದು ಅಷ್ಟಾದಶ ವರ್ಣನೆಗಳ ಹರಹನ್ನು ಹಾಕಿಕೊಂಡಿತು. ಆದರೆ ಮಾರ್ಗಿಯರ ಆಯ್ಕೆ ಈ ಮನೋಭಾವ, ಕಡ್ಡಾಯ ವರ್ಣನೆಗಳಲ್ಲಿ ಸೋತು ಹೋಯಿತು. ನಮ್ಮ ಶಿಷ್ಟ ಕಾವ್ಯಗಳ ಸೂಳೆಗೇರಿಗಳು ಅರ್ಥವಿಲ್ಲದ ವರ್ಣನೆಗಳಾಗಿ ಗ್ರಂಥ ಭಾರವಾಗಿದ್ದು, ಇದಕ್ಕೆ ಉದಾಹರಣೆ ಹೇಳಿಕೊಳ್ಳುವ ಒಂದೇ ಒಂದು ಉತ್ತಮ ಪದ್ಯ ಸೂಳೆಗೇರಿ ವರ್ಣನೆಯಲ್ಲಿ ಬರೆಯಲು ನಮ್ಮ ಶಿಷ್ಟಕವಿಗಳಿಗೆ ಸಾಧ್ಯವಾಗಿಲ್ಲ. ಸಾಹಿತ್ಯದ ವಿರುದ್ಧವಾಗಿ ಜನಪದ ಸಾಹಿತ್ಯ ಮಾತ್ರ ಯಾವುದೇ ವಸ್ತುವಿನ ಜೊತೆ ಮುಕ್ತವಾದ, ಮುಕ್ತಸಂವಾದ ನಡೆಸಬಲ್ಲದು.

ಶಿಷ್ಟ ಸಾಹಿತ್ಯವು ವಿದ್ವತ್ ಸಮೂಹದಲ್ಲಿ, ಜನಪದ ಸಾಹಿತ್ಯ ಜನಸಮೂಹದಲ್ಲಿ ಪ್ರಸಾರ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ದುಡಿಮೆ, ವಿರಾಮ, ಹಬ್ಬ-ಹುಣ್ಣಿಮೆಗಳ ನೆಪದಿಂದ ವೇಗವಾಗಿ ವ್ಯಾಪಕವಾಗಿ ಸಂಸ್ಕೃತಿ ಪ್ರಸಾರ ಕಾರ್ಯವನ್ನು ನಿರ್ವಹಿಸುವ ಜಾನಪದ ಸಾಹಿತ್ಯ ಪ್ರಬಲ ಸಮೂಹ ಮಾಧ್ಯಮ. ಶಿಷ್ಟ ಸಾಹಿತ್ಯದಲ್ಲಿ ಆಯಾ ಕೃತಿಗಳು ಭೌಗೋಳಿಕ ಪರಿಸರ ತಿಳಿದಿರುವುದರಿಂದ ಪರಂಪರೆಗಳನ್ನು ಗುರುತಿಸುವ ಸಾಧ್ಯತೆಗಳು ಹೆಚ್ಚಾಗಿ ಕಂಡುಬರುತ್ತದೆ. ಆದರೆ ಜನಪದ ಸಾಹಿತ್ಯಕ್ಕೆ ಅದರ ಭೌಗೋಳಿಕ ಪರಿಸರ ಹಾಗೂ ಕವಿ ಅನಾಮಧೇಯನಾಗಿದ್ದರಿಂದ ಪ್ರತಿಯೊಂದು ಪಾಠವನ್ನು ಭಿನ್ನ ಪಾಠವೆಂದು ಅರಿಯಬೇಕಾಗುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿ ತಮ್ಮ ಸಮಕಾಲೀನತೆಯೊಂದಿಗೆ ತನಗೆ ಕಂಡುಬಂದ ವಸ್ತುವನ್ನು ಕುರಿತು ತಕ್ಷಣ ಹಾಡಾಗಿ ಪರಿವರ್ತಿಸಿ ಅದನ್ನು ಅಭಿವ್ಯಕ್ತಿಸುವಲ್ಲಿ ಸಫಲನಾಗುತ್ತಾನೆ. ಆದ್ದರಿಂದ ಪರಂಪಾರಗತವಾಗಿ ಬಂದಿರುವ

ವಸ್ತುವನ್ನು ನೋಡುವ ಶಿಷ್ಟ ಸಾಹಿತ್ಯ ಬಿಡುವಿನ ವೇಳೆಯಲ್ಲಿ ಹುಟ್ಟಿದರೆ ಜಾನಪದ ಸಾಹಿತ್ಯ ದುಡಿಯುವ ವೇಳೆಯಲ್ಲಿ ಹುಟ್ಟಿದೆ. ಶಿಷ್ಟ ಸಾಹಿತ್ಯ ಸಿದ್ಧ ಸಾಹಿತ್ಯ ಹಾಗೂ ಶುದ್ಧ ಸಾಹಿತ್ಯವಾದರೆ ಜನಪದ ಸಾಹಿತ್ಯ ಬದುಕಿಗೆ ಬದ್ಧವಾದ ಸಾಹಿತ್ಯವಾಗಿದೆ.

ಯಾವ ದೇಶ, ಭಾಷೆ ಸಾಹಿತ್ಯವಾದರೂ, ಜನಪದರ ಸತ್ಯಸಾರ, ಸಹಾಯ, ಸಹಕಾರ, ಸ್ಫೂರ್ತಿ, ಪ್ರಭಾವ ಪ್ರೇರಣೆಗಳಿಂದಲೇ ಪೋಷಿಸಿಕೊಂಡು ಬೆಳೆದುಬಂದಿದೆ. ಕಾರಣ ಯಾವುದೇ ದೇಶದ ಮೊದಲ ಸಾಹಿತ್ಯ ಜನಪದ ಸಾಹಿತ್ಯವಾಗಿದೆ. ಆದುದರಿಂದ ಶಿಷ್ಟ ಸಾಹಿತ್ಯ ಎನ್ನುವುದೆಲ್ಲವೂ ಜನಪದ ಸಾಹಿತ್ಯದ ನೆರಳಲ್ಲಿ ಆಶ್ರಯಿಸುತ್ತಾ ಬಂದಿದೆ. "ಹೋಮರ್, ವಾಲ್ಮೀಕಿ, ವ್ಯಾಸ, ಕವಿಗಳೆಲ್ಲರೂ ಅಜ್ಞಾತ ಜಾನಪದ ಕವಿಗಳಿಗೆ ನಾನಾ ರೀತಿಯಲ್ಲಿ ಋಣಿಯಾಗಿದ್ದರೆಂಬುದು ಅತ್ಯಂತ ಮುಖ್ಯ ಸಂಗತಿ ಎನ್ನಬಹುದು. ಕೆಲವೊಂದು ಸಂದರ್ಭದಲ್ಲಿ ಶಿಷ್ಟ ನಿಂತ ನೀರಾದಾಗ ಅದಕ್ಕೆ ಜನಪದ ಸಾಹಿತ್ಯ ಅದರ ಮೇಲೆ ಹರಿದು ಹೊಸತನ ತುಂಬುವ ಪ್ರಯತ್ನ ಮಾಡಿದೆ. ವರ್ಡ್ಸ್‌ವರ್ಥ್, ಬರ್ನ್ಸ್, ಸ್ಕಾಟ್, ಶೆಲ್ಲಿ, ಕುಮಾರವ್ಯಾಸ, ಲಕ್ಷ್ಮೀಶ, ವಚನಕಾರರು, ದಾಸರು ಈ ಮಾತಿಗೆ ಸಾಕ್ಷಿಗಳಾಗಿದ್ದಾರೆ."[೧೬]

ನಮ್ಮ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತವಾಗಲಿ, ಗ್ರೀಸಿನ ಇಲಿಯಡ್ ಮತ್ತು ಓಡಿಸ್ಸಾಗಳಾಗಲೀ, ಮೂಲತಃ ಜನಪದ ಕಾವ್ಯಗಳಾಗಿವೆ. ಇವುಗಳ ಕರ್ತೃ ವಾಲ್ಮೀಕಿ, ವ್ಯಾಸ ಮತ್ತು ಹೋಮರ್ ಆಗಿದ್ದರೂ, ಮೊದಲು ಈ ಕಾವ್ಯಗಳನ್ನು ಜನಪದರು ತಮ್ಮದೇ ಹಾಡಿನ ದಾಟಿಯಲ್ಲಿ ಹಾಡುತ್ತಿದ್ದಾಗ ಬಾಯಿಂದ ಬಾಯಿಗೆ ತೇಲಿಬರುತ್ತಿದ್ದವು. ಕಾಲಾನುಕ್ರಮದಲ್ಲಿ ಶಿಷ್ಟ ಕವಿಗಳು ಇವುಗಳನ್ನು ಪರಿಶೋಧಿಸಿ ಗ್ರಾಂಥಿಕ ಶಬ್ದಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದರು.

ಜನಪದ ಸಾಹಿತ್ಯ ಪಂಡಿತ ವರ್ಗದಿಂದ ತಿರಸ್ಕೃತವಾದರೂ, ಪಂಡಿತಾಭಿಮಾನಿಯಾದಾಗ ಸಾಹಿತ್ಯಾಭಿಮಾನಿಯಾದಾಗ ಸಂವೇದನೆಗೆ ಹತ್ತಿರವಾದ ಜಾನಪದ ಸಾಹಿತ್ಯವನ್ನೇ ಬಳಸಿದರು. ಮಾರ್ಗ ಪ್ರಭಾವಕ್ಕೆ ಸಿಕ್ಕ ಶಿಷ್ಟಪದ ಕಾವ್ಯ ಲಿಖಿತದ ನಿರ್ದಿಷ್ಟ ರೂಪ ಪಡೆಯುತ್ತಾ ಹೋದರೆ, ಮೌಖಿಕ ಚಲಾವಣೆಯಿಂದಾಗಿ, ಪ್ರಸರಣ ಗುಣದಿಂದಾಗಿ ಜನಪದ ಸಾಹಿತ್ಯ ನಿರಂತರ ಪರಿವರ್ತನೆಗೆ ಒಳಗಾಗುತ್ತಲೇ ಹೋಗುತ್ತದೆ.[೧೭]

ಧರ್ಮನೀತಿ ವಿಶ್ವಕೋಶದ ಸಂಪಾದಕರಾದ ಜೇಮ್ಸ್ ಹೆಸ್ಟಿಂಗ್ಸರು ಜಾನಪದ-ರಾಜ್ಯದ ಅತವಾ ರಾಷ್ಟ್ರೀಯ ಜೀವನ ದಾಖಲೆ ಇತಿಹಾಸವಾದರೆ, ಜನಪದ ಸಾಹಿತ್ಯವು ಪ್ರಾಗೈತಿಹಾಸಿಕ ಜೀವನದ ಪರಂಪರಾಗತ ಸಂಗತಿಯಾಗಿದೆ.

ಐತಿಹಾಸಿಕ ದಾಖಲೆಗಳು ತಪ್ಪೆನಿಸಿದ ಅನೇಕ ಕಡೆಗಳಲ್ಲಿ ಅದನ್ನು ತುಂಬಿಕೊಳ್ಳಲು ಸಾಂಪ್ರದಾಯಿಕ ದಾಖಲೆಗಳನ್ನು ಅವಲಂಬಿಸಬಹುದಾಗಿದೆ. ದಂತಕಥೆಗಳಿಗೂ ಯಾವುದೋ

ಒಂದು ಆಧಾರ ಇದ್ದೇ ಇರುತ್ತದೆ. ಅವು ಕೇವಲ ಕಲ್ಪನಾ ಕೃತಿಗಳಲ್ಲ ಎಂಬುದನ್ನು ನಿಶ್ಚಿತವಾಗಿ ಹೇಳಬಹುದು. ಇದಲ್ಲದೆ ಜಾನಪದ ಕಥೆಗಳು ಜನಾಂಗದ ಪುರಾಣಗಳು, ವಿಜ್ಞಾನ ಯುಗಕ್ಕೂ ಹಿಂದಿನ ವಿಜ್ಞಾನವು ಅದ್ಭುತಗಳ ಬಗ್ಗೆ ನೀಡಿದ ವಿವರಣೆಗಳೇ ಪುರಾಣಗಳು. ಪ್ರಾಚೀನ ತಿಳುವಳಿಕೆ ಹಾಗೂ ನಿರೀಕ್ಷೆಗಳು ನೀಡಿದ ಇಂತಹ ವಿವರಗಳಿಂದಲ್ಲದೇ ಈ ಅದ್ಭುತಗಳನ್ನು ತಿಳಿದುಕೊಳ್ಳುವುದು ಸಾಧ್ಯವಾಗದು ಎಂದಿದ್ದಾರೆ.

ಐತಿಹಾಸಿಕ ಸಂಗತಿಗಳು ಜನಾಂಗದ ಸ್ಥಿತಿಗತಿಗಳನ್ನು ಹೇಳಲು ತಪ್ಪಿದರೆ, ಸಂಪ್ರದಾಯಗಳು ಅವುಗಳನ್ನು ಹೇಳಿ, ಇಲ್ಲಿಯವರೆಗೆ ತುಂಬುತ್ತಾ ಬಂದಿವೆ. ಜಾನಪದ ಕಥೆಗಳೇ ಜನಾಂಗದ ಪೌರಾಣಿಕ ಕಥೆಗಳು. ಹಿಂದಿನ ಯುಗದಲ್ಲಿ ವಿಜ್ಞಾನವು ಹೇಳಿದ ಸೃಷ್ಟಿಯ ಅನೇಕ ಸಂಗತಿಗಳನ್ನು ಪೌರಾಣಿಕ ಕಥೆಗಳು ಹೇಳಲು ಪ್ರಯತ್ನಿಸಿವೆ. ಜಾನಪದ ಸಾಹಿತ್ಯದ ವಿಶಾಲತೆಯನ್ನು ವರ್ಣಿಸುತ್ತಾ ಈಗಿನ ಜನರು ಜನಪದದ ಸತ್ಯಸಾರವನ್ನು ಅರಿಯದೇ ಅಲಕ್ಷ್ಯ ಮಾಡಿದ್ದಕ್ಕೆ ಗ್ರಂಥಕಾರರು ಕಾರಣಗಳನ್ನು ಹೇಳಿದ್ದಾರೆ. "ಆದರೆ ಆಧುನಿಕ ಪಾಂಡಿತ್ಯವು ಪ್ರಾಚೀನ ವಿಜ್ಞಾನ ಅಥವಾ ಮರೆತು ಹೋದ ಕರ್ಮತಂತ್ರಗಳ ಬಗೆಗಿನ ಧಾರ್ಮಿಕ ವಿವರಗಳ ಜ್ಞಾನಕ್ಕೆ ಹೊರತಾಗಿರುವುದರಿಂದ ಅದು ಇಡೀ ವಿಷಯವನ್ನೇ ಕಸದಬುಟ್ಟಿಗೆ ಒಗೆಯಲಾರದು. ವಿದ್ವಾಂಸರು ಅದನ್ನು ವಿವರಿಸಲು ತಮ್ಮ ಅಸಾಮರ್ಥ್ಯವನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು ಮತ್ತು ಮುಂದಿನ ಪೀಳಿಗೆಯವರ ಇನ್ನೂ ಯಶಸ್ವಿಯಾದ ಪ್ರಯತ್ನಗಳಿಗೆ ವಿಷಯವನ್ನು ಅಷ್ಟಕ್ಕೆ ಬಿಟ್ಟುಕೊಡಬೇಕು.

ಜಿ.ಎಲ್. ಗೊಮ್ಮೆ ಎಂಬ ಇಂಗ್ಲೀಷ್ ಜಾನಪದ ವಿದ್ವಾಂಸ ತನ್ನ "Handbook of folklore"ಎಂಬ ಗ್ರಂಥದಲ್ಲಿ ಅದರ ವೈಶಿಷ್ಟ್ಯತೆಗಳನ್ನು, ವಿಶಾಲತೆಯನ್ನೂ ಸುದೀರ್ಘವಾಗಿ ಚರ್ಚಿಸಿ ಕಡೆಗೆ ಜಾನಪದ ಸಾಹಿತ್ಯವೆಂದರೆ "The comparision and identification of the survivals in modern age of archaic belief, customs and traditions"ಎಂದು ಹೇಳಿದ್ದಾನೆ.[೧೮]

ರಿಚರ್ಡ್ ಎಂ. ವ್ಯಾಟರ್‌ಮ್ಯಾನ್, ವಿವಿಧ ಜನವರ್ಗಗಳಲ್ಲಿ ರೂಢಿಯಲ್ಲಿರುವ ಕಥೆಗಳು, ಗಾದೆಗಳು, ಸೂಕ್ತಿಗಳು, ಸೊಳ್ನಡಿಗಳು, ಗೀತೆಗಳು, ಮಂತ್ರೋಚ್ಚಾರಗಳು ಮತ್ತು ವಾಗ್ರೂಪಿ ಭಾಷೆಯ ಇತರ ಸಾಂಪ್ರದಾಯಿಕ ನುಡಿಗಟ್ಟುಗಳೇ ಆದಿಯಾಗಿ ವಾಗ್ರೂಪಿ ಭಾಷೆಯ ಮುಖಾಂತರ ಅಭಿವ್ಯಕ್ತಿಗೊಳಿಸತಕ್ಕ ಒಂದು ಕಲಾಪ್ರಕಾರವೇ ಜಾನಪದಶಾಸ್ತ್ರ ಎಂದಿದ್ದಾನೆ.

ಇಂಗ್ಲೆಂಡ್, ಅಮೇರಿಕಾ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳ ವಿಶ್ವವಿದ್ಯಾಲಯಗಳಲ್ಲಿ ಜಾನಪದ ಸಾಹಿತ್ಯಕ್ಕೆ ಸ್ಥಾನ ಕೊಟ್ಟಿದ್ದಾರೆ. ಆರ್.ಎಸ್.ಬಾಗ್ಸ್ ಅವರು "ಭಾಷೆ ಮತ್ತು ಸಾಹಿತ್ಯಾಭ್ಯಾಸ" ಎಂಬ ಪುಸ್ತಕದಲ್ಲಿ "ವಿಶ್ವವಿದ್ಯಾಲಯದಲ್ಲಿ ಜಾನಪದ ಸಾಹಿತ್ಯದ ಬೆಳವಣಿಗೆ" ಎಂಬ ಲೇಖನದಲ್ಲಿ

ಪದವೀಧರರು ಈ ವಿಷಯವನ್ನು ಕುರಿತು ಅಭ್ಯಾಸ ಮಾಡುವುದನ್ನು ಹೇಳಿ ಕೊನೆಯಲ್ಲಿ ಸರಕಾರ ನೇಮಿಸಿಕೊಳ್ಳುವ ಉತ್ತಮ ತರಬೇತಿ ಹೊಂದಿದ ಜಾನಪದ ಕವಿಗಳ ಮಾರ್ಗದರ್ಶನವಿದ್ದಾಗಲೂ ಭಿನ್ನ ಭಿನ್ನ ಸಂಪ್ರದಾಯದ, ಸಂಸ್ಕೃತಿಯ ಅಂಶಗಳನ್ನೊಳಗೊಂಡ ಗುಂಪುಗಳನ್ನು ಏಕರಾಶಿ ಗೊಳಿಸುವಲ್ಲಿಯೂ, ಹಾಗೆಯೇ ರಾಷ್ಟ್ರಗಳ ಪರಸ್ಪರ ತಿಳುವಳಿಕೆ ಹಾಗೂ ಸ್ನೇಹವನ್ನು ಸಂವರ್ಧನೆಗೊಳಿಸುವಲ್ಲಿಯೂ ಅದು ಸಾಕಷ್ಟು ಪ್ರಯೋಜನಾಕಾರಿಯಾಗಿದ್ದರೂ, ರಾಜಕೀಯ ಪ್ರಚಾರ ಕ್ಷೇತ್ರದಲ್ಲಿ ಮಾತ್ರ ಜನಪದ ಸಾಹಿತ್ಯದ ಮುಂದಿನ ಬೆಳವಣಿಗೆಯನ್ನು ನಾನು ಕುತೂಹಲದಿಂದ ನಿರೀಕ್ಷಿಸುತ್ತೇನೆ ಎಂದಿದ್ದಾರೆ. "ಪ್ರಾಗೈತಿಹಾಸಿಕ ಕಾಲದಿಂದಲೂ ಭಾರತವು ಅಪಾರವಾದ ಜನಪದ ಸಾಹಿತ್ಯ ಸಂಪತ್ತನ್ನು ಪಡೆದುಕೊಂಡಿದೆ. ಭಾಸನನ್ನು ಮೊದಲುಗೊಂಡು ಮುಂದಿನ ಕವಿಗಳೆಲ್ಲರೂ ಇದರಿಂದ ಬೇಕಾದಷ್ಟು ಸಾಮಗ್ರಿಯನ್ನು ಎರವಲು ಪಡೆದಿದ್ದಾರೆ. ಎಲ್ಲಾ ಸಾಹಿತ್ಯಗಳಲ್ಲಿ ಸಂಸ್ಕೃತ ಪ್ರಾಕೃತ ಅಪಭ್ರಂಶ ಪ್ರಾಚೀನ ಮತ್ತು ಅರ್ವಾಚೀನ ಯಾವುದೇ ಇರಲಿ ಜನತಾ ಸಾಹಿತ್ಯ ಬಂಗಾರದ ಎಳೆಗಳಿಂದ ಮಿನುಗುತ್ತಿದೆ."

ಜಾನಪದ ಸಮಸ್ತ ಜೀವನ ಕ್ರಮವನ್ನು ತಲಸ್ಪೃಷ್ಟಿಯಾಗಿ ವೈಜ್ಞಾನಿಕವಾಗಿ ಪರಿಚಯ ಮಾಡಿಕೊಡುವ ಕೆಲಸ ಇನ್ನೂ ಆಗಬೇಕಿದೆ. ಜನಪದಕ್ಕೂ ಜನಪದ ಸಂಸ್ಕೃತಿಗೂ ಸಾಹಿತ್ಯಕ್ಕೂ ನಿಕಟ ಸಂಬಂಧವಿರುವುದರಿಂದ ಜಾನಪದರ ಸಂಸ್ಕೃತಿಯನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಜಾನಪದ ವೈದ್ಯ, ಜಾನಪದ ನುಡಿಕಟ್ಟು, ಆಚರಣೆ, ನಂಬಿಕೆ, ಸಂಪ್ರದಾಯ, ಜಾನಪದ ಕಲೆ, ಜಾನಪದ ಕಸುಬು, ಹಬ್ಬಹರಿದಿನ, ಮದುವೆ ಮುಂಜಿ ಹಾಗೂ ಉಡುಗೆ ತೊಡುಗೆಗಳು, ಒಟ್ಟಿನಲ್ಲಿ ಸಮಗ್ರ ಜಾನಪದವನ್ನು ವೈಜ್ಞಾನಿಕವಾಗಿ ಅಭ್ಯಾಸ ಮಾಡಬೇಕಾಗುತ್ತದೆ.

ಥಿಯೋಡರ್ ಹೆಚ್. ಗ್ಯಾಸ್ಟರ್ ಅವರು ಜಾನಪದರ ಪರಂಪರಾಗತ ಸಂಸ್ಕೃತಿಯು ಹರಿಕಾರಿಯಂತೆ ಜನಪದ ಸಲುವಳಿ ಪಡೆಯುತ್ತದೆ. ಜಾನಪದ ಮೂಲಭೂತವಾಗಿ ಜಾನಪದರಿಂದ, ಜಾನಪದರಿಗಾಗಿ ಹಾಗೂ ಜಾನಪದರದೇ ಆದುದು ಗಮನಾರ್ಹ. Folklore is that part of people's culture, which is preserved constantly or un constantly in beliefs and practices custom and observations of general currency, in myths, legends and tales of common acceptance and in arts and crafts which express the temper and geneous of a group rather then an individual ... folklore serves as a constant source and frame of reference for more formal literature and art, but it is distinct there form in that is essentially of the people, by the people and for the people (Standard dictionary folklore Vol.1 P.309)

ಚಾರ್ಲ್ಸ್ ಫ್ರಾನ್ಸಿಸ್ ಅವರ ಹೇಳಿಕೆಗಳು ಜಾನಪದದ ಅಮರತ್ವ ಹಾಗೂ ಸತ್ಯಗಳನ್ನು ರಂಜಕವಾಗಿ ತಿಳಿಸುತ್ತವೆ. "Folklore is lively fossil which refers to die it is a precipitate of human experiences"[೧೯] ಒಂದು ಜನಪದ ಸಮಾಜದಾದ್ಯಂತ ರೂಢಿಯಲ್ಲಿರುವ ನೃತ್ಯ, ಗೀತೆ, ಕಥೆ, ಪುರಾಣ, ಸಂಪ್ರದಾಯ, ಮೂಢನಂಬಿಕೆ ಮತ್ತು ಗಾದೆನುಡಿಗಳು–ಇವೆಲ್ಲವನ್ನು ಜಾನಪದ ಒಳಗೊಳ್ಳುತ್ತದೆ. ಅದು ಪರಂಪರಾಗತ ಒಕ್ಕಲತನ ಪದ್ಧತಿ ಮತ್ತು ಕುಟುಂಬ ನಿಯಮಗಳ ಅಧ್ಯಯನವನ್ನು ಜನಪದರ ಮನೆಮಾರು, ಮಡಕೆ, ಕುಡಿಕೆಗಳ ರೂಪವಿನ್ಯಾಸ, ನೀತಿ–ನಿಯಮಗಳನ್ನು ಅವರ ರೂಢಿಗತ ಸಾಮಾಜಿಕ ವ್ಯವಸ್ಥೆಯನ್ನು ಒಡಮೂಡಿಸಿಕೊಂಡಿರುತ್ತದೆ ಎಂದು ವಿವರಿಸುವ ವಿಖ್ಯಾತ ಜಾನಪದ ತಜ್ಞ ಸ್ಮಿತ್ ಥಾಮ್ಸನ್ ಅವರ ಅಭಿಪ್ರಾಯ ಜನಸಾಮಾನ್ಯವಾಗಿದೆ.

ಜಾನಪದ ತಜ್ಞರಾದ ಎಂ.ಎಂ.ಎಸ್ಪಿನೋಜ ಅವರು ಜನಸಾಮಾನ್ಯರ ನಂಬಿಕೆಗಳು, ನಡಾವಳಿಗಳು, ಗಾದೆ, ಒಗಟು, ಪುರಾಣ, ಧಾರ್ಮಿಕ ಆಚರಣೆಗಳು, ಮಾಟಮಂತ್ರ ಮುಂತಾದ ಅನೇಕ ಅಂಶಗಳನ್ನು ಜಾನಪದ ಒಳಗೊಳ್ಳುತ್ತದೆ. ಜಾನಪದದ ತಾಯಿಬೇರು ತುಂಬಾ ಆಳಕ್ಕಿಳಿದಿರುತ್ತವೆ. ಆದ್ದರಿಂದ ಅದರ ಗುರುತುಗಳನ್ನು ಅತ್ಯುನ್ನತ ಸಾಂಸ್ಕೃತಿಕ ಸ್ತರವನ್ನು ತಲುಪಿದ ನಾಗರೀಕ ಜನತೆಯಲ್ಲಿಯೂ ಕಾಣಬಹುದು. ಜಾನಪದ ಆದಿಮಾನವನ ಮನದ ಅತ್ಯಂತ ಸಮೀಪದ ಹಾಗೂ ನೇರವಾದ ಅಭಿವ್ಯಕ್ತಿಯೆಂದು ಭಾವಿಸಿಕೊಳ್ಳಬಹುದು ಎಂದು ವಿವರಿಸಿರುವುದೂ ಗಮನಾರ್ಹ.

ಧರ್ಮ ಮತ್ತು ನೀತಿ ವಿಶ್ವಕೋಶದಲ್ಲಿ ಹಾಗೂ ಬ್ರಿಟಾನಿಕ ವಿಶ್ವಕೋಶದಲ್ಲಿ ಜಾನಪದವನ್ನು ಕುರಿತು ಪ್ರಸಿದ್ಧ ಜಾನಪದ ತಜ್ಞರು ಕೊಟ್ಟಿರುವ ವಿವರಣೆಯೂ ಗಮನಾರ್ಹ. ವಾಸ್ತವವಾಗಿ ಜಾನಪದವನ್ನು ಕುರಿತು ಪ್ರಸ್ತಾಪಿಸಲಾಗಿರುವ ಪ್ರತಿಯೊಂದು ಗ್ರಂಥದಲ್ಲಿಯೂ ಜಾನಪದರಲ್ಲಿ ಪರಂಪರೆಯಿಂದ ಉಳಿದು ಬೆಳೆದು ಬಂದಿರುವ ನಂಬಿಕೆ, ನಡಾವಳಿಗಳನ್ನು, ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ಜಾನಪದರಿಗೇ ವಿಶಿಷ್ಟವಾಗಿರುವ ಜೀವನ ಕಲೆಯನ್ನು ತಪ್ಪದೇ ಸೂಚಿಸಿರುವುದನ್ನು ಕಾಣಬಹುದು. ಆದ್ದರಿಂದ ಜಾನಪದವೆಂಬುದು ಜನಪದರ ಪರಂಪರಾಗತ ಸಮಸ್ತ ಜೀವನ ಕ್ರಮವನ್ನು ಅಭ್ಯಾಸಮಾಡುವ ಮಾನವಿಕ ವಿಜ್ಞಾನವೆಂಬುದಂತೂ ಸ್ಪಷ್ಟ. ೧೯ನೆಯ ಶತಮಾನದಲ್ಲಿ ಆಂಗ್ಲ ವಿದ್ವಾಂಸರು ಹಲವಾರು ತಮ್ಮ ಪ್ರಾಚೀನ ಜನಪದ ಪರಂಪರೆಯನ್ನರಿತುಕೊಂಡು, ಅದು ಅಳಿದು ಹೋಗದಂತೆ ಮಾಡುವ ಸಲುವಾಗಿ ಇಂಗ್ಲೆಂಡಿನಲ್ಲಿ ಒಂದು ಆಂದೋಲನವನ್ನು ಮಾಡಿದರು. ಹಳೆಯ ವಿಷಯವನ್ನು ಕುರಿತು, ಹೊಸ ವೈಜ್ಞಾನಿಕ ಪ್ರಚೋದನೆ ದೊರೆತು ಭಾರತೀಯರು ತಮ್ಮ ಜಾನಪದರ ಜೀವನ ವಿಧಾನವನ್ನು ಕುರಿತು ತೀವ್ರವಾಗಿ ಪರ್ಯಾಲೋಚಿಸಲು ಅವಕಾಶವಾಯಿತು. ಈ ಒಂದು ಹೊಸ ವಿಜ್ಞಾನವನ್ನು ಬೆಳೆಸಲು ಸಹಾಯವಾಯಿತು.

ಜಾನಪದವನ್ನಾಗಲೀ ಅಥವಾ ಜನಪದ ಸಾಹಿತ್ಯವನ್ನಾಗಲೀ ಅಭ್ಯಾಸ ಮಾಡುವ ಅಗತ್ಯವೇನಿದೆ? ದಿನದಿನಕ್ಕೆ ಅಳಿದು ಹೋಗುತ್ತಿರುವ ಹಳೆಯದಾಗುತ್ತಿರುವ ಹಳ್ಳಿಗಳ ಸಂಗತಿಗಳನ್ನು ತಿಳಿಯದಿದ್ದರಾಗದೇ? ಸತ್ಯಸಂಗತಿಗಳನ್ನು ಮರೆತು ತೆಪ್ಪಗಿದ್ದರಾಗದೇ? ಇಂತಹ ಸಂಗತಿಗಳು ಕೆಲವರಿಗಾದರೂ ಹುಟ್ಟಬಹುದು. ಆದರೆ ವಾಸ್ತವವಾಗಿ ಜಾನಪದದಂತಹ ಪಾರಂಪರಿಕ ವಿಜ್ಞಾನ ಎಂದೋ ಆಗಿಹೋದಂತಹ ಸಂಗತಿಗಳನ್ನು ಮಾತ್ರ ಕುರಿತದ್ದಲ್ಲ. ಇವತ್ತಿಗೂ ತಾಯಿಬೇರಿನ ರೂಪದಲ್ಲಿ ಉಳಿದು ಆಧುನಿಕ ರೂಪಧರಿಸಿ ಹೊರಹೊಮ್ಮುವ ಸನಾತನ ಸತ್ಯಸಂಗತಿಗಳನ್ನು ಅರಿಸುವಂತಹದ್ದು. ಇದರ ಅಧ್ಯಯನದಿಂದ ಜನಪದರ ಪ್ರಾಚೀನ ಜೀವನ ಚರಿತ್ರೆಯನ್ನು ಯಾವ ಇತಿಹಾಸಕಾರನೂ ಎಂದೂ ಬರೆದಿಡುವಂತ ಮಾನವೇತಿಹಾಸವನ್ನು ಅತ್ಯಂತ ಸಮೀಪದಿಂದ ತಿಳಿದುಬರುತ್ತದೆ. ಆಧುನಿಕ ಸಂಸ್ಕೃತಿಯ ಇನ್ನೊಂದು ಮುಖವನ್ನು ಜನಪದ ಸಮಾಜ ತೆರೆದು ತೋರುತ್ತದೆ. ಈ ವಿಜ್ಞಾನದ ಬೆಳವಣಿಗೆಗೆ ಚಾಲನೆ ನೀಡಿದ ಡಬ್ಲ್ಯೂ.ಜೆ.ಥಾಮ್ಸ್‌ನಿಂದ ಹಿಡಿದು ಇಂದಿನವರೆಗೆ ಜಾನಪದೀಯ ವಿಷಯದಲ್ಲಿ ಆಸಕ್ತರಾದ ಪ್ರತಿಯೊಬ್ಬ ವಿದ್ವಾಂಸರೂ ಜಾನಪದ ಕ್ಷೇತ್ರದ ಮಹತ್ವವನ್ನು ಹೇಳಿದ್ದಾರೆ. ಜಾನಪದೀಯ ವಸ್ತು ವಿಷಯಗಳ ಬಗೆಗೆ ಅನಾದರ ಸಲ್ಲದೆಂದು ಆಗ್ರಹಪಡಿಸಿದ್ದಾರೆ. ಇವೆಲ್ಲಕ್ಕಿಂತ ಮುಖ್ಯವಾಗಿ, ಜಾನಪದ ಅಧ್ಯಯನದಿಂದ ನಮ್ಮನ್ನು ನಾವೇ ಚೆನ್ನಾಗಿ ಅರಿತುಕೊಳ್ಳುವುದು ಸುಲಭವಾಗುತ್ತದೆ. ಇಂತಹ ಸ್ವ ಆತ್ಮಜ್ಞಾನ ಪ್ರತಿಯೊಬ್ಬರಿಗೂ ಅವಶ್ಯ. ಜೊತೆಗೆ ಮಾನವ ಜೀವನ ಮೂಲಭೂತ ಅಂಶಗಳನ್ನು ಜಾನಪದ ತಿಳಿಯಪಡಿಸುವುದರಿಂದ ಅದರ ಅಧ್ಯಯನ ಎಲ್ಲರಿಗೂ ಲಾಭದಾಯಕ ಎಂದು ಮುಂತಾಗಿ ವಿವರಿಸುವುದು ಲಕ್ಷಾರ್ಹ.

ಆಚಾರ್ಯ ಬಿ.ಎಂ.ಶ್ರೀ. ಅವರು ಈ ರೀತಿಯಾಗಿ ಹೇಳಿದ್ದಾರೆ. "ಕನ್ನಡ ಭಾಷೆಯಲ್ಲಿ ಕೂಡ, ಮೊದಲಿಗೆ ಕನ್ನಡ ಜನಪದ ಸಾಹಿತ್ಯ ನಿರ್ಮಾಣವಾಗಿದ್ದಿರಬೇಕು. ಕ್ರಮೇಣ ಅದು ಪ್ರೌಢ ಸಾಹಿತ್ಯದ ಪ್ರಾಬಲ್ಯದಿಂದ ಜನಪದ ಸಮಾಜದಲ್ಲಿಯೇ ನೆಲೆ ನಿಲ್ಲುವಂತಾಗಿರಬೇಕು." ಕನ್ನಡ ಜನಪದ ಅಷ್ಟೇ ಏಕೆ ವಿಶ್ವ ಜನಪದರ ನಿತ್ಯಜೀವನದಲ್ಲಿ ಪ್ರಮುಖವಾಗಿ ಕಂಡುಬರುವ ಗುಣಲಕ್ಷಣಗಳು ಮೂರು– ದೈವಭಕ್ತಿ, ಭೂಮೋಹ ಮತ್ತು ಸಂಪ್ರದಾಯ ನಿಷ್ಠೆ. ಆದರೆ ಸಾಂಸ್ಕೃತಿಕವಾಗಿ ಒಂದೇ ಪ್ರಾಂತ್ಯಕ್ಕೆ ಒಂದೇ ಸಮಾಜಕ್ಕೆ ಸೇರಿದ ಜನಪದರಿಗೂ ನಾಗರೀಕರಿಗೂ ನಿತ್ಯಜೀವನ ಕ್ರಮದಲ್ಲಿಯೇ ಬಹಳಷ್ಟು ವ್ಯತ್ಯಾಸಗಳಿರುತ್ತವೆ. ಈ ಬಗೆಗೆ ಅಧಿಕಾರವಾಣಿಯಿಂದ ನುಡಿದಿರುವ ಕ್ರೋಬರ್ ಅವರ ಅಭಿಪ್ರಾಯಗಳು ಗಮನಾರ್ಹವಾಗಿವೆ.[೨೦]

Finally it is folk societies that are specially dominated in their culture and their behaviour by the folkways, their moral and religious source is therefore strong. They belive in the sacred things, their sense of right and wrong springs from unconscious roots of social feelings

and is therefore a reasoned compulsive and strong Narrowness, depth and intensity are the qualities of folk culture.[೨೧]

ಪಾಶ್ಚಾತ್ಯರು ಭಾರತದಲ್ಲಿ ಜಾನಪದ ಅಧ್ಯಯನವನ್ನು ೧೮ನೇ ಶತಮಾನದಲ್ಲಿಯೇ ಆರಂಭಿಸಿದ್ದಾರೆ. ಇದರಿಂದ ಭಾರತೀಯರ ಜೀವನಾದರ್ಶಗಳನ್ನು ಸರಿಯಾಗಿ ತಿಳಿಯಲು ಸಾಧ್ಯವಾಯಿತು. ಈ ನಿಟ್ಟಿನಲ್ಲಿ ಸರ್.ವಿಲಿಯಂ ಜೋನ್ಸ್ ಅವರ ಸೇವೆ ಸ್ಮರಣಾರ್ಹ. (ಭಾರತೀಯಶಾಸ್ತ್ರದ ಅಧ್ಯಯನದ ಉದ್ದೇಶದಿಂದ ೧೭೮೪ರಲ್ಲಿ ಕಲ್ಕತ್ತದಲ್ಲಿ ಸರ್.ವಿಲಿಯಂ ಜೋನ್ಸ್, ಕೋಲ್‌ಬ್ರೂಕ್, ಅಬೆದುಬೊಯಿ, ವಿಲಿಯಂ ಕ್ರೂಕ್ ಮುಂತಾದ ವಿದ್ವಾಂಸರು ದುಡಿದರು) ವಿಶೇಷವಾಗಿ ಕನ್ನಡ ಜಾನಪದ ಸಾಹಿತ್ಯವನ್ನು ಒಳಗೊಂಡಂತೆ ದ್ರಾವಿಡ ಜಾನಪದ ಸಾಹಿತ್ಯ ಹಾಗೂ ದ್ರಾವಿಡ ಸಂಸ್ಕೃತಿಗಳ ಅಧ್ಯಯನ ಅವಶ್ಯಕತೆಯನ್ನು ೧೮೭೧ಕ್ಕಿಂತ ಮುಂಚಿತವಾಗಿ ಮನಗಂಡು ಈ ಜನತೆಯ ಅನೇಕ ಜನಪದ ಗೀತೆಗಳನ್ನು ಸಂಗ್ರಹಿಸಿ ಜಾನಪದರನ್ನು ಸಂದಿಸಿ ದ್ರಾವಿಡ ಜನಪದ ಸಾಹಿತ್ಯ, ಸಂಸ್ಕೃತಿಗಳನ್ನು ಇನ್ನೂ ಕಡೆಗಾಣಿಸುವುದು ತರವಲ್ಲ ಎಂಬುದು ಗಂಭೀರವಾಗಿ ಎಚ್ಚರಿಸಿ ೧೮೭೧ರಲ್ಲಿ 'Folklore of Southern India' ಎಂಬ ಗ್ರಂಥವನ್ನು ಪ್ರಕಟಿಸಿದ. ಆ ಮುಖಾಂತರವಾಗಿ ದಕ್ಷಿಣ ಭಾರತದ ಜಾನಪದ ಜಗತ್ತಿನಲ್ಲಿ ವಿದ್ವಾಂಸರ ಗಮನ ಸೆಳೆದ ಚಾರಲ್ಸ್ ಇ. ಗೋವರ್ ಎಂಬಾತನಿಗೆ ನಾವು ತುಂಬಾ ಋಣಿಗಳಾಗಿದ್ದೇವೆ.

'ಜನವಾಣಿಯೇ ಜನಾರ್ಧನ ವಾಣಿ' ಎಂಬ ಮಾತು ಭಾಷೆಗೆ ಹೆಚ್ಚಿನ ಗೌರವ ತಂದುಕೊಟ್ಟಿದೆ. ಜನರ ನುಡಿಗಳು ಸಾಹಿತ್ತಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಹೆಚ್ಚಿಸಿವೆ. ಬಿ.ಎಂ.ಶ್ರೀ. ಅವರು ಜನವಾಣಿಯ ಬೇರು ಕವಿವಾಣಿಯ ಹೂ ಎಂದು ತಿಳಿಸಿರುವುದು ಜನಪದ ಸಂಪತ್ತನ್ನು ಹೆಚ್ಚಿಸಿದೆ. ಕನ್ನಡ ನೆಲದ ಜನಪದ ಇನ್ನೂ ಹಸಿರಾಗಿ ಬೆಳೆಯುತ್ತಿದೆ. ಸಂಶೋಧಿಸಿದಷ್ಟು ಜಾನಪದ ಸಂಪತ್ತು ದೊರಕುತ್ತಿದೆ. ಜಾನಪದವೊಂದು ಪ್ರಾಚೀನ ಬ್ರಹ್ಮಾಂಡ ಆಧುನಿಕ ಶಾಖೆಗಳ ಬೇರುಗಳಿಗೆ ಅದೇ ತಾಯಿ ನೆಲ. ಅದು ಸಂಸ್ಕೃತಿಯ ತಲಕಾವೇರಿ. ಜನಾಂಗ, ವಿಜ್ಞಾನ, ಕಾನೂನುಶಾಸ್ತ್ರ ಮೊದಲಾದ ಶಾಸ್ತ್ರಗಳ ಪುನರ್‌ರಚನೆಗೆ ಅದರ ನೆರವು ಅತ್ಯಮೂಲ್ಯವಾದುದು. ಶಿಷ್ಟ ಸಾಹಿತ್ಯಕ್ಕಿಂತಲೂ ಅದು ಮಾತೃಸ್ಥಾನದಲ್ಲಿದೆ. ಶಿಷ್ಟ ಸಾಹಿತ್ಯ ಕ್ಷೇತ್ರದಲ್ಲಿ ಅಂದಕಾರ ಮುಸುಕಿದಾಗ, ತಮ್ಮ ಪ್ರತಿಭೆ ನಿಷ್ಕ್ರೀಯಗೊಂಡಾಗ ಪುಷ್ಕನ್, ಗಗೋಲ್, ಟರ್ಗಿನೇವ್, ಟಾಟ್‌ಸ್ಟಾಯ್, ಮಾಕ್ಸಿಂಗಾರ್ಕಿ ಮೊದಲಾದ ಸಾಹಿತಿಗಳು ಜನಪದ ಸಾಹಿತ್ಯದಿಂದ ಸ್ಪೂರ್ತಿ ಪಡೆದದ್ದುಂಟು.

ಕರ್ನಾಟಕದಲ್ಲಿ ಜನಪದದ ಸಿರಿಸಂಪತ್ತು ವಿಪುಲವಾಗಿದೆ. ಕರ್ನಾಟಕದಲ್ಲಿರುವ ವಿವಿಧ ಪಂಗಡದವರನ್ನು ಆಳವಾಗಿ ಅಭ್ಯಾಸ ಮಾಡಿ ಸಂಶೋಧನೆ ನಡೆಸಿದರೆ ಸಾಕಷ್ಟು ಜಾನಪದ ಸಾಹಿತ್ಯ ಲಭ್ಯವಾಗುತ್ತದೆ.

ಮಾನವನ ಪ್ರಾಚೀನ ಸಂಸ್ಕೃತಿಯನ್ನು ಅಳೆಯಬೇಕಾದರೆ ಜನಪದ ಸಂಸ್ಕೃತಿಯನ್ನೆ ಅಳೆಯಬೇಕು. ಜಾನಪದವು ಮಾನವಶಾಸ್ತ್ರ, ಸಮಾಜಶಾಸ್ತ್ರ, ಭಾಷಾಶಾಸ್ತ್ರ ಮುಂತಾದವುಗಳಂತೆ ಒಂದಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕು.

ಕವಿ ರವೀಂದ್ರನಾಥ ಠಾಕೂರ್ ಅವರು ಎಲ್ಲಾ ಲೋಕ ಗೀತೆಗಳನ್ನು ಸಂಗ್ರಹಿಸಿದಾಗ ಎಲ್ಲಾ ಮಾನವ ಕುಲಕ್ಕೂ ಸಾಮಾನ್ಯವಾದ ಮನಸ್ಸು ಹೃದಯಗಳು, ಅವುಗಳಲ್ಲಿ ಅಡಗಿರುವುದನ್ನು ಕಾಣಬಹುದು ಎಂದು ತಿಳಿಸಿದ್ದಾರೆ.

ಶ್ರೀಸಾಮಾನ್ಯ ಸಮುದಾಯದಿಂದ ಜನಪದ ರೀತಿ–ನೀತಿ, ಮನೋಭಾವ, ಆಚಾರ–ವಿಚಾರ, ಸಂಸ್ಕೃತಿಗಳ ಸಮಗ್ರ ಅಧ್ಯಯನ ಎಲ್ಲಾ ಕಡೆಗೂ ನಡೆದಿರುವುದು, ಇದರ ಸಂಸ್ಕೃತಿಗೆ ಪೂರ್ವಭಾವಿಯಾದ ಹೊನಲೆಂಬ ಸಂಸ್ಕೃತಿ ನಿರ್ಮಾಣವಾಗಬೇಕಾದಲ್ಲಿ, ಹೊನಲಿಗೆ ಕಾಡು ಮೇಡುಗಳಿಂದ ಹೊಲಗದ್ದೆಗಳಿಂದ ಕೂಡಿದ ಝರಿ, ಹಳ್ಳಗಳು ಅನೇಕ ಇವೆ. ಇವೇ ಉಪಸಂಸ್ಕೃತಿಯ ಉಗಮಗಳೆಂಬುದು ಸ್ಪಷ್ಟ.

ಜಾನಪದರಲ್ಲಿ ಕಂಠಸ್ಥ ಸಂಪ್ರದಾಯದ ಪ್ರಭಾವ ಪ್ರಮುಖವಾದರೂ ಕಂಠಸ್ಥ ಸಂಪ್ರದಾಯದಲ್ಲಿ ಬಂದುದೆಲ್ಲವೂ ಜಾನಪದವಲ್ಲ ಎಂಬ ಅಂಶವನ್ನು ಮರೆಯುವಂತಿಲ್ಲ. ಶಾರೀರಿಕ ಚಲನೆಗಳು, ಜನಪದ ನೃತ್ಯ, ಆಟ, ಸಂಜ್ಞೆ, ಕಲೆ, ಕುಶಲಕಲೆ, ಮುಂತಾದುದರಲ್ಲಿ ಕಂಠಸ್ಥ ಸಂಪ್ರದಾಯದ ಪಾತ್ರ ಏನೂ ಇರುವುದಿಲ್ಲ. ನೋಡಿ ಅನುಕರಿಸುವುದರ ಮೂಲಕ ಇವುಗಳನ್ನು ಸಾಧಿಸಿಕೊಳ್ಳಲಾಗುತ್ತದೆ. ಪ್ರಾಚೀನ ಕಾಲದಿಂದ ಬೆಳೆದು ಉಳಿದುಕೊಂಡು ಬಂದಿರುವ ವಿವಿಧ ವೃತ್ತಿಗಳಾದ ಕುಂಬಾರಿಕೆ, ಕಮ್ಮಾರಿಕೆ, ಬಡಗಿತನ, ಪತ್ತಾರಿಕೆ ಇತ್ಯಾದಿಗಳನ್ನು ಅವಲೋಕಿಸಿದರೆ ವೃತ್ತಿ ಕೌಶಲ್ಯಗಳ ಅನುಕರಣೆ ಹೆಚ್ಚಾಗಿರುವುದನ್ನು ಗಮನಿಸಬಹುದು. ಆದ್ದರಿಂದ ಜಾನಪದ ಕೆನತ್ ಮತ್ತು ಮೇರಿ ಕ್ಲಾರ್ಕರ ಅಭಿಪ್ರಾಯದಂತೆ ಕೇಳುವುದು, ನೆನಪಿಸುವುದು, ನೋಡುವುದು, ಅನುಕರಣೆ ಮಾಡುವುದು, ಈ ಎರಡು ಸೂತ್ರಗಳ ಮೇಲೆ ನಿಂತಿರುತ್ತದೆ. ಆದುದರಿಂದ ಜಾನಪದದಲ್ಲಿ ಕಂಠಸ್ಥ ಸಂಪ್ರದಾಯವೊಂದೇ ಪ್ರಮುಖವಾಗಿ ನಿಲ್ಲುವುದಿಲ್ಲ. ಒಟ್ಟಿನಲ್ಲಿ ಜಾನಪದ ಒಂದು ಜನತೆಯ ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ ಹಾಗೂ ಅದನ್ನು ಕುರಿತ ವಿಜ್ಞಾನ, ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ Folklore ಎನ್ನುವುದು ಸಂಪ್ರದಾಯವನ್ನು ಕುರಿತ ವಿಜ್ಞಾನ.

೩.೨. ಕುಲಕಸುಬುಗಳ ಪದನಿಷ್ಪತ್ತಿ

'ಕುಲ' ಎಂದರೆ ಸಮೂಹ ಎಂದರ್ಥ. ಜನ ಸಮೂಹಗಳನ್ನು ಯಾವ ಆಧಾರದ ಮೇಲಾದರೂ ವಿಂಗಡಿಸಬಹುದು. ಯಾವುದೇ ಒಂದು ಸಾಮಾನ್ಯ ಲಕ್ಷಣವುಳ್ಳ ಒಂದು ಸಮೂಹವನ್ನು ಕುಲವೆಂದು ಕರೆಯಬಹುದು.[೨] ರಕ್ತ ಸಂಬಂಧಿಗಳು ಜೊತೆಗೂಡಿ ಕೆಲಸ ಮಾಡುವುದರೊಂದಿಗೆ

ಎಲ್ಲರೂ ಜಂಟಿಯಾಗಿ ಆಸ್ತಿಯನ್ನು ಹೊಂದಿ ಅನುಭವಿಸುವವರಿಗೆ ಕುಲದವರು ಅಥವಾ ಕುಲ ಸಮುದಾಯದವರೆಂದು ಕರೆಯಬಹುದು. ಭಾರತೀಯ ಸಮಾಜದಲ್ಲಿ 'ಕುಲ' ಶಬ್ದಕ್ಕೆ ಈ ರೀತಿ ಅರ್ಥವಿವರಣೆ ಕೊಡಬಹುದು. ಕುಲವಿಭಜನೆಗೆ 'ಕಸುಬು' ಮುಖ್ಯವಾದ ಆಧಾರ. ಒಂದೇ ಕಸುಬನ್ನು ಮಾಡುವವರು ಒಂದೇ ಕುಲದವರು.[೨೩] ಕಸುಬುಗಳ ಆಧಾರದ ಮೇಲೆ ವಿಭಾಗವಾಗಿರುವ ಸಮುದಾಯಗಳೇ ಕುಲ ಅಥವಾ ಜಾತಿ.[೨೪] ಕುಲಗಳು ಬೆಳೆದಿದ್ದು ಬೇರೆ ಬೇರೆ ವೃತ್ತಿಗಳ ಆಧಾರದ ಮೇಲೆ ಕುಲಗಳಿಗೆ ಕೊಟ್ಟಿರುವ ಹೆಸರುಗಳಿಂದಲೇ ಆ ಕುಲಗಳ ಕಸುಬು ಏನೆಂಬುದನ್ನು ಅರ್ಥಮಾಡಿಕೊಳ್ಳಬಹುದು. ಭಾರತದಲ್ಲಿ ಕಸುಬನ್ನೆ ಆಧಾರವಾಗಿಟ್ಟುಕೊಂಡು ಒಂದೇ ಕಸುಬನ್ನು ಮಾಡುವವರಿಗೆಲ್ಲಾ ಒಂದೇ ಕುಲದವರು ಎಂದು ಪರಿಗಣಿಸಲಾಗಿದೆ. ಇದರಿಂದಲೇ ಕುಲಕಸುಬು ಎಂಬ ಶಬ್ದ ಬಂದಿರಬಹುದಾಗಿದೆ.

ಕುಲಕಸುಬು ಎಂದರೆ ಮನೆತನದ ಉದ್ಯೋಗ,[೨೫] ಪರಂಪರಾಗತ ವೃತ್ತಿ ಜಾತಿ ವೃತ್ತಿ,[೨೬] ಎಂದೆಲ್ಲ ಅರ್ಥೈಸಬಹುದು. ಕೈ+ಕಸುಬು, ಕಲೆಗಾರಿಕೆ, ವೃತ್ತಿಕಲೆಗಾರಿಕೆ, ಗುಡಿಕೈಗಾರಿಕೆ, ಗೃಹ ಕೈಗಾರಿಕೆ ಎಂಬ ಇತರೆ ಪ್ರಯೋಗಗಳು ಈ ಕಸುಬಿನ ವಿವಿಧಾರ್ಥವನ್ನು ಬಿಂಬಿಸುತ್ತವೆ. ಗ್ರಾಮೀಣ ಹಾಗೂ ನಗರ ಪ್ರದೇಶದ ಅಲ್ಪ ಸಂಖ್ಯಾತರು, ಬಡವರು, ಭೂಮಿ ಇಲ್ಲದವರೂ ತಮ್ಮ ಹೊಟ್ಟೆ ಹೊರೆಯುವುದಕ್ಕಾಗಿ ತಲೆತಲಾಂತರದಿಂದ ಕೈಗೊಂಡು ಬಂದ ಅನುವಂಶಿಕ ವೃತ್ತಿಗಳೇ ಕುಲಕಸುಬುಗಳೆನ್ನಬಹುದು.

ಒಂದು ಕುಲಕ್ಕೆ ಒಂದು ಕಸುಬು ನಿರ್ದಿಷ್ಟವಾದಾಗ, ಯಾರೂ ತಮ್ಮ ಕುಲಕಸುಬನ್ನು ಬದಲಾಯಿಸಬಾರದು ಎಂಬ ನಂಬಿಕೆ ಬೆಳೆದಾಗ, ಅಂದರೆ ಪ್ರತಿಯೊಬ್ಬರು ತಮ್ಮ ಕುಲಕಸುಬುಗಳನ್ನೇ ಮಾಡಬೇಕೆಂದಾಗುತ್ತದೆ. ಅಂದರೆ ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಜನ್ಮದಿಂದಲೇ ಒಂದು ಕುಲಕ್ಕೆ ಮತ್ತು ಆ ಕುಲದ ಕಸುಬಿಗೆ ಸೇರಿದವನಾಗಿರುತ್ತಾನೆ. ಆದ್ದರಿಂದಲೇ ಕುಲಕ್ಕೆ ಜಾತಿ ಎಂಬ ಅರ್ಥ ಬಂದದು. ಕುಲ, ಜಾತಿ ಶಬ್ದಗಳನ್ನು ಒಂದೇ ಅರ್ಥದಲ್ಲಿ ಉಪಯೋಗಿಸುವುದಕ್ಕೂ ಇದೇ ಕಾರಣ.

ಪ್ರತಿಯೊಂದು ಕುಲ ತಮ್ಮ ಕುಲಕಸುಬಿನ ವಿಚಾರದಲ್ಲಿ ವಿಶೇಷವಾದ ಆದರವನ್ನು ಬೆಳೆಸಿಕೊಳ್ಳುತ್ತದೆ. ಕಾರಣ ಕಸುಬೇ ಕುಲದ ಜೀವನಕ್ಕೆ ಆಧಾರವಾಗಿದ್ದರಿಂದ ಇಡೀ ಕಸುಬಿನ ಬಗ್ಗೆ, ಅದರ ಉಪಕರಣಗಳ ಬಗ್ಗೆ, ಉತ್ಪಾದಿಸಿದ ಪದಾರ್ಥಗಳ ಬಗ್ಗೆ ಒಂದು ಪವಿತ್ರ ಮನೋಭಾವ ಮಾತ್ರವಲ್ಲದೆ, ಕಸುಬಿನ ಬಗ್ಗೆ ಪೂಜ್ಯ ಭಾವನೆಯು ಬೆಳೆಯುತ್ತದೆ. ಆ ಕಸುಬು ಆ ಕುಲಕ್ಕೆ ಹೇಗೆ ಬಂದಿತು ಎನ್ನುವ ಬಗ್ಗೆ ಒಂದು ಪುರಾಣ ಬೆಳೆಯುವುದು ಸಾಧ್ಯ. ಕಸುಬಿಗೆ ಸಂಬಂಧಪಟ್ಟ ದೇವತೆಗಳು, ಅವುಗಳಿಗೆ ಸಂಬಂಧಿಸಿದ ಪೂಜೆ ಪುನಸ್ಕಾರಗಳು, ಇವು ಕೂಡ ಕುಲಕಸುಬಿನ

ವಿಶೇಷ ಲಕ್ಷಣಗಳು. ಪ್ರತಿಯೊಂದು ಕುಲದಲ್ಲಿಯೂ ಕುಲದೇವತೆಗೆ ಸಂಬಂಧಪಟ್ಟ ಪುರಾಣದ ಆಧಾರದ ಮೇಲೆ ಕುಲದೇವತೆಯ ವಿಶೇಷ ಆರಾಧನೆ ಮತ್ತು ಆ ಕುಲಕ್ಕೆ ಪ್ರತ್ಯೇಕವಾದ ಆಚಾರ-ವಿಚಾರ, ಪದ್ಧತಿ ಇವೆಲ್ಲವೂ ಸಾಂಪ್ರದಾಯಿಕವಾಗಿ ಬೆಳೆಯುತ್ತವೆ.

ಕುಲಕಸುಬಿನ ಬಗ್ಗೆ ಪೂಜ್ಯಭಾವನೆ ಬೆಳೆದಾಗ ಮಡಿ-ಮೈಲಿಗೆ, ಶುದ್ಧ-ಅಶುದ್ಧ, ಪವಿತ್ರ-ಅಪವಿತ್ರ ಮುಂತಾದ ಭಾವನೆಗಳು ಬೆಳೆಯುತ್ತವೆ. ಕುಲಗಳಲ್ಲಿ ಪರಸ್ಪರ ಪ್ರತ್ಯೇಕ ಮನೋಭಾವ ಬೆಳೆದು ಬೇರೆ ಬೇರೆ ರೀತಿಯ ಅಸ್ಪೃಶ್ಯತಾ ಮನೋಭಾವವು ಬೆಳೆಯಲು ಸಾಧ್ಯ. ಆಗ ಪ್ರತಿಯೊಂದು ಕುಲವು ತಮ್ಮದೇ ಆದ ಸಂಪ್ರದಾಯುಗಳನ್ನು ಅನುಸರಿಸುತ್ತದೆ. ಮೇಲು-ಕೀಳು ಭಾವನೆಗಳುಂಟಾಗುತ್ತವೆ. ಒಂದು ಕುಲದವರು ಇನ್ನೊಂದು ಕುಲದ ಕಸುಬನ್ನಾಗಲಿ ಆಚಾರ ಪದ್ಧತಿಯನ್ನಾಗಲಿ ಅನುಷ್ಠಾನ ಮಾಡುವುದು ನಿಷೇದವಾಗಿರುತ್ತದೆ. ನಮ್ಮ ಸಮಾಜದಲ್ಲಿ ಜಾತಿಗಳು ಪರಸ್ಪರ ಪ್ರತ್ಯೇಕವಾದದ್ದು ಇದೇ ರೀತಿಯಲ್ಲಿ. ಈ ಪ್ರತ್ಯೇಕತೆಗೆ ಮುಖ್ಯ ಕಾರಣ ಕುಲಕಸುಬಿನ ಬಗ್ಗೆ ಒಂದು ಸಂಕುಚಿತ ಮನೋಭಾವ ಮತ್ತು ಅ ಕಸುಬಿನ ಆಧಾರದ ಮೇಲೆ ಬೆಳೆದ ಧಾರ್ಮಿಕ ಸಂಪ್ರದಾಯ. ಈ ಧಾರ್ಮಿಕ ಸಂಪ್ರದಾಯದ ಜೊತೆಗೆ ಕುಲದ ಮೇಲೆ ಬೇರೆ ಬೇರೆ ಮತಭೇದಗಳ ಪ್ರಭಾವವು ಉಂಟಾಗಬಹುದು. ಉದಾಹರಣೆಗೆ ಅನೇಕ ಕುಲದವರು ವೈಷ್ಣವ, ಶೈವ ಅಥವಾ ಜೈನ ಮತಾನುಯಾಯಿಯಾಗಿರಬಹುದು. ಆದರೆ ಅವರ ಕುಲಕಸುಬು ಕುಲಧರ್ಮಗಳ ಆಚರಣೆಯಲ್ಲಿ ಯಾವ ವ್ಯತ್ಯಾಸವೂ ಆಗದಿರಬಹುದು. ಒಂದು ಕುಲದಲ್ಲಿ ಕೆಲವರು ವೈಷ್ಣವ, ಕೆಲವರು ಶೈವ ಮತದ ಒಕ್ಕಲಾಗಿರಬಹುದು. ಅನೇಕ ಕುಲಗಳು ಒಂದೇ ಮತಕ್ಕೆ ಒಕ್ಕಲಾಗಿದ್ದರೂ ಅವು ತಮ್ಮ ಪ್ರತ್ಯೇಕತೆಯನ್ನು ತೊರೆದು ಸಮ್ಮಿಳಿತವಾಗುವುದಿಲ್ಲ. ಕುಲಕಸುಬು, ಕುಲಧರ್ಮಾಚರಣೆ, ಕುಲದೇವತಾ ಪೂಜೆ ಇವುಗಳು ಪ್ರತ್ಯೇಕವಾಗಿ ಇದ್ದೇ ಇರುತ್ತವೆ. ಧರ್ಮ ಚೌಕಟ್ಟಿನಲ್ಲಿ ಒಂದುಗೂಡಿಸಿದರೂ ಆ ಕುಲಗಳ ಪ್ರತ್ಯೇಕತೆ ಹೋಗುವುದಿಲ್ಲ.

ಕುಲಕಸುಬುಗಳಿಗೆ ಪರಂಪರೆ ಇದೆಯೇ ಹೊರತು, ನಿರ್ದಿಷ್ಟ ತರಬೇತಿ ಇಲ್ಲ. ಹೆಚ್ಚಾಗಿ ಕೃಷಿಕನ ಆಶ್ರಯದಲ್ಲಿಯೇ ಆಸರೆ ಪಡೆದಂತವು, ಕೃಷಿಕನ ಮತ್ತು ರಾಜಾಶ್ರಯದ ಆಸರೆ ತಪ್ಪಿದಾಗ ನೆಲಕಚ್ಚಿವೆ. ಪ್ರಮುಖವಾಗಿ ಮೂಲಭೂತ ಜೀವನಾವಶ್ಯಕತೆಗಳನ್ನು ಪೂರೈಸುವುದಕ್ಕೋಸ್ಕರ ಇವು ಉದಯವಾದವು. ಸಾಮಾಜಿಕ ಜೀವನದಲ್ಲಿ ಜಮೀನು ಇಲ್ಲದವ, ತಮಗೆ ಇಷ್ಟವಾದ ತಮ್ಮ ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ ಕಸುಬನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ತಮ್ಮ ಪರಿಣತಿಯನ್ನು ತೋರ್ಪಡಿಸಿಕೊಳ್ಳುತ್ತಾ ಅದನ್ನೇ ತನ್ನ 'ಉಪಜೀವನ ವೃತ್ತಿ' ಯನ್ನಾಗಿಸಿಕೊಂಡ. ಹೀಗೆ ಬರಬರುತ್ತ ವಿವಿಧ ಕಸುಬುಗಳನ್ನು ತಮ್ಮ ಉಪಜೀವನದ ವೃತ್ತಿಯನ್ನಾಗಿಸಿಕೊಂಡ ವರ್ಗವೇ ಸಮಾಜದಲ್ಲಿ ರೂಪುಗೊಂಡಿದೆ. ಕೃಷಿಕ ಕೇಂದ್ರವಾದ ಆ ವರ್ಗ ಬಹು ವಿಸ್ತೃತವಾದುದು. ಪಶು ಸಂಗೋಪನೆ ಮತ್ತು ವ್ಯವಸಾಯ ಮಾಡುವ ಒಕ್ಕಲಿಗ, ಬಟ್ಟೆ ನೇಯುವ ನೇಕಾರ, ಬುಟ್ಟಿ ನೇಯುವ ಮೇದಾರ,

ಕಲ್ಲು ಕಟಯುವ ಕುಲ್ಲುಕುಟಿಗ, ಬಳೆ ತಯಾರಿಸುವ ಬಳೆಗಾರ, ಬಿದಿರು, ಬೆತ್ತದ ಸಾಮಗ್ರಿಗಳನ್ನು ತಯಾರಿಸುವ ಮೇದಾರ, ಸುಣ್ಣ ತಯಾರಿಸುವ ಸುಣ್ಣಗಾರ, ಮರದ ಉಪಕರಣಗಳನ್ನು ತಯಾರಿಸುವ ಬಡಗಿ, ಕಬ್ಬಿಣದ ಸಾಮಾನುಗಳನ್ನು ಹಣಿದು ತಯಾರಿಸಿಕೊಡುವ ಕಮ್ಮಾರ, ಮಡಕೆ-ಕುಡಿಕೆ ಮೊದಲಾದವುಗಳನ್ನು ತಟ್ಟಿ, ಸುಟ್ಟುಕೊಡುವ ಕುಂಬಾರ, ಚಿನ್ನ-ಬೆಳ್ಳಿಯ ವಸ್ತುಒಡವೆಗಳನ್ನು ತಯಾರಿಸುವ ಪತ್ತಾರ, ಚರ್ಮದ ವಸ್ತುಗಳನ್ನು ತಯಾರಿಸುವ ಚಮ್ಮಾರ, ಕಂಚುಗಾರ, ಬಟ್ಟೆ ಶುಭ್ರಗೊಳಿಸುವ ಅಗಸ, ತಲೆಕೂದಲು ತೆಗೆಯುವ ಕ್ಷೌರಿಕ, ಬಟ್ಟೆ ಹೊಲೆಯುವ ಸಿಂಪಿಗ, ಕೌದಿ ಹೊಲೆಯುವ ದೋಶಿಗ, ಗಾದೆ ಹಾಕುವ ಪಿಂಜಾರ, ಮನೆಕಟ್ಟುವ ಉಪ್ಪಾರ, ಕುರಿ ಸಾಕುವ ಕುರುಬ, ಶಿಲ್ಪಗಳನ್ನು ತಯಾರಿಸುವ ಶಿಲ್ಪಗಾರ, ಔಷಧಿ ಕೊಡುವ ವೈದ್ಯ, ಹೂ ಪತ್ರೆ ಕೊಡುವ ಮಾಲೆ ತಯಾರಿಸುವ ಹೂಗಾರ, ದೇವ ದೇವಿಯರ ಪೂಜೆ ಮಾಡುವ ಪೂಜಾರ, ಊರ ಕಾಯುವ ತಳವಾರ, ಓಲೆ ಹಂಚುವ ಓಲೆಕಾರ ಇತ್ಯಾದಿ ಇವರೆಲ್ಲರೂ ಕಸುಬುದಾರರು-ಇವರು ವಂಶಪರಂಪರೆಯಾಗಿ ಕಸುಬುಗಳನ್ನು ಮಾಡಿಕೊಂಡು ಬರುತ್ತಿರುವ ಕುಲಕಸುಬುದಾರರು.

ಈ ಕಸುಬುದಾರರೆಲ್ಲರು ಒಂದೇ ಅಂತಸ್ತಿನವರಲ್ಲ. ಕೆಲವರು ಉನ್ನತ ದರ್ಜೆಯವರಾಗಿದ್ದರೆ, ಕೆಲವರು ಕೆಳದರ್ಜೆಯವರಾಗಿದ್ದಾರೆ. ಆದಾಗ್ಯೂ ಇವರಲ್ಲಿ ವಸ್ತು ವಿನಿಮಯ ಮತ್ತು ಸೇವಾವಿನಿಮಯ ಇದ್ದುದು ಗಮನಾರ್ಹ. ಇದು ಅವರ ಸಾಮಾಜಿಕ ಐಕ್ಯತೆಗೆ ಸಾಕ್ಷಿ. ಅವರೆಲ್ಲರೂ ಪರಸ್ಪರ ಅವಲಂಬಿಗಳು. ಹಾಗಾಗಿ ಅಲ್ಲಿ ಸಹಕಾರ-ಸಂಘಟನೆ ಅನಿವಾರ್ಯ. ಇದರಿಂದಾಗಿಯೇ ಹಿಂದಿನ ಭಾರತದ ಪ್ರತಿಯೊಂದು ಹಳ್ಳಿಯೂ ಒಂದು ಸ್ವಯಂ ಸಿದ್ಧಘಟಕ ಹಾಗೂ ಸ್ವಯಂ ರಕ್ಷಿತ ಕೋಟೆ ಎಂದು ಪ್ರಸಿದ್ಧವಾಗಿತ್ತು. ಆದರೆ ತಲೆತಲಾಂತರವಾಗಿ ತಂದೆಯಿಂದ ಮಗನಿಗೆ, ಅತ್ತೆಯಿಂದ ಸೊಸೆಗೆ ಕೊಡಲಾದ ಕರಕೌಶಲ್ಯದ ಬಳಕೆ ನಿಧಾನವಾಗಿ ಜಾತಿಗಳಾಗಿ, ಪಂಗಡಗಳಾಗಿ ರೂಪಿತವಾದವು.[೫೧] ಇದರಿಂದ ಸಾಮಾಜಿಕ ಐಕ್ಯತೆ ಮುರಿದು ಹೋಯಿತು. ಜಾತಿ ವಿಜಾತಿ ಎಂಬ ತಾರತಮ್ಯ ಉಂಟಾಯಿತು. ಇಂಥ ಪರಿಸರದಲ್ಲಿ ಬಸವಾದಿ ಪ್ರಮಥರು ಜನ್ಮತಾಳಿ-

ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಸನಿಕ್ಕಿ ಸಾಲಿಗನಾದ, ವೇದವ ನೋದಿ ಹಾರುವನಾದ
ಕುಲವೇನೊ? ಅವಂದಿರ ಕುಲವೇನೊ?[೫೨]

ಎಂದು ಪ್ರಶ್ನಿಸುವುದರ ಮೂಲಕ, ವೃತ್ತಿಯ ನಿಜಸ್ಥಿತಿಯನ್ನು ಹೇಳಿ, ಜಾತಿಯನ್ನು ಗಣಿಸದೆ, ವೃತ್ತಿಯನ್ನು ಕಾಯಕ ಸ್ಥರಕ್ಕೆ ಎತ್ತರಿಸಬೇಕಾಯಿತು. ಹೀಗಾಗಿ ಅವರ ದೃಷ್ಟಿಯಲ್ಲಿ ಅಂದಿನ ಮಾದಾರ, ಡೋಹಾರ, ಅಂಬಿಗ, ಸಮಗಾರ, ಕಮ್ಮಾರ, ಪತ್ತಾರ, ಕುಂಬಾರ ಹೆಸರುಗಳು ಜಾತಿ ವಾಚಿಯಲ್ಲ, ವೃತ್ತಿ ಸೂಚಿಗಳಾಗಿ ಕಂಡವು. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಕಸುಬುದಾರನ ಕಸುಬು ಜಾತಿಯಲ್ಲ. ಅದು ವೃತ್ತಿ; ಕಾಯಕ ಆದರೂ ಕಾಲಕಾಲಕ್ಕೆ ಸಮಾಜದ ನಾಯಿ ಬಾಲ

ಡೊಂಕೆಂಬಂತೆ ವೃತ್ತಿಗಳು ಜಾತಿಗಳಾಗಿಯೇ ಮುಂದುವರಿದುಕೊಂಡು ಬಂದಿವೆ. ನಮ್ಮ ಸಮಾಜದಲ್ಲಿ ಕುಲ ಮತ್ತು ಕಸುಬು(ವೃತ್ತಿ) ಮೊದಲಿನಿಂದಲೂ ಜೊತೆಗೂಡಿಯೇ ಬಂದಿವೆ. ಹೀಗೆ ಕಸುಬಿನ ಆಧಾರದ ಮೇಲೆ ಜಾತಿ ಅಂತಸ್ತು, ಮೇಲು-ಕೀಳೆಂಬುದು ವಿಂಗಡಿಸ್ಪಲ್ಪಟ್ಟು ಸಮಾಜದಲ್ಲಿ ಮುಂದುವರಿದುಕೊಂಡು ಬಂದಿದೆ.

ಆರ್ಯರು ಭಾರತಕ್ಕೆ ಬರುವ ಮುನ್ನವೇ ಸಿಂಧೂ ನದಿಯ ತೀರದಲ್ಲಿ ವಾಸಮಾಡುತ್ತಿದ್ದ ಜನರ ಬಗೆ ಬಗೆಯ ಕಸುಬುಗಳ ಆಧಾರದ ಮೇಲೆ ಕುಲ ಅಥವಾ ಶ್ರೇಣಿಗಳ ವಿಭಾಗಗಳಿದ್ದುವೆಂಬುದು ಹರಪ್ಪ ಮೊಹೆಂಜೋದಾರೋ ಸಂಶೊಧನೆಗಳಿಂದ ವ್ಯಕ್ತಪಟ್ಟಿದೆ. ಸಂಶೋಧಕರ ಪ್ರಕಾರ ಪಂಡಿತರು, ಯೋಧರು, ವ್ಯಾಪಾರಿಗಳು ಕುಶಲಕರ್ಮಿಗಳು ಅಂದರೆ ಗಾರೆಯವರು, ನೇಯ್ಗೆಯವರು, ಅಕ್ಕಸಾಲಿಗರು, ಕುಂಬಾರರು, ಕಮ್ಮಾರರು ಮುಂತಾದವರು ಉಳಿದ ಕೆಲಸ ಮಾಡುತ್ತಿದ್ದ ಚಮ್ಮಾರರು, ಮೇದರು, ರೈತರು ಮೊದಲಾದ ಪಂಗಡಕ್ಕೆ ಸೇರಿದವರು ಇದ್ದರು.[೨೮]

ಆರ್ಯ ಸಂಸ್ಕೃತಿಯಲ್ಲಿ ನಿರ್ಮಾಣವಾದ ಮೇಲೆ ಈ ಕುಲಭೇದಗಳು ಮುಂದುವರಿದವು. ಹೊಸ ಬೇಡಿಕೆಗಳನ್ನು ಈಡೇರಿಸಲು ಅನೇಕ ಕಸುಬುಗಳು ಏರ್ಪಟ್ಟವು. ಆರ್ಯರು ಪ್ರಾಕೃತಿಕ ಶಕ್ತಿಗಳನ್ನು ದೈವವೆಂದೂ ತಿಳಿದು ಆರಾಧಿಸುತ್ತಿದ್ದರು. ದೇವತೆಗಳ ಉಪಶಮನಕ್ಕಾಗಿ ಅವರ ಅನುಗ್ರಹ ಪಡೆಯುವುದಕ್ಕಾಗಿ ನಾನಾ ಬಗೆಯ ಯಜ್ಞಯಾಗಾದಿಗಳು ರೂಪುಗೊಂಡಿವು. ಯಜ್ಞಯಾಗಾದಿಗಳ ಆಚರಣೆಯಲ್ಲಿ ಪುರೋಹಿತರ ಪ್ರಾಧಾನ್ಯತೆ ಹೆಚ್ಚಾಯಿತು. ಪುರೋಹಿತರು ಸಮಾಜದಲ್ಲಿ ತಮ್ಮ ಔನ್ನತ್ಯವನ್ನು ಉಳಿಸಿಕೊಳ್ಳಲು ತಮ್ಮನ್ನು ಬ್ರಾಹ್ಮಣ ವರ್ಗದವರೆಂದು ಕರೆದುಕೊಂಡರು. ಸಮಾಜ ಆಳ್ವಿಕೆ ಮಾಡುವ ರಾಜರನ್ನು ಕ್ಷತ್ರಿಯರೆಂದೂ, ಉತ್ಪಾದನೆ ಮಾಡುವವರನ್ನು ವೈಶ್ಯರೆಂದೂ ಕರೆದರು. ಯಾರು ಆರ್ಯ ಸಂಸ್ಕೃತಿಗೆ ವಿರುದ್ಧವಾಗಿ ಅಚಾರ ವ್ಯವಹಾರಗಳನ್ನು ಇಟ್ಟುಕೊಂಡಿದ್ದರೋ ಅವರನ್ನೆಲ್ಲಾ ಕೀಳೆಂದು ಭಾವಿಸಿದರು.

ವೈದಿಕ ಸಾಹಿತ್ಯದಲ್ಲಿ ವರ್ಣವ್ಯವಸ್ಥೆಯ ಉಗಮದ ಬಗ್ಗೆ ವಿವರವಿದೆ. ಇದರ ಪ್ರಕಾರ ಸಮಷ್ಠಿ ರೂಪನಾದ ಪುರುಷನ(ಪರಮಾತ್ಮನ) ಬಾಯಿಂದ ಬ್ರಾಹ್ಮಣರೂ, ಭುಜಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ ಪಾದಗಳಿಂದ ಶೂದ್ರರೂ ಜನಿಸಿದರು. ಪುರುಷನ ವಿವಿಧ ಅಂಗಗಳಲ್ಲಿ ಜನಿಸಿದ ವ್ಯಕ್ತಿಗಳಲ್ಲಿ ಆ ಅಂಗ ನಿರ್ವಹಿಸಬೇಕಾದ ಕಾರ್ಯಗಳನ್ನು ಸೂಚಿಸುತ್ತದೆ ಎಂಬ ಸಾಂಕೇತಿಕ ಅರ್ಥದಲ್ಲಿ ತೆಗೆದುಕೊಳ್ಳಬಹುದು. ವರ್ಣ ವ್ಯವಸ್ಥೆಯಲ್ಲಿ ಕಾರ್ಯಗಳು ಮೇಲು-ಕೀಳು, ಶ್ರೇಷ್ಠ ಅಥವಾ ಕನಿಷ್ಠ ಎಂದು ಭಾವಿಸಕೂಡದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಮತ್ತು ಶೂದ್ರ ಎಂಬ ಚತುವರ್ಣಗಳು ಒಂದು ದೇಹಕ್ಕೆ ಸೇರಿದ ಅಂಗಗಳು ಎಂಬುದನ್ನು ಗಮನದಲ್ಲಿಟ್ಟುಕೊಂಡು ಅದರಂತೆ ತಮಗೆ ನಿಯಮಿತವಾದ ಕರ್ತವ್ಯಗಳನ್ನು ನಿರ್ವಹಿಸುವುದು ಸೂಕ್ತ.

ವೇದಗಳ ಕಾಲದಲ್ಲಿ ವ್ಯಕ್ತಿ ತನಗಿಷ್ಟ ಬಂದ ವೃತ್ತಿಯನ್ನು ಆರಿಸಿಕೊಳ್ಳುವುದಕ್ಕೆ ಯಾವ ನಿರ್ಬಂಧವೂ ಇರಲಿಲ್ಲ. ವ್ಯಕ್ತಿಗೆ ತನಗೆ ಅಭಿರುಚಿಯಿದ್ದ ವೃತ್ತಿಯನ್ನು ಚೆನ್ನಾಗಿ ನಿರ್ವಹಿಸುವುದು ಮುಖ್ಯವಾಗಿತ್ತು. ಪ್ರಾಚೀನ ಕಾಲದಲ್ಲಿ ಅನುವಂಶೀಯತೆಯ ಆಧಾರದ ಮೇಲೆ ಇಂತಹ ವೃತ್ತಿಯನ್ನು ಇಂತಹ ವರ್ಣದವರೇ ಅನುಸರಿಸಬೇಕೆಂಬ ನಿಯಮವಿರಲಿಲ್ಲ. ವರ್ಣಗಳನ್ನು ವ್ಯಕ್ತಿಯ ಗುಣ ಹಾಗೂ ಕರ್ಮ ಆಧಾರದ ಮೇಲೆ ನಿರ್ಣಯಿಸಲಾಗುತ್ತಿತ್ತೇ ವಿನಃ ಜನ್ಮದ ಆಧಾರದ ಮೇಲಲ್ಲ.

ಕಾಲಕ್ರಮೇಣ ವರ್ಣಗಳ ನಡುವೆ ಭೇದಗಳು ಉಂಟಾಗಿ ಇಂತಹ ವರ್ಣಕ್ಕೆ ಸೇರಿದ ವ್ಯಕ್ತಿ ಇಂತಹ ವೃತ್ತಿ ಅವಲಂಬಿಸಬೇಕೆಂಬ ನಿಯಮ ರೂಢಿಗೆ ಬಂದಿತು. ವ್ಯಕ್ತಿಗಳೆಲ್ಲರೂ ತಮ್ಮ ವರ್ಣಧರ್ಮಕ್ಕನುಗುಣವಾಗಿ ಕರ್ತವ್ಯಗಳನ್ನು ನಿರ್ವಹಿಸಿದರೆ, ಸಮಾಜದಲ್ಲಿ ಸ್ಥಿರತೆ ವ್ಯವಸ್ಥೆ ಏರ್ಪಟ್ಟು ಪ್ರಗತಿಯಾಗುತ್ತದೆ ಎಂಬ ನಂಬಿಕೆ ರೂಢಿಯಲ್ಲಿತ್ತು. ಇಡೀ ಸಮಾಜದ ಕಟ್ಟಡ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ಸ್ತಂಭಗಳ ಮೇಲೆ ರಚಿತವಾಗಿದೆ. ಇದರಿಂದ ಸಮಾಜದಲ್ಲಿ ಒಂದು ಬಗೆಯ ಕಾರ್ಯ ವಿಭಜನೆ ಏರ್ಪಟ್ಟಿದೆ. ಇದರಿಂದ ವ್ಯಕ್ತಿಗಳು ಕಾರ್ಯನಿರತರಾಗಿ ಸಮಾಜದ ಪ್ರಗತಿಗೆ ಕಾರಣವಾಗಲು ಸಾಧ್ಯವಾಗಿದೆ. ಹಿಂದೆ ವಂಶಪಾರಂಪರ್ಯವಾಗಿ ಸಾಗಿ ಬಂದ ವೃತ್ತಿಯನ್ನು ಕಲಿಯಲು ಯಾವ ಶಾಲಾ ಕಾಲೇಜುಗಳಿಗೆ ಹೋಗಬೇಕಾದ ಪ್ರಮೇಯವಿರಲಿಲ್ಲ. ತಮ್ಮ ಸ್ವಭಾವಕ್ಕನುಗುಣವಾದ ಕಾರ್ಯಗಳಲ್ಲಿ ತೊಡಗುತ್ತಿದ್ದರಿಂದ ಜೀವನದಲ್ಲಿ ಶಾಂತಿ, ಸಂತೃಪ್ತಿ, ಸಮಾಧಾನ, ಸುಭಿಕ್ಷತೆ ಇರುತ್ತಿತ್ತು. ಸಮಾಜದಲ್ಲಿ ಹಲವಾರು ಸಮಸ್ಯೆಗಳು ಉದ್ಭವಿಸಲು ಅವಕಾಶವಿರಲಿಲ್ಲ.

ಜಾತಿ ಪದ್ಧತಿ ಬೆಳೆದಿದ್ದು ಕಸುಬುಗಳ ಆಧಾರದ ಮೇಲೆ ಸಮಾಜದ ಬೇಡಿಕೆಗಳು ಹೆಚ್ಚಾಗುತ್ತಾ ಹೆಚ್ಚು ಹೆಚ್ಚು ಕಸುಬುಗಳ ಅಗತ್ಯ ಕಂಡುಬಂದು ಜಾತಿಗಳ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಾ ಬಂದಿದೆ. ಋಗ್ವೇದದಲ್ಲಿ ರಾಜನ್ಯ, ರಥಕಾರ, ಬಡಗಿ, ಅಕ್ಕಸಾಲಿಗ, ರಜಕ ಇತ್ಯಾದಿ ಅನೇಕ ಕಸುಬುದಾರರ ಹೆಸರು ಕಂಡುಬರುತ್ತದೆ.[೨೯] ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅನೇಕ ಕಸುಬುಗಳ ಜಾತಿಗಳ ಹೆಸರು ಕಂಡುಬರುತ್ತದೆ.[೩೦] ಒಂದೊಂದು ಜಾತಿಯವರು ತಮ್ಮ ಸಂಪ್ರದಾಯದಲ್ಲಿ ಬಂದ ಕಸುಬುಗಳನ್ನೆ ಅನುಸರಿಸುತ್ತಿದ್ದರು. ಕ್ರಮೇಣ ಪ್ರತಿಯೊಂದು ಜಾತಿಯೂ ತನ್ನ ಕಸುಬಿಗೆ ಅನುಗುಣವಾದ ಆಚಾರವ್ಯವಹಾರ, ಜೀವನ ರೀತಿಗಳನ್ನು ಬೆಳೆಸಿಕೊಂಡಿದ್ದರಿಂದ ಜಾತಿ ಜಾತಿಗಳ ನಡುವೆ ಈ ಪ್ರತ್ಯೇಕತಾ ಮನೋಭಾವ ಬೆಳೆಯಿತು.

ಶಾಸನ ಹಾಗೂ ಸಾಹಿತ್ಯ ಕೃತಿಗಳಿಂದ ಭಾರತದಲ್ಲಿ ಹದಿನೆಂಟಕ್ಕಿಂತಲೂ ಹೆಚ್ಚು ಜಾತಿಗಳು ಇದ್ದವು ಎಂಬುದು ಗೊತ್ತಾಗುತ್ತದೆ. ವಚನಕಾರರು ಹದಿನೆಂಟು ಜಾತಿಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಸೊಡ್ಡಳ ಬಾಚರಸ ಎನ್ನುವವನು ಮನುಷ್ಯನ ದೇಹದ ಪ್ರತಿಯೊಂದು ಅಂಗಕ್ಕೂ ಒಂದೊಂದು ಜಾತಿಯನ್ನು ಸಮೀಕರಿಸಿ ಹದಿನೆಂಟು ಜಾತಿಗಳ ಪಟ್ಟಿಯನ್ನು ಕೊಟ್ಟಿದ್ದಾನೆ. ಅವುಗಳೆಂದರೆ

ಬ್ರಾಹ್ಮಣ(ಶಿಖಿ), ಕ್ಷತ್ರಿಯ(ನಯನ), ಒಕ್ಕಲಿಗ(ತುಟಿ), ಗೊಲ್ಲ(ಕರ್ಣ), ಕುಂಬಾರ(ಕೊರಳು), ಪಂಚಾಳ(ಬಾಹು), ಉಪ್ಪಾರ(ಅಂಗೈ), ನಾಯಿಂದ(ಉಗುರು), ಡೊಂಬ(ಒಳದೊಡೆ), ಈಳಿಗ (ಮೊಣಕಾಲು), ಸಮಗಾರ(ಕಣಗಾಲು), ಮಚ್ಚಿಗ(ಮೇಗಾಲು), ಮತ್ತು ಶುದ್ಧ ಮಾದಿಗ(ಅಂಗಾಲು),[೫೦] ಅಂಬಿಗರ ಚೌಡಯ್ಯನು ಇದೇ ರೀತಿ ಮನುಷ್ಯನ ದೇಹದ ಪ್ರತಿಯೊಂದು ಅಂಗಕ್ಕೂ ಒಂದೊಂದು ಜಾತಿಯನ್ನು ಸಮೀಕರಿಸಿ ಹದಿನೆಂಟು ಜಾತಿಗಳ ಉಲ್ಲೇಖಮಾಡಿದ್ದಾನೆ.[೫೧] ಈ ಮೇಲಿನ ಉಲ್ಲೇಖಗಳು ಮನುಷ್ಯನ ದೇಹವನ್ನು ಆಧಾರವಾಗಿಟ್ಟುಕೊಂಡು ಸಮಾಜದ ವಿಭಿನ್ನ ಸ್ಥರಗಳನ್ನು ವಿವರಿಸುವ ಪ್ರಯತ್ನವಾಗಿ ಕಂಡುಬರುತ್ತದೆ.

ಕವಿರಾಜ ಮಾರ್ಗದಲ್ಲಿ ವರ್ಣಗಳನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ಕುರಿತು ಹೇಳಲಾಗಿದೆ. ಅಧ್ಯಯನ ರಾಜ್ಯಭಾರ, ವ್ಯಾಪಾರ, ವ್ಯವಸಾಯ ಇವು ನಾಲ್ಕು ವರ್ಣಗಳ ವೃತ್ತಿಗಳು ಎಂಬುದಾಗಿ ಹೇಳಲಾಗಿದೆ. ವರ್ಣವ್ಯವಸ್ಥೆಯಲ್ಲಿ ಬರುವ ನಾಲ್ಕು ವರ್ಣಗಳು ತಮ್ಮವಲ್ಲದ ವೃತ್ತಿಗಳನ್ನು ಅವಲಂಬಿಸುತ್ತಿದ್ದರು ಎನ್ನುವುದು ಹಲವಾರು ಶಾಸನ ಹಾಗೂ ಕಾವ್ಯಗಳಿಂದ ತಿಳಿದುಬರುತ್ತದೆ. ಬ್ರಾಹ್ಮಣರು ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ಬ್ರಾಹ್ಮಣರ ಧಾರ್ಮಿಕ ಸ್ಥಾನಮಾನಕ್ಕೂ, ರಾಜಕೀಯ, ಆರ್ಥಿಕ ಸ್ಥಾನಮಾನಕ್ಕೂ ನಡುವೆ ನಿಕಟವಾದ ಸಂಬಂಧಗಳಿದ್ದವು. ರಾಜ್ಯವನ್ನು ಆಳುವುದು ಮತ್ತು ಪ್ರಜೆಗಳನ್ನು ರಕ್ಷಿಸುವುದು ಕ್ಷತ್ರಿಯರ ಕರ್ತವ್ಯವಾಗಿತ್ತು. ವೈಶ್ಯರು ವ್ಯಾಪಾರ, ವಾಣಿಜ್ಯ ಮತ್ತು ಕೃಷಿಯಲ್ಲಿ ತೊಡಗಿದ್ದು ರಾಜ್ಯದ ಆರ್ಥಿಕತೆ ದೃಷ್ಟಿಯಿಂದ ಪ್ರಮುಖ ಸ್ಥಾನ ಹೊಂದಿತ್ತು.

ವೃತ್ತಿ ವ್ಯವಸ್ಥೆಯಲ್ಲಿ ಕೊನೆಯವರಾದ ಶೂದ್ರರು ತಮ್ಮಲ್ಲೇ ಹಲವಾರು ಜಾತಿ ಉಪಜಾತಿಗಳಾಗಿ ವಿಭಜನೆಗೊಂಡಿದ್ದರು. ಶೂದ್ರರಲ್ಲಿ ಮುಖ್ಯವಾಗಿ ವೃತ್ತಿಯ ಆಧಾರದ ಮೇಲೆ ಪಂಗಡಗಳು– ಉಪ ಪಂಗಡಗಳು ರಚನೆಗೊಂಡವು. ಶೂದ್ರರು ಇತರೆ ಜಾತಿಗಳಿಗಾಗಿ ದುಡಿಯುವ ಒತ್ತಾಯಕ್ಕೊಳಗಾಗಿದ್ದರು. ಇವರು ಕೃಷಿ, ಕೈಗಾರಿಕೆ, ವ್ಯಾಪಾರ ಹಾಗೂ ಇನ್ನಿತರ ವೃತ್ತಿಗಳಲ್ಲಿ ಪರಿಣತರಾಗಿದ್ದರು. ಅಗಸ, ನಾವಿದ, ನೇಕಾರ, ಬಳೆಗಾರ, ಬೆಸ್ತ, ತೈಲಿಗ, ಚಿಪ್ಪಿಗ, ತಂಬುಲಗ, ಶಿಲ್ಪಿಗ, ಮಾಲೆಕಾರ, ಚಮ್ಮಾರ ಮುಂತಾದವರು ಈ ವರ್ಗದೊಳಗೆ ಸೇರುತ್ತಿದ್ದರು. ಶಿಲ್ಪಿಗಳು ವಾಸ್ತುವಿದ್ಯೆ, ಶಿಲ್ಪ, ಲೋಹ ವಿಗ್ರಹಗಳ ಕೆತ್ತನೆ, ಚಿತ್ರಕಲೆ ಮುಂತಾದುವುಗಳಲ್ಲಿ ನಿಷ್ಣಾತರಾಗಿದ್ದರು. ಕಮ್ಮಾರ ಬಡಗಿಗ, ಅಕ್ಕಸಾಲಿಗ, ಕಂಚುಗಾರ, ಮತ್ತು ಶಿಲ್ಪಿಗಳು ಒಂದೇ ಜಾತಿಯವರು.[೫೨] ಶಾಸನಗಳಲ್ಲಿ ಓಜಕುಲ ಎನ್ನುವ ಜಾತಿವಾಚಕಕ್ಕೆ ಸಿಗುವ ಸಮಾನವಾದ ಪದಗಳೆಂದರೆ ವಿಶ್ವ ಕರ್ಮಕುಲ, ವಿಶ್ವಕರ್ಮ ಕುಲಸ್ಥರು, ಪಾಂಚಕಾರುಕದವರು ಹಾಗೂ ಪಾಂಚಾಳರು.[೫೩] ಈ ಕುಶಲ ಕರ್ಮಿಗಳು ಪರಸ್ಪರ ವೃತ್ತಿ ವಿನಿಮಯ ಮಾಡಿಕೊಂಡಿರುವುದಕ್ಕೆ ಮತ್ತು ವೈವಾಹಿಕ ಸಂಬಂಧ ಬೆಳೆಸಿಕೊಂಡಿದ್ದರ ಬಗೆಗೂ ಶಾಸನಾಧಾರಗಳಿವೆ.[೫೪]

೩.೩. ಕುಲಕಸುಬುಗಳು ಬೆಳೆದುಬಂದ ದಾರಿ

ಮಾನವ ಮೊದಲು ಕಾಡು ಪ್ರಾಣಿಗಳಂತೆ ತಿರುಗಾಡುತ್ತಿದ್ದ ಹಂತವೊಂದಿತ್ತು. ಆಗ ಅವನು ಕೈಗೆ ಎಟುಕಿದ ಕಲ್ಲು, ಗುಂಡು, ಮರದ ಕೊಂಬೆ, ರೆಂಬೆ, ಎಸೆದು ಅಥವಾ ಬೀಸಿ ತನ್ನನ್ನು ಇತರೆ ಪ್ರಾಣಿಗಳ ಆಕ್ರಮಣಗಳಿಂದ ರಕ್ಷಿಸಿಕೊಳ್ಳುತ್ತಿದ್ದ. ಅವನೇ ತನ್ನ ಅಗತ್ಯಕ್ಕನುಗುಣವಾಗಿ ವಿವಿಧ ಆಯುಧಗಳ ರಚನೆಗೆ ತೊಡಗಿರಬಹುದು. ನೀರಡಿಕೆಯಾದಾಗ ನೀರಿಗೆ ಬಾಯಿ ಹಾಕುತ್ತಿದ್ದವನು ದೋಣಿಯಾಕಾರದ ಎಲೆಗಳಲ್ಲಿ, ಕರಟ, ಬುರುಡೆಗಳಲ್ಲಿ ನಿಂತ ನೀರು ಕಂಡು, ಕುಡಿದು ಅದೇ ಆಕಾರದ ಮಣ್ಣಿನ ಪಾತ್ರೆಗಳ ರಚನೆಗೆ ತೊಡಗಿರಬಹುದು. ಚಳಿಯಾದಾಗ ಹೊದ್ದುಕೊಳ್ಳುತ್ತಿದ್ದ ಮರದ ತೊಗಟೆ, ಪ್ರಾಣಿಯ ಚರ್ಮವು ವಸ್ತ್ರಗಳ ಅನ್ವೇಷಣೆಗೆ ಪ್ರೇರಣೆಯಾಗಿರಬಹುದು. ಹಾಗೆಯೇ ಸತ್ತ ಪ್ರಾಣಿಗಳ ಎಲುಬು, ಬೆನ್ನುಮೂಳೆ, ಪ್ರಾಣಿಗಳ ಕೊಂಬು-ಕೋರೆಗಳು ವಿವಿಧ ಉಪಯೋಗಕ್ಕೆ ಉಪಯೋಗಿಸಲು ಪ್ರೇರೇಪಿಸಿರಬಹುದು. ಮಾನವನ ಅಗತ್ಯಕ್ಕನುಗುಣವಾಗಿ ವಿವಿಧ ರೀತಿಯ ಪದಾರ್ಥಗಳನ್ನು ತಯಾರಿಸಲು ಮಾನವ ಅರಿತುಕೊಂಡ. ವೃತ್ತಿಗಳ ಹಿಂದೆ ಜೀವನಾಗತ್ಯದ ಒತ್ತಡ ಇರುತ್ತದೆಂಬುದನ್ನು ಮರೆಯಲಾಗದು. ಒಂದರ್ಥದಲ್ಲಿ ವೃತ್ತಿಗಳ ಉಗಮವು ಅಗತ್ಯಗಳ ಅನ್ವೇಷಣೆ ಎಂದೆನ್ನಬಹುದು.

ವೃತ್ತಿಗಳ ವಿಕಾಸಕ್ಕೂ ಮಾನವನ ಬುದ್ಧಿಭಾವಗಳ ಬೆಳವಣಿಗೆಗೂ ನೇರ ಸಂಬಂಧವಿದೆ. ಒಬ್ಬಂಟಿಯಾಗಿ ಜೀವಿಸುತ್ತಿದ್ದ ಮಾನವನು ಕುಟುಂಬ ಜೀವಿಯಾದ. ಕುಟುಂಬ ಜೀವಿಯಾದ್ದವನು ಗ್ರಾಮಜೀವಿಯಾದ ನಂತರ ಪಟ್ಟಣವಾಸಿಯಾದನು. ಈ ಎಲ್ಲಾ ಹಂತಗಳಲ್ಲಿಯೂ ಭಾವಜೀವಿಯಾಗಿ, ಬುದ್ಧಿಜೀವಿಯಾಗಿ ಹಲವಾರು ಸಂಬಂಧ ಸಂಪರ್ಕಗಳನ್ನು ವಿಸ್ತರಿಸಿಕೊಂಡು ತನ್ನ ಬದುಕುವಿಕೆ, ಇರುವಿಕೆಗಳಲ್ಲಿ ಪರಿವರ್ತನೆಗಳನ್ನು ಕಾಣುತ್ತಾ ಇಂದಿನವರೆಗೂ ಬೆಳೆಯುತ್ತಾ ಬಂದಿದ್ದಾನೆ. ಜೊತೆಗೆ ತನ್ನ ಸುತ್ತಲಿನ ಪರಿಸರ ಪರಿಕರಗಳನ್ನು ತನಗಾಗಿ ತನ್ನವರಿಗಾಗಿ ಬಳಸಿಕೊಳ್ಳುತ್ತಲೇ ಬಂದಿದ್ದಾನೆ. ಮಾನವ ಒಂದು ಹಂತದಲ್ಲಿ ಅಲೆಮಾರಿಯಾಗಿದ್ದವನು, ಅರೆ ಅಲೆಮಾರಿಯಾಗಿ, ನಂತರ ಒತ್ತಟ್ಟಿಗೆ ನೆಲೆಗೊಂಡು ಸುಖಸೌಕರ್ಯಗಳನ್ನು ಒಳಗೊಂಡು ಜೀವಿಸತೊಡಗಿದ್ದಾನೆ. ವಿವಿಧ ಪದಾರ್ಥಗಳನ್ನು ತಯಾರಿಸುವ ವೃತ್ತಿ ಅಥವಾ ಕಸುಬು ಅಥವಾ ಕಲೆಗಳು ಕೂಡ ಮಾನವನ ಈ ಬೆಳೆವಣಿಗೆಯೊಂದಿಗೆ ವಿಕಾಸಗೊಳ್ಳುತ್ತಾ ಬಂದಿವೆ.

ಎಲ್ಲಾ ವೃತ್ತಿಗಳು ಏಕಕಾಲಕ್ಕೆ ಅಸ್ಥಿತ್ವಕ್ಕೆ ಬಂದಿರಲಾರವು. ಮಾನವನ ಬೆಳವಣಿಗೆಯಲ್ಲಿ ಮೊದಲು ಬೇಟೆ, ಅನಂತರ ಬೇಸಾಯ ಪ್ರಧಾನವಾಗಿದೆ. ಅದಕ್ಕಾಗಿ ತನ್ನ ಸುತ್ತಲೂ ದೊರಕುತ್ತಿದ್ದ ಸಾಮಗ್ರಿಯ ಪರಿಮಿತಿಯಲ್ಲಿ ಕೆಲವೇ ಆಯುಧ, ಪಾತ್ರೆ, ಹೊದಿಕೆ, ವ್ಯವಸಾಯದ ಸಾಧನಗಳು, ಮುಂತಾದವುಗಳ ರಚನಾ ಚಟುವಟಿಕೆಗಳಲ್ಲಿ ತೊಡಗಿರಬಹುದು.

ಬೇಟೆ ಬೇಸಾಯ ಹಾಗೂ ನಿತ್ಯಜೀವನದ ಅಗತ್ಯಕ್ಕೆ ಬಳಸಿಕೊಳ್ಳಬಹುದಾದ ಮೂಲ ಸಾಮಗ್ರಿಗಳಲ್ಲಿ ಮಣ್ಣು, ಕಲ್ಲು, ಕಟ್ಟಿಗೆ, ತೊಗಟೆ, ಚರ್ಮ ಪ್ರಮುಖವಾದವು. ಲೋಹಗಳ ಬಳಕೆ ಅನಂತರದ್ದೇ ಆಗಿದೆ. ಈ ಎಲ್ಲಾ ಸಾಮಗ್ರಿಗಳನ್ನು ಕುಶಲತೆಯಿಂದ ತಯಾರಿಸಿ ಬಳಸಿಕೊಳ್ಳುತ್ತಾ ಬಂದ ಹಿನ್ನೆಲೆಯಲ್ಲಿ ಕುಂಬಾರ, ಕಮ್ಮಾರ, ನೇಕಾರ, ಬಡಗಿ, ಮೇದಾರ, ಕಲ್ಲುಕುಟಿಗ ಮುಂತಾದ ಕುಶಲಕರ್ಮಿಗಳ ಅಸ್ತಿತ್ವ ಸಾಧ್ಯವಾಗಿರಬೇಕು. ಪ್ರಮುಖವಾದ ಸಾಮಗ್ರಿಗಳ ಸತತ ಬಳಕೆ ಮತ್ತು ಹೆಚ್ಚಿನ ಅಗತ್ಯತೆ ಹೊಸ ಹೊಸ ಸಾಮಗ್ರಿಗಳ ಅನ್ವೇಷಣೆ ಮತ್ತು ಅವುಗಳನ್ನು ತಯಾರಿಸುವ ವೈವಿಧ್ಯತೆಗಳ ವಿಕಾಸಕ್ಕೆ ಕಾರಣವಾಗಿರಬೇಕು.

ಈ ಹಿನ್ನೆಲೆಯಲ್ಲಿ ಮಣ್ಣು, ಕಲ್ಲು, ಕಟ್ಟಿಗೆ, ತೊಗಟೆ, ನಾರು, ಬೇರು, ವಸ್ತ್ರ, ಚರ್ಮ ಮತ್ತು ಲೋಹಗಳನ್ನು ಪ್ರಾಚೀನ ಹಾಗೂ ಪ್ರಮುಖ ಮೂಲ ಸಾಮಗ್ರಿಗಳೆಂದು ತಿಳಿಯಬಹುದು. ಹಾಗೆಯೇ ಕುಂಬಾರ, ಕಮ್ಮಾರ, ಬಡಗಿ, ಕಲ್ಲುಕುಟಿಗ, ವಸನಕಾರ ಮಾಡುವ ಕಸುಬುಗಳು ಮೂಲ ಕಸುಬುಗಳೆನ್ನಬಹುದು. ವೃತ್ತಿ ಅಥವಾ ಕಸುಬುಗಳ ಬೆಳವಣಿಗೆ ಮತ್ತು ವಿಕಾಸದ ಚಾರಿತ್ರಿಕ ಹಿನ್ನೆಲೆಯನ್ನು ವಿವಿಧ ಅವಧಿ ಹಾಗೂ ಆಳ್ವಿಕೆದಾರರ ಕಾಲ ಘಟ್ಟಗಳನ್ನಾಗಿ ವರ್ಗಿಕರಿಸಿ ವಿಶ್ಲೇಷಣೆ ಮಾಡಬಹುದಾಗಿದೆ.

ಶಿಲಾಯುಗಗಳು: ಚರಿತ್ರೆಯ ಹಿಂದಿನಕಾಲವನ್ನು ಶಿಲಾಯುಗ ಮತ್ತು ತಾಮ್ರ ಯುಗ ಎಂದು ಎರಡುಭಾಗ ಮಾಡಬಹುದು ಇವುಗಳ ಕಾಲ ನಿರ್ಣಯಕ್ಕೆ ಅಗತ್ಯವಾದ ಮಾಹಿತಿಗಳು ಸಿಕ್ಕಿಲ್ಲ. ಪ್ರಾಚೀನ ಶಿಲಾಯುಗದ ಕಾಲ ಸುಮಾರು ಕ್ರಿ.ಪೂ.೩೫,೦೦೦–೧೨,೦೦೦. ಈ ಕಾಲದ ಜನರು ಮೃಗಗಳನ್ನು ಸಣ್ಣ ಕಲ್ಲುಗಳಿಂದಲೂ ಕಲ್ಲಿನಿಂದ ಮಾಡಿದ ಆಯುಧಗಳಿಂದಲೂ ಕೊಂದು ಹಸಿಯ ಮಾಂಸವನ್ನು ಭಕ್ಷಿಸುತ್ತಿದ್ದರು. ಬೇಟೆಗಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಚಲಿಸುತ್ತಾ ಮೃಗಗಳಂತೆ ಜೀವಿಸುತ್ತಿದ್ದರು. ಇವರಿಗೆ ವ್ಯವಸಾಯ ಕ್ರಮವಾಗಲಿ, ಬೆಂಕಿಯ ಉಪಯೋಗವಾಗಲಿ ತಿಳಿದಿರಲಿಲ್ಲ. ಇಂಡೋನಿಗ್ರಿಡ್ ಜನರು ಕಲ್ಲುಗಳಿಂದ ಕೊಡಲಿ, ಬಾಣದಮೊನೆ, ಭರ್ಚಿ ಕವಣಿಕಲ್ಲು ಚಾಕು ಕುಟ್ಟಣಿ ಕಲ್ಲು, ಚಕಮಕಿ ಕಲ್ಲು ಮುಂತಾದುವುಗಳನ್ನೂ ಮರದ ಭರ್ಚಿಗಳನ್ನು ಮಾಡುತ್ತಿದ್ದರು. ಇವು ಗುಂತಕಲ್ಲು, ಕಡೂರು, ನ್ಯಾಮತಿ, ಸೇಲಂ, ಬಳ್ಳಾರಿ, ಚಿತ್ತೂರು, ಕಡಪ, ಗೋದಾವರಿ ಮತ್ತು ಮಲಪ್ರಭಾ ತೀರ ಮೊದಲಾದ ಸ್ಥಳಗಳಲ್ಲಿ ಸಿಕ್ಕಿವೆ.

ಸೂಕ್ಷ್ಮ ಶಿಲಾಯುಗದ ವೆಡ್ಡಿಡ್ ಜನರು ಇಂಡೋನಿಗ್ರಿಡ್ ಜನರನ್ನು ಓಡಿಸಿ ಅವರ ಸ್ಥಳಗಳನ್ನು ಆಕ್ರಮಿಸಿ ಶಿಲಾಯುಗ ಸಂಸ್ಕೃತಿಯನ್ನು ಸ್ಥಾಪಿಸಿದರೆಂದು ಡಾ. ಐಕ್ಸಡ್ ಅಭಿಪ್ರಾಯ ಪಡುತ್ತಾರೆ. ಈ ಜನರು ಶಿಲೆಗಳನ್ನು ಬಹಳ ನಯವಾಗಿ ಕೆತ್ತಿ ಆಕಾರದಲ್ಲಿ ಸಣ್ಣದಾದ ಅನೇಕ ವಿಧವಾದ ಸಲಕರಣೆಗಳನ್ನು, ಕೋನಾಕಾರದ ಮರದ ತುಂಡುಗಳನ್ನು ಮಡಕೆಗಳ ಮೇಲೆ ಒತ್ತಿ, ಅಲಂಕಾರ ಮಾಡಿ ಒರಟಾದ ಮಡಕೆಗಳನ್ನು ಮಾಡಿಕೊಂಡಿದ್ದರು.[೩೬]

ನವಶಿಲಾಯುಗ ಕಾಲ ಸುಮಾರು ಕ್ರಿ.ಪೂ. ೩,೦೦೦. ಇಂಡಿಡ್ ಜನರು ವ್ಯವಸಾಯ, ಮಾತೃಪ್ರಧಾನ ಕುಟುಂಬ ವ್ಯವಸ್ಥೆ, ಗ್ರಾಮರಚನೆ ಮುಂತಾದುವುಗಳನ್ನು ಹೊಂದಿದ್ದು ನವಶಿಲಾಯುಗ ಸಂಸ್ಕೃತಿಯನ್ನು ಆರಂಭಿಸಿದರು. ಈ ಸಂಸ್ಕೃತಿಯ ಚಿಹ್ನೆಗಳು ರಾಜ್ಯದ ಬ್ರಹ್ಮಗಿರಿ, ಚಂದ್ರವಳ್ಳಿ, ಬಳ್ಳಾರಿ, ಮಾಗಡಿ, ಆನೆಕಲ್, ರಾಯಚೂರು, ಮಸ್ಕಿ, ಬಿಜಾಪೂರ ಮುಂತಾದ ಸ್ಥಳಗಳಲ್ಲಿ ಕಂಡುಬರುತ್ತವೆ. ಬಳ್ಳಾರಿಯಲ್ಲಿರುವ ಗುಡ್ಡಗಳಲ್ಲಿ ಕಬ್ಬಿಣದ ಕೈಗಾರಿಕೆಯ ಗುರುತುಗಳಿವೆ. ಕೆಲವು ಗುಹೆಗಳಲ್ಲಿ ನವಶಿಲಾಯುಗದ ಚಿತ್ರಕಲೆ ಕಾಣದೊರೆಯುತ್ತದೆ. ಈ ಚಿತ್ರಗಳಿಂದ ಈ ಜನರ ಜೀವನಕ್ರಮ ಹೇಗಿತ್ತೆಂಬುದನ್ನು ತಿಳಿಯಬಹುದು. ಚಕ್ರದ ಸಹಾಯದಿಂದ ಮಾಡಿದ ಕುಂಭಗಳು ಈ ಸ್ಥಳಗಳಲ್ಲಿ ಕಂಡುಬಂದಿವೆ. ಕೆಲವರು ಜಲಪ್ರದೇಶಗಳಲ್ಲಿ ಅಟ್ಟದ ಮೇಲೆ ಮನೆಗಳನ್ನು, ಗವಿಗಳ ಹೊರಗಡೆ ತಡಿಕೆಗಳನ್ನು ಕಟ್ಟಿಕೊಂಡು ಜೀವಿಸುತ್ತಿದ್ದರು. ಫಲವತ್ತಾದ ಮೈದಾನ ಪ್ರದೇಶಗಳಲ್ಲಿ ಸಣ್ಣಗ್ರಾಮಗಳನ್ನು ಕಟ್ಟಿಕೊಂಡು ವ್ಯವಸಾಯದಿಂದ ಜೀವಿಸುತ್ತಿದ್ದರು. 'ಕಟ್ಟುಮರನಾ' (Catamaran) ಮರದ ದೋಣಿಗಳ ಸಹಾಯದಿಂದ ಮೀನು ಹಿಡಿಯುತ್ತಿದ್ದರು. ಇವರ ಕಾಲದಲ್ಲಿ ಕಬ್ಬಿಣ, ತಾಮ್ರ ಬಳಕೆಯಲ್ಲಿದ್ದವು.

ಸ್ತ್ರೀ ಪುರುಷರು ಮೈಗೆ ಬಣ್ಣಗಳನ್ನು ಲೇಪಿಸಿಕೊಂಡು ಮಣ್ಣು, ಕಲ್ಲು, ಬಿದಿರು, ಲೋಹಗಳಿಂದ ಮಾಡಿದ ಆಭರಣಗಳನ್ನು ಧರಿಸುತ್ತಿದ್ದರು. ಮನೆಕೆಲಸ, ವ್ಯವಸಾಯ ಮತ್ತು ಮಡಕೆ ಮಾಡುವ ಕೆಲಸ ಸ್ತ್ರೀಯರದಾಗಿತ್ತು, ಪುರುಷರು ಬೇಟೆಯಾಡಲು ಮತ್ತು ಬೆಸ್ತರು ಮೀನು ಹಿಡಿಯಲು ಹೊರಗಡೆಯೇ ಕಾಲ ಕಳೆಯುತ್ತಿದ್ದರಿಂದ ಕುಟುಂಬದಲ್ಲಿ ಸ್ತ್ರೀಯರಿಗೆ ಪ್ರಾಧಾನ್ಯತೆ ಇತ್ತೆಂದು ಊಹಿಸಲಾಗಿದೆ.[೩೭]

೧೯೨೨ರಲ್ಲಿ ಬೆಳಕಿಗೆ ಬಂದ ಸಿಂಧೂನದಿಯ ತೀರದ ನಾಗರಿಕತೆಗೆ 'ಇಂಡೋ ಸಮೇರಿಯನ್' 'ಚಾಲ್ಕೋಲಿಥಿಕ್ ಅಥವಾ ಇಂಡಸ್ ನಾಗರಿಕತೆಯೆಂದು ಮೊದಲು ನಾಮಕರಣವಾಗಿದ್ದಿತು. ನಂತರ ಆ ಸ್ಥಳದ ಹೆಸರನ್ನು ಅನುಸರಿಸಿ 'ಹರಪ್ಪ' ಸಂಸ್ಕೃತಿಯೆಂದು ಕರೆಯುವುದು ವಾಡಿಕೆ. ಕ್ರಿ.ಶ ೧೮೮೦ ರಲ್ಲಿ ಕನಿಂಗ್‌ಹ್ಯಾಮ್ ಹರಪ್ಪ ಬಳಿ ನಾಗರಿಕತೆಯ ಕೆಲವು ಮುದ್ರೆಗಳನ್ನು ಸಂಗ್ರಹಿಸಿದ್ದರು. ಅನಂತರ ಸರ್ ಜಾನ್ ಮಾರ್ಷಲ್, ಆರ್.ಡಿ.ಬ್ಯಾನರ್ಜಿ ೧೯೨೨ರಲ್ಲಿ ಹರಪ್ಪ ಸಂಸ್ಕೃತಿಯನ್ನು ಮೊದಲು ಪ್ರಪಂಚಕ್ಕೆ ತೋರಿಸಿದರು. ಆಗಿನಿಂದ ದಯಾರಾಂ ಸಾಹಣಿ, ಮಜುಂದಾರ್, ಮ್ಯಾಕೆ ಮುಂತಾದವರು ಹೆಚ್ಚಿನ ಸಂಶೋಧನೆಯನ್ನು ನಡೆಸಿದರು.

ಭಾರತೀಯ ಸಮಾಜ ಪ್ರಾಚೀನವಾದದ್ದು. ಕ್ರಿ.ಪೂ.ಮೂರು ಸಾವಿರ ವರ್ಷಗಳ ಹಿಂದೆಯೇ ಭಾರತದಲ್ಲಿ ನಾಗರೀಕ ಸಮಾಜ ಬೆಳೆದಿತ್ತು ಎಂಬುದಕ್ಕೆ ಸಿಂಧೂನದಿ ಬಯಲಿನ ಹರಪ್ಪ ಮೊಹೆಂಜೋದಾರೋ ಮತ್ತಿತರ ಸಂಸ್ಕೃತಿಗಳೇ ನಿದರ್ಶನವಾಗಿವೆ. ಹರಪ್ಪ ಮೊಹೆಂಜೋದಾರೋ

ನಗರಗಳು ಸುವ್ಯವಸ್ಥಿತವಾಗಿ ಬೆಳೆದ ನಗರಗಳೇ ಆಗಿದ್ದವು. ಅವು ಸಂಪದ್ಭರಿತ ಜೀವನದ ಹೆಗ್ಗುರುತಾಗಿದ್ದವು. ಇಂದು ಅನೇಕ ಪಟ್ಟಣಗಳಲ್ಲಿ ಕಾಣುವಂತೆ ಹರಪ್ಪ, ಮೊಹೆಂಜೋದಾರೋ ನಗರ ಬೀದಿಗಳು ಎರಡು ಕಡೆಗಳಲ್ಲಿಯೂ ಅಂಗಡಿಗಳ ಸಾಲುಗಳಿದ್ದವು. ವ್ಯಾಪಾರ ವ್ಯವಹಾರಗಳು ಉತ್ತಮವಾಗಿ ನಡೆಯುತ್ತಿದ್ದವು. ಚಿನ್ನದ ಒಡವೆಗಳು, ಬೆಳ್ಳಿಸಾಮಾನುಗಳು, ವಜ್ರವೈಢೂರ್ಯಾದಿ-ರತ್ನಗಳು, ಮಣ್ಣಿನ ಸಾಮಾನುಗಳು, ತಾಮ್ರ ಮತ್ತು ಇತರೆ ಲೋಹದ ಆಯುಧಗಳು ಮತ್ತಿತರ ಸಲಕರಣೆಗಳು ಪ್ರಾಚ್ಯ ಸಂಶೋಧನೆಯಲ್ಲಿ ಹೇರಳವಾಗಿ ದೊರೆತಿವೆ. ಸಂಶೋಧಕರ ಪ್ರಕಾರ ಈ ನಗರಗಳಲ್ಲಿ ಪಂಡಿತರು, ಯೋಧರು, ವ್ಯಾಪಾರಿಗಳು, ಕುಶಲಕಲೆಗಾರರು ಅಂದರೆ ಗಾರೆ, ನೇಯ್ಗೆ, ಅಕ್ಕಸಾಲಿ, ಕುಂಬಾರ, ಉಳಿದ ಕೆಲಸ ಮಾಡುತ್ತಿದ್ದ ಚಮ್ಮಾರ, ಮೇದಾರ, ರೈತ, ಬೆಸ್ತ ಮೊದಲಾದ ಪಂಗಡಕ್ಕೆ ಸೇರಿದ ವಿವಿಧ ಕಸುಬುಗಳವರು ಇದ್ದರು.

ನೇಕಾರರು ತಯಾರು ಮಾಡುತ್ತಿದ್ದ ಹತ್ತಿ, ಉಣ್ಣೆ ಬಟ್ಟೆಗಳನ್ನು ಜನ ಧರಿಸುತ್ತಿದ್ದ ಸ್ತ್ರೀಯರು ಚಿನ್ನ, ಬೆಳ್ಳಿ, ತಾಮ್ರ ಮತ್ತು ಹಿತ್ತಾಳೆಯ ಆಭರಣಗಳನ್ನು ತೊಡುತ್ತಿದ್ದರು. ಅಂದಿನ ಅಕ್ಕಸಾಲಿಗರು ಚಿನ್ನದ ಆಭರಣಗಳನ್ನು ಮಾಡುವುದರಲ್ಲಿ ಚತುರರಾಗಿದ್ದರು. ಮನೆಯಲ್ಲಿ ಅನೇಕ ಬಗೆಯ ಮಣ್ಣಿನ, ಲೋಹದ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಇವುಗಳ ಜೊತೆಗೆ ಸೂಜಿ, ಅಲಗು, ಚಾಕು, ಕೊಡಲಿ, ಕುಡುಗೋಲು, ಉಳಿಮಣಿ, ಮಂಚ, ಜೊಂಡಿನಿಂದ ಮಾಡಿದ ಚಾಪೆಗಳು, ಮೇಣದ ಬತ್ತಿಯ ಹಿಡಿಕೆ, ತೂಕದ ಬಟ್ಟು, ಮೊಹರು ಹಾಗೂ ನರ್ತಕಿಯರ ಬೊಂಬೆಗಳು ಸಂಶೋಧನೆಯಲ್ಲಿ ದೊರಕಿವೆ. ಈ ಸರಕುಗಳನ್ನು ಗಮನಿಸಿದರೆ ಅವುಗಳನ್ನು ತಯಾರಿಸುವ ವಿವಿಧ ಕುಶಲಕರ್ಮಿಗಳು ಸಿಂಧೂ ಕಣಿವೆಯ ಸಂಸ್ಕೃತಿಯಲ್ಲಿದ್ದರೆಂಬುದು ತಿಳಿದುಬರುತ್ತದೆ. ಸಮಾಜದಲ್ಲಿ ಜನರ ಅವಶ್ಯಕತೆಗಳನ್ನು ಪೂರೈಸುವ, ಅವರ ನಂಬಿಕೆಗನುಗುಣವಾಗಿ ಕಟ್ಟು ಕಟ್ಟಳೆಗಳನ್ನು ನಡೆಸಿಕೊಡುವ ಪೂಜಾರಿ ಹಾಗೂ ಇತರ ಕಸುಬುದಾರರಾದ ಕುಂಬಾರರು; ತಾಮ್ರ ಲೋಹ ತಯಾರಿಕೆ ಹಾಗೂ ಈ ಲೋಹದ ಕಮ್ಮಾರಿಕೆ, ಆಭರಣದ, ಕಲ್ಲಿನ ಮನೆಗಳನ್ನು, ಭೋಗ ವಸ್ತುಗಳನ್ನು ತಯಾರು ಮಾಡುವ ಮೊದಲಾದ ವಿವಿಧ ಕುಶಲಕರ್ಮಿಗಳಿದ್ದರು. ಜನಸಮುದಾಯದಲ್ಲಿ ಪಶುಸಂಗೋಪನೆ ಕಸುಬಾಗುಳ್ಳ ವಲಸೆ ಹೋಗುವ ಅಲೆಮಾರಿಗಳು, ಒಕ್ಕಲುತನದವರು, ವಿವಿಧ ಜಾತಿಯ ಕಲ್ಲುಗಳಲ್ಲಿ ಕೆಲಸ ಮಾಡುವ ಇಂದಿನ ಕಲ್ಲು ವಡ್ಡರಂತೆ ಇರುವ ಜನರು, ಮಣಿ ಮಾಡುವವರು, ಚಾಪೆ ಹೆಣೆಯುವವರು, ಮಡಕೆ ಪಾತ್ರೆಗಳನ್ನು ಮಾಡುವವರು ಮೊದಲಾದ ಭಿನ್ನ ಭಿನ್ನ ಕಸುಬುದಾರರು, ಅತಿ ಮುಖ್ಯವಾಗಿ ಕಬ್ಬಿಣ ಅದಿರಿನ ನಿಕ್ಷೇಪಗಳ ನೆಲೆಯನ್ನು ಶೋಧಿಸಿ, ಅದಿರನ್ನು ಸಂಗ್ರಹಿಸಿ, ಕರಗಿಸಿ ಕಬ್ಬಿಣ ಲೋಹವನ್ನು ತಯಾರು ಮಾಡುವ ವರ್ಗದವರು; ಕಮ್ಮಾರಿಕೆ ಮಾಡುವವರು ಹೀಗೆ ಸಮಾಜವು ವೈವಿಧ್ಯಮಯವಾಗಿತ್ತು.

ಚಂದ್ರಗುಪ್ತ ಮೌರ್ಯ (ಕ್ರಿ.ಪೂ.೩೨೧–೨೯೭) ಮತ್ತು ಅಶೋಕ (ಕ್ರಿ.ಪೂ.೨೭೩)ನ ಆಳ್ವಿಕೆಯಲ್ಲಿ ವ್ಯವಸಾಯ ಪ್ರಮುಖ ಕಸುಬಾಗಿತ್ತು. ಜೊತೆಗೆ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತ ನೌಕೆಗಳನ್ನು ಕಟ್ಟುವ ಕಸುಬುದಾರರನ್ನು ಸರ್ಕಾರವೇ ನೇರವಾಗಿ ನೇಮಿಸಿಕೊಳ್ಳುತ್ತಿತ್ತು. ಕಸುಬುದಾರರು ಕೆಲವು ತೆರಿಗೆಗಳಿಂದ ಮುಕ್ತರಾಗಿದ್ದರು.

ಕರ್ನಾಟಕದ ಬಳ್ಳಾರಿ ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳು ಶಾತವಾಹನರ ಆಳ್ವಿಕೆಗೆ ಒಳಪಟ್ಟಿದ್ದವು. ಇವರ ಕಾಲದಲ್ಲಿ ಶಿಲ್ಪಿಗಳು, ಗಾರೆ ಕೆಲಸದವರು, ನೇಕಾರ, ಅಕ್ಕಸಾಲಿಗ, ಕಮ್ಮಾರ, ಕುಂಬಾರರು ವಿವಿಧ ಪದಾರ್ಥಗಳನ್ನು ತಯಾರು ಮಾಡುತ್ತಿದ್ದರೆಂಬುದಕ್ಕೆ ಲಭ್ಯವಿರುವ ಇಟ್ಟಿಗೆ, ಶಿಲ್ಪಗಳು, ವಸ್ತ್ರ, ಒಡವೆ, ಮಣ್ಣಿನ ಕೊಡ, ಹೂಜಿ, ಮುಚ್ಚಳ, ಕಬ್ಬಿಣ ಮತ್ತು ತಾಮ್ರದ ಮುಚ್ಚಳ, ತಟ್ಟೆಗಳಿಂದ ಊಹಿಸಬಹುದು.

ಶಾತವಾಹನರ ಚಾತುರ್ವರ್ಣದ ಪದ್ಧತಿ ಕದಂಬ ಮತ್ತು ಗಂಗರ ಆಳ್ವಿಕೆಯಲ್ಲೂ (ಕ್ರಿ.ಶ. ೩೨೫–೭೮೮) ಮುಂದುವರೆಯಿತು. ಕದಂಬ ಮತ್ತು ಗಂಗ ಅರಸರು ಶಿಲ್ಪಕಲೆಗೆ ಹೆಚ್ಚು ಮಹತ್ವ ನೀಡಿದ್ದರು. ಶಿಲ್ಪಿಗಳು ರಾಜಾಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅಕ್ಕಸಾಲಿಗರು ಚಿನ್ನದ ನಾಣ್ಯಗಳನ್ನು ತಯಾರಿಸುತ್ತಿದ್ದರು. ಸಮಾಜದಲ್ಲಿ ವಸನಕಾರರು, ಬಡಿಗರು, ಕಮ್ಮಾರರು, ಕುಂಬಾರರು, ಕಲ್ಲುಕುಟಗರು ಮಾಡುವ ಕಸುಬುಗಳಿಗೆ ರಾಜರ ಪ್ರೋತ್ಸಾಹವಿತ್ತು.

ಬಾದಾಮಿಯಿಂದ ಆಳುತ್ತಿದ್ದ ಚಾಲುಕ್ಯರು ಬನವಾಸಿಯ ಕದಂಬರನ್ನು ಸೋಲಿಸಿ ವಿಸ್ತಾರವಾದ ಸಾಮ್ರಾಜ್ಯವನ್ನು ನಿರ್ಮಾಣ ಮಾಡಿದರು. ಇವರ ಆಳ್ವಿಕೆಯಲ್ಲಿ ಬಾದಾಮಿ, ಐಹೊಳೆ ಮತ್ತು ಪಟ್ಟದ ಕಲ್ಲು ಪ್ರದೇಶಗಳು ಶಿಲ್ಪಕಲೆಯ ದೃಷ್ಟಿಯಿಂದ ಪ್ರಸಿದ್ಧವಾಗಿದೆ. ಶೈವ, ವೈಷ್ಣವ ದೇವಾಲಯಗಳನ್ನು ಗಮನಿಸಿದರೆ ಶಿಲ್ಪಕಲೆಗೆ ರಾಜಾಶ್ರಯವಿದ್ದುದು ಕಂಡುಬರುತ್ತದೆ. ಚಾಲುಕ್ಯರ ಕಾಲದಲ್ಲಿಯೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರೆಂಬ ವರ್ಗಗಳಿದ್ದವು. ಶೂದ್ರರಲ್ಲಿ ಕಮ್ಮಾರ, ಕುಂಬಾರ, ಒಕ್ಕಲಿಗ, ಸಮಗಾರ, ವಸನಕಾರ ಮುಂತಾದ ವೃತ್ತಿಗಾರರು ಕಂಡುಬರುತ್ತಾರೆ. ಸಮಗಾರನಿಗೆ ತೆರಿಗೆಯಿಂದ ಮುಕ್ತಿಗೊಳಿಸಲಾಗಿತ್ತು. ವಿವಿಧ ಕಸುಬುದಾರರ ಮೇಲೆ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಶಿಲ್ಪಿಗಳಿಗೆ ಶಿಲ್ಪ ಶಾಸ್ತ್ರದ ವಿದ್ಯೆ ಕಲಿಸುವ ವ್ಯವಸ್ಥೆ ಇತ್ತು. ಆದರೆ ಬಡಿಗರು, ಕಮ್ಮಾರರು ಚಮ್ಮಾರರು ಮೊದಲಾದ ಕಸುಬುದಾರರು ವಂಶಪಾರಂಪರ್ಯವಾಗಿ ಬಂದ ಕುಶಲ ವಿದ್ಯೆಯನ್ನು, ತರಬೇತಿಯನ್ನು ತಮ್ಮ ಹಿರಿಯರಿಂದ ಕಲಿತಿದ್ದರು.

ಕರ್ನಾಟಕ ಚರಿತ್ರೆಯ ಅಧ್ಯಯನ ನಡೆಸುವಾಗ ಕ್ರಿ.ಶ. ೮ರಿಂದ ೧೪ನೇ ಶತಮಾನಗಳ ಅವಧಿ ವಿಶಿಷ್ಟ ರೀತಿಯದ್ದು. ಈ ಅವಧಿಯಲ್ಲಿ ಕೃಷಿ ಮತ್ತು ಉದ್ದಿಮೆಗಳು ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ತರುತ್ತಿದ್ದವು. ಕುಶಲಕರ್ಮಿಗಳ ಮೇಲಿನ ತೆರಿಗೆಯು ರಾಜ್ಯದ ಬೊಕ್ಕಸಕ್ಕೆ ಹೆಚ್ಚು

ಆದಾಯ ತರುತ್ತಿತ್ತು. ಕುಶಲಕರ್ಮಿಗಳ ಮೇಲೆ ವಿಧಿಸುತ್ತಿದ್ದ ವಿವಿಧ ತೆರಿಗೆಗಳ ಕುರಿತು ಅನೇಕ ಶಾಸನಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಬಡಗಿ, ಕಮ್ಮಾರ, ಅಕ್ಕಸಾಲಿಗ, ಕಂಚುಗಾರ ಮತ್ತು ಶಿಲ್ಪಿ ಎಂಬ ಐದು ವಿಧವಾದ ಕೆಲಸಗಾರರನ್ನು ಒಟ್ಟಿಗೆ ಸೇರಿಸಿ ಪಾಂಚಾಳರು, ಪಾಂಚಕಾರುಕರು, ವಿಶ್ವಕರ್ಮರು, ಓಜರು ಮುಂತಾಗಿ ಹೆಸರಿಸಲಾಗಿದೆ.[೩೮] ಇವರೆಲ್ಲರಿಗೂ ಸಮಾನವಾಗಿ ಸೇರಿಸಿ ವಿಧಿಸುತ್ತಿದ್ದ ತೆರಿಗೆಯನ್ನು ಪಾಂಚಾಳ ತೆರಿಗೆ, ಪಂಚಕಾರುಕದೆರೆ ಎಂದು ಕರೆಯಲಾಗಿದೆ.[೩೯] ರಾಷ್ಟ್ರಕೂಟರ ಕಾಲದಲ್ಲಿ ವಿವಿಧ ಕುಶಲ ಕರ್ಮಿಗಳಿದ್ದರೆಂಬುದು ಶಾಸನಗಳಿಂದ ತಿಳಿದುಬರುತ್ತದೆ.

ಕೃಷಿ ಕಾರ್ಮಿಕರು ಹಾಗೂ ಕುಶಲಕರ್ಮಿಗಳನ್ನು ಸಂಬಳ ಕೊಡದೆ ದುಡಿಸುವ ಬಲಾತ್ಕಾರದ ದುಡಿಮೆ ಮಧ್ಯಕಾಲೀನ ಕರ್ನಾಟಕದಲ್ಲಿ ಇತ್ತು ಕಮ್ಮಾರರು ಬಿಟ್ಟಿ ಕೆಲಸವನ್ನು ಮಾಡಬೇಕು ಎನ್ನುವ ವಿವರಣೆ ಶಾಸನವೊಂದರಲ್ಲಿ ಸಿಗುತ್ತವೆ.[೪೦]

ಹನ್ನೆರಡನೇ ಶತಮಾನದ ಶರಣರು ಸಮಾಜದಲ್ಲಿದ್ದ ವಿವಿಧ ವೃತ್ತಿಗಳ ಹೆಸರನ್ನು ನೀಡಿದ್ದಾರೆ. ಅವುಗಳೆಂದರೆ ಒಕ್ಕಲಿಗ, ಗೊಲ್ಲ, ಕುಂಬಾರ, ಪಾಂಚಾಳ, ಉಪ್ಪಾರ, ನಾಯಿಂದ, ಡೊಂಬ, ಬಣಜಿಗ, ಅಗಸ, ಜೇಡ, ಕಬ್ಬಿಲ, ಹೊಲೆಯ ಈಳಿಗ, ಸಮಗಾರ, ಮಚ್ಚಿಗ, ಮಾದಿಗ ಇತ್ಯಾದಿ. ಅನುಭವ ಮಂಟಪದಲ್ಲಿ ಎಲ್ಲಾ ವೃತ್ತಿದಾರರು ಸೇರುತ್ತಿದ್ದರು. ವೃತ್ತಿದಾರರಲ್ಲಿ ಮುಖ್ಯವಾಗಿ ಅಗಸರು, ನಾವಿದ, ನೇಕಾರ, ಬಳೆಗಾರ, ಬೆಸ್ತ, ತೈಲಿಗ, ಚಿಪ್ಪಿಗ, ತಂಬುಲಿಗ, ಶಿಲ್ಪಿ, ಕಮ್ಮಾರ, ಬಡಗಿ, ಅಕ್ಕಸಾಲಿಗ ಮತ್ತು ಕಂಚುಗಾರರು ಪ್ರಮುಖರು.

ರಾಷ್ಟ್ರಕೂಟರಿಂದ ಹೊಯ್ಸಳರ ಅವನತಿಯವರೆಗಿನ ಅವಧಿಯಲ್ಲಿ ವಿವಿಧ ವೃತ್ತಿಯಲ್ಲಿ ತೊಡಗಿಕೊಂಡಿದ್ದ ಕುಶಲಕರ್ಮಿಗಳು ಸಾಮ್ರಾಜ್ಯದ ಬೆಳವಣಿಗೆಗೆ ಕಾರಣರಾಗಿದ್ದರು. ವಿವಿಧ ವೃತ್ತಿಗಳು ಕೃಷಿ ಆಧಾರಿತವಾಗಿದ್ದವು. ಎಣ್ಣೆ ತಯಾರಿಕೆ, ಬೆಲ್ಲ ಮತ್ತು ಸಕ್ಕರೆ ಉತ್ಪಾದನೆ, ಬಟ್ಟೆಗಳ ನೇಯುವಿಕೆ ಮುಂತಾದವು ಕೃಷಿ ಆಧಾರಿತವಾದವುಗಳು. ಇವುಗಳಲ್ಲದೆ ಮರದ ಕೆಲಸ, ಮಡಕೆ ತಯಾರಿಕೆ, ಆಭರಣಗಳ ತಯಾರಿಕೆ, ಗಣಿಗಾರಿಕೆ, ಯುದ್ಧೋಪಕರಣಗಳ ತಯಾರಿಕೆ, ಮನೆ ಬಳಕೆ ಸಾಮಗ್ರಿಗಳ ತಯಾರಿಕೆ ಮುಂತಾದ ಕೈಗಾರಿಕೆಗಳು ಉತ್ಪಾದನೆಯಲ್ಲಿ ತೊಡಗಿದ್ದವು. ಎಣ್ಣೆ ಉತ್ಪಾದಿಸುವವರನ್ನು ತೈಲಿಗ, ತೆಲ್ಲಿಗಾರ ಗಾಣಿಗ, ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು.[೪೧]

ಎಣ್ಣೆ ಉತ್ಪಾದನೆ ಮತ್ತು ಮಾರಾಟ ಒಂದೇ ಕಡೆ ನಡೆಯುತ್ತಿತ್ತು. ಎತ್ತುಗಾಣ, ಕೈಗಾಣ, ಮೆಟ್ಟುಗಾಣಗಳಲ್ಲಿ ಎಣ್ಣೆ ಬೀಜಗಳನ್ನು ಹಾಕಿ ಎಣ್ಣೆ ಉತ್ಪಾದಿಸುತ್ತಿದ್ದರು.[೪೨] ಗಾಣದ ಮೇಲೆ ಗಾಣದೆರೆ ತೆರಿಗೆಯನ್ನು ವಿಧಿಸುತ್ತಿದ್ದರು. ಬಟ್ಟೆ ನೇಯುವ ಉದ್ದಿಮೆಗಳ ಉಲ್ಲೇಖಗಳು ಅನೇಕ ಶಾಸನಗಳಲ್ಲಿ ಸಿಗುತ್ತವೆ.[೪೩] ನೇಕಾರರ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ನೂಲುಧೆರೆ, ಮಗ್ಗದೆರೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು ಮಣ್ಣಿನ ಮಡಕೆ ತಯಾರಿಸುವವರನ್ನು ಕುಂಬಾರರು

ಎನ್ನುವ ಹೆಸರಿನಿಂದ ಕರೆಯಲಾಗುತ್ತಿತ್ತು. ಕುಂಬಾರರು ಮಡಕೆ ತಯಾರಿಕೆಗೆ ಬಳಸುತ್ತಿದ್ದ ಚಕ್ರ, ಮಣ್ಣು ಮುಂತಾದ ವಿಚಾರಗಳನ್ನು ಶಾಸನಗಳು ವಿವರವಾಗಿ ತಿಳಿಸುತ್ತವೆ. ಕುಂಬಾರರ ಮೇಲೆ ವಿಧಿಸುವ ತೆರಿಗೆಯನ್ನು ಕುಂಬಾರದೆರೆ ಎಂದು ಹೆಸರಿಸಲಾಗಿದೆ.[೪೪] ಕೆಲವು ಶಾಸನಗಳಲ್ಲಿ ಚಿನ್ನದ ಗಣಿ, ಕಬ್ಬಿಣದ ಗಣಿ, ತಾಮ್ರದಗಣಿ ಎಂಬ ಉಲ್ಲೇಖಗಳು ಸಿಗುತ್ತವೆ.[೪೫] ಕಬ್ಬಿಣದ ಕೈಗಾರಿಕೆ ಕೈಗಾರಿಕೋದ್ಯಮದಲ್ಲಿ ಪ್ರಮುಖ ಸ್ಥಾನ ಪಡೆದಿತ್ತು. ಕೃಷಿ ಮತ್ತು ಕೃಷಿಯೇತರ ಕೆಲಸಗಳಿಗೆ ಕಬ್ಬಿಣದಿಂದ ತಯಾರಿಸಿದ ಉಪಕರಣಗಳು ಅವಶ್ಯಕ. ಈ ಉಪಕರಣ ತಯಾರಿಸುವವರು ಕಮ್ಮಾರರು. ಕಮ್ಮಾರರು ಯುದ್ಧೋಪಕರಣಗಳನ್ನು ತಯಾರಿಸುತ್ತಿದ್ದರು. ತಾಮ್ರ, ಹಿತ್ತಾಳೆ ಮತ್ತು ಕಂಚು ಈ ಮೂರು ಲೋಹಗಳಿಂದ ವಿವಿಧ ವಸ್ತುಗಳನ್ನು ಉತ್ಪಾದಿಸಲಾಗುತ್ತಿತ್ತು. ಕಂಚುಗಾರರು ದಿನನಿತ್ಯದ ಬಳಕೆಯ ಪಾತ್ರೆಗಳನ್ನಷ್ಟೇ ಅಲ್ಲದೆ, ದೇವತೆ ಮೂರ್ತಿಗಳನ್ನು ತಯಾರಿಸುತ್ತಿದ್ದರು. ಕೆ.ಎಸ್.ಕುಮಾರಸ್ವಾಮಿ ಯವರು ತಮ್ಮ ಕೃತಿಯಲ್ಲಿ ನಾಚೋಜ, ಕಾಳೋಜ, ಮತ್ತು ಅವಕೋಜ ಎನ್ನುವ ಕಂಚುಗಾರರನ್ನು ಶಾಸನಗಳನ್ನು ಆಧರಿಸಿ ಉಲ್ಲೇಖಿಸಿದ್ದಾರೆ.[೪೬]

ಮರದಿಂದ ವಿವಿಧ ವಸ್ತುಗಳನ್ನು ತಯಾರಿಸುವವರು ಬಡಗಿಗಳು. ಇವರು ಜನರು ವಾಸಿಸುವ ಮನೆ ಹಾಗೂ ಬಳಸುವ ಉಪಕರಣಗಳು ಹಾಗೂ ಬಂಡಿ, ರಥಗಳನ್ನು ನಿರ್ಮಿಸುತ್ತಿದ್ದರು. ಬಡಗಿಗಳು ಹಡಗುಗಳನ್ನು ನಿರ್ಮಿಸುತ್ತಿದ್ದರು ಎನ್ನುವ ಮಾಹಿತಿಗಳು ಶಾಸನಗಳು ಮತ್ತು ಜನಪದ ಸಾಹಿತ್ಯದಲ್ಲಿ ಸಿಗುತ್ತದೆ.[೪೭] ಬಡಗಿಗಳಿಗೆ ಭೂಮಿಯನ್ನು ದಾನ ನೀಡಲಾಗುತ್ತಿತ್ತು. ಚಂಪೋಜ ಎನ್ನುವ ಹೆಸರಿನ ಬಡಗಿಗೆ ಅವನ ಸೇವೆಯನ್ನು ಪರಿಗಣಿಸಿ ಭೂಮಿಯನ್ನು ದಾನ ನೀಡಲಾಗಿತ್ತು.[೪೮]

ಅಕ್ಕಸಾಲಿಗರು ನಾಣ್ಯಗಳನ್ನು ತಯಾರಿಸುವ ಕಮ್ಮಟದ ಒಡೆಯರಾಗಿದ್ದರು. ಆಭರಣಗಳನ್ನು ತಯಾರಿಸುವ ಕುಶಲಕರ್ಮಿಗಳು ಅಕ್ಕಸಾಲಿಗರು ಆಭರಣ ತಯಾರಿಕೆಯು ಅತ್ಯಂತ ಸೂಕ್ಷ್ಮ ಕೆಲಸವಾಗಿದ್ದು ಅಕ್ಕಸಾಲಿಗರು ತಾಂತ್ರಿಕ ಜ್ಞಾನ ಪಡೆದುಕೊಂಡಿದ್ದರು. ಹೊಯ್ಸಳ ಅರಸ ನರಸಿಂಹನು ಅಕ್ಕಸಾಲಿ ಕಾಳಾಜಿ ಎನ್ನುವನಿಗೆ ಬಂಗಾರದ ಕೆಲಸ ಮಾಡಿದ್ದಕ್ಕೆ ಭೂಮಿಯನ್ನು ದಾನ ಮಾಡಿದ ವಿವರ ಶಾಸನದಲ್ಲಿದೆ.[೪೯] ಆಭರಣಗಳನ್ನು ತಯಾರಿಸುತ್ತಿದ್ದ ಬಳೆಗಾರ ಮಾರಶೆಟ್ಟಿ ಬಳೆ ವ್ಯಾಪಾರ ಮಲ್ಲಶೆಟ್ಟಿ, ಮುಂತಾದ ಅಕ್ಕಸಾಲಿಗರ ಹೆಸರುಗಳು ಶಾಸನಗಳಲ್ಲಿ ಕಂಡುಬರುತ್ತವೆ.[೫೦]

ಮಧ್ಯಕಾಲೀನ ಕರ್ನಾಟಕದ ಆರ್ಥಿಕ ಚಟುವಟಿಕೆಗಳಲ್ಲಿ ವೃತ್ತಿ ಸಂಘಗಳು ಮುಖ್ಯವಾದ ಪಾತ್ರ ವಹಿಸುತ್ತಿದ್ದವು. ಗಾಣಿಗರು, ಕುಂಬಾರರು, ಕಮ್ಮಾರರು, ಬಡಗಿಗಳು ಶಿಲ್ಪಿಗಳು, ತಂಬುಲಿಗ, ಮಾಲೆಕಾರರು, ಕಂಚುಗಾರ, ನೇಕಾರ, ಮೊದಲಾದವರು ಪ್ರತ್ಯೇಕ ವೃತ್ತಿ ಸಂಘಗಳನ್ನು ರಚಚಿ ವೃತ್ತಿ ತೆರಗೆಯನ್ನು ನೀಡುತ್ತಿದ್ದರು. ಪ್ರತಿಯೊಂದು ವೃತ್ತಿಯವರು ತಮ್ಮದೇ ಆದ ಸಂಘಗಳನ್ನು ರಚಿಸಿಕೊಳ್ಳುತ್ತಿದ್ದರು. ಉತ್ಪಾದನೆ ಮತ್ತು ವ್ಯಾಪಾರ ವೃತ್ತಿಯವರಲ್ಲಿ ಗಾಣಿಗರು, ಮಾಲೆಕಾರರು

ತೋಟ, ನೇಕಾರ, ಕಂಚುಗಾರ, ಚಿಪ್ಪಿಗ, ಶಿಲ್ಪಿಗ, ಕಮ್ಮಾರರು ಮುಂತಾದವರು ಪ್ರಮುಖರಾಗಿದ್ದು ಅವರು ರಚಿಸಿಕೊಂಡ ಸಂಘಗಳ ಕುರಿತು ಶಾಸನಗಳಲ್ಲಿ ಉಲ್ಲೇಖಗಳು ಸಿಗುತ್ತವೆ.[೫೮]

ವಿಜಯನಗರದ ಕಾಲದ ಕೈಗಾರಿಕಾ ಬೆಳವಣಿಗೆಯ ಪರ್ವಕಾಲವೆಂದರೆ ತಪ್ಪಾಗಲಾರದು. ಸಾಮ್ರಾಜ್ಯದಲ್ಲಿ ಭೂಕಂದಾಯದ ನಂತರ ಬೊಕ್ಕಸಕ್ಕೆ ಗೃಹ ಕೈಗಾರಿಕೆ, ಕೈಕಸುಬುಗಳು, ವ್ಯಾಪಾರದ ಮೇಲೆ ವಿಧಿಸುತ್ತಿದ್ದ ತೆರಿಗೆಗಳಿಂದ ಹೆಚ್ಚಿನ ಆದಾಯ ಬರುತ್ತಿತ್ತು, ವಿಜಯನಗರ ಸಾಮ್ರಾಜ್ಯದ ಪ್ರಮುಖ ಕೈಗಾರಿಕೆಗಳೆಂದರೆ ಹತ್ತಿ ಮತ್ತು ರೇಷ್ಮೆ ಬಟ್ಟೆಗಳ ತಯಾರಿಕೆ, ಲೋಹದ ವಸ್ತುಗಳ ತಯಾರಿಕೆ, ಮಡಕೆ ಕುಡಿಕೆ ತಯಾರಿಕೆ, ಬಡಗಿ ಕೆಲಸ, ಚರ್ಮ ಹದಮಾಡುವ ಕೈಗಾರಿಕೆ, ಬೆಲ್ಲದ ಕೈಗಾರಿಕೆ, ಎಣ್ಣೆ ತಯಾರಿಕೆ, ಬಿದಿರು ಬೆತ್ತದ ತಯಾರಿಕೆ, ಉಪ್ಪು ತಯಾರಿಸುವುದು ಮೊದಲಾದವು ಸಾಮ್ರಾಜ್ಯದಾದ್ಯಂತ ಸಾಮಾನ್ಯವಾಗಿ ಹರಡಿಕೊಂಡಿದ್ದ ಕರಕುಶಲ ಕಸುಬುಗಳಾಗಿದ್ದವು.

ವಿಜಯನಗರ ಸಾಮ್ರಾಜ್ಯದಲ್ಲಿದ್ದ ನಾನಾ ವೃತ್ತಿಗಳಿಗೆ ಸಂಬಂಧಿಸಿದ ಕುಶಲಕರ್ಮಿಗಳನ್ನು ವಿವಿಧ ಆಕರಗಳಿಂದ ತಿಳಿದುಕೊಳ್ಳಬಹುದು. ಕವಿಗಳು ಕೊಡುವ ಪುರವರ್ಣನೆಯ ಚಿತ್ರದಲ್ಲಿ ನಾನಾ ವೃತ್ತಿಬಾಂಧವರು ವಾಸಿಸುತ್ತಿದ್ದ ಕೇರಿಗಳ ಚಿತ್ರವು ದೊರೆಯುತ್ತದೆ.[೫೯] ಕನಕದಾಸರು ಪಾಂಚಾಳರ ಹೆಸರನ್ನು ಪ್ರಸ್ತಾಪಿಸಿ, ಅವರಲ್ಲಿ ಕಂಚುಗಾರರು, ಕೈದುಗಾರರು, ಹೊಳೆವ ಹೊಮ್ಮಂಚಗಾರರು ಮುಂತಾದವರ ಹೆಸರುಗಳನ್ನು ಹೇಳಿದ್ದಾರೆ.[೬೦] ತೊರವೆ ನರಹರಿ ಹಾಗೂ ನಂಜುಂಡ ಕವಿ ಕೊಡುವ ನಗರ ಚಿತ್ರವನ್ನು ಪರಿಶೀಲಿಸಿ ಅಲ್ಲಿ ಬರುವ ನಾನಾ ವಿಧವಾದ ವೃತ್ತಿಯವರನ್ನು ಗಮನಿಸಬಹುದು.

"ಬಡಗಿ, ಕಮ್ಮಾರ, ವಸುವಿಭೇದಕ, (ಅಕ್ಕಸಾಲೆ) ತಾಮ್ರಮರ್ಧನ-(ಲೋಹಕಾರ) ಮಸಗ (ಸಾಣೆಹಿಡಿಯುವವ) ಮುಚ್ಚಿಗ,(ಗಾರೆ ಕೆಲಸದವ) ರಜಕ, ಚಿತ್ರಿಕ, ಕಟುಕ(ಮಾಂಸ ಮಾರುವವ) ಕಲ್ಲುಕುಟಿಕ, ಕುಸುಮಮಾಲಿಕ, ಹಾವಾಡಿಗರಿಂದೆಸವ, ಹರದರ (ವ್ಯಾಪಾರಿ)ಕೇರಿಗಳಲಿ...,ದೊಸಿಗ(ಸೀರೆ ವ್ಯಾಪಾರಿ) ಬೂಸಗ, ಚಪ್ಪಿಗ, ಬಚ್ಚರಣಿ(ವಜ್ರ ಕತ್ತರಿಸುವವನು) ಬಳೆಗಾರ, ಬೋಗಾರ (ಲೋಹಕಾರ)......ತಂಬುಲಿಗ, ಜಂಗಮ, ಜೋಗಿಗಳ ಜಂಗುಳಿಗಗೇರಿಗಳೊಳಗೆ' (ತೊರಾ, ಸುಂಕಾ, ೮-೫೨,೫೩) ಪರದರರ ಕರಣಿಕರ, ಮಡಿವಾಳ, ಮಾಲೆಕಾರ, ಕಂಚುಗಾರ, ಕಲ್ಕುಟಿಗ, ಬಡಗಿ, ಕವಮ್ಮಾರರು, ಅಂಚುಗಾರ, ಸಮ್ಮಗಾರ, ಅಚ್ಚುಗಾರ, ಬಣ್ಣಗಾರ, ಮಣಿಹಗಾರರ ಕೇರಿಗಳೆಸೆದವುದ್ದದೊಳು".[೬೩]

ಕವಿಗಳು ಕೊಡುವ ಚಿತ್ರಗಳಲ್ಲಿ ಕಲಾಕುಶಲಿಗಳಿದ್ದಾರೆ. ಸಾಹಿತ್ಯ, ಸಂಗೀತ ನೃತ್ಯವನ್ನು ಬಲ್ಲವರಿದ್ದಾರೆ. ಜೋತಿಷ್ಯವನ್ನು ಬಲ್ಲವರು, ವೈದ್ಯರು ಕರುಣಿಕರು ಇದ್ದಾರೆ. ಅರಮನೆಯಲ್ಲಿ ಸೇನಾ ವಿಭಾಗಕ್ಕೆ ಸೇರಿದಂತೆ ಗಜವಾಜಿವಾಹಕರು, ಕೈದುಗಾರರು, ಸಂಚುಗಾರರು, ಕಠಾರಿಶೂರರು,

ಗಡಿಮುಖ್ಯಸ್ಥರು, ಡಂಗೂರ ಹೊಡೆಯುವವರು, ಸೈನ್ಯವನ್ನು ಮುಂಚೆ ಕಂಡು ತಿಳಿಸುವವರು, ಗರುಡಿಯಾಚಾರ್ಯರು, ಹೊಟ್ಟೆಪಾಡಿಗಾಗಿ ಹತ್ತಾರು ವೇಷ ಕಟ್ಟಿರುವ ಜಂಗಮರು, ಜೋಗಿಗಳು ದಾಸಯ್ಯಗಳು ಹಾವಾಡಿಗರು, ಬಿಸಿಲಿನಲ್ಲಿ ಬೆವರು ಸುರಿಸಿ ದುಡಿಯುವ ಬೆಸಮಕ್ಕಳು, ಕಟ್ಟಿಗೆ ಹೊರುವವರು, ಕುಡುಗೋಲು ಹಿಡಿದು ಕೈಗೂಲಿ ಮಾಡುವ ಶ್ರಮಜೀವಿಗಳು, ಮಲ್ಲರು, ಜೂಜುಗಾರರು, ಕೊಲ್ಲಟಿಗರು(ಡೊಂಬರು) ಸೂಳೆಯರು ಇದ್ದಾರೆ.[೩೪]

ಈ ಮೇಲಿನ ಕವಿಗಳು ನೀಡಿರುವ ವಿಜಯನಗರ ಸಾಮ್ರಾಜ್ಯದ ನಗರ ಚಿತ್ರಣವನ್ನು ಗಮನಿಸಿದರೆ, ಸಾಮ್ರಾಜ್ಯದಲ್ಲಿ ವಿವಿಧ ವೃತ್ತಿಗಳನ್ನು ಮಾಡುತ್ತಿದ್ದ ಕಸುಬುದಾರರು ಇದ್ದರೆಂದು ಸ್ಪಷ್ಟವಾಗುತ್ತದೆ.

ವಿಜಯನಗರ ಸಾಮ್ರಾಜ್ಯದ ಪ್ರಮುಖ ವೃತ್ತಿಗಳನ್ನು ವಿವರಿಸುವುದು ಇಲ್ಲಿ ಅಗತ್ಯ. ಅಂದು ಕೃಷಿಯನ್ನು ಬಿಟ್ಟರೆ ಕೈಮಗ್ಗದಿಂದ ಬಟ್ಟೆಯನ್ನು ತಯಾರಿಸುವುದು ಪ್ರಮುಖ ಕಸುಬು, ಇದೊಂದು ಪ್ರಾಚೀನ ಕಸುಬು. ಈ ಕಸುಬಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀಯರು ತೊಡಗಿರುತ್ತಿದ್ದರು. ಹತ್ತಿಯನ್ನು ಶುದ್ಧಗೊಳಿಸಿ, ಕೈಗಾತ್ರದ ಉಂಡೆಗಳನ್ನು ಮಾಡಿಕೊಂಡು ಚರಕಗಳಲ್ಲಿ ನೂಲು ತಯಾರಿಸುತ್ತಿದ್ದರು. ನಂತರ ಮಗ್ಗಗಳಲ್ಲಿ ಸ್ತ್ರೀ, ಪುರುಷರಿಗೆ ಬೇಕಾದ ಬಟ್ಟೆಗಳನ್ನು ತಯಾರಿಸಿ ಸ್ಥಳೀಯ ಸಂತೆ ಹಾಗೂ ಜಾತ್ರೆಗಳಲ್ಲಿ ಮಾರಾಟ ಮಾಡುತ್ತಿದ್ದರು. ವಿದೇಶಗಳಿಗೂ ಬಟ್ಟೆಯನ್ನು ರವಾನಿಸುತ್ತಿದ್ದರು. ಅಂದು ಬಳ್ಳಾರಿ ಮತ್ತು ರಾಯಚೂರುಗಳಲ್ಲಿ ಬೆಳೆಯುತ್ತಿದ್ದ ಹತ್ತಿ ಕೈಮಗ್ಗದ ಅಭಿವೃದ್ಧಿಗೆ ನೆರವಾಗಿತ್ತು.

ವಿಜಯನಗರ ಅರಸರ ಕಾಲದಲ್ಲಿ ಉಣ್ಣೆ ತಯಾರಿಕೆಯು ಒಂದು ಪ್ರಮುಖ ಕಸುಬಾಗಿತ್ತು. ಬಳ್ಳಾರಿ ಚಿತ್ರದುರ್ಗ, ಕೋಲಾರ, ಚಿಕ್ಕಮಗಳೂರು, ವಿಭಾಗಗಳಲ್ಲಿ ಹೆಚ್ಚಾಗಿ ಉಣ್ಣೆ ತಯಾರಿಸುವ ಕೇಂದ್ರಗಳಿದ್ದವು. ಕೊಪ್ಪಳ, ಬಳ್ಳಾರಿ, ಸಿಂಧನೂರು, ಸಿರುಗುಪ್ಪ, ರಾಯಚೂರು ಕಂಬಳಿಗಳನ್ನು ತಯಾರಿಸುವ ಕೇಂದ್ರಗಳಾಗಿದ್ದವು.

ಸಾಮ್ರಾಜ್ಯದ ಮತ್ತೊಂದು ಪ್ರಮುಖ ಗೃಹ ಕೈಗಾರಿಕೆ ಚಿನಿವಾರಿಕೆ ಮತ್ತು ಕಮ್ಮಾರಿಕೆ. ಅಂದು ಸಮಾಜದ ಎಲ್ಲಾ ವರ್ಗಗಳಿಂದ ಬೇಡಿಕೆ ಬರುತ್ತಿದ್ದ ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ಅಕ್ಕಸಾಲಿಗರು ತಯಾರಿಸಿಕೊಡುತ್ತಿದ್ದರು. ಪೇಟೆಗಳಲ್ಲಿ ಚಿನ್ನ ಮತ್ತು ಬೆಳ್ಳಿ ಗಟ್ಟಿಗಳ ಕ್ರಮಬದ್ಧ ವ್ಯಾಪಾರವಿದ್ದಿತು. ಅಂದು ಚಿನಿವಾರರು ವಿವಿಧ ರೀತಿಯ ಚಿನ್ನ ಹಾಗೂ ಬೆಳ್ಳಿಯ ಆಭರಣಗಳನ್ನು ತಯಾರಿಸುತ್ತಿದ್ದರು.

ವಿಜಯನಗರದ ರಾಜಧಾನಿಯ ಸುತ್ತಮುತ್ತ ಕಬ್ಬಿಣದ ಅದಿರು ಸಿಗುತ್ತಿತ್ತು. ಅಂದು ಕಬ್ಬಿಣದ ಅದಿರನ್ನು ಕುಲಮೆಯಲ್ಲಿ ಕಾಯಿಸಿ ಉತ್ತಮ ಗುಣಮಟ್ಟದ ಕಬ್ಬಿಣ ಮತ್ತು ಉಕ್ಕನ್ನು

ಕಮ್ಮಾರರು ತಯಾರಿಸುತ್ತಿದ್ದರು. ಅಂದು ಪ್ರತಿಯೊಂದು ಹಳ್ಳಿಯಲ್ಲಿಯೂ ಕಮ್ಮಾರರಿರುತ್ತಿದ್ದರು. ಕಮ್ಮಾರರು ಕೃಷಿಗೆ ಬೇಕಾಗಿದ್ದ ಹಾಗೂ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುತ್ತಿದ್ದರು. ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಮ್ಮಾರರು ಇದ್ದರು. ತಾಮ್ರ, ಹಿತ್ತಾಳೆ ತಯಾರಿಸುವ ಲೋಹಗಾರರು ಸಾಮ್ರಾಜ್ಯದಲ್ಲಿದ್ದರು. ಇವರಿಗೆ ರಾಜ್ಯಾಶ್ರಯ ನೀಡಲಾಗಿತ್ತು.

ಮರಗೆಲಸ ಮಾಡುವ ಬಡಗಿಗಳು ಸಾಮ್ರಾಜ್ಯದಲ್ಲಿದ್ದರು. ಅವರು ಕೃಷಿಗೆ ಬೇಕಾದ ಸಲಕರಣೆಗಳನ್ನು, ಅರಮನೆ ಮತ್ತು ಗುಡಿಗೋಪುರಗಳಿಗೆ ಬೇಕಾದ ಸುಂದರ ಕೆತ್ತನೆಯ ಮರಗೆಲಸಗಳನ್ನು ಮಾಡುತ್ತಿದ್ದರು.

ವಿಜಯನಗರ ಸಾಮ್ರಾಜ್ಯದ ಪೂರ್ವದಿಂದಲೂ ಎಣ್ಣೆ ಬೀಜಗಳಿಂದ ಎಣ್ಣೆ ತಯಾರಿಸುವ ಗಾಣಗಾರಿಕೆ ಪ್ರಮುಖ ಕಸುಬುಗಳಲ್ಲಿ ಒಂದಾಗಿದ್ದಿತು. ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿ ಗಾಣಿಗರು ಇದ್ದರು. ಅವರನ್ನು ಹೆಗ್ಗಾಣಿಗರು, ಕಿರುಗಾಣಿಗರೆಂದು ಕರೆಯಲಾಗುತ್ತಿತ್ತು. ಗಾಣಗಳನ್ನು ಮರಗಾಣ, ಕಲ್ಲುಗಾಣಗಳೆಂದು ವರ್ಗೀಕರಿಸಲಾಗಿತ್ತು. ಇವುಗಳಲ್ಲಿ ಹುಚ್ಚೆಳ್ಳು, ಹುಲ್ಲೆಳ್ಳು, ಅರಳು, ಕೊಬ್ಬರಿ, ಹಿಪ್ಪೆ ಮತ್ತು ಹೊಂಗೆಯಿಂದ ಎಣ್ಣೆಯನ್ನು ತೆಗೆಯುತ್ತಿದ್ದರು. ಇವರ ಮೇಲೆ ತೆರಿಗೆ ಹಾಕಿ ಅಥವಾ ಎಣ್ಣೆ ವಸೂಲು ಮಾಡಲಾಗುತ್ತಿತ್ತು.

ಸಾಮ್ರಾಜ್ಯದಲ್ಲಿ ಬೆಲ್ಲ ತಯಾರಿಸುವ ಆಲೆಮನೆಗಳು ಇದ್ದವು. ಅವು ಬೆಲ್ಲ ಮತ್ತು ಸಕ್ಕರೆಯನ್ನು ತಯಾರಿಸುತ್ತಿದ್ದವು. ಉಪ್ಪಾರರು ಉಪ್ಪು ತಯಾರಿಸುತ್ತಿದ್ದರು. ಉಪ್ಪಿನ ತಯಾರಕರ ಮೇಲೆ ಸ್ಥಳದಿಂದ ಸ್ಥಳಕ್ಕೆ ಬೇರೆ ಬೇರೆ ರೀತಿಯಲ್ಲಿ ತೆರಿಗೆ ವಿಧಿಸಲಾಗುತ್ತಿತ್ತು.

ವಿಜಯನಗರದ ಅರಸರ ಕಾಲದಲ್ಲಿ ಚರ್ಮದ ಬಳಕೆಯು ಹೆಚ್ಚಾಗಿತ್ತೆಂದು ಹೇಳಬಹುದು. ಮೋಚಿಗಳು ಚಪ್ಪಲಿ, ಕೃಷಿಗೆ ಸಂಬಂಧಿಸಿದ ಸಲಕರಣೆಗಳು, ಕುದುರೆಗೆ ಬೇಕಾದ ಜೀನು, ಚಾವಟಿ, ಚರ್ಮದ ಹಗ್ಗ, ಚೀಲ, ಗೃಹ ಬಳಕೆಯ ವಸ್ತು ಹಾಗೂ ಸಂಗೀತದ ಅವಶ್ಯಕ ವಸ್ತುಗಳನ್ನು ತಯಾರಿಸುತ್ತಿದ್ದರು. ಚರ್ಮವನ್ನು ಮೋಚಿಗಳೇ ಹದಮಾಡಿಕೊಳ್ಳುತ್ತಿದ್ದರು.

ಬಿದಿರಿನಿಂದ ಬುಟ್ಟಿ, ಚಾಪೆಗಳನ್ನು ತಯಾರಿಸುವ ಮೇದಾರಿಕೆ ಸಾಮ್ರಾಜ್ಯದ ಪ್ರಮುಖ ಗುಡಿಕೈಗಾರಿಕೆಯಾಗಿತ್ತು. ಮೇದಾರರು ಬಿದಿರು ಬೆತ್ತಗಳಿಂದ ವಿವಿಧ ಪದಾರ್ಥಗಳನ್ನು ತಯಾರಿಸಿ ಸಂತೆಗಳಲ್ಲಿಯೇ ಅಲ್ಲದೆ ಹಳ್ಳಿಗಳಿಗೆ ತಾವೇ ಕೊಂಡೊಯ್ದು ಮಾರಾಟ ಮಾಡುತ್ತಿದ್ದರೆಂದು ಕಂಡುಬರುತ್ತದೆ. ಇವರನ್ನು ಒಂದೊಂದು ಪ್ರದೇಶದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿತ್ತು ಉದಾ: ಗೌರಿಗರು, ಗೌರಿ ಮಕ್ಕಳು, ಗಂಗೆ ಮಕ್ಕಳು, ಮೇದರು ಇತ್ಯಾದಿ.

ವಿಜಯನಗರದ ಕಾಲದಲ್ಲಿ ಕುಂಬಾರರು ಪ್ರಮುಖರಾಗಿದ್ದರು. ಪ್ರತಿಯೊಂದು ಗ್ರಾಮಗಳಲ್ಲಿಯೂ ಕುಂಬಾರರಿರುತ್ತಿದ್ದರು. ಮಣ್ಣಿನಿಂದ ಪದಾರ್ಥಗಳನ್ನು ತಯಾರಿಸಲು ಕುಂಬಾರರು

ಚಕ್ರ, ಕಲ್ಲು ಮತ್ತು ಕೋಲನ್ನು ಬಳಸುತ್ತಿದ್ದರು. ಇವರು ಈ ವಸ್ತುಗಳನ್ನು ತಯಾರಿಸಲು ಅಗತ್ಯವಾದ ಮಣ್ಣಿಗಾಗಿ ಕೆರೆಗಳು, ನದಿಗಳು ಮತ್ತು ಇತರೆ ಮೂಲಗಳ ತಳವನ್ನು ಶೋಧಿಸುತ್ತಿದ್ದರು. ಕುಂಬಾರರು ಮಣ್ಣಿನ ತಟ್ಟೆ, ಊಟದ ಪಾತ್ರೆ, ಹೂವಿನ ಕುಂಡ, ಬಾನಿ, ಹೊಗೆಬತ್ತಿ ಸೇದುವ ಚಿಲುಮೆ ಹಾಗೂ ವಿವಿಧ ವಿಗ್ರಹಗಳನ್ನು ತಯಾರಿಸುತ್ತಿದ್ದರು. ನಾಡಹೆಂಚು, ಧಾನ್ಯ ಶೇಖರಣೆಯ ದೊಡ್ಡ ದೊಡ್ಡ ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಿದ್ದರು.

ವಿಜಯನಗರದ ರಾಜಧಾನಿಯಲ್ಲಿ ವೃತ್ತಿದಾರರು ಪ್ರತ್ಯೇಕ ಕೇರಿಗಳಲ್ಲಿ ವಾಸಮಾಡುತ್ತಿದ್ದರು. ಅವರು ತಯಾರುಮಾಡುವ ಪದಾರ್ಥಗಳನ್ನು ಮಾರಾಟ ಮಾಡಲು ಬಜಾರುಗಳಲ್ಲಿ ಸಾಲು ಮಂಟಪಗಳಲ್ಲಿ ಸ್ಥಳಾವಕಾಶವನ್ನು ಒದಗಿಸಲಾಗಿತ್ತು. ವೃತ್ತಿದಾರರ ಮೇಲೆ ತೆರಿಗೆ ವಿಧಿಸಿ ಆದಾಯವನ್ನು ಸಂಗ್ರಹಿಸಲಾಗುತ್ತಿತ್ತು.

ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಜಿಲ್ಲೆಯನ್ನು ವಿವಿಧ ಪಾಳೆಯಗಾರರು, ಹೈದರಾಲಿ, ಟಿಪ್ಪು ಸುಲ್ತಾನ ಮುಂತಾದವರು ಆಳ್ವಿಕೆ ನಡೆಸಿದ್ದಾರೆ. ನಂತರ ಬ್ರಿಟಿಷರ ಆಳ್ವಿಕೆಗೆ ಬಳ್ಳಾರಿ ಜಿಲ್ಲೆ ಒಳಪಟ್ಟಿತು. ಈ ಎಲ್ಲರ ಆಳ್ವಿಕೆಯಲ್ಲಿ ಜಿಲ್ಲೆಯಲ್ಲಿ ವಿವಿಧ ಕಸುಬುಗಳು ಮುಂದುವರಿದವು. ಆದರೆ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕುಲಕಸುಬುಗಳ ಬೆಳವಣಿಗೆ ಕುಂಠಿತಗೊಳ್ಳತೊಡಗಿತು. ಬ್ರಿಟಿಷ್ ಸರ್ಕಾರ ಇಂಗ್ಲೆಂಡಿನಿಂದ ಆಮದು ಮಾಡಿಕೊಳ್ಳುತ್ತಿದ್ದ ಸರಕುಗಳ ಪೈಪೋಟಿಯಿಂದ ಕುಲಕಸುಬುಗಳು ಅವನತಿಯ ಹಾದಿಯನ್ನು ಹಿಡಿದವು. ಭಾರತವು ಸ್ವಾತಂತ್ರ್ಯಾನಂತರ ದೇಶದ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದಿತು. ಯೋಜನೆಗಳ ಅವಧಿಯಲ್ಲಿ ಸಣ್ಣ ಮತ್ತು ಗುಡಿಕೈಗಾರಿಕೆಗಳಿಗೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳನ್ನು ಜಾರಿಗೆ ತಂದು ಅನುದಾನವನ್ನು ಸಹ ನೀಡುತ್ತಿವೆ. ಆದರೆ ಕೈಗಾರೀಕರಣದ ಭರಾಟೆ, ಆಧುನೀಕರಣದ ಪ್ರಭಾವ ಕುಲಕಸುಬುಗಳ ಮೇಲೆ ಗಾಢವಾದ ಪರಿಣಾಮಗಳನ್ನು ಬೀರಿವೆ. ಇತ್ತೀಚಿನ ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿರುವ ವ್ಯಾಪಕ ಗಣಿಗಾರಿಕೆಯು ಕೃಷಿ, ಸಣ್ಣ ಪುಟ್ಟ ಕೈಗಾರಿಕೆಗಳು, ವಂಶಪಾರಂಪರ್ಯವಾಗಿ ಬೆಳೆದುಬಂದಿರುವ ಕುಲಕಸುಬುಗಳ ಅಳಿವಿಗೆ ಕಾರಣವಾಗುತ್ತಿದೆ. ಕುಲಕಸುಬುಗಳಲ್ಲಿ ಕೆಲಸಮಾಡುವವರು ಗಣಿ ಉದ್ಯಮದ ಕಡೆ ಮುಖ ಮಾಡುತ್ತಿದ್ದಾರೆ. ಜಿಲ್ಲೆಗೆ ಇನ್ನೂ ಹಲವಾರು ಬೃಹತ್ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳ ಸ್ಥಾಪನೆಗೆ ಸರಕಾರ ಅವಕಾಶ ನೀಡಲು ಮುಂದಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದರೆ ಹಿಂದಿನಿಂದ ಇಲ್ಲಿಯವರೆಗೆ ಬೆಳೆದು ಬಂದಿರುವ ಕುಲಕಸುಬುಗಳು ಸಂಪೂರ್ಣವಾಗಿ ಮೂಲೆಗುಂಪಾಗುವ ಸಾಧ್ಯತೆಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ.

೩.೪. ಕುಲಕಸುಬುಗಳ ವರ್ಗೀಕರಣ

ಆದಿಕಾಲದ ಮಾನವನು ಬದುಕಿಗೆ ಅಗತ್ಯವೆನಿಸಿದ ವಸ್ತುಗಳನ್ನು ತಾನೇ ತಯಾರು ಮಾಡಿಕೊಳ್ಳುತಿದ್ದ. ಅವನ ತಯಾರಿಕೆಯ ಸಂದರ್ಭದಲ್ಲಿ ಸಮುದಾಯದ ಒಂದು ತಿಳುವಳಿಕೆಯಾಗಿ,

ತಲೆಮಾರಿನಿಂದ ತಲೆಮಾರಿಗೆ ವಂಶಪಾರಂಪರ್ಯವಾಗಿ ಕುಲಕಸುಬುಗಳು ಉಳಿದುಕೊಂಡು, ಬೆಳೆದುಕೊಂಡು ಬಂದಿವೆ. ಅಲ್ಲದೆ ಉಳಿದುಕೊಂಡು ಬಂದ ವಸ್ತುಗಳು ಮಾನವನ ದೈನಂದಿನ ಬದುಕಿಗೆ ಅಗತ್ಯ ಮತ್ತು ಅನಿವಾರ್ಯ. ಯಾವುದೇ ಬಳಕೆಯ ವಸ್ತುವಿನ ಜಾಗದಲ್ಲಿ ಹೊಸತೊಂದನ್ನು ಸೃಷ್ಟಿಸಿದಾಗ ಹಳೆಯ ವಸ್ತುವಿನ ಸೃಷ್ಟಿ ಇಲ್ಲವಾಗಿ ಹೊಸತೇ ಪ್ರತಿಷ್ಠಾಪನೆಗೊಳ್ಳುತ್ತದೆ. ಹೀಗೆ ಸೃಷ್ಟಿಶೀಲ ಮಾನವ ತನ್ನ ಬದುಕಿಗೆ ಅನಿವಾರ್ಯವಾದ ಆಹಾರವನ್ನು ಅರಸುವಲ್ಲಿಂದ ಹಿಡಿದು, ಇಂದಿನ ನವ ನಾಗರಿಕನವರೆಗೂ ತನ್ನ ಅಗತ್ಯಗಳನ್ನು ತಾನೇ ಪೂರೈಸಿಕೊಳ್ಳುತ್ತ ಬಂದಿದ್ದಾನೆ. ಈ ಪೂರೈಕೆಗೆ ಪೂರಕ ಸಾಮಗ್ರಿ ಪ್ರಕೃತಿಯಲ್ಲಿಯೇ ಲಭಿಸಿರಬಹುದು. ಅಲ್ಲದೆ ಪೂರಕ ತಿಳುವಳಿಕೆಯನ್ನು ಪ್ರಕೃತಿಯೇ ನೀಡಿರಬಹುದು. ಬಲಿಷ್ಠ ಪ್ರಾಣಿಗಳ ಬೇಟೆಯಾಡಿ ತಿನ್ನುವುದನ್ನು ಗಮನಿಸಿದ ಮಾನವ ತಾನೂ ಬೇಟೆಯಾಡಿ ಪ್ರಾಣಿಗಳನ್ನು ಕೊಂದು ತಿನ್ನುವುದನ್ನು ಕಲಿತಿರಬಹುದು. ಪ್ರಾಣಿಗಳ ಹರಿತವಾದ ಕೋರೆ ಹಲ್ಲುಗಳು, ಚೂಪಾದ ಉಗುರುಗಳು, ಚಿಕ್ಕ ಪ್ರಾಣಿಗಳನ್ನು ಹಿಡಿಯಲು ನೆರವಾಗುವುದನ್ನು ಗಮನಿಸಿದ. ಈ ಪ್ರೇರಣೆಯಿಂದ ಮಾನವ ಹರಿತವಾದ ಚೂಪಾದ ಆಯುಧಗಳನ್ನು ಸೃಷ್ಟಿಸಿರಬಹುದು. ಜೇಡ ಬಲೆ ನೇಯ್ದು ಹಾರುವ ಕೀಟಗಳನ್ನು ಬೀಳಿಸಿ ಆಹಾರ ಸಂಗ್ರಹಿಸುವಂತೆ ಮಾನವನೂ ಬಲೆ ನೇಯ್ದು ಬೀಸಿ ಹಾರುವ ಪಕ್ಷಿಗಳನ್ನು ಹಿಡಿಯಲಾರಂಭಿಸದ. ಹೀಗೆ ಮಾನವನು ಪ್ರಕೃತಿಯಲ್ಲಿನ ಪ್ರತಿಯೊಂದು ವೈಚಿತ್ರಗಳನ್ನು ಹರಿಬಿಟ್ಟು ಕೈಚೆಳಕವನ್ನು ತೋರಿದ. ಹಾಗೆ ತನ್ನ ಬುದ್ಧಿ, ಚಾತುರ್ಯ ಮತ್ತು ಕೈಚಳಕವನ್ನು ಬಳಸಿ ವಿಭಿನ್ನವಾದ ಅಗತ್ಯ ವಸ್ತುಗಳನ್ನು ತಯಾರಿಸಲು ಪ್ರಾರಂಭಿಸಿದ.

ವಸ್ತುಗಳ ಸೃಷ್ಟಿಯ ಜೊತೆಗೆ ಅವನ ಸೌಂದರ್ಯ ಪ್ರಜ್ಞೆಯೂ ಜಾಗೃತವಾಗಿದ್ದರಿಂದ ಅವುಗಳ ರಚನೆ ಕೇವಲ ಉಪಯೋಗಕ್ಕೆ ಸೀಮಿತವಾಗಿ ಉಳಿಯಲಿಲ್ಲ. ಹಕ್ಕಿಗಳು ಹೆಣೆಯುವ ಗೂಡಿನ ಕಲಾತ್ಮಕತೆಯಲ್ಲಿ, ಪ್ರಕೃತಿಯ ರಮಣೀಯ ದೃಶ್ಯಗಳಲ್ಲಿ, ಹರಿವ ನೀರಿನ ಝರಿಯಲ್ಲಿ, ಹಣ್ಣಿನ ಬಣ್ಣದಲ್ಲಿ, ಕಲ್ಲುಗಳ ವಿನ್ಯಾಸದಲ್ಲಿ ಇರಬಹುದಾದ ಸೌಂದರ್ಯವನ್ನು ಗಮನಿಸಿದ ಮಾನವನ ಕಲಾತ್ಮಕ ಪ್ರಜ್ಞೆಯು ಜಾಗೃತಗೊಂಡಿರಬಹುದು. ಬೇಟೆ ಸಂಸ್ಕೃತಿಯ ಮಾನವ, ಕೃಷಿ ಸಂಸ್ಕೃತಿಯನ್ನು, ಪಶುಪಾಲನಾ ಸಂಸ್ಕೃತಿಯನ್ನು ಹೀಗೆ ಒಂದೊಂದನ್ನು ಅಳವಡಿಸಿಕೊಳ್ಳುತ್ತಾ ಹೋದಂತೆಲ್ಲಾ ಬಳಕೆಯ ವಸ್ತುಗಳ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು. ಜೊತೆಗೆ ಕಲಾತ್ಮಕ ಪ್ರಜ್ಞೆಯೂ ಹಲವು ರೂಪಗಳಲ್ಲಿ ಒಡಮೂಡಲು ಸಾಧ್ಯವಾಯಿತು.

ಬೇಟೆಯ ಆಯುಧಗಳು, ಕುಡುಗೋಲು–ಕೊಡಲಿಗಳು, ಕೃಷಿ ಉಪಕರಣಗಳು, ಮನೆಯ ರಚನೆ, ವಸ್ತ್ರವಿನ್ಯಾಸ, ಆಭರಣಗಳ ಪರಿಕಲ್ಪನೆ–ಹೀಗೆ ಮಾನವನ ಬದುಕು ವಿಸ್ತಾರವಾದಂತೆ ಬಳಕೆಯ ವಸ್ತುಗಳ ಅಗತ್ಯಗಳು ಹೆಚ್ಚಾಗುತ್ತವೆ. ಇಂತಹ ಉಪಯೋಗಿ ವಸ್ತುಗಳ ತಯಾರಿಕೆಯಲ್ಲಿ ಮಾನವ ತನ್ನ ಸೃಜನಶೀಲ ಮನಸ್ಸನ್ನು ದುಡಿಸಿಕೊಂಡದ್ದಾನಲ್ಲದೇ ಅವುಗಳನ್ನು ಕಲಾತ್ಮಕವಾಗಿ

ರೂಪಿಸಿದ್ದಾನೆ. ಮಾನವ ಕಲೆಗಾಗಿ ಕಲೆಯನ್ನು ರೂಪಿಸುವುದಕ್ಕೆ ಮೊದಲೇ ಅದನ್ನು ಬದುಕಿನ ಅವಿಭಾಜ್ಯ ಅಂಗವಾಗಿಯೇ ಪರಿಗಣಿಸುತ್ತಾ ಬಂದಿದ್ದಾನೆ. ಅಪ್ರಜ್ಞಾಪೂರ್ವಕವಾಗಿಯೇ ವಸ್ತುಗಳ ಸೃಷ್ಟಿಯ ಕಲೆ ದೈನಂದಿನ ವ್ಯವಹಾರಿಕ ಲೋಕದೊಳಗೆ ತಲೆಹಾಕಿರುವುದು ನಮ್ಮ ಅನೇಕ ಪಾರಂಪರಿಕ ಕಲೆಗಳನ್ನು ಗಮನಿಸಿದರೆ ವೇದ್ಯವಾಗುತ್ತದೆ. ಯಂತ್ರ ನಾಗರಿಕತೆಯ ಪ್ರವೇಶಕ್ಕೆ ಪೂರ್ವದಲ್ಲಿ ಮನುಷ್ಯ ತಾನೇ ನಿರ್ಮಿಸಿಕೊಂಡ ವಸ್ತುಗಳನ್ನು ನಂತರದ ದಿನಗಳಲ್ಲಿ ಉಪಯೋಗದ ವಸ್ತುಗಳು ಎಂದು ಗುರುತಿಸುವುದಕ್ಕೆ ಬದಲಾಗಿ ಅವುಗಳ ತಯಾರಿಕೆಯ ಕಡೆಗೆ ಹೆಚ್ಚು ಶ್ರದ್ಧೆಯನ್ನು ಕೇಂದ್ರೀಕರಿಸಿದ್ದಾನೆ.

ಮಾನವ ರೂಪಿಸಿದ ವಸ್ತುಗಳು ಅವನ ಬದುಕಿನ ಯಾವುದೋ ಒಂದು ಅಗತ್ಯದ ಪೂರೈಕೆಗಾಗಿ ಆಗಿದ್ದಿರಬಹುದು, ಕೆಲವೊಮ್ಮೆ ಹಲವು ಅಗತ್ಯಗಳಿಗಾಗಿ ಬಳಕೆಯಾಗುತ್ತಿರುವುದನ್ನು ಕಾಣಬಹುದು. ಅಂದರೆ ಅವುಗಳ ಬಳಕೆ ಆಹಾರ ಸಂಗ್ರಹಣೆಯ ಉದ್ದೇಶಕ್ಕಾಗಿಯೋ, ಧಾರ್ಮಿಕ ವಿಧಿಯೊಂದರ ಆಚರಣೆಗಾಗಿಯೋ ಆಗಿದ್ದಿರಬಹುದು. ಹಾಗಾಗಿ ಒಂದು ವಸ್ತುವಿಗೆ ಬಹುಪಯೋಗಿ ಸಾಧ್ಯತೆಗಳಿರುವಾಗ ಅದು ಯಾವ ಉದ್ದೇಶಕ್ಕಾಗಿ ಸೃಷ್ಟಿಯಾಯಿತು ಎನ್ನುವುದನ್ನು ನಿಖರವಾಗಿ ಹೇಳಬರುವುದಿಲ್ಲ. ಸಮುದಾಯದಲ್ಲಿ ಬಳಕೆಯಿದ್ದ ವಸ್ತುವೊಂದು ಯಾವ ಉದ್ದೇಶಕ್ಕಾಗಿ ಬಳಕೆಯಾಗುತ್ತಿತ್ತೋ ಅದೇ ಉದ್ದೇಶಕ್ಕಾಗಿ ಮುಂದಿನ ತಲೆಮಾರು ಬಳಸುತ್ತದೆ ಎಂದು ಖಚಿತವಾಗಿ ಹೇಳಬರುವುದಿಲ್ಲ. ನಂತರದ ತಲೆಮಾರು ಅಂತಹ ಸಂದರ್ಭಗಳಲ್ಲಿ ಹೊಸ ವಸ್ತುಗಳನ್ನು ಸೃಷ್ಟಿಸಿ ಬಳಕೆಗೆ ರೂಢಿಸಿಕೊಂಡಿರಬಹುದು. ಆಗ ಹಿಂದಿನ ತಲೆಮಾರು ಬಳಸಿದ ಬಹುಉಪಯೋಗಿ ವಸ್ತುವಿನ ಪ್ರಾಥಮಿಕ ಉದ್ದೇಶ ಕೈತಪ್ಪಿ ಆನುಷಂಗಿಕ ಅಗತ್ಯಗಳಿಗೆ ಉಪಯೋಗವಾಗಿರಬಹುದು. ಹೀಗೆ ಕಾಲ ಸರಿದಂತೆ ತಲೆಮಾರುಗಳಿಂದ ತಲೆಮಾರುಗಳಿಗೆ ವಸ್ತುಗಳ ಸೃಷ್ಟಿ ಬದಲಾಗುತ್ತಲೇ ಇದೆ. ಮಾನವನ ಮನಸ್ಸು ಸೃಷ್ಟಿಶೀಲಗುಣ ಪಡೆದಿರುವಷ್ಟು ಕಾಲವೂ ವೈವಿಧ್ಯಮಯ ವಸ್ತುಗಳ ಸೃಷ್ಟಿ ನಡೆಯುತ್ತಿರುತ್ತದೆ. ಹಾಗಾಗಿ ಕಸುಬುಗಳು ಮಾನವನಷ್ಟೇ ಪ್ರಾಚೀನವಾದವು. ಅವುಗಳ ಸ್ವರೂಪ ಮಾತ್ರ ಬದಲಾಗುತ್ತಾ ಹೋಗುತ್ತದೆ.

ವೃತ್ತಿ ಅಥವಾ ಕಸುಬುಗಳನ್ನು ಅವುಗಳ ಹುಟ್ಟು ನೆಲೆಯಾಗಿಟ್ಟುಕೊಂಡು ಅಧ್ಯಯನಕ್ಕೆ ಅನುಕೂಲವಾಗುವಂತೆ ವರ್ಗೀಕರಿಸುವಲ್ಲಿಯೂ ಹಲವಾರು ಗೊಂದಲಗಳಿವೆ. ಕಸುಬುಗಳನ್ನು ಪ್ರಾದೇಶಿಕ ನೆಲೆಯಿಂದ ವಿಂಗಡಿಸುವ, ಉಪಯೋಗಿ ನೆಲೆಯಿಂದ ವಿಂಗಡಿಸುವ, ಅವುಗಳ ರಚನೆಯಲ್ಲಿ ಬಳಸಿದ ಸಾಮಗ್ರಿಗಳ ನೆಲೆಯಿಂದ ವಿಭಾಗಿಸುವ, ಅವುಗಳ ಕ್ರಿಯಾತ್ಮಕ ನೆಲೆಯಿಂದ ವಿಂಗಡಿಸುವ ಪ್ರಯತ್ನಗಳು ನಡೆದಿವೆ.

ಪುರಾತನ ಕಾಲದಿಂದಲೂ ಗ್ರಾಮೀಣ ಪ್ರದೇಶಗಳಲ್ಲಿ ವರ್ಗಗಳನ್ನು ಗುರುತಿಸಬಹುದು. ಬಡವ-ಶ್ರೀಮಂತ ಭೂಮಾಲಿಕ-ಗೇಣಿದಾರ, ಒಡೆಯ-ಆಳು, ಬಂಡವಾಳದಾರ-ಕಾರ್ಮಿಕ-ಹೀಗೆ

ಮುಂತಾದ ವರ್ಗಗಳು ಬೆಳೆದುಕೊಂಡು ಬಂದಿವೆ. ಉಳ್ಳವರು, ಬಲಾಢ್ಯರು, ಭೂಮಾಲಿಕರು ತಮ್ಮ ಅಧಿಕಾರ ದರ್ಪದಿಂದ ತಮ್ಮ ಜೀವನಕ್ಕೆ ಬೇಕಾಗುವ ವಸ್ತು ಹಾಗೂ ಸೇವೆಗಳನ್ನು ನೀಡಿ ವರ್ಗವನ್ನು ಹುಟ್ಟು ಹಾಕಿಕೊಂಡು ಬಂದಿದ್ದಾರೆ ಅಥವಾ ಅವರೇ ಶ್ರಮ ವಿಭಜನೆ ಮಾಡಿರುವ ಸಾಧ್ಯತೆಯೂ ಇದೆ. ವಿವಿಧ ಪ್ರದೇಶಗಳಲ್ಲಿ ಜೀವನ ಮಾಡುವ ಬಡವರು, ಅಲ್ಪಸಂಖ್ಯಾತರು, ತುಳಿತಕ್ಕೊಳಗಾದವರೂ, ಭೂಮಿ ಇಲ್ಲದವರೂ ತಮ್ಮ ಹೊಟ್ಟೆ ಹೊರೆಯುವುದಕ್ಕಾಗಿ ಮತ್ತು ತಮ್ಮ ಒಡೆಯ ಅಥವಾ ನಾಯಕರ ಒತ್ತಾಯಕ್ಕಾಗಿ ಅವರು ಕೇಳುವ, ವಸ್ತು-ಸೇವೆಗಳನ್ನು ತಯಾರು ಮಾಡಿಕೊಂಡು ಬರುತ್ತಿದ್ದಾರೆ. ಈ ವರ್ಗದವರು ಹೊಟ್ಟೆ ಹೊರೆಯುವುದಕ್ಕಾಗಿ ತಲೆತಲಾಂತರದಿಂದ ಕೈಗೊಂಡು ಬಂದ ಅನುವಂಶಿಕ ವೃತ್ತಿ ಅಥವಾ ಕಸುಬುಗಳೆ ಕುಲಕಸುಬುಗಳು. ಈ ಕಸುಬುಗಳಿಗೆ ಪರಂಪರೆ ಇದೆಯೇ ಹೊರತು, ನಿರ್ದಿಷ್ಟ ತರಬೇತಿಯಿಲ್ಲ. ಹೆಚ್ಚಾಗಿ ಕೃಷಿಕನ ಆಶ್ರಯದಲ್ಲಿಯೇ ಆಸರೆ ಪಡೆದಂತಹವು. ಪ್ರಮುಖವಾಗಿ ಮೂಲಭೂತ ಜೀವನಾವಶ್ಯಕತೆಗಳನ್ನು ಪೂರೈಸುವುದಕ್ಕಾಗಿಯೇ ಇವು ಉದಯವಾದವು. ಸಾಮಾಜಿಕ ಜೀವನದಲ್ಲಿ ಜಮೀನು ಇಲ್ಲದವ, ತನಗೆ ಇಷ್ಟವಾದ ಅಥವಾ ಒತ್ತಾಯ ಪೂರ್ವಕವಾದ, ತನ್ನ ಶಕ್ತಿ ಸಾಮರ್ಥ್ಯಕ್ಕನುಗುಣವಾದ ಕಸುಬನ್ನು ಆಯ್ಕೆ ಮಾಡಿಕೊಂಡು, ಅದರಲ್ಲಿ ತನ್ನ ಪರಿಣತಿಯನ್ನು ತೋರ್ಪಡಿಸಿಕೊಳ್ಳುತ್ತಾ ಅದನ್ನೆ ತನ್ನ ಉಪಜೀವನ ವೃತ್ತಿಯನ್ನಾಗಿಸಿಕೊಂಡ ಒಂದು ವರ್ಗ ಸಾಮಾಜಿಕ ಜೀವನದಲ್ಲಿ ರೂಪಗೊಂಡಿತು.

ಸಮಾಜದಲ್ಲಿ ರೂಪುಗೊಂಡಿರುವ ವೃತ್ತಿ ಅಥವಾ ಕಸುಬುಗಳು ವಿಸ್ತೃತವಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು: ಪಶುಸಂಗೋಪನೆ ಮತ್ತು ವ್ಯವಸಾಯ ಮಾಡುವ ಒಕ್ಕಲುತನ, ಬಟ್ಟೆ ಶುಭ್ರಗೊಳಿಸುವ ಮಡಿವಾಳಗಾರಿಕೆ, ತಲೆ ಬೋಳಿಸುವ ಕ್ಷೌರಿಕ ವೃತ್ತಿ, ಬಟ್ಟೆ ನೇಯುವ ನೇಕಾರಿಕೆ, ಬಟ್ಟೆ ಹೊಲೆಯುವ ಸಿಂಪಿಗಾರಿಕೆ, ಮನೆ ಕಟ್ಟುವ ವಡ್ಡ, ಬುಟ್ಟಿ ಎಣೆಯುವ ಮೇದಾರಿಕೆ, ಔಷಧಿ ಕೊಡುವ ವೈದ್ಯಗಾರಿಕೆ, ಕಲ್ಲು ಕಟೆಯುವ ಕಲ್ಲುಕುಟಿಗಾರಿಕೆ, ಶಿಲ್ಪ ತಯಾರಿಸುವ ಶಿಲ್ಪಗಾರಿಕೆ, ಬಳೆ ತಯಾರಿಸುವ ಬಳೆಗಾರಿಕೆ, ಸುಣ್ಣ ತಯಾರಿಸುವ ಸುಣ್ಣಗಾರಿಕೆ, ಹೂಪತ್ರೆ ಕೊಡುವ ಹೂಗಾರಿಕೆ, ದೇವ-ದೇವಿಯರ ಪೂಜೆ ಮಾಡುವ ಪೂಜಾರಿಕೆ, ಮರದ ಸಾಧನ ಸಲಕರಣೆಗಳನ್ನು ತಯಾರಿಸುವ ಬಡಗಿ ವೃತ್ತಿ, ಕಬ್ಬಿಣದ ಸಾಮಗ್ರಿಗಳನ್ನು ತಯಾರಿಸುವ ಕಮ್ಮಾರಿಕೆ, ಮಣ್ಣಿನ ಮಡಕೆ, ಕುಡಿಕೆಗಳನ್ನು ತಯಾರಿಸುವ ಕುಂಬಾರಿಕೆ, ಚಿನ್ನ ಬೆಳ್ಳಿಯ ವಸ್ತು ಒಡವೆಗಳನ್ನು ತಯಾರಿಸಿಕೊಡುವ ಪತ್ತಾರಿಕೆ, ಊರು ಕಾಯುವ ತಳವಾರಿಕೆ, ಚರ್ಮದ ವಸ್ತುಗಳನ್ನು ತಯಾರು ಮಾಡುವ ಚಮ್ಮಾರಿಕೆ, ಲೋಹದ ವಸ್ತುಗಳನ್ನು ತಯಾರುಮಾಡುವ ಕಂಚುಗಾರಿಕೆ, ಓಲೆ ಹಂಚುವ ಓಲೆಕಾರ, ಕೆರೆನೀರು ಕಾಯುವ ಕೋಲುಕಾರ-ಇವರು ಮಾಡುವ ಕೆಲಸಗಳೆಲ್ಲವು ಕುಲಕಸುಬುಗಳು-ಇವೆಲ್ಲವೂ ವಂಶ ಪಾರಂಪರ್ಯವಾಗಿ ಬೆಳೆದುಬಂದವುಗಳು. ಈ ಎಲ್ಲಾ ಕಸುಬುಗಳು

ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಕಾಣಬಹುದು. ಕೆಲವು ಉತ್ತಮ ಸ್ಥಿತಿಯಲ್ಲಿವೆ. ಕೆಲವು ಅವಸಾನದ ಸ್ಥಿತಿಯಲ್ಲಿವೆ. ನನ್ನ ಸಂಶೋಧನೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿರುವ ಕೆಲವು ಪ್ರಮುಖವಾದ ಕುಲಕಸುಬುಗಳನ್ನು ವಿಶ್ಲೇಷಣೆ ಮಾಡಲು ಪ್ರಯತ್ನಿಸಿದ್ದೇನೆ. ಈ ಸಂಶೊಧನೆಯ ತೆಕ್ಕೆಯೂ ಒಳಗೆ ಇನ್ನೂ ಸಮಾಜದಲ್ಲಿ ಜೀವಂತವಾಗಿರುವ ಕುಲಕಸುಬುಗಳನ್ನು ವಿವರವಾದ ವಿಶ್ಲೇಷಣೆಗೆ ಅಳವಡಿಸಲಾಗಿದೆ. ಒಟ್ಟಿನಲ್ಲಿ ಆಧುನಿಕತೆಯೊಳಗೆ ಬದುಕು ಸಾಗಿಸುತ್ತಿರುವ ಕುಲಕಸುಬುದಾರರ ಹುಟ್ಟು, ವಿಕಾಸ, ಸಮಕಾಲೀನ ಸಂದರ್ಭದಲ್ಲಿ ಉಂಟಾಗುತ್ತಿರುವ, ಅವರು ಎದುರಿಸುತ್ತಿರುವ ಸಮಸ್ಯೆ, ಸವಾಲುಗಳ ಜೊತೆಗೆ ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕುಂಬಾರಿಕೆ

ಸಾವಿರಾರು ವರ್ಷಗಳಿಗಿಂತ ಹೆಚ್ಚು ಪ್ರಾಚೀನತೆಯುಳ್ಳ ಕುಂಬಾರಿಕೆ ಇಂದಿನ ಆಧುನಿಕ ಶತಮಾನದಲ್ಲೂ ಜೀವಂತವಾಗಿ ಉಳಿದಿರುವುದು ಗಮನಾರ್ಹ. ಇದು ಮನುಷ್ಯನ ಬದುಕಿಗೆ ಎಷ್ಟು ಅವಶ್ಯಕ ಹಾಗೂ ಅನಿವಾರ್ಯ ಎಂಬುದು ಗಮನೀಯವಾದದ್ದು. ಮನುಷ್ಯನ ಪುರಾತನ ಕಸುಬುಗಳಲ್ಲಿ ಕುಂಬಾರಿಕೆಯೂ ಒಂದು. ಕುಂಬಾರಿಕೆ ಶುದ್ಧವಾದ ಪರಿಪೂರ್ಣವಾದ ಕಲೆ ಎಂದು ಸರ್ ಹರ್‌ಬರ್ಟ್ ರೀಡ್ ಹೇಳುತ್ತಾನೆ "(Pottery is Pure art freed from any intention)"[೫೫] ಪ್ರಾಚೀನ ನಾಗರೀಕತೆಯ ಉತ್ಖನನದುದ್ದಕ್ಕೂ ಮಡಕೆಯ ಪಳೆಯುಳಿಕೆಗಳು ಮನುಷ್ಯನ ಅಸ್ಥಿಯೊಂದಿಗೆ ಲಭ್ಯವಾಗುತ್ತವೆ.[೫೬]

ಬೇಟೆಯಾಡುತ್ತ ಅಲೆಮಾರಿಯಾಗಿದ್ದ ಪ್ರಾಚೀನ ಮಾನವ ನವಶಿಲಾಯುಗಕ್ಕೆ ಬರುವಷ್ಟರಲ್ಲೇ ಬೆಂಕಿಯನ್ನು ಕಂಡುಕೊಂಡು ಮಾಂಸವನ್ನು ಬೇಯಿಸಿ ತಿನ್ನುವುದನ್ನು ಕಲಿತ. ಬೇಟೆಯಿಂದ ಬೇಸಾಯಕ್ಕೆ ಕಾಲಿಟ್ಟ ಮೇಲೆ ಒಂದೆಡೆ ನೆಲೆಯೂರಿ ನಿಲ್ಲಬೇಕಾಯಿತು. ನದಿ ಬಯಲು ಹಾಗೂ ನೀರಿನ ತಾಣಗಳು ಆತನ ವಾಸಸ್ಥಾನವಾದವು. ಬೇಸಾಯದಿಂದ ಪಡೆದ ಧಾನ್ಯಗಳು ಕಾಡುಮೇಡು ಸುತ್ತಿ ತಂದ ಹಣ್ಣುಹಂಪಲು, ಗೆಡ್ಡೆಗೆಣಸುಗಳನ್ನು ಸಂಗ್ರಹಿಸಿಡಲು ಮಡಕೆ ಮಾಡುವುದನ್ನು ಕಲಿತುಕೊಂಡ. ಕೈಯಿಂದ ಮಾಡಿದ ಒರಟು ಒರಟಾದ ಹಸಿ ಮಣ್ಣಿನ ಪಾತ್ರೆಗಳೇ ಮೊದಲು ಅಂದರೆ ನವಶಿಲಾ ಯುಗದಲ್ಲಿ ಬಳಕೆಗೆ ಬಂದಿದ್ದೆಂಬುದು ಪ್ರಾಚ್ಯ ಸಂಶೋಧಕರ ಅಭಿಪ್ರಾಯ. ಚಕ್ರವನ್ನು ಕಂಡುಕೊಂಡು ಹಸಿ ಮಡಕೆಗಳನ್ನು ಅವಿಗೆಯಲ್ಲಿ ಸುಟ್ಟು ಬಳಸುವ ಹಂತಕ್ಕೆ ಬರಲು ಹಲವು ವರ್ಷಗಳೇ ಕಳೆದಿರಬಹುದು.

ಸಿಂಧೂ-ಗಂಗಾ ನದಿಯ ಬಯಲು, ಯುಫ್ರಟಿಸ್ ಟ್ರೈಗ್ರಿಸ್ ನದಿಗಳ ಬಯಲು, ಹೊಯಂಗೋ ಹೋ ನದಿಯ ಬಯಲು, ನೈಲ್ ನದಿಯ ಬಯಲು ಹೀಗೆ ನದಿ ಬಯಲುಗಳ ದಡದಲ್ಲಿಯೇ ಕುಂಬಾರಿಕೆ ಬೆಳೆದುಬಂದಿತು ಎಂದು ಹೇಳಬಹುದು.

ಬೃಹತ್ ಶಿಲಾಯುಗವು ಇತಿಹಾಸ ಪೂರ್ವದ ಕಾಲವಾಗಿದೆ. ಈ ಸಂಸ್ಕೃತಿಯನ್ನು ಕುರಿತು ಉತ್ಖನನ ನಡೆಸಿದವರಲ್ಲಿ ಮಾರ್ಟಿಮರ್ ವ್ಹೀಲರ್ ಪ್ರಮುಖರು. ಇವರು ಬ್ರಹ್ಮಗಿರಿಯಲ್ಲಿ ನಡೆಸಿದ ಉತ್ಖನನದಲ್ಲಿ ಹೂದಾನಿಗಳು, ಪಾನಪಾತ್ರೆಗಳು ಲಭ್ಯವಾಗಿವೆ. ಸಿಂಧ್ ಪ್ರಾಂತ್ಯದ ಹರಪ್ಪ-ಮೊಹೆಂಜೋದಾರೋ ನಾಗರೀಕತೆಯ ಕೇಂದ್ರಗಳಲ್ಲಿ ಮಣ್ಣಿನಿಂದ ತಯಾರು ಮಾಡಿದ ದವಸ-ಧಾನ್ಯ ತುಂಬಿಡುವ ಗುಡಾಣಗಳು, ನೀರಿನ ಮಡಕೆಗಳು ಲಭ್ಯವಾಗಿವೆ. ಸುಮೇರಿಯನ್ ನಾಗರೀಕತೆಯಲ್ಲಿಯೂ ಮಣ್ಣಿನಿಂದ ತಯಾರು ಮಾಡಿದ ವಿವಿಧ ಆಕಾರದ ಮಡಕೆಕುಡಿಕೆ, ಜಾಡಿ, ಹೂಜಿ ಮೊದಲಾದುವುಗಳನ್ನು ಉತ್ಖನನದಲ್ಲಿ ಪತ್ರೆಹಚ್ಚಲಾಗಿದೆ. ಚೀನಾ ನಾಗರೀಕತೆಯಲ್ಲಿ ಆಳೆತ್ತರದ ಸೈನಿಕನೊಬ್ಬನ ಮಣ್ಣಿನ ಮೂರ್ತಿ ದೊರೆತಿದೆ. ಚೀನಾದಲ್ಲಿ ಮಣ್ಣಿನ ಪಾತ್ರೆಗಳು ಮತ್ತು ಪಿಂಗಾಣಿಯಂತ ಅದ್ಭುತ ವಸ್ತುಗಳು ಲಭ್ಯವಾಗಿವೆ. ಚೀನಾದೇಶ ಇಂದು ಪಿಂಗಾಣಿ ಸಾಮಗ್ರಿಗಳನ್ನು ತಯಾರು ಮಾಡುವಲ್ಲಿ ವಿಶ್ವಪ್ರಸಿದ್ಧಿ.[೫೭] ಗ್ರೀಕ್ ಮತ್ತು ರೋಮನ್ ನಾಗರೀಕತೆಗಳಲ್ಲಿಯೂ ಕುಂಬಾರಿಕೆ ಹೆಸರುವಾಸಿಯಾದ ವೃತ್ತಿ. ವೈದಿಕ ಸಂಸ್ಕೃತಿಯಲ್ಲಿ ಕುಲಾಲನಿಗೂ ವಿಶಿಷ್ಟ ಸ್ಥಾನವಿದೆ. ವೇದ ಕಾಲದಲ್ಲಿ ಗ್ರಾಮಜೀವನ ಸರಳ ಮತ್ತು ಅಚ್ಚುಕಟ್ಟಾಗಿತ್ತು. ಕಸುಬುದಾರ ಕುಂಬಾರ ನಿತ್ಯೋಪಯೋಗಿ ವಸ್ತುಗಳನ್ನು ತಯಾರಿಸಿಕೊಡುತ್ತಿದ್ದ. ಈಜಿಪ್ತಿನ ಜನರು ಅನೇಕ ಕಸುಬುಗಳಲ್ಲಿ ಪರಿಣತಿಯನ್ನು ಹೊಂದಿದ್ದರು. ಜೇಡಿಮಣ್ಣಿನಿಂದ ಬಳಕೆಗೆ ಬೇಕಾದ ಎಲ್ಲಾ ವಿಧವಾದ ಮಡಕೆ ಕುಡಿಕೆ, ಜಾಡಿ, ಹೂಜಿ ಮೊದಲಾದುವುಗಳನ್ನು ಚಕ್ರದ ಸಹಾಯದಿಂದ ತಯಾರಿಸುತ್ತಿದ್ದರು. ಪ್ರಾಚೀನ ಈಜಿಪ್ತ ಮತ್ತು ಸಿರಿಯಾ ನಾಗರೀಕತೆಗಳಲ್ಲಿ ಗೋಡೆಗೆ ಹೊದಿಸುವ ನಾನಾ ಬಣ್ಣದ ಮತ್ತು ಮಾದರಿಯ ಬಿಲ್ಲೆಗಳ ತಯಾರಿಕೆ ಪ್ರಸಿದ್ಧವಾಗಿತ್ತು.

ಭಾರತವು ಕುಂಬಾರಿಕೆಗೆ ಆದಿಕಾಲದಿಂದಲೂ ಪ್ರಸಿದ್ಧಿ ಪಡೆದಿದೆ. ಮುಸ್ಲಿಮ್ ಮತ್ತು ಹಿಂದೂ ರಾಜಮಹಾರಾಜರು ಅರಮನೆಗಳು ಹೊಳಪಿನ ಬಿಲ್ಲೆಗಳಿಂದ ಆವೃತವಾಗಿವೆ.[೫೮] ಮುಸ್ಲಿಮ್ ಮತ್ತು ಹಿಂದೂ ಕುಂಬಾರರು ತಮ್ಮ ತಮ್ಮ ಕಲೆಯಲ್ಲಿ ಚಾತುರ್ಯವನ್ನು ಮೆರೆದಿದ್ದಾರೆ.

ಕರ್ನಾಟಕದ ಕಾವೇರಿ, ತುಂಗಭದ್ರಾ, ಘಟಪ್ರಭ ನದಿದಂಡೆಗಳು, ಚಿತ್ರದುರ್ಗ, ಬಳ್ಳಾರಿ, ತುಮಕೂರು, ಮೈಸೂರು, ಬಾಗಲಕೋಟೆ ಜಿಲ್ಲೆಯ ಬೆಟ್ಟಗುಡ್ಡಗಳಲ್ಲಿ ನಡೆದ ಉತ್ಖನನ ಹಾಗೂ ಅನ್ವೇಷಣೆಯಲ್ಲಿ ದೊರೆತ ಅವಶೇಷಗಳಿಂದ ಹಳೆಶಿಲಾಯುಗ ಮತ್ತು ನವಶಿಲಾಯುಗದ ಪ್ರಾಚೀನ ಮಾನವನ ಬದುಕಿಗೆ ಸಾಕಷ್ಟು ಮಾಹಿತಿ ದೊರೆತಿದೆ. ಉತ್ಖನನ ಸಮಯದಲ್ಲಿ ದೊರೆತ ಕುಂಬಾರನ ಮಡಕೆಕುಡಿಕೆಗಳು ಒಂದು ರೀತಿಯಲ್ಲಿ ಲಿಪಿಯಿಲ್ಲದ ಗ್ರಂಥಗಳು. ಸಂಶೋಧನಾ ಜಗತ್ತಿಗೆ ಕುಂಬಾರನು ಕೊಟ್ಟ ಅತಿದೊಡ್ಡ ಕೊಡುಗೆಗಳಿವು.

ಕುಂಬಾರಿಕೆಯಲ್ಲಿ ಆಧುನಿಕತೆ ಬಹಳ ನಿಧಾನವಾಗಿ ಕಾಲಿಟ್ಟಿದೆ. ಈಗಲೂ ಗ್ರಾಮೀಣ ಪ್ರದೇಶದ ಕುಂಬಾರರು ಹಲವು ನೂರು ವರ್ಷಗಳ ಹಿಂದಿನ ಭಾರವಾದ ತಿಗರಿಯನ್ನು ಮಡಕೆ

ಮಾಡಲು ಬಹಳಷ್ಟು ಕೆಳ ದರ್ಜೆಯ ಆವಿಗೆಯನ್ನು ಮಡಕೆ ಸುಡಲು ಬಳಸುತ್ತಾರೆ. ಬಾಲ್ಬೇರಿಂಗ್ ತಿಗರಿಗಳ ಹಾಗೂ ಸುಸಜ್ಜಿತವಾದ ಆವಿಗೆಗಳ ಬಳಕೆ ಬಹಳ ಕಡಿಮೆ.

ಮಡಕೆಯನ್ನು ತಯಾರಿಸುವಾಗ ಬಳಸುವ ಮಣ್ಣು

ಕುಂಬಾರಿಕೆಗೆ ಮುಖ್ಯವಾಗಿ ಬೇಕಾಗಿರುವುದು ಮಣ್ಣು. 'ಮಡಕೆಯ ಮಾಡುವವರಿಗೆ ಮಣ್ಣೆ ಮೊದಲು' ಎನ್ನುವ ಹಾಗೆ, ಕುಂಬಾರಿಕೆಗೆ ಬೇಕಾದ ಮೊದಲ ಕಚ್ಚಾವಸ್ತು ಎಂದರೆ ಮಣ್ಣು. ಭೂಮಿಯ ಮೇಲ್ಪದರಿನಲ್ಲಿ ಸಾಕಷ್ಟು ಮಣ್ಣು ಇದೆಯಾದರೂ ಪ್ರದೇಶದಿಂದ ಪ್ರದೇಶಕ್ಕೆ ಜಿಗುಟಿನಲ್ಲಿ, ಸಾಂದ್ರತೆಯಲ್ಲಿ, ಬಲದಲ್ಲಿ ಉಡುಗುವ ಗುಣ ಹಾಗೂ ರಚನೆಯಲ್ಲಿ ಬೇರೆ ಬೇರೆಯಾಗಿರುತ್ತದೆ. ಹೀಗಾಗಿ ಮೇಲ್ಪದರಿನ ಎಲ್ಲಾ ಪ್ರದೇಶದ ಮಣ್ಣು ಮಡಕೆ ಮಾಡಲು ಯೋಗ್ಯವಾಗಿರುವುದಿಲ್ಲ. 'ಹಿಟ್ಟಿನಂತೆ ರೊಟ್ಟಿ, ಮಣ್ಣಿನಂತೆ ಮಡಕೆ'[೫೯] ಎನ್ನುವ ಮಾತಿದೆ. ಕೆಲವು ಪ್ರದೇಶದ ಮಣ್ಣಿನಿಂದ ಮಾಡಿದ ಮಡಕೆಗಳು ಹಲವಾರು ವರ್ಷ ಬಳಸಿದರೂ ಬಿರುಕು ಬಿಡದೆ, ಮುಕ್ಕಾಗದೆ ಇರುವುದನ್ನು, ಮತ್ತೇ ಕೆಲವು ಮಡಕೆಗಳು ವರ್ಷ, ಆರು ತಿಂಗಳಲ್ಲಿ ಮಡಕೆಯು ಬಿರುಕು ಬಿಡುವುದನ್ನು, ಬಾಳಿಕೆ ಬಾರದೆ ಇರುವುದನ್ನು ಕಾಣುತ್ತೇವೆ. ಇದಕ್ಕೆ ಕಾರಣ ಮಣ್ಣಿನ ಗುಣ. ಎಲ್ಲಾ ಪ್ರದೇಶಗಳಲ್ಲಿ ದೊರೆಯುವ ಮಣ್ಣು, ಮಡಕೆ ಮಾಡುವ ಗುಣ ಧರ್ಮವನ್ನು ಹೊಂದಿರುವುದಿಲ್ಲ. ಆದ್ದರಿಂದ ಅಂತಹ ಮಣ್ಣನ್ನು ಬಲಪಡಿಸಲು, ಧಾರಣ ಸಾಮರ್ಥ್ಯವನ್ನು ಹೆಚ್ಚಿಸಲು, ಉಡುಗುವುದನ್ನು ತಡೆಗಟ್ಟಲು, ಕಾಂತಿಯುಕ್ತವಾಗಿಡಲು, ಕೆಲವೊಂದು ಖನಿಜಗಳನ್ನು ಸೇರಿಸಬೇಕಾಗುತ್ತದೆ. ಅವುಗಳಲ್ಲಿ ಮುಖ್ಯವಾದವು ಚಕಮಕಿ ಕಲ್ಲು, ಬೆಣಚುಕಲ್ಲು, ಮರಳು, ಬೂದಿ ಮತ್ತು ಸುಣ್ಣ–ಹೀಗೆ ಮಿಶ್ರ ಮಾಡಿ ಸಿದ್ಧಗೊಳಿಸಿದ ಮಣ್ಣು ಮಡಕೆ ಮಾಡಲು ಹೆಚ್ಚು ಯೋಗ್ಯವಾಗಿರುತ್ತದೆ.

ಕರ್ನಾಟಕದಲ್ಲಿ ಬೆಂಗಳೂರು ಸುತ್ತಮುತ್ತ ಯಶವಂತಪುರ, ಆಳಲಸಂದ್ರ, ನೆಲಮಂಗಲ, ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕುಮಾರಸ್ವಾಮಿ ಗುಡ್ಡ, ಕೋಲಾರ ಜಿಲ್ಲೆಯ ಮಾಲೂರು ತಾಲೂಕು, ಹಾಸನ ಜಿಲ್ಲೆಯ ಭಾಗೇಶಪುರ, ಕೊಪ್ಪ, ಶೃಂಗೇರಿ, ಮೇಲುಕೋಟೆ, ಬೆಳಗಾವಿ ಜಿಲ್ಲೆಯ ಕಾನಾಪುರಗಳಲ್ಲಿ ಉತ್ತಮ ಕುಂಬಾರಿಕೆಯ ಮಣ್ಣು ದೊರೆಯುತ್ತದೆ.

ಮಡಕೆಗಳನ್ನು ತಯಾರಿಸುವಾಗ ಬಳಸುವ ಸಾಮಗ್ರಿಗಳು

ಗ್ರಾಮೀಣ ಪ್ರದೇಶದ ಪ್ರತಿಯೊಂದು ವೃತ್ತಿಗೂ ಅದರ ನಿರ್ವಹಣೆಗೆ ತನ್ನದೇ ಆದ ಸಾಧನ ಸಲಕರಣೆಗಳಿವೆ. ಹಾಗೆಯೇ ಕುಂಬಾರಿಕೆ ವೃತ್ತಿಗೆ ಮುಖ್ಯವಾಗಿ ಚಕ್ರ (ತಿಗರಿ), ಸೊಳ, ಕೋಲು, ತಟ್ಟುವ ಕಲ್ಲು, ದರಗ, ಆವಿಗೆ ಇವುಗಳಲ್ಲಿ ಹೆಚ್ಚಿನ ಸಲಕರಣೆಗಳನ್ನು ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳಿಂದ ತಾವೇ ತಯಾರು ಮಾಡಿಕೊಳ್ಳುವರು.

ತಿಗರಿ (ಚಕ್ರ): ಕುಂಬಾರಿಕೆಯ ಸಲಕರಣೆಗಳಲ್ಲಿ ಚಕ್ರ ಬಹಳ ಮುಖ್ಯವಾದದ್ದು. ಇದರ ಚಲನೆಗೆ ಗೂಟ ಮತ್ತು ಗಣೆ ಬೇಕು. ಗಣೆಯನ್ನು ಬಳಸದೇ ಕೈಯಿಂದಲೇ ತಿರುಗಿಸಬಹುದಾದ

ಚಿಕ್ಕ ಚಿಕ್ಕ ತಿಗರಿಗಳು ಕೂಡ ಬಳಕೆಗೆ ಬಂದಿವೆ. ತಿಗರಿಯ ತಯಾರಿಕೆ ಒಂದು ಕಲೆ. ನಾಲ್ಕು ಐದು ಅಡಿ ಸುತ್ತಳತೆಯ ತಿಗರಿಗಳಿಂದ ಮೊದಲ್ಗೊಂಡು ಏಳೆಂಟು ಅಡಿ ಸುತ್ತಳತೆಯ ತಿಗರಿಗಳನ್ನು ಸಹ ಮಾಡುವರು. ತಿಗರಿಯ ಮಧ್ಯಭಾಗಕ್ಕೆ ಮರದ ಒಂದೆರಡು ಅಡಿ ವ್ಯಾಸದ ವೃತ್ತಾಕಾರದ ಪೀಠ ಇರುತ್ತದೆ. ಇದನ್ನು ಮರದ ಅಣಿ ಎಂದು ಕರೆಯುವರು. ಇದಕ್ಕೆ ಮರದ ಕೈಗಳನ್ನು ಜೋಡಿಸುತ್ತಾರೆ. ಇವು ಪೀಠದ ಸುಮಾರು ಎರಡು ಅಡಿ ಉದ್ದಕ್ಕೆ ಚಾಚಿ, ಚಕ್ರದ ಸುತ್ತಿನಲ್ಲಿ ಉದುಗಿರುತ್ತದೆ. ಚಕ್ರದ ಹೊರಸುತ್ತನ್ನು ಸರಳು, ಬಿದಿರು, ಹಗ್ಗ ಸುತ್ತಿ ಮಣ್ಣನ್ನು ಉಪಯೋಗಿಸಿ ಮಾಡುವರು. ಪೀಠದ ತಳಕ್ಕೆ ಗುಳಿ ಇರುವ ದುಂಡನೆ ಚಿಕ್ಕ ಕಲ್ಲನ್ನು ಪೀಠದ ಮಧ್ಯಕ್ಕೆ ಜೋಡಿಸುವರು. ಶೂಲವನ್ನು ಮರದಿಂದ ತಯಾರಿಸಿ, ಒಂದೆರಡು ಅಡಿ ಆಳಕ್ಕೆ ನೆಲದಲ್ಲಿ ಹೂಳಿ ಭದ್ರಪಡಿಸುವರು. ನೆಲದ ಮೇಲಿನಿಂದ ಸುಮಾರು ಒಂದು ಅಡಿ ಮೇಲೆ ಶೂಲ ಇರುತ್ತದೆ. ಇದರ ತುದಿ ಮೊನಚಾಗಿರುವುದು ಶೂಲದ ತುದಿ ಚಕ್ರದ ಪೀಠದಲ್ಲಿರುವ ಗುಳಿಗೆ ಕುಳ್ಳಿರಿಸಿ ಕೈಯಿಂದ ತಿಗರಿಯನ್ನು ಮೆಲ್ಲನೆ ತಿರುಗಿಸಿ ನಂತರ ಕೋಲಿನಿಂದ ಕುಂಬಾರನು ವೇಗವಾಗಿ ತಿಗರಿಯನ್ನು ತಿರುಗಿಸುವನು.

ತಟ್ಟುವ ಕಲ್ಲು: ಚಕ್ರದಲ್ಲಿ ಗೇಯ್ದ ಮಡಕೆಗಳು ಟೊಳ್ಳಾಗಿರುತ್ತವೆ. ಅವು ಸಲಆರಿದ ನಂತರ ಕಲ್ಲನ್ನು ಎಡಗೈಯಲ್ಲಿ ಹಿಡಿದು ಬಲಗೈಯಿಂದ ಸೊಳ ಹಿಡಿದು ತಟ್ಟುವರು. ಗಡಿಗೆ ತಟ್ಟುವ ಕಲ್ಲನ್ನು ಸ್ವಾರಿ ತಟ್ಟುವ ಕಲ್ಲು ಎಂದು ಹೇಳುವರು. ಇದು ಲಿಂಗಾಕೃತಿಯಿದ್ದು ಸುಮಾರು ಐದುನೂರು ಗ್ರಾಂನಷ್ಟು ತೂಕದ್ದಾಗಿರುತ್ತದೆ. ಕೆಲವೆಡೆ ಹೊಳೆಯಲ್ಲಿ ಸಿಗುವ ದುಂಡನೆಯ ಬೆಣಚುಕಲ್ಲನ್ನು ಬಳಸುವರು. ಗಡಿಗೆಯನ್ನು ತಟ್ಟುವಾಗ ಎಡಗೈಯಲ್ಲಿ ಕಲ್ಲನ್ನು, ಗಡಿಗೆಯ ಒಳಗಡೆ ಹಿಡಿದುಕೊಂಡು ಇದೇ ಭಾಗಕ್ಕೆ ಬಲಗೈಯಿಂದ ಸೊಳದಲ್ಲಿ ತಟ್ಟುವರು. ತಟ್ಟುವ ಕಲ್ಲನ್ನು ಬಳಪ ಇಲ್ಲವೆ, ಮೃದು ಗ್ರಾನೈಟ್ ಕಲ್ಲಿನಿಂದ ತಯಾರಿಸಿಕೊಳ್ಳುವರು.

ಸೊಳ: ಸೊಳವನ್ನು ತೇಗ, ಬೇವು, ಹಲಸು ಮುಂತಾದ ಮರದಿಂದ ತಯಾರಿಸುವರು. ಇದು ಬಣ್ಣ ಬಳೆಯುವ ಬ್ರಶ್ ಆಕೃತಿಯಲ್ಲಿರುತ್ತದೆ. ಸೊಳದ ಮೇಲೆ ಕಲ್ಲನ್ನು ಇರಿಸಿದಾಗ ಲಿಂಗದ ಆಕೃತಿಯಂತೆ ಕಾಣುವುದು. ಕುಂಬಾರ ಲಿಂಗಾಯತರು ದೇವರ ಜಗಲಿಯಲ್ಲಿ ಸೊಳಕಲ್ಲು ಇಟ್ಟು ಪೂಜೆಸುವರು. ಸೊಳ ಕೂಡಾ ಸಪೂರವಾದ ಉದ್ದನೆಯ ಹಲಗೆಯಂತೆ ಇರುತ್ತದೆ. ಕೆಲಸಕ್ಕನುಗುಣವಾಗಿ ಕುದುಮು ಮಾಡುವ ಸೊಳ, ಗಟ್ಟಿಸುವ ಸೊಳ, ನುಣುಪುಗೊಳಿಸುವ ಸೊಳ, ಕಚ್ಚು ಹಾಕುವ ಸೊಳ ಎಂದು ಕರೆಯುವರು. ಆಕಾರ ಒಂದೇ ಇದ್ದರೂ, ಗಾತ್ರದಲ್ಲಿ ಬೇರೆ ಬೇರೆಯಾಗಿರುತ್ತವೆ.

ಜಜ್ಜುವ ಕಲ್ಲು: ಜಜ್ಜುವ ಕಲ್ಲನ್ನು ಕುಂಬಾರಗಿತ್ತಿಯರು ಬೋಸಿಯನ್ನು ತೀಡಲು, ಮಣ್ಣನ್ನು ಹಲ್ಲೆಯನ್ನಾಗಿ ಮಾಡಲು ಉಪಯೋಗಿಸುವರು. ಇದು ಕೂಡ ಲಿಂಗಾಕೃತಿಯಲ್ಲಿದ್ದು, ಗಂಡಸರು ಬಳಸುವ ಕಲ್ಲಿಗಿಂತ ದೊಡ್ಡದಾಗಿರುತ್ತದೆ. ಬೆಳಗಾವಿ, ಬಳ್ಳಾರಿ, ಧಾರವಾಡ, ಹಾವೇರಿ, ದಾವಣಗೆರೆ,

ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಈ ತರಹದ ಜಜ್ಜುವ ಕಲ್ಲು ಬಳಕೆ ಇರುವುದು ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯ ತಾಲೂಕುಗಳಲ್ಲಿ ಬೇರೆ ಪ್ರದೇಶಗಳಿಂದ ತಂದು ತಯಾರಿಸುವರು.

ಮಡಕೆ ತಯಾರಿಕಾ ವಿಧಾನ

ಮಡಕೆಗಳನ್ನು ಒಂದೇ ಬಾರಿಗೆ ತಯಾರು ಮಾಡಲು ಬರುವುದಿಲ್ಲ. ಮಣ್ಣನ್ನು ತಂದು ಹದಗೊಳಸಿ, ಚಕ್ರದ ಮೇಲೆ ಮಣ್ಣಿನ ಮುದ್ದೆಯನ್ನು ಇಟ್ಟು, ಗೇಯ್ದು, ನಂತರ ತಟ್ಟಿ, ಒಣಗಿಸಿ ಆವಿಗೆಯಲ್ಲಿಟ್ಟು ಸುಡಬೇಕು. ಕುಂಬಾರಿಕೆಯ ಕೆಲಸದಲ್ಲಿ ಹೆಂಗಸರು, ಗಂಡಸರು ಮತ್ತು ಮಕ್ಕಳು ಎಲ್ಲರೂ ಜೊತೆಗೂಡಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಕುಂಬಾರಿಕೆ ನೋಡಲು ಸರಳ ಕಸುಬು ಎನಿಸಿದರೂ ತಯಾರಿಕೆ ಕಷ್ಟದಾಯಕ ಕೆಲಸ. ಈ ಕಷ್ಟದ ಬದುಕಿಗೆ ಸಿಗುವ ಪ್ರತಿಫಲ ತುಂಬಾ ಕಡಿಮೆ. 'ಹೆಣ್ಣಾಗಿ ಹುಟ್ಟಬಾರದು, ಕುಂಬಾರನಾಗಿ ಬದುಕಬಾರದು' ಎನ್ನುವ ಗಾದೆ ಅವನ ಕಷ್ಟದಾಯಕ ಬದುಕಿಗೆ ಸ್ಪಷ್ಟ ನಿದರ್ಶನ.

ಮಡಕೆ ತಯಾರಿಕೆಯನ್ನು ಸ್ಥೂಲವಾಗಿ ನಾಲ್ಕು ಹಂತಗಳಾಗಿ ವಿಂಗಡಿಸಬಹುದು.

- ಮಣ್ಣನ್ನು ಹದಗೊಳಿಸುವುದು.
- ತಿಗರಿಯ ಮೇಲೆ ಮಣ್ಣನ್ನು ಹಾಕಿ ಗೇಯುವುದು
- ಗೇಯ್ದು ಮಡಕೆಗಳನ್ನು ತಟ್ಟಿ ಸಿದ್ಧ ಮಾಡುವುದು.
- ಆವಿಗೆಯಲ್ಲಿ ಮಡಕೆಗಳನ್ನಿಟ್ಟು ಸುಡುವುದು.

ಮಣ್ಣನ್ನು ಹದಗೊಳಿಸುವುದು:

ಮಡಕೆ ತಯಾರಿಕೆಗೆ ಬೇಕಾದ ಮುಖ್ಯ ಕಚ್ಚಾವಸ್ತು ಮಣ್ಣು. ಸಾಮಾನ್ಯವಾಗಿ ಕೆರೆ, ಹೊಂಡ, ಹೊಳೆ, ಹಳ್ಳಗಳ ದಂಡೆಯಿಂದ, ತಮ್ಮ ಅನುಭವದಿಂದ ಸರಿಯಾದ ಸ್ಥಳ ಹುಡುಕಿ ಮಣ್ಣನ್ನು ತರುವರು. ಕುಂಬಾರಿಕೆ ಮಣ್ಣು ಲಭ್ಯವಾಗುವ ಸ್ಥಳವನ್ನು ಕುಂಬಾರ ಗುಂಡಿ ಎಂದು ಕರೆಯುವುದು ವಾಡಿಕೆ. ಭೂಮಿಯ ಮೇಲ್ಪದರಿನ ಮಣ್ಣು ಕಸ, ಕಡ್ಡಿ, ಬೇರು, ಹುಲ್ಲಿನ ಬೀಜ ಮೊದಲಾದ ಕಲ್ಮಶಗಳಿಂದ ಕೂಡಿರುವುದರಿಂದ ಸುಮಾರು ಎರಡು-ಮೂರು ಅಡಿ ಆಳಕ್ಕೆ ಅಗೆದು ಮಣ್ಣನ್ನು ತೆಗೆಯುವರು. ಕೆಳಗಿನ ಮಣ್ಣು ಗಾಳಿಯ ಸಂಪರ್ಕವಿಲ್ಲವಾದ್ದರಿಂದ ಅಗೆದ ಮಣ್ಣನ್ನು ಒಂದೆರಡು ದಿನ ಹಾಗೆ ಬಿಡುವರು. ಮಡಕೆ ಮಾಡುವ ಮಣ್ಣನ್ನು ಗಾಳಿಗೆ ತೆರೆದಿಟ್ಟಷ್ಟು ಒಳ್ಳೆಯದು. ಇದರಿಂದ ಮಣ್ಣಿನ ಮಿದು ಗುಣ ಹೆಚ್ಚಾಗುತ್ತದೆ. ಚೀನಿ ಕುಂಬಾರರು ಮಣ್ಣನ್ನು ಭೂಮಿಯಿಂದ ಅಗೆದು ಹಲವು ವರ್ಷಗಳವರೆಗೆ ಹಾಗೆಯೆ ಬಿಡುತ್ತಿದ್ದರು. ತಂದೆ ಸಂಗ್ರಹಿಸಿಟ್ಟ ಮಣ್ಣನ್ನು ಮಕ್ಕಳ ಮೊಮ್ಮೊಕ್ಕಳ ಕಾಲದಲ್ಲಿ ಬಳಸಲಾಗುತ್ತಿತ್ತು. ಇದರಿಂದ ಮಣ್ಣು ಬಿಗಿ ಬರುತ್ತದೆ. ನಂತರ ಮಣ್ಣಿನ ದೊಡ್ಡ ದೊಡ್ಡ ಹೆಂಟೆಗಳನ್ನು ಒಡೆದು ಪುಡಿಮಾಡಿ ತಲೆಯ ಮೇಲೆ ಹೊತ್ತು ಅಥವಾ ಬಂಡಿಯ ಮೂಲಕ ಮನೆಗೆ ಸಾಗಿಸುವರು.

ಈ ಮಣ್ಣನ್ನು ಮನೆಯ ಹತ್ತಿರದಲ್ಲಿರುವ ಮಣ್ಣಿನ ಗುಂಡಿಗೆ ಹಾಕಿ, ಬೇಕಾದಷ್ಟು ನೀರು ಹಾಕಿ, ಗೋಣಿ ತಟ್ಟನಿಂದ ಮಣ್ಣನ್ನು ಮುಚ್ಚುವರು. ೧೦–೧೨ ತಾಸುಗಳಲ್ಲಿ ಮಣ್ಣು ನೆನೆದು ಅರಳುತ್ತದೆ. ಇದಕ್ಕೆ ಸಾಣಿ ಹಿಡಿದ ನುಸಿ ಮರಳನ್ನು, ಬೂದಿಯನ್ನು ಸೇರಿಸಿ ಕಾಲಿನಿಂದ ತುಳಿದು ತುಳಿದು, ಕೈಯಿಂದ ನಾದಿ ಮುದ್ದೆ ಮಾಡಿ, ತಿಗರಿಗೆ ಹಾಕಲು ಸಿದ್ಧ ಮಾಡಿಡುವರು. ಬಳ್ಳಾರಿ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ, ಮಳೆಗಾಲಕ್ಕೆ ಮುನ್ನ ವರ್ಷವಿಡೀ ಬೇಕಾಗಬಹುದಾದ ಮಣ್ಣನ್ನು ಮನೆಗೆ ತಂದು, ಕಲ್ಲು, ಕಸ, ಕಡ್ಡಿ ತೆಗೆದು, ನೀರು ಹಾಕಿ, ಚೆನ್ನಾಗಿ ನಾದಿ ಮುದ್ದೆ ಮಾಡಿ, ರಾಶಿ ಹಾಕಿಟ್ಟು ಅದಕ್ಕೆ ಗೋಣಿಚೀಲದ ತೊಟ್ಟು ಮುಚ್ಚಿ ದಿನಂಪ್ರತಿ ನೀರು ಚಿಮುಕಿಸುತ್ತ ಆರದಂತೆ ನೋಡಿಕೊಳ್ಳುವರು. ಮಡಕೆ ಮಾಡಲು ಬೇಕಾದಾಗ, ಆ ರಾಶಿಯಿಂದ ಮಣ್ಣನ್ನು ತೆಗೆದು, ನಾದಿ ಮಡಕೆ ಮಾಡಲು ಉಪಯೋಗಿಸುವರು. ಕುಂಬಾರಿಕೆಗೆ ಮಣ್ಣನ್ನು ಸಿದ್ಧಗೊಳಿಸಲು ನಿರ್ದಿಷ್ಟ ವಿಧಾನಗಳೇನಿಲ್ಲ. ಸ್ಥಳೀಯ ಅನುಕೂಲಕ್ಕೆ ತಕ್ಕ ಹಾಗೆ ಮಣ್ಣನ್ನು ಮಡಕೆ ತಯಾರಿಕೆಗೆ ಹದಮಾಡಿ ಸಿದ್ಧಗೊಳಿಸುವರು. ಕೆಲವೆಡೆ ಕುಂಬಾರರು ಮಣ್ಣಿಗೆ ಕತ್ತೆ–ಕುದುರೆಯ ಲದ್ದಿಯನ್ನು ಮಿಶ್ರ ಮಾಡುವರು.

ತಿಗುರಿಯ ಮೇಲೆ ಮಣ್ಣನ್ನು ಹಾಕಿ ಗೇಯುವುದು

ಕುಂಬಾರನು ತಿಗುರಿಯನ್ನು ಮೆಲ್ಲಗೆ ಕೋಲಿನಿಂದ ತಿರುಗಿಸಿ ಅದರ ಹಣೆಯ ಮೇಲೆ ಹದ ಮಾಡಿದ ಮಣ್ಣಿನ ಮುದ್ದೆಯನ್ನು ಹಾಕಿ, ನೀರನ್ನು ಚಿಮುಕಿಸುತ್ತಾ, ಮಣ್ಣನ್ನು ತೇವಗೊಳಿಸಿ ನಂತರ ಬಲಗೈಯನ್ನು ಮಣ್ಣಿನ ಮೇಲೂ, ಎಡಗೈಯನ್ನು ತಿಗುರಿಯ ಹಣಿಯ ಕುಂಬದ ಮಣ್ಣಿನ ತಳಭಾಗದಲ್ಲಿರಿಸಿಕೊಂಡು, ಅದನ್ನು ಮೇಲಕ್ಕೆ ಗೋಪುರದಂತೆ ಎತ್ತುವರು. ಹೀಗೆ ಮಾಡುವಾಗ, ತಿಗುರಿಯನ್ನು ವೇಗವಾಗಿ ತಿರುಗಿಸುವರು. ತಯಾರಿಸಬೇಕಾದ ಮಡಕೆಗನುಗುಣವಾಗಿ ಮಣ್ಣಿನ ಮುದ್ದೆ ಬಳಕೆಯಾಗುತ್ತದೆ. ಹೊಳವು ತಯಾರಿಸಿಕೊಂಡ ಮೇಲೆ ತೆರೆ ಎತ್ತುವರು. ತೆರೆ ಎತ್ತಿದ ಮೇಲೆ ಬಲಗೈ ಮಡಕೆಯ ಒಳಗಿರುತ್ತದೆ. ಎಡಗೈ ಹೊರಗಿರುತ್ತದೆ. ನಂತರ ಮಣ್ಣಿಗೆ ರೂಪ ಕೊಡುವ ಸಲುವಾಗಿ ಎಡಗೈಯನ್ನು ಒಳಗಿರಿಸಿ, ಬಲಗೈಯನ್ನು ಹೊರಗಿರಿಸಿಕೊಂಡು, ಹೆಬ್ಬೆಟ್ಟು ಕೆಳಗಿರಿಸಿ, ಬೆರಳುಗಳನ್ನು ತಳಮುಖವಾಗಿರಿಸಿಕೊಂಡು ತೆರೆ ಎತ್ತುವರು. ತೆರೆ ಎತ್ತಿಕೊಂಡ ಮೇಲೆ ಕಂಠ ನಿರ್ಮಾಣ ಮಾಡುವರು–ಕೈಗೆ ಅಂಟಿದ ತಿಳಿ ಮಣ್ಣನ್ನು ಪಕ್ಕದಲ್ಲಿಟ್ಟುಕೊಂಡಿರುವ ಕವಳೀ ಚಟಿಗೆಯಲ್ಲಿನ ನೀರಿಗೆ ಹಾಕುವರು. ಕಂಠಸಮೇತ ತಯಾರಾದ ಹೊಳವಿಗೆ ಕೆಲವು ಕಡೆ ನೆಲ ಎಂದು ಕರೆಯುವರು. ಈ ಎಲ್ಲಾ ಕೆಲಸ ಆಗುವಾಗ ಆಗಾಗ್ಗೆ ತಿಗರಿ ಕೋಲಿನಿಂದ ತಿಗರಿಯನ್ನು ತಿರುಗಿಸಬೇಕಾಗುತ್ತದೆ. ಈ ಹೊಳವನ್ನು ಅಡಿಕೆ ಅಥವ ಬಿದಿರಿನ ಆರು ಅಂಗುಲ ಉದ್ದ ಇರಬಹುದಾದ ದಬ್ಬೆಯನ್ನು ಬಳಸಿಕೊಂಡು ಟೊಳ್ಳಾದ ಒಳವಿನ ತಳವನ್ನು ದಾರದಿಂದ ಕೊಯ್ದು ತಿಗರಿಯಿಂದ ಬೇರ್ಪಡಿಸಿ ಒಣಗಲು ಇಡುವರು. ತಿಗುರಿಯಿಂದ ಮಾಡುವ ಮಡಕೆಯನ್ನು ಗಂಡಸರೆ ಹೆಚ್ಚಾಗಿ ಮಾಡುವರು.

ಗೇಯ್ದ ಮಡಕೆಗಳನ್ನು ತಟ್ಟಿ ಸಿದ್ಧಮಾಡುವುದು

ಕುಂಬಾರನು ತಿಗುರಿಯಿಂದ ಗೇಯ್ದ ಮಡಕೆಗಳನ್ನು ಹುಲ್ಲು ಹಾಸಿನ ಮೇಲೆ ನೆರಳಲ್ಲಿಟ್ಟು ಹದವಾಗಿ ಒಣಗಿಸುವರು. ನಂತರ ಮರದ ಸೊಳ ಮತ್ತು ಕಲ್ಲಿನಿಂದ ತಟ್ಟಿ ಮಡಕೆಯನ್ನು ಗಟ್ಟಿಗೊಳಿಸುವರು. ಹಿಂದಿನ ಕಾಲದಲ್ಲಿ ಕುಂಬಾರರು ಜಿಂಕೆ ಚರ್ಮ ಹಾಸಿಕೊಂಡು ಅದರ ಮೇಲೆ ಕುಳಿತುಕೊಂಡು ಮುಂದೆ ತಲೆದಿಂಬು ಇರಿಸಿಕೊಂಡು ಮಡಕೆಗಳನ್ನು ತಟ್ಟುತ್ತಿದ್ದರು. ಈಗ ಗೋಣಿ ಚೀಲವನ್ನು ಹಾಸಿಕೊಂಡು ಮಡಕೆಗಳನ್ನು ಹದವಾಗಿ ತಟ್ಟುವ ಕೆಲಸದಲ್ಲಿ ತೊಡಗಿರುತ್ತಾರೆ. ತಟ್ಟುವಾಗ ಬಲಗಾಲಿನ ಪಾದವನ್ನು ಮುಂದಿಟ್ಟುಕೊಂಡು, ಎಡಗಾಲಿನ ಪಾದವನ್ನು ಹಿಂದೆ ಇರಿಸಿಕೊಂಡು, ಎಡಗಾಲಿನ ಮೊಣಕಾಲಿನ ಮೇಲೆ ಮಡಕೆ ಕಂಠವನ್ನು ತಿರುಗಿಸಿಕೊಂಡು, ಅರ್ಧಭಾಗಕ್ಕೆ ಓರೆಮಾಡಿಕೊಂಡು, ತಳವನ್ನು ಎಡಗೈಯಿಂದ ಕಲ್ಲನ್ನಿರಿಸಿಕೊಂಡು, ಅದೇ ಜಾಗದ ಹೊರಭಾಗವನ್ನು ಮರದ ಸೊಳದಿಂದ ತಟ್ಟುವರು. ಮಡಕೆಗಳನ್ನು ತಟ್ಟುವ ಕ್ರಿಯೆಯಲ್ಲಿ ಎಡಗೈ ಪಾತ್ರ ಬಹಳ ಮುಖ್ಯವಾದದ್ದು. 'Left hand is the heart hand' ಎಂದು ಬ್ರಿಟಿಷ್ ಪಾಟರ್ ಮೈಕೆಲ್ ಕೆಡಿವ್ ಹೇಳುತ್ತಾರೆ.[೬] ಎಡಗೈ ಹೃದಯಕ್ಕೆ ಹತ್ತಿರ ಕೂಡ ಹೀಗಾಗಿ ಕುಂಬಾರನಿಗೆ 'ಎಡಗೈ ಹೃದಯದ ಕೈ' ಎಂದು ಹೇಳುವುದು ಅರ್ಥಪೂರ್ಣವಾಗಿದೆ. ತಟ್ಟುವಾಗ ಸೊಳವನ್ನು ಆಗಾಗ ತೇವವಿರುವ ಬಟ್ಟೆಯ ಮೇಲೆ ಒತ್ತಿ ತಟ್ಟಬೇಕು. ಕಲ್ಲಿನ ತಳವನ್ನು ಬೂದಿಗೆ ಒತ್ತಿ ಒಳಗಿರಿಸಬೇಕು. ಮಡಕೆಗಳನ್ನು ಮೂರು ಅಥವಾ ನಾಲ್ಕು ಹಂತಗಳಲ್ಲಿಯೂ, ಚಿಕ್ಕ ಮಡಕೆಗಳಾದರೆ ಎರಡೇ ಹಂತದಲ್ಲಿ ತಟ್ಟಿ ಸಿದ್ಧಪಡಿಸುವರು. ಮೊದಲನೆ ವರಸೆಗೆ ಕುದುಮ ಮಾಡುವುದು ಎನ್ನುವರು. ಇದನ್ನು ದೊಡ್ಡ ಕಲ್ಲಿನಿಂದ ತಟ್ಟುವರು. ಎರಡನೇ ಬಾರಿಗೆ ತಟ್ಟುವಾಗ ತೆಳುವಾದ ಸೊಳದಿಂದ ತಟ್ಟುವರು. ಮೊದಲನೆ ವರಸೆ ಕುದುಮು ಮಾಡಿದ ಮೇಲೆ ಅರ್ಧ ಒಡೆದ ಮಡಕೆಯ ಕಂಠವನ್ನು ಕೆಳಕ್ಕಿಟ್ಟು, ಅದರಲ್ಲಿ ತಟ್ಟಿದ ಮಡಕೆ ಬೀಳದಿರಲು ಇಡುವರು. ಅದು ಸಲಆರಿದ ನಂತರ, ಎರಡನೇ ಬಾರಿ ತಟ್ಟಿ, ನಂತರ ಚಿಕ್ಕ ಸೊಳದಿಂದ ನುಣುಪುಗೊಳಿಸುವರು. ಇದನ್ನು ಗಟ್ಟಿಗೊಳಿಸುವುದು ಎಂದು ಕರೆಯುತ್ತಾರೆ. ಬೂದುಗದ ಕಾಯಿ, ಗಜ್ಜಗದ ಸರದಿಂದ ಮಡಕೆಯ ಮೈಯನ್ನು ಉಜ್ಜಿ ನುಣುಪುಗೊಳಿಸುವರು.

ಕುಸುರಿ ಕೆಲಸ: ಇದು ಮಡಕೆ ತಟ್ಟುವ ಕೊನೆಯ ಹಂತದ ಕಾರ್ಯ. ಮಡಕೆಗಳನ್ನು ಗಟ್ಟಿಸಿದ ಮೇಲೆ, ಸಿಡಿದಬ್ಬೆಯಿಂದ ವಿವಿಧ ಚಿತ್ತಾರಗಳನ್ನು ಬಿಡಿಸುವರು. ಸಿಡಿದೆಬ್ಬೆಯನ್ನು ಬಳಪದಕಲ್ಲು ಇಲ್ಲವೆ ಎತ್ತಿನ ಕೊಂಬಿನಿಂದ ಮಾಡುವರು. ಇದು ಸುಮಾರು ಎರಡು-ಮೂರು ಅಂಗುಲವಿದ್ದು, ಅದರ ಹಣಿ ರೂಪಾಯಿ ಗಾತ್ರದಷ್ಟು ಅಗಲವಾಗಿರುತ್ತದೆ. ಅಣಿಯ ಮೇಲ್ಗಡೆ ಬೇರೆ ಬೇರೆ ಹೂವಿನ, ಪ್ರಾಣಿಗಳ ಚಿತ್ರವನ್ನು ಬರೆದು ಅಥವಾ ಕೊರೆದು ಸಿಡಿದಬ್ಬೆಯ ಅಚ್ಚನ್ನು ತಯಾರಿಸುವರು. ಈ ಅಚ್ಚುಗಳನ್ನು ಹಣೆಯಲ್ಲಿ ರಂಧ್ರವಿರುವ ಸೊಳದಲ್ಲಿಟ್ಟು, ಹಸಿ ಮಡಕೆಯ ಮೇಲೆ ನಿಧಾನವಾಗಿ

ಒತ್ತುವರು. ಕುಂಬಾರನು ತನ್ನ ಕೈಚಳಕದಿಂದ ದಾರ ಮತ್ತು ತೆಳುವಾದ ತಗಡನ್ನು ಹಿಡಿದುಕೊಂಡು, ಕಂಠದ ಸುತ್ತ ಗೆರೆಯನ್ನು ಹಾಕುವನು. ಕೆಲವು ಪ್ರದೇಶಗಳಲ್ಲಿ ಬಟ್ಟೆಗೆ ಹೊಮ್ಮಣ್ಣನ್ನು ಹಚ್ಚಿಕೊಂಡು ಮಡಕೆಯ ಮೈಯನ್ನು ತಿಕ್ಕುವರು. ಕರಿಯ ಮಡಕೆಗೆ ಮಾತ್ರ ಹೊಮ್ಮಣ್ಣು ಹಚ್ಚುವರು. ಬಳ್ಳಾರಿ ಜಿಲ್ಲೆಯಲ್ಲಿ ಮಡಕೆಗಳಿಗೆ ಹೊಮ್ಮಣ್ಣು ಹಚ್ಚುವ ರೂಢಿ ಇದೆ. ಹೀಗೆ ತಯಾರಾದ ಮಡಕೆಗಳನ್ನು ೨-೩ ದಿನ ನೆರಳಲ್ಲಿಟ್ಟು ಆರಿಸಿದ ಮೇಲೆ ಆವಿಗೆಯಲ್ಲಿಟ್ಟು ಸುಡುವರು.

ಈ ಎಲ್ಲಾ ಕೆಲಸಗಳಲ್ಲಿ ಗಂಡಸರ ಪಾತ್ರ ಮುಖ್ಯವಾಗಿದ್ದರೂ, ಕುಂಬಾರ ಮಹಿಳೆಯರು ಚಿಕ್ಕ ಚಿಕ್ಕ ಮಡಕೆಗಳಾದ, ಚಟಗಿ, ಗಡಿಗೆ, ಕುಡಿಕೆ, ಮುಚ್ಚಳ, ಹಣತೆ ಇತ್ಯಾದಿಗಳನ್ನು ತಯಾರಿಸುವರು. ಮಣ್ಣನ್ನು ಚೆನ್ನಾಗಿ ಮಿದ್ದು ಮುದ್ದೆ ಮಾಡಿಕೊಡುವರು. ಕುಂಬಾರಗಿತ್ತಿಯರು ಕೈಯಿಂದ ಮಾಡಬಹುದಾದ ಮಡಕೆಗಳನ್ನು ತಯಾರಿಸುವರು. ಕುಂಬಾರಿಕೆಯಲ್ಲಿ ಹೆಂಗಸರು ಗಂಡಸರ ಜೊತೆಗಿದ್ದು ಅವರ ಕೆಲಸ ಕಾರ್ಯಗಳಲ್ಲಿ ನೆರವಾಗುವರು. ಇತ್ತೀಚಿನ ವರ್ಷಗಳಲ್ಲಿ ಯಾಂತ್ರಿಕ ತಿಗರಿಗಳಲ್ಲಿ ಮಹಿಳೆಯರು ಮಡಕೆಗಳನ್ನು ತಯಾರಿಸುತ್ತಾರೆ.

ಮಡಕೆ ಸುಡುವ ವಿಧಾನ:

ಕುಂಬಾರಿಕೆಯಲ್ಲಿ ಮಡಕೆಗಳನ್ನು ತಯಾರು ಮಾಡಿದ ಮೇಲೆ, ಅವುಗಳನ್ನು ಆವಿಗೆಯಲ್ಲಿ ಇಟ್ಟು ಸುಡುವುದು ಬಹುಮುಖ್ಯವಾದುದು. ಹಸಿ ಮಡಕೆಗಳಲ್ಲಿನ ತೇವ ಪೂರ್ಣವಾಗಿ ಆರಿದ ಮೇಲೆ ಆವಿಗೆಯಲ್ಲಿಟ್ಟು ಮಡಕೆಗಳನ್ನು ಸುಡುವರು. ಹಸಿ ಮಡಕೆಗಳನ್ನು ಆವಿಗೆಯಲ್ಲಿ ಸಾಲಾಗಿ ಜೋಡಿಸಿ ಇಡಲು, ಒಡೆದು ಹೋದ, ಮುಕ್ಕಾದ ಸುಟ್ಟ ಮಡಕೆಗಳನ್ನು ಆನಿಕೆಯಾಗಿ ಉಪಯೋಗಿಸುತ್ತಾರೆ. ಇವನ್ನು ಆವಿಗೆ ಕಟ್ಟುವ ಗಡಿಗೆ ಎನ್ನುವರು. ಬಳ್ಳಾರಿ ಜಿಲ್ಲೆಯಲ್ಲಿ ಮರಗಲು ಗಡಿಗೆ ಎಂದು ಕರೆಯುವರು. ಕೆಳಗಡೆ ದೊಡ್ಡ ಹರಿವಾಣ, ಪಚೇಲಿ, ಕೊಡಗಳನ್ನು ಜೋಡಿಸಿ ನಂತರ ಚಿಕ್ಕ ಚಿಕ್ಕ ಚಟಗಿಗಳನ್ನು ಜೋಡಿಸುವರು. ಕೊನೆಯ ಹಂತದಲ್ಲಿ ಪಲ್ಪಿ, ಮುಚ್ಚಳ ಮುಚ್ಚುವರು. ಈ ರಚನೆಯ ಒಳಗಡೆ ಇಟ್ಟ ಉರವಲು ಕಟ್ಟಿಗೆ ಉರಿಯಲು ಸಹಾಯಕವಾಗುತ್ತದೆ. ಮಡಕೆಗಳು ಒಂದಕ್ಕೊಂದು ತಾಗಿ ಒಡೆಯದಿರಲು, ಪಾತ್ರೆಗಳ ಮಧ್ಯೆ ಬೈಹುಲ್ಲನ್ನು ಇಡುವರು. ನಂತರ ಅವಿಗೆಯ ಮೇಲ್ಗಡೆ ಒಣಗಿದ ಹುಲ್ಲು, ಮರದ ತಪ್ಪಲು, ಹಾಕುತ್ತಾರೆ. ಆ ಬಳಿಕ ಹಂತ ಹಂತವಾಗಿ ಮಾಡಿದ ಬೂದಿಯನ್ನು ಮೇಲು ಹೊದಿಕೆಯಾಗಿ ತೆಳುವಾಗಿ ಹರಡುವರು. ಕೆಲವಡೆ ಕೆಸರು ಮಣ್ಣಿನ ಹೊದಿಕೆ ಹಾಕುವರು. ಇದರ ಉದ್ದೇಶ ಬೆಂಕಿಯ ಜ್ವಾಲೆಗಳು ಹೊರಗಡೆ ಹೋಗಬಾರದೆನ್ನುವುದು. ಇದಾದ ಮೇಲೆ ಆವಿಗೆಯ ಬಾಯಿಯ ಮೂಲಕ ಬೆಂಕಿಯನ್ನು ಹಾಕಿ ಉರವಲನ್ನು ಮೆಲ್ಲಗೆ ಚಾಚುತ್ತಾ ನಿಧಾನವಾಗಿ ಆವಿಗೆಯನ್ನು ಕಾಯಿಸುವರು. ಸುಡುವ ಆರಂಭಕ್ಕೆ ಬೆಂಕಿ ಮಾಡಲು ಸಗಣಿಯ ಕುಳ್ಳನ್ನು ಕೆಲವಡೆ ಬಳಸುವರು. ಆವಿಗೆಯಲ್ಲಿಟ್ಟಾಗ ಆವಿಗೆಯ ಬಾಯಿ ಕಡೆಗೆ ಬೀಸಿದರೆ ಸುಡಲು ಅನುಕೂಲವಾಗುತ್ತದೆ. ಮಡಕೆಗಳು ಕಾಯ್ದು ಕಬ್ಬಿಣದ ಹಾಗೆ,

ಬಣ್ಣ ಬರುವವರೆಗೆ ಸುಟ್ಟು ನಂತರ ಆವಿಗೆ ಬಾಯಿಯನ್ನು ಬೂದಿಯಿಂದ ಮುಚ್ಚಿ ಭದ್ರಪಡಿಸುವರು. ಮಡಕೆಗಳು ಪೂರ್ತಿಯಾಗಿ ಸುಡಲು ೮ ರಿಂದ ೧೦ ಗಂಟೆಯ ಸಮಯ ಬೇಕು. ಮಡಕೆ ಸುಡುವ ಪ್ರಕ್ರಿಯೆ ಮುಗಿದ ನಂತರ, ಸುಟ್ಟ ಮಡಕೆಗಳನ್ನು ತೆಗೆದು ಬೇರೆ ಬೇರೆಯಾಗಿ ವಿಂಗಡಿಸಿಟ್ಟು ಮಾರಾಟಕ್ಕೆ ಅಣಿಗೊಳಿಸುವರು.

ಕುಂಬಾರರು ಸಿದ್ಧಪಡಿಸಿದ ಮಡಕೆಗಳನ್ನು ತಲೆಯ ಮೇಲೆ ಹೊತ್ತು ಅಥವಾ ಬಂಡಿಗಳಲ್ಲಿ ಊರೂರು, ಕೇರಿ ಕೇರಿಗಳಿಗೆ ಸಾಗಿಸಿ ಮಾರಾಟ ಮಾಡುವರು. ಮಡಕೆಗಳ ಮಾರಾಟದಲ್ಲಿ ಕುಂಬಾರಗಿತ್ತಿಯರ ಪಾತ್ರ ಪ್ರಮುಖ. ಮಡಕೆಗಳನ್ನು ಸಾಗಿಸುವಾಗ ಒಡೆದು ಹೋಗುವ ಸಾಧ್ಯತೆ ಇರುತ್ತದೆ. ಮೊದಲು ಮಡಕೆಗಳನ್ನು ಕಾಳುಕಡಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದರು. ಈಗ ಮಡಕೆಗಳನ್ನು ಹಣಕ್ಕೆ ಮಾರಾಟ ಮಾಡುತ್ತಾರೆ. ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ಕುಂಬಾರರನ್ನು ಆಯಾಗಾರರೆಂದು ಪರಿಗಣಿಸಲಾಗಿತ್ತು. ಕುಂಬಾರರು ಒಕ್ಕಲಗಾರಿಕೆ ಹಾಗೂ ಇತರೆ ವೃತ್ತಿಯವರಿಗೆ ಮಡಕೆಗಳನ್ನು ಕೊಟ್ಟು ಆಯಾ ಪಡೆಯುತ್ತಿದ್ದರು. ರೈತರಿಂದ ಕಾಳುಕಡಿಗಳನ್ನು ಸಂಗ್ರಹಿಸಿ ಜೀವನ ಮಾಡುತ್ತಿದ್ದರು. ಈಗ ಈ ಪದ್ಧತಿ ಮಾಯವಾಗಿದೆ. ಮಡಕೆಗಳ ಮಾರಾಟ ಕಡಿಮೆಯಾಗುತ್ತಿದೆ. ಮಡಕೆಗಳಿಗೆ ಬದಲಾಗಿ ಬಾಳಕೆ ಬರುವ ಪ್ಲಾಸ್ಟಿಕ್ ಹಾಗೂ ಲೋಹಗಳಿಂದ ತಯಾರು ಮಾಡಿದ ಪಾತ್ರೆಗಳು ಮಾರುಕಟ್ಟೆಯಲ್ಲಿ ಸಿಗುವುದರಿಂದ ಮಡಕೆಗಳಿಗೆ ಬೇಡಿಕೆ ಇಲ್ಲವಾಗಿದೆ. ಇದರಿಂದ ಪರಂಪರಾಗತವಾಗಿ ಬೆಳೆದು ಬಂದ ಕುಂಬಾರಿಕೆ ಕಣ್ಮರೆಯಾಗುತ್ತದೆ. ಕುಂಬಾರರು ಇಂದು ವ್ಯವಸಾಯಗಾರರಾಗಿ, ಕೂಲಿಕಾರರಾಗಿ ಮತ್ತು ಇತರೆ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡು ಬದುಕು ಸಾಗಿಸುತ್ತಿರುವುದನ್ನು ಕಾಣಬಹುದು.

ಆವಿಗೆ: ಕುಂಬಾರಿಕೆಯ ಮತ್ತೊಂದು ಮುಖ್ಯ ಸಾಧನವೆಂದರೆ ಮಡಕೆ ಸುಡುವ ಆವಿಗೆ. ಇದನ್ನು ಮಡಕೆ ಭಟ್ಟಿ ಎಂತಲೂ ಕರೆಯುವರು. ತಟ್ಟಿದ ಹಸಿ ಮಡಕೆಗಳನ್ನು ಒಣಗಿದ ಮೇಲೆ ಆವಿಗೆಯಲ್ಲಿಟ್ಟು ಸುಡುವುದು. ಆವಿಗೆಯಲ್ಲಿ ಒಂದು ಬಾಯಿ ಎರಡು ಬಾಯಿ ಮೂರು ಬಾಯಿಯ ಸಣ್ಣ ಮತ್ತು ದೊಡ್ಡ ಆವಿಗೆಗಳಿವೆ. ಬಾಯಿಯ ಮೂಲಕ ಉರುವಲುಗಳನ್ನು ಹಾಕುವರು. ಇತ್ತೀಚೆಗೆ ಒಂದೇ ಬಾಯಿ ಇರುವ ಆವಿಗೆಯನ್ನು ಕಟ್ಟುವರು. ಗ್ರಾಮೀಣ ಪ್ರದೇಶಗಳಲ್ಲಿ ಆವಿಗೆಯನ್ನು ಸ್ಥಳೀಯವಾಗಿ ದೊರೆಯುವ ಕಲ್ಲು ಮಣ್ಣುಗಳಿಂದ ಕಟ್ಟುವರು, ರಚನೆಗನುಗುಣವಾಗಿ ಆವಿಗೆಯನ್ನು ಆಯಾತಾಕಾರದ ಆವಿಗೆ ಮತ್ತು ವೃತ್ತಾಕಾರದ ಆವಿಗೆ ಎಂದು ಎರಡು ಬಗೆಯಾಗಿ ವಿಂಗಡಿಸುವರು. ಆಯಾತಾಕಾರದ ಆವಿಗೆಯ ಉದ್ದ ಸಾಮಾನ್ಯವಾಗಿ ೧೫-೨೦ ಅಡಿ ಉದ್ದವಿದ್ದು ಬಾಯಿಯ ಹತ್ತಿರದ ಎತ್ತರ ೪ ಅಡಿ ಇರುತ್ತದೆ. ತುದಿಯ ಕಡೆ ಹೋದಂತೆ ಅದರ ಎತ್ತರ ಕಡಿಮೆಯಾಗುತ್ತ ಹೋಗುತ್ತದೆ. ಮುಂಭಾಗದ ಅಗಲ ೮ ಅಡಿ ಇದ್ದು ಹಿಂಭಾಗದ ಅಗಲ ೧೨ ಅಡಿ ಇರುತ್ತದೆ. ಆವಿಗೆಯ ಬಾಯಿಯ ಅಗಲ ಒಂದೂವರೆ ಅಡಿ ಇರುತ್ತದೆ. ಎತ್ತರ ಎರಡರಿಂದ ಎರಡೂವರೆ

ಅಡಿ ಇರುತ್ತದೆ. ವೃತ್ತಾಕಾರದ ಆವಿಗೆಗಳು ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿವೆ. ನಾಲ್ಕರಿಂದ ಎಂಟು ಅಡಿ ವ್ಯಾಸದವರೆಗೆ ತಮ್ಮ ಅನುಕೂಲಕ್ಕೆ ಸರಿಯಾಗಿ ವೃತ್ತಾಕಾರದ ಆವಿಗೆಯನ್ನು ಕಟ್ಟುವರು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇತ್ತೀಚಿನ ಹತ್ತು ವರ್ಷಗಳಿಂದ ಫೈಬರ್ ಕವಚದ ಒಲೆಗಳು ಬಂದಿವೆ. ಕ್ರಿ.ಪೂ. ೧೦೦೦ಕ್ಕಿಂತ ಪೂರ್ವದಲ್ಲಿಯ ಕೊರಿಯ, ಚೀನಾ, ಜಪಾನ ದೇಶದ ಕುಂಬಾರರು ಸುಸಜ್ಜಿತ ಆವಿಗೆಯನ್ನು ಮಡಕೆ ಸುಡಲು ಉಪಯೋಗಿಸುತ್ತಿದ್ದರು. ರೋಮನ್ನರೂ ಕೂಡ ಇದೇ ತೆರನಾದ ಆವಿಗೆಯನ್ನು ಉಪಯೋಗಿಸುತ್ತಿದ್ದುದು ಕಂಡುಬರುತ್ತದೆ. ಈ ಆವಿಗೆಯ ವಿಶೇಷತೆ ಎಂದರೆ ೯೦೦-೧೦೫೦ ಉಷ್ಣತೆಯಲ್ಲಿ ಮಡಕೆಗಳನ್ನು ಸುಡಲು ಸಾಧ್ಯವಾಗುತ್ತಿತ್ತು. ಇದರಿಂದಾಗಿ ಅವುಗಳ ಬಾಳಿಕೆಯ ಗುಣಮಟ್ಟ ಹೆಚ್ಚಾಗಿತ್ತು. ಈ ಸಂಶೋಧನೆ ಕುಂಬಾರಿಕೆಗೆ ಬಹಳ ಮಹತ್ವ ಪೂರ್ಣವಾದ ಆವಿಷ್ಕಾರ. ಇಟ್ಟಿಗೆಯ ಜೊತೆಗೆ ಕವಚ ಹಾಕಿ ಅದರ ಹೊರಭಾಗಕ್ಕೆ ಲೋಹದ ಕವಚವನ್ನು ಬಳಸುವರು. ಚಿಕ್ಕ, ಮಧ್ಯಮ, ದೊಡ್ಡ ಗಾತ್ರ-ಹೀಗೆ ಬೇರೆ ಬೇರೆ ಪ್ರಮಾಣದ ಬೇಕಾದ ಆವಿಗೆಗಳನ್ನು ರಚಿಸಬಹುದು. ಕೇವಲ ಒಂದೆರಡು ಗಂಟೆಗಳಲ್ಲಿ ಮಡಕೆಗಳನ್ನು ಹದವಾಗಿ ಸುಡಬಹುದು. ಇದರಿಂದ ಅಪವ್ಯಯ ಕಡಿಮೆ ಈಗೀಗ ಸ್ಟುಡಿಯೋ ಪಾಟರಿ ಜನಪ್ರಿಯವಾಗತೊಡಗಿದ್ದರಿಂದ ಫೈಬರ್ ಆವಿಗೆಯು ತುಂಬಾ ಅನುಕೂಲವೆಂದು ಬೇರೆ ಹೇಳಬೇಕಾಗಿಲ್ಲ.

ಗ್ರಾಮೀಣ ಕುಂಬಾರರು ಮಡಕೆ ಸುಡಲು ಸ್ಥಳೀಯವಾಗಿ ದೊರೆಯುವ ಕಟ್ಟಿಗೆ, ಹುಲ್ಲು, ಹೊಟ್ಟು, ಸಿಪ್ಪೆ, ಇತ್ಯಾದಿಗಳನ್ನು ಉಪಯೋಗಿಸುವರು.

ಕುಂಬಾರಿಕೆಗೆ ಈ ಮೇಲಿನ ಮುಖ್ಯ ಸಾಧನಗಳಲ್ಲದೆ ಅನೇಕ ಚಿಕ್ಕಮಟ್ಟ ಸಾಧನ ಸಲಕರಣೆಗಳ ಅವಶ್ಯಕತೆ ಇದೆ. ಅವುಗಳಲ್ಲಿ ದರಗ, ಇಲಕಿ, ಕವಳಿ, ಚಟಣಿ, ಜಾಳಿಗೆ, ಕೊರೆದಾರ, ಅಚ್ಚು, ಹೊಮ್ಮಣ್ಣು, ಚಿಕ್ಕ ತಗಡು, ಚಡಿಮಣಿ, ಕೊಡತಿ, ಗಜ್ಜುಗದ ಸರ, ಮಣಿಸರ, ಕಲ್ಲಿ, ಕವೆಗೋಲು, ಗೋರಿ ಮುಖ್ಯವಾಗಿವೆ. ಹಾಗೆ ನೋಡಿದರೆ ಕುಶಲ ಕೆಲಸಗಾರರಿಗೆ ಕೈ ಮತ್ತು ಬೆರಳುಗಳೇ ಪ್ರಥಮ ಸಾಧನ ಸಲಕರಣೆಗಳು. ಕುಂಬಾರಿಕೆಗಂತೂ ಇದು ಸಂಪೂರ್ಣ ಸತ್ಯ.

ಕುಂಬಾರರು ಸಿದ್ಧಪಡಿಸುವ ಮಡಕೆಗಳು:

ಕುಂಬಾರಿಕೆ ಆರಂಭವಾದಂದಿನಿಂದಲೂ ಕುಂಬಾರ ಹತ್ತಾರು ದಿನಬಳಕೆಯ ಮತ್ತು ಜನೋಪಯೋಗಿ ಮಡಕೆಗಳನ್ನು ವಿವಿಧ ವಿನ್ಯಾಸಗಳಲ್ಲಿ ತಯಾರಿಸಿಕೊಡುತ್ತಿದ್ದಾನೆ. ಕುಂಬಾರ ತಯಾರುಮಾಡುವ ಮಡಕೆಗಳನ್ನು ಗೃಹ ಬಳಕೆ, ಕೃಷಿ ಬಳಕೆ, ಜನಪದರ ಕ್ರೀಡೆಗಳಲ್ಲಿ ಬಳಸುವ ಪದಾರ್ಥಗಳು, ಮಣ್ಣಿನ ವಿಗ್ರಹಗಳು, ಮಣ್ಣಿನ ವಾದ್ಯಗಳು ಹಾಗೂ ವಿವಿಧ ರೀತಿಯ ಗೃಹ ಅಲಂಕಾರಿಕ ವಸ್ತುಗಳೆಂದು ವರ್ಗೀಕರಿಸಬಹುದು.

ಬಳ್ಳಾರಿಯ ಗ್ರಾಮೀಣ ಪ್ರದೇಶಗಳಲ್ಲಿನ ಕುಂಬಾರರು ಹೆಚ್ಚಾಗಿ ಗೃಹ ಉಪಯೋಗಿ ಮಡಕೆಗಳನ್ನು ತಯಾರಿಸುತ್ತಾರೆ. ಗೃಹ ಉಪಯೋಗಿ ಮಡಕೆಗಳನ್ನು ವಿವಿಧ ಆಕಾರ, ಗಾತ್ರಗಳಲ್ಲಿ ತಯಾರಿಸುತ್ತಾರೆ. ಗುಡಾಣ, ದೊಡ್ಡ ಮಡಕೆ, ತಂದೂರು ಗೂಡು, ಆಹಾರ ಪದಾರ್ಥಗಳನ್ನು ಬೇಯಿಸಲು ಬೇಕಾದ ಚಿಕ್ಕ ಮತ್ತು ದೊಡ್ಡ ಗಾತ್ರದ ಮಡಕೆಗಳು, ಅಗಲಬಾಯಿ ಇರುವ ಮಡಕೆಗಳು, ಗುಂದಿ ಬಸಲೆ, ಬಿಂದಿಗೆ, ತತ್ರಾಣಿ, ಹೂಜಿ, ಅಡಕಲ ಮಡಕೆಗಳು, ವಾಡೆ, ರೊಟ್ಟಿ ಹೆಂಚು, ಪಡ್ಡಿನ ಹೆಂಚು, ನೀರು ಶೇಖರಣಾ ಮಡಕೆಗಳು, ದೋಸೆ ಹೆಂಚು, ಕಾವಲಿ, ಒಲೆ, ಬಾನಿ, ಪ್ರಣತಿ, ಮುಚ್ಚಳ ಇತ್ಯಾದಿ, ಗೃಹ ಅಗತ್ಯಕ್ಕೆ ತಕ್ಕಂತೆ ವಿವಿಧ ಗಾತ್ರ ಹಾಗೂ ಆಕಾರದ ಮಡಕೆಗಳನ್ನು ತಯರಿಸುವರು. ಮನೆ ನಿರ್ಮಾಣದ ಮಾಡಿಗೆ ಬೇಕಾದ ನಾಡ ಹೆಂಚುಗಳನ್ನು ತಯಾರಿಸುವರು. ಹಳ್ಳಿಗಳಲ್ಲಿ ನಾಡ ಹೆಂಚಿನ ಮನೆಗಳನ್ನು ಹೆಚ್ಚಾಗಿ ಕಾಣಬಹುದು. ಹರಿನಾಳಿಗೆ, ಬಾದಾಳ ಗೊಂಬೆಗಳನ್ನು ಕುಂಬಾರರು ತಯಾರಿಸುವರು.

ಕೃಷಿಕರಿಗೆ ಬೇಕಾದ ನೀರು ಸಂಗ್ರಹಿಸುವ ಬಾನಿ, ಆಹಾರ ದಾನ್ಯಗಳನ್ನು ಸಂಗ್ರಹಿಸಿಡುವ ವಾಡೇವು, ದೊಡ್ಡ ಗಾತ್ರದ ಸೊರೆ, ಕೃಷಿ ಭೂಮಿಗೆ ನೀರು ಹಾಯಿಸುವ ಮಣ್ಣಿನ ಕೊಳವೆ ಇತ್ಯಾದಿ ಪರಿಕರಗಳನ್ನು ಕುಂಬಾರ ಕೃಷಿಕರ ಅಗತ್ಯಕ್ಕನುಗುಣವಾಗಿ ತಯಾರಿಸಿಕೊಡುವರು. ಹಬ್ಬ, ಹರಿದಿನ, ಸಾಂಸ್ಕೃತಿಕ ಸಂದರ್ಭಗಳಿಗೆ ಬೇಕಾದ ಐರಾಣಿ, ಕೇಲು, ಗಟ್ಟಿ ಗಡಿಗೆ, ಕುಂಭ, ಗುಗ್ಗಳ ಕೊಡ, ಹಣತೆ, ಚಿಲುಮೆ, ದೂಪದ ಕುಂಡ, ಫಳಿಗೆ ಪಾತ್ರೆ, ವಿಭೂತಿ ಮರಿಗೆ, ಇತ್ಯಾದಿ ಹಾಗೂ ಜನಪದ ಕ್ರೀಡೆಗಳಿಗೆ ಬೇಕಾದ ವಿವಿಧ ರೀತಿಯ ಮಡಕೆಗಳನ್ನು ತಯಾರು ಮಾಡುವರು.

ಕುಂಬಾರರು ಮಣ್ಣಿನಿಂದ ಮಡಕೆ-ಕುಡಿಕೆಗಳನ್ನು ಮಾಡುವುದರ ಜೊತೆಗೆ ಚಿಕ್ಕಮಕ್ಕಳು ಆಡುವ ಆಟಿಕೆ ಸಾಮಾನುಗಳನ್ನು ಹಬ್ಬ ಹುಣ್ಣಿಮೆ ಊರಿನ ಉತ್ಸವ ಜಾತ್ರೆ ಸಂದರ್ಭದಲ್ಲಿ ಪೂಜೆಸ್ವಲ್ಪಡುವ ಮಣ್ಣಿನ ಬೇರೆ ಬೇರೆ ದೇವತಾ ವಿಗ್ರಹಗಳನ್ನು ತಯಾರಿಸುತ್ತಾರೆ. ಭಾರತದ ಸಂಸ್ಕೃತಿಯಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಮಣ್ಣಿನ ವಿಗ್ರಹಗಳನ್ನು ಪೂಜಿಸುವ ರೂಢಿ ಇದೆ. ಇವುಗಳಲ್ಲಿ ಮುಖ್ಯವಾಗಿ ಗಣಪತಿ, ಜೋಕುಮಾರ, ಕೃಷ್ಣ ಬಲರಾಮ, ಮಣ್ಣೆತ್ತು ಮತ್ತು ಗೋವು, ಹುತ್ತಪ್ಪ, ಹರಿಕೆಮೂರ್ತಿ, ಗೌರವ್ವ, ಗುಳ್ಳವ್ವ, ಗೊಗ್ಗವ್ವ, ಸೀಗವ್ವ, ಮುಂತಾದ ಮಣ್ಣಿನ ಮೂರ್ತಿಗಳನ್ನು ಕಲಾತ್ಮಕವಾಗಿ ಕುಂಬಾರರು ತಯಾರಿಸುತ್ತಾರೆ. ವಿವಿಧ ರೀತಿಯ ಪ್ರಾಣಿ ಹಾಗೂ ಪಕ್ಷಿಗಳ ಗೊಂಬೆಗಳನ್ನು ತಯಾರು ಮಾಡುತ್ತಾರೆ.

ಕುಂಬಾರಿಕೆಯಲ್ಲಿ ವಿವಿಧ ವಾದ್ಯಗಳಿಗೆ ಬೇಕಾದ ಹೊಳವುಗಳನ್ನು ತಯಾರಿಸಿಕೊಡುತ್ತಾರೆ. ಅವುಗಳಲ್ಲಿ ಪ್ರಮುಖವಾಗಿ ಘಟಂ, ಮೃದಂಗ, ತಬಲ ಮತ್ತು ಡಗ್ಗಾ, ಸಮಾಳ, ಗೊಂದಲಿಗರ ಸಮಾಳ, ಗುಮಟೆ, ಕೋಲುಗುಮಟೆ, ಕರಪಾಲದ ಗುಮಟೆ, ಚಕ್ರಾದಿ ಬಳೆ, ದಿಮ್ಮೊ, ತಂಬೂರಿ ಮೇಳದ ಗುಮ್ಮಿ ಇತ್ಯಾದಿ ವಾದ್ಯಗಳಿಗೆ ಮಣ್ಣಿನ ಹೊಳವನ್ನು ಕುಂಬಾರರು ತಯಾರು

ಮಾಡಿಕೊಡುತ್ತಾರೆ. ಕುಂಬಾರರು ಗೃಹ ಅಲಂಕರಣದ ವಿವಿಧ ರೀತಿ, ವಿನ್ಯಾಸದ ಮಡಕೆ ಕುಡಿಕೆಗಳನ್ನು ಹೂ ಕುಂಡಗಳನ್ನು ತಯಾರು ಮಾಡುತ್ತಾರೆ.

ಕುಂಬಾರಿಕೆಯಲ್ಲಿ ವಹಿಸಬೇಕಾದ ಎಚ್ಚರಿಕೆ

ಜೇಡಿಮಣ್ಣನ್ನು ಹದ ಮಾಡುವಾಗ ಸಗಣಿ, ಕುರಿಪಿಚ್ಚಗೆ, ಹುಲ್ಲಿನ ಬೀಜಗಳು, ಗರಿಕೆ, ಬೇರು, ರಾಗಿ ಕಾಳು, ಭತ್ತದ ಕಾಳು, ದಪ್ಪ ಮರಳಿನ ಕಣ ಇದ್ದಲ್ಲಿ ತೆಗೆದು ಹಾಕಬೇಕು. ಆ ಹಂತದಲ್ಲಿ ಕುಂಬಾರ ಎಚ್ಚರ ವಹಿಸದಿದ್ದರೆ, ಸುಡುವಾಗ ಕಾಳುಗಳು, ಪಿಚ್ಚಗೆ, ದಪ್ಪ ಮರಳಿನ ಕಣಗಳು ಸಿಡಿದು ಮಡಕೆಗೆ ಹಾನಿಯುಂಟು ಮಾಡುತ್ತವೆ. ಅಲ್ಲದೆ ಸಗಣಿ, ಕುರಿ ಪಿಚ್ಚಗೆಯ ಜಾಗದಲ್ಲಿ ಬೆಂದು ಬೂದಿಯಾಗಿ ಮಡಕೆ ತೂತು ಬೀಳುತ್ತದೆ.

ಕುಂಬಾರಿಕೆಯಲ್ಲಿ ಎದುರಾಗುವ ಆತಂಕಗಳು

ಪ್ರಕೃತಿಯಲ್ಲುಂಟಾಗುವ ಏರಿಳಿತಗಳು ಕುಂಬಾರಿಕೆಯ ಸಂದರ್ಭದಲ್ಲಿ ಅಡ್ಡಿ ಆತಂಕವನ್ನುಂಟು ಮಾಡುತ್ತವೆ. ಮಳೆಗಾಲದಲ್ಲಿ ಮಣ್ಣು ತರುವುದು, ಮಡಕೆಗಳನ್ನು ಒಣಗಿಸುವುದು ಎಲ್ಲಕ್ಕಿಂತ ಹೆಚ್ಚಾಗಿ ಆವಿಗೆಯನ್ನಿಡುವುದು ತುಂಬಾ ಕಷ್ಟ. ಸರಿಯಾದ ಬಿಸಿಲು ಇಲ್ಲದಿದ್ದಲ್ಲಿ ಮಡಕೆಗಳು ಸರಿಯಾಗಿ ಒಣಗುವುದಿಲ್ಲ, ಗಾಳಿ, ಸುಂಟರಗಾಳಿ, ಬೀಸುವುದರಿಂದ ಆವಿಗೆಯಲ್ಲಿನ ಶಾಖ ಸಮವಾಗಿ ತಟ್ಟದೆ ಅರೆಬೆಂದರೆ ಮಡಕೆಗಳು ನಷ್ಟವಾಗುತ್ತವೆ. ಆವಿಗೆಯ ಮುಂಭಾಗ, ಉರಿ ಹಾಕಿದ ಭಾಗದಿಂದ ಗಾಳಿ ಬೀಸಿದರೆ ಸುಡಲು ಅನುಕೂಲವಾಗುತ್ತದೆ. ಆದರೆ ಆವಿಗೆಯ ಹಿಂಭಾಗದಿಂದ ಗಾಳಿ ಬೀಸಿದರೆ ಉರಿ ಸಮರ್ಪಕವಾಗಿ ಉರಿಯದೆ ಸುಡುವ ಕೆಲಸ ತಡವಾಗಿ ಮಡಕೆ ಮೊದಲಾದುವುಗಳಿಗೆ ಹಾನಿಯುಂಟಾಗುವುದುಂಟು. ಇವೆಲ್ಲಾ ಏನಿದ್ದರೂ ಪ್ರಾಕೃತಿಕ ಶಕ್ತಿಗಳಾಗಿರುವುದರಿಂದ ಅವುಗಳ ಬಗ್ಗೆ ಕುಂಬಾರರು ವೃತ್ತಿಯ ಸಲುವಾಗಿ ಎಚ್ಚರವಹಿಸಬೇಕಾಗುತ್ತದೆ. ಕುಂಬಾರರು ಕೆಲವು ತಾಂತ್ರಿಕ ಮತ್ತು ಮೂಲ ಸಮಸ್ಯೆಗಳನ್ನು ಎದುರಿಸುತ್ತಾರೆ.

ಉತ್ತಮ ಮಣ್ಣಿನ ಕೊರತೆ ಕುಂಬಾರನ ಸಾಮಾನ್ಯ ಸಮಸ್ಯೆ. ಉತ್ತಮ ಮಣ್ಣು ಲಭ್ಯವಿಲ್ಲದಿದ್ದರೆ ಉತ್ತಮ ಗುಣಮಟ್ಟದ ಹಾಗೂ ಬಾಳಿಕೆ ಬರುವ ಮಡಕೆಗಳನ್ನು ತಯಾರಿಸಲು ಸಾಧ್ಯವಿಲ್ಲ. ಕುಂಬಾರ ಮಣ್ಣು ಎಲ್ಲಾ ಕಡೆ ದೊರೆಯುವುದಿಲ್ಲ. ಒಂದು ವೇಳೆ ಮಣ್ಣು ದೊರೆತರೂ ಅಂತಹ ಸ್ಥಳಗಳಲ್ಲಿ ಮಣ್ಣು ತರಲು ಅಡ್ಡಿ ಮಾಡುವ ಜನರಿಗೇನು ಕೊರತೆ ಇಲ್ಲ. ಮಣ್ಣು ಸಾಗಿಸಲು ವಾಹನ ಅಥವಾ ಬಂಡಿಗಳಿಗೆ ಹೆಚ್ಚು ಹಣ ವ್ಯಯಿಸಬೇಕಾಗಿತ್ತದೆ.

ಕುಂಭಕಲೆಗೆ ಯೋಗ್ಯವಾದುದು ಬೇಸಿಗೆ ಕಾಲ. ಮೊಡಕವಿದ ವಾತಾವರಣವಿದ್ದರೆ ಯೋಜಿತ ಸಮಯಕ್ಕೆ ಮಡಕೆಗಳು ಒಣಗುವುದಿಲ್ಲ. ಸುಡುವುದು ಕಷ್ಟವಾಗುತ್ತದೆ. ಅಕಾಲಿಕ ಮಳೆ ಮತ್ತು ಅತಿವೃಷ್ಟಿ ಕುಂಬಾರಿಕೆಗೆ ತೊಂದರೆ ಉಂಟುಮಾಡುತ್ತದೆ.

ಕುಂಬಾರರು ಭೂರಹಿತರಾಗಿದ್ದರೆ, ಬಯಲು ಪ್ರದೇಶದಲ್ಲಿದ್ದರೆ ಕಟ್ಟಿಗೆಯ ಸಮಸ್ಯೆ ಎದುರಾಗುತ್ತದೆ. ಈಗ ದುಬಾರಿ ಹಣ ಕೊಟ್ಟು ಕಟ್ಟಿಗೆ ಪಡೆಯಬೇಕಾಗುತ್ತದೆ. ಕಟ್ಟಿಗೆ ಶೇಖರಿಸಲು ಮತ್ತು ಆವಿಗೆಯನ್ನು ಕಟ್ಟಿಕೊಳ್ಳಲು ಜಾಗದ ಕೊರತೆ ಇರುತ್ತದೆ. ಊರ ಮಧ್ಯೆ ಕುಂಬಾರಿಕೆ ಮಾಡಿದರೆ ಹಳ್ಳಿಗರಿಂದ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದರ ಜೊತೆಗೆ ಕುಂಬಾರಿಕೆ ಕೆಲಸ ಮಾಡಲು ಆಳುಗಳ ಕೊರತೆ ಅಥವಾ ಅವರಿಗೆ ದುಬಾರಿ ಕೂಲಿ ನೀಡಬೇಕಾಗುತ್ತದೆ.

ಕಷ್ಟಪಟ್ಟು ತಯಾರಿಸಿದ ಮಡಕೆಗಳಿಗೆ ಒಂದೇ ರೀತಿಯ ಬೇಡಿಕೆ ಇರುವುದಿಲ್ಲ, ಇವುಗಳಿಗೆ ಬೆಲೆ ನಿಗದಿಪಡಿಸುವುದು ಇನ್ನೊಂದು ಸಮಸ್ಯೆ. ಹಿಂದಿನ ಕಾಲದಲ್ಲಿ ಮಡಕೆಗಳನ್ನು ಮನೆಮನೆಗೆ ಹೊತ್ತು ಮಾರಾಟ ಮಾಡುತ್ತಿದ್ದರು. ದಿನವಿಡೀ ತಿರುಗಾಡಿದರೂ ಕೆಲವೇ ಮಡಕೆಗಳು ಮಾರಾಟವಾಗುತ್ತಿದ್ದು ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ.

ಇತ್ತೀಚೆಗೆ ಮಡಕೆಗಳಿಗೆ ಬದಲಾಗಿ ಪರ್ಯಾಯ ಪಾತ್ರೆ ಪಡುಗಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ತಾಮ್ರದ, ಕಂಚಿನ, ಅಲ್ಯೂಮಿನಿಯಂ, ಸ್ಟೀಲ್ ಪಾತ್ರೆಗಳು ಉತ್ತಮ ಗುಣವನ್ನು ಹೊಂದಿದ್ದು ದೀರ್ಘ ಬಾಳಿಕೆ ಬರುವಂತಹುಗಿರುವುದರಿಂದ ಅವುಗಳ ಬೇಡಿಕೆ ಹೆಚ್ಚಾಗಿದೆ. ಅತೀ ಕಡಿಮೆ ದರದಲ್ಲಿ ಗೃಹಪಯೋಗಿ ಪ್ಲಾಸ್ಟಿಕ್ ಪಾತ್ರೆಗಳು ಲಭ್ಯವಾಗುವುದರಿಂದ ಕುಂಬಾರನ ಮಡಕೆಗಳಿಗೆ ಬೇಡಿಕೆ ಇಲ್ಲದೆ ಗ್ರಾಮೀಣ ಸಮಾಜದ ಶ್ರೀಮಂತ ಸಂಸ್ಕೃತಿ ಅಪಾಯದ ಅಂಚಿನಲ್ಲಿದೆ.

ಕಮ್ಮಾರಿಕೆ

ಕಬ್ಬಿಣದಿಂದ ವ್ಯವಸಾಯ, ಗೃಹ ನಿರ್ಮಾಣ, ಗೃಹ ಬಳಕೆ, ಯುದ್ಧಕ್ಕೆ, ಬೇಟೆಗೆ ನಿತ್ಯಜೀವನಕ್ಕೆ ಅನಿವಾರ್ಯವಾದ ವಸ್ತುಗಳನ್ನು ತಯಾರುಮಾಡುವ ಕಸುಬಿನವರೆ ಕಮ್ಮಾರರು. ನಂತರದಲ್ಲಿ ಕಸುಬು ಜಾತಿಯಾಗಿ ರೂಪುಗೊಂಡಿತು. ಇವರ ಕಸುಬು 'ಕಮ್ಮಾರಿಕೆ'. ಇವರು ವಸ್ತುಗಳನ್ನು ಸಿದ್ದಪಡಿಸುವ ಜಾಗ ಕುಲಮೆ ಮನೆ. ಕಮ್ಮಾರರು ಹಳ್ಳಿಯ ಹನ್ನೆರಡು ಆಯಾಗಾರರಲ್ಲಿ ಒಬ್ಬರು. ಮಾನವನ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಬಲ್ಲ ವ್ಯವಸಾಯದ ದೃಷ್ಟಿಯಿಂದ ಈ ಕಮ್ಮಾರ ವೃತ್ತಿ ಮಿಕ್ಕ ವೃತ್ತಿಗಳಲ್ಲೆಲ್ಲಾ ಅತ್ಯಂತ ಉಪಯುಕ್ತವಾದದು. ಆದ್ದರಿಂದ ಆಯ ಕೊಡುವ ಒಕ್ಕಲಿಗನ ದೃಷ್ಟಿಯಲ್ಲಿ ಕಮ್ಮಾರ ಜರೂರು ಆಯಗಾರ. ಕರ್ಮ ಎಂಬ ಶಬ್ದದಿಂದಲೇ 'ಕಮ್ಮಾರ' ಎಂಬ ಶಬ್ದದ ಉತ್ಪತ್ತಿಯಾದಂತಿದೆ. ಕಮ್ಮಾರ ಎಂಬುದು ಕರ್ಮಕಾರ ಎಂಬ ಶಬ್ದದ ತದ್ಭವ. ಕರ್ಮ+ಕಾರ=ಕಮ್ಮಾರ ಎಂದು ಈ ಶಬ್ದದ ನಿಷ್ಪತ್ತಿ[೧೧] ಇಂದು ಕಮ್ಮಾರ ಹಾಗೂ ಕಂಬಾರ ಎಂಬ ಎರಡು ಶಬ್ದಗಳು ಬಳಕೆಯಲ್ಲಿವೆ. ಕಮ್ಮಾರರಿಗೆ ಕೆಲವು ಕಡೆ ಲೋಹಾರ, ಕರ್ಮಹರ, ಕಂಮಾರ, ಕಂಬಾರ ಎಂಬ ಹೆಸರುಗಳು ಪ್ರಾಚೀನ ಕನ್ನಡ ಶಾಸನ ಕಾವ್ಯ, ವ್ಯಾಕರಣಗಳಲ್ಲಿ ಕಾಣಿಸಿಕೊಂಡಿವೆ.

ಹಿಂದಿನ ಕಾಲದಲ್ಲಿ ಕಮ್ಮಾರರು ಗ್ರಾಮಗಳಲ್ಲಿ ತಮ್ಮ ವೃತ್ತಿಯನ್ನು ನಿರ್ವಹಿಸುತ್ತಿದ್ದರು. ಆಗ ಒಕ್ಕಲುತನದ ಆಯದ ಮೇಲೆ ಜೀವನ ಸಾಗಿಸುತ್ತಿದ್ದರು. ಕಾಲ ಬದಲಾದಂತೆ, ಜೀವನಾವಶ್ಯಕತೆಗಳು

ಹೆಚ್ಚಾದಂತೆ ಹಣ ಪಡೆದುಕೊಂಡು ಕೆಲಸ ಮಾಡತೊಡಗಿದ್ದಾರೆ. ಹಣಕಾಸಿನ ಕೊರತೆಯಿಂದಾಗಿ ಜೀವನವನ್ನು ನಿರ್ವಹಿಸುವುದು ಕಷ್ಟವೆನಿಸಿದಾಗ ಕೆಲವರು ಹಳ್ಳಿಗಳನ್ನು ತೊರೆದು ಪಟ್ಟಣಗಳಲ್ಲಿ ಕಸುಬನ್ನು ಮುಂದುವರಿಸಿದ್ದಾರೆ.

ಕಮ್ಮಾರರು ಮೂಲತಃ ವಿಶ್ವಕರ್ಮಿಗಳೆಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಕಮ್ಮಾರರು ಅಗ್ನಿ ಸೂರ್ಯನ ಪ್ರತೀಕವೆಂದು ಹೇಳುವ ಕಾರ್ತೀಕೆಯನ ಆರಾಧಕರು. ಇವರು ಪಾಂಚಾಲರ ಒಂದು ಗುಂಪಿಗೆ ಸೇರಿದವರು.

೧೨ನೇ ಶತಮಾನದಲ್ಲಿ ವಚನಕಾರರು ಕಮ್ಮಾರಿಕೆಯ ಬಗ್ಗೆ ಅನೇಕ ಕಡೆ ಪ್ರಸ್ತಾಪ ಮಾಡಿದ್ದಾರೆ. ಕಾಸಿಕಮ್ಮಾರನಾದ ಬೇಸಿ ಮಡಿವಾಳನಾದ[೬೨] ಎಂಬ ಉಲ್ಲೇಖವಿದೆ. ಸರ್ವಜ್ಞ, ದಾಸರು ಮುಂತಾದ ಅನೇಕ ಕವಿಗಳ ಸಾಹಿತ್ಯ ಕೃತಿಗಳಲ್ಲಿ ಕಮ್ಮಾರಿಕೆ ವೃತ್ತಿಯ ಬಗ್ಗೆ ಹೇರಳ ಮಾಹಿತಿ ಸಿಗುತ್ತವೆ. ಕಮ್ಮಾರವೃತ್ತಿ ಕಬ್ಬಿಣ ಯುಗದಷ್ಟು ಪ್ರಾಚೀನವಾದದ್ದು. ಬಳ್ಳಾರಿ ಜಿಲ್ಲೆಯ ಸಂಡೂರು, ಕೊಮಾರನಹಳ್ಳಿ ಚಿಲಕನಹಟ್ಟಿ, ವ್ಯಾಸನಕೆರೆ, ಕನುಮೆಳ್ಳಿ, ಕಮಲಾಪುರ, ಹ್ಯಾರಡ, ರಾಮಸಾಗರ ಮೊದಲಾದೆಡೆಗಳಲ್ಲಿ ಕಮ್ಮಾರರ ನೆಲೆಗಳಿವೆ.[೬೩] ಈ ನೆಲೆಗಳನ್ನು ಮುದ್ದೆ ಕಮ್ಮಾರರ ನೆಲೆಗಳೆಂದು ಪರಿಗಣಿಸಲಾಗಿದೆ.

ಕಮ್ಮಾರರು ಬಳಸುವ ಸಾಧನ ಮತ್ತು ಸಲಕರಣೆಗಳು

ಪ್ರಾಚೀನ ಕಾಲದಲ್ಲಿ ಮುದ್ದೆ ಕಂಬಾರರು ಕಬ್ಬಿಣದ ಪುಡಿ ಉಪಯೋಗಿಸಿ ಕಬ್ಬಿಣ ತಯಾರಿಸುತ್ತಿದ್ದರು. ಆದರೆ ಇಂದು ಕಮ್ಮಾರರು ಕಬ್ಬಿಣದ ಕಾರ್ಖಾನೆಯಿಂದ ಸಿದ್ಧವಾದ ಕಬ್ಬಿಣವನ್ನು ಕಚ್ಚಾ ಸಾಮಗ್ರಿಯನ್ನಾಗಿ ಬಳಸಿ ಜನರ ಅಗತ್ಯಕ್ಕನುಸಾರ ವಸ್ತುಗಳನ್ನು ತಯಾರಿಸುತ್ತಾರೆ. ಕಬ್ಬಿಣದ ಬೆಸುಗೆಗೆ ಬಿಳಿಗಾರ, ಬೆಂಕಿಗಾಗಿ ಇದ್ದಿಲು ಹಾಗೂ ಹದಕ್ಕೆ ನೀರನ್ನು ಬಳಸಲಾಗುತ್ತದೆ. ಕಮ್ಮಾರ ಕಬ್ಬಿಣದ ಸಾಮಗ್ರಿಗಳನ್ನು ತಯಾರಿಸಲು ಬೇಕಾದ ಉಪಕರಣಗಳನ್ನು ಈ ಮುಂದೆ ವಿಶ್ಲೇಷಿಸಲಾಗಿದೆ.

ಅಡಿಗಲ್ಲು: ಕಬ್ಬಿಣವನ್ನು ಕಾಸಿದ ನಂತರ ಅದನ್ನು ಬೇಕಾದ ಆಕಾರಕ್ಕೆ ತರಲು ಅಡಿಗಲ್ಲು ಮತ್ತು ಸುತ್ತಿಗೆ ಅತಿ ಅವಶ್ಯಕ. ಅಡಿಗಲ್ಲಿನಲ್ಲಿ ಎರಡು ಬಗೆ. ಚಿಕ್ಕ ವಸ್ತುಗಳ ತಯಾರಿಕೆಗಾಗಿ ಚಿಕ್ಕ ಅಡಿಗಲ್ಲು. ಅದನ್ನು ಮರದ ತುಂಡಿನ ಮೇಲೆ ಕೂರಿಸಿರುತ್ತಾರೆ. ಈ ಅಡಿಗಲ್ಲನ್ನು ಕತ್ತಿ, ಕುಳ, ಉಳಿ ಮೊದಲಾದ ಚಿಕ್ಕ ಸಾಧನಗಳನ್ನು ತಯಾರಿಸಲು ಬಳಸಲಾಗುವುದು. ದೊಡ್ಡ ಅಡಿಗಲ್ಲಿನ ಕಬ್ಬಿಣದ ತುಂಡುನ್ನು ನೆಲದ ಮೇಲೆ ಹಾಕಿರುತ್ತಾರೆ. ಈ ತುಂಡಿನ ಅಗಲ ಸುಮಾರು ಒಂದು ಅಡಿ ಇದ್ದು ೯ ಇಂಚು ದಪ್ಪವಿರುತ್ತದೆ. ಗಾಡಿಯ ಹಳಿಗೆ ಬೆಸುಗೆ ಹಾಕಲು, ಪಿಕಾಸಿ, ಹಾರೆ ಮೊದಲಾದುವನ್ನು ತಯಾರಿಸುವಾಗ ಅದರ ಮೇಲಿಟ್ಟು ಸುತ್ತಿಗೆಯಿಂದ ಬಡಿಯುತ್ತಾರೆ.

ಘನ: ದೊಡ್ಡ ಸುತ್ತಿಗೆಯನ್ನು ಘನ ಎನ್ನತ್ತಾರೆ. ಸಾಮಾನ್ಯವಾಗಿ ದೊಡ್ಡ ಗಾತ್ರದ ಕಬ್ಬಿಣವನ್ನು ಬಡಿಯಲು ಇದನ್ನು ಬಳಸುತ್ತಾರೆ.

ಇಕ್ಕಳ: ಕಾದ ಕಬ್ಬಿಣವನ್ನು ಹಿಡಿಯಲು ಮತ್ತು ಒಲೆಯಲ್ಲಿ ಕಬ್ಬಿಣ ಮೃದುವಾಗುವ ಮಟ್ಟಕ್ಕೆ ಕಾದಿದೆಯೆ ಎಂಬುದನ್ನು ಪರೀಕ್ಷಿಸಲು ಇಕ್ಕಳವನ್ನು ಬಳಸಲಾಗುತ್ತದೆ. ಇದರಲ್ಲಿ ಸಣ್ಣ ಮತ್ತು ದೊಡ್ಡ ಇಕ್ಕಳಗಳಿರುತ್ತವೆ.

ಒರಗಲ್ಲು: ಎರಡು ಅಡಿ ಉದ್ದವಾದ ಕಬ್ಬಿಣದ ಸಲಾಖೆಯನ್ನು ಒಂದು ಬದಿಯಲ್ಲಿ ತಟ್ಟಿ ಚಮಚದ ಬಾಯಿಯಂತೆ ಮಾಡಿರುತ್ತಾರೆ. ಈ ಸಾಧನವನ್ನು ಕಬ್ಬಿಣ ಕಾದಿರುವುದನ್ನು ಪರೀಕ್ಷಿಸಲು ಮತ್ತು ಒಲೆಯೊಳಗೆ ಇದ್ದಿಲು ನೂಕಲು ಬಳಸುತ್ತಾರೆ.

ಚಾಣ: ಇದರಲ್ಲಿ ಸಪೂರ ಹಾಗೂ ಅಗಲ ಬಾಯಿಯ ಚಾಣವೆಂದು ಎರಡು ಬಗೆ. ಸಪೂರ ಬಾಯಿಯ ಚಾಣವನ್ನು ಕಬ್ಬಿಣಕ್ಕೆ ರಂಧ್ರ ಮಾಡಲು ಬಳಸಿದರೆ, ಅಗಲ ಬಾಯಿಯ ಚಾಣವನ್ನು ಕಬ್ಬಿಣ ಕತ್ತರಿಸಲು ಬಳಸುತ್ತಾರೆ.

ಕಾನೂಸ್: ಕಬ್ಬಿಣಕ್ಕೆ ಹದಕೊಟ್ಟ ನಂತರ ಅದು ಸರಿಯಾಗಿ ಹದ ಹಿಡಿದಿದಿಯೋ ಎಂಬುದನ್ನು ಕಾನೂಸನಿಂದ ಉಜ್ಜಿನೋಡಿ ನಿರ್ಧರಿಸುತ್ತಾರೆ.

ತಿದಿ: ಕಮ್ಮಾರರು ಬಳಸುವ ಉಪಕರಣಗಳಲ್ಲಿ ತಿದಿ ಮುಖ್ಯವಾದುದು. ಅದನ್ನು ಎಮ್ಮೆ ಇಲ್ಲವೇ ದನದ ಚರ್ಮದಿಂದ ತಯಾರಿಸುತ್ತಾರೆ. ಚರ್ಮದ ನೆರಿಗೆ ಮಾಡಿಕೊಂಡು ಅದರ ಕೆಳಭಾಗವನ್ನು ಒಂದು ಮರದ ಹಲಗೆಗೂ ಮತ್ತು ಮೇಲುಭಾಗವನ್ನು ಇನ್ನೊಂದು ಹಲಗೆಗೂ ಜೋಡಿಸುತ್ತಾರೆ. ಮೇಲು ಭಾಗದ ಹಲಗೆಯಲ್ಲಿ ಸಣ್ಣ ರಂಧ್ರವಿದ್ದು ಆ ಭಾಗದಲ್ಲಿ ತಗಡಿನ ಕೊಳವೆಯನ್ನು ಜೋಡಿಸುತ್ತಾರೆ. ಆ ಕೊಳವೆಯ ಮತ್ತೊಂದು ತುದಿಯನ್ನು ಒಲೆ ಭಾಗದಲ್ಲಿ ಜೋಡಿಸಿರುತ್ತಾರೆ. ಕಮ್ಮಾರನಿಗೆ ಸಹಾಯ ಮಾಡುವವನು ತಿದಿ ಒತ್ತುವವನಾಗಿರುತ್ತಾನೆ. ಕಬ್ಬಿಣ ಕಾಯುವವರೆಗೂ ಅವನು ತಿದಿ ಒತ್ತಿ ಆ ನಂತರ ಕಬ್ಬಿಣವನ್ನು ದೊಡ್ಡ ಸುತ್ತಿಗೆಯಿಂದ ಬಡಿಯುವ ಕೆಲಸ ಮಾಡುತ್ತಾನೆ.

ಕಮ್ಮಾರರು ಇಂದು ಚರ್ಮದ ತಿದಿಗೆ ಬದಲಾಗಿ ಬ್ಲೋವರ್ ಬಳಸಿಕೊಳ್ಳುತ್ತಿರುವರು. ಇದು ಸಿದ್ಧವಾಗಿ ಮಾರುಕಟ್ಟೆಯಲ್ಲಿ ದೊರೆಯುವುದರಿಂದ ತಿದಿಯನ್ನು ತಯಾರಿಸುವ ಶ್ರಮ ಇಲ್ಲವಾಗಿದೆ. ಅಲ್ಲದೆ ತಿದಿಗಿಂತ ಹೆಚ್ಚು ಬಾಳಿಕೆ ಬರುತ್ತದೆ ಮತ್ತು ಮಿತವ್ಯಯ ಕೂಡ ಆಗುತ್ತದೆ ಎಂದು ಕಮಲಾಪುರದ ಹೇಮಣ್ಣ ಆಚಾರ್ ಹೇಳುತ್ತಾರೆ.

ಕುಲುಮೆ (ಒಲೆ): ತಿದಿಗೆ ಜೋಡಿಸಿರುವ ಕೊಳವೆಯ ಮುಂಭಾಗದ ನೆಲದಲ್ಲಿ ಸಲತಗ್ಗು ಮಾಡಿರುತ್ತಾರೆ. ಅದನ್ನು ಮಣ್ಣಿನಿಂದ ಮೆತ್ತಿರುತ್ತಾರೆ. ಇಲ್ಲವೆ ಇಟ್ಟಿಗೆಯಿಂದ ಕಿರಿದಾದ ಗೋಡೆ ಕಟ್ಟಿರುತ್ತಾರೆ. ಇದರಿಂದ ಕುಲುಮೆಯಲ್ಲಿ ಹಾಕಿರುವ ಇದ್ದಿಲು ಅತ್ತಿತ್ತ ಸರಿಯದಂತಿರುತ್ತದೆ.

ಇವರು ಉಪಯೋಗಿಸುವ ಉಪಕರಣಗಳಲ್ಲಿ ತಿದಿಯೊಂದನ್ನು ಬಿಟ್ಟರೆ ಉಳಿದೆಲ್ಲಾ ಉಪಕರಣಗಳನ್ನು ತಾವೇ ಸಿದ್ದಪಡಿಸಿಕೊಳ್ಳಬಲ್ಲರು.

ಕಬ್ಬಿಣಕ್ಕೆ ಹದ ಕೊಡುವ ವಿಧಾನ: ಕಮ್ಮಾರನ ಕೆಲಸದ ಶ್ರೇಷ್ಠತೆಯನ್ನು ಅವನು ಕಬ್ಬಿಣಕ್ಕೆ ಹದ ಕೊಡುವುದರ ಮೇಲೆ ನಿರ್ಧಾರವಾಗುತ್ತದೆ. ಪಿಕಾಸಿ, ಕೊಡಲಿ, ಕತ್ತಿ, ಮೊದಲಾದ ಆಯುಧಗಳನ್ನು ಹರಿತ ಮಾಡುವಾಗ ಹದಕೊಡಲಾಗುತ್ತದೆ.

ಹರಿತ ಮಾಡುವ ಆಯುಧದ ಬಾಯಿಯನ್ನು ಚೆನ್ನಾಗಿ ಕಾಸಿ, ಅಡಿಗಲ್ಲಿನ ಮೇಲಿಟ್ಟು ತಟ್ಟಿ ತೆಳ್ಳಗೆ ಮಾಡಲಾಗುತ್ತದೆ. ಅದರ ನಂತರ ಮತ್ತೊಮ್ಮೆ ಕಾಸಿ ಅದರ ಬಾಯಿಯನ್ನು ನೀರಿನ ತೊಟ್ಟಿಯಲ್ಲಿ ಕ್ಷಣಕಾಲ ಮುಳುಗಿಸಿ ಹೊರ ತೆಗೆದಿಡಲಾಗುವುದು. ನೀರಿನಿಂದ ಹೊರತೆಗೆದ ತಕ್ಷಣ ಬೆಳ್ಳಗಿದ್ದ ಆಯುಧದ ಬಾಯಿಯು ಕ್ಷಣಕಾಲದಲ್ಲಿ ಕಪ್ಪು ಮಿಶ್ರಿತ ನೀಲಿ ಬಣ್ಣಕ್ಕೆ ತಿರುಗುತ್ತದೆ. ಆಗ ಅದು ಸರಿಯಾದ ಹದ ಪಡೆದಿದೆಯೆಂದು ತಿಳಿಯುವುದು ಹದ ಹೆಚ್ಚಾದರೆ ಸಾಮಗ್ರಿ ತುಂಡಾಗುತ್ತದೆ.

ಕಮ್ಮಾರರು ಸಿದ್ಧಪಡಿಸುವ ವಸ್ತುಗಳು

ಹಿಂದೆ ಯಂತ್ರಗಳ ಪ್ರಭಾವ ಕಡಿಮೆ ಇದ್ದ ಕಾರಣದಿಂದ ಕಮ್ಮಾರನ ಸಹಾಯವಿಲ್ಲದೆ ವ್ಯವಸಾಯ ಸಾಗುತ್ತಿರಲಿಲ್ಲ. ಮನೆ ನಿರ್ಮಾಣವಾಗುತ್ತಿರಲಿಲ್ಲ. ಅಡುಗೆ ಮಾಡುವುದು ಸಾಧ್ಯವಿರಲಿಲ್ಲ. ಈ ಎಲ್ಲಾ ಕೆಲಸಗಳಿಗೂ ಕಮ್ಮಾರಿಕೆ ಅನಿವಾರ್ಯ ಕಸುಬಾಗಿತ್ತು. ಕಮ್ಮಾರರು ಹಳ್ಳಿ ಹಾಗೂ ನಗರವಾಸಿಗಳ ಅಗತ್ಯಕ್ಕನುಸಾರ ಕಬ್ಬಿಣದ ವಸ್ತುಗಳನ್ನು ತಯಾರಿಸುತ್ತಾರೆ.

ಕಮ್ಮಾರನು ತಯಾರಿಸುವ ವಸ್ತುಗಳಲ್ಲಿ ಪ್ರಮುಖವಾಗಿ ಮೂರು ಬಗೆ. ಕೃಷಿ ಬಳಕೆಯ ವಸ್ತುಗಳು, ಗೃಹ ಬಳಕೆಯ, ಗೃಹ ನಿರ್ಮಾಣದ ವಸ್ತುಗಳು ಹಾಗೂ ಹೊರಾಂಗಣ ವಸ್ತುಗಳು.

ಕೃಷಿ ಬಳಕೆಯ ವಸ್ತುಗಳು: ಕಮ್ಮಾರರು ಕೃಷಿಕರಿಗೆ ಉಪಯುಕ್ತವಾದ ಕಬ್ಬಿಣದ ಸಾಧನಗಳನ್ನು ಸಿದ್ಧಪಡಿಸಿಕೊಡುವರು. ಒಕ್ಕಲುತನಕ್ಕೆ ಬೇಕಾಗುವ ಬಂಡಿಯ ಅಚ್ಚು, ಕೀಲು, ಗಾಲಿಗೆ ಹಳಿ, ಗುಂಬದ ಕಟ್ಟುಗಳು, ಸಲಿಕೆ, ಗುದ್ದಲಿ, ಹಾರೆ, ಪಿಕಾಸಿ, ಕುಡಗೋಲು, ಕುರ್ಜಿಗಿ, ಚಮ್ಮಟಿಗೆ, ಮೇಕು, ಗಡಾರಿ, ಕೊಡಲಿ, ಸುತ್ತಿಗೆ, ಚಾಣ, ಬಾಚಿ, ಕಬ್ಬಿಣದ ನೇಗಿಲು, ಕುಳ, ಕುಡ, ಪಿಳೆಗುಡ, ಹೆಗ್ಗುಡ, ಜಿಗಳಿ, ಬಾಯಿಗುದ್ದಲಿ, ಬಳೆ, ಎತ್ತಿನ ಕಾಲಿಗೆ ಬೇಕಾಗುವ ನಾಲು, ಮೇವು ಕತ್ತರಿಸುವ ಕತ್ತರಿ, ಕೊಪ್ಪರಿಗೆ, ಬಕೆಟ್, ಇತ್ಯಾದಿ ವ್ಯವಸಾಯ ಸಂಬಂಧಿ ಸಾಧನ ಸಲಕರಣೆಗಳನ್ನು ತಯಾರಿಸಿ ಕೊಡುವರು. ಒಕ್ಕಲುತನಕ್ಕೆ ಬೇಕಾಗುವ ಸಲಕರಣೆಗಳಲ್ಲದೆ ಬಡಗಿತನಕ್ಕೆ ಬೇಕಾಗುವ ಬಾಚಿ, ಉಳಿ, ಗುಡುಕಿ ಉಳಿ, ನೀಲವರ ಅಲಗುಗಳನ್ನು, ಅಕ್ಕಸಾಲಿಗಳಿಗೆ ಬೇಕಾಗುವ ಇಕ್ಕಳ, ಸುತ್ತಿಗೆ, ಚಿಮ್ಮುಟ, ಕ್ಷೌರಿಕನಿಗೆ ಬೇಕಾಗುವ ಕತ್ತಿ, ಕತ್ತರಿಗಳನ್ನು ಸಮಗಾರನಿಗೆ ಬೇಕಾಗುವ ರ್‍ಯಾಪಿ, ಡಬ್ಬಣದುಳಿ, ಅರಿಗಳನ್ನು ತಯಾರಿಸುತ್ತಾನೆ.

ಗೃಹ ಬಳಕೆಯ ಮತ್ತು ನಿರ್ಮಾಣದ ವಸ್ತುಗಳು

ಕಮ್ಮಾರ ಮನೆಬಳಕೆಗೆ ಬೇಕಾಗುವ ಚಾಕು, ಚೂರಿ, ಇಕ್ಕುಳ, ಕಬ್ಬಿಣದ ಒಲೆಗಳು, ರೊಟ್ಟಿ ಹಂಚು, ಒನಕೆ ಬಳೆ, ಮಚ್ಚು, ಈಳಗಿ ಮಣೆ, ಚಿಲಕ, ಕೀಲಿ, ಊದುಗೊಳವೆ, ಕತ್ತರಿ ಕುಟ್ಟಣಿಗೆ ಕಾಯಿ ಸುಲಿವ ಊಸಿ, ಕಬ್ಬಿಣದ ಉಯ್ಯಾಲೆ, ಬಾಗಿಲ ಚಿಲಕ, ಪಟ್ಟಿ, ಕಂಬದ ಬಳೆಗಳು, ಸೇರು, ಕೊಳಗ, ಗ್ರೀಲು, ಕಬ್ಬಿಣದ ಬಾಗಿಲು ಇತ್ಯಾದಿಗಳನ್ನು ಸಿದ್ಧಪಡಿಸುತ್ತಾನೆ.

ಹೊರಾಂಗಣ ವಸ್ತುಗಳು: ಕಮ್ಮಾರಿಕೆಯು ವ್ಯವಸಾಯದ ದೃಷ್ಟಿಯಿಂದ ಎಷ್ಟು ಮಹತ್ವದ ವೃತ್ತಿಯೋ ಯುದ್ಧದ ದೃಷ್ಟಿಯಿಂದಲೂ ಅಷ್ಟೇ ಮಹತ್ವದ ವೃತ್ತಿಯಾಗಿದೆ. ರಾಜಮಹಾರಾಜರು ಯುದ್ಧದ ಸಲಕರಣೆಗಾಗಿ ಕಮ್ಮಾರನನ್ನೆ ಸಂಪೂರ್ಣವಾಗಿ ಅವಲಂಬಿಸಿರಬೇಕಾಗುತ್ತಿತ್ತು. ಕಮ್ಮ ಅರಿಲ್ಲದೆ ಖಡ್ಗಾದಿ ಶಸ್ತ್ರಂಗಳಾಗದು[೬೪] ಎಂಬ ನಯಸೇನನ ಮಾತನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಯುದ್ಧದಲ್ಲಿ ಹೋರಾಡಲು ಬೇಕಾದ ಖಡ್ಗ, ಕತ್ತಿ ಕಠಾರಿ, ಭರ್ಚಿ, ಈಟಿ, ಭಲ್ಯ, ಪರೀಘು, ಭಿಂಡಿವಾಳ, ಶಕ್ತಿ ಮೊದಲಾದ ಆಯುಧಗಳನ್ನು ಹಾಗೂ ರಕ್ಷಣೆಗೆ ಬೇಕಾಗುವ ರಾವುತರ ಎದೆಗವುಚ, ಶಿರಸ್ತ್ರಾಣಗಳನ್ನು, ಅಶ್ವಗಳಿಗೆ ತೊಡಿಸುತ್ತಿದ್ದ ಕವಚ, ಲೋಹವಕ್ಕರೆ, ಕಡಿವಾಳ, ಆನೆಕಾಲಿಗೆ ಕಟ್ಟುವ ಸರಪಣಿ, ಇವೇ ಮೊದಲಾದುವುಗಳಿಗೆ ಕಂಬಾರನನ್ನು ಅವಲಂಬಿಸಬೇಕಾಗುತ್ತಿತ್ತು. ಕಮ್ಮಾರನಂಬು ಕಮ್ಮೆ ಅರಿಗೆ[೬೫] ಎಂಬ ಗಾದೆಯು ಕಮ್ಮಾರರು ಬಾಣಗಳನ್ನು ತಯಾರಿಸುತ್ತಿದ್ದರು ಎನ್ನುವುದಕ್ಕೆ ಒಂದು ನಿದರ್ಶನ. ಕೆಲವು ಕಮ್ಮಾರರು ರಹಸ್ಯವಾಗಿ ನಾಡ ಬಂದೂಕುಗಳನ್ನು ತಯಾರಿಸುತ್ತಿದ್ದರೆಂದು ಅದು ಕಾನೂನು ಬಾಹಿರವೆಂದು ತಿಳಿದ ನಂತರ ನಿಲ್ಲಿಸಿದ್ದಾರೆಂದು ವಕ್ತೃ ಶಿವಣ್ಣ ಆಚಾರಿ ತಿಳಿಸಿದ್ದಾರೆ.

ಕಮ್ಮಾರರು ಧಾನ್ಯಗಳನ್ನು ಅಳೆಯಲು ಬೇಕಾದ ಸೇರು, ಪಡಿ, ಪಾವು, ಕಾಲುಪಾವು, ಚಟಾಕು, ಗಿದ್ದ, ತಕ್ಕಡಿ ಸಿದ್ಧಪಡಿಸುತ್ತಾರೆ, ಕೀಲಿಕೈ, ವಿವಿಧ ತೂಕದ ಬಟ್ಟುಗಳನ್ನು ಸಿದ್ಧಪಡಿಸುತ್ತಾರೆ. ಒಡ್ಡರಿಗೆ ಬೇಕಾದ ಮಟ್ಟಗೋಲು, ತ್ಯಾಪಿ, ಸುತ್ತಿಗೆ, ಗುಂಡುದಾರ, ಶಿಲ್ಪಿಗಳಿಗೆ ಸುತ್ತಿಗೆ ಉಳಿ, ಚಾಣ, ಹರಿ, ಕರಗಸ, ಹೀಗೆ ಎಲ್ಲಾ ವರ್ಗದವರಿಗೆ ಕಮ್ಮಾರಿಕೆ ಉಪಯುಕ್ತ ಕಸುಬು.

ಕಮ್ಮಾರನ ಕುಲಮೆಯಲ್ಲಿ ಸಿದ್ಧವಾಗುವ ಕಬ್ಬಿಣದ ಸಾಧನಗಳಿಗೆಲ್ಲಾ ಕಮ್ಮಾರನ ಅನುಭವ ಜ್ಞಾನವೇ ಆಧಾರ. ತಾನು ಪಡೆದ ಅನುಭವದ ಅನುಸಾರ ಜನರ ಬೇಡಿಕೆಗೆ ತಕ್ಕಂತಹ ವಸ್ತುಗಳನ್ನು ಅವನು ತಯಾರಿಸುತ್ತಾನೆ. ಕೆಲವು ವೇಳೆ ಅಂಗಡಿಯವರು, ವಿವಿಧ ವೃತ್ತಿಯವರು ಕೊಟ್ಟ ಮಾದರಿಯಂತೆ ಕಬ್ಬಿಣದ ವಿವಿಧ ಬಗೆಯ ಸಾಧನಗಳನ್ನು ಸಿದ್ಧಪಡಿಸುತ್ತಾರೆ.

ಕಮ್ಮಾರರು ಕಬ್ಬಿಣದ ಉಪಕರಣಗಳು ಮುರಿದಾಗ ಬೆಸುಗೆ ಹಾಕಿಕೊಡುತ್ತಾರೆ. ವ್ಯವಸಾಯಕ್ಕೆ ಬಳಸುವ ಸಾಧನಗಳು ಬಳಸಿ ಹರಿತವನ್ನು ಕಳೆದುಕೊಂಡು ಮುಕ್ಕಾದಾಗ, ಅಂಥವನ್ನು ಮತ್ತೆ ಚೆನ್ನಾಗಿ ಕಾಸಿ ಮುಂಭಾಗವನ್ನು ತಟ್ಟಿ, ತೆಳ್ಳಗೆ ಮಾಡಿ ಅದನ್ನು ಉಜ್ಜಿ ಹರಿತಗೊಳಿಸುತ್ತಾರೆ.

ಮೂಲ ಕಮ್ಮಾರರಲ್ಲದೆ ಬೇರೆ ರಾಜ್ಯಗಳಿಂದ ಬಂದ ಬಯಲು ಕಂಬಾರರನ್ನು ಬಳ್ಳಾರಿ ಜಿಲ್ಲೆಯಲ್ಲಿ ಕಾಣಬಹುದು. ಇವರು ಒಂದಡೆ ನೆಲಸದೆ ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತ ತಮ್ಮ ವೃತ್ತಿಯನ್ನು ಮಾಡುತ್ತಾರೆ.

ಈಗೀಗ ಮೂಲ ಕಮ್ಮಾರ ಜನಾಂಗದವರಲ್ಲದೆ ಲಿಂಗಾಯತರು, ಮುಸಲ್ಮಾನರು, ಮರಾಠರು ಹಾಗೂ ಇತರೆ ಜನಾಂಗದವರು ಕಮ್ಮಾರಿಕೆ ವೃತ್ತಿಯಲ್ಲಿ ತೊಡಗಿದ್ದಾರೆ.

ಕಮ್ಮಾರರಿಗೆ ವ್ಯವಸಾಯದ ದಿನಗಳಲ್ಲಿ ಉಪಕರಣಗಳನ್ನು ತಯಾರಿಸುವ, ದುರಸ್ತಿಗೊಳಿಸುವ, ಹರಿತಗೊಳಿಸುವ ಕೆಲಸಗಳು ಹೆಚ್ಚಾಗಿ ಕಂಡುಬರುತ್ತವೆ. ಉಳಿದಂತೆ ಕೆಲಸ ಕಡಿಮೆ ಇರುತ್ತದೆ.

ಕಮ್ಮಾರಿಕೆ ವೃತ್ತಿಯಲ್ಲಿ ಎದುರಾಗುವ ಅಡ್ಡಿ ಆತಂಕಗಳು

ಹವಾಮಾನದ ಏರಿಳಿತಗಳಿಂದ ಯಾವ ಪ್ರತಿಕೂಲಗಳಿಲ್ಲವಾದರೂ ಗಾಳಿ ಕಾಲದಲ್ಲಿ ವಿಶೇಷವಾಗಿ ಆಷಾಢದಲ್ಲಿ ಅಗ್ನಿ ಅನಾಹುತಗಳಾಗುವ ಸಾಧ್ಯತೆಗಳು ಹೆಚ್ಚು. ಅಂತೆಯೆ ಮಳೆಗಾಲ, ಗಾಳಿ ಕಾಲದಲ್ಲಿ ಬೇಗ ಕಬ್ಬಿಣ ಕಾಯುವುದಿಲ್ಲವಾದ್ದರಿಂದ ಹೆಚ್ಚಿನ ಇದ್ದಿಲು, ಹೊಟ್ಟು ಬೇಕಾಗುತ್ತದೆ. ಅಲ್ಲದೆ ಮಳೆಗಾಲ, ಚಳಿಗಾಲದಲ್ಲಿ ಕಾದ ಕಬ್ಬಿಣ ತ್ವರಿತವಾಗಿ ತನ್ನ ಶಾಖವನ್ನು ಕಳೆದುಕೊಳ್ಳುವುದರಿಂದ ಪದೇ ಪದೇ ಕಬ್ಬಿಣವನ್ನು ಕಾಯಿಸಬೇಕಾಗುತ್ತದೆ. ಕಮ್ಮಾರರು ಇದ್ದಿಲು, ಹೊಟ್ಟಿನ ಕೊರತೆ ಎದುರಿಸುತ್ತಾರೆ.

ಕಮ್ಮಾರಿಕೆ ದೃಢ ಕಾಯದವರು ಮಾಡುವ ಕೆಲಸವಾಗಿರುವುದರಿಂದ ಹೆಂಗಸರು, ಮಕ್ಕಳು ಈ ವೃತ್ತಿಯನ್ನು ಮಾಡುವುದಿಲ್ಲ. ವೃತ್ತಿಯಲ್ಲಿ ಆಕಸ್ಮಿಕ ಹಾಗೂ ಅವಗಡಗಳ ಸಾಧ್ಯತೆ ಹೆಚ್ಚು. ದೊಡ್ಡ ಸುತ್ತಿಗೆಯಿಂದ ಬಡಿಯುವಾಗ ಕಾದ ಕಬ್ಬಿಣದ ಮೇಲೆ ಜಾರು ಹೊಡೆತಗಳು ಬೀಳುವ ಸಾಧ್ಯತೆಗಳಿರುವುದರಿಂದ ಕೈಕಾಲುಗಳಿಗೆ ಪೆಟ್ಟು ಬೀಳುವುದುಂಟು. ಅಲ್ಲದೆ ಕಬ್ಬಿಣವನ್ನು ಹದವಾಗಿ ಕಾಯಿಸದೆ ಇದ್ದಾಗ, ಹೆಚ್ಚು ನೀರುಣಿಸಿದಾಗ ತಯಾರಿಸುತ್ತಿರುವ ಉಪಕರಣಗಳು ತುಂಡಾಗಿ ಕಾಲಿಗೋ, ಕೈಗೋ, ಹಣೆಗೋ, ಕಣ್ಣಿಗೋ, ತಲೆಗೋ ಸಿಡಿದು ಸಣ್ಣ ಪುಟ್ಟ ಅಥವಾ ತೀವ್ರ ತರದ ಗಾಯಗಳಾಗುವುದುಂಟು. ಕೆಲವರು ಜೀವಾಪಾಯಗಳನ್ನು ತಂದುಕೊಂಡಿದ್ದುದು ವಕ್ತೃಗಳಿಂದ ತಿಳಿದುಬರುವ ಸಂಗತಿ.

ಪ್ರಸ್ತುತ ದಿನಗಳಲ್ಲಿ ಕಮ್ಮಾರನ ಸಹಾಯಕ್ಕಾಗಿ ಜನ ಸಿಗುವುದು ಕಡಿಮೆ. ಏಕೆಂದರೆ ಇದು ಶ್ರಮದ ಕೆಲಸ, ಅಲ್ಲದೆ ಉರಿವ ಬೆಂಕಿಯ ಮುಂದಿನ ಕೆಲಸ. ಹೀಗಾಗಿ ಜನ ಈ ಕೆಲಸಕ್ಕೆ ಲಭ್ಯವಾಗುವುದಿಲ್ಲ. ಸಹಾಯಕನಿಲ್ಲದೆ ಒಬ್ಬನಿಂದ ಕೆಲಸ ಮಾಡುವುದು ಸಾಧ್ಯವಿಲ್ಲ ಎಂಬುದು ಕಮ್ಮಾರರ ಅನಿಸಿಕೆ. ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆ ತೀವ್ರವಾದುದಂದಿನಿಂದ ವಿವಿಧ ಕುಲಕಸುಬುದಾರರಿಗೆ ಸಹಾಯಕ ಕೂಲಿಗಾರರು ಸಿಗುವುದು ದುರ್ಲಭ.

ಮೇಲ್ಕಾಣಿಸಿದ ಸಮಸ್ಯೆಗಳನ್ನು ಎದುರಿಸಿಕೊಂಡು ಕೆಲಸ ಮಾಡಲು ಕಮ್ಮಾರರು ನಿರ್ಧರಿಸಿದರೂ ಯಂತ್ರಗಳ ಪ್ರಭಾವವು ಅವನನ್ನು ಮುಂದೆ ಸಾಗಲು ಬಿಡದು. ಕಮ್ಮಾರನು ಸಿದ್ಧಪಡಿಸುವ ಸಾಧನಗಳನ್ನು ಕಡಿಮೆ ಬೆಲೆಯಲ್ಲಿ ಯಂತ್ರಗಳು ತಯಾರಿಸುತ್ತವೆ. ಮಾರುಕಟ್ಟೆಯಲ್ಲಿ ಯಂತ್ರಗಳಿಂದ ಸಿದ್ಧವಾದ ವಸ್ತುಗಳಿಗಿರುವಷ್ಟು ಬೇಡಿಕೆ ಕಮ್ಮಾರನ ವಸ್ತುಗಳಿಗೆ ಇಲ್ಲವಾಗಿದೆ. ಶ್ರಮಕ್ಕೆ ತಕ್ಕ ಬೆಲೆ ಸಿಗದೆ ಇರುವುದರಿಂದ ಕಮ್ಮಾರಿಕೆಗೆ ತಿಲಾಂಜಲಿ ಇಟ್ಟು ಬೇರೆ ಬೇರೆ ಕೆಲಸಗಳನ್ನು ಹುಡುಕಿಕೊಳ್ಳುತ್ತಿರುವ ಕಮ್ಮಾರರ ಸಂಖ್ಯೆ ಹೆಚ್ಚುತ್ತದೆ. ಇದು ಹೀಗೆ ಮುಂದುವರಿದರೆ ವಿಶೇಷವಾಗಿ ಕೃಷಿಕರು ಬಹುದೊಡ್ಡ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರ ಕಮ್ಮಾರಿಕೆಯನ್ನುಳಿಸುವ ಕಡೆಗೆ ಗಮನ ಹರಿಸಬೇಕು. ಕಮ್ಮಾರರಿಗೆ ಸಾಲ ಸೌಲಭ್ಯ ಒದಗಿಸಿ ಅವರಿಗೆ ಸರಿಯಾದ ತರಬೇತಿ ಕೊಡಬೇಕು. ಅವರಿಗೆ ಅಗತ್ಯವಾದ ಯಂತ್ರ ಹಾಗೂ ಆಧುನಿಕ ಸಾಧನಗಳನ್ನು ಪೂರೈಸಬೇಕಾಗಿದೆ.

ಕಮ್ಮಾರರು ಸಿದ್ಧಪಡಿಸಿದ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಸಿಗುವಂತೆ ನೋಡಿಕೊಳ್ಳಬೇಕು. ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಿ ಅವರ ಆರೋಗ್ಯ ಕಾಪಾಡುವಲ್ಲಿ ಗಮನ ಹರಿಸಬೇಕು. ಕಮ್ಮಾರರ ಕಲ್ಯಾಣ ನಿಧಿಯನ್ನು ಸ್ಥಾಪಿಸಿ ಅದರಲ್ಲಿ ಅವರು ಏಳಿಗೆಯಾಗಲು ಮತ್ತು ಆಕಸ್ಮಿಕವಾಗಿ ಮರಣವನ್ನಪ್ಪಿದ ಮನೆ ಯಜಮಾನನ ಕುಟುಂಬಕ್ಕೆ ಸಹಾಯಕವಾಗಲು ಅವಕಾಶವಿರಬೇಕು. ಆಗ ಮಾತ್ರ ಕಮ್ಮಾರರು ತಮ್ಮ ವೃತ್ತಿಯನ್ನು ಆಸಕ್ತಿಯಿಂದ ಮುಂದುವರಿಸಲು ಸಾಧ್ಯ.

ಪತ್ತಾರಿಕೆ

ಪ್ರಾಚೀನ ಕಾಲದಲ್ಲಿ ಆಶನ, ವಸನ, ವಸತಿಗಳೇ ಮನುಷ್ಯನ ಮೂಲಭೂತ ಅವಶ್ಯಕತೆಗಳಾಗಿದ್ದವು. ಆಲೋಚನಾ ಶಕ್ತಿ ಬೆಳೆದಂತೆ ಆತನಲ್ಲಿ ಸೌಂದರ್ಯ ಪ್ರಜ್ಞೆ ಕೂಡಾ ಬೆಳೆಯುತ್ತಾ ಬಂದಿತು. ಸೌಂದರ್ಯ ಪ್ರಜ್ಞೆ ಮನಸ್ಸನ್ನು ಸೊಗಸಿನ ಕಡೆಗೆ ಜಾಗೃತಗೊಳಿಸುತ್ತದೆ. ಇದು ಭಾವನಾ ಪ್ರಪಂಚಕ್ಕೆ ಸಂಬಂಧಿಸಿದ ವಿಚಾರವಾದರೂ ಇದಕ್ಕೆ ಹಿನ್ನೆಲೆಯಾಗಿ ಒಂದು ವಸ್ತು ಅಥವಾ ವಿಷಯದ ಪ್ರಚೋದನೆ ಇದ್ದೇ ಇರುತ್ತದೆ. ಬಾಹ್ಯ ಪ್ರಚೋದನೆಯಿಂದ ಮನಸ್ಸಿನಲ್ಲಿ ಉಂಟಾಗುವ ಸುಂದರ ಪ್ರತಿಕ್ರಿಯೆ ಸೌಂದರ್ಯ ಪ್ರಜ್ಞೆಯ ಜ್ಞಾನದಲ್ಲಿ ಮನಸ್ಸು ಮತ್ತು ವಸ್ತುಗಳೆರಡೂ ಪ್ರಧಾನ ಅಂಶಗಳಾಗಿವೆ.

'ಮಾನವ ತನ್ನನ್ನು ಪ್ರೀತಿಸಿಕೊಂಡಷ್ಟು ಇನ್ನಾರನ್ನೂ ಪ್ರೀತಿಸುವುದಿಲ್ಲ' ಎಂಬ ಮಾತಿದೆ. ಪ್ರಾಚೀನ ಕಾಲದಿಂದಲೂ ಮನುಷ್ಯರು ತಮ್ಮ ದೇಹ ಸೌಂದರ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಬಗೆ ಬಗೆಯ ಅಲಂಕಾರ ವಸ್ತುಗಳನ್ನು ಸೃಷ್ಟಿಸುತ್ತಲೇ ಬಂದಿದ್ದಾರೆ. ಅಲಂಕಾರ ಸಾಧನಗಳಲ್ಲಿ ಆಭರಣಗಳು ಪ್ರಮುಖ ಸ್ಥಾನ ಪಡೆಯುತ್ತವೆ. ಆಭರಣಗಳ ಬಳಕೆ ಸುಮಾರು ೫೦೦೦ ವರ್ಷಗಳಷ್ಟು

ಹಿಂದಿನದು. ಲೋಹದ ಸಂಶೋಧನೆಯಾಗುವ ಮೊದಲು ಮಾನವರು ಅಲಂಕಾರಕ್ಕಾಗಿ ಕವಡೆ, ಚಿಪ್ಪು, ದಂತ, ಬೆಂಡು, ಗರಿ, ಬಣ್ಣದ ಕಲ್ಲು ಇತ್ಯಾದಿಗಳನ್ನೆಲ್ಲಾ ಬಳಸುತ್ತಿದ್ದರು. ಚಿನ್ನದ ಸಂಶೋಧನೆಯ ಬಳಿಕ ಚಿನ್ನದಿಂದ ಆಭರಣಗಳನ್ನು ತಯಾರಿಸಿ ಧರಿಸಿಕೊಳ್ಳುವ ಪದ್ಧತಿ ರೂಢಿಗೆ ಬಂತು.

ಬಂಗಾರ, ಬೆಳ್ಳಿಯ ಆಭರಣಗಳನ್ನು ತಯಾರಿಸುವ ಕಲೆ ಹಿಂದಿನಿಂದಲೂ ಬಂದಿದೆ. ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ತಯಾರಿಸುವ ಕುಶಲಕರ್ಮಕ್ಕೆ ಸಾಮಾನ್ಯವಾಗಿ ಅಕ್ಕಸಾಲಿಯ ಕಸುಬು ಎನ್ನುವರು. ಇದಕ್ಕೆ ಗ್ರಾಮೀಣರು ಪತ್ತಾರಿಕೆ ಎಂದು ಕರೆಯುವ ವಾಡಿಕೆ. ಆಭರಣಗಳನ್ನು ತಯಾರಿಸುವವನಿಗೆ ಅಕ್ಕಸಾಲಿ ಅಥವಾ ಕುಶಲಕರ್ಮಿ ಎನ್ನುವರು. ಈತನು ವಿಶ್ವಕರ್ಮ ವಂಶದವ. ಈ ವಂಶದಲ್ಲಿ ಕಮ್ಮಾರ, ಬಡಿಗ, ಕಂಚುಗಾರ, ಶಿಲ್ಪಿಗಳು ಬರುತ್ತಾರೆ. ಅಕ್ಕಸಾಲಿ ಬಂಗಾರದ ಒಡವೆಗಳನ್ನು ಮಾಡುವ ಸ್ಥಳಕ್ಕೆ 'ಅರ್ಕಸಾಲಿ' ಎಂದಿಟ್ಟುಕೊಳ್ಳಬಹುದು. ಅಕ್ಕಸಾಲಿಗೆ ಅರ್ಕಸಾಲಿಯೇ ಮೂಲಪದ. ಅರ್ಕ ಎಂದರೆ ಅರಗು, ಅಂದರೆ ಅರಗು ಕೂಡಿಸುವ, ಕರಗಿಸುವ ಅಥವಾ ಭಟ್ಟಿ ಇಳಿಸಿ ಆಭರಣಗಳಿಗೆ ತುಂಬುವ ಸಾಲೆಯೇ ಅರ್ಕಸಾಲೆ.[೬೬] ಇನ್ನು ಬಂಗಾರದ ಆಭರಣಗಳನ್ನು ಮಾಡುವಡೆಯನ್ನು ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ 'ಅಕ್ಷಶಾಲೆ' ಎಂದು ಪ್ರಸ್ತಾಪಿಸಿದ್ದಾನೆ. ಈ ಅಕ್ಷಸಾಲೆಗೆ 'ಇಗ' ಕನ್ನಡ ಪ್ರತ್ಯಯ ಸೇರಿ ತದ್ಭವವಾದಾಗ 'ಅಕ್ಕಸಾಲಿಗ' ಆಗುತ್ತದೆ ಎಂದು ಊಹೆಯೊಂದಿದೆ.[೬೭]

ಅಕ್ಕಸಾಲಿಗರಿಗೆ ಚಿನಿವಾರರು, ಓಜರು, ರಥಕಾರರು, ನಾಡಿಂದಮರು, ಸೋನೆಗಾರರು ಎಂಬ ಹೆಸರುಗಳಿವೆ. ಅಲ್ಲದೆ ಅರ್ಕಸಾಲಿ, ಮನ್ವಾಚಾರಿ, ಮಾನಾಚಾರಿ, ಮಾಯಾಚಾರಿ, ಆಚಾರಿ, ಪಾಂಚಾಳ, ಪತ್ತಾರ ಇತ್ಯಾದಿ ಅಡ್ಡ ಹೆಸರುಗಳು ಇವರಿಗೆ ಸಾಮಾನ್ಯವಾಗಿವೆ. ಅಕ್ಕಸಾಲಿಗರ ಉದ್ಯಮವನ್ನು ಕುರಿತು ವಿವರಗಳನ್ನು 'ಕನ್ನಡ ವಿಶ್ವಕೋಶ'ದಿಂದ ಸಂಗ್ರಹಿಸಿ ಹೀಗೆ ಹೇಳಬಹುದು. ಕಳೆದುಹೋದ ನಾಗರಿಕತೆಯನ್ನು ಗುರುತಿಸುವಾಗೆಲ್ಲ ಆ ತಲೆಮಾರುಗಳ ಅಕ್ಕಸಾಲಿಗರು ರಚಿಸಿದ ವಿನ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಪ್ರಾಚೀನ ಶಿಲ್ಪ ಹಾಗೂ ಚಿತ್ರಗಳಲ್ಲಿ ಅಕ್ಕಸಾಲಿಗರ ನಿರ್ಮಾಣ ಕೌಶಲ್ಯ ವ್ಯಕ್ತವಾಗುತ್ತದೆ. ಅನೇಕ ವೇಳೆ ಶಿಲ್ಪಗಳಲ್ಲಿ ಉಡುಪಿಗಿಂತಲೂ ಹೆಚ್ಚಾಗಿ ಧರಿಸಲಾಗಿರುವ ಆಭರಣಗಳನ್ನು ಕಾಣಬಹುದಲ್ಲದೆ ಅವುಗಳ ವಿನ್ಯಾಸವೂ ಕಾಲಕಾಲಕ್ಕೆ ಬದಲಾಗಿರುವುದು ಗೋಚರವಾಗುತ್ತದೆ.

ಕ್ರಿ.ಪೂ. ೨೫೦೦ರ ಕಾಲದಲ್ಲಿ ಸಿಂಧೂ ಕಣಿವೆಯ ನಾಗರಿಕತೆಯಲ್ಲಿ ಕಂಡುಬರುವ ಅಕ್ಕಸಾಲಿಗರು ತಯಾರಿಸುವ ಬೆಳ್ಳಿ, ಬಂಗಾರ ಹಾಗೂ ತಾಮ್ರದ ಆಭರಣಗಳು ಅವರ ಪ್ರಾಚೀನತೆಗೆ ಸಾಕ್ಷಿಯಾಗಿವೆ. ಕ್ರಿ.ಪೂ. ೧೫೦೦ ಶತಮಾನದ ಕಾಲಕ್ಕೆ ಭಾರತಕ್ಕೆ ಬಂದ ಆರ್ಯರೂ ಕೂಡ ಅಕ್ಕಸಾಲೆ ಕಲೆಯಲ್ಲಿ ನಿಷ್ಣಾತರಾಗಿದ್ದರು. ಅಲ್ಲಿಂದ ಕ್ರಿ.ಪೂ. ೩೦೦ ವರ್ಷಗಳವರೆಗೆ ಅಕ್ಕಸಾಲಿಗರ ಸ್ಪಷ್ಟ ದಾಖಲೆ ಕಂಡುಬರುವುದಿಲ್ಲ. ಕ್ರಿ.ಪೂ. ೩೦೦ ರಿಂದ ಕ್ರಿ.ಪೂ.೬೦೦ರ ಕಾಲದ ಗುಪ್ತರ

ಆಳ್ವಿಕೆಯಲ್ಲಿ ಭಾರತೀಯ ಕಲೆಯಲ್ಲಿ ಅಕ್ಕಸಾಲಿಗರು ಪ್ರದರ್ಶಿಸಿದ ಕಲಾನೈಪುಣ್ಯ ಅದ್ಭುತವಾದುದು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಕ್ಕಸಾಲಿಗರ ವೃತ್ತಿ ಹಾಗೂ ಸರಕಾರವು ಅವರ ಮೇಲೆ ವಿಧಿಸಿದ ನಿಯಂತ್ರಣದ ಬಗೆಗೆ ಹೇಳಲಾಗಿದೆ.

"ಹಿಂದೆ ರಾಜನ ಅರಮನೆಯಲ್ಲಿ ಅತ್ಯುತ್ತಮವಾದ ಕುಶಲ ಕೆಲಸಗಾರರಿದ್ದರು. ರಾಜನು ಅವರಿಗೆ ವಾಸಕ್ಕೆ ಮುಕ್ಕಟೆಯಾಗಿ ಮನೆಯನ್ನು ಕಟ್ಟಿಸಿಕೊಟ್ಟಿದ್ದನು. ಅಕ್ಕಸಾಲಿಗರನ್ನು ಅರಮನೆಯಲ್ಲಿ ಇಟ್ಟುಕೊಂಡು ಬೆಲೆಯುಳ್ಳ ವಜ್ರಗಳನ್ನು ಸಾಣೆ ಹಿಡಿಯುವ, ಕೆಲಸವನ್ನು ಇವರಿಗೆ ಮಾತ್ರ ವಹಿಸುತ್ತಿದ್ದ" ಎಂಬುದು ತಿಳಿದುಬರುತ್ತದೆ.[೬೮]

ಚಿನಿವಾರರ ಬಗೆಗೆ 'ಕನ್ನಡ ನಿಘಂಟು' ಗಳಲ್ಲಿ ಚಿನಿವಾರ, ಚಿನಿವಲ, ಚಿನಿವಾರ, ಚಿನಿವರ, ಚಿನ್ನದ ವ್ಯಾಪಾರಿ, ನಾಣ್ಯಗಳ ವಿನಿಮಯ ಮಾಡಿಕೊಡುವವನು, ಸರಾಫ್ ರತ್ನ ವ್ಯಾಪಾರಿ, ಚಿನಿವಾರ ಎಂದರೆ ಅಕ್ಕಸಾಲಿ, ಅಕ್ಕಸಾಲೆ, ಅಗಸಾಲ, ಆಗಸಾಲೆ, ಅರ್ಕಸಾಲೆ, ಅಕ್ಕಸಾಲಿಗ, ಚಿನ್ನ ಬೆಳ್ಳಿ ಮುಂತಾದವುಗಳ ಕೆಲಸ ಮಾಡುವವನು[೬೯] ಎಂದು ಅರ್ಥೈಸಲಾಗಿದೆ.

ಚಿನ್ನವನ್ನು ಆಭರಣಗಳ ತಯಾರಿಕೆಗೆ ಬಳಸುವುದೇ ಹೆಚ್ಚು, ವಸ್ತು ವಿನಿಮಯ ಪದ್ಧತಿ, ನಿಂತು ಹೋಗಿ ನಾಣ್ಯ ಚಲಾವಣೆ ಬಂದ ನಂತರ ನಾಣ್ಯ ತಯಾರಿಕೆಗಾಗಿಯೂ ಚಿನ್ನವನ್ನು ಬಳಸಲಾಯಿತು. ಆರ್ಯರ ಕಾಲದಲ್ಲಿ ನಿಷ್ಕ ಎಂಬ ಚಿನ್ನದ ನಾಣ್ಯವನ್ನು ಬಳಸುತ್ತಿದ್ದರು. ವೇದೋತ್ತರ ಕಾಲದಲ್ಲಿ ಕಾರ್ಷಾಪಣವೆಂಬ ಚಿನ್ನದ ನಾಣ್ಯವಿತ್ತು. ಈ ಕಾರ್ಷಾಪಣವೇ ಮುಂದೆ ಕಾಸು, ಹಣ, ಪರಾವು ಎಂಬ ಹೆಸರಿನಿಂದ ಬೇರೆ ಬೇರೆ ನಾಣ್ಯಗಳಾದವು.

ಚಿನ್ನ ಮತ್ತು ಬೆಳ್ಳಿಗಳು ಅವಳಿ ಮಕ್ಕಳಿದ್ದಂತೆ, ಚಿನ್ನ ಬೆಳ್ಳಿಯ ಕೆಲಸ ಈಗ ಒಂದು ಲಾಭದಾಯಕ ಉದ್ಯಮ. ಪರಂಪರಾನುಗತವಾಗಿ ಬಂದ ಈ ವಿದ್ಯೆ ಜಾನಪದ ಮೂಲಕ್ಕೆ ಹೆಚ್ಚು ಸಂಬಂಧವನ್ನು ಹೊಂದಿದೆ. ಇದು ಕುಸುರಿ ಕೆಲಸವಾದುದರಿಂದ ವಿಶೇಷ ಯಂತ್ರೋಪಕರಣಗಳನ್ನು ಬಳಸಿಕೊಳ್ಳಲು ಈ ಕಸುಬಿನಲ್ಲಿ ಸಾಧ್ಯವಾಗುವುದಿಲ್ಲ. ಚಿನ್ನದ ತಗಡು, ತಂತಿ ತಯಾರಿಸುವುದು, ಬಳೆ ಮಾಡುವುದು ಇತ್ಯಾದಿಗಳಲ್ಲಿ ಈಗ ಯಂತ್ರಗಳಿಂದ ನಡೆಯುತ್ತದಾದರೂ ಉಳಿದ ಕೆಲಸಗಳು ಕರಕೌಶಲ್ಯಗಳಿಂದಲೇ ನಡೆಯಬೇಕಾಗುತ್ತದೆ. ಚಿನ್ನ ಹೆಚ್ಚು ಬೆಲೆ ಬಾಳುವ ಲೋಹವಾದ್ದರಿಂದ ಸೂಕ್ಷ್ಮ ಕೆಲಸಗಳನ್ನು ಹೆಚ್ಚು ನಷ್ಟ ಬಾರದಂತೆ ಬಹಳ ಜಾಗ್ರತಿಯಿಂದ ನಡೆಸಬೇಕಾಗುತ್ತದೆ. ಆಭರಣಗಳು ನಮ್ಮ ಜಾನಪದ ಕಲೆಯ ವೈಶಿಷ್ಟ್ಯವನ್ನು ಸಾರುತ್ತವೆ. ಪರಂಪರಾನುಗತವಾಗಿ ಅಕ್ಕಸಾಲಿಗರು ಈ ವಿದ್ಯೆಯನ್ನು ಬೆಳೆಸಿಕೊಂಡು ಬಂದಿದ್ದಾರೆ.

ಚಿನ್ನ ಬೆಳ್ಳಿಯ ಉದ್ಯಮ ಕೇವಲ ಕೈಕಸುಬಲ್ಲ. ಅದು ಉಪಯುಕ್ತ ಕಲೆ. ಕಲೆ ಮತ್ತು ಕೈಕಸುಬುಗಳ ಕೌಶಲ್ಯದಲ್ಲಿ ಈ ಕಸುಬು ಲಾಭದಾಯಕವೂ ಆಗಿದೆ. ಆರ್ಥಿಕವಾಗಿ ಈ ವೃತ್ತಿ

ಮಧ್ಯಮ ವರ್ಗಕ್ಕೆ ಸೇರುತ್ತದೆ. ಗ್ರಾಹಕರ, ಅಕ್ಕಸಾಲಿಗರ ಮಧ್ಯದಲ್ಲಿ ದಲಾಲಿ ಮಾಡುವ ಸರಾಫರು ಮಾತ್ರ ಶ್ರೀಮಂತ ವರ್ಗಕ್ಕೆ ಸೇರುತ್ತಾರೆ. ಈ ಕಸುಬಿಗೆ ಪ್ರಾಮಾಣಿಕತೆ, ಕುಶಲತೆ ಅಷ್ಟೇ ಮಹತ್ವದ್ದಾಗಿದೆ.

ಪರಿಶುದ್ಧವಾದ ಚಿನ್ನ ಬಹಳ ಮೆದುವಾದುದರಿಂದ ಆಭರಣಗಳಿಗೆ ಮತ್ತು ನಾಣ್ಯಗಳಿಗೆ ಅಷ್ಟು ಉಪಯುಕ್ತವಲ್ಲ. ಇದರಿಂದಾಗಿ ತಾಮ್ರ ಮತ್ತು ಬೆಳ್ಳಿಯನ್ನು ಸೇರಿಸುವುದು ರೂಢಿ. ಚಿನ್ನದ ಪರಿಶುದ್ಧತೆಯನ್ನು ಇಂತಿಷ್ಟು ಕ್ಯಾರೆಟ್‌ಗಳೆಂದು ಸೂಚಿಸುವುದು ವಾಡಿಕೆ. ೨೪ ಕ್ಯಾರೆಟ್ಟಿನದು ಪರಿಶುದ್ಧವಾದ ಬಂಗಾರ. ೧೪ ಕ್ಯಾರೆಟ್ಟಿನದು ೧೪ ತೂಕ ಭಾಗ ಚಿನ್ನ ಮತ್ತು ೧೦ ತೂಕ ಭಾಗ ಇತರೆ ಲೋಹ ಕೂಡಿದೆ ಎಂದರ್ಥ. ಇದರ ಪ್ರಕಾರ ೧೮ ಕ್ಯಾರೆಟ್ ಚಿನ್ನದ ಪರಿಶುದ್ಧತೆ ೭೫% ಚಿನ್ನದ ನಾಣ್ಯದಲ್ಲಿ ೯೦% ಚಿನ್ನ ಮತ್ತು ೧೦% ತಾಮ್ರ ಇರುತ್ತದೆ. ಚಿನ್ನ, ಬೆಳ್ಳಿ, ವಜ್ರಗಳ ಬೆಲೆಯನ್ನು ತೂಕದ ಮೇಲೆ ಕಟ್ಟುತ್ತಾರೆ. ಹಿಂದೆ ತೂಕಕ್ಕೆ ಗುಲಗಂಜಿ ಉಪಯೋಗಿಸುತ್ತಿದ್ದರು.[೬೦] ಈಗ ಗ್ರಾಂ, ಮಿಲಿಗ್ರಾಂಗಳು ಬಳಕೆಗೆ ಬಂದಿವೆಯಾದರೂ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಪಸಲಈಗಲೂ ಉಳಿದಿರುವುದು ಕಂಡುಬರುತ್ತದೆ. ಇತ್ತೀಚೆಗೆ ಬಂಗಾರವನ್ನು ತೂಗಲು ಕಂಪ್ಯೂಟರ್ ತ್ರಾಸುಗಳೇ ಬಂದಿವೆ.

ರೈತರು ತಮ್ಮ ಕೆಲಸವನ್ನು ಆರಂಭಿಸುವ ಮೊದಲು 'ನೇಗಿಲು' ಪೂಜೆ ಮಾಡುವಂತೆ ಅಕ್ಕಸಾಲಿಗರು ಮೊದಲು ತಮ್ಮ 'ಕುಮಟಿಗೆ'(ಅಗ್ಗಿಷ್ಟಕೆ)ಗೆ ಕೈ ಮುಗಿಯುತ್ತಾರೆ. ಕುಮುಟ ಅವರ ಪಾಲಿಗೆ ಸಾಕ್ಷಾತ್ ಕಾಳಿಕಾ ಮಾತೆ ಆಗಿದ್ದಾಳೆ.

ಅಕ್ಕಸಾಲಿಗರು ಆಭರಣಗಳನ್ನು ತಯಾರಿಸಲು ಚಿನ್ನ, ಬೆಳ್ಳಿ, ತಾಮ್ರ, ಮತ್ತು ಹವಳ, ವಜ್ರ ಮುಂತಾದವುಗಳನ್ನು ಸಾಮಗ್ರಿಗಳಾಗಿ ಬಳಸುತ್ತಾರೆ. ಪರಿಶುದ್ಧವಾದ ಚಿನ್ನ ಬಹಳ ಮೆದುವಾಗಿರುವುದರಿಂದ ಆಭರಣ ಮತ್ತು ನಾಣ್ಯಗಳನ್ನು ಮಾಡುವಾಗ ಬೆಳ್ಳಿ ಮತ್ತು ತಾಮ್ರವನ್ನು ಸೇರಿಸುವುದು ರೂಢಿ. ಅಪ್ಪಟ ಚಿನ್ನವನ್ನು ದೇವರ ವಿಗ್ರಹ, ಪ್ರಭಾವಳಿ, ಕಿರೀಟ ಮುಂತಾದವುಗಳನ್ನು ಮಾಡಲು ಉಪಯೋಗಿಸುತ್ತಾರೆ.

ಅಕ್ಕಸಾಲಿಗರು ಆಭರಣಗಳನ್ನು ತಯಾರಿಸಲು ಮುಖ್ಯವಾಗಿ ಈ ಕೆಳಗಿನ ಸಾಧನಗಳನ್ನು ಉಪಯೋಗಿಸುತ್ತಾರೆ.

ಚಿನಿವಾರಿಕೆಯ ಉಪಕರಣಗಳು:

ಚಿನ್ನದ ಕೆಲಸಗಾರರ ಭೌತಿಕ ಸಂಸ್ಕೃತಿ ವಿಶಿಷ್ಟವಾದುದು. ಹಿಂದಿನ ಕಾಲದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಯಂತ್ರಗಳ ಬಳಕೆ ಇರಲಿಲ್ಲ. ವಿದ್ಯುತ್‌ನ ಪೂರೈಕೆ ಇರಲಿಲ್ಲ. ಆ ಕಾಲದಲ್ಲಿ ಪೂರ್ತಿ ಜಾನಪದೀಯ ನೆಲೆಯಲ್ಲಿ ಕೆಲವೊಂದು ಉಪಕರಣಗಳನ್ನು ಬಳಸಿಕೊಂಡು ಆಭರಣ ತಯಾರಿಕೆ ನಡೆಸಲಾಗುತ್ತಿತ್ತು. ಈ ಉಪಕರಣಗಳ ಹೆಸರು ಮತ್ತು ಬಳಕೆಯ ವಿಧಾನಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಅಗ್ಗಿಷ್ಟಿಕೆ (ಕುಮಟ): ಆಭರಣ ತಯಾರಿಕೆಯಲ್ಲಿ ಬೆಂಕಿಯ ಬಳಕೆ ಅತಿ ಅವಶ್ಯ. ಕರಗಿಸಲು, ಬೆಸುಗೆ ಹಾಕಲು, ಮೆದುಗೊಳಿಸಲು, ಚಿನ್ನವನ್ನು ಕಾಯಿಸಬೇಕಾಗುತ್ತದೆ. ಹಿಂದೆ ಒಡೆದ ಮಡಕೆಯ ತಳಭಾಗವನ್ನು ಅಗ್ಗಿಷ್ಟಿಕೆಯಾಗಿ ಬಳಸುತ್ತಿದ್ದರು. ಈಗ ಚಟ್ಟಿಗಳನ್ನು ಬಳಸುತ್ತಾರೆ. ಭತ್ತದ ಹೊಟ್ಟಿಗೆ ನಾರನ್ನು ಬೆರೆಸಿ ಚೆನ್ನಾಗಿ ಕಲಸಿ ಈ ಚಟ್ಟಿಯನ್ನು ಹೊತ್ತಿ ಹೊತ್ತಿ ತುಂಬಿಸುತ್ತಾರೆ. ನಂತರ ಮೇಲ್ಭಾಗದಲ್ಲಿ ಮಧ್ಯೆ ತೆಂಗಿನ ಕರಟದ ಮಸಿಯನ್ನು ಹಾಕಿ ಉರುವಲಾಗಿ ಬಳಸುತ್ತಾರೆ. ತೆಂಗಿನ ಕರಟದ ಮಸಿ ಹೆಚ್ಚು ಶಾಖವನ್ನು ಕೊಟ್ಟು ಉರಿಯುತ್ತದೆ. ಮತ್ತು ಅದು ಬೇಗನೆ ನಂದಿ ಹೋಗುವುದಿಲ್ಲ. ಚಿನ್ನದ ಕೆಲಸಕ್ಕೆ ತಿದಿಯ ಬಳಕೆ ಕಡಿಮೆ. ಅಗ್ಗಿಷ್ಟಿಕೆ ಎಂದರೆ ವಿಶ್ವಕರ್ಮರಿಗೆ ಯಜ್ಞ ಕುಂಡವಿದ್ದಂತೆ. ಪ್ರಾತಃಕಾಲದಲ್ಲಿ ಶುಚಿರ್ಭೂತರಾಗಿ ಅಗ್ಗಿಷ್ಟಿಕೆಗೆ ಬೆಂಕಿ ಹಚ್ಚುತ್ತಾರೆ. ಇವರು ತಮ್ಮ ಕಸುಬನ್ನು ಯಜ್ಞ ಎಂಬುದಾಗಿ ಪರಿಗಣಿಸುತ್ತಾರೆ. (ವಕ್ತೃ ಉಮಾಪತಿ ಪತ್ತಾರ)

ಊದು ಕೊಳವೆ: ಅಗ್ಗಿಷ್ಟಿಕೆಯಲ್ಲಿ ಬೆಂಕಿ ಮಾಡಲು ಊದು ಕೊಳವೆ ಬೇಕು. ಹಿಂದೆ ಬಿದಿರಿನ ಕೊಳವೆ ಬಳಸುತ್ತಿದ್ದರು. ಈಗ ಕಬ್ಬಿಣದ ಇಲ್ಲವೇ ಹಿತ್ತಾಳೆಯ ಕೊಳವೆಯನ್ನು ಬಳಸುತ್ತಾರೆ.

ಬಾಗಿದ ಊದು ಕೊಳವೆ: ಇದು ಸಹ ಲೋಹದ್ದು, ಊದುವ ಕೊಳವೆಯಂತೆ ಇದ್ದು ಮುಂದಿನ ತುದಿ ಬಾಗಿರುತ್ತದೆ. ಸಾಮಾನ್ಯವಾಗಿ ಇದನ್ನು ಆಭರಣಗಳಿಗೆ ಬೆಸುಗೆ ಹಾಕುವಾಗ, ಹೆಚ್ಚು ಉರಿಯಿಂದ ಕಡಿಮೆ ಬಿಸಿ ಬೇಕಿದ್ದಾಗ ಅಥವಾ ಬೆಸುಗೆ ಹಾಕುವ ಜಾಗಕ್ಕೆ ಮಾತ್ರ ಬಿಸಿ ಬರುವಂತೆ ಗಾಳಿಯನ್ನು ಈ ಕೊಳವೆ ಮೂಲಕ ಊದಿ ಬರಿಸಲು ಬಳಸುತ್ತಾರೆ. ಇದನ್ನು 'ಗಾಳಿ ಊದುವ ಬಾಗಿದ ಪೈಪು, ಬ್ಲೋಪೈಪು ಎಂಬ ಹೆಸರಿನಿಂದ ಕರೆಯುತ್ತಾರೆ. ಬೆಸುಗೆ ಹಾಕಲು ಮಾತ್ರ ಬಳಸುವುದರಿಂದ ಇದನ್ನು 'ಬೆಸೆಯೊ ಪೈಪು' ಎಂದೂ ಕರೆಯುವುದು ರೂಢಿ.

ಇಕ್ಕಳ: ಕಬ್ಬಿಣದಿಂದ ಮಾಡಿರುವ ಇದು ಬಿಸಿಯಾದ ಮೂಸೆಯನ್ನು, ಆಭರಣಗಳನ್ನು ಹಿಡಿದುಕೊಳ್ಳಲು ಬಳಸುವ ಸಾಧನ. ಇದರಲ್ಲಿ ಚಿಕ್ಕದರಿಂದ ಹಿಡಿದು ದೊಡ್ಡದವರೆಗೂ, ಹಲವಾರು ಗಾತ್ರ ಹಾಗೂ ಆಕಾರಗಳನ್ನು ಹೊಂದಿವೆ. ಇವನ್ನು ಪಟಕ, ಪಟಕಾರ, ಪಟ್ಕಾರ, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಚಿಕ್ಕ ಇಕ್ಕಳ, ದೊಡ್ಡ ಇಕ್ಕಳ ಎಂತಲೂ ಕರೆಯುವರು. ಮೂಸೆಯ ಸಹಾಯದಿಂದ ಬಂಗಾರವನ್ನು ಕಾಯಿಸಿ ಆಯಾ ಅಚ್ಚಿನ ಮಣಿಗೆ ಸುರಿಯುವಾಗ, ಬಿಸಿ ವಸ್ತುಗಳನ್ನು ಹಿಡಿದುಕೊಳ್ಳುವಾಗ ಇವುಗಳ ಉಪಯೋಗ ಬಹಳ. ಹೀಗಾಗಿ ಪ್ರತಿಯೊಬ್ಬ ಚಿನಿವಾರನೂ ಈ ಸಾಧನಗಳನ್ನು ಪ್ರಮುಖವಾಗಿ ಹೊಂದಿರುತ್ತಾನೆ.

ಜಲಪಾತ್ರೆ: ಅಗ್ಗಿಷ್ಟಿಕೆಯ ಪಕ್ಕದಲ್ಲಿ ಜಲಪಾತ್ರೆ ಇರಲೇಬೇಕು. ಇದನ್ನು ವಿಶ್ವಕರ್ಮರು ತಮ್ಮ ಕಮಂಡಲವೆಂದೇ ಭಾವಿಸುತ್ತಾರೆ.

ಅಡಿಗಲ್ಲು: ಇದನ್ನು 'ಅದ್ಗಾಣಿ' 'ಪಟ್ಟಡಿ', 'ಇಡುಗಲ್ಲು', 'ಪಣೆ', 'ಪಣಿ', 'ಡೈಯಿ' 'ಅಡೆ' ಮುಂತಾದ ಹೆಸರಿನಿಂದ ಕರೆಯುತ್ತಾರೆ. ಆಭರಣಗಳನ್ನು ಸುತ್ತಿಗೆಯ ಸಹಾಯದಿಂದ ಬಡಿಯಲು ಬಳಸುತ್ತಾರೆ. ಒಂದು ಮರದ ದಿಮ್ಮಿ(ತುಂಡಿಗೆ) ಕಬ್ಬಿಣದ ಪೆಣಿಯನ್ನು ಸೇರಿಸಿರುತ್ತಾರೆ.

ಸುತ್ತಿಗೆ: ಚಿನ್ನವನ್ನು, ಆಭರಣಗಳನ್ನು ಕುಟ್ಟಲು ಬಳಸುವ ಒಂದು ಸಾಧನ. ಕಬ್ಬಿಣದಿಂದ ರಚಿಸಿರುವಂತದ್ದು, ಮರದ ಹಿಡಿಯನ್ನು ಸಲಉದ್ದವಾಗಿ ಹಿಡಿದುಕೊಳ್ಳಲು ಅನುಕೂಲವಾಗುವಂತೆ ಸೇರಿಸಿರುತ್ತಾರೆ.

ಮೂಸೆ: ಇದನ್ನು 'ನುಸಿ', 'ಡಬ್ಬಿ', 'ಭರಣಿ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇದು ಮಣ್ಣಿನಿಂದ ತಯಾರಿಸ್ವಲ್ಪಟ್ಟಿದ್ದು, ವಿವಿಧ ಗಾತ್ರಗಳಲ್ಲಿವೆ. ಚಿನ್ನ ಕರಗಿಸಲು ಬಳಸುವ ಸಾಧನವಿದು.

ಚಿಮುಟ: ಇದು ಚಿನ್ನವನ್ನು ಹಿಡಿಯಲು ಬಳಸುವ ಸಾಧನ. ಇದರಲ್ಲಿ ಬೇರೆ ಬೇರೆ ಗಾತ್ರದವುಗಳಿರುತ್ತವೆ. ಅತಿ ಸೂಕ್ಷ್ಮವಾದ ವಸ್ತುಗಳನ್ನು ಕೂಡ ಹಿಡಿಯಲು ಚಿಮುಟದಿಂದ ಸಾಧ್ಯ.

ನೀಳ್ಗಾರ: ಮೂಸೆಯನ್ನು ಅಗ್ಗಿಷ್ಟಿಕೆಯ ಮೇಲಿಡುವುದು, ಅಲ್ಲಿಂದ ಈಚೆಗೆ ತೆಗೆಯುವುದು, ಊದುವ ಕೊಳವೆಯಿಂದ ಅಥವಾ ತಿದಿಯಿಂದ ಗಾಳಿ ಊದುವಾಗ ಇದ್ದಿಲನ್ನು ಹಾಕುವುದು, ಬೆಂಕಿ ಕೆಂಡವನ್ನು ಕೆದರುವುದು ಮುಂತಾದ ಸಂದರ್ಭದಲ್ಲಿ ಇದನ್ನು ಬಳಸುತ್ತಾರೆ. ಇದನ್ನು 'ನಿಳ್ಳುಗಾರ', 'ನೀರ್ಕಾರ' ಎಂದೂ 'ತಣಸ' ಎಂಬ ಹೆಸರುಗಳಿಂದಲೂ ಕರೆಯುತ್ತಾರೆ.

ಸರಿಗೆ ಮಾಡುವ ಸಾಧನ (ಕಂಬಚ್ಚು): ಇದು ಹಲವು ಗಾತ್ರದ ತೂತುಗಳಿರುವ ಒಂದು ಕಬ್ಬಿಣದ ಪಟ್ಟಿ–ಸರಿಗೆಯ ತುದಿ ಚೂಪು ಮಾಡಿ ಚೂಪಾದ ತುದಿಯನ್ನು ತೂತಿನಿಂದ ಸೇರಿಸಿ ಇಕ್ಕಳದಲ್ಲಿ ಹಿಡಿದು ಎಳೆದಾಗ ಸರಿಗೆ ಇನ್ನಷ್ಟು ಸಪೂರಗೊಂಡು ಉದ್ದವಾಗುತ್ತದೆ. ಹೀಗೆ ದೊಡ್ಡ ತೂತಿನಿಂದ ಪ್ರಾರಂಭಿಸಿ ಸಣ್ಣವಾಗುತ್ತಾ ಇನ್ನಷ್ಟು ಉದ್ದವಾಗುತ್ತಾ ಹೋಗುವುದು. ಹಿಂದೆ ಅಕ್ಕಸಾಲಿಗರು ಕಾಲು ನೀಡಿ ಕುಳಿತು ಎರಡು ಇಮ್ಮಡಿಗಳ ಮಧ್ಯೆ ಕಂಬಚ್ಚಿ ಇಟ್ಟು ತೂತಿನ ಮೂಲಕ ಸರಿಗೆಯನ್ನು ಇಕ್ಕಳದಲ್ಲಿ ಹಿಡಿದು ಬಲವಾಗಿ ಎಳೆಯುತ್ತಿದ್ದರು. ದೊಡ್ಡ ಗಾತ್ರದ ಮರಕ್ಕೆ ಕಬ್ಬಿಣದ ಕೊಂಡಿ ಬಡಿದು ಅದಕ್ಕೆ ಅಡ್ಡ ಕಂಬಚ್ಚಿ ಇಟ್ಟು ತೂತಿನ ಮೂಲಕ ಸರಿಗೆಯನ್ನು ಇಕ್ಕಳದಿಂದ ಎಳೆಯುತ್ತಾ ಮರಕ್ಕೆ ಸುತ್ತು ಬರುತ್ತಿದ್ದರು. ಹೀಗೆ ಎಷ್ಟು ಉದ್ದದ ಸರಿಗೆಯನ್ನು ಕೂಡಾ ಮಾಡಲು ಸಾಧ್ಯವಾಗುತ್ತಿತ್ತು. ಈಗ ಕಂಬಚ್ಚಿಯ ಬಳಕೆ ನಿಂತು ಹೋಗಿದೆ. ಸರಿಗೆಗಳನ್ನು ಯಂತ್ರಗಳ ಮೂಲಕ ತಯಾರಿಸಲಾಗುತ್ತದೆ.

ದಿಮ್ಮಿ: ಹಲವು ಆಕಾರ, ಗಾತ್ರದ ಓಲೆ, ಗೆಜ್ಜೆಗಳನ್ನು ಮಾಡುವ ಸಾಧನ. ಇದು ಕಂಚು ಅಥವಾ ಕಬ್ಬಿಣದಿಂದ ಮಾಡಲ್ಪಟ್ಟಿರುತ್ತದೆ. ಅದರಲ್ಲಿ ಹಲವಾರು ಗಾತ್ರಗಳ ಕುಳಿಗಳು ಇರುತ್ತವೆ. ಚಿನ್ನದ ತೆಳುವಾದ ತಗಡನ್ನು ತಮಗೆ ಬೇಕಾಗಿರುವ ಅಳತೆಯ ಕುಳಿಗಿಟ್ಟು ಓಲೆಗಳನ್ನು, ಗೆಜ್ಜೆ, ಸರ ಮುಂತಾದ ಆಭರಣಗಳನ್ನು ಮಾಡುತ್ತಾರೆ. ಇದನ್ನು 'ದಿಮ್ಮಿ', 'ಅಚ್ಚು', 'ಚಂದ್ರಿಕೆ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಅಚ್ಚು: ಇದು ಲೋಹದ ಸಾಧನ. ಇದನ್ನು 'ಅಚ್ಚಿನ ಮಣೆ', 'ಗಾಡಿಕಲ್ಲು' ಎಂದೂ ಕರೆಯುತ್ತಾರೆ. ಚಿನ್ನವನ್ನು ಕರಗಿಸಿದ ನಂತರ 'ಎರಕ ಹುಯ್ಯಲು' ಅಥವಾ 'ಗಟ್ಟಿಗೆ' ಹಾಕಲು ಬಳಸುವ ಸಾಧನವಿದು.

ಒರೆಕಲ್ಲು (ಉರೆಕ್ಕಲ್): ಚಿನ್ನದ ಶುದ್ಧತೆಯನ್ನು ಪರೀಕ್ಷಿಸಲು ಒರೆಗಲ್ಲನ್ನು ಬಳಸುತ್ತಾರೆ. ಒರೆಗಲ್ಲು, ಚೌಕಾಕಾರದ ಸಣ್ಣ ಗಾತ್ರದ ದೊರಗುಗಲ್ಲು. ಚಿನ್ನವನ್ನು ಇದಕ್ಕೆ ಉಜ್ಜಿದಾಗ ಚಿನ್ನದ ಬಣ್ಣ ಇದರಲ್ಲಿ ಗೊತ್ತಾಗುತ್ತದೆ. ಬಣ್ಣ ನೋಡಿ ಅಕ್ಕಸಾಲಿಗರು ಚಿನ್ನದ ಶುದ್ಧತೆಯನ್ನು ಹೇಳುತ್ತಾರೆ. ಕಡು ಹಳದಿ ಬಣ್ಣವಿದ್ದರೆ ಶುದ್ಧ ಚಿನ್ನ ಅಥವಾ ಪುತ್ಥಳಿ ಕೆಂಪು ಬಣ್ಣಕ್ಕೆ ತಿರುಗಿದ್ದರೆ ಅದರಲ್ಲಿ ತಾಮ್ರದ ಅಂಶ ಹೆಚ್ಚಾಗಿರುತ್ತದೆ.

ವಾಲ್ಪೊ: ಆಭರಣಗಳಲ್ಲಿ ಸೂಕ್ಷ್ಮ ರಂಧ್ರಗಳನ್ನು, ನಾನಾ ಆಕಾರಗಳನ್ನು ಕೊರೆಯಲು ಬಳಸುವ ಲೋಹದ ಸಾಧನ. ಇದನ್ನು 'ರಂಪ', 'ರಂಪಾತಗಡು' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಆಭರಣಗಳಲ್ಲಿ ರಂಧ್ರ ಹಾಗೂ ಆಕಾರಕ್ಕೆ ತಕ್ಕಂತೆ ಕೊರೆಯಲು 'ರಂಪದ' ತಂತಿಯನ್ನು ವಾಲ್ಪೊನಲ್ಲಿ ಬಿಗಿಗೊಳಿಸಿ ಬಳಸುತ್ತಾರೆ. ಇದನ್ನು ಭೈರಿಗೆ ಎಂದು ಕರೆಯುತ್ತಾರೆ. ಆದರೆ ಭೈರಿಗೆಯಿಂದ ಇಷ್ಟು ಸೂಕ್ಷ್ಮವಾದ ರಂಧ್ರ ಮತ್ತು ಆಕಾರಗಳನ್ನು ಕೊರೆಯಲು ಸಾಧ್ಯವಾಗುವುದಿಲ್ಲ. ಅಗಲವಾದ/ದೊಡ್ಡದಾದ ರಂಧ್ರಗಳನ್ನು ಕೊರೆಯಲು ಮಾತ್ರ 'ಭೈರಿಗೆ'ಯನ್ನು ಬಳಸುತ್ತಾರೆ.

ಸ್ವಯಂವರ: ಇದು ಕಬ್ಬಿಣದ ಸಾಧನ. ಇದಕ್ಕೆ 'ಗಡಪಾರು', 'ಗಡಾರು', 'ರಿಂಗ್ ಗಡಾರು', 'ಉಂಗುರದ ಹಾರೆ', 'ಹಾರೆ' ಮುಂತಾದ ಹೆಸರುಗಳಿವೆ. ಉಂಗುರ ಮಾಡುವುದಕ್ಕೆ ಅಥವಾ ವರ್ತುಲಾಕಾರದ ಯಾವುದೇ ಆಭರಣಗಳನ್ನು ಗಾತ್ರಕ್ಕೆ ತಕ್ಕಂತೆ ಹಿಗ್ಗಿಸಿಕೊಳ್ಳಲು ಈ ಸಾಧನ ಅತ್ಯಗತ್ಯ. ಉಂಗುರವನ್ನು ಇದಕ್ಕೆ ಸೇರಿಸಿಕೊಂಡು ಸುತ್ತಿಗೆ, ಎಮ್ಮೆಯ ಕೊಂಬಿನಿಂದ ಮಾಡಿಕೊಂಡಿರುವ ಸುತ್ತಿಗೆಯಿಂದ ಬಡಿಯುತ್ತಾರೆ. ಇದರಿಂದ ಉಂಗುರದ ಮೇಲೆ ಯಾವುದೇ ರೀತಿಯ 'ಗುನ್ನ' ಬೀಳದೆ ನಯವಾಗುವಂತೆ ತಟ್ಟಲು ಬಳಸುತ್ತಾರೆ. ಸ್ವಯಂವರ ಸಹಾಯದಿಂದ ನಾನಾ ಗಾತ್ರಗಳನ್ನು ಮಾಡಿಕೊಳ್ಳಬಹುದು.

ಶಿವಬಳೆ: ಕಬ್ಬಿಣದ ಒಂದು ಸಾಧನ. ಇದನ್ನು 'ಸೀಉಳಿ' ಎಂದೂ ಕರೆಯುತ್ತಾರೆ. ಇದು ಉದ್ದವಾಗಿದ್ದು ತ್ರಿಕೋನಾಕಾರದಲ್ಲಿರುತ್ತದೆ. ಆಭರಣಗಳಿಗೆ ಹರಳು/ಮುತ್ತುಗಳನ್ನು ಕೂರಿಸುವ ಮೊದಲು ಆ ಜಾಗದಲ್ಲಿ ಚಿನ್ನದ ಪಿಸರನ್ನೆತ್ತಲು ಬಳಸುತ್ತಾರೆ. ಹರಳನ್ನು ಕೂರಿಸಿದ ನಂತರ ಅದರ ಮೇಲೆ ಎತ್ತಿರುವ ಈ ಚಿನ್ನದ ಪಿಸರನ್ನು ಅದರ ಮೇಲೆ ಕೂರಿಸುವುದರಿಂದ ಹರಳಾಗಲೀ ಅಥವಾ ಮುತ್ತುಗಳಾಗಲೀ ಬೀಳದಂತೆ ಆಸರೆಯಾಗುತ್ತದೆ. ಹರಳನ್ನು ಕೂರಿಸುವ ಮೊದಲಿನ

ಕೆಲಸಕ್ಕೆ ಇದರ ಸಹಾಯ ಅಪಾರ. ಆ ಭಾಗವನ್ನು ನಯಗೊಳಿಸಲು 'ಸೀಉಳಿ'ಯನ್ನು ಬಳಸುತ್ತಾರೆ. 'ಕೆತ್ತುವ ಸಲಾಕೆ' ಎಂದೂ ಕರೆಯುತ್ತಾರೆ. ಮಗ್ಗಲು ಮತ್ತು ಅಂಚುಗಳನ್ನು ಉಜ್ಜಿ ನಯಗೊಳಿಸಲು ಬಳಸುತ್ತಾರೆ.

ಅರ: ಉಕ್ಕಿನಿಂದ ಮಾಡಿರುವ ಸಾಧನವಿದು. ಇದನ್ನು 'ಫೈಲ್' ಎಂದು ಕರೆಯುತ್ತಾರೆ. ಆಭರಣಗಳನ್ನು ಉಜ್ಜಲು ಬಳಸುವುದು. ಅರಗಳಲ್ಲಿ ವಿವಿಧ ಆಕಾರಗಳಿವೆ. ಗುಂಡಾದ ಅರ, ಅರ್ಧ ಗುಂಡಾದ ಅರ, ತ್ರಿಕೋನಾಕಾರದ ಅರ, ಚತುರ್ಭುಜಾಕಾರದ ಅರ. ಹೀಗೆ ವಿವಿಧ ಆಕಾರದ ಅರಗಳಿಂದ ಆಭರಣಗಳ ಅಂಚನ್ನು ತಿಕ್ಕಲು, ನಾನಾ ಸಂದರ್ಭಗಳಲ್ಲಿ ಅರಗಳ ಸಹಾಯ ಕಂಡುಬರುತ್ತದೆ.

ಚಾಣ: ಇದು ಕಬ್ಬಿಣದ ಸಾಧನ. 'ಸಾಣ', 'ಉಳಿ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಚಿನ್ನ ಅಥವಾ ಬೆಳ್ಳಿಯ ತಗಡನ್ನು ಹಾಗೂ ಕಂಬಿಗಳನ್ನು ಕತ್ತರಿಸಲು ಚಾಣಗಳನ್ನು ಬಳಸುವರು. ಇವುಗಳಲ್ಲಿ ವಿವಿಧ ಆಕಾರಗಳಿದ್ದು 'ಚಿಕ್ಕ ಚಾಣ', 'ದೊಡ್ಡ ಚಾಣ' ಎಂದು ಕರೆಯುತ್ತಾರೆ. ತಗಡು ಮತ್ತು ಕಂಬಿಗಳ ಗಾತ್ರಕ್ಕೆ ತಕ್ಕಂತೆ ಚಾಣಗಳನ್ನು ಬಳಸುತ್ತಾರೆ.

ಕತ್ತರಿ: ಕತ್ತರಿಯಲ್ಲಿ ಬೇರೆ ಬೇರೆ ಗಾತ್ರದವುಗಳಿವೆ. ಚಿನ್ನದ ಗಟ್ಟಿಗಳನ್ನು ಕತ್ತರಿಸಲು ದೊಡ್ಡ ಗಾತ್ರದ ಕತ್ತರಿ ಬೇಕು. ಸಪೂರವಾದ ಸರಿಗೆ ಕತ್ತರಿಸಲು ಸಣ್ಣ ಕತ್ತರಿ ಬೇಕು. ಅಕ್ಕ ಸಾಲಿಗರು ಬಳಸುವ ಕತ್ತರಿ ದರ್ಜಿಯ ಕತ್ತರಿಗಿಂತ ಭಿನ್ನವಾಗಿರುತ್ತದೆ. ಹೆಚ್ಚು ಹರಿತವಾಗಿರುತ್ತದೆ. ಕೆಲವೊಂದು ವಸ್ತುಗಳನ್ನು ತುಂಡರಿಸಲು, ಕತ್ತರಿಯ ಬದಲು ಅರವನ್ನು ಬಳಸುತ್ತಾರೆ.

ಗರಗಸ: ಚಿನ್ನವನ್ನು ಕೊಯ್ಯಲು ಬಹಳ ಸೂಕ್ಷ್ಮವಾದ ಗರಗಸದಂತಿರುವ ಕಡ್ಡಿಗಳು ಸಿಗುತ್ತವೆ. ಹಿಡಿ ಇರುವ ಕಮಾನ್ ಆಕಾರದ ಕಬ್ಬಿಣದ ಉಪಕರಣಕ್ಕೆ ಈ ಗರಗಸ ಕಡ್ಡಿಯನ್ನಿಟ್ಟು ತಿರುಪು ಬೆಣೆಯ ಮೂಲಕ ಗಟ್ಟಿಗೊಳಿಸುತ್ತಾರೆ. ಹಿಡಿಯಲ್ಲಿ ಹಿಡಿದುಕೊಂಡು ಆಭರಣಗಳನ್ನು ಎಡೆಯಿಂದ ಕೊಯ್ಯಲು ಇದು ಅನುಕೂಲ.

ಮೌಲ್ಡಿಂಗ್ ಬಾಕ್ಸ್: ಅಚ್ಚು ಹಾಕುವ ಮಣಿ. ಇದು ಉಕ್ಕಿನಿಂದ ಮಾಡಿರುವ ಸಾಧನವಿದು. ವಿವಿಧ ಸೈಜುಗಳ ಅಚ್ಚಿನ ಮಣಿಗಳಿವೆ. ಚಿಕ್ಕ ಆಕಾರದಲ್ಲಿ ಒಂದು ಅಥವಾ ಎರಡು ಉಂಗುರಗಳನ್ನು ಕಡಿಮೆ ಚಿನ್ನದಲ್ಲಿ ಅಚ್ಚು ಮಾಡಿಕೊಳ್ಳಬಹುದು. ದೊಡ್ಡ ಆಕಾರದಲ್ಲಿ ಒಂದೇ ಬಾರಿಗೆ ಅಪಾರ ಚಿನ್ನವನ್ನು ಕಾಯಿಸಿಕೊಂಡು ಬೇರೆ ಬೇರೆ ಆಕಾರದ ಹತ್ತಾರು ಉಂಗುರಗಳನ್ನು ಬೇಕಾದರೂ ಅಚ್ಚು ಮಾಡಿಕೊಳ್ಳಬಹುದು. ಇದನ್ನು ಅಚ್ಚಿನ ಮಣಿ ಎಂದು ಕರೆಯುತ್ತಾರೆ.

ಗ್ರಿಸ್‌ದಾರ: ಉಂಗುರ ಮುಂತಾದ ಆಭರಣಗಳ ಕೆಲಸ ಮುಗಿದ ನಂತರ ದಾರದ ಸಹಾಯದಿಂದ ಗ್ರೀಸನ್ನು ಹಚ್ಚುತ್ತಾರೆ. ಬಫಿಂಗ್ ಪೇಪರಿನಿಂದ ಉಜ್ಜಿದಾಗ ಉಳಿದಿರುವ ಸಣ್ಣಮಟ್ಟ

ಗೆರೆಗಳು, ಸೂಕ್ಷ್ಮವಾದ ಗುರುತುಗಳು-ಹೀಗೆ ಉಜ್ಜುವುದರಿಂದ ಹೋಗುತ್ತವೆ. ಗ್ರೀಸಿಲ್ಲದೆ ಬಿಳಿಯ ದಾರದಿಂದ ಉಜ್ಜುವುದರಿಂದ ಆಭರಣದಲ್ಲಿನ ಗ್ರೀಸ್ ಸಂಪೂರ್ಣ ಹೋಗುವುದರ ಜೊತೆಗೆ ಆಭರಣವು ಹೊಳೆಯುತ್ತದೆ.

ಮಾದರಿ ಉಂಗುರಗಳು: ಬೇರೆ ಬೇರೆ ಆಕಾರಗಳಿಂದ ಕೂಡಿರುವ ಬೆಳ್ಳಿ ಮುಂತಾದ ಲೋಹಗಳಿಂದ ಮಾಡಿರುವ ಮಾದರಿ ಉಂಗುರಗಳನ್ನು ಇಟ್ಟುಕೊಂಡಿರುತ್ತಾರೆ. ಅಚ್ಚಿನ ಮಣಿಯೊಳಗೆ ಇದನ್ನು ಸೇರಿಸಿ ಮಾರ್ಕ್‌ನ್ನು ಮಾಡಿಕೊಂಡು ನಂತರ ಈ ಮಾರ್ಕ್‌ನೊಳಗೆ ದ್ರವ ಬಂಗಾರವನ್ನು ಸುರಿದು ಉಂಗುರುಗಳನ್ನು ತಯಾರಿಸುತ್ತಾರೆ. ಹಾಗೆ ಅಣಿಗೊಳಿಸಿರುವ ವಿವಿಧ ಬಗೆಯ ಉಂಗುರಗಳು ಇದರಲ್ಲಿರುತ್ತವೆ.

ಆಯಸ್ಕಾಂತ: ಆಭರಣಗಳನ್ನು ಅರದಿಂದ ಉಜ್ಜುವಾಗ ಬಂಗಾರದ ಪುಡಿಯ ಜೊತೆಯಲ್ಲಿ ಅದರಲ್ಲಿನ ಕಬ್ಬಿಣದ ಪುಡಿಯು ಬೆರೆಕೆಯಾಗುತ್ತದೆ. ಈ ಮಿಶ್ರಣದಿಂದ ಕಬ್ಬಿಣದ ಪುಡಿಯನ್ನು ಪ್ರತ್ಯೇಕಗೊಳಿಸಲು ಆಯಸ್ಕಾಂತ ಬಳಸುತ್ತಾರೆ.

ತ್ರಾಸು, ಬಟ್ಟು: ಅಕ್ಕಸಾಲಿಗರಿಗೆ ತ್ರಾಸು ಬಹಳು ಅಗತ್ಯ. ಚಿನ್ನವನ್ನು ಆಭರಣ ತಯಾರಿಕೆಗಾಗಿ ಕೊಂಡುಕೊಳ್ಳುವಾಗ ತೂಕಮಾಡುವುದು ಬಹಳ ಅಗತ್ಯ. ಮೊದಲು ಸಣ್ಣ ಸಣ್ಣ ತ್ರಾಸುಗಳನ್ನು ಬಳಸುತ್ತಿದ್ದರು. ಇತ್ತೀಚೆಗೆ ಸುಧಾರಿತ ತ್ರಾಸುಗಳು ಬಳಕೆಗೆ ಬಂದಿವೆ. ಮೊದಲು ಪವನು, ತೊಲೆ, ಹಣತೂಕ, ಗುಲಗಂಜಿ ತೂಕ ಇತ್ಯಾದಿ ಮಾನಗಳಿಂದ ಅಳೆಯುತ್ತಿದ್ದರು. ಈಗ ಗ್ರಾಂ, ಮಿಲಿಗ್ರಾಂಗಳ ಬಟ್ಟುಗಳನ್ನು ಬಳಸಲಾಗುತ್ತದೆ.

ಕೆಲಸದ ಪೆಟ್ಟಿಗೆ: ಯಾವುದೇ ಚಿನ್ನದ ಕೆಲಸಗಾರ ಚಿನ್ನದ ಕೆಲಸ ಪ್ರಾರಂಭಿಸುವಾಗಲೇ ಒಂದು ಕೆಲಸದ ಪೆಟ್ಟಿಗೆ ಮಾಡಿಕೊಳ್ಳುತ್ತಾನೆ. ಈ ಪೆಟ್ಟಿಗೆ ಮೇಲ್ಭಾಗದ ಹಲಗೆ ಗಟ್ಟಿಯಾಗಿರುತ್ತದೆ. ಈ ಹಲಗೆಯ ಮಧ್ಯೆ ಚಪ್ಪಟೆಯಾದ ಒಂದು ಚಿಕ್ಕ ಮರದ ತುಂಡನ್ನು ಜೋಡಿಸಿರುತ್ತಾರೆ. ಈ ತುಂಡಿನ ಮೇಲೆ ಚಿನ್ನವನ್ನಿಟ್ಟು ಅರದಿಂದ ಉಜ್ಜುವ ಕೆಲಸ ಮಾಡುತ್ತಾರೆ. ಪೆಟ್ಟಿಗೆಗೆ ಎರಡು ಅಥವಾ ಹೆಚ್ಚು ಡ್ರಾಯರಗಳಿರುತ್ತವೆ. ಈ ಡ್ರಾಯರ ಒಳಭಾಗಕ್ಕೆ ನಯವಾದ ಕಾಗದ ಹಾಸಿರುತ್ತಾರೆ. ಚಿನ್ನದ ಆಭರಣದ ಕೆಲಸದ ಸಂದರ್ಭದಲ್ಲಿ ಡ್ರಾಯರನ್ನು ಎಳೆದಿಟ್ಟು ಕೆಲಸ ಮಾಡುತ್ತಾರೆ. ಹೀಗಾಗಿ ಕೆಲಸ ಮಾಡುವಾಗ ಏಳುವ ಚಿನ್ನದ ಹುಡಿ ಡ್ರಾಯರ್‌ನೊಳಗೇ ಬೀಳುತ್ತದೆ. ಈ ಹುಡಿಯನ್ನು ಮೇಣದಲ್ಲಿ ಒತ್ತಿ ಸಂಗ್ರಹಿಸಿಟ್ಟು ಮತ್ತೆ ಕರಗಿಸಿ ಚಿನ್ನವನ್ನು ಪಡೆಯುತ್ತಾರೆ.

ಈ ಸಾಧನ ಸಲಕರಣೆಗಳ ಜೊತೆಗೆ ಪಾಲಿಶ್ ಪೌಡರು, ಕುಂಚ, ಬ್ರಶ್ ಕಡ್ಡಿ, ಗೆಜ್ಜೆ ಕುಳಿ, ಹಿಡಿ, ದಂಡಾಸು, ಬರ್ಮ, ನೀವು ಮೋಗರ, ಮೆರವೆಮೊಗರ, ಬದಚ್ಚು ಇತ್ಯಾದಿ ತಮ್ಮ ಅವಶ್ಯಕತೆಗೆ ತಕ್ಕಂತೆ ವಿವಿಧ ಸಾಮಗ್ರಿ, ಸಲಕರಣೆಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ.

ಚಿನಿವಾರರ ಕೆಲಸಗಳಿಗೆ ಕೇವಲ ಲೋಹಗಳ ಉಪಕರಣಗಳಷ್ಟೇ ಅಲ್ಲದೆ ಬೆಳ್ಗಾರ, ಪುಡಿ, ಕೆ.ಡಿ.ಎಂ. ಪಾದರಸ, ಅರಗು, ನವಸಾಗರ, ಅಡಿಗೆ ಸೋಡ, ನೈಟ್ರಿಕ್ ಆಮ್ಲ, ಗಂಧಕಾಮ್ಲ, ರೋಸ್‌ಗಡ್ಡೆ, ಮೌಲ್ಡಿಂಗ್ ಮಣ್ಣು, ರಾಜಾಮ್ಲ, ಜಲಜನಕಾಮ್ಲ ಮುಂತಾದವು ಅಗತ್ಯವಾಗಿವೆ.

'ಬೆಳ್ಗಾರ' ಎಂದರೆ ಆಭರಣಗಳನ್ನು ಬೆಸುಗೆ ಮಾಡಬೇಕಾದರೆ ಪ್ರಮುಖವಾಗಿ ಬಳಸಲೇಬೇಕಾದ ಒಂದು ಕಲ್ಲು. ಬೆಳ್ಗಾರ ಇಲ್ಲದಿದ್ದರೆ ವೆಲ್ಡಿಂಗ್ ಆಗೋಲ್ಲ. ಬೆಸುಗೆ ಮಾಡಬೇಕಾದ ಆಭರಣಗಳ ಮೇಲೆ ನೀರಿನಲ್ಲಿ ಅದ್ದಿರುವ ಬೆಳ್ಗಾರವನ್ನು ಸ್ರಾವಣದ ಸಹಾಯದಿಂದ ತೆಗೆದಿಟ್ಟು ಕೊಳವೆಯಿಂದ ಗಾಳಿ ಊದುತ್ತಾರೆ. ಆಗ ದೀಪದ ಉರಿಯ ಬಿಸಿ ಬೆಳ್ಗಾರದ ಮೇಲೆ ಬಿದ್ದಾಗ ಅದು ಕರಗಿ ಆಭರಣ ಕೂರುವಂತೆ ಮಾಡುತ್ತದೆ. ಪೋಡಿ ಬೆಸುಗೆ ವಿಧಾನದ ಮೂಲಕವೂ ಬೆಸುಗೆ ಮಾಡುತ್ತಾರೆ. ಪೋಡಿ ಬೆಸುಗೆ ಮಾಡಿರುವ ಆಭರಣಗಳನ್ನು ಕರಗಿಸಿದರೆ ಹೆಚ್ಚಿನ ಭಾಗ ವೆಸ್ಟೇಜ್ ಹೋಗುತ್ತದೆ.

ಇದಲ್ಲದೆ ಕೆ.ಡಿ.ಎಂ. ಬೆಸುಗೆ ಎಂಬ ವಿಧಾನದ ಮೂಲಕ ಬೆಸುಗೆ ಕೆಲಸ ನಡೆಯುತ್ತದೆ. ಕೆ.ಡಿ.ಎಂ. ಎಂದರೆ ಚಿನ್ನ, ಬೆಳ್ಳಿ ಹಾಗೂ ತಾಮ್ರದ ಮಿಶ್ರಣದ ಲೋಹ. ಮೂಸೆಯಲ್ಲಿ ಈ ಮೂರು ಲೋಹಗಳನ್ನು ಹಾಕಿ ಕಾಯಿಸುತ್ತಾರೆ. ಅದರ ಜೊತೆಗೆ ಸಲಅಡಿಗೆ ಸೋಡದ ಪುಡಿಯನ್ನು ಬೆರೆಸುವುದರಿಂದ ಮೂರು ಲೋಹಗಳು ಸಮನಾಗಿ ಬೆರೆತು ದ್ರಾವಣ ಆಗುತ್ತದೆ. ದ್ರಾವಣವನ್ನು ಅಚ್ಚಿಗೆ ಹಾಕಿ ನೀರಲ್ಲಿ ಅದ್ದುವುದರ ಮೂಲಕ ತಂಪುಗೊಳಿಸುತ್ತಾರೆ. ಅನಂತರ ಕತ್ತರಿಯ ಸಹಾಯದಿಂದ ಸಣ್ಣ ಬೇಗಗಳನ್ನಾಗಿ ಕತ್ತರಿಸಿಕೊಂಡು ಆಭರಣಗಳಿಗೆ ಬೆಸುಗೆ ಮಾಡುತ್ತಾರೆ. ಕೆ.ಡಿ.ಎಂ. ಬೆಸುಗೆ ಮಾಡಿದ್ದಲ್ಲಿ ಆಭರಣ ಮಾಡಿಸಿದವನಿಗೆ ಹೆಚ್ಚು ನಷ್ಟ ಆಗುವುದಿಲ್ಲ. ಆದರೆ ಬೆಸುಗೆ ಸಲದುಬಾರಿಯಾಗುತ್ತದೆ.

ಆಭರಣಗಳಿಗೆ ರಂಧ್ರ ಹಾಕುವಾಗ, ಬೇರೆ ಬೇರೆ ಆಕಾರಗಳನ್ನು ಕೊರೆಯುವಾಗ, ಕೆತ್ತುವಾಗ, ಉಜ್ಜುವಾಗ, ನಯಗೊಳಿಸುವಾಗ ಬೇರೆ ಬೇರೆ ಸಂದರ್ಭಗಳಲ್ಲಿ ಬಂಗಾರದ ಸೂಕ್ಷ್ಮವಾದ ಚೂರುಗಳು ಮಣ್ಣಿನಲ್ಲಿ ಕೂಡುವುದುಂಟು. ಮಣ್ಣಿನೊಳಗಿನ ಬಂಗಾರವನ್ನು ಪ್ರತ್ಯೇಕಿಸಲು ಪಾದರಸವನ್ನು ಬಳಸುತ್ತಾರೆ. ತಕ್ಷಣ ಪಾದರಸ ಹಾಗೂ ಬಂಗಾರದ ಮಿಶ್ರಣವನ್ನು ಮೂಸೆಯ ಸಹಾಯದಿಂದ ಕಾಯಿಸದಿದ್ದಲ್ಲಿ ಬಂಗಾರ ಕರಗುತ್ತದೆ. ಆದ್ದರಿಂದ ಕಾಯಿಸಿದಾಗ ಪಾದರಸ ಆವಿಯಾಗುತ್ತದೆ. ಬಂಗಾರ ಮಾತ್ರ ಶುದ್ಧವಾಗಿ ಮೂಸೆಯಲ್ಲಿ ಉಳಿಯುತ್ತದೆ.

ಚಿನ್ನವನ್ನು ಶುದ್ಧೀಕರಿಸಲು ಅಡಿಗೆ ಸೋಡನ್ನು ಬಳಸುತ್ತಾರೆ. ಆಭರಣಗಳನ್ನು ಮಾಡಲು ಮೂಸೆಯಲ್ಲಿ ಬಂಗಾರ, ಬೆಳ್ಳಿ, ತಾಮ್ರದ ಚೂರುಗಳನ್ನು ತೆಗೆದುಕೊಂಡು 'ಪಟಕಾರ'ದ ಸಹಾಯದಿಂದ ಅಗ್ಗಿಷ್ಟಿಕೆಯ ಉರಿ ಮೇಲೆ ಇಡುತ್ತಾರೆ. ಉರಿಯನ್ನು ಊದುಗೊಳವೆಯಿಂದ ಗಾಳಿ ಊದಿ ಜಾಸ್ತಿ

ಮಾಡುತ್ತಾರೆ. ಬಂಗಾರ ಕರಗುತ್ತಿರುವಾಗ ಒಂದೆರಡು ಚಿಟಿಕೆಯಷ್ಟು ಅಡಿಗೆ ಸೋಡವನ್ನು ಹಾಕುತ್ತಾರೆ. ಇದರಿಂದ ಮೂಸೆಯೊಳಗಿರುವ ವಿವಿಧ ಲೋಹಗಳ ಮಿಶ್ರಣ ಗಂಟಾಗದೆ ಚೆನ್ನಾಗಿ ಬೆರೆಯುತ್ತದೆ. ಜೊತೆಗೆ ಅಡಿಗೆ ಸೋಡ ಬಳಸುವುದರಿಂದ ಚಿನ್ನದಲ್ಲಿನ ಕಲ್ಮಶ ಹೋಗಿ ಪ್ರಕಾಶತೆ ಉಂಟಾಗುತ್ತದೆ. ಇದರ ಜೊತೆಗೆ ಸಲನವಸಾಗರವನ್ನು ಬೆರಸುತ್ತಾರೆ. ಇದರಿಂದ ದ್ರವ ಬಂಗಾರವು ಸಲವೂ ಮೂಸೆಯೊಳಗೆ ಉಳಿಯದಂತೆ ಸಂಪೂರ್ಣ ಹೊರಬರಲು ಸಹಕಾರಿಯಾಗುತ್ತದೆ. ಮಣ್ಣಿನಲ್ಲಿನ ಅಶುದ್ಧ ಚಿನ್ನವನ್ನು ಶುದ್ಧಗೊಳಿಸಲು ಪಾದರಸದ ಜೊತೆಗೆ ಅಡಿಗೆ ಉಪ್ಪು ಅಥವಾ ಸಲಗಂಧಕವನ್ನು ಹಾಕಿ ಮೂಸೆಯಿಂದ ಕಾಯಿಸಿದರೆ ಬಂಗಾರ ಶುದ್ಧವಾಗುತ್ತದೆ. ಬಂಗಾರದಲ್ಲಿ ಜಿಡ್ಡಿನ ಅಂಶವಿದ್ದಲ್ಲಿ, ಹೊಳಪು ಕಡಿಮೆ ಇದ್ದಲ್ಲಿ ಗಂಧಕಾಮ್ಲವನ್ನು ಹಾಕಿ ಕಾಯಿಸಿದರೆ ಅದು ಶುದ್ಧವಾಗುವುದರ ಜೊತೆಗೆ ಹೊಳುಪು ಉಂಟಾಗುತ್ತದೆ. ಆಭರಣಗಳಲ್ಲಿ ಟೊಳ್ಳಾದ ಭಾಗ ಇದ್ದರೆ ಅದನ್ನು ಅರಗಿನಿಂದ ಭರ್ತಿ ಮಾಡುತ್ತಾರೆ. ಆಗ ಆಭರಣಗಳನ್ನು ಒತ್ತಿದರೂ ಉಬ್ಬಿದಂತಿರುವ ಭಾಗ ಚಪ್ಪಟೆಯಾಗದು.

ರೋಸ್‌ಗಡ್ಡೆ: ಇದು ಗ್ರೀಸ್ ಮಾದರಿಯಲ್ಲಿರುತ್ತದೆ. ಇದರಿಂದ ಆಭರಣಗಳನ್ನು ಉಜ್ಜುವುದರಿಂದ ಸಂಪೂರ್ಣ ಪಾಲಿಷ್ ಮಾಡಿದಂತಾಗುತ್ತದೆ. ಈ ಪಾಲಿಷ್ ಮಾಡಿದ ನಂತರ ಆಮ್ಲದಲ್ಲಿ ಪಾಲಿಷ್ ಮಾಡುವ ಅಗತ್ಯವಿರುವುದಿಲ್ಲ. ಇದನ್ನು 'ಪಾಲಿಷ್‌ದಾರ' ಎನ್ನಲಾಗುತ್ತದೆ. ಆಮ್ಲದ ಪಾಲಿಷ್‌ನಲ್ಲಿ ಚಿನ್ನದ ಅಂಶ ಕರಗುವ ಸಾಧ್ಯತೆ ಇದೆಯಾದರೂ ದಾರದ ಪಾಲಿಷ್‌ನಲ್ಲಿ ಚಿನ್ನ ಕರಗಲು ಸಾಧ್ಯವಿಲ್ಲ.

ಆಭರಣಗಳನ್ನು ಸಿದ್ಧಗೊಳಿಸಲು ಮುಖ್ಯವಾಗಿ ಬೆಳಕು ಹಾಗೂ ಪರಿಶುದ್ಧ ಗಾಳಿ ಅಗತ್ಯ. ಬೆಳಕಿಗಾಗಿ ವಿದ್ಯುತ್‌ನ್ನು ಆಶ್ರಯಿಸುವುದುಂಟು. ಆಭರಣಗಳನ್ನು ತೂಕ ಮಾಡಲು ತ್ರಾಸು ಅಥವಾ ತಕ್ಕಡಿ ಬಳಸುತ್ತಾರೆ. ಮಿಲಿಗ್ರಾಂ ಬಟ್ಟುಗಳು, ಗುಲಗಂಜಿಗಳು ಅಳತೆಯ ಮಾಪನಗಳಾಗಿ ಬಳಸುವ ಉಪಕರಣಗಳಾಗಿವೆ.

ಉಂಗುರ ಮುಂತಾದ ಆಭರಣಗಳನ್ನು ತಯಾರಿಸುವಾಗ ಮೊದಲು 'ಮೌಲ್ಡ್' ಅಥವಾ ಅಚ್ಚು ಮಾಡಬೇಕಾಗುತ್ತದೆ. ಇದನ್ನೆ ಅಚ್ಚು ಹಾಕುವಿಕೆ ಎನ್ನುತ್ತಾರೆ. ಅಚ್ಚು ಹಾಕಲು ಅಚ್ಚಿನ ಮಣಿಗೆ ಮಣ್ಣನ್ನು ಸಿದ್ಧಗೊಳಿಸುತ್ತಾರೆ. ಇದನ್ನು ಶುದ್ಧೀಕರಣ ಎನ್ನುತ್ತಾರೆ.

ಮಣ್ಣನ್ನು ಶುದ್ಧೀಕರಣ ಮಾಡುವ ಬಗೆ (ಮೌಲ್ಡಿಂಗ್ ಮಣ್ಣನ್ನು ತಯಾರಿಸುವ ಬಗೆ):

ಮರಳನ್ನು ತಂದು ಜರಡಿ ಹಿಡಿಯಬೇಕು. ನಂತರ ಹತ್ತಿ ಬಟ್ಟೆಯಿಂದ ಜರಡಿ ಹಿಡಿದ ಮಣ್ಣನ್ನು ಸೋಸಬೇಕು. ಆಗ ಬಹಳ ನಯವಾದ ಮಣ್ಣು ಬರುತ್ತದೆ. ಒಂದು ಪಿಂಗಾಣಿ ಬಟ್ಟಲಲ್ಲಿ ನೂರು ಗ್ರಾಂ ಹರಳೆಣ್ಣೆ, ೧/೪ ಕೆ.ಜಿ. ರೋಜಲು, ೫೦ ಗ್ರಾಂ ಮುಸಮರವೆಂಬ

ಗಿಡಮೂಲಿಕೆಯನ್ನು ಬೆರೆಸಿ ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಬೇಕು. ಅನಂತರ ಇದಕ್ಕೆ ಜಿರಡಿ ಮಣ್ಣನ್ನು ಪಾಕದೊಳಕ್ಕೆ ಸಲಸಲವಾಗಿ ಹಾಕಿಕೊಂಡು ಗಂಟು ಬಾರದಂತೆ ಒಂದು ಕಡ್ಡಿಯ ಸಹಾಯದಿಂದ ತಿರುಗುತ್ತಿರಬೇಕು. ಅದು ಮೃದುವಾಗುವವರೆಗೆ ಮಣ್ಣನ್ನು ಸೇರಿಸುತ್ತಿರಬೇಕು. ನಂತರ ಅದನ್ನು ಆರಿಸಿ ಮೌಲ್ಡಿಂಗ್ ಮಾಡಲು ಬಳಸಬಹುದು. ಇದನ್ನು ಮಣ್ಣನ್ನು ಶುದ್ಧಿಗೊಳಿಸುವುದು ಎನ್ನುತ್ತಾರೆ.

ಅಚ್ಚು ಹಾಕುವಿಕೆ (ಮೌಲ್ಡಿಂಗ್ ಮಾಡುವಿಕೆ): ಅಚ್ಚು ಹಾಕುವ ಮಣಿಗಳು ಕಬ್ಬಿಣದ ಎರಡು ಕವಾಟಗಳು. ಚಿಕ್ಕದರಿಂದ ಹಿಡಿದು ದೊಡ್ಡದವರೆಗೆ ವಿವಿಧ ಗಾತ್ರದ ಅಚ್ಚುಗಳಿರುತ್ತವೆ. ಉಂಗುರಗಳ ತಯಾರಿಕೆಯ ಸಂಖ್ಯೆಗೆ ಅನುಗುಣವಾಗಿ ಅಚ್ಚುಗಳನ್ನು ಬಳಸುತ್ತಾರೆ. ಅಚ್ಚಿನ ಮಣಿಗೆ ಮೌಲ್ಡಿಂಗ್ ಮಣ್ಣನ್ನು ತುಂಬುತ್ತಾರೆ. ಎರಡು ಕವಾಟಗಳನ್ನು ಬೇರೆ ಮಾಡಿ ಅವುಗಳ ನಡುವೆ ತಾವು ಮಾಡಬೇಕಿರುವ ಆಭರಣದ ಆಕಾರದ ಮಾದರಿಗಳನ್ನು ಇಟ್ಟು ಮತ್ತೆ ಕೂಡಿಸುತ್ತಾರೆ. ಅಚ್ಚನ್ನು ಚೆನ್ನಾಗಿ ಅದುಮಿ ಒಳಗಡೆ ಇಟ್ಟಿರುವ ಆಭರಣಗಳನ್ನು ಗುರುತು ಬೀಳುವಂತೆ ಮಾಡುತ್ತಾರೆ. ಕವಾಟಗಳನ್ನು ತೆರೆದು ಮಾದರಿ ಆಭರಣಗಳನ್ನು ಹೊರಗೆ ತೆಗೆಯುತ್ತಾರೆ. ಅದುವರೆಗೆ ಇದ್ದ ಆಭರಣಗಳ ಗುರುತಿನ ಭಾಗದಲ್ಲಿ ಕುಳಿ ಬಿದ್ದಿರುತ್ತದೆ. ಆ ಭಾಗಕ್ಕೆ ಸಲಚಾಕ್ ಪೌಡರನ್ನು ಸಿಂಪಡಿಸುತ್ತಾರೆ. ಇದರಿಂದ ಚಿನ್ನವು ಆ ಮಾರ್ಕಿನೊಳಗೆ ಇಳಿದು ಕವಾಟಗಳನ್ನು ತೆರೆದಾಗ ಮಣ್ಣಿಗೆ ಅಂಟದೆ ಅಲುಗಿಸಿದರೆ ಕೆಳಗೆ ಬೀಳಲು ಶುರುವಾಗುತ್ತದೆ. ಮೂಸೆಯಲ್ಲಿ ಬಂಗಾರ, ಬೆಳ್ಳಿ ಹಾಗೂ ತಾಮ್ರದ ಚೂರುಗಳನ್ನು ಹಾಕುತ್ತಾರೆ. ಕುಮಟಿಯು ಬೆಂಕಿಯನ್ನು ನೀಲ್ಗಾರದಿಂದ ಚದುರಿಸಿ, ಊದುಗೊಳವೆಯಿಂದ ಬೆಂಕಿಯನ್ನು ಊದುತ್ತಾರೆ. ಜೊತೆಗೆ ನವಸಾರವನ್ನು ಬಳಸುವುದರಿಂದ ಚಿನ್ನವು ಮೂಸೆಯಲ್ಲಿ ಸಲವೂ ಉಳಿಯುವುದಿಲ್ಲ. ಇದನ್ನು 'ಬಂಗಾರದ ದ್ರಾವಣ' ಎನ್ನುತ್ತಾರೆ. ದ್ರವ ಬಂಗಾರವನ್ನು ಅಚ್ಚುಗಳಿಗೆ ಸುರಿದಾಗ ಆಕಾರಗಳಿಗೆ ತಕ್ಕಂತೆ ಗಟ್ಟಿಯಾಗುತ್ತದೆ. ಕೆಲವು ಸೆಕೆಂಡುಗಳ ನಂತರ ಜೋಡಿಸಿರುವ ಕವಾಟುಗಳನ್ನು ಬಿಚ್ಚಿ ಅಚ್ಚು ಹಾಕಿದ ಆಭರಣಗಳನ್ನು ತಮ್ಮ ಆಕಾರ, ಗಾತ್ರ, ತೂಕಗಳಿಗನುಗುಣವಾಗಿ ತಯಾರಿಸಿಕೊಳ್ಳುತ್ತಾರೆ. ಇದನ್ನು ಅಚ್ಚು ಹಾಕುವಿಕೆ ಅಥವಾ ಮೌಲ್ಡಿಂಗ್ ಮಾಡುವಿಕೆ ಎನ್ನುವರು.

ಆಭರಣಗಳಿಗೆ ಪಾಲಿಷ್ ಮಾಡುವ ವಿಧಾನ: ಹಿಂದಿನ ದಿನಗಳಲ್ಲಿ ಆಭರಣಗಳನ್ನು ಪಾಲಿಷ್ ಮಾಡಲು ಹಳೆಯ ವಿಧಾನಗಳನ್ನು ಬಳಸುತ್ತಿದ್ದರು. ಹಿಂದೆ ಹರಳಿಲ್ಲದ ಪ್ಲೈನ್ ಆಭರಣಗಳೇ ಇದ್ದುದರಿಂದ ಕಡಿಮೆ ಖರ್ಚಿನಲ್ಲಿ ಪಾಲಿಷ್ ಮಾಡುವ ವಿಧಾನ ಬಳಕೆಯಲ್ಲಿತ್ತು. ಆಭರಣಗಳಲ್ಲೂ ಮುತ್ತು, ಹವಳ, ರತ್ನ, ಹರಳುಗಳ ಮಾದರಿಗೆ ಮಾರ್ಪಾಟಾದಂತೆಲ್ಲಾ ಪಾಲಿಷ್ ಮಾಡುವ ವಿಧಾನವೂ ಬದಲಾವಣೆ ಆಗಿದೆ.

ಬೆಳ್ಳಿ ಆಭರಣಗಳಿಗೆ ನೇರವಾಗಿ 'ಚಿನ್ನದ ಪಾಲಿಷ್' ಅಥವಾ 'ಚಿನ್ನದ ಲೇಪನ' ಮಾಡಬಹುದಾದರೂ ತಾಮ್ರಕ್ಕೆ ನೇರವಾಗಿ ಮಾಡಲು ಸಾಧ್ಯವಿಲ್ಲ. ಆದ್ದರಿಂದ ತಾಮ್ರದವುಗಳಿಗೆ ಮೊದಲು 'ಬೆಳ್ಳಿಯ ಲೇಪನ' ಮಾಡಿ ನಂತರ ಅದರ ಮೇಲೆ 'ಚಿನ್ನದ ಲೇಪನ' ಮಾಡಬಹುದು. ಪಿಂಗಾಣಿ ಸಾಮಾನುಗಳ ಮೇಲೆ ಚಿತ್ರಿಸಲು 'ದ್ರವ ಬಂಗಾರ' ಬಳಸುತ್ತಾರೆ. ಸಸ್ಯ ಜನ್ಯ ಎಣ್ಣೆಯಲ್ಲಿ ಸೂಕ್ಷ್ಮ ಕಣಗಳ ರೂಪದಲ್ಲಿ ವಿಲಂಬಿತವಾಗಿರುವ ಚಿನ್ನಕ್ಕೆ ದ್ರವಬಂಗಾರ ಎನ್ನುತ್ತಾರೆ.

ಒಂದು ಪಿಂಗಾಣಿ ಬಟ್ಟಲಿನಲ್ಲಿ ಒಂದು ಲೀಟರನಷ್ಟು ಶುದ್ಧವಾದ ನೀರನ್ನು ತೆಗೆದುಕೊಳ್ಳಬೇಕು. ಅದರಲ್ಲಿ ೧/೪ ಔಂಸನಷ್ಟು ನೈಟ್ರಿಕ್ ಆಮ್ಲವನ್ನು ಸೇರಿಸಬೇಕು. ಎರಡು ಗ್ರಾಂನಷ್ಟು ಮರಾಠಿಕ್ ಆಮ್ಲವನ್ನು ಕೂಡಿಸಿ ಜೊತೆಗೆ ೨.೫ ಗ್ರಾಂ ತೂಕಷ್ಟು ಸಯನೈಡನ್ನು ಮಿಶ್ರಣ ಮಾಡಬೇಕು.

ಒಂದು ಗಾಜಿನ ಬೀಕರಿನಲ್ಲಿ ಅರ್ಧಗ್ರಾಂನಷ್ಟು ಅಪರಂಜಿಯ ತೆಳುವಾದ ತಗಡನ್ನು ತೆಗೆದುಕೊಂಡು ಕತ್ತರಿಯ ಸಹಾಯದಿಂದ ಸಣ್ಣ ಸಣ್ಣ ಚೂರುಗಳನ್ನಾಗಿ ಮಾಡಿ ಹಾಕಬೇಕು. ಅದಕ್ಕೆ ನೈಟ್ರಿಕ್ ಆಮ್ಲವನ್ನು ಹಾಕಿ ಬೆಂಕಿಯಲ್ಲಿ ಚೆನ್ನಾಗಿ ಈ ಪುಡಿಯನ್ನು ಪಿಂಗಾಣಿ ಬಟ್ಟಲಿನಲ್ಲಿನ ಮಿಶ್ರಣದೊಳಕ್ಕೆ ಸುರಿದು ಬೆಂಕಿಯ ಮೇಲಿಟ್ಟು ಚೆನ್ನಾಗಿ ಕುದಿಯುವಂತೆ ಕಾಯಿಸಬೇಕು. ಕುದಿದ ನಂತರ ಕೆಳಗಿಳಿಸಿ ಅದನ್ನು ತಂಪಾಗುವಂತೆ ಆರಿಸಬೇಕು. ಈ ದ್ರಾವಣವನ್ನು ಚಿನ್ನದ ದ್ರಾವಣ ಎನ್ನುತ್ತಾರೆ. ಒಂದು 'ಎಲಿಮಿನೇಟರ್' ಅನ್ನು ತೆಗೆದುಕೊಂಡು ಅದಕ್ಕೆ ಎರಡು ವೈರ್‌ಗಳನ್ನು ಜೋಡಿಸಬೇಕು. ಅದರಲ್ಲಿ ಒಂದು ವೈರ್ ಸ್ವಲ್ಪ ಉದ್ದವಿರುವಂತೆ ಎಚ್ಚರ ವಹಿಸಬೇಕು. ಈ ಉದ್ದವಾದ ವೈರಿಗೆ ತೆಳ್ಳಗಿನ ತಾಮ್ರದ ತಂತಿಯನ್ನು ಸುತ್ತಬೇಕು. ಈಗ ನಾವು ಪಾಲಿಷ್ ಮಾಡಬೇಕಾದ ಆಭರಣವನ್ನು ಮೊದಲು ಬೆಂಕಿಯಲ್ಲಿ ಸಲಬಿಸಿ ಮಾಡಬೇಕು. ಬಿಸಿಯಾದ ಮೇಲೆ ಅದನ್ನು 'ಗಂಧಕಾಮ್ಲ'ದಲ್ಲಿ ಅದ್ದಿದರೆ ಬೆಳ್ಳಗಾಗುತ್ತದೆ. ಅದನ್ನು ತೆಗೆದು ಅಂಟುವಾಳದ ಕಾಯಿ ದ್ರಾವಣದಲ್ಲಿ ಕಾಯಿಸಿ ಒಂದು ಪಾತ್ರೆಯಲ್ಲಿ ಅಣಿಯಾಗಿ ಇಟ್ಟಿರಬೇಕು. ಅದರಲ್ಲಿ ಚೆನ್ನಾಗಿ ನೂರೆ ಬರುವಂತೆ 'ಹಿತ್ತಾಳಿ ಬ್ರಷ್' ಸಹಾಯದಿಂದ ಉಜ್ಜಬೇಕು. ಅನಂತರ ಎಲಿಮಿನೇಟರಿನ ಮತ್ತೊಂದು ವೈರಿಗೆ ಇದನ್ನು ಕಟ್ಟಬೇಕು. ಜೊತೆಗೆ ಪಕ್ಕದಲ್ಲಿ ಮತ್ತೊಂದು ಪಾತ್ರೆಯಲ್ಲಿ ಶುದ್ಧವಾದ ನೀರನ್ನು ಇಟ್ಟುಕೊಂಡಿರಬೇಕು. ಈಗ ಎಲಿಮಿನೇಟರ್ ವೈರುಗಳಿಗೆ ಅಳವಡಿಸಿರುವ ವೈರುಗಳೆರಡನ್ನು ಎರಡು ಕೈಗಳಲ್ಲೂ ಹಿಡಿದು ಪಿಂಗಾಣಿ ಬಟ್ಟಲಲ್ಲಿನ ಚಿನ್ನದ ದ್ರಾವಣದೊಳಗೆ ನಾಲ್ಕೈದು ನಿಮಿಷಗಳವರೆಗೆ ಅದ್ದಿ ಚೆನ್ನಾಗಿ ಅಲುಗಾಡಿಸುತ್ತಿರಬೇಕು. ನಂತರ ತೆಗೆದು ಶುದ್ಧವಾದ ನೀರಿನಲ್ಲಿ ಹಾಕಿ ಕಲಕಿದರೆ ಅದು ಶುದ್ಧವಾದ ಬಣ್ಣಕ್ಕೆ ಬರುತ್ತದೆ. ಚೆನ್ನಾಗಿ ಹೊಳಪು ಬರುತ್ತದೆ. ಇದನ್ನೇ ಚಿನ್ನದ ಪಾಲಿಷ್ ಅಥವಾ ಚಿನ್ನದ ಲೇಪನ ಎನ್ನುತ್ತಾರೆ.

ಬೆಳ್ಳಿಯ ಪಾಲಿಷ್(ಬೆಳ್ಳಿಯ ಲೇಪನ): ಐದು ಗ್ರಾಂನಷ್ಟು ಶುದ್ಧವಾದ ಬೆಳ್ಳಿಯ ತೆಳುವಾದ ತಗಡನ್ನು ತೆಗೆದುಕೊಂಡು ಕತ್ತರಿಯ ಸಹಾಯದಿಂದ ಸಣ್ಣ ಚೂರುಗಳನ್ನಾಗಿ ಕತ್ತರಿಸಿಕೊಳ್ಳಬೇಕು.

ಈ ಚೂರುಗಳನ್ನು ಒಂದು ಪಿಂಗಾಣಿ ಬಟ್ಟಲಿನಲ್ಲಿ ಹಾಕಿ ಅದಕ್ಕೆ ೧/೨ ಔಂಸಿನಷ್ಟು ನೈಟ್ರಿಕ್ ಆಮ್ಲವನ್ನು ಬೆರೆಸಿ ಬೆಂಕಿಯ ಮೇಲಿಟ್ಟು ಚೆನ್ನಾಗಿ ಕುದಿಸಬೇಕು. ಈ ದ್ರಾವಣಕ್ಕೆ ಎರಡು ಲೀಟರಿನಷ್ಟು ಶುದ್ಧವಾದ ನೀರನ್ನು ಹಾಕಿ, ಚೆನ್ನಾಗಿ ಕಲಕಬೇಕು. ಆಗ ಬೆಳ್ಳಿಯು ಪುಡಿ ರೂಪವಾಗುತ್ತದೆ. ಸಲಸಮಯದವರೆಗೆ ಇದನ್ನು ಅಲುಗಾಡಿಸದೆ ಹಾಗೆ ಇಡಬೇಕು. ಭಾರವಾದ ಬೆಳ್ಳಿಯ ಪುಡಿಯಲ್ಲಾ ಪಿಂಗಾಣಿ ಬಟ್ಟಲಿನ ತಳಭಾಗದಲ್ಲಿ ಶೇಖರವಾಗುತ್ತದೆ. ಆಗ ಮೇಲಿನ ನೀರನ್ನೆಲ್ಲ ಬಸಿಯಬೇಕು. ಕೆಳಭಾಗದಲ್ಲಿ ಉಳಿದಿರುವ ಬೆಳ್ಳಿಯ ಪುಡಿ ದ್ರಾವಣಕ್ಕೆ ಎರಡು ಲೀಟರ್‌ನಷ್ಟು ಶುದ್ಧವಾದ ನೀರನ್ನು ಹಾಕಿ, ಅದಕ್ಕೆ ಒಂದು ಹಿಡಿಯಷ್ಟು ಅಡಿಗೆ ಉಪ್ಪನ್ನು ಸೇರಿಸಬೇಕು. ಜೊತೆಗೆ ಸುಮಾರ ೫ ಗ್ರಾಂನಷ್ಟು ಸಯನೈಡ್ ಬೆರೆಸಿದರೆ ಬೆಳ್ಳಿಯೆಲ್ಲವೂ ಕರಗಿ ಬೆಳ್ಳನೆಯ ದ್ರಾವಣವಾಗುತ್ತದೆ. ಇದನ್ನೆ 'ಬೆಳ್ಳಿಯ ದ್ರಾವಣ' ಎನ್ನುತ್ತಾರೆ. ಅನಂತರ ಬೆಳ್ಳಿ ಪಾಲಿಷ್ ಮಾಡಬೇಕಾದ ಆಭರಣವನ್ನು 'ಚಿನ್ನದ ಪಾಲಿಷ್' ಮಾಡಿದಂತೆಯೇ, ಆಭರಣದೊಡನೆ ಸತುವಿನ ತಂತಿಯೊಂದನ್ನು ಹಿಡಿದು 'ಬೆಳ್ಳಿಯ ದ್ರಾವಣ'ದಲ್ಲಿ ನಾಲ್ಕೈದು ನಿಮಿಷದೊಳಗೆ ಅಲುಗಾಡಿಸಿದರೆ, ಆಭರಣದ ಮೇಲೆ 'ಬೆಳ್ಳಿಯ ಲೇಪನ' ವಾಗುತ್ತದೆ. ಇದನ್ನೇ ಬೆಳ್ಳಿಯ ಪಾಲಿಷ್ ಅಥವಾ ಲೇಪನ ಮಾಡುವುದು ಎನ್ನುತ್ತಾರೆ..

ಮಸೆ ಹಾಕುವುದು: ಉಂಗುರಕ್ಕೆ ಹರಳನ್ನು ಕೂಡಿಸಿದ ನಂತರ ಹರಳಿನ ಸುತ್ತಲೂ ಇರುವ ಚಿನ್ನದ ಪಿಸರನ್ನು ಪೊಗರೆಯ ಸಹಾಯದಿಂದ ಮಡಿಸುವರು. ಇದರ ಮೇಲೆ ಮಸೆ ಸುತ್ತಿಗೆಯಿಂದ ಬಡಿದು ಹರಳು ಬೀಳದಂತೆ ನಯವಾಗಿ ಕೂರಿಸುತ್ತಾರೆ. ಇದನ್ನೇ ಮಸೆ ಹಾಕುವುದು ಎನ್ನುತ್ತಾರೆ. ಮಸೆ ಹಾಕಲು 'ಪೊಗರೆ'ಗಳು, ಇಕ್ಕಳ, ಸುತ್ತಿಗೆ ಹಿಡಿ ಮುಂತಾದವುಗಳ ಅಗತ್ಯವಿದೆ.

ಚಿನ್ನಾಭರಣಗಳ ತಯಾರಿ ಕೆಲಸವನ್ನು ಬೇರೆ ಬೇರೆ ಪ್ರಕಾರಗಳಾಗಿ ವಿಂಗಡಿಸಬಹುದು.

೧. ಚಿನ್ನದ ಗಟ್ಟಿಯನ್ನು ಕಾಯಿಸಿ ಬಡಿದು ತಗಡು ಅಥವಾ ಸರಿಗೆ ತಯಾರಿಸುವುದು.

೨. ತಗಡು ಇಲ್ಲವೇ ಸರಿಗೆಯನ್ನು ಬೇಕಾದ ಆಕೃತಿಯಲ್ಲಿ ಕತ್ತರಿಸಿ, ಜೋಡಿಸಿ ಬೆಸುಗೆ ಹಾಕುವುದು ಅಥವಾ ಸೂಕ್ಷ್ಮವಾದ ತಂತಿಗಳಿಂದ ಜಾಲಾಂದ್ರ ವಿನ್ಯಾಸಗಳನ್ನು ಮಾಡಿ ಬೆಸುಗೆ ಹಾಕುವುದು.

೩. ಎರಕ ಹೊಯಿದು ಆಭರಣಗಳನ್ನು ತಯಾರಿಸುವುದು ಅಥವಾ ತಗಡುಗಳನ್ನು ಅಚ್ಚಿನಲ್ಲಿಟ್ಟು ಅಚ್ಚು ಹೊಡೆಯುವುದು.

೪. ಗರಗಸದಿಂದ ಕತ್ತರಿಸಿ ಅರದಿಂದ ಉಜ್ಜಿ ಆಭರಣಗಳಿಗೆ ರೂಪು ಕೊಡುವುದು.

೫. ಆಭರಣಗಳಿಗೆ ಹರಳು ಕೂರಿಸುವುದು. ಆಕರ್ಷಕವಾಗುವಂತೆ ಆಭರಣದ ಮೇಲೆ ಕೆತ್ತನೆ ಕೆಲಸ ಮಾಡುವುದು, ಚಿತ್ತಾರಗಳನ್ನು ಬಿಡಿಸುವುದು.

೬. ಹೊಳಪು ನೀಡುವುದು ಆಭರಣ ತಯಾರಿಕೆಯ ಕೊನೆಯ ಹಂತ, ಪಾಲಿಷ್ ಮಾಡುವುದು, ಕಡ್ಡಿಯಿಂದ ಆಭರಣಗಳನ್ನು ತೀಡಿ ಹೊಳಪು ಭರಿಸುವುದು. ಬ್ರಶ್‌ನಿಂದ ತಿಕ್ಕಿ ಹೊಳಪು

ಭರಿಸುವುದು. ಹೀಗೆ ಬೇರೆ ಬೇರೆ ವಿಧಾನಗಳಿಂದ ಆಭರಣಗಳನ್ನು ಹೊಳೆಯುವಂತೆ ಮಾಡಲಾಗುತ್ತದೆ.

ಈ ಎಲ್ಲಾ ಕೆಲಸಗಳನ್ನು ಅಕ್ಕಸಾಲಿಗರು ಒಬ್ಬಂಟಿಗನಾಗಿ ಅಥವಾ ಹಲವಾರು ಪರಿಣತರು ಸೇರಿಕೊಂಡು ಶ್ರಮ ವಿಭಜನೆ ಮಾಡಿಕೊಂಡು ಕಾರ್ಯನಿರ್ವಹಿಸುತ್ತಾರೆ. ಅಕ್ಕಸಾಲಿಗರು ಒಂದೊಂದು ಪ್ರಕಾರದ ಕೆಲಸದಲ್ಲಿ ವಿಶೇಷ ಪರಿಣತಿ ಪಡೆದವರಿರುತ್ತಾರೆ. ಹಾಗೆ ಒಂದೊಂದು ಬಗೆಯ ಆಭರಣ ತಯಾರಿಕೆಯಲ್ಲಿಯೂ ಪರಿಣತಿಯನ್ನು ಹೊಂದಿದವರಿರುತ್ತಾರೆ. ಒಟ್ಟು ತಮ್ಮ ಕಲ್ಪನಾ ಸಾಮರ್ಥ್ಯ ಮತ್ತು ಕ್ರಿಯಾಶೀಲತೆಯಿಂದ ಗ್ರಾಹಕರ ಅಭಿರುಚಿಗೆ ತಕ್ಕಂತೆ ಕೆಲಸ ಮಾಡಿ ಆಭರಣಗಳನ್ನು ಅಂದ ಚೆಂದವಾಗಿ ರಚಿಸಿ ನೋಡುಗರ ಮನಸೂರೆಗೊಳ್ಳುವಂತೆ ಮಾಡುತ್ತಾರೆ.

ತಯಾರಿಸುವ ಆಭರಣಗಳು:

ಬಳ್ಳಾರಿ ಜಿಲ್ಲೆಯ ವಿವಿಧ ಪ್ರದೇಶಗಳ ಅಕ್ಕಸಾಲಿಗರು ತಮ್ಮ ವಿಶೇಷ ಪರಿಣತಿ, ಕಲ್ಪನಾ ಸಾಮರ್ಥ್ಯ ಮತ್ತು ಕ್ರಿಯಾಶೀಲತೆಯಿಂದ ಹಾಗೂ ಜನರ ಅಭಿರುಚಿಗೆ ತಕ್ಕಂತೆ ವೈವಿಧ್ಯಮಯವಾದ ಆಭರಣಗಳನ್ನು ತಯಾರಿಸುತ್ತಾರೆ. ಪರಿಣತ ಅಕ್ಕಸಾಲಿಗರು ತಮ್ಮ ಕಲಾ ಕೌಶಲ್ಯತೆಯಲ್ಲಿ ವಿವಿಧ ರೀತಿಯ ಆಭರಣಗಳ ತಯಾರಿಕೆಯ ಮೂಲಕ ವ್ಯಕ್ತಪಡಿಸುತ್ತಾರೆ.

ಅಕ್ಕಸಾಲಿಗರು ತಯಾರು ಮಾಡುವ ಆಭರಣಗಳನ್ನು ಈ ರೀತಿಯಾಗಿ ವರ್ಗೀಕರಿಸಬಹುದು. ಸ್ತ್ರೀಪುರುಷ ಹಾಗೂ ಮಕ್ಕಳ ಆಭರಣಗಳು, ಅವುಗಳೆಂದರೆ ಮೂಗಿನ ಆಭರಣಗಳು, ಮೂಗುತಿ, ಮೂಗುಬಟ್ಟು, ಬುಲಾಕು, ಓಲೆಗಳು, ಬಿಚ್ಚೋಲೆ, ಲಾಳೋಲೆ, ವಾಲಿ, ಬೆಂಡೋಲೆ, ಬುಗುಡಿ.

ಕಂಠಾಭರಣಗಳು: ಚೈನು ಅವಲಕ್ಕಿ ಸರ, ಕಾಫಿ ಬೀಜದ ಸರ, ಕಾಸಿನ ಸರ, ಎಳೆಸರ, ಜೋಮಾಲಿ, ಮಣಿಸರ, ದೊಡ್ಡ ಗುಂಡು, ಸಣ್ಣ ಗುಂಡಿನ ಸರ, ಕಂಠಿ ಸರ, ಪದಕ, ಕಮಲಹಾರ, ಅಡ್ಡಿಕೆ, ಕೊರಳಪಟ್ಟಿ, ಮಾವಿನಕಾಯಿ ಸರ, ಮೋಹದ ಮಾಲೆ, ಮುತ್ತಿನ ಕಂಠಿ.

ನಡುವಿನ ಆಭರಣಗಳು: ಪಟ್ಟಿ, ಒಡ್ಯಾಣ, ಡಾಬು, ಸೊಂಟದ ಪಟ್ಟಿ, ಸಾದಾ ಪಟ್ಟಿ, ಕಾಂಚಿ ದಾಮ, ಗೆಜ್ಜೆ ಡಾಲು, ಚಿನ್ನದ ಕೊಂಡಿ, ವಜ್ರಡಾಬು, ಚಿನ್ನಗಂಜಿಸರ, ಮೇಖಲೆ.

ತೋಳಿನ ಆಭರಣಗಳು: ತೋಳಬಂದಿ, ನಾಗಬಂದಿ, ಬಾಜೂಬಂದ, ನಾಗಮೂರಗಿ, ಕಂಕಣ ಡಾಬು, ಬಾಜುಬಂದ, ಎಡಗೈಮುರಿ, ಬಾಹುಪುರ, ಬಂಧಿ, ಸರಗಿ, ರಟ್ಟೆ ಬಳೆ, ಉಡುದಾರ.

ಬಳೆಗಳು: ಮುತ್ತಿನ ಬಳೆ, ಗೀರಬಳೆ, ದಂತಬಳೆ, ನೀರಗಿ ಬಳೆ, ವಜ್ರದ ಬಳೆ, ತೋಡೆ ಗಟ್ಟಿಮುರಿ, ಟೊಳ್ಳುಮುರಿ, ಡೋರೆ ಕಂಕಣ, ದುಂಡು ಕಂಕಣ, ಹರಡಿ ಕಂಕಣ, ಜೋಡು ಕಂಕಣ, ಕಡಗ, ಸಿಂಹಾದಾಕೃತಿ ಕಂಕಣ ಕೈಕಟ್ಟು, ಕಮಲದ ದೊರೆ.

ಬೆರಳಿನುಂಗುರ: ವಂಕಿ ಉಂಗುರ, ಅಕ್ಕಿ ಉಂಗುರ, ಹರಳುಂಗುರ, ಸುತ್ತಿನುಂಗುರ, ಮುತ್ತಿನುಂಗುರ, ವಜ್ರದುಂಗರ, ನವರತ್ನದುಂಗುರ, ಮಾಣಿಕ್ಯದ ಉಂಗುರ, ಕೆತ್ತಿದುಂಗರ, ಗೆಜ್ಜೆ ಉಂಗುರ, ಚೌಕೋನಾಕೃತಿಯ ಉಂಗುರ.

ಕಾಲಿನ ಆಭರಣಗಳು: ನೂಪುರ, ಪೈಜಣ, ಕುಳಿ, ಕಾಲ್ಕಳೆ, ಕಾಲುಂಗುರ, ಸುತ್ತುಂಗುರ, ಗೆಜ್ಜೆಪಿಲ್ಲಿ, ನಿಂಬೆ ಹೂವಿನ ಪಿಲ್ಲಿ, ಮೀನಪಿಲ್ಲಿ, ಕರಿಪಿಲ್ಲಿ, ಹಿರಿಪಿಲ್ಲಿ, ಕಳಸಪಿಲ್ಲಿ, ಉಳ್ಳಾಗಡ್ಡಿಪಿಲ್ಲಿ, ವೀರಮುದ್ರೆ, ಮಿಂಚು, ಸುರುಳಿ ಕಾಲುಂಗರ, ಮುರಗಿ, ತೋಡೆ, ದೊಡ್ಡ ತೋಡೆ, ಸಣ್ಣ ತೋಡೆ, ತಾಡಗ, ಕಾಲ್ಗೆಜ್ಜೆ ಸರ, ಪೈಜಣ, ಚೈನು, ಅಂದುಗೆ ಇತ್ಯಾದಿ.

ಅಕ್ಕಸಾಲಿಗರು ಈ ಎಲ್ಲಾ ವಿಭಿನ್ನ ಮಾದರಿಯ ಆಭರಣಗಳನ್ನು ತಯಾರಿಸುತ್ತಾರೆ. ಅವುಗಳಲ್ಲಿ ಕರಕುಶಲ ಕಲೆ ಎದ್ದು ಕಾಣುವಂತಹದ್ದು. ಇವು ನಾಡಿನ ಸಾಂಸ್ಕೃತಿಕ ಹಾಗೂ ಜಾನಪದ ಪರಂಪರೆಯನ್ನು ಪ್ರತಿಬಿಂಬಿಸುತ್ತಿವೆ. ಬಂಗಾರದ ಆಭರಣಗಳ ತಯಾರಿಕೆಯಲ್ಲಿ ಕಂಡುಬರುವ ವಿನ್ಯಾಸ, ಕಲಾತ್ಮಕತೆ ಮತ್ತು ಸೌಂದರ್ಯ ಪ್ರಜ್ಞೆ ಆಯಾ ನಾಡಿನ ಸಾಂಸ್ಕೃತಿಕ ಪರಂಪರೆಯ ಸತ್ವಕ್ಕೆ ಸಾಕ್ಷಿ. ಬಳ್ಳಾರಿ, ಹೊಸಪೇಟೆ ಅಕ್ಕಸಾಲಿಗರು ವಿವಿಧ ರೀತಿಯ ಆಭರಣಗಳನ್ನು ತಯಾರಿಸುವಲ್ಲಿ ಹೆಸರಾಗಿದ್ದಾರೆ.

ಚಿನಿವಾರಿಕೆಗೆ ಎದುರಾಗುವ ಅಡ್ಡಿ ಆತಂಕಗಳು:

ಹಿಂದಿನ ಕಾಲದಲ್ಲಿ ಚಿನ್ನದ ಆಭರಣಗಳ ಕೆಲಸ ಗೃಹಕೈಗಾರಿಕೆಯಾಗಿತ್ತು. ಪ್ರತಿ ಹಳ್ಳಿಯಲ್ಲಿಯೂ ಈ ಉದ್ಯೋಗವನ್ನು ಕಂಡುಕೊಂಡ ಒಂದೆರಡು ಕುಟುಂಬಗಳಿದ್ದವು. ನಗರಗಳು ಬೆಳವಣಿಗೆಯಾದ ಮೇಲೆ ಈ ಉದ್ಯೋಗದಲ್ಲಿ ಮಧ್ಯವರ್ತಿಗಳು ಬೆಳೆದರು. ಇಂದು ಚಿನ್ನ ಆಭರಣೋದ್ಯಮವು ಶ್ರೀಮಂತ ಮಧ್ಯಮವರ್ತಿಗಳ ಕೈಯಲ್ಲಿದೆ. ಈ ಮಧ್ಯವರ್ತಿಗಳ ಅಧೀನದಲ್ಲಿ ಕೆಲಸದಾಳುಗಳಾಗಿ ಅಕ್ಕಸಾಲಿಗರು ಆಭರಣ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಳ್ಳಾರಿ ಜಿಲ್ಲೆಯ ಹಳ್ಳಿಗಳಲ್ಲಿ ಅಕ್ಕಸಾಲಿಗರ ಸಂಖ್ಯೆ ಕಡಿಮೆ. ಹಳ್ಳಿ ಅಕ್ಕಸಾಲಿಗರು ಹೊಸಪೇಟೆ, ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿಗೆ ವಲಸೆ ಬಂದಿದ್ದಾರೆ.

ಅಕ್ಕಸಾಲಿಗರು ಬೆಳಿಗ್ಗೆಯಿಂದ ಸಂಜೆಯವರೆಗೆ ಕೂತು ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಸೊಂಟದ ನೋವು ಬೇಗ ಉಂಟಾಗುತ್ತದೆ. ಕುಸುರಿ ಕೆಲಸ ಮಾಡುವಾಗ ಅವನ ಕಣ್ಣುಗಳಿಗೆ ಬಹಳ ಕಸರತ್ತನ್ನು ನೀಡಬೇಕು. ಇದರಿಂದ ದೃಷ್ಟಿ ದೋಷ ಇವನಿಗೆ ಬಹಳ ಬೇಗ ಬರುವ ಸಾಧ್ಯತೆ ಇರುತ್ತದೆ. ಕೆ.ಡಿ.ಎಂ. ಬೆಸುಗೆ ಮಾಡುವುದರಿಂದ, ಅದರ ಹೊಗೆಯ ಸೇವನೆಯಿಂದ ಕ್ಯಾನ್ಸರ್ ಬರುವ ಸಾಧ್ಯತೆ ಇದೆ. ಸದಾ ಕಾಲ ಅಗ್ಗಿಷ್ಟಿಕೆಯ ನಡುವೆ ಇರುವುದರಿಂದ ಆತ ಕೆಲಸ ಮಾಡುವ ಕೊಠಡಿ ಚಿಕ್ಕದಿರುವುದರಿಂದ ಮೂಲವ್ಯಾಧಿ, ಅಸ್ತಮ ಮುಂತಾದ ರೋಗಗಳಿಗೆ ಆತ ಬೇಗ ತುತ್ತಾಗುವ ಸಂಭವವಿರುತ್ತದೆ.

ಚಿನಿವಾರ ಕುಟುಂಬದಲ್ಲಿ ಮಕ್ಕಳು ಎಂಟು-ಹತ್ತು ವರ್ಷದವರಿರುವಾಗಲೇ ಈ ವೃತ್ತಿಗೆ ಸಂಬಂಧಿಸಿದಂತೆ ಹಲವಾರು ಕೆಲಸ ಕಾರ್ಯಗಳನ್ನು ಮಾಡುವುದರಲ್ಲಿ ತೊಡಗುವುದರಿಂದ ಚಿನ್ನ, ಬೆಳ್ಳಿಯ ಆಭರಣಗಳ ಬಗೆಗೆ ಹೆಚ್ಚಿನ ಅನುಭವ ಇರುತ್ತದೆ. ಕೈಯಲ್ಲಿ ಹಿಡಿದ ತಕ್ಷಣ ಆ ಬಂಗಾರದ ಪ್ರಮಾಣ ಮತ್ತು ಗುಣ ಇಂತಿಷ್ಟು ಎಂಬುದಾಗಿ ಅಳತೆ ಮಾಡಬಲ್ಲ. ಇಷ್ಟು ತೂಕದ ಬಂಗಾರದಿಂದ ಇಂಥ ಗಾತ್ರದ ಆಭರಣಗಳನ್ನು ಮಾಡಬಹುದೆಂದು ನಿರ್ಣಯಿಸಬಲ್ಲ. ಒಮ್ಮೆ ಒಂದು ಆಕಾರವನ್ನು ನೋಡಿದರೆ ಸಾಕು, ಆತ ಅದನ್ನು ಮಾಡಿಯೇ ಸಾಧಿಸುವೆನೆಂಬ ಛಲ ಇರುವವನಾಗಿರುತ್ತಾನೆ. ಅವನ ಕೈಚಳಕದ ಮಾನದಂಡವೆನೆಂಬುದನ್ನು, ಎಷ್ಟೆಂಬುದನ್ನು ಇವತ್ತಿನ ಸೂಕ್ಷ್ಮಾತಿ-ಸೂಕ್ಷ್ಮ ಆಭರಣಗಳ ಮಾದರಿಯನ್ನು ನೋಡಿದರೆ ಹೇಳಬಹುದಾಗಿದೆ. ಆಭರಣದ ತುಂಡುಗಳನ್ನು ಬೆಸೆದಿರುವ ಬಗೆ ಕೆತ್ತನೆ ಕೆಲಸ ಮುಂತಾದವುಗಳಿಂದ ಆತನ ಕಲೆ ಅಭಿವ್ಯಕ್ತಿಸ್ಲಲ್ಪಟ್ಟಿರುತ್ತದೆ. ಇಂತಹ ಕಲೆಗಾರನ ಜೀವನ ಅತ್ಯಂತ ಕೆಳಮಟ್ಟದಲ್ಲಿರುವುದನ್ನು ಕಾಣಬಹುದು. ಕಾರಣ ಚಿನಿವಾರರು ಮಧ್ಯವರ್ತಿಗಳ ಶೋಷಣೆಗೊಳಗಾಗಿದ್ದಾರೆ.

ಚಿನ್ನ ಅತ್ಯಂತ ಬೆಲೆ ಬಾಳುವ ಲೋಹವಾದುದರಿಂದ ಈ ವ್ಯಾಪಾರ ಕೈಗೊಳ್ಳುವವರೆಲ್ಲಾ ಸಮಾಜದಲ್ಲಿ ಅತ್ಯಂತ ಶ್ರೀಮಂತರಾಗಿದ್ದಾರೆ. ಬಳ್ಳಾರಿ, ಹೊಸಪೇಟೆಗಳಲ್ಲಿ ಶ್ರೀಮಂತ ವ್ಯಾಪಾರಿಗಳು, ಗ್ರಾಹಕರು ಮತ್ತು ಕೆಲಸಗಾರರ ಮಧ್ಯೆ ಮಧ್ಯವರ್ತಿಗಳಾಗಿ ಬಂದರು. ಈ ಸರಾಫರುಗಳು ಕೆಲಸಗಾರರನ್ನು ತಮ್ಮಲ್ಲಿಯೇ ಇರಿಸಿಕೊಂಡು ಈ ಉದ್ಯೋಗವನ್ನು ಉದ್ಯಮದ ರೂಪಕ್ಕೆ ಪರಿವರ್ತಿಸಿದರು. ಪರಿಣಾಮವಾಗಿ ಹಳ್ಳಿಯ ಕುಶಲಕರ್ಮಿಗಳು ಉದ್ಯೋಗ ಕಳೆದುಕೊಂಡರು. ಅವರ ಮಕ್ಕಳು ಪಟ್ಟಣಕ್ಕೆ ವಲಸೆ ಬರಲು ಪ್ರಾರಂಭಿಸಿದರು.

ಬಳ್ಳಾರಿ, ಹೊಸಪೇಟೆ ಸರಾಫರು ಈ ಕೆಲಸಗಾರರಿಗೆ ಚಿನ್ನ ಕೊಟ್ಟು ಗ್ರಾಹಕರ ಕೋರಿಕೆಯಂತೆ ಬೇಕಾದ ಒಡವೆ ಮಾಡಿಸುತ್ತಾರೆ. ಅವರು ಮಾಡಿದ ಆಭರಣಕ್ಕನುಗುಣವಾಗಿ ಮಜುರಿ ನೀಡುತ್ತಾರೆ. ಗ್ರಾಹಕರಿಂದ ಮಾಲೀಕರು ಪಡೆಯುವ ಮಜೂರಿಗಿಂತ ಇದು ಕಡಿಮೆ ಇರುತ್ತದೆ. ಆಭರಣ ತಯಾರಿಸುವಾಗ ಚಿನ್ನದ ತೂಕದಲ್ಲಿ ಕಡಿಮೆ ಬರುತ್ತದೆ. ಈ ಕೊರತೆಯನ್ನು 'ತೇಮಾನು' ಎನ್ನುತ್ತಾರೆ. ಸರಾಫರು ಇಂತಿಷ್ಟು ತೂಕದ ಆಭರಣಕ್ಕೆ ಇಂತಿಷ್ಟು 'ತೇಮಾನು' ಎಂಬುದಾಗಿ ನಿಗದಿ ಪಡಿಸುತ್ತಾರೆ. ಗ್ರಾಹಕರಿಗೆ ಹೆಚ್ಚು ತೇಮಾನು ಹಾಕಿ ಕೆಲಸಗಾರರಿಗೆ ಕಡಿಮೆ ತೇಮಾನು ನೀಡುತ್ತಾರೆ.

ಚಿನ್ನದ ಉದ್ದಿಮೆಯಲ್ಲಿ ಹೆಚ್ಚಿನ ಕೆಲಸಗಾರರಿಗೆ ಉದ್ಯೋಗ ಭರವಸೆ ಇರುವುದಿಲ್ಲ. ಏಕೆಂದರೆ ಅವರನ್ನು ತಿಂಗಳ ಸಂಬಳದಲ್ಲಿ ಅಥವಾ ದಿನಗೂಲಿಯಲ್ಲಿ ದುಡಿಸುವುದಿಲ್ಲ. ಕೆಲಸಗಾರರಿಗೆ ರಜೆಯೂ ಇಲ್ಲ, ರಜೆ ಮುಜುರಿಯೂ ಇಲ್ಲ. ಭವಿಷ್ಯ ನಿಧಿ ಇಲ್ಲ. ಜೀವ ವಿಮೆ ಇಲ್ಲ. ಈ ರೀತಿ ಅಭದ್ರ ಸ್ಥಿತಿಯಲ್ಲಿ ಕೆಲಸಗಾರರು ದುಡಿಯುತ್ತಿರುವ ಪರಿಸ್ಥಿತಿ ಪಟ್ಟಣಗಳಲ್ಲಿ ಈಗಲೂ ಇದೆ.

ಕೆಲಸಗಾರರಿಗೂ ಸರಾಫರಿಗೂ ಇರುವ ಇನ್ನೊಂದು ತೊಂದರೆ ಎಂದರೆ ಪೋಲಿಸರ ಹಾವಳಿ. ಪೋಲಿಸರು ಚಿನ್ನಾಭರಣಗಳನ್ನು ಕದ್ದ ಕಳ್ಳರನ್ನು ಸಂಶಯದ ಮೇಲೆ ಹಿಡಿಯುತ್ತಾರೆ. ಅವರ ಕೈಯಲ್ಲಿ ಆಭರಣ ಇರುವುದಿಲ್ಲ. ಪೋಲಿಸರ ಹಿಂಸೆ ತಾಳಲಾರದೆ ಕಳ್ಳರು ಆಭರಣ ಮಾರಾಟ ಮಾಡಿದ್ದೆವೆಂದು ಸುಳ್ಳು ಹೇಳಿ ಯಾವುದಾದರೂ ಒಂದು ಚಿನ್ನದ ಅಂಗಡಿಯನ್ನೋ ಕೆಲಸಗಾರರ ಮನೆಯನ್ನೋ ತೋರಿಸುತ್ತಾರೆ. ಪೋಲಿಸರು ಆ ಅಂಗಡಿ ಅಥವಾ ಮನೆಗೆ ನುಗ್ಗಿ ಸಿಕ್ಕಿದ ಚಿನ್ನವನ್ನು ಅದು ಕಳ್ಳನೇ ಮಾರಿದ ಚಿನ್ನವೆಂದು ಹೇಳಿ ತೆಗೆದುಕೊಂಡು ಹೋಗುತ್ತಾರೆ. ಈ ಹಾವಳಿಯಿಂದ ಅಕ್ಕಸಾಲಿಗರು ತುಂಬಾ ಹಿಂಸೆ ಮತ್ತು ನಷ್ಟಕ್ಕೊಳಗಾಗುತ್ತಿದ್ದಾರೆ..

ಚಿನ್ನ ಅತ್ಯಮೂಲ್ಯ ಲೋಹವಾದ್ದರಿಂದ ಚಿನ್ನದ ಕೆಲಸಗಾರರು ಬಹಳ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಚಿನ್ನ ಕಳುವಾಗಿ ಹೋದ ಸಂದರ್ಭದಲ್ಲಿ ಇಲ್ಲವೆ ಕಳೆದು ಹೋದ ಸಂದರ್ಭದಲ್ಲಿ ತಾವೇ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಚಿನ್ನದ ಕೆಲಸ ವಿಶ್ವಾಸದ ಮೇಲೆ ನಡೆಯುವಂತದ್ದು. ಆದುದರಿಂದ ಅವರು ಪ್ರಾಮಾಣಿಕರಾಗಿರಬೇಕಾಗುತ್ತದೆ.

ಸರಕಾರ ಅಕ್ಕಸಾಲಿಗರಿಗೆ ಆಗುವ ಎಲ್ಲಾ ತೊಂದರೆಗಳನ್ನು ಪರಿಹರಿಸುವಲ್ಲಿ ಸೂಕ್ತ ಕ್ರಮ ಕೈಗೊಂಡಲ್ಲಿ ಅಕ್ಕಸಾಲಿಗರು ಉತ್ತಮವಾಗಿ ಜೀವನ ಮಾಡಲು ಸಾಧ್ಯವಾಗಬಹುದು. ಸರಕಾರ ಚಿನಿವಾರರ ಕೆಲಸ ಕಲಿಸುವ, ತರಬೇತಿ ನೀಡುವ ಸಂಸ್ಥೆಗಳನ್ನು ಸ್ಥಾಪಿಸಿದರೆ ಚಿನಿವಾರಿಕೆ ವೃತ್ತಿ ಇನ್ನೂ ಉತ್ತಮವಾಗಿ ಬೆಳೆದು ಹೆಚ್ಚು ಆದಾಯ ಗಳಿಸಬಹುದು. ಇಲ್ಲಿಯವರೆಗೆ ಈ ಕೆಲಸವನ್ನು ಕಲಿಸುವ ಪ್ರತ್ಯೇಕ ಸಂಸ್ಥೆಗಳಾಗಲಿ ಅಥವಾ ತರಬೇತಿಯ ಕ್ರಮಗಳಾಗಲಿ ಇರುವುದಿಲ್ಲ. ಇದು ವಂಶಪಾರಂಪರ್ಯವಾಗಿ ಬೆಳೆದು ಮುಂದುವರಿಯುತ್ತಿದೆ. ಇದರ ಜೊತೆಗೆ ಶಿಕ್ಷಣ ಸಂಸ್ಥೆ ಹಾಗೂ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ ಯುವ ಜನಾಂಗಕ್ಕೆ ಶಿಕ್ಷಣ ನೀಡಿದರೆ ಚಿನಿವಾರ ವೃತ್ತಿ ಪರಂಪರೆ ಮುಂದುವರಿಯುತ್ತದೆ.

ಬಡಗಿ ವೃತ್ತಿ

ಮರದಿಂದ ವಿವಿಧ ಉಪಯುಕ್ತ ಸಾಧನ-ಸಲಕರಣೆಗಳನ್ನು ತಯಾರಿಸುವ ವೃತ್ತಿ ಬಡಗಿ ವೃತ್ತಿ ಅಥವಾ ಬಡಗಿತನ. ಬಡಗಿಗಳು ಮರದಿಂದ, ರೈತರು ಕೃಷಿ ಕೆಲಸದಲ್ಲಿ ಬಳಸುವ ಉಪಕರಣಗಳ ತಯಾರಿ ಮತ್ತು ಗೃಹ ನಿರ್ಮಾಣಕ್ಕೆ ಬಳಸುವ ಕಿಟಕಿ, ಬಾಗಿಲು, ಕಂಬ, ತೊಲೆ, ವಾರ್ಡರೋಬ್ ಮೊದಲಾದುವುಗಳ ಮರ ಕೆಲಸ ಇವರ ಪ್ರಧಾನ ವೃತ್ತಿ. ಬಡಗಿಗಳು ಮರ ಕಡಿಯುವುದು, ತುಂಡು ಹಾಕುವುದು, ಪಟ್ಟಿಗಳನ್ನು ಮಾಡಿಕೊಳ್ಳುವುದು, ಮರದ ಉಪಕರಣಗಳನ್ನು ತಯಾರಿಸುವುದೇ ಮೊದಲಾದ ಪಾರಂಪರಿಕ ಕೆಲಸಗಳನ್ನು ಮಾಡುತ್ತಾರೆ. ಬಡಗಿ ವೃತ್ತಿ ಒಂದು ಪ್ರಮುಖ ಕುಲಕಸುಬು. ಪಾಂಚಾಳರಲ್ಲಿನ ಒಂದು ಪಂಗಡ ಈ ವೃತ್ತಿಯನ್ನು ವಂಶಪಾರಂಪರ್ಯವಾಗಿ ಮಾಡಿಕೊಂಡು ಬರುತ್ತಿದ್ದಾರೆ.

ಮೊದಲಿಗೆ ವೃತ್ತಿಯಾಗಿದ್ದ 'ಬಡಗಿ'ಯ ಕಸುಬು ತದನಂತರದಲ್ಲಿ ಜಾತಿಯಾಗಿ ರೂಪುಗೊಂಡಿತು. ಇವರು ಕಾಳಿ ದೇವತೆಯನ್ನು ಆರಾಧಿಸುತ್ತಾರೆ. ಬಡಗಿ–ಬಡಗಿ–ಬಡಿಗೇರ–ಬಡಿಗ್ಯಾರ ಎಂಬ ಅಚ್ಚ ಕನ್ನಡದ ಮಾತು, ಸಂಸ್ಕೃತದ ವರ್ಧ(ಕತ್ತರಿಸು, ಕಡಿ), ವರ್ಧಕ–ವದ್ದಕ–ಒಡ್ಡಕಿ (ಗಿ) ಮುಂತಾಗಿ ಬೆಳೆದು ಬಂದಿರಬಹುದೆಂಬುದನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ಸ್ಥಾಪಿಸಲೆತ್ನಿಸಿದರೂ ಜನಬಳಕೆಯ ಹಾಗೂ ಚಾರಿತ್ರಿಕ ಪ್ರಯೋಗಗಳನ್ನು ಗಮನಿಸಿದರೆ ಬಡಗಿ–ಬಡಗಿ (ಬಡ+ಕಿ(ಗಿ) ಅಚ್ಚ ಕನ್ನಡವೆಂದು ತೋರುತ್ತದೆ.[೬೧] ತಮಿಳು ಮತ್ತು ಮಲೆಯಾಳಂನಲ್ಲಿ ತಚ್ಚಾನ್, ಆಷಾರಿ (ತೆಲುಗಿನಲ್ಲಿ ಆಚಾರಿ), ಮರಾಶಾರಿ, ವಡ್ರಂಗಿ ಎಂಬ ಪದ ಬಳಕೆಯಲ್ಲಿದೆ.

ಬಡಗಿತನ ಮಾಡುವ ಬಡಗಿಗಳನ್ನು ಅರೆಕುಶಲ ಬಡಗಿಗಳು, ಕುಶಲ ಬಡಗಿಗಳು ಎಂದು ಎರಡು ವಿಧ. ದಿನನಿತ್ಯ ಸಾಮಾನ್ಯ ಜನರು ಉಪಯೋಗಿಸುವ ಪೀಠೋಪಕರಣಗಳು, ಕೃಷಿ ಸಾಧನ ಸಲಕರಣೆಗಳು ಮೊದಲಾದ ವಸ್ತುಗಳು, ಸಾಮಾನ್ಯ ಮನೆ ಮುಟ್ಟುಗಳನ್ನು ಮಾಡುವವರನ್ನು ಅರೆಕುಶಲ ಬಡಗಿಗಳೆಂದು, ಸೂಕ್ಷ್ಮವಾದ ಕೆತ್ತನೆ ಕೆಲಸದ ಪರಿಕರಗಳನ್ನು, ಮರದ ದೇವಸ್ಥಾನಗಳನ್ನು, ರಥಗಳನ್ನು ಮಾಡುವವರು ಕುಶಲ ಬಡಗಿಗಳು.

ಗ್ರಾಮಗಳಲ್ಲಿ ವಾಸವಾಗಿದ್ದು ಗ್ರಾಮಸ್ಥರಿಗೆ ಬೇಕಾಗುವ ಗೃಹಪಯೋಗಿ, ವ್ಯವಸಾಯೋಪಯೋಗಿ ವಸ್ತುಗಳನ್ನು ತಯಾರಿಸುವ ಬಡಗಿಗಳಿಗೆ ಗ್ರಾಮಸ್ಥರು ಆಯಾವನ್ನು ನೀಡುತ್ತಾರೆ.

ಬಡಗಿ ವೃತ್ತಿಯ ಐತಿಹಾಸಿಕ ಹಿನ್ನೆಲೆ

ದೇವಸ್ಥಾನಕ್ಕೆ ಸಂಬಂಧಿಸಿದ ಮರಗೆಲಸಗಳನ್ನು ಮಾಡಲು, ಮುರಿದುಹೋದ ಸಾಮಾನುಗಳನ್ನು ಸರಿಪಡಿಸಲು ಮತ್ತು ಶಾಸನಗಳನ್ನು ಕೆತ್ತಲು ಬಡಿಗರಿಗೆ ಶಾಶ್ವತವಾದ ದತ್ತಿಗಳನ್ನು ಬಿಟ್ಟುಕೊಡುತ್ತಿದ್ದರು.[೬೨] ಕ್ರಿ.ಶ. ೧೨೨೫ರ ಒಂದು ಶಾಸನವು ಬಡಗಿ 'ಚಂಪೋಜ' ಎನ್ನುವವನಿಗೆ ಅವನ ಸೇವೆಯನ್ನು ಪರಿಗಣಿಸಿ ಭೂಮಿಯನ್ನು ದಾನಮಾಡಿದ ವಿಷಯ ಪ್ರಸ್ತಾಪಿಸುತ್ತದೆ.[೬೩] ಕ್ರಿ.ಶ ೧೫೪೪ ರ ಒಂದು ಶಾಸನದ ಪ್ರಕಾರ ಒಬ್ಬ ಜಿನಭಕ್ತನು ದಾರು(ಮರ)ಮಯ ಬಸದಿಯನ್ನು ಕಟ್ಟಿಸುತ್ತಾನೆ.[೬೪] ಕ್ರಿ.ಶ. ೧೪೩೧ರ ಮಾಲೂರು ತಾಲೂಕು ತೇಕಲ್ಲು ಗ್ರಾಮದ ವರದರಾಜಸ್ವಾಮಿ ದೇವಸ್ಥಾನದಲ್ಲಿ ಅದೇ ಗ್ರಾಮದ ವಾಸಿಯಾಗಿದ್ದ ದೇವೋಜ ಎಂಬ ಬಡಗಿಯು ಗುಡಿಗೆ ಸಂಬಂಧಿಸಿದ ಮರಕೆಲಸವನ್ನು ಮಾಡಿಕೊಡುತ್ತಾನೆ.[೬೫] ಕ್ರಿ.ಶ. ೧೪೮೦ರಲ್ಲಿ ಬಡಗಿ ಲಿಂಗೋಜನು ಜಗಳೂರು ತಾಲೂಕು ನಿಬಗೂರಿನಲ್ಲಿ ಆಂಜನೇಯ ಗುಡಿಯನ್ನು ಕಟ್ಟುತ್ತಾನೆ. ಇದಕ್ಕಾಗಿ ಗೌಡನು ಇವನಿಗೆ ಅರವತ್ತು ಒಕ್ಕಲು ಮಾನ್ಯವನ್ನು ಕೊಡುತ್ತಾನೆ.[೬೬]

ಕುಶಲಿಗಳಾದ ಬಡಗಿಗಳು ಸುಂದರವಾದ ಮರದ ರಥಗಳನ್ನು ಮಾಡುತ್ತಿದ್ದರು. ಕ್ರಿ.ಶ. ೧೮೫೯ ಇತ್ತೀಚಿನ ಪಾಂಡವಪುರ, ಕನ್ನಂಬಾಡಿ ಗ್ರಾಮದಲ್ಲಿರುವ ಮಹಾಲಕ್ಷ್ಮಿ ಗುಡಿಗೆ ಸೇರಿದ ರಥವನ್ನು ಧರ್ಮಲಿಂಗಾಚಾರಿ ಎನ್ನುವವನು ರಚನೆ ಮಾಡಿದ್ದಾನೆ.[೬೭]

ಬಡಗಿಗಳ ಮೇಲೆ ಪ್ರತ್ಯೇಕವಾಗಿ ಬಡಗಿದೆರೆ ಎಂದು ತೆರಿಗೆ ವಿಧಿಸಲಾಗುತ್ತಿತ್ತು.[೨೮] ಬಡಗಿ ವೃತ್ತಿಗೆ ಸಂಬಂಧಿಸಿದ ಅನೇಕ ಸಂಗತಿಗಳು ಶಾಸನಗಳಲ್ಲಿವೆ. ಅವರ ಬದುಕನ್ನು ಅರಿಯಲು ಶಾಸನಗಳು ನೆರವಾಗುತ್ತವೆ. ಸರ್ವಜ್ಞನು ತನ್ನ ವಚನದಲ್ಲಿ ಪಾಂಚಾಳರ ಮತ್ತು ಬಡಗಿಗಳ ಅವಶ್ಯಕತೆಯನ್ನು ಸಾರಿ ಹೇಳಿದ್ದಾನೆ.

> ಕಂಚಿಯ ಫಲ ಲೇಸು ಮಿಂಚು ಮುಗಿಲಿಗೆ ಲೇಸು
> ಕೆಂಚನ ಹೆಣ್ಣು ಇರಲೇಸು । ಊರಿಗೊಬ್ಬ
> ಪಂಚಾಳ ಲೇಸು ಸರ್ವಜ್ಞ
> ಹಡಗು ಗಾಳಿಗೆ ಲೇಸು ಗುಡುಗು ಮುಗಿಲಿಗೆ ಲೇಸು
> ಒಡ ಹುಟ್ಟಿದಣ್ಣ ಇರಲೇಸು । ಊರಿಗೊಬ್ಬ
> ಬಡಗಿಯೇ ಲೇಸು ಸರ್ವಜ್ಞ[೨೯]

ಬಡಗಿಗಳು ಸಿದ್ಧಪಡಿಸುವ ವಸ್ತುಗಳು: ಹಳ್ಳಿಯ ನೆರೆ ಹೊರೆ, ಹೊಲ ಗದ್ದೆ, ತೋಟಗಳಲ್ಲಿ ಸಿಕ್ಕುವ ಗಿಡಮರಗಳನ್ನು ಕಡಿದು ಒಕ್ಕಲಿಗರು ತಂದುಕೊಟ್ಟ ಕಟ್ಟಿಗೆಯಲ್ಲಿ ಅವರಿಗೆ ಬೇಕಾದ ಗೃಹೋಪಯೋಗಿ, ವ್ಯವಸಾಯೋಪಯೋಗಿ ಉಪಕರಣಗಳನ್ನು ತಯಾರಿಸಿ ಕೊಡುವುದು ಬಡಿಗರ ಕೆಲಸವಾಗಿದೆ. ಹಳ್ಳಿಗಳಲ್ಲಿ ಆಯಧ ಬಡಿಗರನ್ನು ನೋಡಬಹುದು. ಬಡಿಗರು ಸಿದ್ಧಪಡಿಸುವ ಮರಮುಟ್ಟುಗಳನ್ನು ಗಮನಿಸಿ ಅವುಗಳನ್ನು ಗೃಹ ಬಳಕೆಯ ವಸ್ತುಗಳು, ಕೃಷಿ ಉಪಕರಣಗಳು, ಹೊರಾಂಗಣ ವಸ್ತುಗಳೆಂದು ವಿಂಗಡಿಸಲಾಗಿದೆ.

ಗೃಹ ಬಳಕೆಯ ವಸ್ತುಗಳು: ದಿನನಿತ್ಯದ ಗೃಹ ಬಳಕೆಯ ವಸ್ತುಗಳನ್ನು ಬಡಿಗರು ಆಕರ್ಷಕ ವಿನ್ಯಾಸಗಳಲ್ಲಿ ತಯಾರಿಸಿಕೊಡುವರು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಮಣಿ, ಈಳಿಗೆ ಮಣಿ, ರೊಟ್ಟಿಮಣಿ, ಕೊಣಗೆ, ಚಕ್ಕಲಿ ಒರಳು, ಶಾವಿಗೆ ಒರಳು, ಬೆಲ್ಲದಚ್ಚಿನ ಮಣಿ, ಮುದ್ದೆಕೋಲು, ಕಡಗೋಲು, ಮಸಗೋಲು, ಮರದ ಒರಳು, ಒನಕೆ, ಕಡಿ, ತೊಟ್ಟಿಲು, ಪೆಟ್ಟಿಗೆ, ಹುಟ್ಟು, ಸವಟು, ಲಟ್ಟಣಿಗೆ ಮುಂತಾದವು.

ಕೃಷಿ ಉಪಕರಣಗಳು: ಬಡಗಿಯು ರೈತನ ವ್ಯವಸಾಯಕ್ಕೆ ಅಗತ್ಯವಾದ ರಂಟೆ, ನೇಗಿಲು, ಕುಂಟೆ, ಕೂರಿಗೆ, ಎತ್ತಿನಗಾಡಿ, ಮೂಕು, ನೊಗ, ಪಿಳಿಗುಂಟೆ, ಸಡ್ಡೆ, ಗುದ್ದಲಿ ಹಿಡಿ, ಸಲಿಕೆ ಹಿಡಿ, ಬಾಗುದ್ದಲಿ ಹಿಡಿ, ದಿಂಡು, ಚಕ್ರ, ನಿಚ್ಚಣಿಕೆ ಮುಂತಾದುವುಗಳನ್ನು ತಯಾರಿಸಿಕೊಡುವನು.

ಹೊರಾಂಗಣ ವಸ್ತುಗಳು: ಗೃಹೋಪಯೋಗಿ, ವ್ಯವಸಾಯೋಪಯೋಗಿ ಉಪಕರಣಗಳಲ್ಲದೇ ಕುಶಲಕರ್ಮಿಯಾದ ಬಡಗಿ ಮನೆಗೆ ಬೇಕಾಗುವ ಬಾಗಿಲು ಚೌಕಟ್ಟು, ಹೊಸಿಲು, ಕಂಬ, ಕಿಟಕಿ, ಕದ, ಜಂತಿ, ತೊಲೆ, ಅಗಳಿ, ಅಟ್ಟ, ಅಟ್ಟಕ್ಕೆ ಮೆಟ್ಟಿಲು ತಯಾರಿಸುವರು. ಪೀಠೋಪಕರಣಗಳಾದ

ಕುರ್ಚಿ, ಮೇಜು, ಟೀಪಾಯಿ, ಸ್ಟೂಲ್, ದಿವಾನ ಕಾಟ್, ಅಡ್ಡತೆರೆ, ಮಂಚ, ತೂಗುಯ್ಯಾಲೆ ಮಣೆ, ಕಪಾಟು ಇತ್ಯಾದಿಗಳನ್ನು ತಯಾರಿಸುವನು. ವಿವಿಧ ಆಟದ ಸಾಮಗ್ರಿಗಳು, ದೇವತೆಯರ ವಿಗ್ರಹಗಳು, ರಥಗಳ ರಚನೆ, ತೇರು ಕಟ್ಟುವುದು ಮುಂತಾದ ಉಪಯೋಗಿ ವಸ್ತುಗಳನ್ನು ತಯಾರಿಸುವಲ್ಲಿ ಬಡಿಗರು ಸಿದ್ಧಹಸ್ತರು.

ಬಡಿಗರು ಬಡಗಿತನದಲ್ಲಿ ಬಳಸುವ ಕಚ್ಚಾ ಸಾಮಗ್ರಿಗಳು(ಮರಗಳು): ಕುಶಲ ಬಡಗಿ ಕಟ್ಟಿಗೆಯ ತಾಳಿಕೆ, ಬಾಳಿಕೆ ಅರಿತು ನಾನಾ ಬಗೆಯ ಮರಗಳನ್ನು ಕಡಿದು (ಇಂದು ಸಾಮಿಲ್ಲುಗಳಲ್ಲಿ ವಿವಿಧ ಮರದ ದಿಮ್ಮಿಗಳು ಲಭ್ಯ) ಕೊರೆದು, ಕೆತ್ತಿ, ಉಜ್ಜಿ ವಿವಿಧ ಉಪಕರಣಗಳನ್ನು ತಯಾರಿಸುವರು. ಅವರು ಬಳಸುವ ಪ್ರಮುಖ ಮರಗಳೆಂದರೆ ತೇಗ, ನಂದಿ, ಮತ್ತಿ, ದೇವದಾರು, ಬೇವು, ಜಾಲಿ, ಬೀಟೆ, ಮಾವು, ಹುಣಸೆ, ಆಲ, ಹೊನ್ನಿ, ನೀಲಗಿರಿ ಇನ್ನೂ ಮುಂತಾದ ಲಭ್ಯವಿರುವ ಮರಗಳು.

ಗೃಹ ನಿರ್ಮಾಣದಲ್ಲಿ ಹೊನ್ನೆ, ತೇಗ, ಮತ್ತಿ, ಬೇವು, ಮಾವು ಕಟ್ಟಿಗೆಯನ್ನು ಬಡಿಗರು ಬಳಸುತ್ತಾರೆ. ನೇಗಿಲು, ರಂಟೆ, ಕೂರಿಗೆ, ನೊಗ, ಬಂಡಿ ಇತ್ಯಾದಿಗಳಿಗೆ ಜಾಲಿ ಕಟ್ಟಿಗೆಯನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.

ತಾರೆಮರ, ತವಸಿಮರ, ಜಗಳಗಂಟಿ ಮರಗಳಲ್ಲಿ ದೆವ್ವಗಳು ವಾಸಿಸುತ್ತವಾದ್ದರಿಂದ ಆ ಮರಗಳನ್ನು ಬಳಸಿಕೊಂಡು ಬಡಗಿ ವಸ್ತುಗಳನ್ನು ತಯಾರು ಮಾಡಿದರೆ ಕೇಡುಂಟಾಗುವುದೆಂದು ಹೇಳುತ್ತಾರೆ.

ಬಡಿಗರು ಬಳಸುವ ಸಾಧನ ಮತ್ತು ಉಪಕರಣಗಳು: ಮರ ಮುಟ್ಟುಗಳನ್ನು ತಯಾರಿಸಲು ಬಡಗಿಯು ಕಬ್ಬಿಣ, ಮತ್ತು ಕಟ್ಟಿಗೆಯ ಹಲವಾರು ಸಾಧನ ಸಲಕರಣೆಗಳನ್ನು ಬಳಸುತ್ತಾನೆ. ಮರವನ್ನು ಕಡಿಯಲು ದೊಡ್ಡ ಕೊಡಲಿ, ಕೈಕೊಡಲಿ, ದೊಡ್ಡ ಗರಗಸ, ಕೈಗರಗಸ, ದೊಡ್ಡ ಬಾಚಿ, ಸಣ್ಣಬಾಚಿ, ಕೈಬಾಚಿ, ತಟ್ಟುಳಿ, ಮಟ್ಟಣಿಕೆ, ಅರ, ಕೈವಾರ, ಉಜ್ಜುಗೊರಡು, ಕೊಡವ, ಡ್ರಿಲ್ಲಿಂಗ್ ಮಶೀನು, ಸುತ್ತಿಗೆ, ಎಕ್ಸಾಬ್ಲೇಡು, ಟೇಪು, ಅಡಿಕಡ್ಡಿ, ಉಪ್ಪುಕಾಗದ, ಮೇಣ, ಚಾಕ್ ಪೌಡರ್, ವುಡ್ ಪಾಲೀಶ್, ಪೆವಿಕಾಲ್, ವೆಮಿಕಾಲ್, ಸನ್ ಮೇಕ್, ಭೈರಿಗೆ, ಗ್ರಾಂಪು, ಅರಗು ಮುಂತಾದವುಗಳನ್ನು ಬಳಸುತ್ತಾರೆ. ಬಡಗಿ ವೃತ್ತಿಗೆ ಬೇಕಾಗುವ ಆಧುನಿಕ ಯಂತ್ರಗಳು, ಸಾಧನ ಸಾಮಗ್ರಿಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಇವುಗಳು ಮಾನವನ ಶ್ರಮವನ್ನು ಕಡಿಮೆ ಮಾಡಿವೆ ಮತ್ತು ಬಡಗಿಯ ಕರಕುಶಲತೆಯನ್ನು ಹೆಚ್ಚಿಸಿವೆ.

ತಯಾರಿಕೆಯ ವಿವಿಧ ಹಂತಗಳು ಮತ್ತು ಪ್ರಕ್ರಿಯೆಗಳು: ಕುಶಲ ಬಡಗಿಗಳು ಮರಗಳ ಗುಣಲಕ್ಷಣಗಳನ್ನು ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಮರವನ್ನು ಕಡಿದು ಸರಿಯಾಗಿ ತುಂಡುಮಾಡಿ ತೊಗಟೆ ಸಮೇತ ಒಣಗಲು ಬಿಡಬೇಕು. ತೊಗಟೆಯಲ್ಲಿರುವ ಎಣ್ಣೆಯ ಅಂಶ ತೊಗಟೆ ಒಣಗಿದಂತೆಲ್ಲ

ಅದರ ರಸ ನಿಧಾನವಾಗಿ ಮರಕ್ಕೆ ಸೇರಿಕೊಳ್ಳುತ್ತದೆ. ಇದರಿಂದ ಮರಕ್ಕೆ ಬಲಬರುತ್ತದೆ. ಅಲ್ಲದೆ ತೊಗಟೆ ತೆಗೆದು ಮರವನ್ನು ಒಣಗಿಸಿದರೆ ಮರದಲ್ಲಿ ಏರ್‌ಕ್ರಾಕ್ ಕಂಡುಬರುತ್ತವೆ. ಹಸಿ ಮರವನ್ನು ಉಪಯೋಗಿಸಿದರೆ ಕುಗ್ಗುವ, ಇಲ್ಲವೆ ಡೊಂಕಾಗುವ ಸಾಧ್ಯತೆ ಇದೆ.

ಬಡಗಿಗಳು ಒಣಗಿದ ಮರವನ್ನು ತಮಗೆ ಬೇಕಾದ ಅಳತೆಗೆ ತಕ್ಕಂತೆ ತುಂಡು ಮಾಡಿಕೊಳ್ಳುತ್ತಾರೆ. ಇಂದಿನ ಆಧುನಿಕ ಸಾಮಿಲ್ಲುಗಳು ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ತರಿಸಿ ಅನುಬೋಗಿಗಳು ಕೇಳುವ ಅಳತೆಗೆ ತಕ್ಕಂತೆ ಮರವನ್ನು ಕೊಯ್ಯುತ್ತಾರೆ. ಹೀಗೆ ಕೊಯಿಸಿದ ತುಂಡುಗಳಲ್ಲಿ ಹಸಿ ಅಂಶ ಇದ್ದರೆ ಅವುಗಳನ್ನು ಒಂದರ ಮೇಲೊಂದು ಜೋಡಿಸಿ ಗಾಳಿ ಸುಲಭವಾಗಿ ಹರಿದಾಡಲು ಬಿಡುತ್ತಾರೆ. ಇದರಿಂದ ಮರದ ಪಟ್ಟಿಗಳು ಬೇಗ ಒಣಗುತ್ತವೆ.

ಒಣಗಿದ ಸಿದ್ಧ ಪಟ್ಟಿಗಳನ್ನು ಪ್ಲೇನ್ ಮಾಡಿ, ಪಟ್ಟಿಯ ಹೊರಮೈ ನುಣುಪಾಗಿ ಕಂಡುಬರುವಂತೆ ಮಾಡುತ್ತಾರೆ. ಈಗ ಪ್ಲೇನಿಂಗ್ ಮಷಿನ್ ಬಂದಿರುವುದರಿಂದ ಬಡಗಿಗಳು ಉಜ್ಜುಗೊರಡು ಹೊಡೆಯುವ ಶ್ರಮವನ್ನು ವಹಿಸುವುದಿಲ್ಲ. ಹಿಂದೆ ಇವೆಲ್ಲವು ಕೈಯಿಂದಲೇ ಮಾಡಬೇಕಾಗಿತ್ತು. ಈಗಲೂ ಹಳ್ಳಿಗಳಲ್ಲಿರುವ ಬಡಗಿಗಳು ಇದೇ ವಿಧಾನವನ್ನು ಅನುಸರಿಸುತ್ತಾರೆ.

ಮರದ ಪಟ್ಟಿಗಳನ್ನು ಸಿದ್ಧಪಡಿಸುವ ವಸ್ತುಗಳಿಗೆ ಅನುಗುಣವಾಗಿ ಅಳತೆ ಮಾಡಿ ಪೆನ್ಸಿಲ್‌ನಿಂದ ಮಾರ್ಕ್ ಮಾಡಿಕೊಂಡು ಅಳತೆಯ ಮೇರೆಗೆ, ಆಕಾರಕ್ಕೆ ತಕ್ಕಂತೆ ಕೈರಂಪ ತೆಗೆದುಕೊಂಡು ತುಂಡು ಹಾಕಿಕೊಳ್ಳುತ್ತಾರೆ. ನಂತರ ಉಳಿಗಳಂತಹ ಉಪಕರಣಗಳಿಂದ ಮರದ ಪಟ್ಟಿಯ ಮೇಲೆ ನಿಗದಿತ ಭಾಗದಲ್ಲಿ ರಂಧ್ರ ಹಾಕಿಕೊಂಡು, ಆ ಮರದ ಪಟ್ಟಿಗೆ ಇನ್ನೊಂದು ಪಟ್ಟಿ ಸೇರಿಸುವರು. ಇಂದು ಮರದ ತುಂಡುಗಳನ್ನು ಹೊಂದುಗೂಡಿಸಲು, ಬಿದಿರಿನ ಮೊಳೆ, ತಂತಿ, ಪೆವಿಕಾಲ್ ಉಪಯೋಗಿಸಿ ಚೌಕಟ್ಟನ್ನು ಭದ್ರಗೊಳಿಸುವರು. ಸಿದ್ಧಪಡಿಸಿದ ಉಪಕರಣಗಳ ಮೇಲೆ ಉಪ್ಪುಕಾಗದ ಬಳಸಿ ಉಜ್ಜಿ ನುಣುಪು ಮಾಡಿಕೊಳ್ಳುತ್ತಾರೆ. ಮರ ಹುಳು ಕೊರೆದು ರಂಧ್ರವಾಗಿದ್ದರೆ, ವಸ್ತು ತಯಾರಿಸುವಾಗ ಆಚಾತುರ್ಯದಿಂದ ಆಯುಧ ತಗಲಿ ತುಸು ಮುಕ್ಕಾಗಿದ್ದರೆ, ಸಣ್ಣಮಟ್ಟ ಕುಳಿಗಳಿದ್ದರೆ ಅದನ್ನು ತೆಗೆದು ಚಾಕ್ ಪೌಡರ್‌ನ್ನು ಮರವಜ್ರದಲ್ಲಿ ಹದವಾಗಿ ಬೆರೆಸಿ ಅದನ್ನು ತುಂಬುತ್ತಾರೆ. ಇದು ಹಳೆಯ ವಿಧಾನ ಈಗ ಪೆವಿಕಾಲ್ ಮತ್ತು ಚಾಕ್ ಪೌಡರನ್ನು ಹದವಾಗಿ ಮಿಶ್ರಣ ಮಾಡಿ ತುಂಬುತ್ತಾರೆ. ಅದು ಕಾಣದಂತೆ ಪಾಲಿಶ್ ಹಚ್ಚಿ ಬಣ್ಣ ಬಳೆಯುತ್ತಾರೆ.

ಹಿಂದೆ ಮನೆಗಳನ್ನು ನಿರ್ಮಿಸುವಾಗ ತೊಲೆ, ಕಂಬಗಳನ್ನು ಬಳಸುತ್ತಿದ್ದರು. ಅಂದು ತೊಲೆ ಕಂಬಗಳ ಮೇಲೆ ಕುಸುರಿ ಕೆಲಸ ಮಾಡಿ ವಿವಿಧ ವಿನ್ಯಾಸಗಳನ್ನು ಕೆತ್ತಿ ಅಲಂಕಾರಗೊಳಿಸುತ್ತಿದ್ದರು. ಅಂತೆಯೇ ಮನೆಯ ಒಳಭಾಗದಲ್ಲಿ ಹಲಗೆ ಜೋಡಿಸಿ ಅಟ್ಟಗಳನ್ನು ನಿರ್ಮಿಸುತ್ತಿದ್ದರು. ಅದನ್ನು ಏರಲು ಹಲಗೆಗಳಿಂದ ಮೆಟ್ಟಿಲುಗಳನ್ನು ಮಾಡುತ್ತಿದ್ದರು. ಕಾಂಕ್ರೀಟ್

ಮನೆಗಳ ನಿರ್ಮಾಣದಿಂದ ಅಂಥ ಕಲೆ ಕಣ್ಮರೆಯಾಗುತ್ತಿವೆ. ಆದರೂ ಬಡಗಿಗಳು ಇಂದಿನ ಮನೆಗಳ ಮುಂಬಾಗಿಲು ದೇವರ ಮನೆ ಬಾಗಿಲುಗಳನ್ನು ವಿವಿಧ ವಿನ್ಯಾಸಗಳಿಂದ ಕೆತ್ತನೆ ಮಾಡಿ ಅಲಂಕಾರಗೊಳಿಸುತ್ತಾರೆ.

ಇಂದಿಗೂ ಮಂಚ, ದಿವಾನ್ ಕಾಟ್, ಊಟದ ಮೇಜು, ಕುರ್ಚಿಗೆ ಬಳಸುವ ಕಾಲುಗಳನ್ನು ಕಲಾತ್ಮಕವಾಗಿ ಕೆತ್ತಿ ಮಾಡುತ್ತಾರೆ. ಮೊದಲಿಗೆ ಇದನ್ನು ಕೈಯಿಂದಲೇ ಬಡಗಿಗಳು ಮಾಡಬೇಕಾಗಿತ್ತು. ಈಗ ಅದನ್ನು ಲೇತ್ ಟರ್ನಿಂಗ್ ಮೆಷಿನ್‌ನಿಂದ ತಯಾರಿಸುತ್ತಾರೆ.

ಆಧುನಿಕ ಮಾರುಕಟ್ಟೆಗಳಲ್ಲಿ ಪ್ಲೇವುಡ್ ಶೀಟ್, ಸನ್‌ಮೇಕ್ ಶೀಟ್, ಫಾರ್ಮಿಕ್ ಶೀಟ್, ಇತ್ಯಾದಿಗಳಿಂದ ಪೀಠೋಪಕರಣಗಳನ್ನು ವಿವಿಧ ಬಣ್ಣಗಳ ಡಿಸೈನುಗಳ ಶೀಟನ್ನು ಬಳಸಿ ಸುಂದರಗೊಳಿಸುತ್ತಾರೆ. ಆಧುನಿಕ ಯಂತ್ರಗಳು ಬಡಗಿಗಳ ಕೆಲಸವನ್ನು ಸರಳಗೊಳಿಸುವುದರ ಜೊತೆಗೆ ವೈವಿಧ್ಯ ರೀತಿಯ ಸರಕು ಸಾಧನಗಳನ್ನು ಸುಲಭವಾಗಿ ತಯಾರಿಸಲು ಅನುಕೂಲ ಮಾಡಿಕೊಡುತ್ತಿವೆ.

ಬಡಗಿತನಕ್ಕೆ ಎದುರಾಗುವ ಅಡ್ಡಿ ಆತಂಕಗಳು

ಮೊದಲಿನಂತೆ ರೈತರು ಬಡಿಗರಿಗೆ ಅವಶ್ಯವಾದಷ್ಟು ಕಾಳುಕಡಿಗಳನ್ನು ಆಯದ ರೂಪದಲ್ಲಿ ಕೊಡುವುದಿಲ್ಲ. ಮರಮುಟ್ಟುಗಳು ತಾಳಿಕೆ ಬರಲಾರವು ಎಂದು ರೈತಾಪಿ ಜನರು ನಗರದಿಂದ ಕಬ್ಬಿಣದ ನೇಗಿಲು, ಕುಂಟೆ, ರಂಟೆ, ಕಾಳು ಮಾಡುವ ಯಂತ್ರಗಳನ್ನು ತಂದು ಬಳಸುವುದರಿಂದ ಬಡಿಗರಿಗೆ ಕೆಲಸ ಕಡಿಮೆಯಾಗಿದೆ.

ಯಾಂತ್ರಿಕ ಪ್ರಗತಿಯಿಂದಾಗಿ ಒಕ್ಕಲಿಗರು ಇಂದು ಯಂತ್ರ ನಿರ್ಮಿತ ಸಾಧನಗಳಿಗೆ ಮೊರೆ ಹೋಗುತ್ತಿದಾರೆ. ನಗರಗಳಲ್ಲಿ ಈ ಎಲ್ಲಾ ಕೃಷಿ ಉಪಕರಣಗಳು ದೊರೆಯುವುದರಿಂದ ರೈತರು ಅವುಗಳನ್ನು ಖರೀದಿಸಿ ತಮ್ಮ ಅವಶ್ಯಕತೆ ಪೂರೈಸಿಕೊಳ್ಳುವರು. ಹೀಗಾಗಿ ಗ್ರಾಮೀಣ ಬಡಿಗರು ಬಡಗಿತನ ಮಾಡುವುದನ್ನೆ ನಿಲ್ಲಿಸುತ್ತಿದ್ದಾರೆ. ಕೆಲವು ಬಡಗಿಗಳು ನಗರಕ್ಕೆ ವಲಸೆ ಹೋಗುತ್ತಿದ್ದಾರೆ. ನಗರಗಳಲ್ಲಿ ದೊಡ್ಡ ದೊಡ್ಡ ಸಾಮಿಲ್ಲುಗಳಲ್ಲಿ ಕೆಲವರು ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ.

ಬಡಗಿತನವನ್ನು ಅನ್ಯಜಾತಿಯ ಜನ ಕೈಗೊಂಡಿದ್ದಾರೆ. ಇದರಿಂದ ನಿಜವಾದ ಕುಲಕಸುಬು ಬಡಗಿಗಳು ವೃತ್ತಿ ಮೂಲ ಉದ್ಯೋಗ ಕೈಬಿಟ್ಟು ಹೊಟ್ಟೆಯ ಪಾಡಿಗಾಗಿ ಬೇರೆ ಉದ್ಯೋಗ ಅರಸುವ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ಬಡಗಿಗಳಿಗೆ ಸಕಾಲಕ್ಕೆ ಕಟ್ಟಿಗೆಗಳು ದೊರೆಯದೆ ಇರುವುದರಿಂದ ಕೆಲಸಕ್ಕೆ ವ್ಯತ್ಯಯವುಂಟಾಗುತ್ತಿದೆ. ಇತ್ತಿಚೆಗೆ ಕಟ್ಟಿಗೆ ಉಪಯೋಗಿಸುವ ಕಡೆ ಕಬ್ಬಿಣದ ಸಾಮಗ್ರಿಗಳ ಬಳಕೆ ಹೆಚ್ಚಾಗಿರುವುದು ಬಡಗಿ ಕೆಲಸಕ್ಕೆ ತೊಡಕುಂಟಾಗಿದೆ.

ಹೆಚ್ಚಾಗಿ ಪುರುಷರೆ ಈ ಕಸುಬನ್ನು ನಿರ್ವಹಿಸುತ್ತಾರೆ. ಹೆಂಗಸರು ಮತ್ತು ಮಕ್ಕಳು ಸಣ್ಣ ಪುಟ್ಟ ಕೆಲಸಗಳಲ್ಲಿ ನೆರವಾಗುತ್ತಾರೆ.

ಬಡಗಿತನ ತರಬೇತಿ: ಹಿಂದಿನ ಕಾಲದಲ್ಲಿ ಈ ಕಸುಬನ್ನು ನೋಡುತ್ತಾ ಮಾಡುತ್ತಾ ಕಲಿಯಬೇಕಾಗಿತ್ತು. ಈ ಸಂದರ್ಭದಲ್ಲಿ ಹಿರಿಯ ಕಸುಬುದಾದರು ಮಾರ್ಗದರ್ಶನ ಮಾಡುತ್ತಿದ್ದರು. ಇಂದು ಸ್ವಯಂ ಉದ್ಯೋಗ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಯುವಕರಿಗೆ ಸರಕಾರಿ, ಅರೆಸರಕಾರಿ ಸಂಘ ಸಂಸ್ಥೆಗಳು ಹಲವಾರು ವೃತ್ತಿಪರ ತರಬೇತಿ ಕೋರ್ಸುಗಳನ್ನು ತೆರೆದಿವೆ. ಇವುಗಳಲ್ಲಿ ಬಡಗಿತನವೂ ಒಂದು. ದೊಡ್ಡ ದೊಡ್ಡ ನಗರಗಳಲ್ಲಿ ಬಡಗಿತನದ ತರಬೇತಿ ನೀಡಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಯುವಕರಿಗೆ ಉಚಿತವಾಗಿ ತರಬೇತಿ ನೀಡುತ್ತಿವೆ.

ನಮ್ಮ ಸರಕಾರಗಳು ಗ್ರಾಮೀಣ ವಿಕಾಸ ಯೋಜನೆ ಅಡಿಯಲ್ಲಿ ಬಡಿಗರಿಗೆ, ಬಡಗರ ಕುಟುಂಬಕ್ಕೆ ವಿಶೇಷ ತರಬೇತಿ ನೀಡಿ ಧನಸಹಾಯ ಒದಗಿಸಿದರೆ ಬಡಿಗರ ಕುಟುಂಬಗಳು ಬದುಕಿ ಉಳಿಯಬಹುದು. ಬಡಗಿತನವು ನೆಲೆಯಾಗಿ ನಿಲ್ಲಬಹುದೆಂದು ಆಶಯಪಡಬಹುದು. ಬಳ್ಳಾರಿ ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಬಡಗಿಗಳು ವಾಸವಾಗಿದ್ದರೂ, ಅವರು ಸಂಪೂರ್ಣವಾಗಿ ಬಡಗಿತನದಲ್ಲಿ ತಮ್ಮನ್ನು ತೊಡಗಿಸಿಕೊಂಡಿಲ್ಲ. ವರ್ಷದ ಕೆಲವು ತಿಂಗಳು ಬಡಗಿತನ ಮಾಡಿದರೆ ಉಳಿದ ತಿಂಗಳುಗಳಲ್ಲಿ ಕೃಷಿ ಕೆಲಸ ಹಾಗೂ ಗಣಿಗಾರಿಕೆ ಕೆಲಸಗಳಲ್ಲಿ ಕೂಲಿಗಳಾಗಿ ದುಡಿಯುತ್ತಿದ್ದಾರೆ. ಮೂಲ ಕಸುಬುದಾರರಿಗೆ ಮುಸ್ಲಿಂ, ಮರಾಠಿ, ಲಿಂಗಾಯತರು ಸಹ ಬಡಗಿ ವೃತ್ತಿಯನ್ನು ಇತ್ತೀಚೆಗೆ ಮಾಡುತ್ತಿರುವುದರಿಂದ ತೊಂದರೆ ಎದುರಿಸಬೇಕಾಗಿದೆ. ನಗರಗಳಲ್ಲಿರುವ ಬಡಗಿಗಳಿಗೆ ಕೈ ತುಂಬಾ ಕೆಲಸ ಲಭ್ಯವಿದ್ದರೂ ಕೆಲಸ ಮಾಡಲು ಬಡಗಿಗಿಳು ಇಷ್ಟಪಡುತ್ತಿಲ್ಲ, ಕಾರಣ ಬೇರೆ ವೃತ್ತಿಗಳಲ್ಲಿ ಉತ್ತಮ ಆದಾಯ ಗಳಿಸಬಹುದಾಗಿದೆ. ಬಡಗಿತನ ಶ್ರಮದಾಯಕವಾದ ಕೆಲಸ. ಆದ್ದರಿಂದ ಇಂದಿನ ಯುವಕರು ಬಡಗಿವೃತ್ತಿ ಮಾಡಲು ಬಯಸುವುದಿಲ್ಲವೆಂದು ವಕ್ತೃ ಶಿವಮೂರ್ತಾಚಾರಿಯವರು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆದರೂ ಬಡಗಿತನದ ಉಳಿಕೆಗಾಗಿ ಸರ್ಕಾರ ಹಾಗೂ ಸಮಾಜ ಸಹಾಯ, ಸಹಕಾರ, ನೆರವು ನೀಡಬೇಕಾದ ಅನಿವಾರ್ಯತೆ ಇದೆ.

ಶಿಲ್ಪಗಾರಿಕೆ

ನಿಸರ್ಗದತ್ತವೂ ವೈವಿಧ್ಯಮಯವೂ ಆದ ಕಲ್ಲು ಅಥವಾ ಶಿಲೆ ಶಿಲಾಯುಗದ ಕಾಲದಿಂದಲೂ ಅಂದಿನ ಅಗತ್ಯದ ರಚನೆಗಳಿಗೆ ಮೂಲ ಸಾಮಗ್ರಿಯನ್ನಾಗಿ ಬಳಸಿಕೊಂಡು ಬರಲಾಗಿದೆ. ಅತಿ ಪ್ರಾಚೀನ ಶಿಲಾಯುಗದಲ್ಲಿ ನಸು ಹಾಗೂ ಕಡು ವರ್ಣದ ಜ್ವಾಲಾಮುಖಿ ನಿರ್ಮಿತ ಬೆಣಚುಕಲ್ಲು ಬಳಸಿಕೊಂಡು ಕೊಡಲಿ, ಉಳಿ, ಚಾಕು ಮುಂತಾದ ಉಪಕರಣಗಳನ್ನು ತಯಾರಿಸಿಕೊಂಡುದುಂಟು. ಪ್ರಾಗಿತಿಹಾಸ ಕಾಲದ ನಿವೇಶನಗಳಾದ ಕರ್ನಾಟಕದ ಮಸ್ಕಿ ಮತ್ತು ಬಳ್ಳಾರಿಯ ಕಪ್ಪಗಲ್ಲು, ಸಂಗನಕಲ್ಲುಗಳಲ್ಲಿ ನುಣುಪುಗೊಳಿಸಿದ ಶಿಲಾ ಉಪಕರಣಗಳು ದೊರಕಿವೆ.

ಕಲ್ಲು ಅಥವಾ ಶಿಲೆ, ಲೋಹ, ಕಟ್ಟಿಗೆ, ಮಣ್ಣು ಇತ್ಯಾದಿಗಳಿಂದ ಕಲ್ಲಿನ ಮೂರ್ತಿಗಳು, ಲೋಹದ ಮೂರ್ತಿಗಳು, ಕಟ್ಟಿಗೆಯ ಮೂರ್ತಿಗಳು, ಮಣ್ಣಿನ ಮೂರ್ತಿ ಇತ್ಯಾದಿಗಳನ್ನು ತಯಾರು ಮಾಡುವುದನ್ನು ಶಿಲ್ಪಗಾರಿಕೆ ಎನ್ನುವರು. ಮೂರ್ತಿಗಳನ್ನು ತಯಾರು ಮಾಡುವವನನ್ನು ಶಿಲ್ಪಿ ಎನ್ನುವರು. ಇವರನ್ನು ಪಾಂಚಾಲರು ಎಂದು ಕರೆಯುವರು. ಶಿಲ್ಪಿಗಳು ವಿಶ್ವಕರ್ಮ ಜಾತಿಗೆ ಸೇರಿದವರು ಎಂದು ಗುರುತಿಸಿಕೊಳ್ಳುತ್ತಾರೆ. ಮನು, ಮಯ, ತ್ವಷ್ಟ, ಶಿಲ್ಪಿ ಮತ್ತು ವಿಶ್ವಜ್ಞ ಇವರನ್ನು ಪಂಚಶಿಲ್ಪಿಗಳೆನ್ನುವರು.

ಶಿಲ್ಪದಲ್ಲಿ ದೇವಶಿಲ್ಪ ಮತ್ತು ಮಾನವಶಿಲ್ಪ ಎಂಬ ಎರಡು ವಿಧಗಳು ದೇವತಾರಾಧನೆಗೆ ಸಂಬಂಧಿಸಿದ ಶಿಲ್ಪ ದೇವಶಿಲ್ಪ, ಮನುಷ್ಯ ಜೀವನೋಪಯೋಗಿ ಶಿಲ್ಪ ಮಾನವ ಶಿಲ್ಪ. ಸಿಂಧೂ ಸಂಸ್ಕೃತಿಯ ಕಾಲದಿಂದಲೂ ಪ್ರಧಾನವಾಗಿ ಒಂದು ಸಮಾಜವು ಈ ಎರಡು ಪ್ರಕಾರಗಳ ಶಿಲ್ಪ ಕಾರ್ಯವನ್ನು ನಡೆಸುತ್ತಾ ಬಂದುದಾಗಿ ತಿಳಿದುಬರುತ್ತದೆ. ಸೈಂದವ ಸಂಸ್ಕೃತಿಯು ವೇದ ಪೂರ್ವ ಕಾಲದ್ದು ಎಂಬುದು ನಿಜವಿದ್ದರೆ, ಅಲ್ಲಿಯ ವಾಸ್ತುಶಿಲ್ಪ, ಕುಶಲಕಲೆಗಳನ್ನು ಸೃಷ್ಟಿಸಿದ ಆ ವಿಶ್ವಕರ್ಮರು ಈ ದೇಶಿಯರು ಆಗಿರಬೇಕು. (ಶಂ.ಬಾ. ಜೋಶಿ.೧೯೬೦.೨೭೬) ಕರ್ನಾಟಕದಲ್ಲಿಯಂತಹ ಶಿಲ್ಪ ಚಿತ್ರ ಎಂಬ ಕುಶಲಕಲೆಗಳ ಅಭಿವೃದ್ಧಿಗೆ ಇವರೇ ಕಾರಣರು. (ಚಿದಾನಂದ ಮೂರ್ತಿ.ಎಂ.೧೯೬೬.೬೧) ಆನಂದ ಕುಮಾರಸ್ವಾಮಿಯವರು ಈ ಬಗ್ಗೆ "ಬಹುಜನರು ತಮ್ಮ ಪ್ರಾಚೀನ ಸಂಸ್ಕೃತಿ ನಾಗರೀಕತೆಗಳಿಗಾಗಿ ಹೆಮ್ಮೆಪಡುತ್ತಿದ್ದರೂ, ಅಜಂತಾ, ಬೋದಗಯಾ ಮುಂತಾದ ಸ್ಥಳಗಳು, ಜೀರ್ಣಗೊಂಡು ಇಂದಿನ ತನಕವೂ ಉಳಿದಿರುವ ಸಿಂಹಳದ ನಗರಗಳ ನಿರ್ಮಾತೃಗಳು ವಿಶ್ವಕರ್ಮರು ಎಂಬುದನ್ನು ಬಹಳಷ್ಟು ಮಂದಿ ತಿಳಿದಿಲ್ಲ" ಎಂದು ಪಂಚಶಿಲ್ಪಿಗಳ ಪಂಚಶಿಲ್ಪವನ್ನು ಬಣ್ಣಿಸಿದ್ದಾರೆ.

ಸಿಂಧೂ ಸಂಸ್ಕೃತಿಯ ನೆಲೆಗಳಲ್ಲಿ ಲೇಪ್ನಲಾಜುಲಿ, ಟರ್ಕೋಸ್‌ಜೇಡ್ಶೆಟ್ ಮುಂತಾದ ಶಿಲೆಗಳ ನಯಗೊಳಿಸಿದ ಮಣಿಗಳನ್ನು ಆಭರಣಕ್ಕಾಗಿ ಬಳಸಿಕೊಳ್ಳಲಾಗಿದೆ. ಇಲ್ಲಿಯೇ ದೊರಕಿದ ಕೆಂಪು ಶಿಲೆಯ ಮಾನವ ದಡಾಕೃತಿ, ಮಾನವ, ವೃಕ್ಷ, ಪ್ರಾಣಿ ಹಾಗೂ ಅಕ್ಷರಗಳನ್ನೊಳಗೊಂಡ ವಿವಿಧ ಬಗೆಯ ಶಿಲಾಮುದ್ರೆಗಳ ಶಿಲ್ಪಗಾರಿಕೆಯ ಕೌಶಲದ ರಚನೆಗಳಾಗಿವೆ.

ಕೊನಾರ್ಕ್‌ದ ಸೂರ್ಯದೇವಾಲಯ, ಒರಿಸ್ಸಾದ ಲಿಂಗರಾಜ ದೇವಾಲಯ ಚಂದೇಲರ ಕಾಲದ ಖಜುರಾಹೋ ದೇವಾಲಯಗಳು ಶಿಲ್ಪಗಾರಿಕೆಯ ಅನುಪಮ ಉದಾಹರಣೆಗಳಾಗಿವೆ. ದಕ್ಷಿಣ ಭಾರತದಲ್ಲಿ ಮಹಾಬಲಿಪುರಂ, ಶ್ರೀರಂಗಂ, ಮಧುರೆ, ಕರ್ನಾಟಕದ ಹಳೇಬೀಡು, ಬೇಲೂರು, ಸೋಮನಾಥಪುರ, ಬಾದಾಮಿ, ಪಟ್ಟದಕಲ್ಲು, ಐಹೊಳೆ ಮುಂತಾದೆಡೆಗಳಲ್ಲಿ ಶಿಲ್ಪಗಾರಿಕೆಯನ್ನು ತಲೆಮಾರುಗಳಿಂದ ಉಳಿಸಿಕೊಂಡು ಬಂದ ನೂರಾರು ದೇಶದುದ್ದಕ್ಕೂ ಹರಡಿವೆ.

ಪ್ರಾಚೀನ ಕಾಲದಿಂದ ಪರಂಪರಾಗತವಾಗಿ ಉಳಿದು ಬಂದ ಶಿಲ್ಪಗಾರಿಕೆ ಭಾರತದ ಪ್ರಮುಖ ಊರುಗಳಲ್ಲಿ ಹಾಗೂ ಅನೇಕ ಹಳ್ಳಿಗಳಲ್ಲಿ ನಿತ್ಯ ಬಳಕೆಯ ಪಾತ್ರೆ ಪರಿಕರಗಳನ್ನು ಮೊದಲುಗೊಂಡು ದೇವಾಲಯಗಳಲ್ಲಿನ ಅರ್ಚನೆಗಾಗಿ ದೇವತಾ ಮೂರ್ತಿಗಳನ್ನು ನಿರ್ಮಿಸಲಾಗುತ್ತದೆ. ಅಲ್ಲದೆ ಮನೆ, ದಿವಾನ್‌ಖಾನೆ, ಸಾರ್ವಜನಿಕ ಸ್ಥಳ ಮುಂತಾದೆಡೆಗಳಲ್ಲಿನ ಅಲಂಕರಣಕ್ಕಾಗಿ ತಯಾರಿಸಲಾಗುವ ಸಾಂಪ್ರದಾಯಿಕ ಹಾಗೂ ನವೀನ ಶೈಲಿಯ ಪ್ರಾಣಿ, ಪಕ್ಷಿ, ಮಾನವ ಹಾಗೂ ದೇವತಾ ಮೂರ್ತಿಗಳು ಈ ಕಲೆಯ ವಿಕಾಸದ ಕಲ್ಪನೆಯನ್ನು ಮೂಡಿಸಬಲ್ಲವು.

ಶಿಲ್ಪ ಮತ್ತು ಶೈಲಿ: ಶಿಲೆಯಲ್ಲಿ ಆಕಾರವನ್ನು ಖಂಡರಿಸುವಾಗ, ಮಾಡುವುದಕ್ಕಿಂತ ಬಿಡಿಸುವುದು, ಕಡೆಯುವುದು ಮುಖ್ಯವಾಗುತ್ತದೆ. ಶಿಲ್ಪಿಯು ಶಿಲೆಯಲ್ಲಿ ಆಕಾರವೊಂದನ್ನು ಕಂಡು ಆ ಆಕಾರವನ್ನು ಸೆರೆಯಿಂದ ಬಿಡಿಸುವನು. ಅಂದರೆ ಅನಗತ್ಯವಾದ ಭಾಗಗಳನ್ನು ತೆಗೆದು ಹಾಕಿದರೆ ಶಿಲ್ಪಕೃತಿ ಆಯಿತು ಎಂದರ್ಥ.

ಕಲೆಯ ಇತಿಹಾಸವನ್ನು ಅವಲೋಕಿಸಿದಾಗ ಶೈಲಿ ಪ್ರಮುಖ ಪಾತ್ರವಹಿಸುತ್ತದೆ. ಶಿಲ್ಪಿಯ ಆಂತರಿಕ ಭಾವಾವೇಶ ಹಾಗೂ ಆ ಕಾಲದ ಆ ಪ್ರಾಂತ್ಯದ ಪ್ರವೃತ್ತಿಯನ್ನು ಸಹ ಇದರಿಂದ ಗುರುತಿಸಬಹುದು.

ಶಿಲ್ಪವನ್ನು ರಚಿಸಲು ಉಪಯೋಗಿಸಿದ ವಸ್ತು ಮತ್ತು ಧಾತುವನ್ನು ಮಾಧ್ಯಮವೆಂದು ಕರೆಯುತ್ತಾರೆ. ಕಲ್ಲಿನಲ್ಲಿ ಶಿಲ್ಪ ಅರಳಿದ್ದರೆ ಕಲ್ಲು ಆ ಶಿಲ್ಪದ ಮಾಧ್ಯಮ. ಒಂದು ಶಿಲ್ಪದ ತಯಾರಿಕೆಯಲ್ಲಿ ವಿವಿಧ ವಸ್ತುಗಳನ್ನು ಅಳವಡಿಸಿಕೊಂಡಿದ್ದರೆ ಅದನ್ನು ಮಿಶ್ರಮಾಧ್ಯಮ ಎನ್ನುವರು.

ಶಿಲ್ಪದ ಮೇಲುಮೈ ನುಣುಪಾಗಿಯೂ, ಒರಟಾಗಿಯೂ ಇರಬಹುದು. ಈ ರೀತಿಯ ಶಿಲ್ಪದ ಮೇಲ್ಮೈ ಗುಣತ್ವವನ್ನು ಮೈವಳಿಕೆ ಎಂದು ಕರೆಯುತ್ತೇವೆ. ಕೆಲವೊಮ್ಮೆ ಕಲಾವಿದ ಉಳಿದ ಗುರುತುಗಳನ್ನು ಹಾಗೆಯೇ ಉಳಿಸುವುದುಂಟು. ಇದು ಕಲಾವಿದನ ಉಳಿ ಜಾರಿಸಿದ ರೀತಿ ಮತ್ತು ರಭಸವನ್ನು, ಭಾವವೇಶವನ್ನು ತಿಳಿಸುತ್ತದೆ.

ಶಿಲ್ಪಗಳಲ್ಲಿ ಪ್ರಕಾರಗಳು: ಶಿಲ್ಪಗಳಲ್ಲಿ ದುಂಡುಶಿಲ್ಪ ಮತ್ತು ಉಬ್ಬುಶಿಲ್ಪ ಎಂಬ ಎರಡು ಪ್ರಕಾರಗಳುಂಟು ಯಾವ ಶಿಲ್ಪದ ಎಲ್ಲಾ ಭಾಗಗಳನ್ನು ನೋಡುವುದಕ್ಕೆ ಸಾಧ್ಯವಿದೆಯೋ ಅಂತಹ ಶಿಲ್ಪಗಳಿಗೆ ದುಂಡುಶಿಲ್ಪಗಳೆನ್ನುವರು. ಯಾವ ಶಿಲ್ಪಗಳು ಭಿತ್ತಿ ಅಥವಾ ಇನ್ನೊಂದು ಪಾತಳಿಗೆ ಅಂಟಿಕೊಂಡಿದ್ದು ಶಿಲ್ಪಗಳು ಭಿತ್ತಿ ಅಥವಾ ಪಾತಳಿಯಿಂದ ಉಬ್ಬಿ ಹೊರಚಾಚಿಕೊಂಡಿದೆಯೋ ಅಂತಹ ಶಿಲ್ಪಗಳನ್ನು ಉಬ್ಬು ಶಿಲ್ಪಗಳೆಂದು ಪರಿಗಣಿಸುವುದು.

ಮೂರ್ತಿಶಿಲ್ಪಗಳು: ಮೂರ್ತಿಶಾಸ್ತ್ರಕ್ಕೆ ಅನುಗುಣವಾಗಿ ತಯಾರಾದ ದೇವತಾ ವಿಗ್ರಹಗಳು, ದೇವತೆಯ ಅಯುಧಗಳು, ವಾಹನಗಳು ಇಲ್ಲಿ ಪ್ರಮುಖವಾದವುಗಳು.

ಚಲ, ಅಚಲ ಶಿಲ್ಪಗಳು: ಸ್ಥಳದಿಂದ ಸ್ಥಳಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗುವಂತಹವು ಚಲ ವಿಗ್ರಹಗಳು. ಕಲ್ಲಿನಿಂದ ಕೊರೆದು ಒಂದೇ ಸ್ಥಳದಲ್ಲಿ ಪ್ರತಿಷ್ಠಾಪಿಸಿದ್ದು ಅಚಲಶಿಲ್ಪಗಳು.

ಭಾವ ಶಿಲ್ಪಗಳು: ವ್ಯಕ್ತಿ ಚಿತ್ರಣದ ಶಿಲ್ಪದಲ್ಲಿ ದೈಹಿಕ ಮುಖಚರ್ಯೆಗಳಿಗಿಂತ ಭಾವವೇ ಪ್ರಮುಖವಾಗಿದ್ದಲ್ಲಿ ಭಾವಶಿಲ್ಪವಾಗುತ್ತದೆ. ಉದಾ: ಬುದ್ಧ, ಬಸವ.

ಪರಿಸರ ಶಿಲ್ಪಗಳು: ನಿರ್ಜೀವವಾದ ಆವರಣಕ್ಕೆ ಜೀವ ತುಂಬುವ ಮತ್ತು ಸ್ಥಳಾವಕಾಶಕ್ಕೆ ಚೇತನ ನೀಡುವ ದೃಷ್ಟಿಯಿಂದಲೇ ಇಂತಹ ಶಿಲ್ಪಗಳು ರಚಿತವಾಗಿವೆ. ಪರಿಸರಕ್ಕೆ ಹೊಂದುವಂತೆ ಶಿಲ್ಪಗಳ ಆಕಾರವಿರುತ್ತದೆ.

ನೈಸರ್ಗಿಕ ಶಿಲ್ಪಗಳು: ಶಿಲ್ಪಿಯಲ್ಲಿ ನೈಸರ್ಗಿಕವಾಗಿ ಭಾವವನ್ನು ಕೆರಳಿಸುವ ರೂಪಗಳಿರುತ್ತವೆ. ಶಿಲ್ಪಿ ಅಂತಹವುಗಳನ್ನು ತಂದು ಅವಶ್ಯವಿದ್ದಲ್ಲಿ ತಿದ್ದಿ ತೀಡಿ ಅವುಗಳಿಗೊಂದು ರೂಪುಕೊಡಬಹುದು. ಇಲ್ಲವೇ ಹಾಗೆಯೆ ಉಳಿಸಿಕೊಳ್ಳಲೂಬಹುದು.

ಸಮುದಾಯ ಶಿಲ್ಪಗಳು: ದಿನನಿತ್ಯದ ಘಟನೆಗಳು ಹಾಡು ಪಾಡುಗಳನ್ನು ಅವಲಂಬಿಸಿ ರಚಿಸಿದ ಶಿಲ್ಪಗಳು.

ಆಧುನಿಕ ಶಿಲ್ಪಗಳು: ಶಿಲ್ಪಕಲೆಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮತ್ತು ತಂತ್ರಜ್ಞಾನಗಳನ್ನು ಬಳಸಿಕೊಂಡು ವಿವಿಧ ಮಾಧ್ಯಮಗಳಲ್ಲಿ ಅನೇಕ ಶಿಲ್ಪಗಳು ರೂಪುಗೊಳ್ಳುತ್ತವೆ. ಅವುಗಳಲ್ಲಿಯೇ ವಸ್ತು, ವಿಷಯ, ಭಾವ, ತಾಂತ್ರಿಕತೆ, ಶೈಲಿ, ಪಂಥಗಳಿಗನುಗುಣವಾಗಿ ಅವು ಆಕಾರ ಪಡೆದಿರುತ್ತವೆ. ಇಂತಹ ಶಿಲ್ಪಗಳನ್ನು ತಾತ್ಕಾಲಿಕ ಶಿಲ್ಪಗಳು, ಜೋಡಣಾ ಶಿಲ್ಪಗಳು, ಪ್ರತಿಷ್ಠಾಪನಾ ಶಿಲ್ಪಗಳು, ಶಕ್ತಿಸಂಚಿತ ಚಲನಾತ್ಮಕ ಶಿಲ್ಪಗಳು ಎಂದು ವರ್ಗಿಕರಿಸಬಹುದು.

ಸೌಂದರ್ಯದ ದೃಷ್ಟಿಕೋನದಿಂದ ಶಿಲ್ಪಕಲೆಯ ಮಹತ್ವ:

ಚೆಲುವಾದ ಹೆಣ್ಣಿನಲ್ಲಿ ಮೋಹಕತೆ ಉಂಟುಮಾಡುವುದು ಕಷ್ಟದ ಕೆಲಸವೇನಲ್ಲ. ಆದರೆ ನಿರ್ಜೀವ ಶಿಲೆಯನ್ನು ಉಳಿಯಿಂದ ಕೆತ್ತಿ, ಅದರಲ್ಲಿ ಸೌಂದರ್ಯ, ಮೋಹಕತೆ, ಆಕರ್ಷಣೆಯನ್ನುಂಟುಮಾಡುವುದು ನುರಿತ ಶಿಲ್ಪಿಗೆ ಮಾತ್ರ ಸಾಧ್ಯ.

ಸಾಂಚಿ, ಮಥುರಾ, ಖೂಜುರಾಹೋ, ಕೊಣಾರ್ಕ, ಹಳೆಬೀಡು, ಬೇಲೂರು, ಹಂಪೆ, ಬಾಗಳಿ, ಐಹೊಳೆ, ಬಾದಾಮಿ, ಪಟ್ಟದಕಲ್ಲು ಶ್ರವಣಬೆಳಗೋಳ ಮೊದಲಾದೆಡೆ ಮೂರ್ತಿಗಳು ಸೊಂಟದವರೆಗೆ ಅನಾವೃತವಾಗಿಯೇ ಇವೆ. ನತಂಬದ ಕೆಳಗಡೆ ಆಭರಣಗಳಿಂದಲೋ ಇಲ್ಲವೇ ಪಾರದರ್ಶಕ ಬಟ್ಟೆಯಿಂದಲೋ ಹೊದ್ದು ಕೊಂಡಿರುವಂತೆ ಕೆತ್ತಲಾಗಿದೆ, ಈ ಮೂರ್ತಿಗಳ ಎಲ್ಲಾ ಅಂಗಾಂಗಗಳು ಸ್ಫುಟವಾಗಿ ಕಾಣುತ್ತವೆ.

"ಭಾರತೀಯ ಶಿಲ್ಪಕಾರರು ಪ್ರಕೃತಿಯಿಂದ ಉಪಮೆಗಳನ್ನು ತೆಗೆದುಕೊಂಡು, ಅವುಗಳನ್ನು ತಮ್ಮ ಕಲ್ಪನೆಯಿಂದ ಸಮೃದ್ಧವಾಗಿ ಮಾಡಿದ್ದ ಈ ಶಿಲ್ಪಗಳು ಸುಂದರವಾಗಿರುವಷ್ಟೇ ಆಕರ್ಷಕವೂ ಆಗಿವೆ."[೮೦]

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಶಿಲ್ಪಿಗಳು ಪ್ರಕೃತಿ ಹಾಗೂ ಕಲ್ಪನೆಯನ್ನು ಕಡೆಗಾಣಿಸಿ ಸುಂದರ ರೂಪದರ್ಶಿಯರನ್ನು ಹುಡುಕಿ, ಶಿಲೆಯಲ್ಲಿ ಅವಳ ಪ್ರತಿರೂಪವನ್ನು ಕೆತ್ತುತ್ತಿದ್ದರು. ಹೀಗಾಗಿ ಅವರ ಕೆಲಸ ಅಪೂರ್ವವಾದುದು ಎಂದೆನಿಸುವುದಿಲ್ಲ. ಕೇವಲ ರೂಪದರ್ಶಿಯ ನಕಲು ಎಂದೆನಿಸುತ್ತದೆ.

ಬೇಲೂರಿನ ದರ್ಪಣ ಸುಂದರಿ, ನೃತ್ಯಮುದ್ರೆಯಲ್ಲಿರುವ ಸರಸ್ವತಿ, ಮೋಹಿನಿ, ಇಲ್ಲಿರುವ ಕಮಾನುಗಳಿಗೆ ಆನಿಸಿದಂತಿರುವ ಮೂರ್ತಿಗಳು, ವಿವಸ್ತ್ರರಾಗಿರುವಂತೆ ರೂಪುಗೊಂಡಿದ್ದರೂ, ಆಭರಣಗಳ ಅಲಂಕಾರದಿಂದ ಅಶ್ಲೀಲವೆಂದೆನಿಸದೇ ಶಿಲ್ಪಕಲೆಯಲ್ಲಿ ಅದ್ವಿತೀಯವೆನಿಸಿವೆ. ಬಿಹಾರದ 'ರಾಜಗಿರಿಯ ನಾಗಿಣಿ' ಶಿಲ್ಪ ಲಜ್ಜೆಯಿಂದ ಕಣ್ಣುಗಳನ್ನು ತಗ್ಗಿಸಿ ಅತ್ಯಂತ ಸಹಜ ಮುದ್ರೆಯಲ್ಲಿ ನಿಂತಿರುವಳು.[೮೧] ಅವಳ ಅಂಗಾಂಗಗಳು ಪ್ರಮಾಣಬದ್ಧವಾಗಿದ್ದು ನಸುಬಾಗಿದ ಭಂಗಿಯಲ್ಲಿದೆ. ಗುಂಗುರಾಗಿ ಇಳಿಬಿದ್ದ ಕೇಶರಾಶಿಗಳಿವೆ. ಇದರಿಂದ ಭಾರತೀಯ ಶಿಲ್ಪಕಲೆ ಶಾಸ್ತ್ರೀಯ ಮತ್ತು ಸೌಂದರ್ಯ ಸೃಷ್ಟಿಯ ಜ್ಞಾನದಿಂದ ಕೌಶಲ್ಯವನ್ನು ಪೂರ್ಣವಾಗಿ ಬಳಸಿಕೊಳ್ಳುವ ಸಾಮರ್ಥ್ಯ ಹೊಂದಿತ್ತೆಂಬುದಂತೂ ಸ್ಪಷ್ಟ

ಭಾರತೀಯ ರಾಜಾಶ್ರಯದಲ್ಲಿ ಶಿಲ್ಪಗಾರಿಕೆ:

ಮೌರ್ಯರ ಕಾಲದಲ್ಲಿ ಶಿಲ್ಪಗಾರಿಕೆ: ಅಶೋಕನ ಕಾಲದಲ್ಲಿ ಶಿಲಾಶಾಸನಗಳು ಹಾಗೂ ಸ್ತಂಭಗಳು ಹೆಚ್ಚು ಪ್ರಾಮುಖ್ಯತೆ ಪಡೆದಿದ್ದವು. ಬೌದ್ಧ ಧರ್ಮದ ಪ್ರಚಾರಕ್ಕಾಗಿ ಇವುಗಳನ್ನು ರಚಿಸಿದ್ದು ಇವುಗಳಲ್ಲಿ 'ಸಾರನಾಥ ಕ್ಯಾಪಿಟಲ್ ಫಿಗರ್' ಪ್ರಖ್ಯಾತವಾದುದು. ಇದರಲ್ಲಿ ನಾಲ್ಕು ದಿಕ್ಕುಗಳಿಗೆ ಮುಖಮಾಡಿಕೊಂಡಿರುವ ಸಿಂಹಗಳು, ಮೇಲ್ಗಡೆ ಬೌದ್ಧ ಧರ್ಮದ ಚಕ್ರ, ಕೆಳಗಡೆ ಆನೆ, ಕುದುರೆ ಸಿಂಹ, ಗೂಳಿಗಳಿವೆ.

ದಿದಾರ್‌ಗಂಜದಲ್ಲಿ ಸಿಕ್ಕಿರುವ 'ಯಕ್ಷಿಯ ಶಿಲ್ಪ' ಅತ್ಯಂತ ಶ್ರೇಷ್ಠವಾದುದು. ತುಂಬಿದ ಎದೆ, ಸಣ್ಣದಾದ ಸೊಂಟ, ಅಗಲವಾದ ನಿತಂಬ, ಹೊಕ್ಕಳ ಕೆಳಕ್ಕೆ ಉಟ್ಟಸೀರೆ ಆಕರ್ಷಕವಾಗಿದೆ. ಶಿಲ್ಪಗಾರಿಕೆಗೆ ರಾಜಾಶ್ರಯವನ್ನು ನೀಡಲಾಗಿತ್ತು.

ಶುಂಗರ ಕಾಲದಲ್ಲಿ ಶಿಲ್ಪಗಾರಿಕೆ: ಬಾಜಾದ ವಿಹಾರದ ಉಬ್ಬು ಶಿಲ್ಪದಲ್ಲಿ ಆನೆಯನ್ನೇರಿ ಬರುತ್ತಿರುವ ಇಂದ್ರ ರಥವನ್ನೇರಿ ಬರುತ್ತಿರುವ ಸೂರ್ಯ ಶಿಲ್ಪಗಳನ್ನು ಕಾಣಬಹುದು. ಮುಖ್ಯವಾಗಿ ಇಲ್ಲಿ ಬಾರ್ಹುತ್ ಸ್ತೂಪ, ಸಾಂಚಿ ಸ್ತೂಪ, ಅಮರಾವತಿ ಸ್ತೂಪಗಳಿದ್ದು ಇವುಗಳಲ್ಲಿ ಬುದ್ಧನ

ಜೀವನ ಜಾತಕಗಳಿಗೆ ಸಂಬಂಧಿಸಿದ ಉಬ್ಬು ಶಿಲ್ಪಗಳನ್ನು ಮತ್ತು ಕಲ್ಲಿನ ಕಟಾಂಜನೆ, ತೋರಣಗಳನ್ನು ಕಾಣಬಹುದು. ಯಕ್ಷ, ಯಕ್ಷಿ ಮತ್ತು ವೃಕ್ಷ ಕನ್ಯೆಯರನ್ನು ಕೆತ್ತಿರುವರು ಸಾಲಭಂಜಿಕಾ ವಿಗ್ರಹ, ಯಕ್ಷಿಶಿಲ್ಪ, ಇವುಗಳಲ್ಲಿ ಶಿಲ್ಪಿಯ ಕೈಚಳಕ ಮತ್ತು ಕಲ್ಪನಾ ಶಕ್ತಿಯನ್ನು ಗುರುತಿಸಬಹುದು.

ಶಾತವಾಹನರ ಕಾಲದಲ್ಲಿ ಶಿಲ್ಪಗಾರಿಕೆ: ಕಾರ್ಲೆ ಚೈತ್ಯಾಲಯದ ಹೊರಗೋಡೆಯಲ್ಲಿರುವ ಮಿಥುನ ಶಿಲ್ಪಗಳ ಜೋಡಿ ದುಂಡುತನದ ವಾಸ್ತು ಶಿಲ್ಪಗಳಿಗೆ ಹೆಸರುವಾಸಿಯಾಗಿದೆ. ಸಾಂಚಿಯ ವನದೇವತೆ ಶಿಲ್ಪಗಳು ಚಲನಾತ್ಮಕ ಸೊಗಸನ್ನು ಹೊಂದಿದ್ದು, ಈ ಶಿಲ್ಪದಲ್ಲಿ ಕಥಾನಕ ಸಂಯೋಜನೆ ಉತ್ಕೃಷ್ಟಮಟ್ಟದ್ದು.

ಗಾಂಧಾರ ಕಾಲದಲ್ಲಿ ಶಿಲ್ಪಗಾರಿಕೆ: ಕನಿಷ್ಕನ ಕಾಲದಲ್ಲಿ ಗ್ರೀಕ್ ಮತ್ತು ಭಾರತೀಯರ ತಂತ್ರ ಕೌಶಲ್ಯ ಹಾಗೂ ಆಧ್ಯಾತ್ಮಿಕತೆಯೊಂದಿಗೆ ಉತ್ಕೃಷ್ಟವಾಗಿ ಬೆಳೆಯಿತು. ಕಾಡು ಮರಗಳೊಂದಿಗೆ ಇದ್ದ ಯಕ್ಷಿಯು ಹಿಂದಿನ ಸ್ವರೂಪವನ್ನು ಕಳೆದುಕೊಂಡು ನಗರಪ್ರದೇಶಗಳಿಂದ ಪ್ರಭಾವಿತಗೊಂಡು ಮೈತುಂಬಿದ ಕಾಮುಖ ಸ್ತ್ರೀ ರೂಪತಾಳಿದಳು. ಸುಂದರ ಸ್ತ್ರೀ ಶಿಲ್ಪಗಳು ವಸ್ತ್ರಗಳಲ್ಲಿ ನಿರಿಗೆಗಳನ್ನು ನೀರಿನ ಅಲೆಗಳಂತೆ ತೋರಿಸಿದ್ದು ಪಾರದರ್ಶಕವಾಗಿವೆ. ಇದರಿಂದ ದೇಹ ನಗ್ನವಾಗಿ ಕಾಣುವ ಶಿಲ್ಪಗಳು ಆರಂಭವಾದವು.

ಗುಪ್ತರ ಕಾಲದಲ್ಲಿ ಶಿಲ್ಪಗಾರಿಕೆ: ಗುಪ್ತರ ಯುಗವು ಸುವರ್ಣಯುಗವೆಂದು ಹೆಸರು ಪಡೆಯಿತು. ಶಿಲ್ಪಕಲೆಯು ಪರಿಷ್ಕೃತಗೊಂಡು ದೇವದೇವತೆಯ ವಿಗ್ರಹ ಕಲ್ಪನೆಯೇ ಶಾಸ್ತ್ರಬದ್ಧವಾಗಿ ಬೆಳೆಯಿತು. ಶಿಲ್ಪಿಗಳು ಮೂರ್ತಿಗಳ ಅಂಗಾಂಗ ರಚನೆಯಷ್ಟೆ ಭಾವಾಭಿವ್ಯಕ್ತಿಗೂ ಒತ್ತುಕೊಟ್ಟರು. ಇಲ್ಲಿಯ ಶಿಲ್ಪಗಳಲ್ಲಿ ಆಧ್ಯಾತ್ಮಿಕ ವರ್ಚಸ್ಸಿಗೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಇದರಲ್ಲಿ ಬರುವ ಶಿಲ್ಪಗಳಲ್ಲಿ ಬಟ್ಟೆಗಳು ಮೈಗೆ ಬಿಗಿಯಾಗಿ ಅಂಟಿಕೊಂಡಿವೆ ಹಾಗೂ ಪಾರದರ್ಶಕವಾಗಿವೆ. ಕಲ್ಲು ಮೂರ್ತಿಗಳಲ್ಲಿ ಕೂದಲನ್ನು ಗುಂಗುರು ಗುಂಗುರಾಗಿ ಕೆತ್ತಿದ್ದಾರೆ. ಹೆಣ್ಣು ಮೂರ್ತಿಗಳಲ್ಲಿ ಮುಖದ ಎರಡು ಬದಿಗೂ ಕೂದಲು ಸುರುಳಿ ಸುರುಳಿಯಾಗಿ ಹರಡಿಕೊಂಡಿದ್ದು ತಲೆಯ ಮೇಲಿನ ಗುಂಟೂ ಕೂಡ ಕಂಡುಬರುತ್ತದೆ. ಹಣೆಯ ಮೇಲೂ ಕೂಡ ಕೂದಲು ಹರಡಿಕೊಂಡಿವೆ. ಆಭರಣಗಳನ್ನು ಧರಿಸಿಕೊಂಡಿವೆ. ಬಟ್ಟೆಗಳ ಮೇಲೂ ನಕ್ಷೆಗಳನ್ನು ಗುರುತಿಸಲಾಗಿದೆ. ಅರೆ ಮುಚ್ಚಿದ ಕಣ್ಣು, ಶಾಂತ ಪ್ರಸನ್ನವಾದ ಮುಖಭಾವ, ನಿಂತಭಂಗಿ, ದೈಹಿಕ ರಚನೆ ಎಲ್ಲಾ ಶಾಂತ ಭಾವವನ್ನು ಹೊರಹೊಮ್ಮಿಸುತ್ತವೆ. ಗುಪ್ತರ ಕಾಲದಲ್ಲಿ ಶಿಲ್ಪಗಾರಿಕೆ ಪ್ರಸಿದ್ಧಿ ಹೊಂದಿತ್ತು.

ಕರ್ನಾಟಕದಲ್ಲಿ ಶಿಲ್ಪಗಾರಿಕೆ:

ಚಾಲುಕ್ಯರ ಕಾಲದಲ್ಲಿ ಶಿಲ್ಪಗಾರಿಕೆ: ಐಹೊಳೆ, ಬಾದಾಮಿ, ಪಟ್ಟದಕಲ್ಲುಗಳಲ್ಲಿ ಇವರ ಶಿಲ್ಪಕಲೆಯನ್ನು ಕಾಣುತ್ತೇವೆ. ಬಾದಾಮಿಯಲ್ಲಿ ಬಂಡೆಗಳನ್ನು ಕೊರೆದು ನಿರ್ಮಿಸಲಾದ

ದೇವಾಲಯಗಳಲ್ಲಿ ಶೈವ, ವೈಷ್ಣವ, ಜೈನ ಧರ್ಮಗಳಿಗನುಸಾರವಾಗಿ ಒಂದೊಂದು ಗುಹೆಯಲ್ಲಿಯೂ ಅಪೂರ್ವ ಶಿಲ್ಪಗಳನ್ನು ಕಾಣುತ್ತೇವೆ, ಚಾಲುಕ್ಯರ ಶಿಲ್ಪಗಳಲ್ಲಿ ದೇವತಾ ವಿಗ್ರಹಗಳು, ಪೌರಾಣಿಕ ವಿಗ್ರಹಗಳು ಸಮಾಜ ಮತ್ತು ಧರ್ಮದ ಕುರಿತು ಶಿಲ್ಪಗಳು, ರಾಜರ ವಿಗ್ರಹಗಳು, ಸಾಮಾನ್ಯ ಜನತೆಯ ಆಚಾರ ವಿಚಾರ ಕುರಿತು ಶಿಲ್ಪಗಳನ್ನು ಕಾಣಬಹುದು. ಚಾಲುಕ್ಯರು ಮದನಿರಾ ವಿಗ್ರಹಗಳ ಪರಂಪರೆಯನ್ನು ಪ್ರಾರಂಭಿಸಿದರು. ಮೊದಲ ಬಾರಿಗೆ ಪಂಚತಂತ್ರ ಕಥೆಗಳನ್ನು ಕಲ್ಲಿನಲ್ಲಿ ಕಡೆಸಿದ ಖ್ಯಾತಿ ಇವರದು. ಐಹೊಳೆಯಲ್ಲಿ ದುರ್ಗದ ಗುಡಿ, ಮತ್ತು ಹುಚ್ಚ ಮಲ್ಲಿ ಗುಡಿಗಳು ಪ್ರಸಿದ್ಧವಾಗಿವೆ. ಇತಿಹಾಸ ತಜ್ಞ ಜೇಮ್ಸ್ ಫರ್ಗುಸನ್ನರು ಚಾಲುಕ್ಯರ ಕಟ್ಟಡ ಮತ್ತು ಶಿಲ್ಪಕೆತ್ತನೆ ನೋಡಿ "ಆರ್ಯರ ಮೆದುಳು ದ್ರಾವಿಡರ ಕೈ ಇವೆರಡೂ ಬಹು ಸುಂದರವಾಗಿ ಬೆರತಂತೆ ಕಾಣುತ್ತವೆ." ಎಂದಿರುವುದಲ್ಲದೆ "ಶಿಲ್ಪವು ಹಿಂದುಸ್ಥಾನದಲ್ಲಿ ಜೀವಂತವಿದೆ, ಹುಂಬರೂ ಕೂಡಾ ಶ್ರೇಷ್ಠ ಶಿಲ್ಪಿಗರಿರುವರು"[೮೨] ಎಂದಿದ್ದಾರೆ. ರಾಜಾಶ್ರಯವು ಶಿಲ್ಪಗಾರಿಕೆಯ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ.

ಗಂಗರ ಕಾಲದಲ್ಲಿ ಶಿಲ್ಪಗಾರಿಕೆ: ಇವರ ದೇವಾಲಯಗಳು ಚಿಕ್ಕವು, ಮೂರ್ತಿಶಿಲ್ಪಗಳು ಚಿಕ್ಕವು. ಆದರೆ ಈ ಶಿಲ್ಪಗಳೆಲ್ಲ ಗಟ್ಟಿಯಾದ ಕಲ್ಲಿನಲ್ಲಿ ರಚನೆಯಾಗಿವೆ. ಇವುಗಳಲ್ಲಿ ದುಂಡು ಶಿಲ್ಪಗಳಿಗಿಂತ ಉಬ್ಬುಶಿಲ್ಪಗಳೇ ಜಾಸ್ತಿಯಾಗಿ ಕಂಡುಬರುತ್ತವೆ. ಶ್ರವಣಬೆಳಗೋಳದ ಗೊಮ್ಮಟೇಶ್ವರನ ವಿಗ್ರಹವು ಅತ್ಯಂತ ಮನಮೋಹಕವಾಗಿದ್ದು ೫೪ ಅಡಿ ಎತ್ತರವಿದೆ.

ರಾಷ್ಟ್ರಕೂಟರ ಕಾಲದಲ್ಲಿ ಶಿಲ್ಪಗಾರಿಕೆ: ಐಹೊಳೆ, ಪಟ್ಟದಕಲ್ಲು, ಎಲ್ಲೋರಾ, ಎಲಿಫೆಂಟಾ, ಗುಹೆಗಳಲ್ಲಿ ಇವರ ವಾಸ್ತು ಮತ್ತು ಶಿಲ್ಪಗಳನ್ನು ನೋಡುಬಹುದು. ಎಲ್ಲೋರದ ಕೈಲಾಸ ದೇವಾಲಯವನ್ನು ಕೊರೆಸಿದ್ದು ಇಲ್ಲಿ ಲಿಂಗೋದ್ಭವ ಶಿವನ ಮೂರ್ತಿ, ರಾವಣನು ಕೈಲಾಸ ಪರ್ವತ ಎತ್ತುವ ಸನ್ನಿವೇಶದ ಶಿಲ್ಪಗಳೂ ಗಮನಾರ್ಹವಾಗಿವೆ. ಪೌರಾಣಿಕ, ದಶಾವತಾರಗಳು, ಸಪ್ತಮಾತೃಕೆಯರ ಹಲವಾರು ಶಿಲ್ಪಗಳನ್ನು ಕಾಣುತ್ತೇವೆ. ಎಲಿಫೆಂಟಾದಲ್ಲಿ ೧೮ ಅಡಿ ಎತ್ತರದ ತ್ರಿಮೂರ್ತಿ ಶಿಲ್ಪವು ಪ್ರಖ್ಯಾತವಾದದ್ದು. ರಾಷ್ಟ್ರಕೂಟ ಅರಸರು ಶಿಲ್ಪಿಗಳಿಗೆ ರಾಜಶ್ರಯ ನೀಡಿ ಶಿಲ್ಪಗಾರಿಕೆ ಬೆಳೆಯಲು ಕಾರಣರಾಗಿದ್ದಾರೆ.

ಕಲ್ಯಾಣ ಚಾಲುಕ್ಯರ ಶಿಲ್ಪಕಲೆ: ಇವರ ಕಾಲದಲ್ಲಿ ಕರ್ನಾಟಕದ ಶಿಲ್ಪಕಲೆಯು ಹೊಸ ಸಂಪ್ರದಾಯವನ್ನು ರೂಢಿಸಿಕೊಂಡಿತು. ಮೆದುವಾದ ಕಲ್ಲುಗಳನ್ನು ಬಳಸಿರುವುದು, ಶಿಲ್ಪಗಳಲ್ಲಿ ನಯನಾಜೂಕಿನ ಕೆತ್ತನೆಗೆ ಅನುಕೂಲವಾಗಿದ್ದಿತು. ಕೀರ್ತಿಮುಖ, ಹೂ ಬಳ್ಳಿಗಳು, ಕುಸುರಿನ ಕೆಲಸದ ಜಾಲಾಂದ್ರಗಳು ಕಲೆಯ ಜಾಲವನ್ನೆ ಹೆಣಿದವು. ಆಭರಣಗಳು, ಸೂಕ್ಷ್ಮಕೆತ್ತನೆಯ ಬಾಗಿಲು ಮಂದಿರದ ಚೆಲುವನ್ನು ವೃದ್ಧಿಸಿವೆ. ಡಂಬಳದಲ್ಲಿಯ "ದೊಡ್ಡ ಬಸಪ್ಪ ದೇವಾಲಯವು ಕರ್ನಾಟಕದ ಅತಿ ಸುಂದರ ಮಂದಿರವೆಂದು" ಜೆಮ್ಸ್ ಕಜಿನ್ಸ್ ಉದ್ಗರಿಸಿದ್ದಾರೆ.

ಹೊಯ್ಸಳರ ಶಿಲ್ಪಕಲೆ: ಬೇಲೂರು, ಹಳೆಬೀಡು ಮತ್ತು ಸೋಮನಾಥಪುರದ ದೇವಾಲಯಗಳು ಹೊಯ್ಸಳ ಶೈಲಿಯ ಉತ್ತುಂಗ ಶಿಖರಗಳು. ಸೌಂದರ್ಯ ಮತ್ತು ಶಿಲ್ಪ ನೈಪುಣ್ಯ ದೃಷ್ಟಿಯಿಂದಲೂ ಬೇಲೂರಿನ ಚೆನ್ನಕೇಶವ ದೇವಾಲಯವು ಪ್ರಬುದ್ಧ ಕಲಾ ನಿರ್ಮಿತ. ನಕ್ಷತ್ರಾಕಾರದ ದೇವಾಲಯಗಳು, ಶಿಲ್ಪಗಳನ್ನೊಳಗೊಂಡ ಚಿತ್ರ ಪಟ್ಟಿಕೆಗಳನ್ನು ದೇವಾಲಯದ ಸುತ್ತಲೂ ಕೆತ್ತಲಾಗಿದೆ. ಆನೆಗಳ ಸಾಲು, ಶಾರ್ದೂಲಗಳು, ರಾವುತರು, ಹಂಸಗಳು, ಇನ್ನೊಂದರಲ್ಲಿ ಪುರಾಣದ ಕಥೆಗಳು–ಈ ರೀತಿ ಅನೇಕ ಸಾಲು ಪಟ್ಟಿಕೆಗಳನ್ನು ಕೆತ್ತಲಾಗಿದೆ, ಈ ಪಟ್ಟಿಕೆಯ ಮೇಲ್ಭಾಗದಲ್ಲಿ ದೇವತಾ ವಿಗ್ರಹಗಳಿವೆ. ಹೊಯ್ಸಳ ದೇವಾಲಯಗಳು ವಿಗ್ರಹ ಭಂಡಾರಗಳಂತಿದ್ದು ಮೂರ್ತಿ ವಿದ್ಯೆ ಕಲಿಯುವವರಿಗೆ ಅಮೂಲ್ಯವಾದ ಸಂಗತಿಗಳನ್ನು ಇವು ಒದಗಿಸುತ್ತವೆ.

ಈ ದೇವಾಲಯದಲ್ಲಿ ಶಿಲಾಬಾಲಕೆಯರು, ಸಾಲಭಂಜಿಕೆ, ಮದನಿಕಾ ವಿಗ್ರಹಗಳನ್ನು ಕರ್ನಾಟಕ ಶಿಲ್ಪ ಸರಸ್ವತಿಯ ಮುಕುಟ ಮಣಿಗಳೆಂದು ಕರೆಯಲಾಗುತ್ತದೆ.

ಫರ್ಗ್ಯುಸನ್‌ರು "ಬೇಲೂರು ಹಳೆಬೀಡಿನ ದೇವಾಲಯಗಳು ಕುಸುರಿ ಜಗತ್ತಿನಲ್ಲಿರುವ ಎಲ್ಲಾ ಗುಡಿಗಳಿಗೂ ಮೀರಿವೆ. ಕೈವಾಡದವರು ಇಲ್ಲಿ ತಮ್ಮ ಸುಂದರವಾದ ಶಿಲ್ಪಕಲೆಯ ಸುಗ್ಗಿಯನ್ನೇ ಸಾಧಿಸಿದ್ದಾರೆ. ಈ ಗುಡಿಗೆ ಸಮವಾದ ಕಟ್ಟಡವು ಜಗತ್ತಿನಲ್ಲಿಯೇ ಕಾಣದು"[೮೩] ಎಂದಿದ್ದಾರೆ.

ವಿಜಯನಗರದ ಶಿಲ್ಪಕಲೆ: ವಿಜಯನಗರ ಸಾಮ್ರಾಜ್ಯ ಶಿಲ್ಪಗಳ ಬೀಡಾಗಿತ್ತು. ಇವರು ಶಿಲ್ಪ ಕೆತ್ತನೆಗೆ ಕಣಶೀಲೆಯನ್ನು ಉಪಯೋಗಿಸಿದ್ದಾರೆ. ಇಲ್ಲಿ ನಯನಾಜೂಕಿನ ಶಿಲ್ಪಗಳು ಕಂಡುಬರುವುದಿಲ್ಲ. ಇಲ್ಲಿ ಬೃಹದಾಕಾರದ ಶಿಲ್ಪಗಳು, ಎಕರೆಗಟ್ಟಲೆ ವಿಸ್ತಾರವಾದ ದೇವಾಲಯಗಳು, ಇಲ್ಲಿಯ ಕಂಬಗಳ ಮೇಲೆ ದೇವತೆಗಳು, ನೃತ್ಯಗಾರ್ತಿಯರು ಕಂಡುಬರುತ್ತವೆ. ಇಂತಹ ದೇವಾಲಯಗಳು ತಮಿಳುನಾಡಿನ ರಾಮೇಶ್ವರ, ಚಿದಂಬರ, ಕಂಚಿಯ ವರದರಾಜ, 'ಏಕಾಂಬರೇಶ್ವರ, ಮಧುರೈ ಮೀನಾಕ್ಷಿ ದೇವಾಲಯಗಳಲ್ಲಿಯೂ ಈ ಶೈಲಿ ಕಂಡುಬರುತ್ತದೆ.

ವಿಜಯನಗರ ಶಿಲ್ಪಗಳ ವೈಶಿಷ್ಟವೆಂದರೆ ನೈಜ ಮಾನಾವಕಾರವನ್ನು ಮೀರಿಸುವ ಶಿಲ್ಪಗಳು ಬಂದಿದ್ದು. ಇವು ಬೃಹದಾಕಾರದ ಶಿಲ್ಪಗಳಾಗಿದ್ದು, ಬಾಗಿದ ಭಂಗಿಗಳನ್ನು ತೋರಿಸುವುದು ಅಷ್ಟಾಗಿ ಕಂಡುಬರುವುದಿಲ್ಲ. ಈ ಶಿಲ್ಪಗಳಲ್ಲಿ ಉಗ್ರಭಾವವನ್ನು ಮಾತ್ರ ಸೂಚಿಸಿರುವುದು ಕಂಡುಬರುತ್ತದೆ. ಇಲ್ಲಿರುವ ಶಿಲ್ಪಗಾರಿಕೆಯು ಸೂಕ್ಷ್ಮ ಕೆತ್ತನೆ ಆಗಿರುವುದಿಲ್ಲ.

ಉಗ್ರನರಸಿಂಹ, ಕಡಲೆಕಾಳು ಗಣಪತಿ, ಸಾಸಿವೆಕಾಳು ಗಣಪತಿ, ಉದ್ದಾನ ವೀರಭದ್ರ, ಬಡವಿಲಿಂಗ ಮೊದಲಾದ ವಿಗ್ರಹಗಳನ್ನು ಗಟ್ಟಿಯಾದ ಕಣಶಿಲೆಯಲ್ಲಿ ಕೆತ್ತಿದ್ದಾರೆ. ಕಲ್ಲಿನ ರಥವು ಅಪೂರ್ವಶಿಲ್ಪ ಈ ರಥದ ಗಾಲಿಗಳು ಇತ್ತೀಚಿನವರೆಗೂ ತಿರುಗುತ್ತಿದ್ದವು. ಸಪ್ತಸ್ವರಗಳ ಸಂಗೀತ ಹೊಮ್ಮಿಸುವ ಕಂಬಗಳು ಅದ್ಬುತ ಕೆತ್ತನೆಯಾಗಿವೆ.

ಕರ್ನಾಟಕವು ಗಂಧದ ಬೀಡು, ಶಿಲ್ಪಿಗಳ ಕಲಾವೈಭವದ ನಾಡು ಎಂದು ಪ್ರಸಿದ್ಧಿ ಪಡೆದಿದೆ. ಈ ನಾಡಿನಲ್ಲಿ ಆಳಿದ ರಾಜಮಹಾರಾಜರು ಶಿಲ್ಪಕಲೆಗೆ ನೀಡಿದ ಕೊಡುಗೆ ಅಪಾರ. ಶಿಲ್ಪಿಗಳಿಗೆ ನೀಡಿದ ಪ್ರೋತ್ಸಾಹ ಅನನ್ಯ. ಶಿಲ್ಪಗಾರಿಕೆ ರಾಜಾಶ್ರಯ ಹೊಂದಿತ್ತು. ಅದರಿಂದಾಗಿ ಕರ್ನಾಟಕವು ಶಿಲ್ಪಗಾರಿಕೆ ಪ್ರಸಿದ್ಧಿ. ಶಿಲ್ಪಗಾರಿಕೆ ಸ್ವತಂತ್ರವಾಗಿ ತಮ್ಮ ಆಲೋಚನೆಗಳಿಗೆ ತಕ್ಕಂತೆ ಶಿಲ್ಪಗಳನ್ನು ರಚಿಸಲು ಅವಕಾಶ ನೀಡಲಾಗಿತ್ತು. ಶಿಲ್ಪಿಗಳಿಗೆ ಅರಸರು ಉಡುಗೊರೆ ಹಾಗೂ ಬಹುಮಾನಗಳನ್ನು ನೀಡಿ ಗೌರವಿಸುತ್ತಿದ್ದರು. ಕೆಲವು ರಾಜರು ಶಿಲ್ಪಿಗಳಿಗೆ ಭೂಮಿಯನ್ನು ದತ್ತಿ ನೀಡಿದ್ದರು.

ವಿಜಯನಗರ ಸಾಮ್ರಾಜ್ಯವು ಶಿಲ್ಪಕಲೆಗೆ ಪ್ರಖ್ಯಾತಿ ಪಡೆದಿದೆ. ಶಿಲ್ಪಗಾರಿಕೆಗೆ ರಾಜಾಶ್ರಯ ನೀಡಿ ಶಿಲ್ಪಗಾರಿಕೆ ಅಭಿವೃದ್ಧಿಗೆ ಕಾರಣವಾಗಿದೆ. ಹಂಪಿ ಶಿಲ್ಪಿಗಳ ಬೀಡಾಗಿತ್ತು. ಬಳ್ಳಾರಿ ಜಿಲ್ಲೆಯಲ್ಲಿ ಇಂದಿಗೂ ಶಿಲ್ಪಗಾರಿಕೆ ಮುಂದುವರಿದಿದೆ. ಹಂಪೆಯ ಬಸವರಾಜ ಶಿಲ್ಪಿ, ಹೊಸಪೇಟೆ, ಸುರೇಶ್ ಆಚಾರ್ ಉತ್ತಮವಾದ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಬೇಡಿಕೆಗೆ ತಕ್ಕಂತೆ ದೇವತೆಗಳ ಮೂರ್ತಿಗಳನ್ನು ಅಂದವಾಗಿ ನಿರ್ಮಿಸಿಕೊಡುತ್ತಾರೆ. ಅವರಿಗೆ ಕರ್ನಾಟಕ ರಾಜ್ಯಪ್ರಶಸ್ತಿಯೂ ದೊರೆತಿದೆ.

ವಿರೂಪಾಕ್ಷ ದೇವಸ್ಥಾನದ ಪಕ್ಕದ ದೇವ ಮಂದಿರದಲ್ಲಿ ಬಸವರಾಜ ಶಿಲ್ಪಿ ಮತ್ತು ಅವರ ಸಹೋದರರು ಶಿಲ್ಪಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹಂಪಿಯಲ್ಲಿ ಹಲವಾರು ಕುಟುಂಬಗಳು ಶಿಲ್ಪಗಾರಿಕೆ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತವೆ. ಹೊಸಪೇಟೆಯಲ್ಲಿ ಸುರೇಶಶಿಲ್ಪಿ ಮತ್ತು ಕುಟುಂಬ ವರ್ಗದವರು, ಬಳ್ಳಾರಿ ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ಹಲವಾರು ಕುಟುಂಬಗಳು ಶಿಲ್ಪಗಾರಿಕೆ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ.

ಶಿಲ್ಪಗಾರ ಕುಟುಂಬಗಳು ಶಿಲ್ಪಗಾರಿಕೆಗೆ ಬೇಕಾದ ಶಿಲೆಗಳನ್ನು ಬಾಗಲಕೋಟೆ, ಬಾದಾಮಿ, ಗದಗ ಇತ್ಯಾದಿ ಪ್ರದೇಶಗಳಿಂದ ತರಿಸಿಕೊಳ್ಳುತ್ತಾರೆ. ಈ ಕುಟುಂಬಗಳು ಹಿಂದೂ ದೇವತೆಗಳ ವಿಗ್ರಹಗಳನ್ನು ಜೈನ ಹಾಗೂ ಕ್ರೈಸ್ತ ಧರ್ಮದ ಶಿಲ್ಪಗಳನ್ನು ತಯಾರು ಮಾಡಿಕೊಡುತ್ತಾರೆ. ಆದರೆ ಶಿಲ್ಪಗಳ ಬೇಡಿಕೆಯ ಪ್ರಮಾಣ ಕಡಿಮೆಯಾಗಿದೆ ಎಂದು ಬಸವರಾಜಶಿಲ್ಪಿ ವ್ಯಕ್ತಪಡಿಸುತ್ತಾರೆ.

ಹೊಸಪೇಟೆಯಲ್ಲಿನ ನಾಗರಾಜ ಶಿಲ್ಪಿ, ಲೋಹಶಿಲ್ಪ ತಯಾರಿಕೆಗೆ ಹೆಸರಾಗಿದ್ದಾರೆ. ಇವರು ಕುಟುಂಬದ ಸದಸ್ಯರ ನೆರವಿನಿಂದ ಆಧುನಿಕ ಯಂತ್ರವನ್ನು ಬಳಸಿ ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಹಾಗೂ ಮಿಶ್ರ ಲೋಹಗಳಿಂದ ಮೂರ್ತಿ, ಪ್ರಭಾವಳಿ ಹಾಗೂ ಬಾಗಿಲು ತೋರಣಗಳನ್ನು ವೈವಿಧ್ಯಮಯವಾಗಿ ತಯಾರಿಸುತ್ತಾರೆ.

ಶಿಲ್ಪಗಾರಿಕೆಯಲ್ಲಿ ತೊಡಿಸಿಕೊಂಡಿರುವ ಕುಟುಂಬಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರಿಗೆ ಸಕಾಲಕ್ಕೆ ಸರಿಯಾಗಿ ಉತ್ತಮ ಗುಣಮಟ್ಟದ ಶಿಲೆಗಳು ಲಭ್ಯವಾಗುತ್ತಿಲ್ಲ.

ದೂರದ ಪ್ರದೇಶಗಳಿಂದ ತರಿಸಿಕೊಳ್ಳಬೇಕಾಗಿರುವುದರಿಂದ ಶಿಲೆಗಳು ದುಬಾರಿ. ಶಿಲ್ಪಗಳು ತಯಾರು ಮಾಡಿದ ಶಿಲ್ಪಗಳ ಬೇಡಿಕೆ ನಿರಂತರವಾಗಿರುವುದಿಲ್ಲ. ಬೇಡಿಕೆ ಪ್ರಮಾಣ ಕಡಿಮೆಯಾಗುತ್ತಿದೆ. ಕೆಲವರು ಶಿಲ್ಪಗಳ ತಯಾರಿಕೆಗೆ ಮುಂಗಡ ನೀಡಿ ನಂತರ ಬಂದು ತೆಗೆದುಕೊಂಡು ಹೋಗುವುದಿಲ್ಲ. ಶಿಲ್ಪಿಗಳು ಶಿಲ್ಪ ತಯಾರಿಕೆಯಲ್ಲಿ ನಿರಂತರವಾಗಿ ಕುಳಿತು ಕೆಲಸ ಮಾಡಬೇಕಾಗುವುದರಿಂದ ಆರೋಗ್ಯದ ಸಮಸ್ಯೆ ಎದುರಾಗುತ್ತದೆ. ಕಣ್ಣು ಕಿವಿ, ಸೊಂಟ, ಕೈಕಾಲು ನೋವುಗಳಿಗೆ ಶಿಲ್ಪಿಗಳು ಒಳಗಾಗುತ್ತಾರೆ. ಇವರ ಕೆಲಸಕ್ಕೆ ಬೇಕಾದ ಯಾವುದೇ ಆಧುನಿಕ ಸಾಧನ ಸಾಮಗ್ರಿಗಳು ದೊರೆಯುತ್ತಿಲ್ಲ. ಸರಕಾರವು ಇವರಿಗೆ ಸಹಾಯ ಸಹಕಾರ ನೀಡುತ್ತಿಲ್ಲ. ಶಿಲ್ಪಿಗಳಿಗೆ ಬದಲಿ ಕೆಲಸಗಳು ಗೊತ್ತಿಲ್ಲದಿರುವುದರಿಂದ ತಮ್ಮ ವೃತ್ತಿಯಲ್ಲಿ ಮುಂದುವರಿಯುವುದು ಅನಿವಾರ್ಯವಾಗಿದೆ. ಇಂದಿನ ಅವರ ಕುಟುಂಬದ ಯುವ ಪೀಳಿಗೆ ಕುಲಕಸಬನ್ನು ಮುಂದುವರಿಸಲು ಒಪ್ಪುತ್ತಿಲ್ಲ. ಶಿಲ್ಪಗಾರಿಕೆಗೆ ತರಬೇತಿ ನೀಡುವ ಉತ್ತಮ ಕೇಂದ್ರಗಳಿಲ್ಲದಿರುವುದು ಪ್ರಮುಖ ಸಮಸ್ಯೆ ಈ ಎಲ್ಲಾ ಸಮಸ್ಯೆಗಳಿಂದಾಗಿ ಹಿಂದೆ ರಾಜಾಶ್ರಯ ಪಡೆದು ಪ್ರಸಿದ್ಧಿ ಪಡೆದಿದ್ದ ಶಿಲ್ಪಗಾರಿಕೆ ಇಂದು ಯಾವುದೇ ರೀತಿಯ ಸಹಾಯ, ಸಹಕಾರ ಹಾಗೂ ಪ್ರೋತ್ಸಾಹವಿಲ್ಲದೆ ಅಳಿವಿನಂಚಿನಲ್ಲಿದೆ.

ನೇಕಾರಿಕೆ

ನೇಕಾರಿಕೆ ಪ್ರಾಚೀನ ಕಸುಬುಗಳಲ್ಲಿ ಒಂದು. ಒಕ್ಕಲುತನದ ನಂತರ ಮಹತ್ತರ ಸ್ಥಾನ ಪಡೆದಿರುವ ವೃತ್ತಿ ನೇಕಾರಿಕೆ. ಮನುಷ್ಯನ ನಾಗರೀಕತೆಯ ಜೊತೆ ಜೊತೆಗೆ ಬೆಳೆದುಬಂದಿದೆ. ಮನುಷ್ಯ ಎಲೆ, ತೊಗಟೆ, ಚರ್ಮಗಳಿಂದ ಮೈ ಮುಚ್ಚಿಕೊಳ್ಳುತ್ತಿದ್ದುದನ್ನು ತ್ಯಜಿಸಿ ಸಸ್ಯಗಳ ನಾರಿನಿಂದ ಬಟ್ಟೆಯನ್ನು ಸಿದ್ಧಪಡಿಸಲು ಆರಂಭಿಸಿದುದು ನೇಕಾರಿಕೆಗೆ ನಾಂದಿಯಾಯಿತು. ಬಹುಷಃ ನಾರಿನಿಂದ ಬಟ್ಟೆ ತಯರಿಕೆಗೆ ಅನೇಕ ಮರಗಿಡಗಳ ಕಾಂಡಗಳ ಮೇಲೆ ಬೆಳೆಯುವ ಬಲೆಯಂತಹ ಹೊದಿಕೆ ಪ್ರೇರಣೆ ನೀಡಿರಲೂಬಹುದು. ನಾರಿನ ವಸ್ತ್ರ ತಯಾರಿಕೆಯ ಮುಂದುವರಿಕೆಯಾಗಿ ಇತರೆ ಸಸ್ಯ ಜನ್ಯ ಬೂರಗ, ಹತ್ತಿ ಇತ್ಯಾದಿಗಳಿಂದ ಎಳೆ ತೆಗೆದು ಅದನ್ನು ಬಟ್ಟೆ ತಯಾರಿಸಲು ಉಪಯೋಗಿಸಿರಬಹುದಾಗಿದೆ.

ಭಾರತದ ಸಿಂಧೂ ನಾಗರಿಕತೆಯ ಸ್ಥಳಗಳಾದ ಹರಪ್ಪ ಮತ್ತು ಮೊಹೆಂಜೋದಾರೊಗಳ ಉತ್ಖನನದಲ್ಲಿ ದಾರ ಹುರಿ ಮಾಡಿಕೊಳ್ಳುವ ತಕಲಿಗಳು ದೊರೆತಿರುವುದು ಬಟ್ಟೆ ತಯಾರಿಕೆ ಅಂದಿನ ಜನರಿಗೆ ಗೊತ್ತಿತ್ತೆಂಬುದಕ್ಕೆ ಆಧಾರಗಳಾಗಿವೆ. ಸಿಂಧೂ ಕಣಿವೆಯ ಜನರು ನೂಲುವ, ನೇಯುವ, ಹೊಲೆಯುವ ಕಲೆಯನ್ನು ಬಲ್ಲವರಾಗಿದ್ದರು.[೮೪]

ಗ್ರೀಕ್ ಇತಿಹಾಸಕಾರ ಹೆರೊಡೋಟಸ್‌ನು ಭಾರತೀಯ ಯೋಧರು ಯುದ್ಧ ಕಾಲದಲ್ಲಿ ಅರಳೆ ಬಟ್ಟೆ ಧರಿಸುತ್ತಿದ್ದರೆಂದು ಹೇಳುತ್ತಾನೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ನೇಯ್ಗೆಯ ವೃತ್ತಿ ಬಗ್ಗೆ

ಪ್ರಸ್ತಾಪವಿದೆ.[೮೪] ಮೆಗಸ್ತಾನೀಸ್‌ನು ಭಾರತೀಯರು ಧರಿಸುತ್ತಿದ್ದ ಹೂನಕ್ಷೆಯ ಮಕಮಲ್ ಉಡುಪುಗಳನ್ನು ಕುರಿತು ಹೇಳುತ್ತಾನೆ. ಚಂದ್ರಗುಪ್ತನ ಕಾಲದಲ್ಲಿ ಉಣ್ಣೆ, ರೇಷ್ಮೆ, ಗಿಡದ ನಾರು ಇತ್ಯಾದಿಗಳಿಂದ ನೂಲನ್ನು ತಯಾರಿಸಿ ಬಟ್ಟೆ ತಯಾರಿಸುತ್ತಿದ್ದುದನ್ನು ಉಲ್ಲೇಖಿಸುತ್ತಾನೆ.[೮೫]

ವೇದಗಳ ಕಾಲದ ಕುಶ ಅಥವಾ ದರ್ಭ, ಸೆಣಬುಗಳ ಉಲ್ಲೇಖಗಳು ನಾರು ಗಿಡಗಳಿಂದ ನೇಯ್ದ ಬಟ್ಟೆಗಳ ಉಪಯೋಗದ ಬಗ್ಗೆ ಹೇಳುತ್ತದೆ. ವೇದ ಮಂತ್ರಗಳಲ್ಲಿ 'ತಂತು' ಎಂಬ ಪದವಿದೆ. 'ತಂತು' ಎಂದರೆ ಎಳೆ ಎಂದರ್ಥ ಈ ಎಳೆ ಪದದ ಬಳಕೆ ಗಮನಿಸಿದರೆ ಆಗಲೆ ಮಗ್ಗ ರೂಪಿತವಾಗಿರಬಹುದು.

ಭಾರತದ ಕುರಿತ ಮುಸ್ಲಿಂ ಮತ್ತು ಯುರೋಪಿನ ಶಾಸನದಲ್ಲಿ ಕೆತ್ತನೆಗಳು, ಚಿತ್ರಕಲೆ, ಮೌಖಿಕ ಪರಂಪರೆಯಿಂದ ವಸ್ತ್ರೋದ್ಯಮದ ನೇಯ್ಗೆ, ಹೆಣಿಕೆಗಳ ಬಗ್ಗೆ ತಿಳಿಯುತ್ತದೆ.

ಚೀನಾ ತುಂಬಾ ಹಿಂದೆಯೇ ರೇಷ್ಮೆಯನ್ನು ಕಂಡುಕೊಂಡ ದೇಶ.[೮೬] ಬೌದ್ಧ ಧರ್ಮ ಪ್ರಚಾರಕ್ಕೆ ಹೋದ ಭಾರತೀಯರು ಇದನ್ನು ಭಾರತಕ್ಕೆ ತಂದರು. ಹೀಗೆ ಪೂರ್ವ ಚೈನಾದಿಂದ, ವಾಯುವ್ಯದ ಗ್ರೀಕ್‌ಗಳಿಂದ ಭಾರತದ ವಸ್ತ್ರೋದ್ಯಮದ ಮೇಲೆ ಪ್ರಭಾವಗಳಾದವು. ಇಲ್ಲಿ ಈಜಿಪ್ಟ ಸಂಪರ್ಕದ ಪ್ರಭಾವವೂ ಸಾಕಷ್ಟಿದೆ.

ಇತಿಹಾಸ ಪೂರ್ವದಿಂದ ಬೆಳೆದು ಬಂದ ನೇಕಾರಿಕೆ ಭಾರತದ ಗುಜರಾತ್, ಬಂಗಾಳ, ಬಿಹಾರ, ಒರಿಸ್ಸಾ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಲ್ಲಿ ನೇಕಾರಿಕೆ ಪ್ರಸಿದ್ಧವಾಗಿತ್ತು.

ಭಾರತದ ಇತರೆ ಭಾಗಗಳಂತೆಯೇ ಕರ್ನಾಟಕದಲ್ಲಿಯೂ ಅತಿ ಹಿಂದಿನಿಂದಲೂ ವ್ಯವಸ್ಥಿತ ಉದ್ಯಮವಾಗಿ ಬೆಳೆದು ಬಂದಿರುವುದನ್ನು ಅನೇಕ ಚಾರಿತ್ರಿಕ ದಾಖಲೆಗಳು ಖಚಿತಪಡಿಸುತ್ತವೆ. ಕ್ರಿ.ಶ. ೧೨ನೇ ಶತಮಾನದಲ್ಲಿದ್ದ ಜೇಡರ ದಾಸಿಮಯ್ಯ ನೇಯ್ಗೆ ಕಸುಬನ್ನು ಅವಲಂಬಿಸಿದ್ದ ಬಗ್ಗೆ ಅವನ ವಚನಗಳಿಂದಲೇ ಸಾಕಷ್ಟು ಆಧಾರ ಸಿಕ್ಕುತ್ತದೆ. ಮುಂದೆ ವಿಜಯನಗರ ಅರಸರ ಕಾಲದಲ್ಲಿ ಹತ್ತಿ ಮತ್ತು ರೇಷ್ಮೆ ಬಟ್ಟೆಯನ್ನು ನೇಯುವ ಜನ ವೃತ್ತಿಪರ ಸಂಘಗಳನ್ನು ಸಹ ಕಟ್ಟಿಕೊಂಡಿದ್ದರು. ನೇಕಾರಿಕೆಯನ್ನು ಪ್ರಮುಖ ಪಾರಂಪರಿಕ ಉದ್ಯೋಗವಾಗಿ ಹೊಂದಿರುವ ದೇವಾಂಗ, ಪದ್ಮಸಾಲಿ ಜನಾಂಗ ಹಂಪೆಯಲ್ಲಿ ನೇಯ್ಗೆ ಕಸುಬಿನಲ್ಲಿ ನಿರತರಾಗಿದ್ದು ಸಾಮ್ರಾಜ್ಯದ ಪ್ರಮುಖ ತೆರಿಗೆ ಸಂದಾಯದಾರರಾಗಿದ್ದರೆಂದು ದಾಖಲೆಗಳಿಂದ ವೇದ್ಯವಾಗುತ್ತದೆ. ವಿಜಯನಗರದ ಕಾಲದಲ್ಲಿ ಪ್ರಮುಖ ಉದ್ಯಮವಾಗಿದ್ದ ನೇಕಾರಿಕೆಯಿಂದ ಸಾಮ್ರಾಜ್ಯಕ್ಕೆ ರಫ್ತು ಆದಾಯವೂ ಲಭ್ಯವಾಗುತ್ತಿತ್ತು.[೮೭] ಅಂಕೋಲ, ಹೊನ್ನಾವರ ಬಂದರುಗಳಿಂದ ಹತ್ತಿ, ರೇಷ್ಮೆ ವಸ್ತ್ರಗಳನ್ನು ರವಾನಿಸಲಾಗುತ್ತಿತ್ತು. ಶ್ರೀಕೃಷ್ಣದೇವರಾಯನ 'ಆಮುಕ್ತ ಮಾಲ್ಯದ'ದಲ್ಲಿ ಹತ್ತಿ ಮತ್ತು ರೇಷ್ಮೆ ನೇಕಾರರ ಬಗ್ಗೆ ಉಲ್ಲೇಖವಿದ್ದು ಪ್ರತಿಯೊಂದು ನೇಕಾರ ಕುಟುಂಬ ತಾನು ನಡೆಸುತ್ತಿದ್ದ ಮಗ್ಗಗಳ ಸಂಖ್ಯೆಗನುಗುಣವಾಗಿ ತೆರಿಗೆ

ಸಂದಾಯ ಮಾಡುತ್ತಿದ್ದು ಅದನ್ನು 'ಮಗ್ಗರಿ' ಎಂದು ಕರೆಯಲಾಗುತ್ತಿತ್ತು.[೮೮] ಅಥರ್ವಣ ತಂತ್ರದ ಪ್ರಕಾರ ಮಗ್ಗದ ತೆರಿಗೆ ನೇಕಾರನ ಜಾತಿಯನ್ನು ಅವಲಂಬಿಸಿತ್ತು. ಬಹಮನಿ ಮತ್ತು ಆದಿಲ್‌ಶಾಹಿ ಅರಸರು ನೇಕಾರರಿಗೆ ಕೆಲವು ತೆರಿಗೆ ರಿಯಾಯಿತಿಗಳನ್ನು ನೀಡುತ್ತಿದ್ದುದನ್ನು ಗಮನಿಸಿದರೆ ಅಂದು ನೇಕಾರಿಕೆ ಪಡೆದ ಮಹತ್ವದ ಅರಿವಾಗುತ್ತದೆ. ಹತ್ತಿಯನ್ನು ಕರ್ನಾಟಕದಲ್ಲಿ ಬೆಳೆಯುತ್ತಿದ್ದುದರಿಂದ ಅಂದು ನೇಕಾರಿಕೆ ತುಂಬಾ ಪ್ರವರ್ಧಮಾನ ಸ್ಥಿತಿಯಲ್ಲಿತ್ತು. ಚೀನಾದಿಂದ ಆಮದಾದ ರೇಷ್ಮೆ ಬಂಗಾಳದ ಮೂಲಕ ಕರ್ನಾಟಕಕ್ಕೆ ಬರುತ್ತಿತ್ತು. ೧೭೮೬ರ ಸುಮಾರಿಗೆ ಟಿಪ್ಪುಸುಲ್ತಾನನ ಪರಿಶ್ರಮದಿಂದ ಕರ್ನಾಟದಲ್ಲಿ ರೇಷ್ಮೆ ವ್ಯವಸಾಯ ಪ್ರಾರಂಭವಾಯಿತು.[೮೯]

ನೇಕಾರಿಕೆ ವೃತ್ತಿ ಕುರಿತಂತೆ ಶಿಲಾಶಾಸನಗಳ ಬರವಣಿಗೆಗಳಲ್ಲಿ ಕಾಣಬಹುದು. ಮಂಡಸೂರು ಶಿಲಾಶಾಸನಗಳಲ್ಲಿ ಕ್ರಿ.ಶ. ೪೩೭ರಲ್ಲಿ ಕಟ್ಟಿಸಿದ ಸೂರ್ಯನಾರಾಯಣ ದೇವಸ್ಥಾನವನ್ನು ದೇವಾಂಗ ಸಂಘವು ಕ್ರಿ.ಶ. ೪೭೩ರಲ್ಲಿ ಜೀರ್ಣೋದ್ಧಾರ ಮಾಡಿದ ದಾಖಲೆ ಇದೆ. ನೇಕಾರರನ್ನು ಶಾಸನಗಳಲ್ಲಿ 'ಸಾಲಿಗ' ಎಂದು ಕರೆಯಲಾಗಿದೆ. ನೇಕಾರರ ಮಗ್ಗದ ಮೇಲೆ 'ಮಗ್ಗದೆರೆ' ಎಂಬ ತೆರೆಗೆ ವಿಧಿಸುತ್ತಿದ್ದರು. (ಯಲಿಯೂರ, ಚೆನ್ನಪಟ್ಟಣ ತಾಲೂಕು ಶಾಸನ ಕ್ರಿ.ಶ. ೧೭೨೬) ನೇಕಾರರನ್ನು 'ರೇಷ್ಮೆ' ನೇಯುವವರೆಂದು(ಪಟ್ಟಗಣಿ) ಕ್ರಿ.ಶ.೭೯೨ರ ಲಕ್ಷ್ಮೇಶ್ವರ ಶಾಸನ ಉಲ್ಲೇಖಿಸುತ್ತದೆ.

ಒಂದೇ ರೀತಿಯ ಕುಶಲ ಕೆಲಸದ ಮೂಲಕ ವಸ್ತುಗಳನ್ನು ತಯಾರಿಸುತ್ತಿದ್ದ ಒಂದೇ ಜನಾಂಗ ಅಥವಾ ಸಮುದಾಯ ಕ್ರಮೇಣ ಒಂದು ಜಾತಿ ಎನಿಸಿತು. ನೇಯ್ಗೆ ಕೆಲಸ ಮಾಡುತ್ತಿರುವ ಜನರು ನೇಕಾರರೆಂದಿನಿಸಿದರು. ಪಾರಂಪರಿಕವಾಗಿ ನೇಕಾರಿಕೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದವರಲ್ಲಿ ಪ್ರಮುಖವಾದ ಸಮುದಾಯಗಳು ದೇವಾಂಗ, ಪದ್ಮಶಾಲಿ, ಸ್ವಕುಳಶಾಲಿ, ಕುರುಹಿನಶೆಟ್ಟಿ, ತೋಗಟವೀರರು. ಇದರ ಜೊತೆಗೆ ಜೀವನೋಪಾಯ ಹಾಗೂ ಲಾಭಗಳಿಕೆಗಾಗಿ ಇತ್ತೀಚೆಗೆ ಒಕ್ಕಲಿಗ, ಲಿಂಗಾಯತ, ನಗರ್ತ, ಮರಾಟ, ಮುಸಲ್ಮಾನ, ಕ್ರಿಶ್ಚಿಯನ್, ನಾಯಿಂದ ಇತ್ಯಾದಿ ಸ್ಥಳೀಯ ಜನಾಂಗಗಳು ನೇಕಾರಿಕೆಯ ವಿವಿಧ ಕಾರ್ಯಗಳಲ್ಲಿ ತೊಡಗಿವೆ. ಪರಿಶಿಷ್ಟ ಜಾತಿಯ ಜನರೂ ನೇಕಾರಿಕೆಯನ್ನು ಅವಲಂಬಿಸಿರುವುದನ್ನು ಕಾಣಬಹುದು.

ಕೈಮಗ್ಗದ ನೇಯ್ಗೆಯನ್ನು ತಲೆತಲಾಂತರದಿಂದ ನಂಬಿಕೊಂಡು ಬಂದ ಜನಾಂಗವು ಮಗ್ಗವೇ ಸರ್ವಸ್ವ ಹಾಗೂ ಜೀವನಾಧಾರ. ನೇಕಾರಿಕೆಯನ್ನು ಮುಖ್ಯ ಕಸುಬನ್ನಾಗಿ ಹೊಂದಿರುವ ಇನ್ನೊಂದು ಮುಖ್ಯ ಜನಾಂಗ ಪದ್ಮಸಾಲಿ ಮತ್ತು ತೋಗಟವೀರ. ಇವರು ತುಂಬಾ ಹಿಂದಿನಿಂದಲೂ ನೇಕಾರಿಕೆಯನ್ನು ಕುಲಕಸುಬುನ್ನಾಗಿ ಅವಲಂಬಿಸಿದ್ದಾರೆ.

ನೇಕಾರರ ಪಂಗಡಗಳೆಲ್ಲವೂ ತಮ್ಮದೇ ಆದ ದೈವ, ದೇವರು, ನಂಬಿಕೆ, ವಿಧಿ, ನಿಷೇಧ ಹಾಗೂ ಕುಲ ಕಟ್ಟಳೆಗಳಿವೆ. ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಗಳನ್ನು ನೇಕಾರ

ಸಮುದಾಯ ಮುಂದುವರಿಸಿಕೊಂಡು ಬರುತ್ತದೆ. ಆದರೆ ಆಧುನೀಕರಣದ ಪ್ರಭಾವ ಈ ಸಮುದಾಯದ ಆಚಾರಣೆಗಳಲ್ಲಿ ಸಾಕಷ್ಟು ಬದಲಾವಣೆಗೆ ಕಾರಣವಾಗಿವೆ.

ಕೂಡ್ಲಿಗಿ ತಾಲೂಕಿನ ಕೊಟ್ಟೂರು ಮತ್ತು ರಾಂಪುರಗಳಲ್ಲಿ ರೇಷ್ಮೆ ಸೀರೆ ವಸ್ತ್ರಗಳನ್ನು ತಯಾರಿಸುವ ನೇಕಾರರಿದ್ದಾರೆ. ಅವರು ರಾಯದುರ್ಗ ಮತ್ತು ಮೊಳಕಾಲ್ಮೂರುಗಳಿಂದ ರೇಷ್ಮೆ ನೂಲು ತಂದು ಸೀರೆ ಹಾಗೂ ವಸ್ತ್ರಗಳನ್ನು ನೇಯುತ್ತಾರೆ. ಹೊಸಪೇಟೆ, ಕಂಪ್ಲಿ, ಹೊಸಹಳ್ಳಿ, ತಂಬ್ರಹಳ್ಳಿ, ಮರಿಯಮ್ಮನಹಳ್ಳಿ, ಬಳ್ಳಾರಿ, ಸಂಡೂರುಗಳಲ್ಲಿ ಹತ್ತಿ ಬಟ್ಟೆ ನೇಯುವ ನೇಕಾರರಿದ್ದಾರೆ.

ಕೈಮಗ್ಗದ ಸಾಧನಗಳು

ಕರ್ನಾಟಕದಲ್ಲಿ ಸಾಂಪ್ರದಾಯಿಕ ಮಗ್ಗಗಳು ಬಹುಮಟ್ಟಿಗೆ ಕುಳಿ ಮಗ್ಗಗಳು. ನೆಲದಲ್ಲಿ ಸುಮಾರು ಮೂರು ಅಡಿ ಆಳ, ಐದಾರು ಅಡಿ ಅಗಲ ಇಂಗ್ಲಿಷ್ ಟಿ(T) ಆಕಾರದಲ್ಲಿ ಕುಳಿ ತೆಗೆದು ಅದರಲ್ಲಿ ಮಗ್ಗ ಅಳವಡಿಸಲಾಗುತ್ತದೆ. ಟಿ ಆಕಾರದ ಕುಳಿಯನ್ನು ನೇರ ಹಾಗೂ ಅಡ್ಡ ಎಂದು ನಾವು ವಿಂಗಡಿಸಿಕೊಂಡರೆ ನೇರ ಕುಳಿಯ ಆರಂಭದ ತುದಿಯಲ್ಲಿ ಮಗ್ಗ ನೇಯುವವರು ತಮ್ಮ ಕಾಲುಗಳನ್ನು ಕುಳಿಯಲ್ಲಿ ಇಳಿಬಿಟ್ಟು ಅಡ್ಡ ಕುಳಿಯ ಕಡೆಗೆ ಮುಖ ಮಾಡಿ ಕುಳಿತು ಕೊಳ್ಳುತ್ತಾರೆ. ಮಗ್ಗ ನೇಯುವಾಗ ಸಾಮಾನ್ಯವಾಗಿ ಪೃಷ್ಠಕ್ಕೆ ಸಲಆಧಾರವಾಗಿ ಹಿಂಬದಿಯ ನೆಲಕ್ಕೆ ಆತುಕೊಂಡು, ನಿಂತುಕೊಂಡೇ ನೇಯುವುದು ವಾಡಿಕೆ. ಕುಳಿಯಲ್ಲಿ ಕುಳಿತವರ ಮುಂದಕ್ಕೆ ಬರುವಂತೆ ಅಕ್ಕಪಕ್ಕ ನೆಟ್ಟ ಅಡ್ಡಪಟ್ಟಿಯ ಮೇಲೆ ಮಗ್ಗದ ಚೌಕಟ್ಟನ್ನು ಅಳವಡಿಸಲಾಗುತ್ತದೆ.

ಮಗ್ಗ ಚೌಕಟ್ಟು ಮಗ್ಗದ ಒಟ್ಟಾರೆ ಘಟಕದಲ್ಲಿ ಪ್ರಮುಖ ಅಂಗ. ಇದರಲ್ಲಿ ಹಾಸು ಹಾಗೂ ಹೊಕ್ಕಿನ ಎಳೆಯನ್ನು ಬಟ್ಟೆಯಾಗುವಂತೆ ಮಾಡುವ 'ತಟ್ಟು' ಎಂಬ ಸಾಧನವನ್ನು ಅಳವಡಿಸುವುದರ ಜೊತೆಗೆ ಹೊಕ್ಕಿನ ಎಳೆಯನ್ನು ಅತ್ತ ಇತ್ತ ಒಯ್ಯುವ 'ಲಾಳಿ'ಯ ಆವಾಸ ಸ್ಥಾನವೂ ಇದರಲ್ಲಿರುತ್ತದೆ. ಈ ಆವಾಸ ಸ್ಥಾನ ಮಗ್ಗದ ಅಕ್ಕಪಕ್ಕ. ಇದರಲ್ಲಿರುವ 'ಪಿಕ್ಕರ್' ಎಂಬ ಸಾಧನ ಲಾಳಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತಳ್ಳಲು ನೆರವಾಗುತ್ತದೆ. ಈ ಪಿಕ್ಕರ್(ತಳ್ಳು ಚಕ್ಕೆ)ನ್ನು ತಳ್ಳುವಂತೆ ಪ್ರಚೋದಿಸುವ ಸಾಧನವನ್ನು 'ಕುಚ್ಚು' ಎಂದು ಕರೆಯಲಾಗುವುದು. ಇದನ್ನು ಮಗ್ಗದ ಚೌಕಟ್ಟಿನಲ್ಲಿಯೇ ಅಳವಡಿಸುವರು. ಇಡೀ ನೇಯುವ ಕ್ರಿಯೆಯ ಮೂಲಬಿಂದು ಈ ಕುಚ್ಚು.

ಮಗ್ಗದ ಚೌಕಟ್ಟಿಗೆ ಮುಂದೆ ಅಂದರೆ ವ್ಯಕ್ತಿಯ ಮುಂದಕ್ಕೆ ಬರುವಂತೆ ನೇಯ್ಗೆ ಬಟ್ಟೆ ಸುತ್ತಿಕೊಳ್ಳಲು 'ಕುಂಟೆ' ಎಂದು ಕರೆಯಲಾಗುವ ಚಚ್ಚೌಕದ ನಯವಾದ ಮರದ ತೊಲೆಯನ್ನು ಅಕ್ಕಪಕ್ಕ ನೆಟ್ಟ 'ಕುಂಟೆಗೂಟ'ಗಳಿಗೆ ಅಳವಡಿಸಲಾಗುತ್ತದೆ. ನಾಲ್ಕೈದು ಅಂಗುಲ ದಪ್ಪವಿರುವ ಈ ಕುಂಟೆಯ ಒಂದು ಚೌಕದಲ್ಲಿ ಪೂರ್ಣವಾಗಿ ಒಂದು ಕಡೆಯಿಂದ ಇನ್ನೊಂದು ತುದಿಯವರೆಗೆ ೧.೫ ಅಂಗುಲದಷ್ಟು ಕೊರೆದು ಆ ದೋಣಿಯಲ್ಲಿ ಮರದ ಸಣ್ಣ ಸಣ್ಣ ತುಂಡುಗಳನ್ನು ಭದ್ರವಾಗಿ

ಜಡಿಯಲಾಗುತ್ತದೆ. ವಸ್ತ್ರದ ಪ್ರಾರಂಭದ ತುದಿಯನ್ನು ಈ ತುಂಡುಗಳಿಗೆ ಸಿಕ್ಕಿಸಿ ನಂತರ ಬಟ್ಟೆ ನೇಯಲು ತೊಡಗಲಾಗುತ್ತದೆ. ಕುಂಟೆಯ ಬಲ ಬದಿಯಲ್ಲಿ ಚೌಕಟ್ಟಿನ ನಾಲ್ಕು ಬದಿಗಳೂ ಸೇರುವಂತೆ ಕೊರೆಯಲಾದ ರಂಧ್ರದಲ್ಲಿ ಒಂದು ಕಡೆ ಹಿಡಿಕೆಯುಳ್ಳ ಮರದ ಕೋಲನ್ನು ಸಿಕ್ಕಿಸಲಾಗುತ್ತದೆ. ಇದನ್ನು 'ಕುಂಟೆ ಬೆಣೆ' ಎನ್ನುತ್ತಾರೆ. ಇದು ಬಟ್ಟೆಯನ್ನು ಬಿಗಿಯಾಗಿಡುವಂತೆಯೇ ಕುಂಟೆಗೆ ಸುತ್ತಿಕೊಳ್ಳುವಷ್ಟು ಬಲವಾಗಿರುವುದಲ್ಲದೆ ಹಾಸು ಸಾಕಷ್ಟು ಬಿಗಿಯಗಿಡಲು ನೆರವಾಗುತ್ತದೆ. ಮಗ್ಗದ ಚೌಕಟ್ಟಿನ ಹಿಂಬದಿಯಲ್ಲಿ ಅಂದರೆ ಹಾಸಿನ ಕಡೆಗಿರುವಂತೆ ದಾರದ ಅಚ್ಚನ್ನು ಕಟ್ಟಲಾಗುತ್ತದೆ. ಈ ಅಚ್ಚನ್ನು ಕೆಳಗೆ ಪಾದ ಚಕ್ಕೆಗಳಿಗೆ ಕಟ್ಟಿದ್ದು ಇದನ್ನು ತುಳಿದಾಗ ಅಚ್ಚು ಮೇಲೇರಿ ಇಳಿಯುವಂತೆ ಅಳವಡಿಸಿರುತ್ತದೆ. ಈ ಅಚ್ಚು ಸಂಪೂರ್ಣ ದಾರದ್ದಾಗಿದ್ದು ನಾಲ್ಕು ಜೊತೆ ಕೋಲುಗಳಿಗೆ ಒಂದರ ಪಕ್ಕ ಒಂದು ಬರುವಂತೆ ಕಟ್ಟಲಾಗಿರುತ್ತದೆ. ಹಾಸಿನ ಸುಮಾರು ನಾಲ್ಕುವರೆ ಸಾವಿರ ಎಳೆಗಳು ಅಚ್ಚಿನ ದಾರದಲ್ಲಿ ಕ್ರಮವಾಗಿ ಬರುವಂತೆ ಹಾಯಿಸಲಾಗುತ್ತದೆ. ಮೊದಲ ಎರಡು ಅಚ್ಚು ಒಂದು ಜೋಡಿ. ಹಿಂದಿನ ಎರಡು ಅಚ್ಚಿನ ಕೋಲು ಇನ್ನೊಂದು ಜೋಡಿ. ಹಾಸಿನ ಮೊದಲ ಎಳೆಯನ್ನು ಮೊದಲ ಕೋಲಿನ ದಾರದ ರಂಧ್ರದಲ್ಲಿ ಎರಡನೇ ಎಳೆ, ಮೂರನೇ ಕೋಲಿನ ದಾರದ ರಂಧ್ರದಲ್ಲಿ ನಂತರ ಮೂರನೆ ಎಳೆ ಎರಡನೇ ಕೋಲಿನ ದಾರದ ರಂಧ್ರದಲ್ಲಿ ತರುವಾಯ ನಾಲ್ಕನೇ ಎಳೆ ನಾಲ್ಕನೆ ಕೋಲಿನ ದಾರದ ರಂಧ್ರದಲ್ಲಿ ಕ್ರಮವಾಗಿ ಒಂದರ ನಂತರ ಇನ್ನೊಂದರಂತೆ ತೆಗೆದುಕೊಳ್ಳಲಾಗುತ್ತದೆ. ಕೊಲುಗಳಿಗೆ ದಾರದ ಅಚ್ಚು ಕಟ್ಟುವ ಕಾರ್ಯ ಅದರಲ್ಲೇ ತುಂಬ ನುರಿತ ವ್ಯಕ್ತಿಗಳಿಂದ ನಡೆಯುತ್ತದೆ. ಇದಕ್ಕೆ 'ಅಚ್ಚು ಹಾಕುವುದು' ಎಂದು ಕರೆಯಲಾಗುತ್ತದೆ.

ಅಚ್ಚಿನಿಂದ ತೆಗೆದುಕೊಂಡು ಎಳೆಯನ್ನು ಮಗ್ಗದ ಚೌಕಟ್ಟಿನಲ್ಲಿ ಅಳವಡಿಸಿದ ತಟ್ಟಿನ ಸೂಕ್ಷ್ಮ ರಂಧ್ರದ ಮೂಲಕ ಪ್ರತಿ ರಂಧ್ರದಲ್ಲಿ ಅಗತ್ಯಕ್ಕೆ ತಕ್ಕಂತೆ ಎರಡು ನಾಲ್ಕು ಎಳೆಗಳಂತೆ ಕ್ರಮವಾಗಿ ತುಂಬಲಾಗುತ್ತದೆ. ರಂಧ್ರ ಸೂಕ್ಷ್ಮವಾಗಿದ್ದಷ್ಟು ಉತ್ತಮ ದರ್ಜೆಯ ಬಟ್ಟೆ ತಯಾರಿಸಬಹುದು. ಒಂದು ಎಳೆಯನ್ನು ಒಂದೆಳೆ ಎಂದು ಎರಡು ಎಳೆಯನ್ನು 'ಗಿಂಬ' ಎಂದು ಕೆರೆಯಲಾಗುವುದು.

ಹಾಸಿನ ಎಳೆಗಳು ಅಚ್ಚಿಗೆ ಬರುವ ಮುನ್ನ ಎರಡು ಅಡ್ಡಕೋಲುಗಳನ್ನು ಹಾದು ಬರುತ್ತವೆ. ಇದಕ್ಕೆ ಅಣಿಕೋಲು ಎಂದು ಕರೆಯುತ್ತಾರೆ. ಇದರಲ್ಲಿ ಎಳೆಗಳು ಒಂದರ ನಂತರ ಒಂದರಂತೆ ಕ್ರಮವಾಗಿ ಮೇಲೆ ಕೆಳಗೆ ಹಾಯಿಸಿ ತೆಗೆದುಕೊಳ್ಳಲಾಗುತ್ತದೆ. ಇದರಿಂದ ಎಳೆಗಳು ಆಯಾ ಸ್ಥಳದಲ್ಲಿ ಮರುಜೋಡಿಸಲು ಅನುಕೂಲ ಇಲ್ಲದಿದ್ದರೂ ಎಳೆಗಳು 'ನುಲಿ'ಯಾಗಿ ನೇಯಲು ತೊಂದರೆಯಾಗುವುದು.

ಹಾಸಿನ ಎಳೆಗಳು ಅಣಿಕೋಲನ್ನು ಮುಟ್ಟುವ ಮೊದಲು ಒಂದು ಅಡ್ಡ ಪಟ್ಟಿ ಮೇಲೆ ಹಾದು ಬರುತ್ತವೆ. ಇದನ್ನು 'ಅರ್ಧಣಿಗೆ' ಎಂದು ಕರೆಯುವರು. ಈ ಅಡ್ಡ ಪಟ್ಟಿಗೂ ಹಿಂದೆ

ಇನ್ನೊಂದು ಜೋಡಿ ಅಣಿಕೋಲು ಇರುತ್ತದೆ. ಇದರ ಕೆಲಸವೂ ಎಳೆಗಳ ಕ್ರಮಬದ್ಧತೆಯನ್ನು ಕಾಯ್ದುಕೊಳ್ಳುವುದೇ ಆಗಿದೆ.

ಹಾಸಿನ ಸುಮಾರು ನಾಲ್ಕುವರೆ ಸಾವಿರ ಎಳೆಗಳನ್ನು ಎಂಟು ಹತ್ತು ಭಾಗಗಳಾಗಿ ವಿಂಗಡಿಸಿ ದಪ್ಪ ದಾರದಿಂದ ಕುಣಿಕೆ ಹಾಕಲಾಗುತ್ತದೆ. ಇದಕ್ಕೆ 'ಗೊಲೆ' ಕಟ್ಟುವುದು ಎನ್ನುತ್ತಾರೆ. ಗೊಲೆಗಳಿಗೂ ಅರ್ಧಣಿಗೆಗೂ ಸುಮಾರು ಐದು ಗಜ ಉದ್ದವಿರುತ್ತದೆ. ಮನೆಯ ಅಳತೆಗೆ ತಕ್ಕಂತೆ ಇದು ಬದಲಾಗುತ್ತದೆ. ಹೀಗೆ ಕಟ್ಟಿದ ಗೊಲೆಗಳನ್ನು ಬಟ್ಟೆಯ ಅಗಲಕ್ಕೆ ಸಮವಾಗಿರುವಂತೆ ಒಂದು ದೊಣ್ಣೆಗೆ ಕಟ್ಟಲಾಗಿರುತ್ತದೆ. ಈ ದೊಣ್ಣೆಯನ್ನು 'ಹೊರಕೋಲು' ಎನ್ನಲಾಗುತ್ತದೆ. ಈ ರೀತಿಯ ಹಾಸನ್ನು ಮನೆಯ ಅಳತೆಗೆ ಬಿಚ್ಚಿ ಗೊಲೆ ಕಟ್ಟಿ ಹೊರಕೋಲೆಗೆ ಬಿಗಿದು ನೇಯುವುದಕ್ಕೆ ಹಾಸನ್ನು ಸಿದ್ಧಪಡಿಸುವ ಒಟ್ಟಾರೆ ಪ್ರಕ್ರಿಯೆಗೆ 'ಮಡುಕೋಲು ಅಥವಾ ಹೊರಕೋಲು ಕಟ್ಟುವುದು ಎನ್ನಲಾಗುವುದು. ನೇಕಾರರ ಪ್ರಾವಿಣ್ಯತೆಗೆ ತಕ್ಕಂತೆ ಶೀಘ್ರವಾಗಿ ಹಾಗೂ ಚೊಕ್ಕವಾಗಿ ಮಡುಕೋಲು ಕಟ್ಟಬಹುದು. ಬಟ್ಟೆ ನೇಯಲು ಇಡೀ ಮಡುಕೋಲು ಹಾಸು ಸೂಕ್ತವಾದ ಬಿಗಿ ಹೊಂದಿರಬೇಕು. ಇದಕ್ಕಾಗಿ ಹೊರಕೋಲನ್ನು ಒಂದು ನೂಲಿನ ಹಗ್ಗದಿಂದ ನಿಯಂತ್ರಿಸಲಾಗುವುದು. ಇದೇ ರೀತಿ ವಿನ್ಯಾಸಕ್ಕಾಗಿ ಬಳಸುವ ಜರಿ(ಕಲಾಪತ್ತು)ಯನ್ನು ನಿಯಂತ್ರಿಸುವ ಹಗ್ಗ ಕಲಾಪತ್ ಹಗ್ಗ ಎನ್ನುತ್ತಾರೆ. ಹಗ್ಗ ಬಳಸುವ ಮೊದಲು ಮಡುಕೋಲು ಕಟ್ಟುವಾಗ ದೊಣ್ಣೆಯನ್ನು ಒಂದು ಗೂಟಕ್ಕೆ ಸಿಕ್ಕಿಸಲಾಗುವುದು. ಇದನ್ನು 'ಮಿಳ್ಳೆಗೂಟ' ಎನ್ನಲಾಗುವುದು. ಕಬ್ಬಿಣದ ಕೊಳವೆಯನ್ನು ನೆಲಕ್ಕೆ ಹುದುಗಿಸಿ ಕೊಳವೆಗೆ ಹಿಡಿಸುವಷ್ಟು ದಪ್ಪದ ಕಬ್ಬಿಣದ ಗೂಟವನ್ನು ಇದರಲ್ಲಿ ನಿಲ್ಲಿಸುವರು. ನೆಲದಲ್ಲಿ ಹುದುಗಿರುವ ಕೊಳವೆ ಮಿಳ್ಳೆಯಂತೆ ಇರುವುದರಿಂದ ಇದನ್ನು 'ಮಿಳ್ಳೆ' ಎಂದು ಕರೆಯುತ್ತಾರೆ. ಮಡುಗೋಲು ಕಟ್ಟಿದ ನಂತರ ಹಸಿನ್ನು ಹಸಗೊಳಿಸಿ ನೇಯಲು ಪ್ರಾರಂಭಿಸಲಾಗುವುದು. ಆರೇಳು ಅಂಗುಲ ಬಟ್ಟೆ ನೇಯ್ದ ನಂತರ ಕುಂಟೆ ಬೆಣಿಯ ನೆರವಿನಿಂದ ಬಟ್ಟೆಯನ್ನು ಕುಂಟೆಗೆ ಸುತ್ತಿಕೊಳ್ಳುತ್ತಾರೆ. ಬಟ್ಟೆ ಸುತ್ತಿಕೊಳ್ಳುವಾಗ ಮಡುಕೋಲು ದೊಣ್ಣೆ ಮುಂದಕ್ಕೆ ಬರುವುದರಿಂದ ದೊಣ್ಣೆಗೆ ಹಗ್ಗ ಸಿಕ್ಕಿಸಿ ಮುಂದಕ್ಕೆ ಬರುವಂತೆ ಮಾಡಿಕೊಳ್ಳುತ್ತಾರೆ.

ಬಟ್ಟೆ ನೇಯುತ್ತಾ ಹೋದಂತೆ ಹಗ್ಗ ಸಡಿಲಿಸಿ ಕುಂಟೆಗೆ ಸುತ್ತಿಕೊಳ್ಳುತ್ತಾ ಹೋಗುವುದು. ಹೀಗೆ ಅಚ್ಚಿನ ಸಮೀಪದವರೆಗೆ, ದೊಣ್ಣೆ ಬರುವವರೆಗೂ ಇದೇ ಪ್ರಕ್ರಿಯೆ ಮುಂದುವರಿಯುವುದು. ನಂತರ ಗೊಲೆ ಬಿಚ್ಚಿ ಪುನಃ ಮಡುಕೋಲು ಕಟ್ಟುವರು. ಹೀಗೆ ಹಾಸು ಕೊನೆಗೊಳ್ಳುವವರೆಗೆ ಇದೇ ಕ್ರಮ ಅನುಸರಿಸುತ್ತಾರೆ. ಹಾಸು ಕೊನೆಕೊಂಡಾಗ ಮಡುಕೋಲು ಹತ್ತಿರಕ್ಕೆ ಬಿತ್ತು ಎನ್ನುತ್ತಾರೆ. ನಂತರ ಇನ್ನೊಂದು ಹಾಸನ್ನು ಇದಕ್ಕೆ ಜೋಡಿಸಬೇಕು. ಮೊದಲಿನ ಪ್ರತಿ ಎಳೆಗೆ ಹೊಸ ಹಾಸಿನ ಪ್ರತಿ ಎಳೆಯನ್ನು ಬೆರಳಿನಿಂದ ಬೆಸೆಯಲಾಗುವುದು. ಇದಕ್ಕೆ ಕೆಚ್ಚುವುದು ಎಂದು ಕರೆಯುತ್ತಾರೆ.

ಕೆಚ್ಚುವುದಕ್ಕೆಂದೇ ಪ್ರತ್ಯೇಕ ನಿಪುಣ ಕೆಲಸಗಾರರಿರುತ್ತಾರೆ. ಕೆಚ್ಚಿದ ನಂತರ ಕೆಚ್ಚಿನ ನಿಪುಣತೆಗೆ ತಕ್ಕಂತೆ ಕೆಚ್ಚು ಅಚ್ಚಿನ ಬಳಿಗೆ ಬರುವವರೆಗೆ ನೇಯಲಾಗುವುದು. ಕೆಚ್ಚು ಒಳಕ್ಕೆ ಬರುವವರೆಗಿನ ನೇಯುವಿಕೆಯನ್ನು ಕೆಚ್ಚು ಮುಟ್ಟಿಸುವುದು ಎನ್ನಲಾಗುತ್ತದೆ.

ನೇಯುವಿಕೆಗೆ 'ಲಾಳಿ' ಎಂಬ ಸಾಧನವನ್ನು ಬಳಸುವರು. ಇದರಲ್ಲಿ ಎಳೆ ಸುತ್ತಿದ ಮರದ ಸಣ್ಣ ತುಂಡು ಇರುತ್ತವೆ. ಇದಕ್ಕೆ 'ಕಣಿಕೆ' ಎಂದು ಕರೆಯುತ್ತಾರೆ. ಮಗ್ಗದ ಚೌಕಟ್ಟಿನ ಬಲ ಬದಿಯಲ್ಲಿರುವ ಲಾಳಿಯ ನಿಲುಗಡೆ ಮನೆಯಲ್ಲಿ ಎಳೆ ತುಂಬಿದ ಕಣಿಕೆಯುಳ್ಳ ಲಾಳಿ ಹಾಕಿ ಮಗ್ಗದ ಕುಳಿಯಲ್ಲಿರುವ ಪಾದ ಚೆಕ್ಕೆಗಳಲ್ಲಿ ಒಂದನ್ನು ತುಳಿದಾಗ ಪಾದ ಚಕ್ಕೆಗೆ ಕಟ್ಟಿದ ಒಂದು ಅಚ್ಚು ಕೆಳಗೆ ಬರುತ್ತದೆ. ಇದರಿಂದ ಹಾಸಿನ ಅರ್ಧಭಾಗ ವಿಂಗಡಿಸಿಕೊಂಡು ಲಾಳಿ ಅದರೊಳಗೆ ಹರಿಯುವಷ್ಟು ಮಾರ್ಗ ಏರ್ಪಡುತ್ತದೆ. ಆಗ ಕುಚ್ಚು ಎಳೆ ಎಳೆದರೆ ಲಾಳಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು. ಹೋಗುವಾಗ ಕಂಡಿಕೆಯಿಂದ ಹಾಸಿನ ಅಗಲಕ್ಕೂ ಸಾಲುವಷ್ಟು ಉದ್ದದ ಎಳೆ ಕಂಡಿಕೆಯಿಂದ ಕಳಚಿಕೊಂಡು ನಿಲ್ಲುತ್ತದೆ. ಆಗ ಎಡಗೈಯಲ್ಲಿ ಹಿಡಿದಿರುವ ಮಗ್ಗದ ಚೌಕಟ್ಟನ್ನು ಬಡಿದು ಇನ್ನೊಂದು ಪಾದ ಚಕ್ಕೆ ತುಳಿದರೆ ಉಳಿದ ಅರ್ಧ ಕೆಳಕ್ಕೆ ಒಂದು ಮೊದಲ ಅಚ್ಚು ಮೇಲಕ್ಕೆ ಹೋಗಿ ಲಾಳಿ ಪುನಃ ಹಾಯಲು ಮಾರ್ಗ ಏರ್ಪಡುತ್ತದೆ. ನಂತರ ಮಗ್ಗದ ಹಿಡಿಕೆ ಮತ್ತೆ ಎಳೆದು ಎಳೆಯನ್ನು ಬಡಿದರೆ ಎಳೆ ಬಟ್ಟೆ ರೂಪ ಹೊಂದುತ್ತದೆ. ಬಟ್ಟೆ ಅಗಲವನ್ನು ಕಾಯ್ದುಕೊಳ್ಳಲು ಬಟ್ಟೆಯ ಅಂಚುಗಳನ್ನು ಬಿಗಿಯಾಗಿ ಹಿಡಿಯುವ ಕಾರ್ಯವನ್ನು ಎರಡು ತುದಿಯಲ್ಲಿ ಲೋಹದ ಮುಳ್ಳುಗಳಿಂದ 'ಸೇಡು' ಎಂಬ ಸಾಧನ ಮಾಡುವುದು. ಲಾಳಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತಳ್ಳುವ ಕಾರ್ಯವನ್ನು ತಳ್ಳುಚೆಕ್ಕೆ(ಪಿಕ್ಕರ್) ಎಂಬ ಸಾಧನ ಮಾಡುವುದು. ಇದು ಸಾದಾ ಬಟ್ಟೆಯನ್ನು ನೇಯುವ ವಿಧಾನ.

ಈ ವಿಧಾನದಲ್ಲಿ ಅಗತ್ಯವಿರುವ ವಿನ್ಯಾಸವನ್ನು ಅಳವಡಿಸಿಕೊಳ್ಳಬಹುದು. ವಿನ್ಯಾಸಕ್ಕೆ ನೆರವಾಗುವ ಮರದ ಸಾಧನವನ್ನು 'ತಾಪಿಟ್ಟು' ಎಂದು ಕರೆಯುವರು. ಯಂತ್ರ ಮಗ್ಗದ ಕಬ್ಬಿಣದ ಈ ಸಾಧನಕ್ಕೆ 'ಡಾಲಿ' ಇಂದು ಕರೆಯುತ್ತಾರೆ. ಎರಡರಲ್ಲೂ ಸಹ ಮಗ್ಗಕ್ಕೆ ನೇರವಾಗಿ ಬರುವಂತೆ ಮಗ್ಗದ ಮೇಲ್ಭಾಗದಲ್ಲಿ ಅಳವಡಿಸಲಾಗುವುದು. ಇದರಿಂದ ಇಳಿಬಿಟ್ಟ ದಾರಗಳು ವಿನ್ಯಾಸಕ್ಕೆ ತಕ್ಕಂತೆ ಹಾಸಿನ ಅಂಚಿನಲ್ಲಿ ಎಳೆಗಳ ನಡುವೆ ಇಳಿಬಿಟ್ಟ 'ಬೆದ' ಇಂಬ ವಿಶಿಷ್ಟ ದಾರದೊಂದಿಗೆ ಸಂಪರ್ಕ ಹೊಂದಿರುತ್ತವೆ. ಪ್ರತಿ ಬೆದ ಮೇಲೆ ಕೆಳಗೆ ಏರಿ ಇಳಿಯಲು ಸಾಧ್ಯವಾಗುವಂತೆ ತೂಕ ಬರಲು ಲೋಹದ ಕಂಬಿಗಳನ್ನು ಕಟ್ಟಿರುತ್ತಾರೆ. ಇದನ್ನು 'ಡಬ್ಬಳ' ಎಂದು ಕರೆಯುವುದು. ಬೆದದಲ್ಲಿರುವ ಸಣ್ಣ ಕಂಡಿಕೆಯಲ್ಲಿ ವಿನ್ಯಾಸಕ್ಕೆ ಬಳಸುವ ಕಲಾಪತ್ತು (ಜರಿ) ಎಳೆಯನ್ನು ಹಾಯಿಸಿ ತಟ್ಟಿನ ಮೂಲಕ ಕ್ರಮವಾಗಿ ಒಳಕ್ಕೆ ತೆಗೆದುಕೊಳ್ಳಲಾಗುವುದು. ವಿನ್ಯಾಸಕ್ಕೆ ತಕ್ಕಂತೆ ಇಳಿಬಿಟ್ಟ ದಾರವನ್ನು ಮೇಲೆತ್ತುವ ಕಾರ್ಯವನ್ನು ರಂಧ್ರಕ್ಕೆ 'ಪೆಕ್ಸ' ಎಂಬ ಮರದ ತುಂಡು ಮಾಡುವುದು.

ಈಗ ಜಕಾರ್ಡ ಎಂಬ ವಿಧಾನ ಒಂದು ವಿನ್ಯಾಸ ಕ್ರಿಯೆಯನ್ನು ಸರಳಗೊಳಿಸಿದೆ. ರಟ್ಟಿನ ಕಾರ್ಡುಗಳಲ್ಲಿ ರಂಧ್ರ ಕೊರೆಯುವ ಮೂಲಕ ಅಗತ್ಯ ವಿನ್ಯಾಸ ಅಳವಡಿಸಲಾಗುವುದು. ಇದರಲ್ಲಿ ಹಾಸಿನ ಪ್ರತಿ ಎಳೆ ನಡುವೆ ಬೆದ ಇರುತ್ತದೆ. ಸೆರಣಿಗೆ (ಪಲ್ಲು) ವಿನ್ಯಾಸ ಹಾಕುವ (ಬೇಲು ಹಾಕುವ) ಶ್ರಮ ತುಂಬಾ ಕಡಿಮೆ. ಬೇಲು ಎತ್ತುವ ಕಾರ್ಯಕ್ಕೆ ಇನ್ನೊಬ್ಬ ವ್ಯಕ್ತಿಯ ನೆರವು ಅಗತ್ಯವಿಲ್ಲ.

ನೇಯ್ಗೆಯ ವಿವಿಧ ಹಂತಗಳು:

ಹತ್ತಿ ಅಥವಾ ರೇಷ್ಮೆ ಎಳೆ ತೆಗೆದು ರೀಲಿಂಗ್ ಮಾಡಿದ ನಂತರದ ಕಾರ್ಯ ನೇಕಾರರಿಗೆ ಒಂದಲ್ಲಾ ಒಂದು ರೀತಿ ಸಂಬಂಧಿಸಿರುತ್ತದೆ. ಕೈಮಗ್ಗ ಹಾಗೂ ಯಂತ್ರ ಮಗ್ಗಗಳೆರಡಕ್ಕೂ ಹಾಸಿನ ಎಳೆ, ಹೊಕ್ಕಿನ ಎಳೆಗಳನ್ನು ಹುರಿ ಮಾಡುವ ಯಂತ್ರದಿಂದ ಹುರಿ ಮಾಡಿಕೊಳ್ಳುವರು. ಇಲ್ಲಿಗೆ ಒಂದು ಹಂತ ಮುಗಿದಂತಾಗುತ್ತದೆ. ಮುಂದಿನ ಹಂತ ಕೈಮಗ್ಗಗಳಿಗಾದರೆ ಪಾಗಡಿ ಹಾಕುವ ಕಾರ್ಯ ಯಂತ್ರ ಮಗ್ಗಗಳಿಗೆ ವಾರ್ಪ ಹಾಕುವ ಕಾರ್ಯ ನುರಿತ ಕೆಲಸಗಾರರಿಂದ ನಡೆಯುತ್ತದೆ. ನಂತರದ ಹಂತ ಬಣ್ಣ ಹಾಕುವ ಕಾರ್ಯ ಕೈಮಗ್ಗಗಳಲ್ಲಿ ವಸ್ತ್ರ ನೇಯುವುದಕ್ಕೆ ಮೊದಲೇ ಸಾಮಾನ್ಯವಾಗಿ ಬಣ್ಣ ಮಾಡಲಾಗುತ್ತದೆ. ಯಂತ್ರ ಮಗ್ಗದಲ್ಲಿ ಬಿಳಿ ವಸ್ತ್ರ ನೇಯ್ದು ನಂತರ ಅದಕ್ಕೆ ಪ್ರಿಂಟ್ ಇಲ್ಲವೆ ಬಣ್ಣ ಹಾಕಿಡುವುದೂ ಉಂಟು.

ಕೈಮಗ್ಗದಲ್ಲಿ ಬಣ್ಣದ ಮನೆಯಿಂದ ಬಣ್ಣ ಮಾಡಿದ ಪಾಗಡಿ ಮತ್ತು ಸಪ್ಪೆಗಳನ್ನು ತಂದು ತೇವವಿದ್ದರೆ ಮೊದಲು ಅವುಗಳನ್ನು ಒಣಗಿಸುವವರು. ಹಿಂದೆ ಪಾಗಡಿಯನ್ನು ರಸ್ತೆ ಬದಿ ಅಥವಾ ಬಯಲಿನಲ್ಲಿ ಒಣಗಿಸಲಾಗುತ್ತಿತ್ತು. ಇದಕ್ಕಾಗಿ ವಿಶಿಷ್ಟವಾದ ತಟ್ಟೆಗೋಲು ಎಂಬ ಸಾಧನವನ್ನು ಬಳಸುತ್ತಿದ್ದರು. ತಲಾ ಐದು-ಆರು ಅಡಿ ಉದ್ದದ ಬೊಂಬು ಇಲ್ಲವೆ ಅದೇ ಗಾತ್ರದ ಮರದ ಕೋಲಿನಿಂದ ಇಂಗ್ಲಿಷ್ ಎಕ್ಸ(X) ಆಕಾರದ ಆಕೃತಿ ಮಾಡಿಕೊಂಡು ಮೇಲ್ತುದಿಯಲ್ಲಿ ಅಡ್ಡಲಾಗಿ ಇನ್ನೊಂದು ಕೋಲನ್ನು ಭದ್ರಪಡಿಸಲಾಗುತ್ತದೆ. ಇದರ ಕಾಲುಗಳು ಅಡ್ಡಡ್ಡ ಇರುವುದರಿಂದ ತಟ್ಟೆಗಾಲು ಎಂದು ಕರೆಯುವರು. ಇಂತಹ ಎರಡು ತಟ್ಟೆಗಾಲು ಪಾಗಡಿ ಒಣಗಿಸಲು ಅಗತ್ಯವಿರುತ್ತದೆ. ಒಂದು ತುದಿಯಲ್ಲಿ ಒಂದು ತಟ್ಟೆಗಾಲನ್ನು ನೆಲದಲ್ಲಿ ಹುಗಿದ ಗೊಲಕ್ಕೆ ಹಗ್ಗದ ಸಹಾಯದಿಂದ ನಿಲ್ಲಿಸುವರು. ಇದರ ಮೇಲ್ತುದಿಯ ಅಡ್ಡ ಪಟ್ಟಿಗೆ ಇನ್ನೊಂದು ಕೋಲು ಕಟ್ಟಿ ಕೋಲಿನ ಮಧ್ಯಭಾಗಕ್ಕೆ ಬರುವಂತೆ ಪಾಗಡಿಯ ಒಂದು ತುದಿ ಸೇರಿಸುತ್ತಾರೆ. ಪಾಗಡಿಯನ್ನು ಉದ್ದಕ್ಕೆ ಚಾಚುತ್ತಾ ಅದು ಕೊನೆಗೊಂಡ ಸ್ಥಳದಲ್ಲಿ ಇನ್ನೊಂದು ತಟ್ಟೆಗಾಲನ್ನು ಹಿಂದಿನಂತೆಯೇ ನಿಲ್ಲಿಸಿ ಬಿಗಿಯಾಗಿ ಕಟ್ಟಲಾಗುವುದು. ಹದವಾದ ಬಿಸಿಲಿನಲ್ಲಿ ಪಾಗಡಿ ಒಣಗಿಸಿ ಬಿಚ್ಚಿಡುವರು.

ಈ ಹಂತದ ನಂತರ ಒಣಗಿದ ಪಾಗಡಿಯನ್ನು ಮಗ್ಗದಲ್ಲಿ ಕೊನೆಗೊಂಡ ಹಿಂದಿನ ಹಾಸಿನ ಎಳೆಗಳಿಗೆ ಕ್ರಮವಾಗಿ ಕೈಬೆರಳಿನಿಂದ ಬೆಸೆಯಲಾಗುವುದು. ನಂತರದ ಹಂತ ಮಡುಗೋಲು

ಕಟ್ಟುವುದು. ಈ ಹಂತದಲ್ಲಿ ಹಾಸನ್ನು ಎಲ್ಲಾ ಎಳೆಗಳು ಒಂದೇ ಬಿಗಿತ ಇರುವಂತೆ ಹದಗೊಳಿಸಿ ನೇಯಲು ಸಿದ್ಧಪಡಿಸಲಾಗುವುದು. ಈ ರೀತಿ ಹಾಸು ಸಿದ್ಧವಾದರೆ ಹೊಕ್ಕಿನ ರೇಷ್ಮೆ ಅಥವಾ ಹತ್ತಿ ಲಾಳಿಯಲ್ಲಿ ಸೇರುವವರೆಗೆ ವಿವಿಧ ಹಂತಗಳನ್ನು ಹಾಯ್ದು ಬರುತ್ತದೆ. ಲಾಡಿಯ ಆಕಾರದಲ್ಲಿರುವ ರೇಷ್ಮೆ/ಹತ್ತಿಯನ್ನು ಬಣ್ಣದ ಮನೆಯಿಂದ ತಂದು ಮನೆಯಲ್ಲಿ ಒಣಗಿಸಿದ ನಂತರ ಮೂರು 'ಗುಪ್ಪು'ಗಳಿಗೆ ಅಂದರೆ ಮಣ್ಣಿನ ಮುದ್ದೆಗೆ ಸುಮಾರು ಮೂರು ಅಡಿ ಉದ್ದದ ನಯ ಮಾಡಿದ ಕೋಲನ್ನು ನೆಟ್ಟಗೆ ಭದ್ರವಾಗಿ ಸಿಕ್ಕಿಸಿ ಒಣಗಿಸುತ್ತಾರೆ. ಈ ರೀತಿ ಮೂರು ಗುಪ್ಪುಗಳನ್ನು ಸಿದ್ಧಪಡಿಸಿ ತ್ರಿಕೋನಾಕಾರದಲ್ಲಿ ಇವುಗಳನ್ನು ಇಟ್ಟು ಲಡಿಯನ್ನು ಇದರ ಮೇಲಿನಿಂದ ಹಾಕುವರು. ಲಡಿಯಲ್ಲಿ ಅಣಿ ಮಾಡಿದ ಮೇಲಿನ ತುದಿಯ ಎಳೆಯನ್ನು ತೆಗೆದು ಗುಪ್ಪಿನ ಮೇಲ್ತುದಿಯಿಂದ ಬರುವಂತೆ ಎಳೆದು ಮೇಲೆ ಚಾವಣಿಯಿಂದ ಇಳಿಬಿಟ್ಟ ಇನ್ನೊಂದು ಕೋಲಿನ ಮೇಲಿನಿಂದ ಹಾಯಿಸಿ ಪುನಃ ಕೆಳಕ್ಕೆ ತೆಗೆದುಕೊಂಡು ಬಿದಿರಿನ ದಬ್ಬೆಯಿಂದ ಮಾಡಿದ 'ಅಳ್ವೆ' ಎಂಬ ಸಾಧನಕ್ಕೆ ಸುತ್ತಿಕೊಳ್ಳಲಾಗುವುದು. ಈ ಅಳ್ವೆಯ ಒಂದು ತುದಿ 'ಮೂಲೆಮಣಿ' ಎಂಬ ಸಾಧನದಲ್ಲಿ ಇನ್ನೊಂದು ತುದಿ 'ಉಜ್ಜುಮಣಿ' ಎಂಬ ಮರದ ಸಾಧನಗಳ ಮೇಲೆ ಇರುವುದು. ಗುಪ್ಪಿನಲ್ಲಿರುವ ಲಡಿಯಿಂದ ಅಳ್ವೆಗೆ ರೇಷ್ಮೆ ಅಥವಾ ಹತ್ತಿ ಸುತ್ತಿಕೊಳ್ಳಲಾಗುವುದು. ಇತ್ತೀಚೆಗೆ ಯಂತ್ರಗಳಲ್ಲಿ ಅನುಸರಿಸುವಂತೆ ಲಡಿಯನ್ನು ವೈಂಡಿಂಗ್ ಯಂತ್ರದಲ್ಲಿ ಹಾಕಿ ಬಾಬಿನ್‌ಗೆ ಸುತ್ತಿಕೊಳ್ಳುತ್ತಾರೆ. ನಂತರ ಬಾಬಿನ್‌ನಲ್ಲಿರುವ ರೇಷ್ಮೆ ಹತ್ತಿಯನ್ನು ಕೈರಾಟಿಯ ನೆರವಿನಿಂದ ಕಂಡಿಕೆಗೆ ಸುತ್ತಿಕೊಳ್ಳುತ್ತಾರೆ. ಈ ರೀತಿ ಸುತ್ತಿದ ಕಂಡಿಕೆಯನ್ನು ಲಾಳಿಗೆ ಹಾಕಿಕೊಳ್ಳುವರು. ನಂತರದ ಕೆಲಸ ಬಟ್ಟೆ ನೇಯುವಿಕೆ. ಬಟ್ಟೆ ನೇಯುವಿಕೆಯನ್ನು ಈ ಹಿಂದೆ ತಿಳಿಸಿದಂತೆ ಬಟ್ಟೆ ನೇಯುವ ಕಾರ್ಯ ನಡೆಯುವುದು.

ಆಧುನಿಕ ನೇಕಾರಿಕೆ ಎಷ್ಟೇ ಬದಲಾವಣೆಗಳಾಗಿದ್ದರೂ ಕೈಮಗ್ಗದಲ್ಲಿ ಬಟ್ಟೆ ನೇಯುವಿಕೆ ಇಂದಿಗೂ ಒಂದು ಕೌಟುಂಬಿಕ ಉದ್ಯೋಗವಾಗಿಯೂ ಉಳಿದಿದೆ. ಗೂಡಿನಿಂದ ಎಳೆಯುವ ತೆಗೆಯುವ ಕಾರ್ಯಕ್ಕೆ ಪುರುಷರಿಗಿಂತ, ಹೆಂಗಸರು ಮತ್ತು ಮಕ್ಕಳು ತೊಡಗುವುದು ಸಾಮಾನ್ಯ. ನಂತರ ಹುರಿ ಮಾಡುವ ಕಾರ್ಯದಲ್ಲೂ ಮಹಿಳೆ ಮತ್ತು ಮಕ್ಕಳದೇ ಪ್ರಧಾನ ಪಾತ್ರ. ಏಕೆಂದರೆ ಈ ಕೆಲಸದಲ್ಲಿ ಹೆಚ್ಚಿನ ಕೂಲಿ ಸಿಕ್ಕುವುದಿಲ್ಲ. ಹೀಗಾಗಿ ಪುರುಷರು ಈ ಕಾರ್ಯದಲ್ಲಿ ತೊಡಗುವುದು ಅಪರೂಪ. ಹುರಿ ಮಾಡಿದ ನಂತರ ಬಣ್ಣ ಮಾಡುವ ಕಾರ್ಯದಲ್ಲೂ ಹೆಂಗಸರು ಮತ್ತು ಮಕ್ಕಳು ಸಹಾಯಕರಾಗಿ ದುಡಿಯುವುದನ್ನು ಕಾಣಬಹುದು. ನಂತರ ಪಾಗಡಿ ಹಾಕುವ ಕಾರ್ಯಕ್ಕೂ ಹೆಂಗಸರು ಮತ್ತು ಮಕ್ಕಳನ್ನು ಅವಲಂಬಿಸಬೇಕಾಗಿದೆ. ಮಡುಕೋಲು ಕಟ್ಟಲು ಮಹಿಳೆ, ಮಕ್ಕಳು ನೆರವಾಗುವುದು ಸಾಮಾನ್ಯ. ಹಾಗೆ ಬುಟ್ಟ ತಿರುವೆಲು, ಬೇಲು ಹಾಕಲು ಇವರು ಇರಲೇಬೇಕು. ಸೀರೆ ಬಟ್ಟೆಗಳನ್ನು ಮಡಿಸಲು ಪ್ಯಾಕ್ ಮಾಡಲು ಇವರ ಸಹಾಯ ಬೇಕು.

ಮಗ್ಗದ ಪ್ರಕಾರಗಳು:

ಕಚ್ಚಾ ಮಾಲುಗಳನ್ನು ಆಧರಿಸಿ ಕೈಮಗ್ಗಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು. ಹತ್ತಿ ಬಟ್ಟೆ ನೇಯುವ ಮಗ್ಗ, ರೇಷ್ಮೆ ಬಟ್ಟೆ ನೇಯುವ ಮಗ್ಗ, ಕೃತಕ ರೇಷ್ಮೆ ನೇಯುವ ಮಗ್ಗ ಮತ್ತು ಉಣ್ಣೆ ಬಟ್ಟೆ ನೇಯುವ ಮಗ್ಗ, ಇತರೆ ವಸ್ತುಗಳನ್ನು ಉಪಯೋಗಿಸಿ ನೇಯುವ ಮಗ್ಗ.

ಇದೇ ರೀತಿ ರಚನೆ ಮತ್ತು ಕಾರ್ಯ ಕುಶಲತೆ ಆಧರಿಸಿ ಕೈಮಗ್ಗಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು. ಪ್ರಾಚೀನ ಮಗ್ಗ, ಕುಳಿ ಮಗ್ಗ, ಚೌಕಟ್ಟು ಮಗ್ಗ, ಅರ್ಧ ಸ್ವಯಂಚಾಲಿತ ಮಗ್ಗ.

ಪ್ರಾಚೀನ ಮಗ್ಗಗಳಲ್ಲಿ ಕಟಿ ಮಗ್ಗ, ಗಿರಿಜನರ ಮಗ್ಗ, ಹಾಸುಗಂಬಳಿ ಮಗ್ಗ ಉಣ್ಣೆ ಕಂಬಳಿ ಮಗ್ಗ, ನೇವಳ ಮಗ್ಗ, ಟೇಪ್ ಮಗ್ಗಗಳೆಂಬ ವಿಧಗಳಿವೆ.

ಕೈಲಾಳಿಯ ಕುಳಿಗಳ ಮಗ್ಗಗಳು: ಈ ವಿಭಾಗದಲ್ಲಿ ಗಡ್ವಾಲ್ ಮಗ್ಗ, ಬಲರಾಮಪುರಂ ಮಗ್ಗ, ವಾರಣಾಸಿ ಮಗ್ಗ, ದೇವಿ ಮಗ್ಗ, ಔರಂಗಬಾದ್ ಮಗ್ಗ, ಕಾಂಚೀವರಂ ಮಗ್ಗ ಇತ್ಯಾದಿಗಳು ಬರುತ್ತವೆ.

ಹಾರುವ ಲಾಳಿಯ ಕುಳಿ ಮಗ್ಗಗಳು: ಇದರಲ್ಲಿ ಉಪ್ಪಡ ಮಗ್ಗ, ವೆಂಕಟಗಿರಿ ಮಗ್ಗ, ಸೇಲಂ ಮಗ್ಗ, ಮದ್ರಾಸ್ ಕರವಸ್ತ್ರ ಮಗ್ಗ, ಸಾದಲ ಮಗ್ಗ, ನಾಗಪುರ ಮಗ್ಗಗಳು ಸೇರುತ್ತವೆ.

ಹಾರುವ ಲಾಳಿಯ ಮಗ್ಗವನ್ನು ಇಂಗ್ಲೆಂಡಿನಲ್ಲಿ ಕಂಡುಹಿಡಿಯುವವರೆಗೆ ಭಾರತದಲ್ಲಿ ಕೈಯಿಂದಲೇ ಲಾಳಿಯನ್ನು ಅತ್ತಿಂದಿತ್ತ ಹಾಕಲಾಗುತ್ತಿತ್ತು.

ಚೌಕಟ್ಟು ಅಥವಾ ಸ್ಟಾಂಡ್ ಮಗ್ಗಗಳು: ಈ ವಿಭಾಗದಲ್ಲಿ ಮಲಬಾರು ಮಗ್ಗ, ಮಧುರೆ ಮಗ್ಗ, ರಾಜಸ್ಥಾನಿ ಮಗ್ಗ, ಶಾಂತಿಪುರ ಮಗ್ಗ, ಸೊಲ್ಲಾಪುರ ಮಗ್ಗಗಳು ಸೇರುತ್ತವೆ.

ಅರ್ಧ ಸ್ವಯಂ ಚಾಲಿತ ಮಗ್ಗಗಳು: ಚಿತ್ತರಂಜನ್ ಮಗ್ಗ, ವಾರಣಾಸಿ ಮಗ್ಗ, ಮದನಪುರ ಮಗ್ಗ, ಹ್ಯಾಟರ್ ಸ್ಲೇ ಪೆಡಲ್ ಮಗ್ಗಗಳು ಈ ವಿಭಾಗಕ್ಕೆ ಸೇರುತ್ತವೆ.

ಪ್ರಾಚೀನ ಮಗ್ಗಗಳ ರಚನೆ ಸರಳ ಮತ್ತು ಕಾರ್ಯವಿಧಾನ ಹಳೆಯದು. ಹೀಗಿದ್ದರೂ ಇವುಗಳ ವೈಶಿಷ್ಟ ಇದುವರೆಗೂ ಬದಲಾಗದೆ ಇರುವುದು ಇದರ ಮೇಲ್ಮೆ ಹಾಗೂ ಉಪಯುಕ್ತತೆಗೆ ನಿದರ್ಶನ. ಇವುಗಳಲ್ಲಿ ಹೊಕ್ಕನ್ನು ಕೈಯಲ್ಲಿ ಹಾಸಿನೊಳಗೆ ಮಗ್ಗಗಳಲ್ಲೂ ಸಾಧ್ಯವಾಗದ ವಿನ್ಯಾಸ ಇದರಲ್ಲಿ ಸಾಧ್ಯ.

ಪುರಾತನ ಕಟಿ ಮಗ್ಗ ಸಾಮಾನ್ಯವಾಗಿ ಮಣಿಪುರ, ತ್ರಿಪುರ, ಅಸ್ಸಾಮಿನ ಕೆಲವು ಭಾಗಗಳಲ್ಲಿ ಪ್ರಚಲಿತವಿದೆ. ಗಾಲೋ ಗಿರಿಜನ ಉಪಯೋಗಿಸುವ ಧಾಕಬಂಧಗಳು ತ್ರಿಪುರದ ಸ್ತ್ರೀಯರು

ತೊಡುವ ಕಂಚುಕ, ಮಣಿಪುರದ ನಾಗ ಮತ್ತು ವೈಷ್ಣವ ಮಹಿಳೆಯರು ತೊಡುವ ಪೆನಕ್ ಸೊಂಟಪಟ್ಟಿ, ನಾಗಾ ತರುಣಿಯರ ನೃತ್ಯ ಕಟಿ ಮಗ್ಗದ ವೈಶಿಷ್ಟ ಇವುಗಳನ್ನು ಇತರೆ ಮಗ್ಗಗಳಲ್ಲಿ ತಯಾರಿಸಲು ಬರುವುದಿಲ್ಲ.

ನೇಕಾರರು ತಯಾರಿಸುವ ವಸ್ತುಗಳು:

ಹತ್ತಿಯ ವಸ್ತ್ರಗಳು: ಕರ್ನಾಟಕದಲ್ಲಿ ೧೨ನೇ ಶತಮಾನದಿಂದ ಹತ್ತಿ ವಸ್ತ್ರಗಳ ತಯಾರಿಕೆ ಬಗ್ಗೆ ಉಲ್ಲೇಖಗಳಿದ್ದರೂ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹತ್ತಿ ವಸ್ತ್ರಗಳು ಪಡೆದಿದ್ದ ಮಹತ್ವದ ಬಗ್ಗೆ ಸ್ಪಷ್ಟ ಚಾರಿತ್ರಿಕ ದಾಖಲೆ ಇದೆ. ವೃತ್ತಿಪರ ಸಂಘಗಳನ್ನು ಕಟ್ಟಿಕೊಂಡು ಹೇರಳವಾಗಿ ವಸ್ತ್ರ ತಯಾರಿಸುತ್ತಿದ್ದ ದೇವಾಂಗ, ಪದ್ಮಶಾಲಿ ಹಾಗೂ ಇತರ ಜನಾಂಗಗಳು ಅದನ್ನು ಅಂಕೋಲ ಹೊನ್ನಾವರಗಳಿಂದ ಪೋರ್ಚುಗಲ್‌ಗೆ ರಫ್ತು ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ದೈನಂದಿನ ಬಳಕೆಯ ಒರಟು ವಸ್ತ್ರಗಳ ಜೊತೆಗೆ ಮಸ್ಲಿನ್ ಎಂಬ ಉತ್ಕೃಷ್ಟ ದರ್ಜೆಯ ಹತ್ತಿ ವಸ್ತ್ರವು ತಯಾರಾಗುತ್ತಿತ್ತು. ಹಿಂದೆ ಕರ್ನಾಟಕದಲ್ಲಿ ಪರ್ಕಲ್ಲಾ ಎಂಬ ಗಟ್ಟಿ ಹತ್ತಿ ವಸ್ತ್ರವನ್ನು ಹೊಲೆಯ ಜನಾಂಗ ತಯಾರಿಸುತ್ತಿದ್ದು ಬಡಜನ ಇದನ್ನು ಬಳಸುತ್ತಿದ್ದರು. ಹತ್ತಿ ವಸ್ತ್ರಕ್ಕೆ ಇಂದು ಕರ್ನಾಟಕ ಹೆಚ್ಚು ಪ್ರಸಿದ್ಧಿ.

ಈಗ ಹತ್ತಿ ವಸ್ತ್ರ ತಯಾರಿಕೆ ಜನಪ್ರಿಯ ಜೀವನ ನಿರ್ವಹಣೆಯ ಮಾರ್ಗವಾಗಿ ಉಳಿದಿಲ್ಲ. ಇದಕ್ಕೆ ಮುಖ್ಯ ಕಾರಣ ಇದರಲ್ಲಿ ಕೂಲಿ ಕಡಿಮೆ. ಜೊತೆಗೆ ದೊಡ್ಡ ಗಿರಣಿಗಳಲ್ಲಿ ವೈವಿಧ್ಯಮಯ ಹತ್ತಿ ವಸ್ತ್ರಗಳು ತಯಾರಾಗಿ ಕಡಿಮೆ ಬೆಲೆಯಲ್ಲಿ ವಿಲೇವಾರಿ ಮಾಡುವುದರಿಂದ ಗೃಹ ಕೈಗಾರಿಕೆ ಇದರೊಂದಿಗೆ ಸ್ಪರ್ಧಿಸಲಾರದು. ಆದರೂ ಬಳ್ಳಾರಿ ಜಿಲ್ಲೆಯ ವಿವಿಧ ಭಾಗದಲ್ಲಿ ಸಹಕಾರ ಸಂಘಗಳಿಂದ ಧೋತಿ, ಬೆಡ್‌ಶೀಟ್, ಟವಲ್, ಸೀರೆ, ಜಮಖಾನ, ನಿಕ್ಕರ್, ಅಂಗಿ, ಲಂಗ ಇತ್ಯಾದಿ ವಸ್ತ್ರಗಳನ್ನು ತಯಾರಿಸಲಾಗುತ್ತದೆ. ಶುದ್ಧ ಹತ್ತಿ ವಸ್ತ್ರದ ಜೊತೆಗೆ ಹತ್ತಿ ಮತ್ತು ರೇಷ್ಮೆ, ಹತ್ತಿ ಮತ್ತು ಕೃತಕ ಎಳೆ ಹತ್ತಿ ಮತ್ತು ಉಣ್ಣೆ ಮಿಶ್ರಣದ ವಸ್ತುಗಳನ್ನು ಈ ಸಂಘಗಳಲ್ಲಿ ತಯಾರಿಸುತ್ತಿದ್ದು ಇವು ಜನಪ್ರಿಯವಾಗಿವೆ.

ರೇಷ್ಮೆ ವಸ್ತುಗಳು:

ಕರ್ನಾಟಕದಲ್ಲಿ ಮುಖ್ಯವಾಗಿ ಬೆಂಗಳೂರು ಜಿಲ್ಲೆ, ಮೈಸೂರು ಜಿಲ್ಲೆ, ಕೋಲಾರ, ತುಮಕೂರು, ಚಿತ್ರದುರ್ಗ, ಬಳ್ಳಾರಿ, ಧಾರವಾಡ, ಗದಗ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ರೇಷ್ಮೆ ವಸ್ತ್ರ ತಯಾರಿಕೆ ಗೃಹ ಕಸುಬಾಗಿ ಇಂದಿಗೂ ಉಳಿದಿದೆ. ರೇಷ್ಮೆ ವಸ್ತ್ರ ತೊಡುವ ಹಂತ ತಲುಪುವ ಹೊತ್ತಿಗೆ ಅನೇಕ ಸಂಕೀರ್ಣ ಹಂತಗಳನ್ನು ಹಾಯ್ದುಬರುತ್ತದೆ.

ರೇಷ್ಮೆ ವಸ್ತ್ರಗಳಲ್ಲಿ ಸೀರೆ ಪ್ರಮುಖ ಸ್ಥಾನ ಪಡೆದಿದೆ. ಕಾಂಜೀವರಂ, ಧರ್ಮಾವರಂ, ಬನರಾಸ್, ಮೊಳಕಾಲ್ಮೂರು, ಇಳಕಲ್, ಗದಗ-ಬೆಟಗೇರಿ, ಪೋಚಂಪಲ್ಲಿ, ಮೈಸೂರು ರೇಷ್ಮೆ

ರೀತಿಯಲ್ಲಿ ಊರಿನ ಹೆಸರಿನಿಂದಲೇ ಗುರುತಿಸಬಹುದಾದ ವಿಶಿಷ್ಟ ಮಾದರಿಯ ಸೀರೆಗಳನ್ನು ಕುಶಲ ನೇಕಾರರು ತಯಾರಿಸುತ್ತಾರೆ. ಸೀರೆಗಳನ್ನು ವಿವಿಧ ಹೆಸರುಗಳಿಂದ ಕರೆಯುವರು. ಕ್ರೇಪ್ ಸಿಲ್ಕ್, ಮೈಸೂರು ಸಿಲ್ಕ್, ಟಿಶ್ಯೂ ಸೀರೆಗಳು, ಅಪೂರ್ವ ಸೀರೆಗಳು, ಕ್ಲೀಯೊ ಪಾತ್ರ, ಬನರಾಸ್ ಸೀರೆಗಳು, ಇಳಕಲ್ ಹಾಗೂ ಮೊಳಕಾಲ್ಮೂರು ಸೀರೆಗಳು ದೇಶದಾದ್ಯಂತ ಪ್ರಸಿದ್ಧವಾಗಿವೆ.

ಸೀರೆಗಳಂತೆಯೇ ರೇಷ್ಮೆ ಪಂಚೆ ಹಾಗೂ ಶಲ್ಯಗಳು, ಕಲಾಪತ್ ಅಂಚಿನ ಪಂಚೆ, ಬಣ್ಣದ ಧೋತಿ ಶಲ್ಯಗಳನ್ನು ಕೈಮಗ್ಗ ಹಾಗೂ ಯಂತ್ರ ಮಗ್ಗಗಳೆರಡರಿಂದಲೂ ನೇಕಾರರು ಪಂಚೆ-ಶಲ್ಯಗಳನ್ನು ತಯಾರಿಸುತ್ತಾರೆ.

ರೇಷ್ಮೆ ಲಂಗ, ರವಿಕೆ ಕಣಗಳು, ಲಂಗ-ದಾವಣಿಗಳು, ಪುರುಷರ ಅಂಗಿ, ಜುಬ್ಬಾ ವಸ್ತ್ರ, ಮಹಿಳೆಯರ ಚೂಡಿದಾರ ಇತ್ಯಾದಿ ವಸ್ತ್ರಗಳನ್ನು ತಯಾರಿಸಲಾಗುತ್ತದೆ.

ಉಣ್ಣೆ ವಸ್ತ್ರಗಳನ್ನು ಹಾಗೂ ನಾರಿನ ವಸ್ತ್ರಗಳನ್ನು ಉತ್ತರ ಭಾರತದ ರಾಜ್ಯಗಳಲ್ಲಿ ಕಾಣಬಹುದು. ದಕ್ಷಿಣ ಭಾರತದಲ್ಲಿ ಈ ವಸ್ತ್ರಗಳನ್ನು ತಯಾರಿಸುವ ಮಗ್ಗಗಳು ಅಪರೂಪ.

ಗಟ್ಟಿ ಪಾಲಿಥಿನ್ ಎಳೆಯಿಂದ ಸೊಳ್ಳೆ ಪರದೆಗಳನ್ನು ಬೆಂಗಳೂರು ಸುತ್ತ ಮುತ್ತಲ ಪ್ರದೇಶದಲ್ಲಿ ಹೆಚ್ಚಾಗಿ ತಯಾರಿಸಲಾಗುತ್ತದೆ. ಇದು ಯಂತ್ರ ಮಗ್ಗಕ್ಕೆ ಮಾತ್ರ ಸೀಮಿತ ಕೈಮಗ್ಗದಲ್ಲಿ ಇದನ್ನು ನೇಯುವುದಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಮುಖವಾಗಿ ಕೊಟ್ಟೂರು, ರಾಂಪುರ ಮತ್ತು ಬಳ್ಳಾರಿ ನಗರದಲ್ಲಿ ರೇಷ್ಮೆ ಸೀರೆ ಮತ್ತು ವಸ್ತ್ರಗಳನ್ನು ತಯಾರಿಸುವರು.

ನೇಕಾರಿಕೆ ವ್ಯವಹಾರಕ್ಕೆ ಸಂಬಂಧಿಸಿದಂತೆ ನೇಕಾರಿಕೆ ಉದ್ಯೋಗದಲ್ಲಿ ನೇಕಾರಿಕೆಗೆ ಸರಬರಾಜಾಗಬೇಕಾದ ಕಚ್ಚಾ ಮಾಲು ಹಾಗೂ ಸಿದ್ಧವಾದ ಬಟ್ಟೆಗೆ ಮಾರುಕಟ್ಟೆ ಇವು ಎರಡು ಪ್ರಮುಖವಾದ ಅಂಶಗಳು. ನೇಕಾರ ಸ್ವಂತ ಆರ್ಥಿಕ ಪರಿಸ್ಥಿತಿ, ಇನ್ನಿತರ ಕಾರಣಗಳಿಂದ ಸ್ವತಃ ಪೇಟೆಯಿಂದ ಕಚ್ಚಾ ನೇಯ್ಗೆ ಮಾಡಿ ಪೇಟೆಯಲ್ಲಿ ಮಾರಾಟ ಮಾಡಲು ಸಾಧ್ಯವಾಗದು. ಇದರಿಂದ ನೇಕಾರನ ನೇಯ್ಗೆಗೆ ಬೇಕಾಗುವ ಕಚ್ಚಾಮಾಲು ಪೂರೈಕೆ, ನೇಯ್ಗೆ, ಸಿದ್ಧಮಾಲಿಗೆ ಹಣ ಸಂದಾಯ ಕುರಿತು ಮೂರು ತರಹ ಕೊಟ್ಟುಕೊಳ್ಳುವ ವಿಧಾನಗಳು ಅಸ್ಥಿತ್ವದಲ್ಲಿವೆ. ಅವುಗಳಾವುವು ಎಂದರೆ ಮುಂಗಡ ವಿಧಾನ, ಸಟ್ಟಾ ವಿಧಾನ ಮತ್ತು ರೋಖಡಾ ವಿಧಾನ.

ಮುಂಗಡಾ ವಿಧಾನ: ಈ ವಿಧಾನದಲ್ಲಿ ನೇಕಾರ ತನ್ನ ಸ್ವಂತ ಹಣವನ್ನಾಗಲಿ ಅಥವಾ ಯಾರಿಂದಲಾದಾರೂ ತಂದ ಹಣವನ್ನು ಕಚ್ಚಾ ಮಾಲು ಖರೀದಿಯಲ್ಲಿ ತೊಡಗಿಸುವುದಿಲ್ಲ, ಯಜಮಾನ ಅಥವಾ ಸಂಘದಿಂದ ಪ್ರತಿಯೊಂದು ಮಗ್ಗಕ್ಕೆ ಸುಮಾರು ೧೦ ರಿಂದ ೧೨ ಸೀರೆ ಕಚ್ಚಾ ಮಾಲು ಅಂದರೆ ಬಣ್ಣ ಹಾಕದ ನೂಲು ತರುವುದು. ಯಜಮಾನನಿಂದ ನೂಲನ್ನು ತೊಡುವುದು, ಹಾಸುವುದು, ಕೆಚ್ಚುವುದು ಮುಂತಾದ ಪ್ರಕ್ರಿಯೆಗಳ ಕೊನೆಗೆ ನೇಯ್ದು ಸಿದ್ದವಾದ

ಬಟ್ಟೆಯನ್ನು ತೆಗೆದುಕೊಂಡು ನೇಯ್ದ ಬಟ್ಟೆಯ ಒಂದು ಮೀಟರ್ ಅಳತೆ ಅಥವಾ ಒಂದು ಸೀರೆ ಅಥವಾ ಒಂದು ಧೋತಿಗೆ ಇಂತಿಷ್ಟು ಹಣ ನೇಕಾರನಿಗೆ ಸಂದಾಯ ಮಾಡುತ್ತಾನೆ. ಇದರಿಂದ ನೇಕಾರಿಕೆಗೆ ದುಡಿದ ಕೂಲಿ ಅಥವಾ ಮಜೂರಿ ದೊರೆಯುತ್ತದೆ. ಕಚ್ಚಾ ಮಾಲಿನ ಅಥವಾ ಸಿದ್ಧಗೊಂಡ ಬಟ್ಟೆಯ ದಾರದ ಏರಿಳಿತಕ್ಕೆ ಈ ಪದ್ಧತಿಯಲ್ಲಿ ನೇಕಾರನಿಗೆ ಯಾವುದೇ ರೀತಿಯ ಸಂಬಂಧ ಇರದು. ಆದರೆ ದುಡಿತಕ್ಕೆ ಕೂಲಿ ನಿಶ್ಚಿತವಾಗಿರುತ್ತದೆ. ಈ ಪದ್ಧತಿ ಕೊಟ್ಟೂರು ಹಾಗೂ ರಾಂಪುರದಲ್ಲಿ ಕಾಣಬಹುದು

ಸಟ್ಟಾ ವಿಧಾನ: ಸಟ್ಟಾ ವಿಧಾನದಲ್ಲಿ ನೇಕಾರ ಯಜಮಾನನಿಂದ ಕಚ್ಚಾ ಮಾಲು ಅಂದರೆ ನೂಲಿಗಾಗಿ ಹಣವನ್ನು ತರುತ್ತಾನೆ. ಆ ಹಣದಿಂದ ತನಗೆ ಬೇಕಾದ ನೂಲು, ಕೃತಕ ರೇಷ್ಮೆ ಮುಂತಾದುವುಗಳನ್ನು ಖರೀದಿಸುವರು. ನೇಯ್ಗೆಯ ಮೊದಲಿನ ಕ್ರಿಯೆಗಳ ನಂತರ ನೇಯ್ಗೆಗೆ ಸಿದ್ಧವಾದ ಬಟ್ಟೆಯನ್ನು, ಹಣವನ್ನು ನೀಡಿದ ಯಜಮಾನನ ಹತ್ತಿರ ಮಾರುವರು. ಆಗ ಯಜಮಾನನು ಆ ವೇಳೆಯಲ್ಲಿರುವ ಮಾರುಕಟ್ಟೆ ದರದಂತೆ ಸಿದ್ಧ ಬಟ್ಟೆಯನ್ನು ಖರೀದಿಸುವನು. ಇದರಲ್ಲಿ ಕಚ್ಚಾ ಮಾಲಿಗಾಗಿ ಖರ್ಚಾದ ಹಣ ಕಳೆದು ಉಳಿಯುವ ಮೊತ್ತವೆ ನೇಕಾರನ ಲಾಭವಾಗುತ್ತದೆ. ಈ ವಿಧಾನದಲ್ಲಿ ನೇಕಾರ, ಕಚ್ಚಾ ಮಾಲು ಹಾಗೂ ಸಿದ್ದ ಬಟ್ಟೆಯ ಮಾರುಕಟ್ಟೆಯ ದರ ಏರು ಇಳಿಕೆಗೆ ಬಾಧ್ಯಸ್ಥ ಆದುದರಿಂದ ಈ ವಿಧಾನದಲ್ಲಿ ನೇಕಾರನಿಗೆ ಹಾನಿಯಾಗುವ ಸಂಭವ ಹೆಚ್ಚು. ಸದ್ಯ ಈ ವಿಧಾನ ಈಗ ಅನುಷ್ಠಾನದಲ್ಲಿಲ್ಲ.

ರೋಖಡಾ ಪದ್ಧತಿ: ಇಲ್ಲಿ ನೇಕಾರ ಸ್ವಂತ ಹಣವನ್ನು ಕಚ್ಚಾ ಮಾಲಿನಲ್ಲಿ ತೊಡಗಿಸುತ್ತಾನೆ. ನೇಕಾರ ತನ್ನ ಸ್ವಂತ ಹಣ ಅಥವಾ ಇನ್ನಾರಿಂದಲೂ ತಂದ ಹಣ ತೊಡಗಿಸಿ ಪೇಟೆಯಿಂದ ತನಗೆ ಬೇಕಾದ ನೂಲನ್ನು ಖರೀದಿಸುತ್ತಾನೆ. ನೂಲನ್ನು ತೊಡುವ, ಹಾಸುವ, ಕೆಚ್ಚುವ ಕಾರ್ಯದ ಜೊತೆ ಬಟ್ಟೆಯನ್ನು ನೇಯುತ್ತಾನೆ. ಸಿದ್ಧವಾದ ಬಟ್ಟೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಅಥವಾ ಸಹಕಾರಿ ಸಂಘದಲ್ಲಿ ಮಾರುತ್ತಾನೆ. ಸಿದ್ಧವಾದ ಬಟ್ಟೆ ಮಾರಾಟ ಮಾಡಿ ಬಂದ ಹಣದಲ್ಲಿ ತಾನು ಕಚ್ಚಾ ಮಾಲಿಗಾಗಿ ತೊಡಗಿಸಿದ ಹಣ ಕಳೆದಾಗ ಉಳಿಯುವ ಹಣವೇ ನೇಕಾರನ ಲಾಭ. ಇದರಲ್ಲಿ ಎಲ್ಲಾ ಕ್ರಿಯೆಗಳಿಗೆ ತೊಡಗಿಸಿದ ಕೂಲಿ, ಮಜೂರಿ ಒಳಗೊಂಡಿರುತ್ತದೆ. ತನ್ನ ಮನೆಯ ಅಗತ್ಯಗಳಿಗಾಗಿ ಸಲಹಣ ಬಳಸಿ ಉಳಿದ ಹಣವನ್ನು ನೇಕಾರ ವ್ಯವಹಾರದಲ್ಲಿ ತೊಡಗಿಸುವನು.

ಈ ವಿಧಾನದಲ್ಲಿ ನೇಕಾರ ಕಚ್ಚಾ ಮಾಲಿನ ಹಾಗೂ ಸಿದ್ಧಬಟ್ಟೆ ಮಾರುಕಟ್ಟೆ ದರಗಳ ಏರಿಳಿತಕ್ಕೆ ಜವಾಬ್ದಾರನಾಗಿರುತ್ತಾನೆ. ಅಂದರೆ ಏರಿಳಿತದಿಂದ ಲಾಭ-ಹಾನಿಗೆ ಒಳಪಡುವ ಸಂಭವವಿರುತ್ತದೆ. ಹಣಕಾಸಿನ ದೃಷ್ಟಿಯಿಂದ ಬಲಿಷ್ಠ ಮನುಷ್ಯ ಮಾತ್ರ ಈ ತರಹದ ವ್ಯವಹಾರ ಮಾಡಲು ಸಾಧ್ಯ.

ಬಟ್ಟೆ ನೇಯುವ ಪ್ರಕ್ರಿಯೆಯಲ್ಲಿ ತಮ್ಮನ್ನು ತಲತಲಾಂತರದಿಂದ ತೊಡಗಿಕೊಂಡು ನೇಕಾರ ಹಾಗೂ ಯಜಮಾನ ಇವರಿಬ್ಬರು ನೇಕಾರ ವೃತ್ತಿಯ ಅವಿಭಾಜ್ಯ ಅಂಗವಾಗಿದ್ದಾರೆ. ಯಜಮಾನ ಅಥವಾ ಪೂರ್ವಜರು ಮೂಲತಃ ನೇಕಾರರು. ಆದ್ದರಿಂದ ನೇಕಾರಿಕೆ ಕೂಲಿ ಮಾಡುವವ ಹಾಗೂ ನೇಕಾರಿಕೆ ವೃತ್ತಿಯ ಯಂತ್ರಗಳ ಸ್ಥಾಪನೆ, ನಿರ್ವಹಣೆ, ಕಚ್ಚಾ ಸರಕು ಖರೀದಿ, ಸಿದ್ಧವಾದ ಸರಕಿನ ಮಾರಾಟ ಹಾಗೂ ಕೂಲಿ ಹಣ ವಿತರಣೆ ಕ್ರಿಯೆಯಲ್ಲಿ ತೊಡಗುವ ಯಜಮಾನ ಇಬ್ಬರು ನೇಕಾರರೆ. ಈ ಎರಡು ವಿಧದ ನೇಕಾರರ ಸಮಸ್ಯೆಗಳು ಒಂದು ದೃಷ್ಟಿಯಿಂದ ಬೇರೆ ಬೇರೆ. ಆದಾಗ್ಯೂ ನೇಕಾರಿಕೆಯ ಸಮಸ್ಯೆಗಳು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. (ವಕ್ತೃ: ನೇಕಾರ ಜಯಣ್ಣ ರಾಂಪುರ)

ಉತ್ತಮ ವಸ್ತ್ರ ತಯಾರಿಕೆಯ ಲಕ್ಷಣಗಳು:

ಉತ್ತಮ ವಸ್ತ್ರ ಅಥವಾ ಸೀರೆ ಉತ್ತಮವಾಗಿ ರೂಪುಗೊಳ್ಳಲು ಕಚ್ಚಾ ಪದಾರ್ಥದ ಗುಣಮಟ್ಟ ಎಷ್ಟು ಅಗತ್ಯವೋ ನೇಕಾರರ ಕುಶಲತೆ ಅಷ್ಟೆ ಪ್ರಮುಖವಾಗಿದೆ. ಉತ್ತಮ ಎಳೆಯನ್ನು ಒದಗಿಸಿದರೂ ಒಳ್ಳೆಯ ಕೆಲಸಗಾರರಲ್ಲದಿದ್ದರೆ ಸೀರೆ ಹಾಳಾಗುವ ಸಂಭವ ಹೆಚ್ಚು. ಈ ದೋಷಗಳು ಕಣ್ಣಿಗೆ ಕಾಣುವಂತದ್ದಾಗಿರಬಹುದು ಇಲ್ಲವೆ ಕುಶಲ ನೇಕಾರರಿಗೆ ಮಾತ್ರ ಅದನ್ನು ಗುರುತಿಸಲು ಸಾಧ್ಯವಾಗುವಂತಹ ಸಣ್ಣ ಪ್ರಮಾಣದಲ್ಲಿರಬಹುದು. ಎಳೆ ಕಿತ್ತುಹೋದರೂ ಅದನ್ನು ಪುನಃ ಕಟ್ಟಿಕೊಳ್ಳದೆ ನೇಯುತ್ತಾ ಹೋಗುವುದು ಅತಿ ಸಾಮಾನ್ಯ ದೋಷ. ಎಳೆಹೋದ ಸ್ಥಳದಲ್ಲಿ ನೇರವಾಗಿ ಸಣ್ಣಗೆರೆ ಬೀಳುತ್ತಾ ಹೋಗುತ್ತದೆ. ಕೆಲವೊಮ್ಮೆ ಕಿತ್ತುಹೋದ ಎಳೆ ಅಥವಾ ಎಳೆಯ ದೊಡ್ಡಗಂಟು ಪಕ್ಕದ ಎಳೆಗಳನ್ನು ಭದ್ರವಾಗಿ ಹಿಡಿದುಕೊಳ್ಳುವುದು ಉಂಟು. ಆಗ ಹೊಕ್ಕಿನ ಎಳೆ ಆ ಸ್ಥಳದಲ್ಲಿ ಹಾರುತ್ತಾ ಹೋಗುತ್ತದೆ. ಆ ಸ್ಥಳದಲ್ಲಿ ಬಟ್ಟೆ ರೂಪುಗೊಳ್ಳದೆ ರಂಧ್ರ ಬೀಳುತ್ತದೆ. ಇದನ್ನು ಪೇಟ ಹಾರುವುದು ಎಂದು ಕರೆಯುತ್ತಾರೆ. ನಿಪುಣರಿಗೆ ಒಂದೇ ಎಳೆಗೆ ಗೊತ್ತಾಗುವ ಇದು ಎರಡು ಮೂರು ಪಾಟದಷ್ಟು ಗಮನಿಸದಿದ್ದರೆ ದೊಡ್ಡದಾಗಿಯೇ ಕಾಣುತ್ತದೆ. ಇದನ್ನು ಗಮನಿಸದೆ ಮುಂದಕ್ಕೆ ನೇಯುತ್ತ ಹೋದಾಗ ಕೆಲವೊಮ್ಮೆ ಇದು ಸರಿಹೋದರೂ ಸಣ್ಣ ರಂಧ್ರ ಬಿದ್ದೇ ಬೀಳುತ್ತದೆ. ಹಾರಿದ ಎಳೆಯನ್ನು ಕೊಯ್ದು ಅಕ್ಕಪಕ್ಕದ ಎಳೆಗಳನ್ನು ಕರೆದು ರಂಧ್ರ ತುಂಬುವ ಕೆಲಸ ಮಾಡಲಾಗುತ್ತದೆ. ವಸ್ತ್ರ ಕೊಂಡವರೂ ಇದನ್ನು ಗಮನಿಸದೆ ಹೋಗುವ ಸಂದರ್ಭ ತುಂಬಾ ಹೆಚ್ಚು. ವೇಗವಾಗಿ ನೇಯುವಾಗ ಕೆಲವೊಮ್ಮೆ ಹೊಕ್ಕಿನ ಎಳೆ ಕಿತ್ತು ಮತ್ತೆ ಅದೇ ಕೂಡಿಕೊಂಡು ವಸ್ತ್ರ ರೂಪುಗೊಳ್ಳುತ್ತಾ ಹೊಗುತ್ತದೆ. ಅಡ್ಡ ಕಸುಬಿನವ ಇದನ್ನು ಗಮನಿಸಿದರೂ ಆ ಸ್ಥಳದ ಎಳೆ ತೆಗೆದು ಪುನಃ ನೇಯುವ ಶ್ರಮ ತಪ್ಪಿಸಲು ಮೇಲೆ, ಕೆಳಗಿನ ಎಳೆ ಕೊರೆದು ಸರಿಪಡಿಸಿ ನೇಯುತ್ತಾ ಹೋಗುತ್ತಾನೆ. ವಸ್ತ್ರ ಕೊಳ್ಳುವವರಿಗೆ ಬಹಳಷ್ಟು ಸಲಇದು ಕಾಣಲಾರದು. ಉತ್ತಮ ಕೆಲಸಗಾರ ತನಗೆ ಶ್ರಮವಾದರೂ ದೋಷಪೂರಿತ ಭಾಗಗಳನ್ನು ಸರಿಪಡಿಸಿಯೇ ಮುಂದಕ್ಕೆ ನೇಯುತ್ತಾನೆ. ಇದರಿಂದ ಉತ್ತಮ ಗುಣಮಟ್ಟದ ವಸ್ತ್ರ ರೂಪುಗೊಳ್ಳುತ್ತದೆ.

ಸೂಕ್ಷ್ಮ ತಟ್ಟು ಸಹ ಉತ್ತಮ ವಸ್ತ್ರ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ದೊಡ್ಡ ಸಂದಿನ ತಟ್ಟಿನಿಂದ ನೇಯ್ದ ವಸ್ತ್ರ ಅಷ್ಟು ಉತ್ತಮ ವಸ್ತ್ರವಾಗಿರುವುದಿಲ್ಲ. ಸೂಕ್ಷ್ಮ ಸಂದು ಇರುವ ಕಟ್ಟಿನಲ್ಲಿ ಹಾಸಿನ ಎಳೆಗಳು ಒಂದರ ಪಕ್ಕ ಒಂದರಂತೆ ಅತಿ ನಿಕಟವಾಗಿರುವುದರಿಂದ ವಸ್ತ್ರ ಕುಗ್ಗುವ ಸಂಭವ ಕಡಿಮೆ ಸೂಕ್ಷ್ಮ ತಟ್ಟು ಮತ್ತು ಮಧ್ಯಮ ಗಾತ್ರದ ಎಳೆ ಬಳಸಿ ಗಟ್ಟಿ ನೇಯ್ಗೆ ವಸ್ತ್ರ ಉತ್ತಮ ಗುಣಮಟ್ಟ ಹೊಂದಿರುತ್ತದೆ. ಅತಿಸಣ್ಣ ಎಳೆಯಾದರೆ ವಸ್ತ್ರ ತೆಳ್ಳಗೆ ಮೂಡಿ ಬರುತ್ತದೆ. ಹಾಗೆಯೇ ತುಂಬಾ ದಪ್ಪ ಎಳೆಯೂ ಎಳೆಗಳ ನಡುವಿನ ಜಾಗ ಖಾಲಿ ಬಿಡುವುದರಿಂದ ವಸ್ತ್ರ ದಪ್ಪಗೆ ಇದ್ದರೂ ಒಳ್ಳೆಯ ಗುಣಮಟ್ಟದ್ದಾಗಿರುವುದಿಲ್ಲ. ಹೊಕ್ಕಿನ ಎಳೆ ಹೆಚ್ಚು ದಪ್ಪಗಿದ್ದಾಗ ವಸ್ತ್ರಕ್ಕೆ ಅಥವಾ ಸೀರೆಗೆ ಹೆಚ್ಚಿನ ತೂಕದ ರೇಷ್ಮೆ ಹಿಡಿಸುವುದರಿಂದ ಅಗತ್ಯಕ್ಕಿಂತ ಹೆಚ್ಚು ತೂಕದ ರೇಷ್ಮೆಯಿಂದ ನಷ್ಟ ಹೊಂದಲೂ ಯಾವ ಮಾಲಿಕರು ಸಿದ್ಧವಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಹೊಕ್ಕಿನ ಎಳೆಯನ್ನು ಹೊತ್ತಾಗಿ ನೇಯದೆ ಸ್ವಲ್ಪ ಜಾಳಾಗಿ ನೇಯುವಂತೆ ನೇಕಾರರಿಗೆ ಸೂಚನೆ ಕೊಡಲಾಗುತ್ತದೆ. ಪ್ರತಿ ಎಳೆಯ ನಡುವೆ ಖಾಲಿ ಜಾಗ ಹೆಚ್ಚುವುದರಿಂದ ವಸ್ತ್ರ ದಪ್ಪಗೆ ಕಂಡರೂ ಗುಣಮಟ್ಟ ತಗ್ಗುತ್ತದೆ. ಸಾಮಾನ್ಯವಾಗಿ ಕೊಳ್ಳುವವರು ಇಂತಹ ಸೂಕ್ಷ್ಮ ಗಮನಿಸುವುದಿಲ್ಲ. ಸಾಮಾನ್ಯವಾಗಿ ಹಾಸಿನ ಎಳೆ ಹೆಚ್ಚು ದಪ್ಪವಾಗಿ, ಗಟ್ಟಿಗೆ ಇರುತ್ತದೆ. ಕೆಲವೊಮ್ಮೆ ದಪ್ಪ ಎಳೆಯನ್ನು ನೇಯಲಾಗುತ್ತದೆ. ಇಂತಹ ಸಂದರ್ಭದಲ್ಲಿ ಕೆಲವೇ ದಿನದಲ್ಲಿ ಅಂತಹ ವಸ್ತ್ರ ಅಡ್ಡವಾಗಿ ಸೀಳಿ ಹೋಗುತ್ತದೆ. ಅತಿ ಸಣ್ಣ ಎಳೆ ಬಳಸಿ ಜಾಳಾಗಿ ನೇಯ್ದರೂ ಉದ್ದಕ್ಕೆ ಸೀಳಿ ಹೋಗುತ್ತದೆ.

ಕೆಲವೊಮ್ಮೆ ನೇಯುವಾಗ ಕಂಡಿಕೆಯಲ್ಲಿ ಬಿಗಿ ಬಂದು ಆ ಪರಿಣಾಮ ವಸ್ತ್ರದ ಮೇಲೆಯೂ ಆಗುತ್ತದೆ. ಇದನ್ನು ಮಿಂಚು ಎಳೆ ಬಿಳುವುದು ಎನ್ನುತ್ತಾರೆ. ಹೀಗೆ ಬಿಗಿ ಎಳೆ ಬಿದ್ದಾಗ ವಸ್ತ್ರದಲ್ಲಿ ಆ ಸ್ಥಳ ಹೆಚ್ಚು ಹೊಳಪಾಗಿ ಕಾಣುತ್ತದೆ. ಇದು ಸಹ ಒಂದು ದೋಷ. ಸಾಮಾನ್ಯ ಕೊಳ್ಳುಗರಿಗೆ ಇದು ಅರಿವಿಗೆ ಬರುವುದಿಲ್ಲ.

ವಸ್ತ್ರ ಅಥವಾ ಸೀರಿಗೆ ಹೆಚ್ಚು ಬಂಡವಾಳ ಬೀಳುವುದನ್ನು ತಪ್ಪಿಸಲು ಹಾಸಿನ ಎಳೆಯನ್ನು ರೇಷ್ಮೆಯಲ್ಲಿ ಹಾಕಿ ಹೊಕ್ಕಿನ ಎಳೆಗೆ ಕೃತಕ ರೇಷ್ಮೆ ಬಳಸಲಾಗುತ್ತದೆ. ಇಲ್ಲವೆ ಯಂತ್ರ ಮಗ್ಗದಲ್ಲಿ ಹಾಸಿನ ಎಳೆ ಕೃತಕ ಹಾಗೂ ಹೊಕ್ಕಿಗೆ ಶುದ್ಧ ರೇಷ್ಮೆ ಬಳಸಿ ವಸ್ತ್ರ ತಯಾರಿಸಲಾಗುತ್ತದೆ. ಎಷ್ಟೋ ಸಲಪರಿಣತರಿಗೆ ಮಾತ್ರ ಗುರುತಿಸಲು ಸಾಧ್ಯವಾಗುತ್ತದೆ. ಹೀಗೆಯೇ ಜರಿಯಲ್ಲಿಯೂ ಮಿಶ್ರಣ ಮಾಡಲಾಗುತ್ತದೆ. ಅಂಚಿನ ಜರಿ ಬೇರೆ, ಒಡಲಿನ ಬುಟ್ಟಾಜರಿ ಹಾಗೂ ಸೆರಗಿನ ಜರಿ ಬೇರೆಯಾಗಿರುವುದು ಉಂಟು. ಉತ್ತಮ ಜರಿಯೊಂದಿಗೆ ಇತರೆ ಜರಿಗಳನ್ನು ಮಿಶ್ರಣ ಮಾಡಿ ನೇಯಲಾದ ಸೀರೆಗಳು ಕೊಳ್ಳುವವರಿಗೆ ಹೆಚ್ಚು ನಷ್ಟ ಉಂಟು ಮಾಡುತ್ತವೆ. ಏಕೆಂದರೆ ಸಾಧಾರಣ ಜರಿ ಮತ್ತು ಉತ್ತಮ ಜರಿಯ ಬೆಲೆಗಳಲ್ಲಿ ವ್ಯತ್ಯಾಸವಿರುತ್ತದೆ.

ಉತ್ತಮ ಜರಿ ಅಲ್ಪ ಪ್ರಮಾಣದ ಚಿನ್ನವನ್ನು, ನಂತರದ ಜರಿ ಬೆಳ್ಳಿಯನ್ನು ಹೊಂದಿರುತ್ತದೆ. ಇವು ಶ್ರೇಷ್ಠ ದರ್ಜೆಯ ಜರಿಗಳು. ಮೈಸೂರು ಸಿಲ್ಕ್ ಹಾಗೂ ಕಾಂಜೀವರಂ ಸೀರೆಗಳಲ್ಲಿ ಮತ್ತು ಉತ್ತಮ ದರ್ಜೆ ಬನರಾಸ್ ಸೀರೆಗಳಲ್ಲೂ ಇದನ್ನು ಬಳಸಲಾಗುತ್ತದೆ. ಮಧ್ಯಮ ದರ್ಜೆ ಜರಿಯನ್ನು ಕ್ರೇಪ್ ಸೀರೆಗಳಲ್ಲಿ ಹಾಗೂ ಇತರ ಸಾಂಪ್ರದಾಯಿಕ ಸೀರೆಗಳಲ್ಲಿ ಬಳಸಲಾಗುತ್ತದೆ. ಇತ್ತೀಚೆಗೆ ತೀರಾ ಜನಪ್ರಿಯವಾಗಿರುವ ಅಪೂರ್ವ ಮಾದರಿ ಸೀರೆಗಳಲ್ಲಿ ಸಾಮಾನ್ಯವಾಗಿ ಕಡಿಮೆ ದರ್ಜೆಯ ಜರಿ ಬಳಸಲಾಗುತ್ತದೆ. ಜರಿಯ ಗುಣಮಟ್ಟ ಪರೀಕ್ಷೆ ಕಠಿಣವಾದದ್ದು. ಇದಕ್ಕಾಗಿ ಸಾಮಾನ್ಯವಾಗಿ ಸ್ಲೇಟಿನ ಚೂರುಗಳ ಮೇಲೆ ಜರಿಯ ಗೆರೆ ಮೂಡಿಸಿ ಜರಿಯಲ್ಲಿರುವ ಬೆಳ್ಳಿ ಹಾಗೂ ಚಿನ್ನದ ಅಂಶಗಳನ್ನು ಪತ್ತೆ ಹಚ್ಚಲಾಗುತ್ತದೆ. (ವಕ್ತೃ: ನೇಕಾರ ಜಯಣ್ಣ ರಾಂಪುರ)

ನೇಕಾರಿಕೆಯು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ನೇಕಾರರು ಕಾಲಕ್ಕೆ ತಕ್ಕಂತೆ ಜನರ ಅಭಿರುಚಿ ಹಾಗೂ ಸ್ಥಿತಿಗತಿಗೆ ತಕ್ಕಂತೆ ಸೂಕ್ತ ಮಾರ್ಪಾಡುಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುತ್ತಾ ಬಂದಿದೆ. ಸಾಮಾನ್ಯ ನೇಕಾರರು ರೂಪಿಸಿದ ಬಗೆ ಬಗೆಯ ವೈವಿಧ್ಯಮಯ ವಿನ್ಯಾಸದ ಸೀರೆಗಳು, ವಸ್ತ್ರಗಳು ಯಾವ ಕಲಾಕೃತಿಗೂ ಕಡಿಮೆ ಇಲ್ಲ. ಸಾವಿರಾರು ವರ್ಷಗಳ ಹಿಂದಿನಿಂದಲೂ ಕುಟುಂಬದ ಉದ್ಯೋಗವಾಗಿ ಬಂದಿರುವ ಇದು ಆಯಾ ಪ್ರಭುತ್ವಗಳ ಪ್ರಮುಖ ಆಕರವಾಗಿದ್ದರೂ, ಇಂದಿಗೂ ಸಾಮಾನ್ಯ ನೇಕಾರರ ಸ್ಥಿತಿ ಶೋಚನೀಯವಾಗಿದೆ. ವ್ಯಾಪಾರದ ಏರಿಳಿತಗಳಿಂದ ನೇಕಾರ ದಿನನಿತ್ಯ ಕಂಗಾಲಾಗುವುದನ್ನು ಯಾರು ತಪ್ಪಿಸಲಾಗಿಲ್ಲ. ಸ್ವತಃ ತಾನೇ ಉದ್ಯೋಗಗಳನ್ನು ಸೃಷ್ಟಿಸಿ ಲಕ್ಷಾಂತರ ಮಂದಿನ ಜೀವನ ನಿರ್ವಹಣೆಗೆ ದಾರಿಯಾದ ಈ ಕುಲಕಸುಬಿಗೆ ಸರ್ಕಾರ ಆದ್ಯತೆ ನೀಡುವ ಅಗತ್ಯವಿದೆ. ಸೂಕ್ತ ಆರ್ಥಿಕ ನೆರವು ಒದಗಿಸಿ ಮಧ್ಯವರ್ತಿಗಳ ಹಿಡಿತದಿಂದ ಈ ಕುಲಕಸುಬನ್ನು ಮುಕ್ತಗೊಳಿಸಿ ಸುಭದ್ರ ಮಾರುಕಟ್ಟೆ ಸೃಷ್ಟಿಸಿದರೆ ನೇಕಾರರ ಬಾಳಿನಲ್ಲಿ ಹರ್ಷ ಮೂಡುವುದರಲ್ಲಿ ಸಂದೇಹವಿಲ್ಲ. ಈ ದಿಸೆಯಲ್ಲಿ ಸರಕಾರ ಹಾಗೂ ಸಂಘ ಸಂಸ್ಥೆಗಳು ಜರೂರು ಯೋಚಿಸಬೇಕಾದ ಅಗತ್ಯವಿದೆ.

ಮೇದಾರಿಕೆ

ಬಿದಿರು, ಬೊಂಬು, ಬೆತ್ತಗಳಿಂದ ಗೃಹೋಪಯೋಗಿ ಮತ್ತು ಕೃಷಿ ಉಪಯೋಗಿ ಸಾಮಗ್ರಿ ಮತ್ತು ಉಪಕರಣಗಳನ್ನು ಮಾಡುವ ಕಸುಬು ಮೇದಾರಿಕೆ. ಈ ಕಸುಬು ಮಾಡುವವರನ್ನು ಮೇದಾರ, ಮ್ಯಾದಾರ, ಮೇದರ್, ಮೆದರಿ, ಗೌರಿಗ, ಬುರುಡ ಮತ್ತು ಬುಡ್ಡರ್ ಎಂದು ಕರೆಯುತ್ತಾರೆ. ಮೇದರ್ ಮೂಲ ಕಸುಬು ಬಿದಿರು, ಬೊಂಬು ಮತ್ತು ಬೆತ್ತಗಳಿಂದ ಸಾಮಗ್ರಿ ಮತ್ತು ಉಪಕರಣಗಳನ್ನು ಸಿದ್ಧಪಡಿಸುವುದು ಇದು ಅವರ ಕುಲಕಸುಬು.

ಮ್ಯಾದರ ಜನಾಂಗ ಕುರಿತು ಮುಂಬೈ ಕರ್ನಾಟಕದ ಗ್ಯಾಜೀಟಿಯರ್ ಹೀಗೆ ವರದಿ ಮಾಡಿದೆ. "ಮೇದಾರರು ಇಲ್ಲವೆ ಬುರುಡರು ದೊಡ್ಡ ಹಳ್ಳಿಗಳಲ್ಲಿಯೂ, ಪಟ್ಟಣಗಳಲ್ಲಿಯೂ

ವಾಸಿಸುತ್ತಾರೆ. ಕಾನಡ ಜಿಲ್ಲೆಯಲ್ಲಿ ಘಟ್ಟದ ಮೇಲೆ ಮಾತ್ರ ಇರುತ್ತಾರೆ. ಇವರ ಮಾತೃಭಾಷೆ ಕನ್ನಡ.[೬೦]

ಮೇದರನ್ನು ಭಾಷಿಕ ಹಿನ್ನೆಲೆಯಲ್ಲಿ ಕನ್ನಡ ಮತ್ತು ತೆಲಗು ಮೇದರೆಂದು ವಿಭಜಿಸಬಹುದು. ಮೇದಾರಿಕೆ ಮಾಡುವ ಈ ಜನಾಂಗ ಮೊದಲು ಬೆಟ್ಟಗುಡ್ಡ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಈ ಜನಾಂಗವನ್ನು ಬುಡಕಟ್ಟು ಜನಾಂಗವೆಂದು ಪರಿಗಣಿಸಲಾಗಿದೆ.[೬೧] ಇಂದು ಮೇದಾರರು ದೊಡ್ಡ ಹಳ್ಳಿ, ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದು ತಮ್ಮ ಕುಲಕಸುಬಾದ ಮೇದಾರಿಕೆ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಮೇದಾರರು ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಬಳ್ಳಾರಿ, ಕೂಡ್ಲಿಗಿ, ಕಂಪ್ಲಿ, ಕುಡುತಿನಿ, ಕಮಲಾಪುರ, ಹಗರಿಬೊಮ್ಮನಹಳ್ಳಿ, ಹಡಗಲಿ, ಶಿರುಗುಪ್ಪ, ಕುರುಗೋಡು ಮುಂತಾದೆಡೆ ವಾಸವಾಗಿದ್ದಾರೆ.

ಮೇದಾರರು ಮೇದಾರಿಕೆ ವೃತ್ತಿಯ ಜೊತೆಗೆ ಕೃಷಿ ಕಸುಬಿನಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮೇದರಲ್ಲಿ ಹಲವರು ವಿಶ್ವವಿಖ್ಯಾತ ಬಿದರಿಕಲೆ ತಯಾರಿಕೆಯಲ್ಲಿ ನಿಪುಣರಾಗಿರುವರು. ಉಳಿದ ಕಡೆಯವರು ಬಿದರಿನ ವಸ್ತುಗಳನ್ನು ತಯಾರಿಸುವವರು ಹಾಗೂ ಮಾರುವವರು ಆಗಿದ್ದಾರೆ.

ಮೇದರು ಪಾರಂಪರಿಕವಾಗಿ ಗೃಹ ಕರಕುಶಲ ಕಲೆಗಾರರು ಹಾಗೂ ಕೃಷಿಕರು. ಇವರು ಬಿದಿರು ಬೆತ್ತದಿಂದ ಕಲಾತ್ಮಕವಾದ ಬಹುಉಪಯೋಗಿ ಸಾಧನಗಳನ್ನು ತಯಾರಿಸುವರು. ಮೊದಲು ಗುಡ್ಡ ಬೆಟ್ಟಗಳಲ್ಲಿರುವ ಗಟ್ಟಿ ಬಿದಿರು, ಬೊಂಬುಗಳನ್ನು ಕತ್ತರಿಸಿ ತಂದು ಸೀಳಿ, ಸಿಬಿರುಗಳನ್ನು ಮಾಡಿ ನೀರಿನಲ್ಲಿ ಸ್ವಲ್ಪ ಹೊತ್ತು ನೆನೆಯಿಟ್ಟು, ಮಿದುಗೊಳಿಸಿ ಬುಟ್ಟಿ, ಮೊರ, ತೂರುಪುಟ್ಟಿ, ಗುಳೇಪುಟ್ಟಿ, ಹೂವಿನಪುಟ್ಟಿ, ರೊಟ್ಟಿಪುಟ್ಟಿ, ತೊಟ್ಟಿಲು, ಕಾಯಿಪಲ್ಲೆ ಪುಟ್ಟಿ, ಕಡುಬಿನ ಪುಟ್ಟಿ, ಬಾಸಿಂಗ್ ಪುಟ್ಟಿ, ಜಲ್ಲೆ, ಸಾಣಿಗೆ, ದೊಡ್ಡ ಮತ್ತು ಸಣ್ಣ ಕಣ್ಣಿನ ಸಾಣಿಗೆ, ಬೀಸಣಿಕೆ, ಬಟ್ಟಲು, ತಡಿಕೆ, ಕೊಲ್ಲಾರಿ, ಕಣಜ/ಗರ್ಚಿ, ಹಾವಾಡಿಗರ ಪುಟ್ಟಿ, ಮುಂತಾದುವುಗಳನ್ನು ತಯಾರಿಸುತ್ತಾರೆ.

ಮೇದಾರರು ಗೃಹ ಅಲಂಕಾರಿಕ ಕಲಾತ್ಮಕ ವಸ್ತುಗಳನ್ನು ತಯಾರಿಸುತ್ತಾರೆ. ಬಿದಿರಿನ ಕುರ್ಚಿ, ಬೆತ್ತದ ಕುರ್ಚಿ, ತೂಗುಕುರ್ಚಿಗಳು, ಟಿಪಾಯ್, ಮಂಚ, ದಿವಾನ್, ಅಲಂಕಾರಿಕ ಮೇಜು, ಊಟದ ಕುರ್ಚಿ ಮತ್ತು ಮೇಜುಗಳು, ಪುಸ್ತಕಗಳನ್ನು ಜೋಡಿಸಿಡುವ ಕಬೋರ್ಡು, ಗಡಿಯಾರ, ತೂಗು ಚಾಪೆಗಳು, ಹೊರಾಂಡಗಳಲ್ಲಿ ಹಾಕುವ ವಿವಿಧ ಸಾಧನ ಸಲಕರಣೆಗಳನ್ನು ಕಲಾತ್ಮಕವಾಗಿ ತಯಾರಿಸುತ್ತಾರೆ.

ಗಾರುಡಿ ಗೊಂಬೆಗಳಿಗೆ ಬೇಕಾದ ಉದ್ದವಾದ ಪುಟ್ಟಿಗಳು, ಮೀನುಗಾರರಿಗೆ ಮೀನು ಹಿಡಿಯಲು ಬೇಕಾದ ಪುಟ್ಟಿಗಳು, ಚಪ್ಪಟೆ ದೋಣಿಗಳು ಕೃಷಿಕರಿಗೆ ಬೇಕಾಗುವ ವಿವಿಧ ರೀತಿ

ಹಾಗೂ ಗಾತ್ರದ ಪುಟ್ಟಿ, ಜಲ್ಲೆ, ರೇಷ್ಮೆ ಕೃಷಿಗೆ ಬೇಕಾದ ಚಂದ್ರಿಕೆ, ರೇಷ್ಮೆ ತಟ್ಟೆ, ಆಹಾರ ದಾನ್ಯಗಳನ್ನು, ಸಂಗ್ರಹಿಸಿಡಲು ಗೆರಸೆ, ಗೆ ೞಡೆ, ಬಂಡಿಗಳಿಗೆ ಬೇಕಾದ ತಡಿಕೆ ಕುಕ್ಕೆ, ಏಣಿ ಮುಂತಾದ ಪದಾರ್ಥಗಳನ್ನು ತಯಾರಿಸಿಕೊಡುತ್ತಾರೆ.

ಸಂಗೀತ ಸಾಧನಗಳಾದ ವಿವಿಧ ಗಾತ್ರದ ವೈವಿಧ್ಯಮಯವಾದ ಕೊಳಲು, ಪಿಳ್ಳಂಗೋವಿ, ಧ್ವನಿ ಹೊರಡಿಸುವ ಗಟ್ಟಿ ಗಳಗಳ ಸಾಧನಗಳು, ಡ್ರಂ, ಸಮಾಳ, ಡಕ್ಕೆ, ಡಮರು, ಹುರುಮೆ ವಾದ್ಯಗಳನ್ನು ಬಾರಿಸುವವರಿಗೆ ವಿವಿಧ ರೀತಿಯ ಬಿದುರು, ಬೆತ್ತದ ಕಡ್ಡಿಗಳನ್ನು ತಯಾರು ಮಾಡಿಕೊಡುವರು.

ಇತ್ತೀಚೆಗೆ ಬ್ಯಾನರ್, ಫ್ಲೇಕ್ಸ್‌ಗಳನ್ನು ಅಚ್ಚುಕಟ್ಟಾಗಿ ಬಿದಿರು ಬೆತ್ತಗಳನ್ನು ಉಪಯೋಗಿಸಿ ಕಟ್ಟುತ್ತಾರೆ. ಮೇದಾರ ಜನಾಂಗ ಬಿದಿರು, ಬೆತ್ತದ ಸಾಮಗ್ರಿಗಳನ್ನು ತಯಾರು ಮಾಡಿ ಮಾರಾಟ ಮಾಡುವುದರ ಜೊತೆಗೆ ಬೊಂಬುಗಳ ಮಾರಾಟ ಮಾಡುತ್ತಾರೆ. ತಮ್ಮ ಮಾರಾಟ ಕೇಂದ್ರಗಳಲ್ಲಿ ವೈವಿಧ್ಯ ಆಕಾರದ ಗೃಹ ಉಪಯೋಗಿ ಹೆಂಚುಗಳನ್ನು ವಿವಿಧ ಕಡೆಗಳಿಂದ ತರಿಸಿ ಮಾರಾಟ ಮಾಡುತ್ತಾರೆ.

ಬಿದಿರು, ಬೆತ್ತದ ವಸ್ತುಗಳನ್ನು ತಯಾರಿಸಲು ಬಿದಿರುಗಳ, ಬೊಂಬು ಮತ್ತು ಬೆತ್ತಗಳು ಪ್ರಮುಖ ಕಚ್ಚಾವಸ್ತುಗಳು, ಈ ವಸ್ತುಗಳನ್ನು ಪೇಟೆ ಪಟ್ಟಣಗಳಲ್ಲಿರುವ ಮೇದಾರರು ಮಲೆನಾಡ ಪ್ರದೇಶಗಳಿಂದ, ಗುಡ್ಡಗಾಡು ಪ್ರದೇಶಗಳಿಂದ ಸರ್ಕಾರದ ಅರಣ್ಯ ಇಲಾಖೆಯ ಅನುಮತಿ ಪಡೆದು ಕಚ್ಚಾವಸ್ತುಗಳನ್ನು ಕಡಿದು ಅವುಗಳನ್ನು ಬಂಡಿ, ವಾಹನ, ಲಾರಿ, ಇತ್ಯಾದಿಗಳ ಮೂಲಕ ಪೇಟೆ ಪಟ್ಟಣಗಳಿಗೆ ಸಾಗಿಸುತ್ತಾರೆ. ಬಳ್ಳಾರಿ ಜಿಲ್ಲೆಗೆ ಆಂದ್ರಪ್ರದೇಶ, ಗೋವಾ, ಮುಂಬೈ, ಹಾಗೂ ಕರ್ನಾಟಕದ ಘಟ್ಟ ಪ್ರದೇಶಗಳಿಂದ ಪೂರೈಕೆಯಾಗುತ್ತದೆ.

ಬಿದಿರು ಬೆತ್ತದ ವಸ್ತುಗಳ ತಯಾರಿಕೆಗೆ ಮೇದರು ಹರಿತವಾದ ಚಿಕ್ಕ ಕುಡಗೋಲು, ಚಿಕ್ಕ ಕೊಡಲಿ, ಬಿದಿರು ಸೀಳುವ ಕತ್ತಿ, ಕತ್ತರಿಸಲು ಮಚ್ಚು, ಮುಂತಾದ ಸರಳ ಆಯುಧಗಳನ್ನು ಬಳಸುತ್ತಾರೆ. ಬಿದಿರು ಬೆತ್ತದ ವಸ್ತುಗಳ ತಯಾರಿಕೆಯಲ್ಲಿ ಮೇದಾರರ ಕರಕುಶಲತೆಯೇ ಮುಖ್ಯವಾದುದು. ಅವರು ಉಪಯೋಗಿಸುವ ಸಲಕರಣೆಗಳು ಬಹಳ ಸರಳವಾದವುಗಳು. ಇದೇ ಕಸುಬನ್ನು ಹನ್ನೆರಡನೇ ಶತಮಾನದಲ್ಲಿ 'ಮೇದಾರ ಕೇತಯ್ಯ' ಎಂಬ ಶರಣ ಮಾಡುತ್ತಿದ್ದುದು ಇಲ್ಲಿ ಗಮನಾರ್ಹ. ಮೇದಾರರು ಶರಣ ಮೇದಾರ ಕೇತಯ್ಯನನ್ನು ತಮ್ಮ ದೈವವೆಂದು ಪೂಜೆಸುತ್ತಾರೆ.

ತಯಾರಿಕೆಯ ವಿವಿಧ ಹಂತಗಳು:

ಮೇದರು ಬೆಟ್ಟಗುಡ್ಡಗಳಿಂದ ಹಸಿ ಬಿದಿರು ಮತ್ತು ಬೆತ್ತಗಳನ್ನು ಕಡಿದು ತರುವರು. ಹಸಿ ಬಿದಿರು ಮತ್ತು ಬೆತ್ತ ಕೆಲಸಕ್ಕೆ ಸೂಕ್ತವಾದುದು. ಅದನ್ನು ಸುಲಭವಾಗಿ ಸೀಳಬಹುದು. ಇದೇ

ಬಿದಿರು, ಬೆತ್ತ ಒಣಗಿದರೆ ಸೀಳುವಾಗ ಮಧ್ಯೆ ಮಧ್ಯೆ ತುಂಡಾಗುತ್ತದೆ. ಆದ್ದರಿಂದ ಒಣಗಿದ ಬಿದಿರು ದೊರೆತಾಗ ಅದನ್ನು ನೀರಿನಲ್ಲಿ ನೆನೆ ಹಾಕಿ ಸೀಳಿಕೊಳ್ಳುತ್ತಾರೆ. ತಯಾರಿಸುವ ವಸ್ತುವಿನ ಅಳತೆಗೆ ತಕ್ಕಂತೆ ಬಿದಿರನ್ನು ಸೀಳಿ ತೆಗೆಯುತ್ತಾರೆ. ಹೆಚ್ಚು ಗಣ್ಣುಗಳಿದ್ದಾಗ ಬಿದಿರು ತುಂಡಾಗುವ ಸಾಧ್ಯತೆಗಳಿರುವುದರಿಂದ ಎಚ್ಚರಿಕೆ ವಹಿಸಬೇಕಾಗುತ್ತದೆ. ಆದ್ದರಿಂದಲೆ ಗಣ್ಣುಗಳ ಅಂತರ ಹೆಚ್ಚಾಗಿರುವ ಬಿದಿರನ್ನು ಆಯ್ಕೆ ಮಾಡಿಕೊಂಡು ಅನುಕೂಲಕ್ಕೆ ತಕ್ಕ ಹಾಗೆ ತುಂಡರಿಸಿ ಸೀಳಿ ವಿವಿಧ ಪದಾರ್ಥಗಳನ್ನು ತಯಾರಿಸುತ್ತಾರೆ.

ಏಣಿಯನ್ನು ತಯಾರಿಸುವಾಗ ಮಾತ್ರ ಟೊಳ್ಳಾಗಿರುವ ಎರಡು ಗಟ್ಟಿ ಬೊಂಬುಗಳನ್ನು ಬಳಸುತ್ತಾರೆ. ಒಂದು ಕಾಲಿನಿಂದ ಇನ್ನೊಂದು ಕಾಲಿಗೆ ೧೪ ಇಂಚುಗಳ ಅಂತರವಿರುತ್ತದೆ. ಕಾಲುಗಳಿಗೆ ಗಟ್ಟಿಯಾದ ಬಿದಿರುಗಳನ್ನು ಬಳಸುತ್ತಾರೆ. ಮೇದರು ಗ್ರಾಹಕರ ಅವಶ್ಯಕತೆಗೆ ತಕ್ಕಂತೆ ನಾಲ್ಕು ಕಾಲುಗಳು ಏಳು ಕಾಲುಗಳ, ಹನ್ನೊಂದು ಕಾಲುಗಳ, ಹದಿನೆಂಟು ಕಾಲುಗಳ ಏಣಿಗಳನ್ನು ತಯಾರಿಸುತ್ತಾರೆ. ಇವುಗಳು ಮನೆ ನಿರ್ಮಾಣ ಮಾಡುವವರಿಗೆ, ಕಂಬಗಳನ್ನು ಹತ್ತುವವರಿಗೆ ಗುಡಿಸಲು ನಿರ್ಮಾಣ ಮಾಡುವವರಿಗೆ, ಬಣವೆಗಳನ್ನು ಒಟ್ಟುವವರಿಗೆ ಒಟ್ಟಾರೆ ಏಣಿ ಅತ್ಯಂತ ಉಪಯುಕ್ತವಾದ ಸಾಧನ. ಆದರೆ ಇಂದು ಬೊಂಬುಗಳ ಏಣಿಯ ಬದಲಾಗಿ ಲೋಹಗಳ ಏಣಿಯ ಬಳಕೆ ಹೆಚ್ಚಾಗಿರುವುದನ್ನು ಗಮನಿಸಬಹುದು.

ಬಿದಿರನ್ನು ಸೀಳುವಾಗ ಅತ್ಯಂತ ಕುಶಲತೆ ಬೇಕಾಗುತ್ತದೆ. ಬಿದಿರು, ಬೊಂಬುಗಳನ್ನು ೧೨ ರಿಂದ ೧೫ ಸಲತೆಳುವಾಗಿ ಪದರ ಪದರವಾಗಿ ದಬ್ಬೆಗಳನ್ನು ಸೀಳಬಹುದು. ಹಾಗೆ ಸೀಳಿದ ದಬ್ಬೆಗಳನ್ನು ನಯಸ್ಸು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲವಾದರೆ ತಯಾರು ಮಾಡಿದ ವಸ್ತುಗಳು ಹೊರಮೈಯಲ್ಲಿ ತರಕಲು, ತರಕಲಾಗಿ ಕಾಣುತ್ತವೆ. ಬಳಸುವಾಗ 'ಸೀಬು' ಸಿಕ್ಕಿಕೊಳ್ಳುವ ಸಾಧ್ಯತೆಗಳಿರುತ್ತವೆ.

ಕೃಷಿ ಹಾಗೂ ಗೃಹೋಪಯೋಗಿ ವಸ್ತುವಾದ ಜರಡಿಗಳನ್ನು ಮೇದರು ತಯಾರಿಸುತ್ತಾರೆ. ಚಿಕ್ಕ ಕಣ್ಣಿನ ಅಥವಾ ದೊಡ್ಡ ಕಣ್ಣಿನ, ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ತಯಾರಿಸುತ್ತಾರೆ. ಮರದಲ್ಲಿ ಗಂಡು-ಹೆಣ್ಣು ಎಂಬ ಎರಡು ಮೊರಗಳಿರುತ್ತವೆ. ಬಿದಿರಿನ ಒಳಭಾಗ ಅಂದರೆ ತಿರುಳಿನ ಭಾಗದಿಂದ ಹೆಣೆದಿರುವ ಮೊರವೆ ಗಂಡು ಮೊರ.

ಮೇದರು ಗೊಲ್ಲ ಜನಾಂಗದವರಿಗೆ 'ದೇವರ ಗೂಡೆ' ಎಣೆದು ಕೊಡುವಾಗ ಮಾತ್ರ ಅಂಟು ಮುಟ್ಟಾಗದಂತೆ ಎಚ್ಚರ ವಹಿಸಿ ಗೂಡೆ ತಯಾರಿಸಿಕೊಡುತ್ತಾರೆ. ಬಹಿಷ್ಠೆಯಾದ, ಮನೆಯಲ್ಲಿ ಸೂತಕವಿದ್ದಾಗ ದೇವರ ಗೂಡೆಯನ್ನು ಹೆಣೆಯುವುದಿಲ್ಲ. ಆದ್ದರಿಂದ ಸಾಮಾನ್ಯವಾಗಿ ದೇವರ ಗೂಡೆಗಳನ್ನು ದೇವಸ್ಥಾನಗಳಲ್ಲಿಯೇ ಕುಳಿತು ಹೆಣೆದು ಕೊಡುವುದುಂಟು. ಇದರಿಂದ ಪರಿಶುದ್ಧತೆಯನ್ನು ಕಾಪಾಡಿಕೊಂಡಂತಾಗುತ್ತದೆಂದು ಮೇದಾರರು ಹೇಳುತ್ತಾರೆ.

ದೇವರುಗಳಿಗೆ ಸಂಬಂಧಿತವಾದ 'ದೇವರ ಪೆಟ್ಟಿಗೆ', 'ಎಲೆ ಕಟ್ಟುವ ಪಟ' ಮೊದಲಾದವುಗಳನ್ನು ತೆಗೆದುಕೊಂಡು ಹೋಗುವಾಗ, ಅವನ್ನು ಪೂಜಿಸಿ, ಮೇದಾರರಿಗೆ ಅಕ್ಕಿ, ಬೇಳೆ, ಎಲೆ, ಅಡಿಕೆಯ ಪಡಿ ಕೊಡುವುದಂಟು.

ಮೇದಾರರು ವಿವಿಧ ಬಿದಿರು ಬೆತ್ತದ ವಸ್ತುಗಳನ್ನು ತಯಾರು ಮಾಡುವಾಗ ಎಲ್ಲಾ ಅಂಗಗಳು ಅವಕ್ಕೆ ತಗುಲುವುದರಿಂದ ಯಾವುದೇ ವಸ್ತುವನ್ನು ಮಾರುವ ಮುನ್ನ ನೀರು ಚಿಮುಕಿಸಿ ಕೊಡುತ್ತಾರೆ. ಇದರಿಂದ ದೋಷ ನಿವಾರಣೆಯಾಗುತ್ತದೆಂಬ ಭಾವನೆ ಅವರಲ್ಲಿದೆ.

ಈ ಮೊದಲು ಮೇದಾರರು ತಯಾರಿಸುತ್ತಿದ್ದ ವಸ್ತುಗಳಿಗೆ ಬಣ್ಣ ಬಳಿಯುತ್ತಿರಲಿಲ್ಲ. ನಾಗರಿಕತೆ ಬೆಳೆದಂತೆ, ಸೌಂದರ್ಯ ಪ್ರಜ್ಞೆ ಬೆಳೆದು ಅಂಗಡಿಯಿಂದ ಬಗೆ ಬಗೆಯ ಬಣ್ಣಗಳನ್ನು ತಂದು (ಅಲಂಕಾರಕ್ಕಾಗಿ) ಬಳಿಯುತ್ತಾರೆ. ಇದರಿಂದ ವ್ಯಾಪಾರ ಕುದುರಿ ಹೆಚ್ಚಿನ ಹಣಕಾಸು ಸಂಪಾದಿಸಬಹುದೆಂದು ಮೇದಾರರು ಅಭಿಪ್ರಾಯಪಡುತ್ತಾರೆ.

ಮೇದಾರಿಕೆ ಮೇದಾರರ ಕುಲಕಸುಬು ಸಾಮಾನ್ಯವಾಗಿ ಗಂಡಸರು ಬಿದಿರನ್ನು ಸೀಳಿ ಪದರ ಪದರವಾಗಿ ಪಟ್ಟಿ ತಯಾರಿಸುವ ಕೆಲಸ ಮಾಡುತ್ತಾರೆ. ಇದು ಪರಿಶ್ರಮದ ಕೆಲಸವೂ ಹೌದು. ಬಿದಿರು ಸೀಳುವಾಗ ಹರಿತವಾದ ಕತ್ತಿ ಮೈಕೈಗೆ ತಾಕುವುದರಿಂದ, ಇಲ್ಲವೆ, ಮೈಮರೆತು ಸೀಳುತ್ತಿರುವಾಗ ಬೆರಳುಗಳಿಗೆ ಹರಿತವಾದ ಭಾಗ ತಾಕುವುದರಿಂದ ಸಣ್ಣ ಪುಟ್ಟಗಾಯಗಳಲ್ಲದೆ ರಕ್ತಸ್ರಾವವಾಗುವಂಥ ಗಂಭೀರ ಸ್ವರೂಪದ ಗಾಯಗಳೂ ಆಗುವುದುಂಟು.

ಪುರಷರು ಸೀಳಿಕೊಟ್ಟ ಪಟ್ಟಿಗಳನ್ನು ಬಳಸಿಕೊಂಡು ಹೆಂಗಸರು ಮೊರ, ಜರಡಿ, ಪುಟ್ಟಿ ಮುಂತಾದ ಕಲಾತ್ಮಕವಾದ ವಸ್ತುಗಳನ್ನು ಹೆಣೆಯುತ್ತಾರೆ. ಮೊರವನ್ನು ಹಿಡಿದುಕೊಂಡು ಕಾರ್ಯ ನಿರ್ವಹಿಸುವ ಜಾಗಕ್ಕೆ ಬಳುಕದಂತೆ ಗಟ್ಟಿಯಾದ ಬಿದಿರಿನ ದಬ್ಬೆಯನ್ನು ಬಳಸುತ್ತಾರೆ. ಹಾಗೆಯೆ ಕಂಠಭಾಗಕ್ಕೂ ಗಟ್ಟಿಯಾದ ಬಿದಿರಿನ ದಬ್ಬೆಯನ್ನು ಬಳಸುವರು. ಸುತ್ತು ಕಟ್ಟಲು ಮಾತ್ರ ತೆಳುವಾದ ಬಿದಿರಿನ ಪಟ್ಟಿಗಳನ್ನೇ ಬಳಸಿಕೊಳ್ಳುತ್ತಾರೆ. ಕಂಠ ಕಟ್ಟುವುದು, ಪಟ್ಟಿ ಕಟ್ಟುವುದು ಅತ್ಯಂತ ಕುಶಲಿಗಳಾದ, ಅನುಭವಸ್ಥರಿಂದ ಮಾತ್ರ ಸಾಧ್ಯ.

ಸ್ತ್ರೀಯರಲ್ಲದೆ ಪುರುಷರು ಬುಟ್ಟಿ ಎಣೆಯುವ ಕೆಲಸ ಮಾಡುತ್ತಾರೆ. ಮಕ್ಕಳು ತಂದೆ-ತಾಯಿಗಳ ಸಣ್ಣ ಪುಟ್ಟ ಕೆಲಸಗಳಲ್ಲಿ ನೆರವಾಗುತ್ತಾರೆ. ಹೀಗೆ ನೆರವಾಗುತ್ತಲೇ ಕುತೂಹಲದ ಕಣ್ಣುಗಳಿಂದ ಹೆಣಿಗೆಯನ್ನು ಗಮನಿಸುತ್ತಾ ತಂದೆ-ತಾಯಿಯರ ಕೈಚಳಕವನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ಆನಂತರ ಸಣ್ಣಪುಟ್ಟ ಮೊರ, ಜರಡಿ, ಬೀಸಣಿಗೆಗಳನ್ನು ಹೆಣೆಯಲು ಪ್ರಾರಂಭಿಸುತ್ತಾರೆ. ಈ ವೃತ್ತಿಗೆ ನೇರವಾದ ತರಬೇತಿ ಕೊಡಲು ಯಾವುದೇ ಸಂಸ್ಥೆಗಳಿಲ್ಲ. ಕಣ್ಣಿನಿಂದ ನೋಡುತ್ತಾ, ಮಾನಸಿಕವಾಗಿ ಅದಕ್ಕೆ ಪೂರ್ವತಯಾರಿ ನಡೆಸಿ ಕೈಯಿಂದ ಮಾಡುತ್ತಾ ಕುಲಕಸುಬನ್ನು ಕಲಿಯುವರು.

ಈಗ ಮೇದಾರರಲ್ಲದೆ ಕೊರಮರು, ಕೊರಚರು ಕೂಡ ಮೇದಾರಿಕೆ ವೃತ್ತಿಯನ್ನು ಮಾಡುತ್ತಿದ್ದಾರೆ. ಇವರು ಬಿದಿರಿನ ಕೆಲಸದ ಜೊತೆಗೆ ಈಚಲುಗರಿ, ಈಚಲು ಕಡ್ಡಿಯಿಂದ ಚಾಪೆ, ಪುಟ್ಟಿ, ತಟ್ಟಿ, ತಡಿಕೆ, ಗೆರಸೆ ಮೊದಲಾದುವುಗಳನ್ನು ಹೆಣೆಯುತ್ತಾರೆ.

ಇವರು ಈಚಲು ಗರಿಯ ಕಡ್ಡಿಗಳನ್ನು ಸೀಳಿ ಮಂಕರಿಗಳನ್ನು ಹೆಣೆಯುತ್ತಾರೆ. ಇವು ವಿನ್ಯಾಸ, ಆಕೃತಿಯಲ್ಲಿ ಹೆಡಿಗೆಗಳನ್ನು ಹೊಲುತ್ತವೆಯಾದರೂ ಅಗಲವಾಗಿರುತ್ತವೆ. ಇವು ಆಕಾರದಲ್ಲಿ ಚಿಕ್ಕವಾಗಿರುವುದರಿಂದ ಸಗಣಿ ತುಂಬಲು, ಹೊತ್ತು ಹಾಕಲು, ಗೊಬ್ಬರ ಚೆಲ್ಲಲು, ಗಾಡಿಗಳಿಗೆ ಮಣ್ಣು ಗೊಬ್ಬರ ತುಂಬಲು ಬಳಸುವರು.

ಮೇದರು ಹಾಗೂ ಕೊರಚ, ಕೊರಮರ ವೃತ್ತಿಯಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಮೇದರು ಬಿದಿರು ಬೆತ್ತಗಳ ಕೆಲಸವನ್ನು ಮಾಡಿದರೆ, ಕೊರಚ ಕೊರಮರು, ಕೇವಲ ಈಚಲು ಮರದ ಪದಾರ್ಥಗಳನ್ನು ಬಳಸಿ ಕೆಲಸ ಮಾಡುತ್ತಾರೆ. ಮೇದರು ಕೊರಚ ಮತ್ತು ಕೊರಮ ಜನಾಂಗದವರಿಗಿಂತ ಮೇಲು ವರ್ಗದವರು ಎಂದು ಹೇಳಿಕೊಳ್ಳುತ್ತಾರೆ.

ಮೇದಾರರು ಬಿದಿರು, ಬೆತ್ತದ ಸಾಮಾನುಗಳನ್ನು ತಯಾರಿಸಿ ತಲೆಯ ಮೇಲಿಟ್ಟು ಅಥವಾ ಬೆನ್ನ ಮೇಲೆ ಹೊತ್ತುಕೊಂಡು ಊರೂರು ಮನೆಮನೆ ತಿರುಗಿ ಮಾರಿ ಹಣ ಮತ್ತು ಕಾಳು ಕಡಿ ಸಂಪಾದಿಸುತ್ತಾರೆ. ರೈತರು ತಮಗೆ ಬೇಕಾದ ಕಣಜ, ಗರ್ಜಿ, ಗೂಡು ಹಾಗೂ ಬುಟ್ಟಿಗಳನ್ನು ಮೇದರಿಗೆ ಮೊದಲು ಹೇಳಿ ತಯಾರು ಮಾಡಿಸಿಕೊಳ್ಳುತ್ತಾರೆ. ರೇಷ್ಮೆ ಕೃಷಿ ಮಾಡುವವರು ಮೇದಾರರನ್ನು ಹುಡುಕಿಕೊಂಡು ಹೋಗಿ ತಮಗೆ ಬೇಕಾದ ಚಂದ್ರಿಕೆ, ತಟ್ಟೆ, ಪುಟ್ಟಿಗಳನ್ನು ಮುಂಚಿತವಾಗಿ ಮುಂಗಡವಾಗಿ ಹಣನೀಡಿ ತಯಾರು ಮಾಡಿಸಿಕೊಳ್ಳುತ್ತಾರೆ. ಇತ್ತೀಚೆಗೆ ಪ್ರವಾಸೋದ್ಯಮ ಇಲಾಖೆ, ಹೋಟಲ್ ಉದ್ಯಮದವರು ಗುಡ್ಡಗಾಡು ಪ್ರದೇಶ ಹಾಗೂ ಇತರೆ ಕಡೆಗಳಲ್ಲಿ ನಿರ್ಮಿಸುವ ರಿಸಾರ್ಟಗಳಲ್ಲಿ ಬಿದಿರು, ಬೊಂಬುಗಳ, ಬೆತ್ತಗಳಿಂದ ತಯಾರು ಮಾಡಿದ ಆಕರ್ಷಕ ಗುಡಿಸಲುಗಳನ್ನು ಹಾಗೂ ಆ ಗುಡಿಸಲುಗಳಲ್ಲಿ ಇಡಲು ಬೇಕಾದ ಕಲಾತ್ಮಕ ಪೀಠೋಪಕರಣಗಳನ್ನು ಮೇದಾರ ಜನಾಂಗ ತಯಾರು ಮಾಡಿ ಪೂರೈಸುತ್ತಾರೆ. ಕೆಲವು ಸಂದರ್ಭದಲ್ಲಿ ಅಲ್ಲಿನ ವ್ಯವಸ್ಥೆಯನ್ನು ತಾವೇ ನೋಡಿಕೊಂಡು ಹೋಗುತ್ತಾರೆ.

ಚಮ್ಮಾರಿಕೆ:

ಪ್ರಾಣಿಗಳ ಚರ್ಮವನ್ನು ಸುಲಿದು ಸಾಂಪ್ರದಾಯಿಕ ರೀತಿಯಲ್ಲಿ ಹದಗೊಳಿಸಿ ಚಪ್ಪಲಿ, ಮಿಣಿ, ಜತ್ತಿಗೆ, ಬಾರಕೋಲು, ಚರ್ಮದ ತೊಟ್ಟಿ, ಚೀಲ ಇತ್ಯಾದಿ ಕೃಷಿ ಮತ್ತು ಇತರ ವೃತ್ತಿಗಳಿಗೆ ಸಂಬಂಧಿಸಿದ ಉಪಕರಣಗಳನ್ನು ಸಿದ್ಧಗೊಳಿಸುವುದಕ್ಕೆ 'ಚರ್ಮಗಾರಿಕೆ' ಅಥವಾ 'ಚಮ್ಮಾರಿಕೆ' ಎನ್ನುವರು. ಈ ಕಸುಬು ಮಾಡುವವನು ಚಮ್ಮಾರ ಅಥವಾ ಚರ್ಮಕಾರ. ಜಾತಿಪದ್ಧತಿಯ

ವ್ಯವಸ್ಥೆಯಲ್ಲಿ ಚಮ್ಮಾರರು ಚತುರ್ ವರ್ಣದಿಂದ ಹೊರಗುಳಿಯುತ್ತರಾದರೂ ಅವರನ್ನು ಪಂಚಮರೆಂದು ಪರಿಗಣಿಸಿ, ಅಂತ್ಯಜರೆಂದು ಕರೆದು, ಪಂಚಮ ವರ್ಣವ್ಯವಸ್ಥೆಯಲ್ಲಿಯೆ ಸೇರಿಸಲಾಗಿದೆ. ಸಾಮಾನ್ಯವಾಗಿ ಅವರು ಕಪ್ಪು ವರ್ಣದವರಾಗಿರುತ್ತಾರೆ. ಅವರು ಸಾಮಾಜಿಕ, ಧಾರ್ಮಿಕವಾಗಿ ಹಿಂದೂ ಧರ್ಮದ ವಿಧಿ ವಿಧಾನಗಳನ್ನು ಅನುಸರಿಸುತ್ತಾರೆ. ಚಮ್ಮಾರಿಕೆಯು ಅವರ ವಂಶಪಾರಂಪರ್ಯ ವೃತ್ತಿ.

ಚರ್ಮಕಾರ ಒಂದು ಜಾತಿಯಾಗಿಯೇ ಬೆಳೆದುಬಂದಿದೆ. ಇದರಲ್ಲಿ ಅನೇಕ ಒಳ ಪಂಗಡಗಳಿರುವುದು ಸಾಮಾನ್ಯವಾಗಿ ದೇಶದ ಎಲ್ಲಾ ಕಡೆ ಕಂಡುಬರುತ್ತದೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಇವರನ್ನು ಸಾಮಾನ್ಯವಾಗಿ ಕಾಣಬಹುದು. ಬಳ್ಳಾರಿ ಜಿಲ್ಲೆಯ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕಾಣಬಹುದು. ಅವರಲ್ಲಿ ಮುಖ್ಯವಾಗಿ ಹೊಲೆಯ, ಮಾದಿಗ, ಸಮಗಾರ, ಚಲುವಾದಿ, ಮೋಚಿ, ಡೋಹಾರ, ಡೋರ, ಮಹಾರ ಮುಂತಾದವರನ್ನು ಗುರುತಿಸಬಹುದು. ಈ ಒಳಪಂಗಡಗಳು ಅವರವರು ಕೈಗೊಂಡಿರುವ ಚರ್ಮದ ವೃತ್ತಿಯ ಮೇಲೆ ಮುಖ್ಯವಾಗಿ ಅವಲಂಬಿತವಾಗಿದೆ. ಚರ್ಮದ ಕೆಲಸ ಪ್ರಾರಂಭವಾಗುವುದು ಸತ್ತದನಗಳನ್ನು ಒಯ್ಯುವುದರಿಂದ ಹಿಡಿದು ಅದರ ಚರ್ಮವನ್ನು ಸುಲಿಯುವುದು, ಚರ್ಮವನ್ನು ಹದಗೊಳಿಸುವುದು ಮತ್ತು ಅದರಿಂದ ವಿವಿಧ ರೀತಿಯ ವ್ಯವಸಾಯ ಹಾಗೂ ವ್ಯವಸಾಯೇತರ ಸರಕುಗಳನ್ನು ತಯಾರಿಸುವುದು.

ಚರ್ಮದ ಸಾಮಾನುಗಳ ತಯಾರಿಕೆ ನಿನ್ನೆ ಇಂದಿನದಲ್ಲ. ಬಹಳ ಪ್ರಾಚೀನ ಕಾಲದಿಂದಲೂ ಮಾನವ ಚರ್ಮದ ಉಪಕರಣಗಳನ್ನು ತಯಾರಿಸಿ ಉಪಯೋಗಿಸುತ್ತಿದ್ದ. ಮೊದಲು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಂದು, ಮಾಂಸವನ್ನು ತೆಗೆದುಕೊಂಡು ಉಳಿದ ಚರ್ಮವನ್ನು ಉಡುಪಾಗಿ ಹೊದಿಕೆಯಾಗಿ, ಪಾದುಕೆಗಳಾಗಿ ಬಳಸುತ್ತಿದ್ದ. ವಿಶ್ವದ ಪ್ರತಿಯೊಂದು ಜನಾಂಗದ ಸಂಸ್ಕೃತಿಯ ಪ್ರಾರಂಭದಲ್ಲೂ ಚರ್ಮದ ಬಳಕೆಯನ್ನು ಕಾಣಬಹುದು.

ಸ್ಮೃತಿಪುರಾಣ ಹಾಗೂ ರಾಮಾಯಣಗಳಲ್ಲೆಲ್ಲ ಚರ್ಮದ ವಸ್ತುಗಳಾದ ಪಾದುಕೆಗಳ ಉಲ್ಲೇಖವಿದೆ. (ಅಯೋಧ್ಯ ಕಾಂಡ-೯೧, ಸರ್ಗ-೭೬ನೇ ಶ್ಲೋಕ) ಆ ಕಾಲಕ್ಕಾಗಲೇ ಚರ್ಮದ ವಸ್ತುಗಳ ಅಭಿವೃದ್ಧಿ ಹೊಂದಿತ್ತೆಂಬುದರ ದಾಖಲೆಗಳಿವೆ. ಅಂದರೆ ಕ್ರಿ.ಪೂ.೫೦೦ರ ಹೊತ್ತಿಗೆ ಚರ್ಮದ ವಸ್ತುಗಳ ಬಳಕೆ ಅಪಾರವಾಗಿತ್ತೆನಿಸುತ್ತದೆ. (ಎಸ್.ಎನ್.ವ್ಯಾಸ, ಇಂಡಿಯ ಇನ್ ದಿ ರಾಮಾಯಣ).

ಈಜಿಪ್ಟಿನಲ್ಲಿ ೨೦೦೦ ವರ್ಷಗಳ ಹಿಂದಿನ ಚರ್ಮದ ತುಂಡುಗಳು ಸಿಕ್ಕಿವೆ. ಇವು ಕೆಡದೆ ಚೆನ್ನಾಗಿಯೇ ಇರುವುದನ್ನು ನೋಡಿದರೆ, ಆ ಕಾಲಕ್ಕಾಗಲೇ ಚರ್ಮ ಹದಮಾಡುವ ಕಲೆ

ಚಮ್ಮಾರರಿಗೆ ಕರಗತವಾಗಿತ್ತೆನಿಸುತ್ತದೆ. ಅಷ್ಟೆ ಅಲ್ಲ ಅವರಿಗೆ ಚರ್ಮಕ್ಕೆ ವಿವಿಧ ಬಣ್ಣ ಹಾಕುವುದು ಸಹ ಗೊತ್ತಿತ್ತು. ಸುಮಾರು ೨೦೦೦ ವರ್ಷಗಳಷ್ಟು ಹಿಂದೆಯೇ ಈಜಿಪ್ಟಿನಲ್ಲಿ ಚರ್ಮದ ಕೆಲಸಗಾರರು ಕೆಲಸದಲ್ಲಿ ನಿರತರಾಗಿರುವ ದೃಶ್ಯವನ್ನು ಕೆತ್ತನೆಯಲ್ಲಿ ಈಗಲೂ ನೋಡಬಹುದು.[೨]

ಬ್ರಿಟಿಷ್ ಮ್ಯೂಜಿಯಂನಲ್ಲಿ ಅತ್ಯಂತ ಪುರಾತನ ಚರ್ಮದ ಪಾದುಕೆಗಳು ಇವೆ. ಯವನ ದೇಶದ ಸಾಹಿತ್ಯ ಮತ್ತು ಇತಿಹಾಸದಲ್ಲೂ ಚರ್ಮದ ಉಲ್ಲೇಖವಿದೆ. ಈಜಿಪ್ಟಿನ ಪಿರಾಮಿಡ್‌ಗಳಲ್ಲಿ ದೊರೆತಿರುವ ದಾಖಲೆಯೇ ಚರ್ಮದ ಅತ್ಯಂತ ಪುರಾತನ ದಾಖಲೆ. ಆದರೆ ಅದಕ್ಕಿಂತ ಹಿಂದೆಯೇ ನಮ್ಮ ದೇಶದಲ್ಲೂ ಚರ್ಮಗಾರಿಕೆ ಒಂದು ಗುಡಿ ಕೈಗಾರಿಕೆಯಾಗಿ ಪ್ರಖ್ಯಾತವಾಗಿತ್ತು. ಉತ್ತರ ಭಾರತೀಯರು ಜಿಂಕೆಯ ಚರ್ಮದಿಂದ ಹಳದಿ ಬಣ್ಣದ ಚರ್ಮವನ್ನು ತಯಾರಿಸುತ್ತಿದ್ದರು. ಕೆಲವು ಜಾತಿಯ ಮರದ ತೊಗಟೆಗಳನ್ನು ಉಪಯೋಗಿಸಿ ಚರ್ಮವನ್ನು ಹದ ಮಾಡುತ್ತಿದ್ದರೆಂಬುದು ಪ್ಲೇನಿಯಿಂದ ತಿಳಿದುಬರುತ್ತದೆ. ಮಧ್ಯಯುಗಿನ ಕಾಲದಲ್ಲಿ ಚರ್ಮ ಹದ ಮಾಡುವ ಕಲೆ ಮಧ್ಯ ಪ್ರಾಚ್ಯ ದೇಶಗಳಲ್ಲಿ ಚೆನ್ನಾಗಿ ಅಭಿವೃದ್ಧಿಗೊಂಡು ವಿವಿಧ ಬಗೆಯ ಚರ್ಮದ ಪದಾರ್ಥಗಳು ಮೂರ್ ಜನರ ಮೂಲಕ ಯೂರೋಪಿಗೆ ಬಂತು. ಮೊದಲು ಈಜಿಪ್ಟಿಯನ್‌ರು ಹೀಬ್ರೂಗಳಿಗೆ ಚರ್ಮದ ವಸ್ತುಗಳನ್ನು ತೋರಿಸಿ ಅದನ್ನು ಬಳಸುವುದರ ಬಗ್ಗೆ ಹೇಳಿಕೊಟ್ಟರೆಂದು ತಿಳಿದುಬರುತ್ತದೆ.

ಕನ್ನಡ ಸಾಹಿತ್ಯದಲ್ಲಿ ಕ್ರಿ.ಶ.೧೧೦೦ರ ಹಲಾಯುಧ (ನಿಘಂಟು)ದಲ್ಲಿ 'ಪಾದುಕಾ' 'ಅನುಪಧೀನ'ದ ಉಲ್ಲೇಖವಿದೆ. ಚರ್ಮಪಾದುಕೆ, ಚಮ್ಮಾವುಗೆ, ಚರ್ಮವಾವುಗೆ ಇವುಗಳ ಉಲ್ಲೇಖವನ್ನು ಚಂಪು ಕೃತಿಗಳಾದ, ಸಕಲ ವೈದ್ಯಸಾರ, ಸುಕುಮಾರ ಚರಿತೆ, ಜೀವಸಂಭೋಧನೆ, ಪುಣ್ಯಾಶ್ರವ, ಪಂಪರಾಮಾಯಣ, ಪದ್ಮರಾಜ ಪುರಾಣ, ವೀರಶೈವ ಪುರಾಣ ಹಾಗೂ ಆರಾಧ್ಯ ಚರಿತ್ರೆ ಮತ್ತು ಮಧ್ಯಕಾಲೀನ ಕೃತಿಗಳಾದ ಭರತೇಶ ವೈಭವ, ಪ್ರಭುದೇವರ ಪುರಾಣಗಳಲ್ಲಿ ಗುರುತಿಸಬಹುದು. ಚಮ್ಮಾರಿಕೆಯ ಉಲ್ಲೇಖ ವಚನ ಸಾಹಿತ್ಯದಲ್ಲೂ ಕಂಡುಬರುತ್ತದೆ. (ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯ-ಬಸವಣ್ಣ) ಅಷ್ಟೇ ಅಲ್ಲದೆ ವಚನಕಾರ ಹರಳಯ್ಯ ತನ್ನ ತೊಡೆಯ ಚರ್ಮದಿಂದ ಬಸವಣ್ಣನಿಗೆ ಚರ್ಮದ ಪಾದುಕೆಗಳನ್ನು ತಯಾರಿಸಿ ಕೊಟ್ಟಿದ್ದನೆಂದು ವಚನ ಸಾಹಿತ್ಯದಿಂದ ತಿಳಿದುಬರುತ್ತದೆ. ಅಂದರೆ ಈ ಹೊತ್ತಿಗಾಗಲೆ ಚರ್ಮದ ಕೈಗಾರಿಕೆ, ಚರ್ಮದಿಂದ ಮಾಡಿದ ವಸ್ತುಗಳ ಉಪಯೋಗ ಎಲ್ಲೆಡೆಯೂ ಇತ್ತೆಂದು ಸ್ಪಷ್ಟವಾಗುತ್ತದೆ.[೩]

ಚರ್ಮ ಶಬ್ದಕ್ಕೆ ಇಂಗ್ಲಿಷ್‌ನಲ್ಲಿ ಸ್ಕಿನ್ ಮತ್ತು ಹೈಡ್ ಎಂಬ ಪದಗಳಿವೆ. ಸ್ಕಿನ್ ಪದವನ್ನು ಚಿಕ್ಕ ಪ್ರಾಣಿಗಳ ಚರ್ಮಕ್ಕೆ ಅನ್ವಯಿಸಿದರೆ ಹೈಡ್ ಪದವು ದೊಡ್ಡ ಪ್ರಾಣಿಗಳ ಚರ್ಮಕ್ಕೆ ಅನ್ವಯಿಸಲಾಗುತ್ತದೆ. ಕಚ್ಚಾ ಚರ್ಮಕ್ಕೆ ಪೆಲ್ಟ್ ಎಂದೂ, ಸಂಸ್ಕರಿಸಿ ಸಿದ್ಧಪಡಿಸಿದ ಚರ್ಮಕ್ಕೆ ಲೆದರ್ ಎಂದು ಹೆಸರುಂಟು.

ವಿವಿಧ ರೀತಿಯ ಪ್ರಾಣಿಗಳ ಒರಟಾದ ಚರ್ಮ, ಸಣ್ಣ ಪ್ರಾಣಿಗಳ ಸುಲಿದ ಚರ್ಮ ಮತ್ತು ತೊಗಲಿನಿಂದ ಹದಮಾಡಿದ ಚರ್ಮವನ್ನು ತಯಾರಿಸುತ್ತಾರೆ. ಅಂದರೆ ದನ, ಹಸು, ಎಮ್ಮೆ ಕುದುರೆಗಳ ಚರ್ಮವನ್ನು ಬಳಸುತ್ತಾರೆ. ಒಂದು ವರ್ಷದೊಳಗಿನ ಕರುವಿನ ಚರ್ಮ, ಮೇಕೆ, ಕುರಿ ಹಂದಿ, ಜಿಂಕೆ, ಸರಿಸೃಪಗಳು, ಸಸ್ತನಿ ಪ್ರಾಣಿಗಳು, ಷಾರ್ಕ ಮೀನು ಇವುಗಳ ಚರ್ಮವನ್ನು ಹದಮಾಡಿ ಬಳಸಲಾಗುತ್ತದೆ. ಒರಟಾದ ಪ್ರಾಣಿಯ ಚರ್ಮವನ್ನು ಭಾರವಾದುದ್ದರ ಬಳಕೆಗೂ, ಹಗುರವಾದುದ್ದಕ್ಕೆ ಕರುವಿನ ಚರ್ಮವನ್ನು ಬಳಸುತ್ತಾರೆ. ಅಲಂಕಾರಿಕ ಚರ್ಮದ ವಸ್ತುಗಳಿಗೆ ಹಾವು, ಮೊಸಳೆ, ಕೆಲವು ಜಾತಿಯ ಮೀನುಗಳ ಚರ್ಮವನ್ನು, ಪೆಡಸಾದ ಚರ್ಮದ ವಸ್ತುಗಳ ತಯರಿಕೆಗೆ ಆನೆ, ಹಿಪ್ಪೊಪೊಟಮಸ್, ಕಡಲ್ಗುದುರೆಯ ಚರ್ಮವನ್ನು ಉಪಯೋಗಿಸುತ್ತಾರೆ.

ಕ್ರಿ.ಶ.೧೯೦೦ರವರೆಗೂ ಚರ್ಮವನ್ನು ಕೈಯಿಂದ ಹದಮಾಡುತ್ತಿದ್ದರು. ಆನಂತರದ ವರ್ಷಗಳಲ್ಲಿ ವಿದ್ಯುತ್ ಚಾಲಿತ ಯಂತ್ರೋಪಕರಣಗಳ ಸಹಾಯದಿಂದ ಹದ ಮಾಡಲಾಗುತ್ತದೆ. ಬಳ್ಳಾರಿ ಜಿಲ್ಲೆಯ ಹಳ್ಳಿಗಳಲ್ಲಿ ಇಂದು ಕೂಡ ಕೆಲವು ತೊಗಟೆಗಳಿಂದ ತಯಾರಿಸಿದ ರಸವನ್ನು ಉಪಯೋಗಿಸಿ ಚರ್ಮವನ್ನು ಹದ ಮಾಡಲಾಗುತ್ತದೆ. ಬಳ್ಳಾರಿ ಜಿಲ್ಲೆಯ ಹಳ್ಳಿಗಳಲ್ಲಿ ಊರ ಹೊರಗೆ ವಾಸಿಸುವ ಚಮ್ಮಾರರು ಅಥವಾ ಸಮಗಾರರು, ಊರಿನ ಸತ್ತ ದನಕರುಗಳನ್ನು ಎತ್ತಿ ಊರ ಹೊರಗೆ ಹಾಕುವ ಕೆಲಸವನ್ನು ಪಾರಂಪರಿಕವಾಗಿ ಮಾಡುತ್ತಾ ಬಂದರೆ, ಚಲುವಾದಿಗಳು ಸತ್ತ ದನಗಳ ಚರ್ಮವನ್ನು ಸುಲಿದು ಚರ್ಮದ ವಸ್ತುಗಳನ್ನು ತಯಾರುಮಾಡಲು ಸಮಗಾರರಿಗೆ ಕೊಡುತ್ತಾರೆ.

ಚರ್ಮವನ್ನು ಸುಲಿಯುವುದು ಮತ್ತು ಹದಮಾಡುವುದು:

ಸತ್ತ ಪ್ರಾಣಿಯ ಚರ್ಮವನ್ನು ಎದೆಯ ಭಾಗದಿಂದ ಪ್ರಾರಂಭಿಸಿ ಮೇಲೆ ತಲೆಭಾಗ, ಕೆಳಗೆ ಗುದಭಾಗದವರೆಗೆ ಮತ್ತು ಬಾಲದ ತುದಿಯಿಂದ ಕೊನೆಯವರೆಗೆ ನೇರವಾಗಿ ಸೀಳಬೇಕು. ಹಾಗೆಯೇ ಮುಂಗಾಲು ಮತ್ತು ಹಿಂಗಾಲುಗಳನ್ನು ಉದ್ದುದ್ದವಾಗಿ ಸೀಳಬೇಕು. ಹೀಗೆ ಸೀಳುವುದರಿಂದ ಚರ್ಮವು ಎಲ್ಲಿಯೂ ತುಂಡಾಗುವುದಿಲ್ಲ, ಹಾಳಾಗುವುದಿಲ್ಲ. ಪ್ರಾಣಿಯ ಒಡಲಲ್ಲಿರುವ ಕರುಳು, ಮಾಂಸ ಮೂಳೆಯನ್ನು ಸೂಕ್ಷ್ಮವಾಗಿ ತೆಗೆದು ಅಚ್ಚು ಕಟ್ಟು ಮಾಡಿಕೊಳ್ಳಬೇಕು, ಬಿಸಿಲು ಕಾಲವಾಗಿದ್ದರೆ ಆ ಚರ್ಮವನ್ನು ಹರಡಿ ಚೆನ್ನಾಗಿ ಒಣಗಿಸಬೇಕು–ಇಲ್ಲವಾದರೆ ಹಸಿ ಚರ್ಮವನ್ನು ಹದಗೊಳಿಸಬೇಕು.

ಚರ್ಮ ಹದಗೊಳಿಸುವವರು ಮೊದಲು ಪ್ರಾಣಿಯ ಒರಟಾದ ಚರ್ಮವನ್ನು ಸೀಳು ಗುಂಡಿಯಿರುವ ತೆರದಬಾನಿಯಲ್ಲಿ, ನೀರಿನಲ್ಲಿ ನೆನೆ ಹಾಕುತ್ತಾರೆ. ಇರಿಚಿಯಿಂದ ನೀರು ಹರಿಯುತ್ತಿರುವಂತೆ ತಿರುಗಿಸಬೇಕು. ಈ ಹಂತದಲ್ಲಿ ಬಹಳ ಜಾಗುರೂಕತೆಯಿಂದ ತಿರುಗಿದಬೇಕಾಗುತ್ತದೆ. ನಂತರ ಅದರಲ್ಲಿನ ಕಲ್ಮಶಗಳನ್ನು ತೆಗೆದುಹಾಕಲು ಸಂತೃಪ್ತ ದ್ರಾವಣದಲ್ಲಿ ೨ ಗಂಟೆಯವರೆಗೆ ನೆನೆಹಾಕುತ್ತಾರೆ. ಆಮೇಲೆ ಬೇರೆ ಬಾನಿಗೆ ವರ್ಗಾಯಿಸುತ್ತಾರೆ. ನಂತರ

ಚರ್ಮದ ಒಳಗಿನ ಮಾಂಸ, ಅಂಗಾಂಶಗಳನ್ನು ಉಪಕರಣಗಳಿಂದ ತೆಗೆದುಹಾಕುತ್ತಾರೆ. ಇದರಿಂದ ಚರ್ಮವು ನಯವಾದ ಮೇಲ್ಮೈಯನ್ನು ಹೊಂದುತ್ತದೆ. ಚರ್ಮದ ಮೇಲಿರುವ ಕೂದಲನ್ನು ತೆಗೆಯಲು ಅದನ್ನು ೩ ರಿಂದ ೭ ದಿನಗಳವರೆಗೆ ಸುಣ್ಣ ಮತ್ತು ಸ್ವಲ್ಪ ಸೋಡಿಯಂ ಸಲ್ಫೇಟ್ ಹಾಕಿರುವ ತೊಟ್ಟಿಯಲ್ಲಿ ನೆನೆಹಾಕುತ್ತಾರೆ. ಪ್ರತಿದಿನವೂ ಅದನ್ನು ಕಲಕುತ್ತಿರುತ್ತಾರೆ. ಇದರಿಂದ ಚರ್ಮದ ಕೂದಲು ಬೇರ್ಪಡುತ್ತದೆ. ಒಮ್ಮೊಮ್ಮೆ ಕೆಲವು ಕಡೆ ಕೂದಲು ಹಾಗೆಯೇ ಉಳಿದು ಬಿಟ್ಟರೆ, ಅದನ್ನು ದುಂಡು ಕೊರಡಿನ ಮೇಲೆ ಹಾಕಿ ಚೂರಿಯಿಂದ ಹರೆದು ಹಾಕುತ್ತಾರೆ. ಆಮೇಲೆ ತಣ್ಣನೆಯ ನೀರಿನಿಂದ ಮತ್ತೆ ಚರ್ಮವನ್ನು ತೊಳೆಯುತ್ತಾರೆ. ಅದನ್ನು ನಂತರ ಹುಟ್ಟಿನಾಕಾರದ ಮುಟ್ಟನ್ನು ಅಳವಡಿಸಿರುವ ದೊಡ್ಡ ಬಾನಿಯಲ್ಲಿ ಅಮೋನಿಯಂ ಸಲ್ಫೈಡ್, ಆಮೋನಿಯಂ ಕ್ಲೋರೈಡ್‌ನ್ನು ಬೆರೆಸಿ ಹಾಕುತ್ತಾರೆ. ಈ ಸುಣ್ಣ ಸಂಸ್ಕರಣದಲ್ಲಿ ಉಷ್ಣತೆ ೭೦-೭೫ ಫೆ. ಇರಬೇಕು. ಈ ಬ್ಯಾಟಿಂಗ್ ಸಾಮಗ್ರಿ ಸುಣ್ಣದ ಪರಿಣಾಮವನ್ನು ತೆಗೆದು ಹಾಕುತ್ತಲ್ಲದೆ ಚರ್ಮವನ್ನು ನಯಗೊಳಿಸುತ್ತದೆ. ಬ್ಯಾಟಿಂಗ್ ಸಾಮಗ್ರಿಯು ಸಹ ರಾಸಾಯನಿಕ ಕಿಣ್ವವನ್ನು ಪ್ರಾಣಿಗಳ ಮೇಧೋಜಿರಕ ಗ್ರಂಥಿಯಿಂದ ತಯಾರಿಸಿದ ಒಂದು ಜೀರ್ಣಕಾರಿ ಔಷಧದಿಂದ ತಯರಿಸಿದ್ದೇ ಆಗಿದೆ. ಈ ಕ್ರಿಯೆ ೩೦ ನಿಮಿಷದಿಂದ ನಾಲ್ಕು ಗಂಟೆಗಳ ಕಾಲವಾಗಬಹುದು. ತದನಂತರ ಚರ್ಮವನ್ನು ತಣ್ಣನೆಯ ನೀರಿನಿಂದ ತೊಳೆದು ಸಮತಟ್ಟಾಗಿ ಹರಡುವುದರಿಂದ ಬ್ಯಾಟಿಂಗ್ ದ್ರವ್ಯಗಳು ಹರಿದು ಹೋಗುವುದಲ್ಲದೆ, ಬ್ಯಾಟಿಂಗ್ ಕ್ರಿಯೆಯಿಂದ ಕೂದಲನ್ನು ತೆಗೆದ ಕಡೆಯೂ ನಯವಾಗಿರುತ್ತದೆ. ಬಹಳ ನೈಪುಣ್ಯತೆಯಿಂದ ಬ್ಯಾಂಟಿಗ್ ಮಾಡಿದರೆ ಹದಮಾಡಿದ ತೊಗಲಿನಲ್ಲೂ ಕಣಗಳ ರಚನೆಯುಂಟಾಗುತ್ತದೆ.

ಚರ್ಮವನ್ನು ಸಸ್ಯ ಸಂಜಾತ ಪದಾರ್ಥಗಳಿಂದ, ಖನಿಜ ಸಂಜಾತ ಪದಾರ್ಥಗಳಿಂದ (ಕ್ರೋಮ್ ಹದಮಾಡುವಿಕೆ), ಎಣ್ಣೆಯಿಂದ, ವಿಲೇಯಿಂದ – ಹಾಗೆ ನಾಲ್ಕು ವಿಧಾನಗಳಲ್ಲಿ ಹದ ಮಾಡಿ ವಿವಿಧ ವಸ್ತುಗಳನ್ನು ತಯಾರಿಸುತ್ತಾರೆ.

ಚರ್ಮದಲ್ಲಿ ಮುಖ್ಯವಾಗಿ ಹೊರತ್ವಚೆ, ನಿಜತ್ವಚೆ, ಒಳತ್ವಚೆ ಎಂದು ಮೂರು ಪದರಗಳಿವೆ. ಹೊರತ್ವಚೆ ತೆಳ್ಳನೆಯ ಪೊರೆಯಾಗಿದ್ದು, ಇದರ ಕೆಳಗೆ ಸಲದಪ್ಪವಾದ ನಿಜತ್ವಚೆ ಚರ್ಮವಿರುತ್ತದೆ. ಚರ್ಮದ ಕೆಳಭಾಗದಲ್ಲಿ ಮೂರನೆಯ ಪದರವಾಗಿ ಕೊಬ್ಬಿನ ಉತಕಗಳಿರುತ್ತವೆ. ನಿಜತ್ವಚೆಯನ್ನೇ ಹದಮಾಡಿದ ಚರ್ಮವಾಗಿ ಪರಿವರ್ತಿಸುವುದು. ಚರ್ಮದಲ್ಲಿನ ಎಳೆಗಳ ರಚನೆಯನ್ನು ಆಧರಿಸಿ ಚರ್ಮದ ಸಾಮರ್ಥ್ಯ ನಿರ್ಧರಿಸಬಹುದು. ಈ ಬಿಳಿಯ ಎಳೆಗಳು ಕುಂದಿಲ್ಲದಂತೆ ಒಂದಕ್ಕೊಂದು ಎಷ್ಟು ಬೇರ್ಪಟ್ಟಿರುವವೋ ಅಷ್ಟು ಸಂಖ್ಯೆಯ ಕೊಬ್ಬಿನ ಜೀವಕೋಶಗಳು ಹಂಚಿಹೊಗಿದ್ದರೆ ಚರ್ಮ ಮೃದುವಾಗಿ ಸ್ಪಂಜಿನಂತಾಗುವುದು.

ಬಳ್ಳಾರಿ ಜಿಲ್ಲೆಯ ಹಳ್ಳಿಯ ಚರ್ಮಕಾರರು ಸಾಂಪ್ರದಾಯಿಕ ವಿಧಾನಗಳನ್ನು ವಿಶೇಷವಾಗಿ ಯಾವುದೇ ಆಧುನಿಕ ರಸಾಯನಿಕ ವಸ್ತುಗಳನ್ನು ಬಳಸದೆ ಕೇವಲ ಸಸ್ಯ, ತೊಗಟೆ ವಿಶೇಷವಾಗಿ ತಂಗಡಿ ಗಿಡದ ಕಡ್ಡಿ ಅದರ ಸಿಪ್ಪೆಯನ್ನು ಚೆನ್ನಾಗಿ ಪುಡಿಮಾಡಿ ಕಚ್ಚಾ ಚರ್ಮದ ಮೇಲೆ ಚಿಮುಕಿಸಿ ಚರ್ಮವನ್ನು ಸುತ್ತಿ ನೀರಿರುವ ಬಾನಿಯಲ್ಲಿ ಕೊಳೆ ಹಾಕುತ್ತಾರೆ. ಒಂದು ವಾರದ ನಂತರ ಬಾನಿಯಿಂದ ಹೊರ ತೆಗೆದು ನೆರಳಿನಲ್ಲಿ ಚೆನ್ನಾಗಿ ಒಣಗಿಸುತ್ತಾರೆ. ಈ ವಿಧಾನದಿಂದ ಅಷ್ಟು ಉತ್ತಮವಾಗಿ ಚರ್ಮವನ್ನು ಹದಮಾಡುವುದು ಸಾಧ್ಯವಾಗುವುದಿಲ್ಲ.

ಹಳ್ಳಿಗಳಲ್ಲಿ ಹದ ಮಾಡಿದ ಚರ್ಮವನ್ನು ತಯಾರಿಸುವ ವಸ್ತುವಿಗೆ ಅನುಗುಣವಾಗಿ ವಿವಿಧ ಹಂತಗಳಿರುತ್ತವೆ. ಚಪ್ಪಲಿ ಹೊಲೆದುಕೊಡುವಾಗ ವ್ಯಕ್ತಿಯ ಕಾಲಿನ ಅಳತೆ ಮುಖ್ಯವಾಗಿರುತ್ತದೆ. ಮೊದಲು ಚಪ್ಪಲಿಗಳನ್ನು ಮೊಳೆಗಳನ್ನು ಬಳಸಿಕೊಂಡು ತಯಾರಿಸುತ್ತಿದ್ದರು. ನಂತರ ಗಟ್ಟಿಯಾದ ದಾರವನ್ನು ಮೇಣದ ಮೂಲಕ ಎಳೆದೆಳದು ಗಟ್ಟಿಗೊಳಿಸಿ ಹೊಲಿಯುತ್ತಿದ್ದರು. ಇದರಂತೆಯೇ ಚರ್ಮವನ್ನು ಸಣ್ಣಗೆ ಸೀಳಿ ಅದರಿಂದಲೂ ಹೊಲಿಯುತ್ತಿದ್ದರು. ಈಗ ಚರ್ಮವನ್ನು ಅಂಟು ಹಾಕುವ ಸಲ್ಯೂಷನ್ ಬಳಸುತ್ತಾರೆ. ಸಣ್ಣ ಪುಟ್ಟ ಕೆಲಸವಿದ್ದಾಗ ಪ್ಲಾಸ್ಟಿಕ್ ದಾರವನ್ನು ಬಳಸಿ ಹೊಲಿಯುತ್ತಾರೆ.

ನಡೆದಾಡುವಾಗ ಗಿರಕ್, ಗಿರಕ್ ಎಂದು ಸದ್ದು ಮಾಡುವ ಗಿರಕಿ ಚಪ್ಪಲಿಗಳನ್ನು ಹೊಲಿಯುವಾಗ ಮಧ್ಯಭಾಗದಲ್ಲಿ ಕೆಲವು ಚರ್ಮದ ಚೂರುಗಳನ್ನು ಹಾಕಿ ಹೊಲಿಯುವುದರಿಂದ ಹಾಗೆ ಸದ್ದುಂಟಾಗುತ್ತಿರುತ್ತದೆ. ಕಪ್ಪು ಬಣ್ಣ ಮತ್ತು ಹೀರೆಗಸಿಗಳನ್ನು ಅಂಗಡಿಯಿಂದ ತಂದು ಚೆನ್ನಾಗಿ ಕಲಸಿ ಹೊಸ ಚರ್ಮದ ಮೇಲುಭಾಗಕ್ಕೆ ಚೆನ್ನಾಗಿ ಬಳಿದು, ಆರಿದ ನಂತರ ಪಾಲೀಶ್ ಹಚ್ಚಿ ಮೆರಗು ನೀಡಲಾಗುತ್ತದೆ.

ಬೂಟುಗಳನ್ನು ಹೊಲಿಯುವಾಗ ಮರದ ವಿನ್ಯಾಸಗಳನ್ನು ಬಳಸಿಗೊಂಡು ಸಿದ್ಧಗೊಳಿಸುವವರು. ಈಗ ಕಂಪನಿಯ ಬೂಟುಗಳಿಗೆ ಹೆಚ್ಚು ಬೇಡಿಕೆ ಇರುವುದರಿಂದ ಚಮ್ಮಾರರ ಪಂಗಡದವರೇ ಆದ ಮೋಚಿಗಳು ಸಿದ್ಧಪಡಿಸುವ ಬೂಟುಗಳಿಗೆ ಹೆಚ್ಚಾಗಿ ಬೇಡಿಕೆಯಿಲ್ಲ.

ಹಿಂದೆ ಕೃಷಿಗೆ ಕಪಿಲೆ ಬಾವಿಗಳು ಆಶ್ರಯವಾಗಿದ್ದ ಸಂದರ್ಭದಲ್ಲಿ ಚರ್ಮದಿಂದ ತಯಾರು ಮಾಡಿದ ಬಾನಿಯ ಅಗತ್ಯ ಹೆಚ್ಚಾಗಿ ಕಂಡುಬರುತ್ತಿತ್ತು. ಈಗ ಪಂಪುಸೆಟ್, ಬೋರೆವೆಲ್‌ಗಳು ಬಂದ ನಂತರ ಬಾನಿಯನ್ನು ಹೊಲಿಸುವವರೇ ಇಲ್ಲವಾಗಿದೆ. ಈಗಲೂ ಅಲ್ಲಲ್ಲಿ ಕೆಲವು ಕಪಿಲೆ ಬಾವಿಗಳಿವೆ. ಒಂದು ಬಾನಿಯನ್ನು ಹೊಲಿಯಲು ಸಾಮಾನ್ಯವಾಗಿ ಒಂದು ದೊಡ್ಡ ಪ್ರಾಣಿಯ ಪೂರ್ಣ ಚರ್ಮವೇ ಬೇಕಾಗುತ್ತದೆ.

ಹೆಂಡ ಸಾಗಿಸಲು ಕೆಲವು ಕಡೆ ಚರ್ಮದ ತಿತ್ತಿಗಳನ್ನು ಬಳಸುವುದು ರೂಢಿ. ಅದನ್ನೂ ಕೂಡ ಚಮ್ಮಾರರೇ ಹೊಲಿದು ಸಿದ್ದಪಡಿಸುತ್ತಾರೆ. ಎತ್ತಿನಗಾಡಿ ಹೊಡೆಯುವವರಿಗೆ ಬಾರುಕೋಲು,

ಬೇಸಾಯಕ್ಕೆ ಜತ್ತಿಗೆ, ಬಾರು, ಹಂಗಡ, ಗೆಜ್ಜೆಸರ, ಹಂತಿಯ ದಾವನಿ, ಪಟಗುಣಿ, ಮಿಣಿ, ಸಣ್ಣಬಾರು, ಜತ್ತಿಗೆಬಾರು, ಹಿಡಿ ಹಗ್ಗದ ಬಾರು ಮುಂತಾದುವುಗಳನ್ನು ತಯಾರಿಸುತ್ತಾರೆ. ಅಲ್ಲದೆ ನಗಸುತ್ತು, ಗೆಜ್ಜೆಸರ, ಹಂತಿಯ ದಾವನಿ ಮುಂತಾದವುಗಳನ್ನು ತೊಗಲು ಹಸಿ ಇರುವಾಗಲೇ ತಯಾರಿಸುತ್ತಾರೆ.

ಚರ್ಮದಿಂದ ವಿವಿಧ ವಾದ್ಯ ಪರಿಕರಗಳನ್ನು ತಯಾರಿಸುತ್ತಾರೆ. ದಮ್ಮಡಿ, ತಪ್ಪಡಿ, ಚೌಡಿಕೆ, ಡಕ್ಕಿ, ಡೋಲು, ಡೊಳ್ಳು, ಸಮಾಳ, ಉರುಮೆ, ಇತ್ಯಾದಿ ವಾದ್ಯಗಳನ್ನು ವಿವಿಧ ಪ್ರಾಣಿಗಳ ಚರ್ಮ ಉಪಯೋಗಿಸಿ ತಯಾರಿಸುವರು.

ಇಂದು ಶೇ.೮೫ರಷ್ಟು ಜಗತ್ತಿನಾದ್ಯಾಂತ ವಿವಿಧ ರೀತಿಯ ವೈವಿಧ್ಯ ಮಯವಾದ ಚರ್ಮದ ಚಪ್ಪಲಿ, ಬೂಟುಗಳನ್ನು ತಯಾರಿಸಲು ಉಪಯೋಗಿಸುವರು. ಚಿಕ್ಕ ತಳಿಯ ದನಕರುಗಳ ಚರ್ಮವನ್ನು ಹಾಗೂ ಉಳಿದ ಪ್ರಾಣಿಗಳ ಚರ್ಮವನ್ನು ಸಾಮಾನ್ಯವಾಗಿ ಪಾದರಕ್ಷೆಗಳಿಗೆ ಉಪಯೋಗಿಸುತ್ತಾರೆ. ಅದರಲ್ಲೂ ಹಸು, ಹೋರಿಗಳ ಚರ್ಮವನ್ನು ಪಾದರಕ್ಷೆಗಳ ಅಟ್ಟೆ ಮತ್ತು ಮೇಲ್ಭಾಗಕ್ಕೆ ಬಳಸುವರು. ಅತ್ಯುತ್ತಮವಾದ ಚಪ್ಪಲಿಗಳನ್ನು ಕರುವಿನ ಚರ್ಮದಿಂದಲೇ ತಯಾರಿಸುವುದುಂಟು. ಆಡಿನ ಚರ್ಮ, ಉರಗ ವರ್ಗದ ಪ್ರಾಣಿಗಳ ಚರ್ಮವು ಜನಪ್ರಿಯವಾಗಿವೆ, ಆದರೆ ದನದ ಚರ್ಮವನ್ನೇ ಎಲ್ಲೆಡೆಯೂ ಬಳಸುವುದು. ಚರ್ಮದಿಂದ ಬೇಲ್ಟ್, ಬಂದೂಕ ಕೇಸ್, ಕುದುರೆ ಹಾಗೂ ಒಂಟೆಗಳಿಗೆ ಅಲಂಕೃತವಾದ ಜೀನುಗಳನ್ನು ತಯಾರಿಸುತ್ತಾರೆ.

ಚಮ್ಮಾರರು ಚರ್ಮದ ವೃತ್ತಿಯಲ್ಲಿ ನಿಪುಣರು, ಚರ್ಮವನ್ನು ಸುಲಿಯುವಲ್ಲಿ, ಹದಮಾಡುವಲ್ಲಿ, ಚಪ್ಪಲಿ, ಶೂ ತಯಾರಿಸುವಲ್ಲಿ, ಜತ್ತಿಗೆ ಹೆಣಿಯುವಲ್ಲಿ, ಕಟಗುಣಿ ಕಟ್ಟುವಲ್ಲಿ, ದಾವನಿಯ ಗಂಟು ಹಾಕುವಲ್ಲಿ, ನೊಗಸುತ್ತ, ಬಾರಕೋಲುಗಳಿಗೆ ಸುರಳಿ ಹಾಕುವಲ್ಲಿ, ಜೀನುಗಳನ್ನು ತಯಾರಿಸುವಲ್ಲಿ, ವಿವಿಧ ಚರ್ಮದ ವಾದ್ಯಗಳನ್ನು ತಯಾರಿಸುವಲ್ಲಿ, ಬೆಲ್ಟ್, ಕೇಸು, ಚೀಲ, ಇತ್ಯಾದಿ ಚರ್ಮದ ವಸ್ತುಗಳನ್ನು ತಯಾರು ಮಾಡುವಲ್ಲಿ ತಮ್ಮ ಪಾರಂಪರಿಕ ಜ್ಞಾನವನ್ನು ಉಪಯೋಗಿಸುತ್ತಾರೆ. ಆದರೆ ಯಾಂತ್ರಿಕರಣದಿಂದಾಗಿ ಚರ್ಮ ಉದ್ಯಮ ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತದೆಯೇ ವಿನಃ ಸಾಂಪ್ರದಾಯಿಕ, ವಂಶಪಾರಂಪರಿಕವಾಗಿ ನಡೆಸಿಕೊಂಡು ಬಂದ ಚಮ್ಮಾರರ ವೃತ್ತಿಗೆ ಉಪಯೋಗವಾಗಿಲ್ಲ. ಇಂದು ಇವರು ಕಂಪನಿಗಳ ಕೂಲಿ ಆಳುಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಹಲವರು ಈ ವೃತ್ತಿಯನ್ನು ಬಿಟ್ಟು ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡಿದ್ದಾರೆ. ಅಂದಿನ ಇವರ ಕುಲಕಸುಬು ಇಂದು ಕ್ಷೀಣಿಸತೊಡಗಿದೆ. ಕಂಪನಿಗಳು ತಯಾರು ಮಾಡುವ ಚರ್ಮದ ವಸ್ತುಗಳನ್ನು ರೀಪೇರಿ ಮಾಡುವ ಕೆಲಸಗಳಲ್ಲಿ ಚಮ್ಮಾರರು ತೊಡಗಿದ್ದಾರೆ.

ಗಾಣಗಾರಿಕೆ

ಜಾನಪದ ಕುಲಕಸುಬುಗಳಲ್ಲಿ ಗಾಣಗಾರಿಕೆ ವೃತ್ತಿಯೂ ಕೂಡ ಒಂದು. ಗಾಣವೆಂದರೆ, ಒಂದು ವಸ್ತುವನ್ನು ಹಿಂಡಿ ದ್ರವರೂಪದ ವಸ್ತುವನ್ನು ಪಡೆಯುವಲ್ಲಿ ಉಪಯೋಗಿಸುವ ಸಾಧನ.

ಮೂಲತಃ ಕೊಬ್ಬರಿ, ಶೇಂಗಾ, ಕುಸುಬೆ, ಎಳ್ಳು, ಹರಳು ಹೊಂಗೆ ಇತ್ಯಾದಿ ಎಣ್ಣೆ ಬೀಜಗಳನ್ನು ಹಿಂಡುವ ಸಾಧನ ಗಾಣ. ನಂತರದ ದಿನಗಳಲ್ಲಿ ಕಬ್ಬು ಅರಿಯುವ ಸಾಧನವೂ ಕೂಡ ಗಾಣವಾಗಿದೆ.

ಎಣ್ಣೆ ಬೀಜಗಳಾದ ಕುಸುಬೆ, ಹರಳು, ಎಳ್ಳು, ಸೂರ್ಯಕಾಂತಿ, ಶೇಂಗಾ, ಹೊಂಗೆ, ಕೊಬ್ಬರಿ ಮುಂತಾದುವುಗಳನ್ನು ಗಾಣಕ್ಕೆ ಹಾಕಿ ಎಣ್ಣೆ ತೆಗೆಯುವ ಕಸುಬು ಗಾಣಗಾರಿಕೆ. ಈ ಕಸುಬು ಮಾಡುವವರನ್ನು ಗಾಣಿಗರು, ಗಾಣಿಗ್ಯಾರು, ತೇಲಿ ಎಂದು ಕರೆಯುತ್ತಾರೆ. ಇವರಲ್ಲಿ ಕರಿಗಾಣಿಗರು, ಬಿಳಿಗಾಣಿಗರು, ಒಂಟೆತ್ತಿನ ಗಾಣಿಗರು, ಜೋಡೆತ್ತಿನ ಗಾಣಿಗರು ಎಂಬ ಪಂಗಡಗಳುಂಟು.

ಗಾಣಗಾರಿಕೆ ಕೃಷಿಯನ್ನು ಅವಲಂಬಿಸಿದ ಉದ್ಯೋಗ. ಕೃಷಿಕರು ಎಣ್ಣೆ ಬೀಜಗಳನ್ನು ಬಿತ್ತಿ ಬೆಳೆದರೆ ಮಾತ್ರವೇ ಗಾಣಿಗರಿಗೆ ಎಣ್ಣೆ ತೆಗೆಯುವ ಕೆಲಸ ಲಭ್ಯವಾಗುತ್ತದೆ. ಗಾಣಿಗರು ರೈತರು ಕೊಟ್ಟ ಕುಸುಬೆ, ಶೇಂಗಾ, ಸೂರ್ಯಕಾಂತಿ, ಹರಳು, ಎಳ್ಳುಗಳಿಂದ ಎಣ್ಣೆ ತೆಗೆದು ಕೊಟ್ಟು ರೈತರಿಂದ ಹಣ ಪಡೆಯುವುದು ಅಥವಾ ರೈತರಿಂದ ಎಣ್ಣೆ ಬೀಜಗಳನ್ನು ಇಂತಿಷ್ಟು ಎಂದು ಪಡೆದುಕೊಳ್ಳುವರು. ಗಾಣಿಗರು ಎಣ್ಣೆ ತೆಗೆಯುವುದರಲ್ಲಿ ನಿಪುಣರು. ಆದುದರಿಂದಲೇ 'ಎಳ್ಳುಗಾಣಿಗ ಬಲ್ಲ'[೬೪] ಎಂದು ಸರ್ವಜ್ಞ ಅವರ ವೃತ್ತಿ ನಿಪುಣತೆಯನ್ನು ಕುರಿತು ಹೇಳಿದ್ದಾನೆ.

ಸಾಹಿತ್ಯದಲ್ಲಿ ಗಾಣದ ಹಾಗೂ ಗಾಣಗಾರಿಕೆ ಕುರಿತು ಉಲ್ಲೇಖ ಹೀಗಿವೆ:

ಎಳ್ಳಿಲ್ಲದ ಗಾಣವನ್ನಾಡಿದ ಎತ್ತಿನಂತಾಯಿತೆನ್ನ ಭಕ್ತ-ಬಸವಣ್ಣ,[೬೫]

ಎಳ್ಳುಗಾಣಿಗ ಬಲ್ಲ-ಸರ್ವಜ್ಞ[೬೬]

ತುಂಡು ತುಂಡಾಗಿ ಕತ್ತರಿಸಿ ಗಾಣದೊಳೆರದು-ಚೆನ್ನಬಸವ ಪುರಾಣ[೬೭]

ಗಾಣದೊಳಿಕ್ಕಿದ್ದ ಕಬ್ಬಿನಂತೆ ನರಕದೊಳೆ ದುಃಖಂ ಬಟ್ಟಂ-ಧರ್ಮಾಮೃತ[೬೮]

ಬೆಂಗಳೂರು ರೂರಲ್ ಗೆಜಟಿಯರ್ ಪುಟಗಳನ್ನು ತಿರುವಿದರೆ ಅಲ್ಲಿ ಕಾಣುವುದಿಷ್ಟು.

Ganiga: The ganiga is a cast of oil pressers and the word is derived from the Kannada word Gana meaning an oil mill. They are found Seattered all over the district and their number in the undevided district in 1984 was 25,217. there are subsects among them Such as the Sajjans, Jyothipana, Jyothinagara etc. there are also the two division the Hegganigas who yoke two bullocks to the gana and Kiruganigas yoking only one bullock. Generally Setti is the fettle Suffixed to their name they worships both shiva and Vishnu, invites Dasayyas on all important

occation. They burrys the dead. They take non Vegitarian food except the sajjans who are lingayath. They speak Kannada at home.[೯೯]

ಗಾಣಿಗರು ಎಣ್ಣೆ ತೆಗೆಯುವ ವೃತ್ತಿಯವರು ಮತ್ತು ಈ ಶಬ್ದವು ಕನ್ನಡದ 'ಗಾಣ' ಶಬ್ದದಿಂದ ಉತ್ಪನ್ನವಾದುದ್ದು, ಎಣ್ಣೆಯ ಗಾಣಿಗ ಎಂಬ ಅರ್ಥವನ್ನು ಕೊಡುತ್ತದೆ. ಇವರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುವರು. ಬಳ್ಳಾರಿ ಜಿಲ್ಲೆಯ ಹಡಗಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಕುರುಗೋಡು, ಹೊಸಪೇಟೆ ತಾಲೂಕುಗಳಲ್ಲಿ ಇವರ ನೆಲೆಗಳಿವೆ. ಇವರಲ್ಲಿ ಹಲವಾರು ಉಪಜಾತಿಗಳಿವೆ. ಇವುಗಳೆಂದರೆ ಸಜ್ಜನರು, ಜೋತಿಪಣ, ಜೋತಿನಗರ ಮೊದಲಾದುವು ಇವರಲ್ಲಿ ಹೆಗ್ಗಾಣಿಗ ಮತ್ತು ಕಿರುಗಾಣಿಗ ಎಂಬ ಎರಡು ಉಪಜಾತಿಗಳಿದ್ದು ಹೆಗ್ಗಾಣಿಗರು ಗಾಣಕ್ಕೆ ಎರಡು ಎತ್ತುಗಳನ್ನು ಉಪಯೊಗಿಸಿದರೆ ಕಿರುಗಾಣಿಗರು ಕೇವಲ ಒಂದು ಎತ್ತನ್ನು ಗಾಣಕ್ಕೆ ಬಳಸುತ್ತಾರೆ. ಸಾಮಾನ್ಯವಾಗಿ 'ಸೆಟ್ಟಿ' ಎಂಬ ಉಪನಾಮವನ್ನು ಹೆಸರಿನೊಂದಿಗೆ ಬಳಸುವರು. ಇವರು 'ಶಿವ', 'ವಿಷ್ಣು' ಇಬ್ಬರನ್ನು ಪೂಜೆಸುವರು ಮತ್ತು ಎಲ್ಲಾ ಸಮಾರಂಭಗಳಲ್ಲಿ ದಾಸಯ್ಯರನ್ನು ಆಹ್ವಾನಿಸುವರು. ಇವರು ಮಾಂಸಹಾರಿಗಳು. ಆದರೆ ಲಿಂಗಾಯತ ಸಜ್ಜನರು ಸಸ್ಯಹಾರಿಗಳು. ಇವರು ಮನೆಯಲ್ಲಿ ಕನ್ನಡ ಭಾಷೆ ಮಾತನಾಡುವರು. ಬಳ್ಳಾರಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ವಾಸಿಸಿರುವವರು ಲಿಂಗಾಯತ ಗಾಣಿಗರು ಲಿಂಗಾಯತ ಗಾಣಿಗರು ಇಂದು ಹೆಚ್ಚಾಗಿ ವ್ಯವಸಾಯ ವೃತ್ತಿ ಮಾಡುತ್ತಿದ್ದಾರೆ.

ಗಾಣಿಗರ ಬಗ್ಗೆ ಮಾಹಿತಿಗಳು "ಪೀಪಲ್ ಆಫ್ ಇಂಡಿಯ ಕರ್ನಾಟಕ ಕೆ.ಎಸ್.ಸಿಂಗ್ ಅವರ ವಾಲ್ಯೂಂ XXVI, ಪಾರ್ಟ-೨, ಪುಟ ೪೮೭, ೨೦೦೩ರ ಸಂಪುಟದಲ್ಲಿ ದೊರಕುತ್ತದೆ.

ಗಾಣಿಗರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬಂದರೆ, ಸಜ್ಜನರು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ದಕ್ಷಿಣ ಕನ್ನಡದಲ್ಲಿ ತುಳು ಮಾತನಾಡುವ ಗಾಣಿಗರು ಕಂಡುಬಂದರೆ, ತೆಲುಗು ಮಾತನಾಡುವ ಗಾಣಿಗರು ಬೆಂಗಳೂರು, ಕೋಲಾರ, ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಾಣಿಗರು ತೆಂಗಿನ ಕೊಬ್ಬರಿಯಿಂದ ಎಣ್ಣೆ ತೆಗೆಯುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿರುವ ಲಿಂಗಾಯತ ಗಾಣಿಗರು ಹೆಚ್ಚಾಗಿ ಒಕ್ಕಲುತನ ಮಾಡುತ್ತಾರೆ.

ಪ್ರಧಾನ ಗಾಣಿಗರಲ್ಲಿ ಕಿರುಗಾಣಿಗ, ಹೆಗ್ಗಾಣಿಗ ಮತ್ತು ತೆಲುಗುರೆಂಬ ಮೂರು ಪ್ರಕಾರಗಳಿವೆ. ಹೆಗ್ಗಾಣಿಗರು ವೀರಶೈವ ಧರ್ಮದವಾಗಿದ್ದು ಹಾಗೂ ಸಸ್ಯಹಾರಿಗಳಾಗಿರುವುದರಿಂದ ಗಾಣಿಗರಲ್ಲಿ ಶ್ರೇಷ್ಠರೆಂದು ಪರಿಗಣಿಸುತ್ತಾರೆ. ಇವರ ನಂತರದವರು ಕಿರುಗಾಣಿಗರು ಶಿವಜ್ಯೋತಿಪಣ ಎಂಬ ಪದವನ್ನು ಈ ಎರಡು ಪಂಗಡದವರು ಬಳಸುತ್ತಾರೆ. ಕಿರುಗಾಣಿಗರು ಗಾಣದಲ್ಲಿ ಒಂದು ಎತ್ತನ್ನು ಬಳಸಿದರೆ, ಹೆಗ್ಗಾಣಿಗರು ಎರಡು ಎತ್ತುಗಳನ್ನು ಗಾಣದಲ್ಲಿ ಬಳಸುತ್ತಾರೆ. ಹೆಗ್ಗಾಣಿಗರು ಗಾಣದಲ್ಲಿ ಕಲ್ಲನ್ನು ಬಳಸುತ್ತಾರೆ. ಹೆಗ್ಗಾಣಿಗರಲ್ಲಿ ಕೆಲವರನ್ನು ಮಂಡಿಗಾಣಿಗರೆಂದು ಕರೆಯುತ್ತಾರೆ.

ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ ಅವರು ರಚಿಸಿರುವ 'ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ' ಸಂಪುಟ-೨ ಪುಟ-೨೬೩ ರಲ್ಲಿ ಗಾಣಿಗರ ವಿವರಗಳನ್ನು ಕಾಣಬಹುದು. ಗಾಣಿಗರನ್ನು ಆಂಧ್ರಪ್ರದೇಶದಲ್ಲಿ 'ಗಾಂಡ್ಲ' ತಮಿಳುನಾಡಿನಲ್ಲಿ 'ವಣಿಯನ್', ಕನ್ನಡದಲ್ಲಿ ಗಾಣಿಗ, ಕೇರಳದಲ್ಲಿ ಚಟ್ಟಿಯಾರ್ ಎಂದು ಆಯಾ ರಾಜ್ಯದ ಭಾಷೆಯ ರೂಪವನ್ನು ಪಡೆದುಕೊಂಡಿದೆ.

೧೮೯೧ ಮದ್ರಾಸ್ ಜನಗಣತಿಯ ವರದಿಯ ಪ್ರಕಾರ ಗಾಣಿಗರ ಗುರುಗಳು ಶೃಂಗೇರಿ ಮಠದ ಅಧಿಪತಿಗಳಾಗಿದ್ದರು ಮತ್ತು ಅವರು ತಮ್ಮ ಕಾರ್ಯಕ್ರಮಗಳಿಗೆ ಬ್ರಾಹ್ಮಣರನ್ನು ಯೋಜಿಸುತ್ತಿದ್ದರು.

ಡಬ್ಲ್ಯೂ.ಫ್ರಾನ್ಸಿಸ್ ತಮ್ಮ 'ಗಾಣಿಗರ ಎಣ್ಣೆಗಾಣಗಳು' ಎಂಬುದರಲ್ಲಿ ಈ ರೀತಿ ಉಲ್ಲೇಖಿಸಿರುವರು. "ಹುಣಸೆ ಮರದಿಂದ ತಯಾರಿಸಿದ ಮರದ ಒರಳನ್ನು ಭೂಮಿಯಲ್ಲಿ ಹುದುಗಿಸುವರು, ಸಿಲಿಂಡರಿನಾಕೃತಿಯ ಮರದ ತುಂಡನ್ನು ಅದಕ್ಕೆ ಜೋಡಿಸುವರು. ಇದು ಕಬ್ಬಿಣದ ಸಲಾಕೆಯನ್ನು ಹೊಂದಿರುತ್ತದೆ. ಒಂದು ಮರದ ಉದ್ದನೆಯ ತುಂಡನ್ನು ಇದಕ್ಕೆ ಜೋಡಿಸುವರು. ಅದರ ಒಂದು ತುದಿಯು ಭೂಮಿಯಲ್ಲಿ ಹೊಂದಿರುವುದು ಮತ್ತು ಅದರ ತುದಿಗೆ ಎರಡು ಎತ್ತುಗಳನ್ನು ಕಟ್ಟಿರುವರು. ಈ ಜೋಡಣೆಗೆ ರಾಟೆಯನ್ನು ಜೋಡಿಸಿರುವುದರಿಂದ ಸಿಲಿಂಡರಿನಾಕೃತಿಯ ಒತ್ತಡವು ವೇಗವಾಗಿ ಅಧಿಕವಾಗುವುದು. ಎತ್ತುಗಳು ಸುತ್ತಲು ಪ್ರಾರಂಭಿಸಿದಾಗ ಕಾಳುಗಳು ಸಿಲಿಂಡರಿನಾಕೃತಿಯ ಮರದ ತುಂಡಿನ ತಿರುಗುವಿಕೆಯಿಂದಾಗಿ ಪುಡಿಯಾಗುವವು ಮತ್ತು ಇದರಿಂದುಂಟಾಗುವ ಎಣ್ಣೆಯು ಕೆಳಗೆ ಹರಿದು ಬರುವುದು.

ಸೈಯದ್ ಸಿರಾಜ್ ಉಲ್ ಹಸನ್ ಅವರು ಗಾಣಿಗರನ್ನು ಕುರಿತು ಸುದೀರ್ಘವಾದ ವಿವರಣೆ ಕೊಟ್ಟಿದ್ದಾರೆ. ಗಾಂಡ್ಲ, ಗಾಣಿಗರು, ತಿಲವಾನ್, ತಿಲಘಾತಕ ಇವರು ಹೈದರ್‌ಬಾದ್ ಸಂಸ್ಥಾನದಲ್ಲಿ ಗ್ರಾಮಗಳಲ್ಲಿ ಕಂಡುಬರುವ ಎಣ್ಣೆ ಅರಿಯುವ ಮತ್ತು ವ್ಯಾಪಾರ ಮಾಡುವ ಸಮುದಾಯವಾಗಿವೆ.

ದೇವೇಂದ್ರಕುಮಾರ್ ಹಕಾರಿ, ಅವರ 'ಜಾನಪದೀಯ' ಕೃತಿ ಮತ್ತು ಮೃತ್ಯುಂಜಯ ಹೊರಕೇರಿಯವರ 'ಮಧುರ ಜಾನಪದ' ಕೃತಿಗಳಲ್ಲಿ ಗಾಣಿಗರ ಸಾಂಸ್ಕೃತಿಕ ವಿವರಗಳನ್ನು ನೀಡಿದ್ದಾರೆ.

ಈ ಎಲ್ಲಾ ಸಾಹಿತ್ಯ ಕೃತಿಗಳು, ಅಧ್ಯಯನ ಗ್ರಂಥಗಳು ಗಾಣ ಮತ್ತು ವಿಶೇಷವಾಗಿ ಗಾಣಗಾರಿಕೆ, ಗಾಣಿಗರ ಸಂಸ್ಕೃತಿ, ಜೀವನ ಕ್ರಿಯೆ ಇತ್ಯಾದಿಗಳನ್ನು ತಿಳಿಯಲು ತುಂಬಾ ನೆರವಾಗಿವೆ.

ಗಾಣಗಳ ರಚನೆ-ವಿನ್ಯಾಸ-ಸ್ವರೂಪ:

ಗಾಣಗಾರಿಕೆ ವೃತ್ತಿಯಲ್ಲಿ ಗಾಣದ ಪಾತ್ರ ಪ್ರಮುಖವಾದದ್ದು. ಕರ್ನಾಟಕದ ಕರಾವಳಿ

ಪ್ರದೇಶದಲ್ಲಿ, ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಹೆಚ್ಚಾಗಿ ಮರದ ಗಾಣಗಳು, ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಕಲ್ಲಿನ ಗಾಣಗಳು ಹೆಚ್ಚಾಗಿ ರೂಢಿಯಲ್ಲಿವೆ.

ಎಣ್ಣೆಯನ್ನು ಉತ್ಪಾದಿಸುವ ಎಣ್ಣೆ ಗಾಣಗಳ ರಚನೆಯನ್ನು ಗಾಣಿಗರಲ್ಲಿಯ ಉಪವಿಭಾಗಗಳನ್ನು ಅನುಸರಿಸಿ ಗಾಣಗಳ ರಚನಾತ್ಮಕ ಕ್ರಿಯೆಯೊಂದಿಗೆ ಮೂರು ಪ್ರಕಾರದ ಎಣ್ಣೆಗಾಣಗಳನ್ನು ನಾವು ಗುರುತಿಸಬಹುದು.

೧. ಜೋಡೆತ್ತು ಅಥವಾ ಕೋಣಗಳ ಸಹಾಯದಿಂದ ನಡೆಸುವ ಕಲ್ಲಿನಗಾಣ.

೨. ಮನುಷ್ಯರೇ ಸ್ವಲ್ಪ ಶ್ರಮವಹಿಸಿ ತಿರುಗಿಸಿ ಎಣ್ಣೆಯನ್ನು ಉತ್ಪಾದಿಸಬಹುದಾದ ಮರದಗಾಣ.

೩. ಒಂಟಿ ಎತ್ತನ್ನು ಬಳಸಿಕೊಂಡು ಎಣ್ಣೆಯನ್ನು ಉತ್ಪಾದಿಸುವಂತಹ ಒಂಟೆತ್ತಿನ ಗಾಣ.

ಗಾಣದ ವಿನ್ಯಾಸವು ಮೊದಲು ನೆಲದ ಮೇಲೆ ಸುಮಾರು ೯ ಅಥವಾ ೧೦ ಅಡಿ ನಿರ್ದಿಷ್ಟ ಎತ್ತರ ಹಾಗೂ ವ್ಯಾಸವುಳ್ಳ ವೃತ್ತಾಕಾರದ ಚಿಟ್ಟೆಯೊಂದನ್ನು ನಿರ್ಮಿಸಿದ ತರುವಾಯ ಆ ಚಿಟ್ಟೆಯ ಸೂಕ್ತವಾದ ಸ್ಥಳದಲ್ಲಿ ಉತ್ಪಾದಿತ ಎಣ್ಣೆಯು ಪಾತ್ರೆಯಲ್ಲಿಳಿದು ಸಂಗ್ರಹವಾಗುವಂತೆ ತೈಲ ಶೇಖರಣಾ ಪಾತ್ರೆಯೊಂದನ್ನು ರಚಿಸಿರುತ್ತಾರೆ. ಚಿಟ್ಟೆಯ ಮೇಲೆ ಗಾಣದ ಮರವನ್ನು ನಿರ್ಮಿಸಲಾಗಿದ್ದು, ಆಗಾಣದ ಮರದ ಮೇಲೆ ಕೊಬ್ಬರಿ ಮತ್ತು ಎಣ್ಣೆ ಬೀಜಗಳನ್ನು ಹಾಕಲು ದೊಡ್ಡ ಒರಳನ್ನು ನಿರ್ಮಿಸಲಾಗುತ್ತದೆ. ಹುಣುಸೆ ಮರದ ಕಾಂಡ ಅಥವಾ ಚಿಗಟಿ ಮರದ ಒರಳನ್ನು ಮಾಡಲಾಗುತ್ತದೆ.

ಕಬ್ಬಿಣದ ಬಳೆಯ ಅಂಚನ್ನುಳ್ಳ ಮರದ ಒನಕೆಯೊಂದನ್ನು ಗಾಣದ ಒರಳಿನ ಸೂಕ್ತವಾದ ಆಯಕಟ್ಟಿನ ಸ್ಥಳದಲ್ಲಿ ಸ್ಥಾಪಿಸುತ್ತಾರೆ. ಗಾಣದ ಮರ ಹಾಗೂ ಒರಳಿನ ಕೆಳಭಾಗಕ್ಕೂ ಹೊಂದಿಕೊಂಡಂತೆ ಕತ್ತರಿ ಹಲಗೆಯೊಂದನ್ನು ನಿರ್ಮಿಸಿ ಆ ಹಲಗೆಯ ಮೇಲೆ ಭಾರವಾದ ಕಲ್ಲುಗಳನ್ನು ಹೇರಿರುತ್ತಾರೆ. ಕತ್ರಿ ಹಲಗೆಯು ತನ್ನೊಂದು ಹಗ್ಗದಿಂದ ಗಾಣದ ಮಧ್ಯಭಾಗವನ್ನು ಆವರಿಸಿಕೊಂಡು ಭದ್ರವಾಗಿರುತ್ತದೆ. ನಂತರ ಒನಕೆಗೆ ಹೊಂದಿಕೊಂಡು ಆಸರೆಯಾಗಿರುವಂತೆಯೂ, ಬೀಜಗಳನ್ನು ಅರೆಯುವ ಪ್ರಧಾನ ಕ್ರಿಯೆಯು ಸುಸೂತ್ರವಾಗುವಂತೆ ಮಲ್ಲಗಂಭವೊಂದನ್ನು ಸ್ವಲ್ಪ ಓರೆಯಾಗಿ ನಿಲ್ಲಿಸುವರು. ಹೀಗೆ ಸ್ಥಾನಗ್ರಹಣ ಮಾಡಿದ ಈ ಮಲ್ಲಗಂಭವು ಮಧ್ಯದಲ್ಲಿ ಬಲವಾದ ಹಗ್ಗದ ಜೋಡಣೆಯನ್ನು ಹೊಂದಿರುತ್ತದೆ. ಈ ಎಲ್ಲಾ ಸಿದ್ಧತೆಗಳನ್ನು ಒಳಗೊಂಡು ರಚನೆಯಾದ ಎಣ್ಣೆಗಾಣದ ಕ್ರಿಯೆಯಿಂದ ಕೊಬ್ಬರಿ, ಹರಳು, ಕುಸುಬಿ, ಶೇಂಗಾ, ಸೂರ್ಯಕಾಂತಿ, ಎಳ್ಳು, ಸಾಸಿವೆ ಮುಂತಾದ ಎಣ್ಣೆ ಬೀಜಗಳಿಂದ ತಯಾರಿಸುವರು. ಇಂತಹ ಪ್ರತಿಭಾ ಪೂರ್ಣವಾದ ಗಾಣವನ್ನು ಬಡಗಿ ತನ್ನ ಕುಶಾಗ್ರಮತಿಯಿಂದ ನಿರ್ಮಿಸಿಕೊಡುತ್ತಾನೆ.

ಎತ್ತಿನ ಗಾಣದಿಂದ ಎಣ್ಣೆ ತೆಗೆಯುವ ವಿಧಾನ ಸಾಂಪ್ರದಾಯಿಕವಾದುದು. ಎತ್ತು ಗಾಣವನ್ನು ತಿರುಗಿಸುತ್ತ ಅದರ ಸುತ್ತಲು ಸುತ್ತುವಾಗ ಅದಕ್ಕೆ ಕಣ್ಣಿಗೆ ಬವಳಿಕೆ ಬಾರದಿರಲೆಂದು ಕಣ್ಣಿಗೆ ಬಟ್ಟೆ ಕಟ್ಟಿರುತ್ತಾರೆ. ಹಗಲು ರಾತ್ರಿಯನ್ನದೆ ಈ ಎತ್ತು ಒಂದೇ ಸಮನೆ ತಿರುಗಬೇಕಾಗುತ್ತದೆ. ಗಾಣಿಗರು ಗಾಣದಿಂದ ತೆಗೆದ ಮೊದಲ ಎಣ್ಣೆಯನ್ನು ಗ್ರಾಮದೇವರಿಗೆ ನೀಡುವ ಪದ್ಧತಿ ಇವರಲ್ಲಿದೆ. ದೇವರ ಜಾತ್ರೆ, ಉತ್ಸವಾದಿಗಳಲ್ಲಿ ದೇವರುಗಳಿಗೆ ಎಣ್ಣೆ ನೀಡುತ್ತಾರೆ.

ಗಾಣಗಾರಿಕೆ ಕಸುಬುದಾರರಾದ ಗಾಣಿಗ ಸಮುದಾಯದಲ್ಲಿ ಅನೇಕ ಒಳಪಂಗಡಗಳಿವೆ. ಕರ್ನಾಟಕದಾದ್ಯಂತ ನೆಲೆಸಿರುವ ಇದರಲ್ಲಿ ಹೀಗೆ ಒಳಪಂಗಡಗಳು ಹುಟ್ಟಿಕೊಳ್ಳಲು ಪ್ರಾಯಶಃ ಭೌಗೋಳಿಕ ಹಾಗೂ ಸಾಮಾಜಿಕ ಭಿನ್ನತೆಯೆ ಕಾರಣವಿರಬಹುದು. ಈಗಿನಂತೆ ಸಂಪರ್ಕ ಸಾಧನಗಳ ಸೌಲಭ್ಯವಿರದಿದ್ದ ಕಾಲದಲ್ಲಿ ಮೂಲತಃ ಒಂದೇ ಜಾತಿಯವರಾಗಿದ್ದ ಈ ಜನರ ನಡುವೆ ಪರಸ್ಪರ ಸಂಪರ್ಕ ಸಾಧ್ಯವಾಗದಿದ್ದರಿಂದ ತಮ್ಮ ನೆಲೆಯ ಪ್ರದೇಶಕ್ಕನುಗುಣವಾಗಿ ಜೀವನ ಮತ್ತು ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದಾರೆ. ಅಲ್ಲದೆ ಕಾಲಕಾಲಕ್ಕೆ ಆಯಾ ಪ್ರದೇಶದಲ್ಲಿ ಪ್ರಬಲವಾಗಿದ್ದ ವೈಷ್ಣವ ಮತ್ತು ವೀರಶೈವ ಮತಗಳ ಪ್ರಭಾವವೂ ಇವರ ಮೇಲೆ ಬೀರಿದೆ. ದಕ್ಷಿಣ ಕರ್ನಾಟಕ ಗಾಣಿಗರ ಮೇಲೆ ವೈಷ್ಣವ ಧರ್ಮ ಪ್ರಭಾವ ಅಧಿಕವಾಗಿದೆ. ಉತ್ತರ ಕರ್ನಾಟಕ ಗಾಣಿಗರ ಮೇಲೆ ವೀರಶೈವ ಧರ್ಮದ ಪ್ರಭಾವ ಕಂಡುಬರುತ್ತದೆ. ಈ ಭಾಗಗಳಲ್ಲಿನ ಗಾಣಿಗರಿಗೆ ವ್ಯತ್ಯಾಸವಿರುವುದು ಆಹಾರ ಪದ್ಧತಿ, ಆಚರಣೆ ಮತ್ತು ವೃತ್ತಿಯಲ್ಲಿ.

ಗಾಣಿಗ ಸಮುದಾಯದಲ್ಲಿ ಕರಿಕುಲ, ಸಜ್ಜನ ಗಾಣಿಗ, ಪಂಚಮ ಗಾಣಿಗ, ತೇಲಿ ಗಾಣಿಗ, ಜ್ಯೋತಿಪಣ ಗಾಣಿಗ, ದೇವಗಾಣಿಗ, ಶೆಟ್ಟಿಗಾಣಿಗ, ವಾಣಿಯಗಾಣಿಗ, ಚೆಟ್ಟಿಮಾರಗಾಣಿಗ, ಗಂಡ್ಲರು, ಸಾಹೂಗಾಣಿಗ–ಇವು ಪ್ರಮುಖ ಒಳಪಂಗಡಗಳು. ಬಳ್ಳಾರಿ ಜಿಲ್ಲೆಯಲ್ಲಿ ಸಜ್ಜನಗಾಣಿಗರು, ಜೋತಿಪಣ ಗಾಣಿಗರು ಹೆಚ್ಚಾಗಿದ್ದಾರೆ. ಇವರೆಲ್ಲರೂ ಲಿಂಗಾಯತ ಗಾಣಿಗರು.

ಗಾಣಿಗ ಸಮುದಾಯದ ಕುಲಕಸುಬು ಗಾಣ ನಡೆಸಿ ಎಣ್ಣೆತೆಗೆದು ಮಾರಾಟ ಮಾಡುವ ವೃತ್ತಿಯಾದರೂ ಅದು ಇಂದು ಎಲ್ಲಾ ಗಾಣಿಗರಲ್ಲಿ ಇಲ್ಲ. ಕೈಗಾರೀಕರಣದ ಪ್ರಭಾವ ಮೂಲ ಕುಲಕಸುಬನ್ನು ನಂಬಿಕೊಂಡು ಹೊಟ್ಟೆ ಹೊರೆದುಕೊಳ್ಳುತ್ತಿದ್ದ ಈ ಜನಸಮುದಾಯಗಳು ದಾರಿ ಕಾಣದೆ ಪರಿತಪಿಸುವಂತಾಗಿದೆ. ಇದು ಆ ಸಮುದಾಯಗಳ ಆರ್ಥಿಕ ಹಿಂದುಳಿಕೆಗೆ ಪ್ರಮುಖ ಕಾರಣವಾಗಿದೆ. ಆಧುನಿಕ ಕೈಗಾರಿಕೆಗಳ ಉತ್ಪಾದನೆ, ವಿನಿಮಯ, ವಿತರಣೆಯಂತಹ ವ್ಯವಹಾರಿಕ ಭಾಷೆ ಹಾಗೂ ಆ ಮೂಲಕ ಲಾಭ ನಷ್ಟಗಳೇ ಪ್ರಮುಖವಾಗುತ್ತವೆ. ಆದರೆ ಸಾಂಪ್ರದಾಯಿಕ ವೃತ್ತಿಗಳನ್ನು ಅವಲಂಬಿಸಿ ಬದುಕುವ ಸಮುದಾಯಗಳಿಗೆ ವ್ಯವಹಾರದ ಹೊರತಾಗಿಯೂ ಸಾಂಸ್ಕೃತಿಕ ಅನನ್ಯತೆ ಮುಖ್ಯವಾಗುತ್ತದೆ. ಆದ್ದರಿಂದ ಕೈಗಾರಿಕರಣ ಆಧುನಿಕ ಬದುಕಿಗೆ ವೇಗವನ್ನು

ಆಕರ್ಷಣೆಯನ್ನು ತಂದದ್ದು ನಿಜವಾದರೂ ಗಾಣಿಗ ಸಮುದಾಯಗಳ ಆರ್ಥಿಕ ಜೀವನವನ್ನು ಅಸಹನೀಯವಾಗಿಸಿತು.

ಕೈಗಾರಿಕರಣದಿಂದ ಮೊಟ್ಟಮೊದಲಿಗೆ ಗಾಣಿಗರ ಸಾಂಪ್ರದಾಯಿಕ ವೃತ್ತಿಯ ಸಲಕರಣೆಗಳು ಮೂಲೆ ಸೇರಿದವು. ದೊಡ್ಡ ಹಾಗೂ ಚಿಕ್ಕ ಪುಟ್ಟ ನಗರಗಳಲ್ಲಿ ಆಧುನಿಕ ಮಾರುಕಟ್ಟೆ ಜಾರಿಗೆ ಬಂದು ವ್ಯವಹಾರವನ್ನು ಕೇಂದ್ರೀಕರಿಸಿದವು. ಗಾಣದಿಂದ ಎಣ್ಣೆ ತೆಗೆದು ಊರು ಊರಿಗೆ ಹೋಗಿ ಮಾರುತ್ತಿದ್ದ ಗಾಣಿಗರು ಅಧುನಿಕ ಮರುಕಟ್ಟೆಯಲ್ಲಿ ದೊರಕುವ ವಿವಿಧ ರೀತಿಯ ಎಣ್ಣೆ ಉತ್ಪನ್ನಗಳ ಎದುರು ಪೈಪೋಟಿ ನಡೆಸುವುದು ಅಸಾಧ್ಯವಾಗಿದೆ. ಬಂಡವಾಳಶಾಹಿಗಳು ಉತ್ಪನ್ನಗಳನ್ನು ನೇರವಾಗಿ ಖರೀದಿಸಿ ಮಾರುಕಟ್ಟೆಯನ್ನು ನಿರ್ವಹಿಸುತ್ತಿದ್ದಾರೆ. ಜನರು ತಮ್ಮ ಅಗತ್ಯಗಳನ್ನು ಹುಡುಕಿಕೊಂಡು ಅನೇಕ ಬಗೆಯ ಮಾದರಿಗಳಲ್ಲಿ ಇಷ್ಟವಾದದ್ದನ್ನು ಆಯ್ಕೆ ಮಾಡಲು ಅನುವು ಮಾಡಿಕೊಟ್ಟಿದೆ.

ಗಾಣಿಗರು ಕುಸುಬಿ, ಶೇಂಗಾ, ಎಳ್ಳು, ಸೂರ್ಯಕಾಂತಿ, ಸಾಸಿವೆ, ಹರಳು ಮುಂತಾದ ಎಣ್ಣೆ ಬೀಜಗಳನ್ನು ಹಾಕಿ ತಯಾರು ಮಾಡುತ್ತಿದ್ದ ಕೆಲಸ, ಉಂಟಾಗುವ ದೂಳು, ಶ್ರಮ ಇವೆಲ್ಲವುಗಳ ಬದಲಾಗಿ ಆಧುನಿಕ ಎಣ್ಣೆ ಉದ್ದಿಮೆಗಳು ತಯಾರಿಸುವ ಹಾಗೂ ವಿವಿಧ ಆಕರ್ಷಕ ಪಾಕೇಟ್‌ಗಳಲ್ಲಿ ಪೂರೈಸುವ ಎಣ್ಣೆಗೆ ಬೇಡಿಕೆ ಹೆಚ್ಚಾಗಿದೆ. ಇದರಿಂದ ಗಾಣಿಗರ ವೃತ್ತಿ ಪೈಪೋಟಿ ಮಾಡಲಾಗದೆ ಮೂಲೆ ಗುಂಪಾಗಿ ಗಾಣಿಗರು ಜೀವನೋಪಾಯಕ್ಕಾಗಿ ಇತರೆ ವೃತ್ತಿಗಳನ್ನು ಅವಲಂಬಿಸಬೇಕಾಗಿದೆ. ಇಂದು ಬಳ್ಳಾರಿ ಜಿಲ್ಲೆಯ ಗಾಣಿಗ ಸಮುದಾಯದವರು ಗಾಣಗಾರಿಕೆ ವೃತ್ತಿಯನ್ನು ಬಿಟ್ಟು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಮ್ಮ ಮೂಲ ಕಸುಬಿಗೆ ನೆಲೆ ಇಲ್ಲದೆ ಇತರೆ ವೃತ್ತಿಗಳ ಜ್ಞಾನವಿಲ್ಲದೆ ಕೂಲಿಕಾರರಾಗಿ ಕೆಲಸಮಾಡುತ್ತಿದ್ದಾರೆ. ಇಂದು ಇವರ ಆರ್ಥಿಕ ಸ್ಥಿತಿ ಹೀನಾಯ ಸ್ಥಿತಿಯಲ್ಲಿದೆ. ಇಂದು ಗಾಣಿಗ ಸಮುದಾಯ ಒಂದಿದೆ ಎಂದು ಗುರುತಿಸಲಾರದಷ್ಟು ಕ್ಷೀಣಗೊಂಡಿರುವ ಈ ಸಮುದಾಯ ಭವಿಷ್ಯತ್ತಿನಲ್ಲಿ ಸಂಪೂರ್ಣ ರೂಪಾಂತರ ಹೊಂದುವ ಸಂಭವವೇ ಹೆಚ್ಚು.

ಕಲ್ಲುಕುಟಿಗ ವೃತ್ತಿ

ಕಲ್ಲಿನಿಂದ ವೈವಿಧ್ಯಮಯವಾದ ಸಾಧನಗಳನ್ನು ತಯಾರಿಸುವ ಒಂದು ವರ್ಗವೇ ರೂಪುಗೊಂಡಿದೆ. ಈ ವರ್ಗವನ್ನು ಕಲ್ಲುಕುಟಿಗರು, ಬಂಡಿವಡ್ಡರು, ಕಲ್ಲು ವಡ್ಡರು, ಭೋವಿ ವಡ್ಡರು ಎಂದು ಕರೆಯಲಾಗುತ್ತದೆ. ಕಲ್ಲುಕುಟಿಗ ವೃತ್ತಿಯೂ ದೈಹಿಕ ಶ್ರಮಧಾರಿತವಾದುದು. ಹಿಂದಿನಿಂದಲೂ ಸಮಾಜದಲ್ಲಿನ ಒಂದು ವರ್ಗ ಕಲ್ಲುಕುಟಿಗತನವನ್ನು ಕುಲಕಸುಬಾಗಿ ವಂಶಪರಂಪರೆಯಾಗಿ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇಂದಿನ ಆಧುನಿಕ ಕಾಲದಲ್ಲಿಯೂ

ಅವರು ತಯಾರು ಮಾಡುವ ವಸ್ತುಗಳಿಗೆ ಮತ್ತು ಅವರ ಕೆಲಸಕ್ಕೆ ಹೆಚ್ಚಿಗೆ ಬೇಡಿಕೆ ಇರುವುದು ಕಂಡುಬರುತ್ತದೆ.

ಕಲ್ಲುಕುಟಿಗ ವೃತ್ತಿಯವರು ಒಂದು ರೀತಿಯಲ್ಲಿ ಅಲೆಮಾರಿಗಳು. ಇವರು ಒಂದೇ ಕಡೆ ನೆಲೆ ನಿಂತು ಕಾರ್ಯನಿರ್ವಹಿಸುವುದು ಕಡಿಮೆ. ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳಲ್ಲಿರುವ ಕಲ್ಲುಕುಟಿಗರು ಆಂಧ್ರ ಮತ್ತು ತಮಿಳುನಾಡಿನಿಂದ ಬಂದರಾಗಿದ್ದಾರೆ. ತುಂಗಭದ್ರಾ ಆಣೆಕಟ್ಟು ಕಟ್ಟುವಾಗ ಆ ಜನ ಈ ಪ್ರದೇಶಗಳಲ್ಲಿ ನೆಲೆಸಿ ವೃತ್ತಿ ಮುಂದುವರಿಸಿದ್ದಾರೆ. ಆದರೂ ಇಂದು ಕಲ್ಲು ಗಣಿಗಾರಿಕೆ ನಡೆಯುವ ಪ್ರದೇಶಗಳಲ್ಲಿ ನೆಲೆಗೊಂಡು ಆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಈ ವೃತ್ತಿಯವರು ಆರ್ಥಿಕ ಹಾಗೂ ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ವರ್ಗದವರಾಗಿದ್ದಾರೆ.

ಕಲ್ಲುಕುಟಿಗರು ಹಲವಾರು ಗೃಹೋಪಯೋಗಿ ಸಲಕರಣೆಗಳನ್ನು ತಯಾರಿಸುತ್ತಾರೆ. ಮುಖ್ಯವಾಗಿ ಬೀಸುವ ಕಲ್ಲು, ರುಬ್ಬುವ ಕಲ್ಲು, ಒರಳು, ಗುಂಡುಕಲ್ಲು, ಕಲ್ಲಿನ ಬಾನಿ, ಅಡಿಕೆ ಎಲೆ ಕುಟ್ಟುವ ಕಲ್ಲು, ಜಡಬದ ಕಲ್ಲು, ಕಂದದ ಕಲ್ಲು ಇತ್ಯಾದಿ. ಇವುಗಳ ಜೊತೆಗೆ ಸಪಾಟಾದ ಬಂಡೆಗಳು, ಸೈಜುಗಲ್ಲುಗಳು, ಸೈಜುಗಲ್ಲುಗಳಿಗೆ ನುಣುಪು ಮಾಡುವ ಕಾರ್ಯ ಮಾಡುವರು, ಕಲ್ಲುಕುಟಿಗರು ಕಲ್ಲುಗುಣಿಗಳಲ್ಲಿ ಗೃಹ ನಿರ್ಮಾಣಕ್ಕೆ ಬೇಕಾದ ವಿವಿಧ ಆಕಾರ, ಗಾತ್ರದ ಕಲ್ಲು ಮತ್ತು ಬಂಡೆಗಳನ್ನು ಸೀಳಿ, ಸಮತಟ್ಟು ಮಾಡಿಕೊಡುತ್ತಾರೆ. ಬಂಡೆ ಸೀಳುವುದು ಕೂಡ ಒಂದು ವಿಶಿಷ್ಟ ಕಲೆ. ಇದಕ್ಕೆ ತಮ್ಮದೇ ಆದ ಪಾರಂಪರಿಕ ಜ್ಞಾನವನ್ನು ಉಪಯೋಗಿಸುತ್ತಾರೆ. ಉಪಯೋಗಕ್ಕೆ ತಕ್ಕಹಾಗೆ ಕಲ್ಲನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಂದ ಚೆಂದದ ಮನೆಕಟ್ಟಲು ವಿವಿಧ ಆಕಾರದ, ಕಲ್ಲು ಬಂಡೆಗಳನ್ನು ಪೂರೈಸುತ್ತಾರೆ. ಕಲ್ಲುಕುಟಿಗರ ಹೆಣ್ಣು ಮಕ್ಕಳು ಹಾಗೂ ಮಕ್ಕಳು ರಸ್ತೆ ನಿರ್ಮಾಣಕ್ಕೆ ಬೇಕಾದ ಜಲ್ಲಿಕಲ್ಲುಗಳನ್ನು ಕುಟ್ಟಿ ತೆಗೆಯುತ್ತಾರೆ. ಯಂತ್ರೋಪಕರಣಗಳು ಬರುವುದಕ್ಕೂ ಮುಂಚೆ ಕಲ್ಲು ಕುಟಿಗರೆ ಕಲ್ಲುಗಳನ್ನು ಪುಡಿಮಾಡುತ್ತಿದ್ದರು. ಇಂದು ಕಲ್ಲು ಕುಟಿಗರ ಕೆಲಸ ಕಾರ್ಯಗಳನ್ನು ಆಧುನಿಕ ಯಂತ್ರೋಪಕರಣಗಳು ಮಾಡುತ್ತವೆ. ಇದರಿಂದಾಗಿ ಈ ವರ್ಗದ ಜನರಿಗೆ ಕೆಲಸವಿಲ್ಲದೆ ನಿರುದ್ಯೋಗಿಗಳಾಗುವ ಸ್ಥಿತಿ ಒದಗಿಬಂದಿದೆ.

ಕಲ್ಲುಕುಟಿಗರು ತಮ್ಮ ಕೆಲಸಕಾರ್ಯಗಳಲ್ಲಿ ಬಳಸುವ ಪ್ರಮುಖ ಉಪಕರಣಗಳೆಂದರೆ ದೊಡ್ಡಸುತ್ತಿಗೆ(ಗನೆ), ಸಣ್ಣಸುತ್ತಿಗೆ(ಗಣ), ಸುತ್ತಿಗೆ ಚಾಣ(ಕಲ್ಲನ್ನು ಆಕಾರಕ್ಕೆ ತರಲು), ಮುಳ್ಳು ಹಿಕ್ಕಳ(ಕಾದ ಚಾಣ ತೆಗೆಯಲು), ಕಪ್ಪು ಹಿಕ್ಕಳ(ಚಾಣ ಬಡಿಯುವಾಗ ಹಿಡಿಯಲು), ಪಂಕ(ಚಾಣ ಕಾಸಲು), ಹಾರೆ(ಕಲ್ಲು ಎಬ್ಬಲು), ಚಿಚಕೆ(ಕಲ್ಲು ತುಂಡು ಮಾಡಲು ಸಹಕರಿಸುವ), ಸೂರಿ, ಗುದ್ದಲಿ, ಪಿಕಾಸಿ ಹಾಗೂ ಕೆಲವೊಂದು ಸಣ್ಣ ಪುಟ್ಟ ಯಂತ್ರ ಸಾಮಗ್ರಿಗಳನ್ನು ಬಳಸುತ್ತಾರೆ.

ಇತ್ತೀಚೆಗೆ ಕಲ್ಲುಕುಟಿಗರಿಗೆ ಬೇಕಾಗುವ ಕಲ್ಲು ಕೊರೆಯುವ, ತುಂಡುಮಾಡುವ, ನುಣುಪು ಮಾಡುವ, ಇತ್ಯಾದಿ ಯಂತ್ರಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಕಲ್ಲುಕುಟಿಗರು ಸಿದ್ಧಪಡಿಸುವ ಪ್ರಮುಖ ವಸ್ತುಗಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

ಬೀಸುವ ಕಲ್ಲು: ಬೀಸುವ ಕಲ್ಲು ಹಳ್ಳಿಗರ ಬದುಕಿನಲ್ಲಿ ಮಹತ್ವದ ಪಾತ್ರವಹಿಸಿದೆ. ರಾಗಿ, ಜೋಳ, ಗೋಧಿ ಮುಂತಾದ ಧಾನ್ಯಗಳನ್ನು ಹಿಟ್ಟು ಮಾಡಲು ಈ ಸಾಧನವನ್ನು ಬಳಸುವರು. ಇದು ಪರಂಪರಾಗತವಾಗಿ ಬಂದಂತಹ ಸಾಧನ. ಇದಕ್ಕೆ ನಿರ್ದಿಷ್ಟ ಚರಿತ್ರೆಯ ದಾಖಲೆ ಇಲ್ಲ. ಅಡುಗೆಯಲ್ಲಿ ನಿತ್ಯ ಬಳಕೆಯಾಗುವ ದವಸ-ಧಾನ್ಯ ಮತ್ತು ಹಿಟ್ಟು-ನುಚ್ಚುಗಳನ್ನು ಪಡೆಯಲು ಉಪಯೋಗಿಸುವ ಸಾಧನ. ಜೋಳ, ರಾಗಿ, ಗೋಧಿ, ಕಡಲೆ, ಅಕ್ಕಿ, ಪುಟಾಣಿ, ಇತ್ಯಾದಿಗಳ ಸಣ್ಣ ಹಿಟ್ಟು ಮತ್ತು ನುಚ್ಚುಗಳನ್ನು ಇದರಿಂದ ಸಿದ್ಧಪಡಿಸಲಾಗುತ್ತದೆ. ಹೆಸರು, ತೊಗರಿ, ಮಡಕೆಕಾಳು, ಅಲಸಂದಿ ಈ ಕಾಳುಗಳ ಬೆಳೆಗಳನ್ನು ಈ ಬೀಸುವ ಕಲ್ಲಿನಿಂದ ತಯಾರಿಸುವರು. ಹಲವು ಮತ ಧರ್ಮದ ಜನರು ಮದುವೆಯಂತಹ ಮಂಗಳ ಕಾರ್ಯಗಳಲ್ಲಿ ಬೀಸುವ ಕಲ್ಲಿನ ಪೂಜೆಯನ್ನು ಮಾಡುತ್ತಾರೆ. ಜನಪದರಿಗೆ ಬೀಸುವ ಕಲ್ಲಿನ ಕುರಿತು ವಿಶೇಷ ಭಕ್ತಿ ಇದೆ. ಬೀಸುವ ಸಂದರ್ಭದಲ್ಲಿ ಅನೇಕ ಜಾನಪದ ಹಾಡುಗಳು ಸೃಷ್ಟಿಗೊಂಡು ಅದ್ಭುತ ಜಾನಪದ ಸಾಹಿತ್ಯದ ನಿರ್ಮಾಣಕ್ಕೆ ಬೀಸುವ ಕಲ್ಲು ಸಹಕಾರಿಯಾಗಿದೆ. ಜನಸಾಮಾನ್ಯರು ಇದಕ್ಕೆ ದೈವೀ ಸ್ವರೂಪ ನೀಡಿದ್ದಾರೆ.

ಈ ಬೀಸುವ ಕಲ್ಲು ರಚನೆಯಾಗುವುದು ಕಲ್ಲಿನಿಂದ. ಅದೂ ವಿಶಿಷ್ಟವಾದ ಗುರುಸಾಣಿ ಕಲ್ಲಿನಿಂದ. ಕಲ್ಲುಕುಟಿಗರು ಉತ್ತಮವಾದ ಕಲ್ಲನ್ನು ಆಯ್ಕೆ ಮಾಡಿಕೊಂಡು ಕಬ್ಬಿಣದ ಚಾಣದಿಂದ ಕಲ್ಲನ್ನು ಕಟೆದು ವಿಭಿನ್ನ ಗಾತ್ರದ ಬೀಸುಕಲ್ಲುಗಳನ್ನು ತಯಾರಿಸುತ್ತಾರೆ. ಬಹಳ ದಿನದ ಉಪಯೋಗದಿಂದ ಬೀಸುವ ಕಲ್ಲು ಸವೆದರೆ ಅದನ್ನು ಕಲ್ಲು ಮುಳ್ಳಾಡಿಸಿ ಮತ್ತೆ ಉಪಯೋಗಕ್ಕೆ ಸಿದ್ಧಪಡಿಸಲಾಗುತ್ತದೆ.

ಬೀಸುವ ಕಲ್ಲುಗಳಲ್ಲಿ ಮುಖ್ಯವಾಗಿ ಎರಡು ಭಾಗಗಳಿರುತ್ತವೆ. ಕಲ್ಲಿನ ಕೆಳಭಾಗ ಚಲನರಹಿತವಾಗಿದ್ದು, ಮೇಲ್ಭೈಭಾಗ ಕಾಳನ್ನು ನುರಿಸುವುದಕ್ಕೆ ಒರಟಾದ ರೂಪದಲ್ಲಿರುತ್ತದೆ. ಮೇಲ್ಭಾಗದ ಕಲ್ಲು ಚಲನೆಯುಕ್ತವಾಗಿರುತ್ತದೆ. ಕೆಳಭಾಗದ ಕಲ್ಲನ್ನು ಕೆಲವು ಸಂದರ್ಭಗಳಲ್ಲಿ ಅಲ್ಲಾಡದಂತೆ ನೆಲದಲ್ಲಿ ಹೂಳಲಾಗುತ್ತದೆ. ಮೇಲ್ಭಾಗದ ಕಲ್ಲು ತೆಗೆಯಲು ಬರುತ್ತದೆ. ಕಲ್ಲಿನ ಮಧ್ಯ ಭಾಗದಲ್ಲಿ ಆಯಾ ಕಲ್ಲುಗಳ ಗಾತ್ರಕ್ಕೆ ಅನುಸಾರವಾಗಿ ರಂಧ್ರವನ್ನು ಮಾಡಿ ಕಟ್ಟಿಗೆ ಅಥವಾ ಚಿಕ್ಕ ಮೊಳೆಯನ್ನು ಕೂಡಿಸಿರುತ್ತದೆ. ಮೇಲ್ಭಾಗದ ಕಲ್ಲಿನ ಮಧ್ಯ ಭಾಗದಲ್ಲಿ ಕಾಳುಗಳನ್ನು ಹಾಕಲು ಎರಡು ಇಂಚು ವ್ಯಾಸದ ದುಂಡಗಿನ ರಂಧ್ರವಿರುತ್ತದೆ. ಮೇಲಿನ ಕಲ್ಲಿನ ಕೊನೆಯ ಭಾಗದಲ್ಲಿ ಬೀಸುವುದಕ್ಕಾಗಿ ಹಿಡಿಯುವ ಗೂಟವನ್ನು ಹಾಕಲಾಗಿರುತ್ತದೆ. ಗೂಟವನ್ನು ಎಳೆದಾಗ

ಬೀಸುವ ಕಲ್ಲಿನ ಮೇಲಿನ ಭಾಗದ ಕಲ್ಲು ಚಕ್ರದಂತೆ ತಿರುಗುತ್ತದೆ. ಎರಡು ಭಾಗಗಳ ಕಲ್ಲಿನ ಮಧ್ಯೆ ಘರ್ಷಣೆಗೆ ಸಿಲುಕಿದ ಕಾಳುಗಳು ಹಿಟ್ಟು ಇಲ್ಲದೆ ನುಚ್ಚಾಗಿ ಕಲ್ಲಿನಿಂದ ಹೊರಗೆ ಬಂದು ಬೀಳುತ್ತದೆ.

ಬೀಸುವ ಕಲ್ಲಿನ ರಚನಾ ವಿಧಾನದ ತಂತ್ರಜ್ಞಾನದಿಂದ ಅನೇಕ ಕುಟುಂಬಗಳು ಬದುಕುತ್ತಿದ್ದವು. ಶ್ರೀಮಂತರ ಮನೆಯಲ್ಲಿ ಕೂಲಿ ಪಡೆದು ಬೀಸುವ ಪದ್ಧತಿ ಅನೇಕರಿಗೆ ವೃತ್ತಿಯೂ ಆಗಿತ್ತು. ಇಂತಹ ಅತ್ಯಮೂಲ್ಯ ಸಾಧನವನ್ನು ತಯಾರುಮಾಡುವವರು ಕಲ್ಲುಕುಟಿಗರು.

ಬೀಸುವ ಕಲ್ಲಿನ ಬಗ್ಗೆ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಮಂಗರಸನ ನಿಘಂಟಿನಲ್ಲಿ 'ಬೀಸುವ ಕಲ್ಲಕ್ಕುಂ' ಎಂದಿದೆ. ಇದನ್ನೇ 'ಸಂಘಟಂನಿಕ್ಕು' ಎಂದು ಸಂಸ್ಕೃತದಲ್ಲಿ ಕರೆಯಲಾಗುತ್ತಿದೆ.[೧೦೦]

ಕಲ್ಲುಕುಟಿಗರು ವಿವಿಧ ಗಾತ್ರ ಹಾಗೂ ಆಕಾರದ ಬೀಸುವ ಕಲ್ಲುಗಳನ್ನು ಜಾಣ್ಮೆಯಿಂದ ತಯಾರು ಮಾಡುತ್ತಾರೆ. ಕೆಲವು ವೃತ್ತಾಕಾರವಾಗಿಯೂ, ಕೆಲವು ಬಾದಾಮಿಯಾಕಾರವಾಗಿಯೂ, ಕೆಲವು ಕೊಡದ ಆಕಾರವನ್ನು ಹೊಂದಿದ ಬಿಸುವ ಕಲ್ಲುಗಳನ್ನು ತಯಾರಿಸುತ್ತಾರೆ. ಈ ಕಲ್ಲುಗಳ ಮೇಲೆ ವಿವಿಧ ಗೆರೆಗಳನ್ನು ಒಳಗೊಂಡ ರೇಖಾವಿನ್ಯಾಸಗಳನ್ನು ರಚಿಸಲಾಗುತ್ತದೆ.

ಅತ್ಯಂತ ದೊಡ್ಡ ಪ್ರಮಾಣದ ಬೀಸುವ ಕಲ್ಲುಗಳು ಚಿತ್ರದುರ್ಗದ ಬೆಟ್ಟದ ಕೋಟೆಯ ಆವರಣದಲ್ಲೂ, ಮುರುಘರಾಜೇಂದ್ರ ಬೃಹನ್ಮಠದಲ್ಲೂ, ಮೈಸೂರಿನ ಜಗನ್ಮೋಹನ ಚಿತ್ರಶಾಲೆಯ ಬಯಲು ಆವರಣದಲ್ಲಿ ಬೆಳಗಾಂ ಜಿಲ್ಲೆಯ ಅಂಕಲಸ್ವಾಮಿ ಮಠದಲ್ಲೂ ಇವೆ.[೧೦೧]

ರುಬ್ಬುವ ಗುಂಡು: ಇದೊಂದು ಪಾರಂಪರಿಕ ಸಾಧನ. ಮುಖ್ಯವಾಗಿ ರುಬ್ಬುವ ಕಾರ್ಯಕ್ಕೆ ಉಪಯೋಗಿಸುವುದರಿಂದ ರುಬ್ಬುಗುಂಡು ಎಂದು ಕರೆಯಲಾಗುತ್ತದೆ. ಇಂತಹ ಸಾಧನವನ್ನು ಕಲ್ಲುಕುಟಿಗರು ವಿವಿಧ ಆಕಾರ ಹಾಗೂ ಗಾತ್ರದಲ್ಲಿ ರಚಿಸಿಕೊಡುತ್ತಾರೆ. ದವಸಧಾನ್ಯ ಕಾಳುಗಳನ್ನು ಈ ಗುಂಡಿನ ಕೆಳಗೆ ಹಾಕಿ ರುಬ್ಬಿದರೆ ವಸ್ತುಗಳು ಪುಡಿಯಾಗಿ ಲಭ್ಯವಾಗುತ್ತವೆ. ದಿನನಿತ್ಯದ ಆಹಾರ ಪದಾರ್ಥಗಳನ್ನು ರುಬ್ಬಿಕೊಳ್ಳಲು ಇದು ಉಪಯುಕ್ತ ಸಾಧನ. ಜನಪದ ಜೀವಿಗಳ ಬಲ ಪ್ರದರ್ಶನದ ಆಟಗಳಲ್ಲಿ ರುಬ್ಬುಗುಂಡು ಒಂದಾಗಿತ್ತು.

ಗಟ್ಟಿಯಾದ ಕರಿ ಮತ್ತು ಬಿಳಿ ಕಲ್ಲುಗಳಿಂದ ರುಬ್ಬುಗುಂಡುಗಳನ್ನು ಕಲ್ಲುಕುಟಿಗರು ತಯಾರಿಸುತ್ತಾರೆ. ಒರಳಲ್ಲಿ ಹಾಕಿ ಕುಟ್ಟುವ ಉದ್ದನೆಯ ಚಿಕ್ಕಗುಂಡು ಒರಳು ಕಲ್ಲಾದರೆ, ದೊಡ್ಡ ದೊಡ್ಡ ಅಡುಗೆಯ ಸಂದರ್ಭದಲ್ಲಿ ರುಬ್ಬಲು ಉಪಯೋಗಿಸುವ ಗುಂಡುಗಳು ರುಬ್ಬು ಗುಂಡುಗಳು.ಇವುಗಳಲ್ಲಿ ವಿವಿಧ ಭಾರದ ಗುಂಡುಗಳನ್ನು ತಯಾರಿಸುವುದನ್ನು ನೋಡಬಹುದು. ದೊಡ್ಡ ಗುಂಡುಗಳ ತಳದಲ್ಲಿ ಸಲಚಪ್ಪಟೆ ಆಕಾರವನ್ನು ಮಾಡಿ ಗುಂಡುಗಳ ಮೇಲೆ ಬುಗುರಿಯ ತಲೆಯ ಆಕಾರದಲ್ಲಿ ಒಂದು ಗೂಟವನ್ನು ಒಡೆಯಲು ಚಿಕ್ಕ ರಂಧ್ರವನ್ನು ಬಿಡುತ್ತಾರೆ. ಇಂತಹ ಗುಂಡುಗಳನ್ನು ಹಿಡಿಯಾಗಿ ಒಂದೇ ಕಲ್ಲಿನಿಂದ ರಚಿಸುತ್ತಾರೆ. ಅಡುಗೆಯಲ್ಲಿ ಹೂರಣ, ಚಟ್ನಿ, ಇತ್ಯಾದಿಗಳನ್ನು ರುಬ್ಬಲು ಈ ಗುಂಡುಗಳನ್ನು ಉಪಯೋಗಿಸಲಾಗುವುದು.

ರುಬ್ಬು ಗುಂಡುಗಳನ್ನು ತುಳು ಜನರು 'ಕಡೆವುನಕಲ್ಲು' ಎಂದು, ಮರಾಠಿಗರು 'ಖಲಬತ್ತಾ' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಸಾಮಾನ್ಯ ಕುಟುಂಬಗಳಿಂದ ಹಿಡಿದು ಶ್ರೀಮಂತ ಕುಟುಂಬಗಳ ಮನೆಗಳಲ್ಲಿ ಅತ್ಯಂತ ಅವಶ್ಯಕವಾಗಿ ಕಾಣಬಹುದಾದ ಸಾಧನವಿದೆ. ಇದರ ರಚನಾ ವಿನ್ಯಾಸ ವಿಶಿಷ್ಟವಾದುದು.

ಒರಳು: ಒರಳು, ಒಳ್ಳು, ಒಳಕಲ್ಲು ಎಂದು ಕರೆಯಿಸಿಕೊಳ್ಳುವ ಈ ಒರಳು ಅಡುಗೆ ಮನೆಯ ನಿತ್ಯೋಪಯೋಗಿ ಸಾಧನವಾಗಿರುವುದರೊಂದಿಗೆ ಧಾರ್ಮಿಕ ಮಂಗಳ ಕಾರ್ಯಗಳಲ್ಲೂ ಬಳಕೆಯಲ್ಲಿದೆ. ಕೆಲವು ಜನಾಂಗದವರು ಒರಳು ಕಲ್ಲು ಪೂಜೆ ಮಾಡುವ ವಿಧಿ ಇಂದಿಗೂ ಪ್ರಚಲಿತದಲ್ಲಿದೆ. ಒರಳಿಗೆ ದೈವಿ ಸ್ಥಾನವನ್ನು ನೀಡಲಾಗಿದೆ. ಇಂತಹ ಸಾಧನವನ್ನು ಕಲ್ಲುಕುಟಿಗ ವೃತ್ತಿಯವರು ವಿಶಿಷ್ಟ ರೀತಿಯಲ್ಲಿ ಏಕ ಶಿಲೆಯಿಂದ ತಯಾರು ಮಾಡಿಕೊಡುತ್ತಾರೆ. ಕಲ್ಲುಕುಟಿಗ ಅಲೆಮಾರಿ ಜನಾಂಗ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಒರಳು ಕಲ್ಲುಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಸುಮಾರು ಎರಡು ಅಡಿ ಅಗಲದ ಒಂದರಿಂದ ಒಂದೂವರೆ ಅಡಿ ದಪ್ಪದ ಏಕಶಿಲೆಯಲ್ಲಿ ಒರಳನ್ನು ಕಡೆದು ತಯಾರಿಸುತ್ತಾರೆ. ಈ ಒರಳಿನ ಕಲ್ಲು ತುಂಬಾ ಗಟ್ಟಿಯಾಗಿರುತ್ತದೆ. ಕಬ್ಬಿಣದ ಹಾರೆಯಿಂದ ಕುಟ್ಟಿದಾಗಲೂ ಪುಡಿಯಾಗದಂತಹ ಗಟ್ಟಿ ಕಲ್ಲನ್ನು ಉಪಯೋಗಿಸುತ್ತಾರೆ. ಇಂತಹ ಕಲ್ಲಿನ ಮಧ್ಯಭಾಗದಲ್ಲಿ ೩ ರಿಂದ ೬ ಇಂಚುಗಳ ಆಳದ ೬ ರಿಂದ ೮ ಇಂಚುಗಳ ವೃತ್ತಾಕಾರದ ತಗ್ಗನ್ನು ಮಾಡುತ್ತಾರೆ. ಈ ತಗ್ಗಿನಲ್ಲಿ ಕುಟ್ಟಬೇಕಾದ ವಸ್ತುಗಳನ್ನು ಹಾಕಿ ಹಾರೆಕೋಲು ಅಥವಾ ಒನಕೆಗಳಿಂದ ಕುಟ್ಟಿದರೆ ಆಹಾರ ಪದಾರ್ಥಗಳು ಹಸನಾಗುತ್ತವೆ. ಕಲ್ಲಿನ ಮೇಲು ಭಾಗವನ್ನು ಕಬ್ಬಿಣದ ಚಾಣದಿಂದ ಮುಳ್ಳಾಡಿಸಿ ಬಿರುಸಾಗಿರುವಂತೆ ಮಾಡುತ್ತಾರೆ. ರಾಜ ಮಹಾರಾಜರುಗಳು ಮತ್ತು ಪೌರಾಣಿಕ ಕಾಲದಲ್ಲಿ ನೆಲದಲ್ಲಿ ಹೂಳದೆ ಹೊರಗೆ ನೆಲದ ಮೇಲೆ ಕಟ್ಟುವ ಎತ್ತರದ ಒರಳು ಕಲ್ಲುಗಳ ಬಳಕೆಯ ಬಗ್ಗೆ ಇತಿಹಾಸ ಲಭ್ಯವಿದೆ. ಕೃಷಿಕರ ಮನೆಗಳಲ್ಲಿ ಒರಳನ್ನು ವಿವಿಧ ಕಾರ್ಯ ಚಟುವಟಿಕೆಗಳಲ್ಲಿ ನಿರಂತರವಾಗಿ ಉಪಯೋಗಿಸುವುದನ್ನು ಈಗಲೂ ಹಳ್ಳಿಗಳಲ್ಲಿ ಕಾಣಬಹುದು. ಆದರೆ ಇಂದು ಮಿಕ್ಸಿ, ಗ್ರೈಂಡರ್ ಗಿರಣಿಗಳಂತಹ ಅಧುನಿಕ ಸೌಲಭ್ಯಗಳಿಂದ ಒರಳುಗಳ ಬಳಕೆ ಕಡಿಮೆಯಾದರೂ ಪ್ರತಿ ಮನೆಯಲ್ಲಿ ಇಂದಿಗೂ ಒರಳು ಇದ್ದೇ ಇರುತ್ತದೆ. ಅಂದರೆ ಇದರ ಉಪಯೋಗದ ಪ್ರಮಾಣ ಕಡಿಮೆಯಾದರೂ ಪ್ರತಿಯೊಂದು ಮನೆಯವರು ಕಲ್ಲುಕುಟಿಗರಿಂದ ಒರಳು ತಯಾರಿಸಿಕೊಂಡು ಮನೆಯ ಯಾವುದಾದರೂ ಒಂದು ಮೂಲೆಯಲ್ಲಿ ಸ್ಥಾಪಿಸುವುದನ್ನು ಕಂಡರೆ ಒರಳು ತಯಾರಿಸುವವರಿಗೆ ಬೇಡಿಕೆ ಇದ್ದೇ ಇದೆ ಎಂಬುದು ಸಾಬಿತಾಗುತ್ತದೆ.

ರೊಟ್ಟಿ ಬಂಡಿ(ಕಲ್ಲು): ಇದರ ಹೆಸರೇ ಹೇಳುವಂತೆ ರೊಟ್ಟಿ ಮಾಡಲು ಉಪಯೋಗಿಸುವ ಹಾಸುಗಲ್ಲನ್ನು ರೊಟ್ಟಿ ಬಂಡೆಯೆಂದು ಕರೆಯಲಾಗುತ್ತದೆ. ಉತ್ತರ ಕರ್ನಾಟಕದ ಪ್ರತಿಯೊಂದು

ಮನೆಯಲ್ಲಿ ಒಲೆಯಿರುವ ಮುಂದಿನ ಸ್ಥಳದಲ್ಲಿ ಹಾಸಲಾಗಿರುತ್ತದೆ. ಇದು ನುಣುಪಾಗಿರುವುದರಿಂದ ರೊಟ್ಟಿ ಬಡಿಯಲು ಅನುಕೂಲ. ಇಂತಹ ನುಣುಪಾದ ರೊಟ್ಟಿ ಬಂಡಿಯನ್ನು ಕಲ್ಲುಕುಟಿಗರು ತಯಾರಿಸಿಕೊಡುತ್ತಾರೆ

ಕಲ್ಲಿನ ದೋಣಿ: ಕೃಷಿಕರ ಮನೆಯಲ್ಲಿ ಸಾಮಾನ್ಯವಾಗಿ ಕಾಣಬಹುದಾದ ಸಾಧನವಿದು. ಇದನ್ನು ದನಕರುಗಳು ನೀರು ಕುಡಿಯಲು ನೀರು ಸಂಗ್ರಹಿಸುವ ತೊಟ್ಟಿಯಂತಿರುತ್ತದೆ. ಇಂತಹ ದೋಣಿಯನ್ನು ಏಕಶಿಲೆಯಿಂದ ತಯಾರಿಸುತ್ತಾರೆ. ನಾಲ್ಕು ಅಥವಾ ಐದು ಅಡಿ ಉದ್ದದ ಮೂರು ಅಡಿ ಅಗಲದ ಏಕಶಿಲೆಯಲ್ಲಿ ಮಧ್ಯೆ ತಗ್ಗು ಕೊರೆಯದಿರುವುದು. ಕಲ್ಲುಕುಟಿಗರು ನೀರಿನ ದೋಣಿಯ ಸುತ್ತ ವಿವಿಧ ಚಿತ್ತಾರಗಳನ್ನು ಬಿಡಿಸುತ್ತಾರೆ. ಹಂಪೆಯ ಅರಮನೆ ಆವರಣದಲ್ಲಿ ಸುಮಾರು ೪೦ ಅಡಿ ಉದ್ದ ಹಾಗೂ ಮೂರು ಅಡಿ ಅಗಲದ ಮತ್ತು ಎರಡು ಅಡಿ ಆಳವಿರುವ ಏಕಶಿಲಾ ದೋಣಿಯನ್ನು ಕಾಣಬಹುದು. ಚಿತ್ರದುರ್ಗದ ಕೋಟೆಯಲ್ಲೂ ಒಂದು ಕಲ್ಲಿನ ಬೃಹತ್ ತೊಟ್ಟಿಯನ್ನು ಕಾಣಬಹುದು. ಇದರ ಕೆತ್ತನೆ ಶಿಲ್ಪಿಯ ಜಾಣ್ಮೆಯನ್ನು ಕಲಾ ಕೌಶಲ್ಯತೆಯನ್ನು ಪ್ರತಿಬಿಂಬಿಸುತ್ತದೆ.

ಈ ಪ್ರಮುಖವಾದ ವಸ್ತುಗಳ ಜೊತೆಗೆ ಕೃಷಿಕರಿಗೆ ಮನೆಗಳಿಗೆ ಉಪಯುಕ್ತವಾದ ಕಲ್ಲಿನ ಪದಾರ್ಥಗಳನ್ನು ಕಲ್ಲುಕುಟಿಗರು ತಯಾರಿಸಿಕೊಡುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಮನೆಕಟ್ಟಲು ಬೇಕಾಗಿರುವ ವಿವಿಧ ಗಾತ್ರದ ಸೈಜುಗಲ್ಲುಗಳನ್ನು ಕಡೆದು ನುಣುಪಾಗಿಸಿ ಕೊಡುತ್ತಾರೆ. ವಿವಿಧ ಗಾತ್ರ ಹಾಗೂ ಉದ್ದದ ಬಂಡೆಗಳನ್ನು ಕಲ್ಲುಗಣಿಗಳಲ್ಲಿ ಎಬ್ಬಿಸಿ ಕೊಡುತ್ತಾರೆ. ಗ್ರಾನೈಟ್ ಉದ್ಯಮ ಅಭಿವೃದ್ಧಿಯಾದಂತೆ ಇಂದು ಕುಶಲ ಕೆಲಸಗಾರರಾದ ಕಲ್ಲುಕುಟಿಗರು ಕಲ್ಲು ಗಣಿಗಳಲ್ಲಿ ದಿನಗೂಲಿ ಕೆಲಸಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೆಲವರು ಮನೆ ಕಟ್ಟುವ, ಗಾರೆ ಕೆಲಸ ಮಾಡುವ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು.

ಕಲ್ಲುಕುಟಿಗರ ಅಥವಾ ಕಲ್ಲು ವಡ್ಡರ ಕೆಲಸ ಕಾರ್ಯಗಳಲ್ಲಿ ಹಲವಾರು ಅಡ್ಡಿ ಆತಂಕಗಳು ಉಂಟಾಗುತ್ತವೆ. ಸರ್ಕಾರದ ಒಪ್ಪಿಗೆಯಿಲ್ಲದೆ ಕಲ್ಲುಗುಣಿಗಳಲ್ಲಿ ಕಲ್ಲು ಎಬ್ಬಲು ಅವಕಾಶವಿರುವುದಿಲ್ಲ. ಸರ್ಕಾರದಿಂದ ಅನುಮತಿ ಪಡೆದು ಈ ಕಾರ್ಯ ಮಾಡುವ ಶಕ್ತಿ ಇವರಿಗಿರುವುದಿಲ್ಲ. ಕಲ್ಲುಕುಟಿಗ ವೃತ್ತಿ ದೈಹಿಕ ಶ್ರಮದ ಕೆಲಸ. ಕಲ್ಲು ಒಡೆಯುವಾಗ ದೂಳು, ಚಕ್ಕೆ ಇತ್ಯಾದಿಗಳು ದೇಹದ ವಿವಿಧ ಭಾಗಗಳಿಗೆ ಹಾನಿಯುಂಟುಮಾಡುವ ಸಾಧ್ಯತೆಗಳು ಹೆಚ್ಚು ಕಲ್ಲು ಎಬ್ಬುವಾಗ, ಕಲ್ಲು ಕಡೆಯುವಾಗ, ಸಾಗಿಸುವಾಗ ಕೈಕಾಲು ಮುರಿಯುವ ಸಾಧ್ಯತೆಯುಂಟು. ಗ್ರಾನೈಟ್ ಗಣಿ ಉದ್ದಿಮೆದಾರರ ಪ್ರಭಾವದಿಂದಾಗಿ ಇವರಿಗೆ ತಮಗೆ ಬೇಕಾದ ಪ್ರಮಾಣದ ಕಲ್ಲು ಲಭ್ಯವಾಗುವುದಿಲ್ಲ. ಅವರು ತಯಾರಿಸಿದ ವಸ್ತುಗಳಿಗೆ ಬೇಡಿಕೆ ಪ್ರಮಾಣ ನಿರಂತರವಾಗಿರುವುದಿಲ್ಲ. ಈ ಕೆಲಸ ವರ್ಷದ

ಎಲ್ಲಾ ದಿನಗಳಲ್ಲಿ ಇರುವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಕಲ್ಲುಕುಟಿಗರು ಎದುರಿಸುತ್ತಿದ್ದಾರೆ. ಕಲ್ಲು ಕುಟಿಗರಿಗೆ ಇಲ್ಲಿ ಔಪಚಾರಿಕವಾಗಿ ಯಾವುದೇ ತರಬೇತಿಯ ಕ್ರಮ ಇರುವುದಿಲ್ಲ. ತಂದೆ-ತಾಯಿಗಳ ಕಾರ್ಯವನ್ನು ನೋಡಿಯೇ ಮಕ್ಕಳು ಕಲಿಯುವರು.

ಕಲ್ಲು ಕುಟಿಗ ವೃತ್ತಿ ಈ ಆಧುನಿಕ ಯುಗದಲ್ಲಿ ಉಳಿದಿರುವುದೇ ಒಂದು ವಿಶೇಷ ಇವರು ತಯಾರಿಸುವ ವಸ್ತುಗಳು ಮಿಕ್ಸಿ, ಗ್ರೈಂಡರುಗಳಂತಹ ಆಧುನಿಕ ಯಂತ್ರಗಳ ಹಾವಳಿಯಿಂದ ಮಾಯವಾಗತೊಡಗಿವೆ. ಈ ಯಂತ್ರಗಳು ಕಲ್ಲು ಕುಟಿಗರ ಮನೆಯಲ್ಲಿ ಬಂದು ಸೇರಿವೆ. ಮೊದಲು ಈ ವೃತ್ತಿಯವರಲ್ಲಿಗೆ ಬಂದು ಗ್ರಾಹಕರು ಅವರ ವಸ್ತುಗಳನ್ನು ಕೊಳ್ಳುತ್ತಿದ್ದರು. ಆದರೆ ಇಂದು ಕಲ್ಲುಕುಟಿಗರು ಮನೆಮನೆಗೆ ಹಾಗೂ ಊರೂರಿಗೆ ತಿರುಗಾಡಿ ತಮ್ಮ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ.

ಎಲ್ಲವೂ ಆಧುನಿಕ ಯಂತ್ರಗಳ ಹಿಡಿತದಿಂದ ನಾಶವಾಗುತ್ತಿತ್ತು. ಆದರೆ ಕೈ ಕೊಡುವ ವಿದ್ಯುತ್‌ನಿಂದಾಗಿ ರುಬ್ಬುವ ಗುಂಡುಗಳು, ಒರಳು, ಬೀಸುವ ಕಲ್ಲು ಇತ್ಯಾದಿ ಕಲ್ಲು ಕುಟುಗರು ತಯಾರಿಸುವ ಪದಾರ್ಥಗಳು ಗ್ರಾಮೀಣ ಹಾಗೂ ನಗರ ಪ್ರದೇಶದ ಜನತೆಗೆ ಅನಿವಾರ್ಯವಾಗಿವೆ. ಹಲವಾರು ವರ್ಷಗಳ ಕಾಲ ಬಾಳಿಕೆ ಬರುವ, ರಿಪೇರಿಯ ಅವಶ್ಯಕತೆಯಿರದ ಈ ಸಾಧನ ಸಾಮಗ್ರಿಗಳು ಇನ್ನೂ ಬಡವರ ಮನೆಯಲ್ಲಿ ಶೋಭಿಸುತ್ತಿವೆ. ಮತ್ತು ಬೀಸುವ ಕಲ್ಲು, ಒರಳು ಹಾಗೂ ರುಬ್ಬುವ ಗುಂಡಿನಿಂದ ಬೀಸಿದ, ಕುಟ್ಟಿದ ಹಾಗೂ ರುಬ್ಬಿದ ಆಹಾರ ಪದಾರ್ಥ ಹಾಗೂ ಮಸಾಲೆಗೆ ಬರುವ ರುಚಿ ಈ ಮಿಕ್ಸಿ, ಗ್ರೈಂಡರ್‌ಗಳಲ್ಲಿ ಅರೆದ ಆಹಾರ ಪದಾರ್ಥ ಹಾಗೂ ಮಸಾಲೆಗೆ ಬರಲಾರದು. ಈ ಸಕರಾತ್ಮಕ ವಿಷಯವೇ ಕಲ್ಲುಕುಟಿಗ ವೃತ್ತಿ ಇನ್ನೂ ಜೀವಂತವಾಗಿರಲು ಕಾರಣ.

ಸುಣ್ಣಗಾರಿಕೆ:

ಸುಣ್ಣ ತಯಾರಿಸುವ ಜನಸಮುದಾಯದ ಒಂದು ವರ್ಗವನ್ನು ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಕಾಣಬಹುದು. ಸುಣ್ಣಗಾರರು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಗ್ರಾಮದ ಮನೆಗಳಿಗೆ ಸುಣ್ಣ ಕೊಡುವ ಕಸುಬಿದು. ಈ ಕಸುಬನ್ನು ಮಾಡುವವರು ಸುಣ್ಣಗಾರರು. ಇವರು ಹೆಚ್ಚಾಗಿ ಕೆಳಜಾತಿಯವರಾಗಿದ್ದಾರೆ. ತಮ್ಮ ಜಾತಿಯ ವೃತ್ತಿಯನ್ನು ಇಂದಿಗೂ ನಡೆಸಿಕೊಂಡು ಬರುತ್ತಿರುವುದು ಗಮನಾರ್ಹ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬ, ಹರಿದಿನ, ಜಾತ್ರೆ, ಉತ್ಸವ ಇತ್ಯಾದಿ ಸಂದರ್ಭದಲ್ಲಿ ಮನೆಯ ಗೋಡೆಗಳಿಗೆ ಸುಣ್ಣವನ್ನು ಸಾರಿಸುವುದು ಸಹಜ. ಆದ್ದರಿಂದ ಸುಣ್ಣಗಾರರು ಈ ಸಂದರ್ಭಗಳಲ್ಲಿ ಮನೆಗಳಿಗೆ ಸುಣ್ಣವನ್ನು ತಂದು ಕೊಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಅವರೆ ಸುಣ್ಣ ಬಳಿಯುವ ಕಾರ್ಯ ಮಾಡುತ್ತಾರೆ.

ಸುಣ್ಣಗಾರರು ಸುಣ್ಣದ ಕಲ್ಲುಗಳಲ್ಲಿ ಭಟ್ಟಿಹಾಕಿ ಸುಣ್ಣದ ಹರಳುಗಳನ್ನು ತಯಾರಿಸಿಕೊಂಡು, ಬಂಡಿಯಲ್ಲಿ ಹಾಕಿಕೊಂಡು ಒಂದು ಗ್ರಾಮದ ಮುಖ್ಯ ಸ್ಥಳಗಳಲ್ಲಿ ಇಟ್ಟು ಮನೆಮನೆಗೆ ಹೋಗಿ ಸುಣ್ಣ ಕೊಟ್ಟು ಬರುವರು ಅವರ ಮನೆಗೆ ಅವಶ್ಯಕತೆ ಇರುವಷ್ಟು ಸುಣ್ಣ ನೀಡುವರು. ಮತ್ತೆ ವರ್ಷದ ಮಧ್ಯದಲ್ಲಿಯೇ ಮದುವೆ-ಇತ್ಯಾದಿಗಳು ನಡೆದರೆ, ಆ ಸಂದರ್ಭದಲ್ಲಿ ಸುಣ್ಣ ಕೊಡುವರು. ಇಂಥ ಸಂದರ್ಭಗಳಲ್ಲಿ ಸುಣ್ಣ ನೀಡಿದಾಗ ಪ್ರತಿಯಾಗಿ ಕಾಳು, ಅಥವಾ ಹಣವನ್ನು ಪಡೆಯುವರು. ಸುಗ್ಗಿಯಲ್ಲಿ ಕಣಗಾಳನ್ನು ಸಂಗ್ರಹಿಸುವರು. ಹಬ್ಬ-ಹುಣ್ಣಿಮೆಗಳಲ್ಲಿ 'ಖುಷಿ' ಪಡೆದುಕೊಳ್ಳುತ್ತಾರೆ. ಊರಿನ ದೇವಾಲಯಗಳಿಗೂ ಪುಕ್ಕಟೆಯಾಗಿ ಸುಣ್ಣ ಕೊಡುತ್ತಾರೆ.

ಸುಣ್ಣ ಪಡೆದುಕೊಂಡು ಅದನ್ನು ಮಡಕೆಗಳಲ್ಲಿ ಹಾಕಿ, ಬೇಕಾದಷ್ಟು ನೀರನ್ನು ಸ್ವಲ್ಪ ದೂರದಿಂದಲೇ ಅದರಲ್ಲಿ ಹಾಕಿ, ಮಡಕೆಯ ಬಾಯಿಮುಚ್ಚಿ ಇಡಬೇಕು. ನಾಲ್ಕು ಅಥವಾ ಐದು ತಾಸುಗಳಲ್ಲಿ ಸುಣ್ಣದ ಹರಳುಗಳು ಕರಗಿ, ಸುಣ್ಣವಾಗುತ್ತದೆ. ಮಡಕೆಯ ಬಾಯಿಯನ್ನು ಒಮ್ಮೆಲೆ ತೆಗೆಯಬಾರದು. ಕುದಿಯುವ ಸುಣ್ಣ ಮುಖಕ್ಕೆ ಸಿಡಿಯುವ ಸಂಭವವಿರುತ್ತದೆ. ಸ್ವಲ್ಪ ಹೊತ್ತು ಬಿಟ್ಟು, ಮತ್ತೊಂದು ಮಣ್ಣಿನ ಪಾತ್ರೆಯಲ್ಲಿ ಸುಣ್ಣ ತೆಗೆದುಕೊಂಡು ಅದಕ್ಕೆ ಬೇಕಾದಷ್ಟು ನೀರು ಹಾಕಿಕೊಂಡು ಕಸಬರಿಕೆಯಿಂದ ಗೋಡೆಗೆ ಅದನ್ನು ರೈತರು ಹಚ್ಚುವರು. ಸುಣ್ಣದಲ್ಲಿ ತಿನ್ನುವ ಸುಣ್ಣ ಮತ್ತು ಗೋಡೆಗೆ ಹಚ್ಚುವ ಸುಣ್ಣ ಎಂದು ಎರಡು ರೀತಿಯ ಸುಣ್ಣವಿರುತ್ತದೆ. ತಿನ್ನುವ ಸುಣ್ಣ ಮೃದುವಾಗಿರುತ್ತದೆ. ಗೋಡೆಯಸುಣ್ಣ ಸಲಒರಟಾಗಿರುತ್ತದೆ. ಈ ತಿನ್ನುವ ಸುಣ್ಣವನ್ನು ಸಹ, ಸಂತೆಯ ದಿನ ರೈತರಿಗೆ ಸುಣ್ಣಗಾರರು ಕೊಡುವರು. ಇತ್ತೀಚೆಗೆ ಉದ್ದಿಮೆಗಳು ಸುಣ್ಣ ತಯಾರಿಸಿ ಪಾಕೇಟ್ ಹಾಗೂ ಚೀಲಗಳಲ್ಲಿ ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡುತ್ತಿರುವುದರಿಂದ ಸುಣ್ಣಗಾರರು ತಯಾರಿಸುವ ಸುಣ್ಣಕ್ಕೆ ಬೇಡಿಕೆ ಕಡಿಮೆಯಾಗಿದೆ. ಜನ ಇಂದು ನೇರವಾಗಿ ಪೇಟೆಯಲ್ಲಿ ಹಣ ಕೊಟ್ಟು ಸುಣ್ಣ ತರುತ್ತಾರೆ. ಹೀಗಾಗಿ ಸಾಂಪ್ರದಾಯಿಕ ಸುಣ್ಣಗಾರರ ವೃತ್ತಿ ಮೂಲೆಗುಂಪಾಗಿದೆ. ಈ ವೃತ್ತಿಯನ್ನು ಮಾಡಿಕೊಂಡು ಬಂದ ಸುಣ್ಣಗಾರರು ಬೇರೆ ಬೇರೆ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿಯಲ್ಲಿ ಹಲವು ಕುಟುಂಬಗಳು ಈ ಕಾರ್ಯದಲ್ಲಿ ತೊಡಗಿವೆ. ಹೊಸಪೇಟೆ ತಾಲ್ಲೂಕಿನ ಧರ್ಮಸಾಗರದಲ್ಲಿ ಸುಣ್ಣದ ಕಲ್ಲು ಹೇರಳವಾಗಿ ದೊರೆಯುತ್ತದೆ. ಸುಣ್ಣದ ಕಲ್ಲನ್ನು ಸುಣ್ಣದ ಭಟ್ಟಿಗೆ ಹಾಕಿ ಸುಡುವ ವಿಧಾನ ವಿಶಿಷ್ಟವಾಗಿದೆ.

ಬಳೆಗಾರಿಕೆ

ಪರಂಪರಾಗತವಾಗಿ ಮುಂದುವರಿದು ಬಂದ ಕಸುಬುಗಳಲ್ಲಿ ಬಳೆಗಾರಿಕೆಯು ಒಂದು. ಗಾಜನ್ನು ಕರಗಿಸಿ ಬಳೆಗಳನ್ನು ಮಾಡುವ ವೃತ್ತಿ ಬಳೆಗಾರಿಕೆ ಈ ವೃತ್ತಿಯನ್ನು ವಂಶಪರಂಪರೆಯಾಗಿ ಮುಂದುವರಿಸಿಕೊಂಡು ಬಂದವರು ಕರ್ನಾಟಕದಲ್ಲಿ ಲಿಂಗಾಯತರು, ಶೆಟ್ಟಿ ಬಲಿಜರು. ಇವರನ್ನು

ಬಳೆಗಾರರು, ಕಾಜುಗಾರರು, ಮಣಿಗಾರರು, ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಸಮಾಜದಲ್ಲಿ ಪ್ರತಿಯೊಬ್ಬ ಮಹಿಳೆಯರು ಇಷ್ಟಪಡುವ ಹಾಗೂ ಕಡ್ಡಾಯವಾಗಿ ಧರಿಸುವ ಆಭರಣ ಬಳೆ. ಬಳೆಗಾರರು ವೈವಿಧ್ಯ ಬಣ್ಣಗಳಲ್ಲಿ ಬಳೆಯನ್ನು ತಯಾರಿಸುತ್ತಾರೆ. ಬಳೆಗಾರರು ಕಾಜಿನಿಂದ ಬಳೆಗಳನ್ನು ತಯಾರಿಸಿ ಅವುಗಳಿಗೆ ನಾನಾ ಬಗೆಯ ಬಣ್ಣ ಹಾಕುತ್ತಾರೆ. ತಯಾರಿಸಿದ ಬಳೆಗಳನ್ನು ಹೆಣ್ಣು ಮಕ್ಕಳು ಬುಟ್ಟಿಯಲ್ಲಿ, ಗಂಡು ಮಕ್ಕಳು ಹೆಗಲ ಮೇಲೆ ಹೊತ್ತುಕೊಂಡು, ಊರೂರು ಅಲೆದು ಹೆಣ್ಣುಮಕ್ಕಳ ಕೈಗಳಿಗೆ ಇಡಿಸುತ್ತಾರೆ. ಬಳೆಗಾರರು ಮದುವೆಯ ಸಂದರ್ಭದಲ್ಲಿ ಬಳೆಗಳನ್ನು ಇಡಿಸಿದುದಕ್ಕೆ ಪ್ರತಿಯಾಗಿ ಸಂಭಾವನೆ ಪಡೆಯುತ್ತಾರೆ. ಕುಪ್ಪಸ, ಸೀರೆ ಮತ್ತು ಹಣ ಇವೇ ಆ ಸಂಭಾವನೆಗಳು ಉಳಿದ ದಿನಗಳಲ್ಲಿ ಬಳೆ ಇಡಿಸಿದುದಕ್ಕೆ ಹಣ ಪಡೆಯುತ್ತಾರೆ. ಬಳೆ ತೊಡಿಸುವುದು ಒಂದು ಕಲೆ. ಕೈಗಳು ಒರಟು ಇದ್ದರೆ, ಬಳೆಗಳು ಏರದೆ, ಒಡೆದುಹೋಗುತ್ತವೆ. ಆದುದರಿಂದ ಬಳೆಗಾರರು ಮುಂಗೈ ಮಿದುಗೊಳಿಸಲು ಸೋಪು ಅಥವಾ ಎಣ್ಣೆ ಹಚ್ಚುತ್ತಾರೆ. ಎರಡು ಕೈಗಳ ತುಂಬ ಬಳೆ ಇಟ್ಟುಕೊಳ್ಳುವುದು ನಮ್ಮ ಹಳ್ಳಿಯ ಸಂಪ್ರದಾಯ, ಬಳೆಗಾರ ಹೆಣ್ಮಕ್ಕಳ ಅಭಿರುಚಿಗೆ ಅನುಗುಣವಾಗಿ ಅನೇಕ ಬಗೆಯ ಬಳೆಗಳನ್ನು ತಯಾರಿಸುತ್ತಾರೆ. ಚಿಕ್ಕಬಳೆ, ಸಾದಾಬಳೆ, ಕಪ್ಪದ ಬಳೆ, ಕಾಜಿನ ಬಳೆ, ಬೆಲ್ಲದ ಬಳೆ, ಉಳಿಬಳೆ ಶ್ರೀಶೈಲ ಬಳೆ ಇತ್ಯಾದಿ. ಬಳೆಗಳ ಕೆಲವು ಬಗೆಗಳು ಮದುವೆ, ಬಸಿರು, ಬಾಣಂತಿ ಮೊದಲಾದ ಸಂದರ್ಭದಲ್ಲಿ ಹಸಿರು ಬಳೆ, ಹಬ್ಬ-ಹರಿದಿನಗಳಲ್ಲಿ ಬಣ್ಣ ಬಣ್ಣದ ಬಳೆಗಳನ್ನು ತೊಡಿಸುವ ಪದ್ಧತಿ ಹಳ್ಳಿಗಳಲ್ಲುಂಟು. ಬೆಂಗಳೂರು, ದಾವಣಗೆರೆ, ಮೈಸೂರು ಹಾಗೂ ಬೆಳಗಾವಿಗಳಲ್ಲಿ ಬಳೆ ತಯಾರಿಸಲಾಗುವುದು. ಬೆಳಗಾವಿ ಜಿಲ್ಲೆಯ ಕಿತ್ತೂರು ಮತ್ತು ಮುರುಗೋಡು ಬಳೆಗಳು ಕರ್ನಾಟಕದಲ್ಲಿ ಪ್ರಸಿದ್ಧವಾಗಿವೆ.

ಬಳ್ಳಾರಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಬಳೆಗಾರ ಜನಾಂಗದ ನೆಲೆಗಳಿವೆ. ಆದರೆ ಈ ಬಳೆಗಾರರು ಇಂದು ಬಳೆಗಳನ್ನು ತಯಾರಿಸುವುದಿಲ್ಲ. ವಿವಿಧ ನಗರಗಳಲ್ಲಿ ತಯಾರಾಗುವ ವಿವಿಧ ಬಣ್ಣದ ಬಳೆಗಳನ್ನು ತರಿಸಿಕೊಂಡು ಊರೂರು ಸುತ್ತಿ ಮಾರಾಟ ಮಾಡುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಬಳೆಗಾರ ಜನಾಂಗ ಬಳೆ ಅಂಗಡಿಗಳನ್ನು ಇಟ್ಟುಕೊಂಡು ಬಳೆಯ ಜೊತೆಗೆ ಸ್ತ್ರೀಯರ ಶೃಂಗಾರ ಸಾಧನಗಳನ್ನು ಮಾರಾಟ ಮಾಡಿ ಜೀವನ ಮಾಡುತ್ತಿದ್ದಾರೆ. ಇಂದು ಗಾಜಿನ ಬಳೆಯ ಜೊತೆಗೆ ಪ್ಲಾಸ್ಟಿಕ್, ರಬ್ಬರ್, ಮರ ಇತ್ಯಾದಿಗಳಿಂದ ತಯಾರುಮಾಡಿದ ಬಳೆಗಳನ್ನು ಮಾರುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿನ ಹಳ್ಳಿಗಳಲ್ಲಿ ವಾಸಮಾಡುತ್ತಿರುವ ಬಳೆಗಾರರು ತಮ್ಮ ವೃತ್ತಿಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ. ಇವರು ಮಾರುವ ಬಳೆಗಳಿಗೆ ವರ್ಷದ ಎಲ್ಲಾ ದಿನಗಳಲ್ಲಿ ಬೇಡಿಕೆ ಇರುವುದಿಲ್ಲ. ಹಬ್ಬ, ಹರಿದಿನ, ಜಾತ್ರೆ ಮದುವೆ ಇತ್ಯಾದಿ ಸಂದರ್ಭದಲ್ಲಿ ಬಳೆಗಳಿಗೆ ಬೇಡಿಕೆ ಇದೆ. ಉಳಿದ ದಿನಗಳಲ್ಲಿ ಬಳೆಗಾರರಿಗೆ ಬಳೆಮಾರುವ ಕೆಲಸವಿರುವುದಿಲ್ಲ. ಹಿಂದೆ ಮಹಿಳೆಯರು, ಮಕ್ಕಳು ಕೈತುಂಬ ಬಳೆ ತೊಡಿಸಿಕೊಳ್ಳುತ್ತಿದ್ದರು. ಆದರೆ ಇಂದಿನ ಯುವ

ಪೀಳಿಗೆ ಬರಿಗೈಯಲ್ಲಿ ಓಡಾಡುವುದು ಫ್ಯಾಶನ್ ಆಗಿದೆ. ಬಳೆಗಳಿಗೆ ಬದಲಾಗಿ ವಾಚು ಅಥವಾ ಲೋಹದ ಬಳೆಗಳನ್ನು ಬಳಸುತ್ತಾರೆ. ಬಳೆಗಳನ್ನು ಉಪಯೋಗಿಸುವವರು ತುಂಬಾ ಕಡಿಮೆ. ಇದರಿಂದಾಗಿ ಬಳೆಗಾರರು ಬಳೆಗಾರಿಕೆ ವೃತ್ತಿಯ ಮೇಲೆ ಅವಲಂಬನೆಯಾಗಿ ಜೀವನ ಮಾಡುವುದು ಕಷ್ಟ ಸಾಧ್ಯ. ಇದರಿಂದಾಗಿ ಹಳ್ಳಿಗಳಲ್ಲಿರುವ ಬಳೆಗಾರರು ಪೇಟೆ-ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ. ಕೆಲವು ಬಳೆಗಾರರು ಕೃಷಿಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಳೆಗಾರ ಕುಟುಂಬದ ಯುವಪೀಳಿಗೆ ಈ ವೃತ್ತಿಯನ್ನು ಮುಂದುವರಿಸಲು ಇಚ್ಛಿಸುತ್ತಿಲ್ಲ, ಹಾಗೂ ಬಳೆಗಾರ ಜನಾಂಗದ ಜೀವನ ಕಷ್ಟವೆಂದು ವಕ್ತೃಗಳಾದ ಬಳೆಗಾರ ರಾಮಣ್ಣ, ಗೌರಮ್ಮ ತಿಳಿಸುತ್ತಾರೆ.

ಮಡಿವಾಳ ವೃತ್ತಿ

ಸಾಮಾನ್ಯವಾಗಿ ಗ್ರಾಮಗಳಲ್ಲಿ ಕಾಣಬಹುದಾದ ಸಾಮಾನ್ಯ ವೃತ್ತಿ ಮಡಿವಾಳಗಾರಿಕೆ. ಬಟ್ಟೆಗಳನ್ನು ಶುಭ್ರಗೊಳಿಸುವ ವೃತ್ತಿಯೇ ಅಗಸನ ವೃತ್ತಿ ಅಥವಾ ಅಗಸನ ಕಸುಬು. ಅಗಸರು ಈ ಕಾರ್ಯವನ್ನು ತಲೆತಲಾಂತರದಿಂದ ಮಾಡಿಕೊಂಡು ಬರುತ್ತಿರುವುದರಿಂದ ಇದನ್ನು ಕುಲಕಸುಬೆಂದು ಪರಿಗಣಿಸಲಾಗಿದೆ. ಮಡಿವಾಳರನ್ನು ಅಗಸ, ರಜಕ, ಮಹಾರಾಷ್ಟ್ರದ ಕಡೆ ಕೋಳಿ, ಪರೀಟ, ಹಿಂದಿಯಲ್ಲಿ ದೋಬಿ ಎಂದು ಕರೆಯುವ ರೂಢಿ. ಅಗಸನು ಮೇಲ್ವರ್ಗದವರ ಅನೇಕ ಸಂದರ್ಭಗಳಲ್ಲಿನ ಮಾಸಲು ಬಟ್ಟೆಗಳನ್ನು ಮಡಿ ಮಾಡಿ ಕೊಡುತ್ತಾನೆ. ಬಾಣಂತನ, ಕನ್ಯೆ ಋತುಮತಿಯಾದ ಸಂದರ್ಭದಲ್ಲಿನ ಮೈಲಿಗೆ ಬಟ್ಟೆ, ಹಬ್ಬ-ಹರಿದಿನಗಳಲ್ಲಿ ಊರ ಒಕ್ಕಲಿಗರ ಮನೆಯ ಗುಡಾರ, ಕೌದಿ, ಚವಾಳ, ಚಾದ್ದರುಗಳನ್ನು ಒಗೆಯುವುದು, ವಿವಾಹ ಸಂದರ್ಭದಲ್ಲಿ ಗುಗ್ಗಳ ತರುವಾಗ ಪುರವಂತರು ಮತ್ತು ಮದುಮಕ್ಕಳು ನಡೆದು ಬರಲು ನಡೆಮಡಿ ಹಾಸುವುದು, ದೇವರಿಗೆ ದೀಡ ನಮಸ್ಕಾರ ಹಾಕುವಾಗ ನಡೆ-ಮಡಿ ಹಾಸುವುದು, ಊರ ದೇವರ ಕಾರ್ಯ ಮತ್ತು ಊರಲ್ಲಿ ಸಂಚರಿಸುವಾಗ ನಡೆ-ಮಡಿ ಹಾಸುವುದು, ತೀರಿಕೊಂಡಾಗಿನ ಮೈಲಿಗೆ ಬಟ್ಟೆ, ದಿನಂಪ್ರತಿ ಉಡುವ ಬಟ್ಟೆಗಳನ್ನು ಸ್ವಚ್ಛಗೊಳಿಸುವುದು, ಬಟ್ಟೆಗಳನ್ನು ಇಸ್ತ್ರಿ ಮಾಡುವುದು, ಇದೆಲ್ಲಾ ಅಗಸನ ಪರಂಪರೆಯ ಕಸುಬು.

ಮಡಿವಾಳಗಾರಿಕೆ ಕುರಿತು ರಾಮಾಯಣ ಹಾಗೂ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಗಮನಿಸಬಹುದು. ರಾಮಾಯಣದಲ್ಲಿ ಅಗಸನ ಮಾತು ಕೇಳಿ ಸೀತೆಯನ್ನು ಅರಣ್ಯಕ್ಕೆ ಕಳಿಸಿದ ಪ್ರಸಂಗ ಬರುತ್ತದೆ. ಇದರಿಂದಲೇ "ಅಗಸನ ಮಾತು ಅರಸರಿಗೆ ಮೂಲ" ಎಂಬ ಗಾದೆ ಹುಟ್ಟಿದಂತಿದೆ. ಅಗಸನ ಕುರಿತು ಅನೇಕ ಗಾದೆ ಮಾತುಗಳು ಬಳಕೆಯಲ್ಲಿವೆ. "ಅಗಸನ ನಾಯಿ ಹಳ್ಳನೂ ಕಾಯಲಿಲ್ಲ ಮನೆನೂ ಕಾಯಲಿಲ್ಲ", "ಅಗಸನ ಸಿಟ್ಟು ಅನ್ಯರ ಬಟ್ಟೆಯ ಮೇಲೆ", "ಬಿದ್ದಕಲ್ಲು ಅಗಸನದು, ಎದ್ದಕಲ್ಲು ಪೂಜಾರಿಯದು", "ಕೊಟ್ಟಿದ್ದು ಅಗಸನಿಗೆ, ಉಟ್ಟಿದ್ದು ನಮಗೆ." "ಹೊಸದರಲ್ಲಿ ಅಗಸ ಗೋಣಿಯನ್ನು ಎತ್ತಿ ಎತ್ತಿ ಒಗೆದನಂತೆ", "ಮಡಿವಾಳಿಯನ್ನು ಮೊಸಳೆ

ಹಿಡಿದ ಹಾಗೆ", "ಯಾರು ಇಲ್ಲದ ಊರಿಗೆ ಅಗಸರ ಮಾಳಿಯೇ ಮುತ್ತೈದೆ", "ಅಗಸನಲ್ಲಿ ಬೊಗಸೆ ನೀರು ಸಿಕ್ಕದೂ?", "ಅಗಸನ ಶವ ಹೊರಗೆ ತೆಗೆದ ಮೇಲೆ ಗುಟ್ಟು ಸಿಕ್ಕಿತು" ಇತ್ಯಾದಿ.

ಗ್ರಂಥಗಳಲ್ಲಿ ಅನೇಕ ಕವಿಗಳು ಅಗಸನನ್ನು ಸ್ಮರಣೆಗೆ ತಂದುಕೊಡುತ್ತಾರೆ. "ಈಯಸಗನೂರ ಸೀರೆಯ ನೆಲ್ಲಮನೆನ್ನ ಬೆನ್ನೊಳಟ್ಟೆಕೊಂಡು ಮತ್ತಲಿತ್ತಲು ಮಹಾರಾರ್ಥಕ್ಕೆ ಪೋಗಲಿಯಂ".[೧೦೨] "ಊರ ಸೀರೆಗೆ ಅಗಸ ತಡಿಬಡಿ ಹಡದಂತೆ".[೧೦೩] 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ'[೧೦೪] 'ಅಗಸ ನೀರಡಸಿ ಸತ್ತಂತಾಯಿತು'.[೧೦೫] 'ಹೊದ್ದಿ ಸೊಸೆಗೆ ಬುದ್ದಿವೇಳ್ವತ್ತೆಯಸಗನೊಳದ್ದಿಂತೆ'.[೧೦೬] 'ಬಡಗಿನಂತೆ ಕೆತ್ತುವರ್ ಅಗಸನಂತೆ ಬೀಸಿ ಪೊಯ್ವರ್'.[೧೦೭] ಎಲ್ವೆಡೆಗಪ್ಪನ್ನೆಗಮತ್ತೆಕೊಂಡ ಸಗವೂಯ್ಲೊಲ್ ತಡಂಬೊಯ್ದು"[೧೦೮] "ಶಿಳಾಗ್ರದೊಳ್ ಭೀಮೋಟೋಪದಿಂದ ಕೋಪದಿಂದತ್ಯದ್ಭುತ ಮಾಗಿ ರಲಸಗ ವೊಯ್ವೆಯ್ದಂ ಮಿದುಳ್ ನೂಸೆ",[೧೦೯] ಎರಡಂ ಕರಿಪರಿ ಘದಿನಡಸಿಗುರ್ದಿಪೆ ಪಿಂಗುವಿನಂ ಮುರಿದೆಡಿಸಿ ಘಟ್ಟಿಸಿ ಪಿರಿಯುಂತೆಯೊಳ್ ಪೊಂಯ್ದನಸಗವೊಂಯ್ಲಂ ಭೀಮಂ.[೧೧೦] 'ಸಿಲೆಯೊಳಸಗವೊಯ್ಲೆಂಪೊಯ್ದಂ'[೧೧೧] ಊರಸೀರೆಗಗಸಂ ಬಡಿವೆತ್ತನೆನಿಪ್ಪ ಜನದ ನಾವ್ನಿಡಿ ನಿನಗಾಗಲ್ಕಸವೊಯ್ಲ ಸವಿಯಂ ತೋರ್ಪೆಂ.[೧೧೨] "ಕೀಳು ಕೋಡೆಯೊಳೊಬ್ಬ ಅಗಸಾಲ ಸತ್ತರೆ ಮೇಲು ಕೋಟೆಯೊಳೊಬ್ಬ ಅಗಸತಿ ಆಳುವಳು".[೧೧೩]

ಅಗಸನ ತನ್ನ ಕಸುಬನ್ನು ಬೆಳಗಾದ ಕೂಡಲೇ ಆರಂಭಿಸುತ್ತಾನೆ. ತನಗೆ ಸಂಬಂಧಿಸಿದವರ ಮನೆಯ ಬಟ್ಟೆಗಳನ್ನು ಸಂಗ್ರಹಿಸಿಕೊಂಡು, ಒಂದೆರಡು ಗಂಟು ಕಟ್ಟಿ, ಒಂದರ ಮೇಲೊಂದು ಇಟ್ಟು, ಬೆನ್ನ ಮೇಲೆ ಹೊತ್ತು, ತಲೆಗೆ ಸಿಕ್ಕಿಸಿಕೊಂಡು ಹಳ್ಳಕ್ಕೆ, ಕೆರೆಗೆ, ಬಾವಿಗೊ ಒಗೆಯಲು ಹೋಗುತ್ತಾನೆ. ಕತ್ತೆಗಳಿದ್ದರೆ ಕತ್ತೆಗಳ ಮೇಲೆ ಬಟ್ಟೆಗಳ ಗಂಟುಗಳನ್ನು ಹೇರುತ್ತಾನೆ. ಬಟ್ಟೆಗಳನ್ನೆಲ್ಲಾ ಒಗೆದು, ಒಣಗಿಸಿ ಪುನಃ ಸೀರೆಯಲ್ಲಿಯೋ, ಧೋತರದಲ್ಲಿಯೋ ಕಟ್ಟಿಕಂಡು ಮನೆಗೆ ತರುತ್ತಾನೆ. ಸಾಧ್ಯವಾದರೆ ಕೆಲವು ಬಟ್ಟೆಗಳನ್ನು ಇಸ್ತ್ರಿ ಮಾಡುತ್ತಾನೆ. ನಂತರ ಮನೆ ಮನೆಗೆ ಅಲೆದು ಅವರ ಬಟ್ಟೆಗಳನ್ನು ಮುಟ್ಟಿಸಿ, ರೊಟ್ಟಿ, ಮುದ್ದೆ, ಅನ್ನ, ಪಲ್ಯ, ಸಾರು ಸಂಗ್ರಹಿಸಿಕೊಳ್ಳುತ್ತಾನೆ. ಗುರುತಿಸಲು ಕಾಲರಿಗೆ, ಅಂಚಿಗೆ ಕೇರು ಎಣ್ಣೆಯಿಂದ ಚಿಕ್ಕ ಗುರುತುಹಾಕಿರುತ್ತಾನೆ. ಸ್ತ್ರಿ, ಪುರುಷ, ಮಕ್ಕಳು ಎಲ್ಲರ ಬಟ್ಟೆಗಳನ್ನು ಶುಭ್ರಗೊಳಿಸಿಕೊಡುವನು. ಇದು ಬಹು ಶ್ರಮದ ಕೆಲಸ. ಈ ಕಸುಬನ್ನು ಗೇಲಿ ಮಾಡುವುದು ಗ್ರಾಮೀಣ ಸಾಹಿತ್ಯದಲ್ಲಿ ಕಂಡುಬರುತ್ತದೆ.

ಅಗಸರ ಹುಡುಗಾನ ಬಲ್ಲೆನಾ ಕಾಣಮ್ಮ
ಕಣಕಾಲು ಮೊಣಕಾಲು ಮೈಲಿಗೆ ಮಾಡಿಕೊಂಡು
ತಿಣಿಕಾಡ್ತ ಬಟ್ಟೆ ಒಗೆದಾನು![೧೧೪]

ಸಾಮಾನ್ಯವಾಗಿ ಅಗಸರು ಶುಚಿಗೊಳಿಸಲು ಕೊಟ್ಟ ಬಟ್ಟೆಗಳಲ್ಲಿ ತಮಗೆ ಒಪ್ಪುವ, ಹೊಂದುವ ಬಟ್ಟೆಗಳನ್ನು ಉಟ್ಟುಕೊಳ್ಳುವುದುಂಟು. ಈ ಸಂದರ್ಭದಲ್ಲಿ 'ಅಗಸನ ಬಡಿವಾರ ಮಂದಿ ಅರಿವೆ ಮೇಲೆ' ಎಂಬ ಗಾದೆ ಇದೆ.

ಸಾಬೂನು-ಸೋಡಾ ಬರುವ ಮುಂಚೆ ಬಟ್ಟೆಯನ್ನು ಶುಭ್ರಗೊಳಿಸಲು ಅಗಸರು ಅಂಟುವಾಳದ ಕಾಯಿಯನ್ನು, ಸವಳು ಮಣ್ಣನ್ನು ಉಪಯೋಗಿಸುತ್ತಿದ್ದರು. ಅಂಟುವಾಳದ ಒಣಗಿದ ಕಾಯಿಯನ್ನು ಕುಟ್ಟಿ, ಜಜ್ಜಿ ನೀರಿರುವ ಪಾತ್ರೆ ಅಥವಾ ಬಕೆಟ್‌ಗಳಲ್ಲಿ ಹಾಕಿ ಕಲಕುತ್ತಾರೆ. ಆಗ ನೊರೆ ಉಂಟಾಗುತ್ತದೆ. ಅದರಲ್ಲಿ ಬಟ್ಟೆಗಳನ್ನು ಅದ್ದಿ, ಹಿಂಡಿ ತೆಗೆದು, ಬೇರೆ ನೀರಿನಲ್ಲಿ ಒಗೆದು ಒಣಗಿಸಿ ಇಸ್ತ್ರಿ ಮಾಡುತ್ತಾರೆ. ಸೀಗೀಕಾಯಿಂದಲೂ ಇದೇ ರೀತಿ ಬಟ್ಟೆಗಳನ್ನು ಸ್ವಚ್ಛ ಮಾಡುವುದುಂಟು. ಬಟ್ಟೆಯ ಜಿಡ್ಡನ್ನು ತೆಗೆಯಲು ಸವಳು ಮಣ್ಣನ್ನು ಉಪಯೋಗಿಸುತ್ತಾರೆ. ಬಟ್ಟೆಯ ಹೊಲಸನ್ನು ತೆಂಗಿನ ನಾರಿನಿಂದ ತಿಕ್ಕಿ ಉಜ್ಜಿ ತೆಗೆಯುತ್ತಾರೆ. ಗುಡಾರ, ಕೌದಿ, ಚಾದರ್, ಹಾಸಿಗೆ, ಹೊದಿಕೆ ಗಳಂಥ ದೊಡ್ಡ ಬಟ್ಟೆಗಳನ್ನು ಒಗೆಯುವಾಗ ಕೊಡತಿ ಅಥವಾ ದೊಣ್ಣೆಯಿಂದ ಬಡಿದು ಹೊಲಸು ಬಿಡಿಸುವರು. ಇಂಥವುಗಳನ್ನು ಇಬ್ಬರು ಸೇರಿ ಆಕಡೆ ಈ ಕಡೆ ಇಡಿದು, ನೀರಿನಲ್ಲಿ ಅದ್ದಿ, ಎತ್ತಿ ಎತ್ತಿ ಕಲ್ಲಿಗೆ ಬಡಿಯುತ್ತಾರೆ. ಕೈಗಳಲ್ಲೊ, ಕಾಲುಗಳಲ್ಲೊ, ಹಿಂಡಿ ಬಿಸಿಲಿಗೆ ಹಾಕುತ್ತಾರೆ.

ಬಟ್ಟೆಗಳಿಗೆ ಕಲೆ ಇದ್ದರೆ ಬ್ಲಿಚಿಂಗ್ ಪೌಡರ್‌ದಿಂದ ತೊಳೆಯುವರು. ಬಾಳೆಹಣ್ಣಿನ ಹಾಗೂ ಹೆಸರಕಾಯಿಯ ಅಥವಾ ಇತರೆ ಕಲೆಗಳು ಬ್ಲೀಚಿಂಗ್ ಪೌಡರ್‌ದಿಂದಲೂ ಕೆಲವು ಸಲಹೋಗುವುದಿಲ್ಲ. ಸಾಬೂನು, ಸೋಪು ಬರುವುದಕ್ಕಿಂತಲೂ ಮೊದಲು ಕಾರೆಳ್ಳು ಕಂಡಗಿ ಸುಟ್ಟು ಬೂದಿ ಮಾಡಿ ಉಪಯೋಗಿಸುತ್ತಿದ್ದರು. ಬಟ್ಟೆಯ ಜಿಡ್ಡನ್ನು ಹೋಗಲಾಡಿಸಲು ಸೌಳು, ಎರೆಮಣ್ಣು ಉಪಯೋಗಿಸುತ್ತಿದ್ದರು. ಇಸ್ತ್ರಿಪೆಟ್ಟಿಗೆ ಬರುವುದಕ್ಕಿಂತಲೂ ಮೊದಲು ಹಿತ್ತಾಳೆ ತಂಬಿಗೆಯಲ್ಲಿ ಬೆಂಕಿ ಹಾಕಿ ಇಸ್ತ್ರಿಯಂತೆ ಉಪಯೋಗಿಸುತ್ತಿದ್ದರು..

ಅಗಸನ ಪ್ರಮುಖ ಕೆಲಸವೆಂದರೆ ಕುದಿಯುವ ನೀರಿನ ಬಾನಿಯಲ್ಲಿ ಕೊಳೆಯಾದ ಬಟ್ಟೆಗಳನ್ನು ಅದ್ದಿ, ಶುದ್ಧ ಮಾಡುವುದು, ಅಂದರೆ ಉಬ್ಬೆಗೆ ಹಾಕುವುದು. ಇದನ್ನೇ ನಾವು ಗಂಜಿ ಹಾಕುವುದು ಎನ್ನುತ್ತೇವೆ. ಉಬ್ಬೆಯ ಬಾನಿಯಲ್ಲಿ ಬಟ್ಟೆಗಳು ಸುಟ್ಟು ಹಾಳಾಗದಿರಲೆಂದು ಪ್ರಾಣಿಗಳನ್ನು ದೇವರಿಗೆ ಬಲಿ ನೀಡುವ ಗುಡಿಗಳನ್ನು ನಿರ್ಮಿಸಿ ಕುಲದ ಪೂಜಾರಿಗಳಿಂದ ಪೂಜಾಕಾರ್ಯಗಳು ನಡೆಸ್ವಲ್ಪಡುತ್ತವೆ. ಇದೊಂದು ಸ್ಥಳೀಯ ಆಚರಣೆ ಎಲ್ಲಾ ಕಡೆಗೂ ಪ್ರಚಲಿತದಲ್ಲಿಲ್ಲ.

ತುಂಬಾ ಹೊಲಸಾದ ಬಟ್ಟೆಗಳನ್ನು ಅಗಸರು ಭಟ್ಟಿಗೆ ಹಾಕುವುದುಂಟು. ಭಟ್ಟಿ ಹಾಕುವುದಿದ್ದರೆ ಮುಂಜಾನೆಯೆ ಅವರ ಕೆಲಸ ಪ್ರಾರಂಭವಾಗುತ್ತದೆ. ಭಟ್ಟಿಗೆ ಹಾಕುವಾಗ ಬಟ್ಟೆಗಳಿಗೆ ಗುರುತು ಹಾಕುವರು. ಭಟ್ಟಿ ಹಾಕುವಾಗ ಬಟ್ಟೆಗಳನ್ನು ಮೊದಲು ಬರಿ ನೀರಿನಲ್ಲಿ ಹಾಕಿ ಹಿಂಡಿ ಸಲಹೊತ್ತು ಗಾಳಿಗೆ ಹಾಕುವರು. ಒಂದು ತಾಮ್ರದ ಹಂಡೆಯಲ್ಲಿ ನೀರು ಹಾಕಿಕೊಂಡು ಅದರಲ್ಲಿ ಸುಣ್ಣ, ಸೋಡ, ಸವಳು, ಸಾಬೂನು ಚೂರು ಕಲಸಿ ಇಡುವರು. ಆಮೇಲೆ ಒಂದು ಬಕೆಟ್‌ನಲ್ಲಿ ಕಲಿಸಿಟ್ಟು ನೀರಿನಲ್ಲಿ ಒಂದೆರಡು ತಂಬಿಗೆ ತೆಗೆದುಕೊಂಡು, ಒಂದೊಂದೆ ಬಟ್ಟೆ ಅದರಲ್ಲಿ ಹಾಕಿ

ಹಿಂಡಿ ತೆಗೆಯುವರು. ಬಟ್ಟೆಗಳೆಲ್ಲಾ ಮುಗಿದ ಮೇಲೆ, ಹಂಡೆಯಲ್ಲಿ ಸಲನೀರು ಹಾಕಿಕೊಂಡು, ಅದನ್ನು ಉರಿಯುವ ಒಲೆಯ ಮೇಲೆ ಇಡುವರು. ಹಿಂಡಿದ ಅರಿವೆಗಳನ್ನು ಹಂಡೆದ ಒಳಗೆ ಒಂದರ ಮೇಲೊಂದರಂತೆ ಪೇರಿಸುವರು. ಹಂಡೆದ ಮಧ್ಯಭಾಗ ತೆರವಾಗಿರುವಂತೆ ಬಟ್ಟೆಗಳನ್ನು ಜೋಡಿಸಲಾಗುವುದು. ಹಂಡೆದ ಮೇಲುಭಾಗವನ್ನು ಬಟ್ಟೆಯೊಂದರಿಂದ ಮುಚ್ಚುವರು. ಉಗಿಯ ಒತ್ತಡ ಹಂಡೆಯ ಮೇಲ್ಭಾಗದಲ್ಲಿ ಕಾಣಿಸಿಕೊಂಡಾಗ ಒಲೆಯೊಳಗೆ ಉರಿಹಾಕುವುದನ್ನು ನಿಲ್ಲಿಸುವರು. ಎರಡು ಮೂರು ಗಂಟೆಗಳ ತರುವಾಯ ಬಟ್ಟೆಗಳನ್ನು ಹಂಡೆಯೊಳಗಿನಿಂದ ಹೊರತೆಗೆಯುವರು. ಆ ಬಟ್ಟೆಗಳಲ್ಲಿಯ ಸೋಡಾ–ಸಾಬೂನಿನ ಅಂಶ ಹೋಗುವವರೆಗೆ ಚೆನ್ನಾಗಿ ಒಗೆದಾಗ, ಕೊಳೆಯಲ್ಲಾ ಬಿಟ್ಟುಹೋಗಿ ಶುಭ್ರಗೊಳ್ಳುತ್ತವೆ. ಬಿಳಿ ಬಟ್ಟೆಗಳನ್ನು ನೀಲಿ ಹಾಕಿರುವ ಬಕೆಟ್‌ಗಳಲ್ಲಿ ಅದ್ದಿ ಸಲ ಕಾಲದ ನಂತರ ಹಿಂಡಿ ಒಣಗಲು ಹಾಕುವರು. ಒಣಗಿದ ನಂತರ ಇಸ್ತ್ರಿ ಮಾಡುವರು.

ಚೆನ್ನಾಗಿ ಭಟ್ಟಿ ಹಾಕುವುದು, ಸ್ವಚ್ಚ, ಶುಭ್ರವಾಗಿ ಒಗೆಯುವುದು, ಸರಿಯಾಗಿ ಇಸ್ತ್ರಿ ಮಾಡುವುದರಲ್ಲಿ ಅಗಸನ ಕಲಾಕೌಶಲ್ಯ ವೈಶಿಷ್ಟ್ಯ ಎದ್ದುಕಾಣುತ್ತದೆ. ಇಂದು ಉಣ್ಣೆ ಬಟ್ಟೆಗಳನ್ನು ಒಗೆಯಲು ಪೆಟ್ರೋಲನ್ನು ಉಪಯೋಗಿಸುವರು. ರೇಶ್ಮೆ ಸೀರೆ ಹಾಗೂ ವಸ್ತ್ರಗಳನ್ನು ಹೊಸವಿಧಾನದ ಮೂಲಕ ಶುಭ್ರಗೊಳಿಸಿ ಕೊಡುವರು. ಹಳ್ಳಿಗಳಲ್ಲಿ ಒಂದು ವೇಳೆ ಅಗಸ ಬಟ್ಟೆಗಳನ್ನು ಕಳೆದು ಕೊಂಡರೆ ದಂಡ ಹಾಕಲಾಗುತ್ತದೆ. ಅಗಸರು ಬಟ್ಟೆಗಳಲ್ಲಿನ ಸಣ್ಣ ಪುಟ್ಟ ರಿಪೇರಿಗಳನ್ನು ಮಾಡಿಕೊಡುವರು. ಆಕಸ್ಮಾತ್ ಬಟ್ಟೆಗಳಲ್ಲಿ ಹಣ, ಬಂಗಾರ ಮುಂತಾದುವುಗಳು ಸಿಕ್ಕಾಗ ಅವುಗಳ ಮನೆಯವರಿಗೆ ನೀಡಿ ಬಹುಮಾನ ಪಡೆದುಕೊಳ್ಳುವುದುಂಟು.

ಅಗಸರ ವೃತ್ತಿಯಲ್ಲಿ ಲಿಂಗಾಯತರು, ಮರಾಠಿಗರು, ತೆಲಗರು, ರಜಪೂತರು, ಮುಸಲ್ಮಾನರು, ಮಾರವಾಡಿಗರು, ಕ್ರಿಶ್ಚಿಯನ್ನರು, ಈಳಿಗರು, ಕೋಮಟಿ, ಬ್ರಾಹ್ಮಣ ಮುಂತಾದ ಜಾತಿಯವರು ಈ ಕೆಲಸ ಮಾಡುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಈ ಕಸುಬನ್ನು ಕೆಳವರ್ಗದ ಜನ ಪರಂಪರಾಗತವಾಗಿ ಮಾಡಿಕೊಂಡು ಬರುತ್ತಿದ್ದಾರೆ.

ಅಗಸರು ಅವರವರ ಜಾತಿ ಮತ್ತು ಪಂಗಡದವರ ಆರಾಧ್ಯದೈವಗಳೇ ಅವರ ಆರಾಧ್ಯ ದೈವಗಳಾಗಿವೆ. ಆಯಾ ಪಂಗಡದವರ ಕುಟುಂಬ ಪದ್ಧತಿ ಜೀವನ ವಿಧಾನ ಅವರವರದಾಗಿದೆ. ಅಗಸರಲ್ಲೆಲ್ಲಾ ಮಡಿವಾಳ ಮಾಚಯ್ಯ ಬಹಳ ಪ್ರಸಿದ್ಧ. ಈತನು ಅಗಸ ಜನಾಂಗದವರಿಗೆ ಆರಾಧ್ಯದೈವನಾಗಿದ್ದಾನೆ. ಕನಕನಹಳ್ಳಿ ತಾಮ್ರ ಶಾಸನದಲ್ಲಿ ಅಗಸರಿಗೆ ಮಡಿವಾಳ ಮಾಚೀದೇವನು ನಿಯಮಿಸಿಕೊಟ್ಟ ಹಕ್ಕುಗಳನ್ನು ಉಲ್ಲೇಖಿಸಲಾಗಿದೆ. 'ಕರ್ನಾಟಕ ಭಾರತಿ'ಯಲ್ಲಿ ಶ್ರೀ ಆರ್.ಎನ್. ಗುರುದೇವ ಅವರು ಮಡಿವಾಳ ಮಾಚೀದೇವನ ಎರಡು ವಿಗ್ರಹಗಳು, ಒಂದು ಅಮ್ಮಿನಬಾವಿಯಲ್ಲಿ ದೊರೆತಿದ್ದು, ಇನ್ನೊಂದು ಮುಳಗುಂದದಲ್ಲಿದ್ದುದರ ಬಗ್ಗೆಯೂ ವಿವರಿಸಿದ್ದಾರೆ.

ಹಿಂದಿನ ಕಾಲದಲ್ಲಿ ಅಗಸನು ವಂಶಪಾರ್ಯವಾಗಿ ಬಟ್ಟೆ ಸ್ವಚ್ಛಗೊಳಿಸುವ ತನ್ನ ಕುಲಕಸುಬಿಗೆ ರೈತ ಕುಟುಂಬಗಳಿಂದ ಆಯ ಪಡೆಯುತ್ತಿದ್ದನು. ಈತನು ಆಯಾ ಅವನು ಬಟ್ಟೆ ಬಗೆಯುವ ಕುಟುಂಬದ ಸದ್ಯಸ್ಯರ ಸಂಖ್ಯೆಯ ಮೇಲೆ ನಿರ್ಧರಿಸ್ವಲ್ಪಡುತ್ತದೆ. ರೈತ ಬೆಳೆಯುವ ಎಲ್ಲಾ ಧಾನ್ಯಗಳಲ್ಲಿ ಅಗಸನ ಪಾಲು ಇರುತ್ತದೆ. ವಿಶೇಷ ಸಂದರ್ಭಗಳಾದ ಮದುವೆ, ಹಬ್ಬ-ಹರಿದಿನ, ಇತ್ಯಾದಿ ದಿನಗಳಲ್ಲಿ ಅಗಸರಿಗೆ ವಿಶೇಷ ಆಯಾವನ್ನು ಕೊಡಲಾಗುತ್ತದೆ.

ಅಗಸನು ಗ್ರಾಮದಲ್ಲಿ ನಡೆಯುವ ಸಮಸ್ತ ಕಾರ್ಯಗಳಿಗೆ ಬೇಕಾದ ವ್ಯಕ್ತಿ ಹುಟ್ಟಿನಿಂದ ಸಾಯುವವರೆಗೂ ಈತನ ಸೇವೆಯ ಅವಶ್ಯಕತೆ ಇದ್ದೇ ಇದೆ. ಅಗಸರು ಹುಟ್ಟು-ಸಾವು, ಮದುವೆ, ಹಬ್ಬ-ಹರಿದಿನಗಳಲ್ಲಿ ವಿಶೇಷ ಸೇವೆಯನ್ನು ಸಲ್ಲಿಸುವರು ಇದಕ್ಕಾಗಿ ಇವರಿಗೆ ವಿಶೇಷ ಸಂಭಾವನೆ ಇರುತ್ತದೆ. ಅಗಸರು ಬಟ್ಟೆ ಒಗೆಯುವ ಮನೆಯಲ್ಲಿ ಹೆರಿಗೆಯಾದರೆ, ಬಾಣಂತನದ ಮೈಲಿಗೆ ಬಟ್ಟೆಗಳನ್ನು ಅಗಸರಿಗೆ ನೀಡುವರು ತೊಟ್ಟಿಲಿನ ದಿನ ಅಗಸರಿಗೆ ಸೀರೆ, ಖಣ ಕೊಡುವ ಪದ್ಧತಿ ಕೆಲವು ಕಡೆ ಇದೆ. ಮೈನೆರದಾಗ ಮೈಲಿಗೆ ಒಗೆದುದರಿಂದ ಮೈನೆರದ ಹುಡುಗಿಯ ಸೀರೆ ಕೊಡುವರು. ಮೊದಲು ಮೈನೆರೆದಾಗ ಐದು ದಿನಗಳವರೆಗೆ ಉಟ್ಟುಕೊಳ್ಳಲು ಅಗಸರೇ ಸೀರೆ ಕೊಡುತ್ತಿದ್ದರಂತೆ, ಆದರೆ ಈಗ ಈ ಪದ್ಧತಿ ಇಲ್ಲ.

ಮದುವೆಯ ಸಮಾರಂಭದಲ್ಲಿ ಅರಿಶಿಣ ಹಚ್ಚುವ ವೇಳೆಯ ಅರಿವೆ ಅಗಸರಿಗೆ ಕೊಡುವರು. ದೇವರು ಗುಡಿಗೆ ಗುಗ್ಗಳ ತೆಗೆದುಕೊಂಡು-ಹೋಗುವಾಗ ನಡೆ-ಮುಡಿ ಹಾಸುವರು. ದೇವತಾ ಕಾರ್ಯಗಳಿಗೆ ಅಗಸರ ಸಹಾಯ ಅಗತ್ಯವಾಗಿ ಬೇಕು.

ಮಡಿವಾಳ ವೃತ್ತಿಯ ಬಗೆಗೆ ಅಗಸನ ಭಾವನೆಗಳು ವೈವಿಧ್ಯಮಯವಾಗಿವೆ. ಹೊಟ್ಟೆ ತುಂಬಿಸಿಕೊಳ್ಳಲು ಮಾಡುವ ಒಂದು ಉದ್ಯೋಗ ಇದೆಂದು ಕೆಲವರು ಭಾವಿಸುತ್ತಾರೆ. ಈ ಉದ್ಯೋಗ ಪೂರ್ವಜರಿಂದ ಅನುವಂಶೀಯವಾಗಿ ನಡೆದು ಬಂದಿದ್ದರಿಂದ ತಾವು ಮಾಡುತ್ತಿರುವುದಾಗಿ ಕೆಲವರ ಭಾವನೆ ಈ ಉದ್ಯೋಗವುಳ್ಳ ಮನೆಯಲ್ಲಿಯೇ ಹುಟ್ಟಿದುದರಿಂದ ನಮಗೆ ಇದೇ ವೃತ್ತಿ ಚೆನ್ನಾಗಿದೆ ಎಂಬ ಅನಿಸಿಕೆಯೂ ಇದೆ.

ಆದರೆ ಇಂದು, ಈ ಕಸುಬಿನ ಬಗೆಗೆ ಗೌರವ ಭಾವನೆ ಸಾಮಾಜಿಕರಲ್ಲಿ ಉಳಿದಿಲ್ಲ. ಅಗಸರಲ್ಲಯೂ ಇಲ್ಲ. ಏನೋ ಪೂರ್ವಜರಿಂದ ಬಂದ ಉದ್ಯೋಗ, ಬಿಡಬಾರದೆಂದು ಕೆಲವರು ಅಲ್ಲಿ ಇಲ್ಲಿ ವೃತ್ತಿ ಮಾಡುತ್ತಿದ್ದಾರೆ. ಮತ್ತೆ ಕೆಲವರು ಹೊಟ್ಟೆ ತುಂಬಿಸಲಾರದ ಅಸಹ್ಯ ಉದ್ಯೋಗವೆಂದು ಬಗೆದು, ಹಳ್ಳಿಗಳನ್ನು ತ್ಯಜಿಸಿ, ಪಟ್ಟಣ ಪ್ರದೇಶ ಸೇರಿ, ಬೇರೆ, ಬೇರೆ ವೃತ್ತಿಗಳಲ್ಲಿ ನಿರತರಾಗಿದ್ದಾರೆ. ಬಟ್ಟೆ ಸ್ವಚ್ಛ ಮಾಡುವ ಆಧುನಿಕ ಸಾಧನಗಳು ಬಂದಿರುವುದರಿಂದ ಈ ವೃತ್ತಿ ಕಾಯಕ ಹಿಂದಾಗುತ್ತಿದೆ.

ಪಟ್ಟಣಗಳಲ್ಲಿ ಅಗಸರು ತಮ್ಮದೇ ಆದ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾರೆ. ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಒಂದು ಕಡೆ ಸೇರಿ ತಮ್ಮ ಸಮಸ್ಯೆಗಳ ಬಗ್ಗೆ ಆಲೋಚಿಸಿ ಪರಿಹಾರ

ಕಂಡುಕೊಳ್ಳುವರು. ತಮ್ಮ ಜಾತಿಗೆ ಒಬ್ಬ ಗುರುಗಳನ್ನು ನೇಮಿಸಿಕೊಂಡು ಅವರ ಸಲಹೆ-ಸೂಚನೆಗಳಂತೆ ಸಮಾಜದ ಕಾರ್ಯಗಳನ್ನು ಮಾಡುವರು. ಅಗಸ ಜನಾಂಗವನ್ನು ಹಿಂದುಳಿದ ಜನಾಂಗವೆಂದು ಪರಿಗಣಿಸಿ ಸರಕಾರ ಹಲವಾರು ಸವಲತ್ತುಗಳನ್ನು ನೀಡುತ್ತಿದೆ. ಆದರೆ ಇದು ಉಳ್ಳವರ ಪಾಲಾಗುತ್ತಿರುವುದು ದುರ್ದೈವದ ಸಂಗತಿ.

ಕ್ಷೌರಿಕ ವೃತ್ತಿ

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕಂಡು ಬರುವ ಕುಲಕಸುಬುಗಳಲ್ಲಿ ಕ್ಷೌರಿಕ ಕಸುಬು ಕೂಡ ಒಂದು. ಸಮಾಜದಲ್ಲಿನ ಒಂದು ವರ್ಗದ ಜನ ವಂಶಪರಂಪರಾಗತವಾಗಿ ಕ್ಷೌರಿಕ ಕಸುಬನ್ನು ಮಾಡಿಕೊಂಡು ಬರುತ್ತಿದ್ದಾರೆ. ಕ್ಷೌರಿಕರನ್ನು ಆಯಾಗಾರರ ವರ್ಗಕ್ಕೆ ಸೇರಿಸಲಾಗಿದೆ. ಸಾಮಾನ್ಯವಾಗಿ ತಲೆಗೂದಲನ್ನು ಬೋಳಿಸುವುದಕ್ಕೆ ಕ್ಷೌರ ಅಥವಾ ಮುಂಡನ ಎನ್ನುವರು. ಕ್ಷೌರಿಕನಿಗೆ ಅನೇಕ ಹೆಸರುಗಳು ರೂಢಿಯಲ್ಲಿವೆ. ಕ್ಷೌರ ಮಾಡುವವರನ್ನು ಹಡಪಿಗ, ಹಡಪದವ, ಹಜಾಮ, ನಾಪಿತ, ಕೆಲಸಿಗ, ನಾವಿದ, ನಾವಿಂದ, ನಾದಿಗ, ಕಷ್ಪದವ, ಕನ್ನಡಿ ಕಾಯಕದವ, ವಾರೀಕ, ನಾಯ್ಡು, ಕ್ಷೌರಿಕ ಇನ್ನು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಹಿಂದಿ ಭಾಷೆಯಲ್ಲಿ ಕ್ಷೌರಿಕನಿಗೆ ನಾಯಿ ಎಂದು ಕರೆದರೆ, ಇಂಗ್ಲಿಷಿನಲ್ಲಿ Barber ಎಂದು ಕರೆಯುತ್ತಾರೆ. ಇಂಗ್ಲಿಷ್ ಕಲಿತವರು ಅವನನ್ನು ಸಾಮಾನ್ಯವಾಗಿ Hair Cutter ಎಂದೂ ಇಲ್ಲವೆ Hair Dresser ಎಂದು ಕರೆಯುತ್ತಾರೆ. ಅವನು ಕ್ಷೌರ ಮಾಡುವ ಸ್ಥಳಕ್ಕೆ 'ಆಯುಷ್ಕರ್ಮಶಾಲೆ' ಎನ್ನುವುದುಂಟು. ನಗರ ಪ್ರದೇಶಗಳಲ್ಲಿ ಅವನ ಕೆಲಸದ ಕೋಣೆಗೆ Hair Cutting saloon ಎಂದು ಕರೆಯುತ್ತಾರೆ.

ಸಂಕ್ಷಿಪ್ತ ಕನ್ನಡ ನಿಘಂಟು 'ಹಡಪದ' ಇದರ ಅರ್ಥವನ್ನು ಕ್ಷೌರಿಕನ ಸಲಕರಣೆಯ ಚೀಲವೆಂದು ವಿವರಿಸುತ್ತದೆ. ಹಡಪಿಗ ಎಂದರೆ ಕ್ಷೌರಿಕ ಅಥವಾ ನಾಯಿಂದ ಎಂದು ಅರ್ಥ. ಅದೇ ನಿಘಂಟಿನ ಪ್ರಕಾರ ಕ್ಷೌರ ಇದರ ಅರ್ಥವನ್ನು ತಲೆಗೂದಲನ್ನು ಬೋಳಿಸುವುದು, ಅಥವಾ ಕತ್ತರಿಸುವುದು ಅಥವಾ ಶುಚಿಗೊಳಿಸುವುದು ಎಂದರ್ಥ.

ಒಂದು ಗ್ರಾಮದಲ್ಲಿ ಸುಮಾರು ಒಂದೋ ಅಥವಾ ಎರಡು ಕ್ಷೌರಿಕರ ಮನೆಗಳಿರುತ್ತವೆ. ಕ್ಷೌರ ವೃತ್ತಿಯಿಂದಲೇ ಇವರು ತಮ್ಮ ಉಪಜೀವನವನ್ನು ನಡೆಸುತ್ತಾರೆ. ಈ ವೃತ್ತಿ ಪರಂಪರಾಗತವಾಗಿ, ಬಂದಿರುವುದು. ಸಮಾಜದ ಈ ಒಂದು ಜನಾಂಗ ಯಾವುದೇ ಸಂಕೋಚವಿಲ್ಲದೆ ತಮ್ಮ ಕಾಯಕವನ್ನು ಮಾಡಿ ಹಳ್ಳಿಗರಿಂದ ಹಣ ಅಥವಾ ಆಯವನ್ನು ಪಡೆದು ಜೀವನ ನಡೆಸುತ್ತಾರೆ. ಇವರ ಕೆಲಸ ಬೆಳಗಿನಿಂದ ಆರಂಭವಾಗಿ ಹೊತ್ತು ಮುಳುಗುವವರೆಗೂ ನಡೆದಿರುತ್ತದೆ.

ಮನುಕುಲಗಳ ಇತಿಹಾಸದಲ್ಲಿ ಕ್ಷೌರಿಕ ವೃತ್ತಿ

ಮಧ್ಯಪೂರ್ವ ಏಶಿಯಾದ ರಾಷ್ಟ್ರಗಳ ಕಬ್ಬಿಣ ಯುಗದ ಚಿಕ್ಕ ಗೊಂಬೆಗಳನ್ನು ಪರೀಕ್ಷಿಸಿದಾಗ ತಲೆಯ ಕೂದಲನ್ನು ಶೃಂಗರಿಸುವ ಪದ್ಧತಿ ಕ್ಲಿಷ್ಟಮಯವಾಗಿತ್ತೆಂದು ತಿಳಿದುಬರುತ್ತದೆ. ಕೂದಲುಗಳಿಗೆ

ಬೆಣ್ಣೆಯಿಂದ ತಯಾರಿಸಿದ ದ್ರವ್ಯಗಳನ್ನು ಹಚ್ಚಿಕೊಳ್ಳುತ್ತಿದ್ದರೆಂದೂ ಮತ್ತು ಕೂದಲುಗಳನ್ನು ಒಂದಡೆ ತರಲೂ ಹೇರ್‌ಪಿನ್ನುಗಳನ್ನು ಉಪಯೋಗಿಸುತ್ತಿದ್ದರೆಂದೂ ಗೊತ್ತಾಗುತ್ತದೆ. ಈ ಪ್ರದೇಶದಲ್ಲಿಯ ಆಗಿನ ಜನರು ಮೈಮೇಲಿನ ಕೂದಲುಗಳನ್ನು ತೆಗೆಯುತ್ತಿದ್ದರೆಂದು ಅದೇ ಚಿಕ್ಕ ಗೊಂಬೆಗಳನ್ನು ವೀಕ್ಷಿಸಿದಾಗ ಸಂದೇಹಪಡಬಹುದು. ಈ ಪ್ರದೇಶಗಳಲ್ಲಿ ಕಂಚಿನ ಯುಗದಲ್ಲಿ ಮತ್ತು ಕಬ್ಬಿಣ ಯುಗದಲ್ಲಿ ದೇಹದ ಮೇಲಿನ ಕೂದಲು ತೆಗೆಯುತ್ತಿದ್ದವರೆಂದರೆ ಕೇವಲ ದೇವಾಲಯಗಳಿಗೆ ಸಂಬಂಧಿಸಿದ ದೇವದಾಸಿಯರು ಮಾತ್ರ. ಗಡ್ಡ ಬೋಳಿಸುವ ಪದ್ಧತಿಯು ಮೊಟ್ಟ ಮೊದಲಿಗೆ ಈ ಪ್ರದೇಶದಲ್ಲಿ ಪ್ರಾರಂಭವಾಯಿತೆಂದು ಊಹಿಸಬಹುದಾಗಿದೆ. ಕಂಚಿನ ಯುಗದ ಪ್ರಾರಂಭದ ಕಾಲದಲ್ಲಿ ಈ ಪ್ರದೇಶದಲ್ಲಿ ಆಗಲೇ ಗಡ್ಡ ಬೋಳಿಸುವ ಪದ್ಧತಿಯು ಪ್ರಾರಂಭವಾಗಿತ್ತು. ಕ್ಷೌರಿಕರ ವರ್ಗವು ಆಗಲೇ ಪ್ರಾರಂಭವಾಗಿರಲು ಸಾಕು.[೧೧೫]

ಪ್ರಾಚೀನ ಸಂಸ್ಕೃತಿಯಾದ ಸುಮೇರಿಯ ಪ್ರದೇಶಗಳಲ್ಲಿ ಕೆತ್ತನೆಗಳು ದೊರೆತಿದ್ದು ಅದರಲ್ಲಿ ಸೆಮೆಟಿಕ್ ರಾಜರು ಉದ್ದವಾದ ಗುಂಗುರು ಕೂದಲನ್ನು ತಲೆಯ ಮೇಲೆ ಬಿಟ್ಟಿದ್ದನ್ನೂ ಹಾಗೂ ಗಡ್ಡ ಬೆಳೆದಿರುವುದನ್ನು ತೋರಿಸಿದ್ದರೆ, ಸುಮೇರಿಯಾ ಬರಹಗಾರರನ್ನು ತಲೆ ಬೋಳಿಸಿರುವಂತೆ ತೋರಿಸಲಾಗಿದೆ.[೧೧೬]

ಭಾರತದಲ್ಲಿ ಕ್ಷೌರಿಕರು ಆಯಗಾರರಾಗಿ ಕೆಲಸ ಮಾಡುವುದು ಅತಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವಂತೆ ತೋರುತ್ತದೆ. ಶಾಸ್ತ್ರಕಾರರಾದ ಬೃಹಸ್ಪತಿ ಮತ್ತು ನಾರದರು ಈ ಬಗ್ಗೆ ವಿವೇಚಿಸುತ್ತಾರೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕರ್ಮಚಾರಿಗಳಿಗೆ ಅವರ ಉದ್ಯೋಗಕ್ಕೆ ಸರಿಯಾಗಿ ಪ್ರತಿಫಲ ದೊರೆಯಬೇಕೆಂದು ಹೇಳಲಾಗಿದೆ. ಗುಪ್ತರ ಕಾಲದ ತಾಮ್ರಪಟಗಳಲ್ಲಿ ಇಂಥ ಆಯಾ ಕೊಡುವ ಪದ್ಧತಿಯ ಬಗ್ಗೆ ಹೇಳಲಾಗಿದೆ. ಕರ್ನಾಟಕದಲ್ಲಿ ೧೦ ಮತ್ತು ೧೫ನೇ ಶತಮಾನದ ಶಿಲಾಶಾಸನಗಳಲ್ಲಿ ಕೆಲಸಿಯನ್ನು ಕುರಿತು ಅವನು ಅನೇಕ ಕರ್ಮಚಾರಿಗಳಲ್ಲಿ ಒಬ್ಬನೆಂದು ಹೇಳಿವೆ. ೧೮೨೦ನೇ ಇಸ್ವಿಯಲ್ಲಿ ಥಾಮಸ್ ಕೋಟ್ ಎಂಬ ಆಂಗ್ಲ ವಿದ್ವಾಂಸರು ಮಹಾರಾಷ್ಟ್ರದಲ್ಲಿಯ ಲೋಣಿ ಎಂಬ ಹಳ್ಳಿಯಲ್ಲಿ ಅನೇಕ ತರಹದ ಬಾಲೂತಿ ಪದ್ಧತಿಯ ಕೆಲಸಗಾರರನ್ನು ನಮೂದಿಸಿದ್ದು ಅವರಲ್ಲಿ ಕ್ಷೌರಿಕನು ಒಬ್ಬನು.

ಇತಿಹಾಸಕಾರರಾದ ಶ್ರೀನಿವಾಸ ರಿತ್ತಿಯವರು ವಿಜಯನಗರ ಕಾಲದ ಕ್ಷೌರಿಕನ ಬಗ್ಗೆ ಹೀಗೆ ಬರೆಯುತ್ತಾರೆ ಬಹು ಹಿಂದೆ ವಿಜಯನಗರ ಅರಸರ ಒಂದು ಕೂದಲೆಳೆಯನ್ನು ಬಿಡದಂತೆ ಸ್ವಚ್ಛ ಮಾಡಿಕೊಂಡು ಹೋದಮೇಲೆ ಹಿರಿಯರು ಮತ್ತೊಮ್ಮೆ ನೆಲ ಸಾರಿಸಿ ದೊಡ್ಡ ಚಂದಪ್ಪನಂಥ ಗೋಮ ಹಚ್ಚಿ, ಲಂಡ ಪಂಚೆಯ ಮೇಲೆ ಹೊರಗೆ ನೀರು ಹಾಕಿಕೊಂಡು ಒಳಗೆ ಹೋಗಿ ಬಚ್ಚಲು ಮನೆಯಲ್ಲಿ ಮತ್ತೊಮ್ಮೆ ಸ್ನಾನ ಮಾಡಿ ಮಡಿಯಾಗುವರು.[೧೧೭]

ಕ್ಷೌರಿಕರು ತಮ್ಮ ಕ್ಷೌರಿಕ ಕೆಲಸದ ಜೊತೆಗೆ ತಲೆ ಮಸಾಜ್ ಮಾಡುವುದು, ಕುತ್ತಿಗೆ ತಿಕ್ಕುವುದು, ಮೈನೇವುದನ್ನು ಕಲಿತುಕೊಂಡಿರುತ್ತಾರೆ. ಈ ರೀತಿಯ ಮಸಾಜುಗಳಲ್ಲಿ ವಿಶೇಷವಾಗಿ ಪರಿಣತರಾಗಿರುತ್ತಾರೆ. ಅನೇಕ ಜನರು ಕ್ಷೌರಿಕರಿಂದ ಕೇವಲ ಕ್ಷೌರ ಮಾಡಿಸಿ ಕೊಳ್ಳುವುದಲ್ಲದೆ ಕೈ, ಕಾಲು ಮತ್ತು ಮೈ ನೇಯುವುದನ್ನು ಮತ್ತು ತಿಕ್ಕಿಸಿಕೊಳ್ಳುವುದನ್ನು ಮಾಡಿಸಿಕೊಳ್ಳುತ್ತಾರೆ. ಇದಕ್ಕೆ ಪ್ರತ್ಯೇಕ ಸಂಭಾವನೆ ಪಡೆದುಕೊಳ್ಳುತ್ತಾರೆ.

ಕ್ಷೌರಿಕರು ಕೆಲವೊಮ್ಮೆ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ನಾಟಕಗಳಲ್ಲಿ ಪಾತ್ರ ಮಾಡುವ ಸ್ತ್ರೀ ಮತ್ತು ಪುರುಷರಿಗೆ ಬಣ್ಣ ಕೊಡುವವರಾಗಿ ಮತ್ತು ವೇಷ ತೊಡಿಸುವವರಾಗಿ ಕೆಲಸ ಮಾಡುತ್ತಾರೆ. ಕ್ಷೌರಿಕರು ಶೃಂಗರಿಸುವ ಕೆಲಸಗಳಲ್ಲಿ ಪಳಗಿದವರಾಗಿರುವುದರಿಂದ ಬೇಗನೇ ಇಂತಹ ಕಲಾಕೌಶಲ್ಯಗಳಿಗೆ ಹೊಂದಿಕೊಳ್ಳುತ್ತಾರೆ.

ಕ್ಷೌರಿಕರು ಒಮ್ಮೊಮ್ಮೆ ಕ್ಷೌರದಿಂದ ಬರುವ ಮತ್ತು ಇನ್ನಿತರ ಚರ್ಮರೋಗಗಳಿಗೆ ಮತ್ತು ತಲೆಗೂದಲನ್ನು ಕಪ್ಪಾಗಿಸುವ ಅನೇಕ ಔಷಧಿಗಳನ್ನು ಗಿಡಮೂಲಿಕೆ ಮತ್ತು ಇನ್ನಿತರ ದ್ರವ್ಯಗಳಿಂದ ಮಸಾಜ್ ಮಾಡುವ, ಕೂದಲು ಕಪ್ಪಾಗಿಸುವ ಸಾಧನಗಳು ಲಭ್ಯವಾಗುವುದರಿಂದ ಅವುಗಳನ್ನು ತಂದು ಗ್ರಾಹಕರಿಗೆ ಸೇವೆಯನ್ನು ನೀಡುತ್ತಾರೆ. ಕ್ಷೌರಿಕರು ಕೇವಲ ತಮ್ಮ ಉದ್ಯೋಗವಲ್ಲದೇ ವೈದ್ಯರಂತೆಯೂ ಮತ್ತು ಶಸ್ತ್ರ ಚಿಕಿತ್ಸಕಾರರಾಗಿಯೂ ಜನರ ಸೇವೆ ಮಾಡುತ್ತಾರೆ.

ತಲೆ ಬೋಳಿಸುವ ಪದ್ಧತಿ ಇತ್ತೀತ್ತಲಾಗಿ ಇಲ್ಲವಾಗುತ್ತಿದ್ದರೂ ಸನಾತನವಾದಿಗಳಾದ ಬ್ರಾಹ್ಮಣ ವಿಧವೆಯರು, ಸ್ವಾಮಿಗಳು, ಬೌದ್ಧಭಿಕ್ಷುಗಳು, ಮುಂಜಿ, ಆಯ್ಯತನ ಮಾಡಿಸಿಕೊಳ್ಳುವವರು, ವಿವಿಧ ದೇವರುಗಳಿಗೆ ಹರಕೆ ಹೊತ್ತವರು ಮುಂತಾದವರು ತಲೆ ಬೋಳಿಸುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಹೀಗಾಗಿ ಕ್ಷೌರಿಕ ಇಂದೂ ಬೇಕಾದವನು. ಅಷ್ಟೇ ಅಲ್ಲ, ತಲೆಗೂದಲನ್ನು ಕತ್ತರಿಸಲು, ಕ್ವಚಿತ್ತಾಗಿ ಗಡ್ಡ ಬೋಳಿಸಲು, ಕುಂಕುಳಲ್ಲಿಯ ಕೂದಲು ತೆಗೆಯಲು, ಮೂಗಿನೊಳಗಿನ, ಕಿವಿಯ ಮೇಲಿನ ಕೂದಲು ತೆಗೆಯಲು ಕ್ಷೌರಿಕ ಬೇಕು. ಆದುದರಿಂದ ಕ್ಷೌರಿಕ ಪರಂಪರೆಯ ಕಾಲದಲ್ಲಿ ಕೊಂಡೋಜ, ಭದ್ರೋಜ, ತಿಮ್ಮೋಜ ಎಂಬ ನಾವಿದರು ತಮ್ಮ ಕೌಶಲ್ಯದಿಂದ ಅಳಿಯ ರಾಮರಾಯನಿಂದ ಮೆಚ್ಚುಗೆ ಪಡೆದಿದ್ದರು. ಬರಿ ಮೆಚ್ಚುಗೆ ಅಷ್ಟೇ ಅಲ್ಲ ಭೂಮಿ, ಕಾಣಿಕೆ, ತೆರಿಗೆಗಳಲ್ಲಿ ವಿನಾಯಿತಿ ಇವೆಲ್ಲವನ್ನು ಪಡೆದಿದ್ದರು.[೧೧೮]

ಹೆಚ್.ವಿ.ಮೂರ್ತಿ ಇವರು ಧಾರವಾಡದ ಒಬ್ಬ ಕ್ಷೌರಿಕನ ಬಗ್ಗೆ ಹೀಗೆ ಬರೆಯುತ್ತಾರೆ, "ಹಡಪದ ಸಿದ್ದಪ್ಪನ ಕ್ಷೌರವೆಂದರೆ ನಾನು ಹಿಂದೊಮ್ಮೆ ಓದಿದ ಬಾಗದಾದ್ ನಗರದ ನಾಹಿಂದರ ಕ್ಷೌರ ಸುಖದ ಸವಿನೆನಪು ಬರುತ್ತದೆ. ಹಿಂದಿನ ಕಾಲದ ಆ ಶ್ರೀಮಂತ ನಾಯಿಂದರ ಕೈಚಳಕವನ್ನು ಸಿದ್ದಪ್ಪನ ಕುಶಲತೆಯಲ್ಲಿ ಕಾಣಬಹುದು. ಸಿದ್ದಪ್ಪನಲ್ಲಿ ಇಲ್ಲದಿರುವುದೆಂದರೆ ಆ ಬಾಗದಾದ್ ನಗರದ ನಾಯಿಂದನ ಅಹಂಕಾರ ಒಂದೇ."[೧೧೯]

ಕ್ಷೌರಿಕ ವೃತ್ತಿ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಗ್ರಾಮ ಮತ್ತು ನಗರ ಪ್ರದೇಶದಲ್ಲಿರುವ ಒಂದು ವರ್ಗದ ಜನರು ಕ್ಷೌರಿಕ ವೃತ್ತಿಯಿಂದಲೇ ಇವರು ತಮ್ಮ ಉಪಜೀವನವನ್ನು ನಡೆಸುತ್ತಾರೆ. ಇವರ ಕೆಲಸ ಬೆಳಗಿನಿಂದ ಆರಂಭವಾಗಿ ಹೊತ್ತು ಮುಳುಗುವವರೆಗೂ ನಡೆದಿರುತ್ತದೆ. ತನ್ನ ಮನೆಯ ಹಿತ್ತಲಲ್ಲಿಯೇ ಅಥವಾ ಮನೆಯ ಮುಂಭಾಗದ ಕಟ್ಟೆಯ ಮೇಲೂ ಅಥವಾ ಪ್ರತ್ಯೇಕ ಕೋಣೆಯಲ್ಲಿಯೂ ಕ್ಷೌರ ಕಾರ್ಯವನ್ನು ಆರಂಭಿಸುತ್ತಾನೆ. ಕ್ಷೌರವನ್ನು ಮಣಿಯ ಮೇಲೆ ತುದಿಗುಂಡಿಯ ಮೇಲೆ ಕುಳಿತುಕೊಂಡೇ ಮಾಡುತ್ತಾನೆ. ಅನಿವಾರ್ಯ ಪ್ರಸಂಗಗಳಲ್ಲಿ ಬೆನ್ನುಬಾಗಿಯೂ, ಬಾಗಿಸಿಯೂ ಮಾಡುತ್ತಾನೆ. ಕ್ಷೌರ ಮಾಡಿಸಿಕೊಳ್ಳುವವನೂ ಮಣಿಯ ಮೇಲೆ ತುದಿಯಲ್ಲಿ ಕುಳಿತು, ಒಂದು ಕೈಯಲ್ಲಿ ಕನ್ನಡಿ ಹಿಡಿದು, ತನಗೆ ಕ್ಷೌರವಾಗುತ್ತಿರುವುದನ್ನು ಆಗಾಗ್ಗೆ ನೋಡುತ್ತಿರುತ್ತಾನೆ. ಊರ ಗೌಡ, ಊರಿನ ಅಯ್ಯನವರು ಮತ್ತು ದೊಡ್ಡ ದೊಡ್ಡ ಕುಳುಗಳ ಕ್ಷೌರ ಮಾಡಲು ಕ್ಷೌರಿಕನು ಅವರ ಮನೆಗೆ ಹೋಗುತ್ತಾನೆ ಕ್ಷೌರ ಮಾಡಿಯಾದ ಮೇಲೆ ಕೂದಲನ್ನು ಕೈಯಿಂದ ಬಳಿದು ಒಟ್ಟುಗೂಡಿಸಿ, ಒಂದು ಪೆಟ್ಟಿಗೆಯಲ್ಲಿ ಹಾಕುತ್ತಾನೆ. ಅದನ್ನು ಹೊಲೆಯರು ತೆಗೆದುಕೊಂಡು ಹೋಗಿ ಊರ ಹೊರಗೆ ಹಾಕುವರು. ಕ್ಷೌರ ಮಾಡಿದ ಸ್ಥಳವನ್ನು ಕಸಬರಿಕೆಯಿಂದ ಸ್ವಚ್ಛಗೊಳಿಸಿ ನೀರು ಸಿಂಪಡಿಸುವರು. ನಂತರ ಆತನ ಮನೆಯ ಹೆಣ್ಣುಮಕ್ಕಳು ಅದನ್ನು ಸಾರಿಸುವರು. ಕ್ಷೌರ ಮಾಡಿಸಿಕೊಂಡವರೂ, ಕ್ಷೌರದ ತರುವಾಯ ಮೈಲಿಗೆಯಾಗುತ್ತದೆ ಎಂಬ ನಂಬಿಕೆಯಿಂದ ಅದನ್ನು ತೊಡೆದು ಹಾಕುವುದಕ್ಕಾಗಿ, ಮನೆಯ ಹೊರಗೆ ನಿಂತು, ನೀರು ಸಿಂಪಡಿಸಿಕೊಂಡು ನಂತರ ಸ್ನಾನ ಮಾಡುವರು. ಎನ್. ಕೆ ಕುಲಕರ್ಣಿಯವರು ಸಾಂಪ್ರದಾಯಿಕ ಕ್ಷೌರವನ್ನು ಕುರಿತು ಒಂದು ಲೇಖನದಲ್ಲಿ ಈ ರೀತಿ ವರ್ಣಿಸುತ್ತಾರೆ. ನಮ್ಮ ಹಿರಿಯ ಕಾಲಕ್ಕೆ 'ಕೇದೂ' ಮನೆಗೆ ಬರಬೇಕಾಗಿದ್ದರೆ ವಾರ, ತಿಥಿ ಎಲ್ಲಾ ವಿಚಾರಿಸಿ ಬರಬೇಕು. ಅಂಗಳದಲ್ಲಿಯೇ ದನದ ಕಟ್ಟೆಯ ಬಳಿ ಒಂದು ಮಣೆ, ಬಿಸಿನೀರಿನ ತಂಬಿಗೆ, ಕೇದೂ ನಮ್ಮ ಹಿರಿಯರ ಶಿರಕ್ಷೌರ ಮುಗಿಸಿ ಗೋಮಯದಿಂದ ಒಂದು ಪರಂಪರೆಯ ಮೂಲಕ ಅನೂಚಾನವಾಗಿ ಸಾಗಿಕೊಂಡೇ ಬಂದಿದೆ. ಆದರೆ ಅದು ಇಂದು ಆಧುನೀಕರಣಗೊಳ್ಳುತ್ತಿದೆ. ನಗರಗಳಲ್ಲಿ ಎಲ್ಲಾ ಜಾತಿಯವರೂ ಈ ವೃತ್ತಿಯನ್ನು ಅವಲಂಬಿಸಿದ್ದಾರೆ. ಸಾಂಪ್ರಾದಾಯಿಕ ಕ್ಷೌರದ ಸಾಧನ ಸಲಕರಣೆಗಳು ಬಹಳ ಕಡಿಮೆ. ಅವು ಯಾವುವು ಎಂಬುದನ್ನು 'ಅಮುಗಿ ದೇವಯ್ಯ'ನೆಂಬ ಶಿವಶರಣನ ವಚನದಲ್ಲಿ ಕಾಣಬಹುದು.

'ಎನ್ನ ಕನ್ನಡಿ ಒಳಹೊರಗಿಲ್ಲ ಎನ್ನ ಗಳಿಯ ಮುಚ್ಚಿನೊಳಗಿಲ್ಲ
ಕೊಂಡಬೇರೆ ಹಡಪಕಳವಲ್ಲ ಕತ್ತಿ ಬಸವಣ್ಣ ಕೊಟ್ಟ
ಕತ್ತರಿಯ ಚೆನ್ನಬಸವಣ್ಣ ಕೊಟ್ಟ ಕಿತ್ತು ಹಾಕುವ ಚಿಮ್ಮುಟವ
ಪ್ರಭುರಾಯ ಕೊಟ್ಟ

ಮಿಕ್ಕಾದ ಎನ್ನಯ ಮುಟ್ಟ ಸತ್ಯಶರಣರು ಕೊಟ್ಟರು
ದೃಷ್ಟವ ತೋರಿ ಅಡಗುವ ಮುಕುರವ ಕೊಟ್ಟವರ ಹೇಳುವರು
ದೃಷ್ಟ ಪ್ರಸಿದ್ಧ ಅಪ್ರತಿಮ ಪ್ರಸನ್ನ ಚೆನ್ನಬಸವಣ್ಣ ಪ್ರಿಯ
ಕಮಳೇಶ್ವರ ಲಿಂಗವೆನಗೆ
ದೃಷ್ಟವ ಕೊಟ್ಟು ತಾ ಬೆಳಗಿನೊಳಗಾದ ಕನ್ನಡಿ ಕಾಯಕದ
ಅಮ್ಮಿದೇವಯ್ಯ
ಹಿಡಿಯಿಲ್ಲದ ಶಸ್ತ್ರ, ಕೀಲಿಲ್ಲದ ಕತ್ತರಿ, ಉಭಯವನೊಳಗೊಡದ
ಚಿಮ್ಮುಟ
ರೊಹಿಲ್ಲದ ಚಣ ಹಲ್ಲಿಲ್ಲದ ಹಣಿಗೆ ಮಲದಿಲ್ಲದ ಬೆಳಗಿನ
ಮುಕುರವ ಹಿಡಿದು
ಶರಣರೆಲ್ಲರವಿಡಿದಾಡ ಬಂದೆ...............೧೦

ಕ್ಷೌರದ ಸಾಧನಗಳಿಂದ ಆಧ್ಯಾತ್ಮವನ್ನು ಬಿಂಬಿಸುವ ಈ ವಚನದ ಮೂಲಕ ಕನ್ನಡಿ, ಹಡಪ, ಕತ್ತಿ ಚಣ, ಹಣಿಗೆ, ಕತ್ತರಿ, ಬೋಳಿಸಲು ಒಂದು ಕತ್ತಿ, ಕತ್ತಿ ಮಸೆಯಲು ಒಂದು ಮಸಗಲ್ಲು, ಉಗುರು ತೆಗೆಯುವ ಒಂದು ಚಣ, ಕತ್ತಿಯನ್ನು, ಉಜ್ಜುವ ಚರ್ಮದ ಪಟ್ಟಿ, ಮೂಗಿನೊಳಗಿನ ಕೂದಲು ತೆಗೆಯುವ ಚಿಮ್ಮುಟ, ಕೂದಲು ಬಾಚಲು ಬಾಚಣಿಕೆ, ದಾಡಿಗೆ ಹಚ್ಚುವ ಸಾಬೂನು, ಮುಖಕನ್ನಡಿ, ಕೊಬ್ಬರಿ ಎಣ್ಣೆಯ ಬಟ್ಟಲು, ನೀರಿನ ಬಟ್ಟಲು ಇವೆಲ್ಲ ಸಲಕರಣೆಗಳನ್ನು ಹಾಕಿಟ್ಟುಕೊಳ್ಳಲು ಒಂದು ಹಡಪ ಅಥವಾ ಹಸಿಬಿ (ಇದು ದಪ್ಪ ಅರವೆಯಿಂದ ತಯಾರಿಸಿದ, ಅರಿವೆಯ ಎರಡು ತುದಿಗೂ ಜೇಬುಗಳುಳ್ಳ-ಹೆಗಲಿಗೆ ಹಾಕಿಕೊಳ್ಳಲು ಅನುಕೂಲವಾದ ಚೀಲ). ಇದು ಕಟ್ಟಿಗೆಯ ಪೆಟ್ಟಿಗೆಯೂ ಆಗಿರಬಹುದು. ಈ ಸಾಧನ ಸಲಕರಣೆಗಳಲ್ಲಿ ಇಂದು ಸಾಕಷ್ಟು ಬದಲಾವಣೆಗಳನ್ನು ಕಾಣುತ್ತೇವೆ. ನಗರ ಪ್ರದೇಶಗಳಲ್ಲಿಯ ಕ್ಷೌರಿಕರು ಆಧುನಿಕ ಕ್ಷೌರ ಹಾಗೂ ಮಸಾಜು ಮಾಡುವ ಆಧುನಿಕ ಸಾಧನ ಸಲಕರಣೆಗಳನ್ನು ಬಳಸಿ ಉತ್ತಮ ಸೇವೆಗಳನ್ನು ಗ್ರಾಹಕರಿಗೆ ನೀಡುವರು.

ನಮ್ಮ ದೇಶದ ನಗರಗಳಲ್ಲಿ ನೆಲೆಸಿರುವ ಅನೇಕ ಕ್ಷೌರಿಕರು ಬಹುತೇಕವಾಗಿ ಹಳ್ಳಿಗಳಿಂದ ಬಂದವರೇ. ಆದರೆ ಅವರು ನಗರ ನಿವಾಸಿಗಳಾದ ನಂತರ ತಮ್ಮ ಗಿರಾಕಿಗಳಿಗೆ ಅನುಗುಣವಾದ ಕಲೆಗಳನ್ನು ಕಲಿತುಕೊಂಡಿರುತ್ತಾರೆ. ಇಂಥವುಗಳಲ್ಲಿ ಬಾಬ್‌ಕಟ್ ಹಿಪ್ಪಿಕಟ್ ಮುಂತಾದವುಗಳು ತಲೆಯ ಕೂದಲು ಕತ್ತರಿಸುವಾಗ ಕಲಿತ ಕಲೆಗಳು. ಇನ್ನು ಮೀಸೆಯನ್ನು ಕತ್ತರಿಸುವಾಗ ಫ್ರೆಂಚ್ಕಟ್, ತಲ್ವಾರ್ ಕಟ್, ಕಲ್ಲಿ ಮೀಸೆ ಮುಂತಾದವುಗಳನ್ನು ಕಲಿತುಕೊಳ್ಳುತ್ತಾರೆ. ಬಾಲಕ, ಬಾಲಕಿಯರಿಗೆ ಇತ್ತಿತ್ತಲಾಗಿ ಬಾಬ್‌ಕಟ್ ಮಾಡಿಸುವುದು ಹೆಚ್ಚಾಗುತ್ತದೆ. ಸಂಪ್ರದಾಯದ ಜುಲ್ಪ, ಜುಟ್ಟು, ಚಂಡಿಕೆ

ಮುಂತಾದವುಗಳು ಕಡಿಮೆಯಾಗುತ್ತಿವೆ. ನಗರದ ಸಲೂನುಗಳಲ್ಲಿ ಮುಖ್ಯ ಕ್ಷೌರಿಕನು ಮತ್ತೆ ನಾಲ್ಕು-ಐದು ಜನ ಕ್ಷೌರಿಕರನ್ನು ತನ್ನ ಸಲೂನಿನಲ್ಲಿ ಕೆಲಸಕ್ಕೆ ತೆಗೆದುಕೊಳ್ಳತ್ತಾನೆ. ಆದರೆ ಹಳ್ಳಿಯ ಕ್ಷೌರಿಕರು ತಾವಾಗಿಯೇ ಗಿರಾಕಿಗಳಲ್ಲಿಗೆ ಹೋಗಿ ಇಲ್ಲವೆ ಬರಮಾಡಿಕೊಂಡು ಕ್ಷೌರ ಮಾಡುತ್ತಾರೆ. ಒಮ್ಮೊಮ್ಮೆ ಮನೆಯ ಹೊರಗೆ ಮತ್ತು ಹೊಲಗಳಲ್ಲಿ ಕ್ಷೌರ ಮಾಡುವುದುಂಟು.

ಕರ್ನಾಟಕದಲ್ಲಿ ಕ್ಷೌರಿಕರಲ್ಲಿ ಎರಡು ವರ್ಗಗಳಿವೆ. ಒಂದು ವೀರಶೈವ ಹಡಪದರು ಮತ್ತು ಎರಡನೆಯದಾಗಿ ತೆಲಗು ಕ್ಷೌರಿಕರು. ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ವೀರಶೈವ ಹಡಪದರು ಹೆಚ್ಚಾಗಿ ಈ ವೃತ್ತಿಯನ್ನು ಮಾಡುತ್ತಾರೆ. ಆದರೆ ದಕ್ಷಿಣ ಕರ್ನಾಟಕದಲ್ಲಿ ಈ ಎರಡು ವರ್ಗದವರೂ ಕ್ಷೌರಿಕ ವೃತ್ತಿ ಮಾಡುವರು. ಬಳ್ಳಾರಿ ಜಿಲ್ಲೆಯ ಎಲ್ಲಾ ನಗರ ಹಾಗೂ ಹಳ್ಳಿಗಳಲ್ಲಿ ಕ್ಷೌರಿಕರನ್ನು ಕಾಣಬಹುದು. ವೀರಶೈವ ಹಡಪದರು, ತೆಲಗು ನಾಯ್ಡು ಕ್ಷೌರಿಕರು ಹಾಗೂ ಮುಸಲ್ಮಾನ ಕ್ಷೌರಿಕರು ಈ ವೃತ್ತಿಯನ್ನು ಮಾಡುತ್ತಿದ್ದಾರೆ.

ವೀರಶೈವ ಹಡಪದರು ಲಿಂಗಾಯಿತರಿಗೆ, ಬ್ರಾಹ್ಮಣರಿಗೆ ಮತ್ತು ಉಚ್ಚ ಜಾತಿಯ ಜನರಿಗೆ ಮಾತ್ರ ಕ್ಷೌರ ಮಾಡುತ್ತಾರೆ. ಕೆಳಜಾತಿಯ, ಹೊಲೆಯರು, ಸಮಗಾರರು ಮುಂತಾದವರಿಗೆ ಕ್ಷೌರ ಮಾಡುವುದಿಲ್ಲ. ಮುಸಲ್ಮಾನರು, ಕ್ರೈಸ್ತರು, ಯೂರೋಪಿಯನ್ನರು, ಪಾರ್ಸಿಗಳು ಇಂಥಾ ಪರದೇಶದ ಜಾತಿಗಳ ಕ್ಷೌರವನ್ನು ಸಹ ಮಾಡುವುದಿಲ್ಲ. ಲಿಂಗಾಯತ ಹಡಪದರು ಯಾವತ್ತು ಉತ್ತಮ ಜಾತಿಗಳ ಕ್ಷೌರ ಮಾಡಲಿಕ್ಕೆ ಹೋಗುತ್ತಾರೆ.[೧೨] ಇಂದೂ ಕೂಡ ಕೆಲವು ಹಳ್ಳಿಗಳಲ್ಲಿ ಲಿಂಗಾಯತರಲ್ಲದವರಿಗೆ ಇಂದಿಗೂ ಕೆಲವು ಸಂಪ್ರದಾಯ ಕ್ಷೌರಿಕರು ಕ್ಷೌರ ಮಾಡುವುದಿಲ್ಲ. ಲಿಂಗಾಯಿತರಲ್ಲದವರು ಕ್ಷೌರ ಮಾಡಿಸಿಕೊಳ್ಳಲೂ ಇಂಥವರ ಕಡೆ ಬರಲಾರರು. ನಗರ ಪ್ರದೇಶಗಳಲ್ಲಿ ಕ್ಷೌರ ಮಾಡಿಸಿಕೊಳ್ಳಲು ಹೋಗುತ್ತಾರೆ.

ದೆಹಲಿ ನಗರಕ್ಕೆ ಸಮೀಪವಿರುವ ಶಾಂತಿ ನಗರ ಎಂಬ ಹಳ್ಳಿಯನ್ನು ಅಭ್ಯಾಸ ಮಾಡಿದ ಮಾನವಶಾಸ್ತ್ರಜ್ಞರಾದ ಅಮೇರಿಕೆಯ ನ್ಯೂಯಾರ್ಕ್ ನಗರದ ಎಸ್.ಎ. ಫ್ರೀಡ್ ಮತ್ತು ರುಥ್ ಎಸ್. ಫ್ರೀಡ್ ಎಂಬ ದಂಪತಿಗಳು ಭಾರತೀಯ ಕ್ಷೌರಿಕನ ಬಗ್ಗೆ ಹೀಗೆ ಬರೆಯುತ್ತಾರೆ; ಶಾಂತಿನಗರದ ಮೂರು ಕ್ಷೌರಿಕ ಕುಟುಂಬಗಳ ಆದಾಯವು ತಮ್ಮ ಸಾಂಪ್ರದಾಯಿಕ ಉದ್ಯೋಗವಾದ ಕ್ಷೌರ ಮಾಡುವುದರ ಮೇಲೆ ಅವಲಂಬಿತವಾಗಿದೆ. ಭಾರತೀಯ ಕ್ಷೌರಿಕನ ಚಟುವಟಿಕೆಗಳನ್ನು ಪಾಶ್ಚಿಮಾತ್ಯ ಕ್ಷೌರಿಕನ ಚಟುವಟಿಕೆಗಳಿಗೆ ಹೋಲಿಸುವುದು ಸಾಧ್ಯವಿಲ್ಲ. ಅವನ ಸಾಂಪ್ರಾದಾಯಿಕ ವೃತ್ತಿಯೂ ತನ್ನ ಗಿರಾಕಿಗಳ ಕ್ಷೌರ ಮಾಡುವುದಕ್ಕಿಂತ ಹೆಚ್ಚಿನ ಅಂಶಗಳನ್ನು ಹೊಂದಿದೆ. ಕ್ಷೌರಿಕರು ಅನೇಕ ಧಾರ್ಮಿಕ ವಿಧಿಗಳನ್ನು ಸಹಿತ ತಮ್ಮ ಗಿರಾಕಿಗಳಿಗೆ ನೆರವೇರಿಸಿಕೊಡಬೇಕಾಗುತ್ತದೆ. ಶಾಂತಿನಗರದ ಹಳ್ಳಿಯ ಕ್ಷೌರಿಕನು ಕೆಲವು ಸಲನಗರದ ಕ್ಷೌರಿಕನಾಗಿ ದಿಲ್ಲಿಯಲ್ಲಿ ಕೆಲಸ ಮಾಡುತ್ತಾನೆ. ಅಷ್ಟೇ

ಅಲ್ಲದೆ ಕೆಲವು ಶಾಂತಿನಗರದ ನಾಗರಿಕರು ಕ್ಷೌರಿಕನಿಂದ ದಾಡಿ ಮಾಡಿಸಿಕೊಳ್ಳುವುದನ್ನು ಬಿಟ್ಟು ತಾವೇ ದಾಡಿ ಮಾಡಿಕೊಳ್ಳುತ್ತಾರೆ. ಕ್ಷೌರಿಕನಿಗೆ ಹಳ್ಳಿಯ ಧಾರ್ಮಿಕ ವಿಧಿಗಳನ್ನು ಆಚರಿಸುವುದು ತನ್ನ ಹಳ್ಳಿಯ ಮಟ್ಟಿಗೆ ಸೀಮಿತವಾಗಿರುತ್ತದೆ. ಕ್ಷೌರಿಕ ಕುಟುಂಬದ ಸ್ತ್ರೀಯರು ಮತ್ತು ಪುರುಷರು ಹಳ್ಳಿಯ ಮದುವೆಯ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುತ್ತಾರೆ. ಕ್ಷೌರಿಕ ಪುರುಷರು ಶಾಂತಿ ನಗರದ ಪುರುಷರಿಗೆ ತಮ್ಮ ಸೇವೆ ಸಲ್ಲಿಸಿದರೆ, ಕ್ಷೌರಿಕ ಸ್ತ್ರೀಯರು ಶಾಂತಿ ನಗರದ ಸ್ತ್ರೀಯರಿಗೆ ಕೇಶಾಲಂಕಾರ ಮಾಡುತ್ತಾರೆ. ಕ್ಷೌರಿಕ ಕುಟುಂಬದವರು ಬೇಸಾಯವನ್ನು ತಮ್ಮ ಗೌಣ ಉದ್ಯೋಗವನ್ನಾಗಿಸಿಕೊಂಡಿದ್ದಾರೆ. ಅಮೇರಿಕೆಯಲ್ಲಿ ಕ್ಷೌರಿಕ ಸ್ತ್ರೀಯರು ಪುರುಷರ ಗಡ್ಡ ಬೋಳಿಸುವುದು ಸಾಮಾನ್ಯವಾಗಿರುವುದನ್ನು ನಾವಿಲ್ಲಿ ನೆನೆಯಬಹುದು.[೨೨]

ಕ್ಷೌರಿಕರಿಗೆ ಮತ್ತು ಬ್ರಾಹ್ಮಣ ಪೂಜಾರಿಗಳಿಗೆ ಬೇರೆ ಜಾತಿಯವರ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುವುದಕ್ಕಾಗಿ ಮತ್ತು ತಮ್ಮ ಕರ್ತವ್ಯವನ್ನು ಸಲ್ಲಿಸಿದ್ದಕ್ಕಾಗಿ ಹಣ ಕೊಡಬೇಕಾಗುತ್ತದೆ. ಇವರುಗಳಿಲ್ಲದೆ ಯಾವುದೇ ಜಾತಿಯವರು ಧಾರ್ಮಿಕ ವಿಧಿಗಳನ್ನು ನೆರವೇರಿಸುವುದು ಶಕ್ಯವಿರುವುದಿಲ್ಲ. ಶಾಂತಿ ನಗರದಲ್ಲಿ ಕ್ಷೌರಿಕನ ಬುದ್ಧಿವಂತಿಕೆಯ ಬಗ್ಗೆ ಒಂದು ಗಾದೆ ಮಾತು ಇದೆ. ಅದಾವುದೆಂದರೆ– 'The Jackle is the sharpest among the beasts, the crow among the birds and the barber among the men.' ಇಲ್ಲಿ ಕ್ಷೌರಿಕರು ಕುಂಬಾರರಿಗಿಂತ ಮೇಲಿನ ಜಾತಿಯವರೆಂದು ತಿಳಿದುಕೊಂಡಿದ್ದರೂ ಹಳ್ಳಿಯಲ್ಲಿ ಇವರು ಕೆಳವರ್ಗದ ಜಾತಿಯವರಲ್ಲಿಯೇ ಬರುತ್ತಾರೆ. ಶಾಂತಿ ನಗರ ಹಳ್ಳಿಯಲ್ಲಿ ಕ್ಷೌರಿಕನ ಸೇವೆ ಕೆಳವರ್ಗದ ಹರಿಜನರಿಗೆ ಸಿಗುವುದಿಲ್ಲ.[೨೩] ಶಾಂತಿ ನಗರದ ಕ್ಷೌರಿಕರು ನಾಗರಿಕರಿಂದ ಹಬ್ಬದ ಖುಸಿಯ ಪಡೆಯುತ್ತಾರೆ.

ಡಾ.ಕೆ. ಈಶ್ವರನ್ ಅವರು ಆಯಾ ಪದ್ಧತಿಯನ್ನು ಧಾರವಾಡ ಮತ್ತು ಹುಬ್ಬಳ್ಳಿ ನಗರಗಳ ಮಧ್ಯೆ ಇರುವ ಶಿವಪೂರ ಗ್ರಾಮದ ಬಗ್ಗೆ ಅಭ್ಯಾಸ ಮಾಡಿ ಕ್ಷೌರಿಕನ ಬಗ್ಗೆ ಹೀಗೆ ಹೇಳುತ್ತಾರೆ. ಹಡಪದವನ ಚಟುವಟಿಕೆಗಳು ಹಳೆ ಮತ್ತು ಹೊಸತನದ ಸಂಮಿಲನವನ್ನು ತೋರಿಸುತ್ತದೆ. ಯಥಾ ಪ್ರಕಾರ ಇವನ ಸಾಂಪ್ರದಾಯಿಕ ಸೇವೆಯೂ ತನ್ನ ಆಯಾದ ಕುಳಗಳಿಗೆ ಸಲ್ಲುತ್ತದೆ. ಇದಲ್ಲದೆ ಇವನು ಹಣಕ್ಕಾಗಿಯೂ ಹೆಚ್ಚಿನ ಕೆಲಸವನ್ನು ಮಾಡುತ್ತಾನೆ. ಈ ಊರಲ್ಲಿಯೂ ಒಂದು ಸಲೂನ್ ಇದೆ. ಮತ್ತು ಈ ಊರಿನ ಹಡಪದನೊಬ್ಬ ಧಾರವಾಡದಲ್ಲಿ ತನ್ನ ಸಲೂನನ್ನು ತೆಗೆದಿದ್ದಾನೆ. ಅಗಸನಂತೆ ಕ್ಷೌರಿಕನು ಹಳ್ಳಿಗೆ ಹೊಸ ಮತ್ತು ನಗರದ ನೈತಿಕ ಮೌಲ್ಯಗಳನ್ನು ತಂದಿದ್ದಾನೆ. ಶಾಲಾ ಉಪಾಧ್ಯಾಯರು ಹಾಗೂ ಕಾಲೇಜಿಗೆ ಹೋಗುವ ಕೆಲವು ವಿದ್ಯಾರ್ಥಿಗಳು ರೇಝುರ ಉಪಯೋಗಿಸುತ್ತಿದ್ದಾರೆ. ಇದರಿಂದಾಗಿ ಹಡಪದವನ ಸೇವೆಯು ಬಗೆಗಿದ್ದ ಮೈಲಿಗೆಯ ಭಾವನೆಯೂ ಬದಲಾಗಿ ತಾವೇ ಕ್ಷೌರ ಮಾಡಿಕೊಳ್ಳುವುದರಿಂದ ಮಡಿಯಾಗಲು ಸ್ನಾನದ ಅವಶ್ಯಕತೆ ಇರುವುದಿಲ್ಲ. ಆದರೆ ಜವಳ ತೆಗೆಯುವ ವಿಧಿಯಲ್ಲಿ ಹಡಪದನ ಸೇವೆ

ಅವಶ್ಯವಿರುವುದರಿಂದ ಇದನ್ನು ಅವನೆ ಮಾಡುತ್ತಾನೆ. ಶಿವಪುರದ ಒಬ್ಬ ಹಡಪದವನ ಮಗನು ಧಾರವಾಡದಲ್ಲಿ ಹಾಲು ಮಾರುತ್ತಿದ್ದು ಈ ಹೊಸ ವೃತ್ತಿಯು ಅವರ ಕುಲ ವೃತ್ತಿಯಿಂದ ಬೇರೆ ಎಂದು ತಿಳಿದುಕೊಂಡಿದ್ದಾರೆ. ಶಿವಪುರದಲ್ಲಿಯ ಕ್ಷೌರದ ಅಂಗಡಿಯ ಮಾಲೀಕನು ಬೆಳಗಿನ ವೇಳೆಯಲ್ಲಿ ಹೆಚ್ಚಿನ ಕೆಲಸವನ್ನು ಮಾಡುತ್ತಾನೆ ಮತ್ತು ಇತರೆ ಆಯಾಗಾರರಿಗಿಂತ ಹೆಚ್ಚಿನ ಸಂಪಾದನೆ ಮಾಡುತ್ತಾನೆ.

ಕ್ಷೌರಿಕರು ಗ್ರಾಮೀಣ ಪ್ರದೇಶಗಳಲ್ಲಿ ಹಿಂದಿನ ದಿನಗಳಲ್ಲಿ ತಮ್ಮ ಉದ್ಯೋಗಕ್ಕೆ ವರ್ಷಾಂತ್ಯದಲ್ಲಿ ನಿಗದಿಪಡಿಸಿದ ಆಯ ಪಡೆಯುತ್ತಿದ್ದರು. ಒಂದು ತಲೆಗೆ ಒಂದು ವರ್ಷಕ್ಕೆ ಇಷ್ಟು ಎಂದು ನಿಗದಿ ಮಾಡಿಕೊಳ್ಳುತ್ತಾರೆ. ಇದರ ಜೊತೆಗೆ ಕಣಗಾಳಿಗೂ ಹೋಗುತ್ತಿದ್ದರು. ಕಣದ ರಾಶಿಯಲ್ಲಿಯ ಕಾಳನ್ನು ರೈತ ತೂರು ಪುಟ್ಟಿ ತುಂಬಿ ಇಲ್ಲವೆ ಮೊರ ತುಂಬಿ ಕೊಡುವನು. ಅಲ್ಲದೆ ರೈತ ತನ್ನ ಹೊಲದಲ್ಲಿ ಕಾಲಕಾಲಕ್ಕೆ ಬೆಳೆದ ಕಾಳುಕಡಿಗಳನ್ನು ಕೊಡುತ್ತಾನೆ. ಸುಗ್ಗಿಯ ಕಾಲದಲ್ಲಿ ಕಾಳಿನ ಹೊರೆಯನ್ನು ತರುವ ಹಕ್ಕು ಕ್ಷೌರಿಕನಿಗಿತ್ತು. ತನ್ನ ಮನೆಯಲ್ಲಿ ದನಕರುಗಳೇನಾದರೂ ಇದ್ದರೆ, ಒಣ ಹುಲ್ಲನ್ನು ರೈತರಿಂದ ಬೇಡಿ ತರುವನು. ಆದರೆ ಈ ರೀತಿಯ ಆಯಾ ಪದ್ಧತಿ ಕ್ರಮೇಣ ಇಂದು ಮಾಯವಾಗುತ್ತಿದೆ. ಇಂದು ಎಲ್ಲಾ ಸೇವೆಗಳು ಹಣಕ್ಕೆ ಮಾರಲ್ಪಡುತ್ತಿವೆ. ಅದರಂತೆಯೇ ಕ್ಷೌರಿಕನು ಕೂಡ ತನ್ನ ಕೆಲಸದ ವಿವಿಧ ಸೇವೆಗೆ ದರವನ್ನು ನಿರ್ಧರಿಸಿ ನಗದು ಸಂಭಾವನೆ ಪಡೆದುಕೊಳ್ಳುತ್ತಿದ್ದಾನೆ. ಹಳ್ಳಿಗಳಲ್ಲಿ ಇವರ ಸಂಖ್ಯೆ ಇಂದು ಕಡಿಮೆಯಾಗಿದೆ ನಗರ ಪ್ರದೇಶಗಳಿಗೆ ವಲಸೆ ಹೋಗಿ ಅಲ್ಲಿ ಸಣ್ಣ ಪ್ರಮಾಣದ ಸೆಲೂನ್ ಪ್ರಾರಂಭಿಸಿ ಜೀವನ ಸಾಗಿಸುತ್ತಿದ್ದಾರೆ. ಅವರ ಮಕ್ಕಳು ವಿದ್ಯಾಭ್ಯಾಸ ಮಾಡಿ ನಗರ ಸೇರಿ ನೌಕರಿ ಮಾಡುತ್ತಾರೆ. ತಮ್ಮ ಕುಲಕಸುಬಿಗೆ ವಿದಾಯ ಹೇಳುತ್ತಿದ್ದಾರೆ. ಅವರ ಮೂಲ ವೃತ್ತಿಯ ಬಗೆಗೆ ಈಗ ಅವರಿಗೆ ಗೌರವ ಉಳಿದಿಲ್ಲ. ಹಳೆಯ ಕಾಲದ ಕ್ಷೌರಿಕರು ತಮ್ಮ ವೃತ್ತಿಯನ್ನು ಬಿಟ್ಟು ವಿವಿಧ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ.

ಹೂಗಾರಿಕೆ:

ಹೂಗಳನ್ನು ಸಂಗ್ರಹಿಸಿ, ಹೂಮಾಲೆ ಮಾಡುವವರನ್ನು ಹೂಗಾರರೆನ್ನುತ್ತೇವೆ. ರೈತರ ಮನೆಗಳಿಗೆ ಹೂ–ಪತ್ರಿಗಳನ್ನು ಕೊಡುವ, ದೇವಸ್ಥಾನಗಳಲ್ಲಿ ಪೂಜಾ ಕಾರ್ಯಕ್ಕೆ ಹೂ ಸಂಗ್ರಹಿಸುವ, ಮಾಲೆ ಕಟ್ಟುವ, ಹೂಮಾರುವ ವೃತ್ತಿಯುಳ್ಳವರು ಹೂಗಾರರು.[೧೨೪] ಇವರ ಈ ವೃತ್ತಿಯೇ ಹೂಗಾರಿಕೆ. ಪ್ರತಿನಿತ್ಯದ ಪೂಜೆಗೆ, ಮಂಗಳ ಕಾರ್ಯಗಳಿಗೆ, ಮದುವೆಯಂತಹ ಮಂಗಳಕಾರ್ಯಗಳಿಗೆ ಹೂ, ಪತ್ರೆ ಹೂವಿನ ಹಾರಗಳನ್ನು ಬಳಸುತ್ತಾ ಬಂದಿದ್ದೇವೆ. ಎಲ್ಲಾ ವರ್ಗದ ಜನರಿಗೂ ಹಾಗೂ ಮಹಿಳೆಯರು ಮುಡಿಗೆ ಮುಡಿದುಕೊಳ್ಳಲು ಹೂಗಳು ಬೇಕಾಗುತ್ತವೆ. ಇವುಗಳನ್ನು ಸುಂದರವಾಗಿ, ಕಲಾತ್ಮಕವಾಗಿ ಹೆಣೆಯುವ ವೃತ್ತಿಯವರನ್ನು ಪ್ರಾಚೀನ ಕಾಲದಿಂದಲೂ

ಹೂಗಾರರೆಂದು ಕರೆಯುತ್ತ ಬಂದಿದ್ದೇವೆ. ಮೊದಲು ಈ ಹೂಗಾರ ವೃತ್ತಿ ಆಯಾಗಾರರ ಪಟ್ಟಿಯಲ್ಲಿ ಸೇರಿತ್ತು. ಇಂದು ಈ ವೃತ್ತಿಯನ್ನು ಯಾರು ಬೇಕಾದರೂ ಮಾಡುತ್ತಲಿರುವುದರಿಂದ ಹಳ್ಳಿಯ ಆಯಾಗಾರರಲ್ಲಿ ಈ ಹೆಸರು ಕಡಿಮೆಯಾಗುತ್ತ ಬರುತ್ತಲಿದೆ.

ಹೂಗಾರರನ್ನು ಪೂಜಾರ, ಜೀರ, ಗುರುವ, ಪುಲಾರಿ, ಪೂಲಮಾಲಿ, ಮಾಲಿ, ಮದ್ಲಿ, ಪುಷ್ಪದತ್ತ, ವೀಣೆಕಾರ ಮುಂತಾದ ಹೆಸರುಗಳಿಂದ ಕರೆಯುತ್ತಿರುವರು.[೧೨೫] ಇವರು ವೀರಶೈವರು ಈ ಜನಾಂಗದವರು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತಾರೆ. ಬಳ್ಳಾರಿ ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಜನಾಂಗದವರನ್ನು ಕಾಣಬಹುದು. ಈ ಜನಾಂಗ ಅಲ್ಪ ಸಂಖ್ಯಾತ ಜನಾಂಗವಾಗಿದೆ. ಪ್ರತಿ ಊರಿಗೆ ನಾಲ್ಕೈದು ಮನೆಗಳಿರುವುವು. ಇವರು ಹೂಗಾರಿಕೆ ವೃತ್ತಿ ಮಾಡುವುದರ ಜೊತೆಗೆ ಹನುಮಂತ, ಈಶ್ವರಲಿಂಗ, ರಾಮಲಿಂಗ ದೇವರುಗಳನ್ನು ಪೂಜೆಮಾಡುವರು. ಆ ದೇವಸ್ಥಾನಗಳ ಪೂಜಾರಿಕೆಯೂ ಈ ಜನಾಂಗಕ್ಕೆ ಸೇರಿದೆ.

ಪುಷ್ಪ ವೃತ್ತಿ ಹಾಗೂ ಪೂಜಾರಿಕೆಯನ್ನೇ ಅವಲಂಬಿಸಿದ ಈ ಜನಾಂಗದ ಬಗ್ಗೆ ಪ್ರಾಚೀನ ಕನ್ನಡ ಕಾವ್ಯ ಹಾಗೂ ಶಾಸನಗಳಲ್ಲೂ ಉಲ್ಲೇಖವಿರುವುದನ್ನು ಕಾಣಬಹುದು. ಹೂಗಾರರನ್ನು ಉಲ್ಲೇಖಿಸುವ ಕನ್ನಡದ ಮೊಟ್ಟ ಮೊದಲನೇ ಶಾಸನ (ಕ್ರಿ.ಶ.೫೯೭–೬೦೭) ವೆಂದರೆ ಬಾದಾಮಿಯ ಮಂಗಳೇಶನ ಶಾಸನ

ಸ್ವಸ್ತಿ ಶ್ರೀಮತ್ ಪ್ರಿ(ಪೃ)ಥಿವೀವಲ್ಲಭ ಮಂಗ(ಲೀ)ಸ(ಶ)ನಾ
ಕಲ್ಮನೆಗೆ ಇತ್ತೊಂದು ಲಂಜಿಗೇಸಂ ದೇವರ್ಕೆ ಪೂನಿರುವ
ಮಾಲ(ಲಾ)ಕಾರರ್ಗ್ಗೆ ಅರ್ದ್ಧವಿಸದಿ ಇತ್ತೊದಾನಳಿವೊನ್
ಪಞ್ಚಮಹಾಪಾತಕನ ಕುಂ(ಕ್ಕುಂ)ಏಳನೆಯಾ ನರಕದಾ ಪುಳು ಅಕು(ಕ್ಕು)ಮ್॥[೧೨೬]

ಈ ಶಾಸನವು ಬಾದಾಮಿಯ ಮೂರನೆಯ ಗುಹೆಯ ಮುಂಭಾಗದಲ್ಲಿದೆ. ಹೂಗಾರರು ತಮ್ಮ ಮೂಲಪುರುಷ ಪುಷ್ಪದತ್ತ ಎಂದು ಕರೆದುಕೊಳ್ಳುವುದುಂಟು. ಪುಷ್ಪದತ್ತನ ಉಲ್ಲೇಖ ಮಹಾಕವಿ ಹರಿಹರನ 'ನಂಬಿಯಣ್ಣನ ರಗಳೆ'ಯಲ್ಲಿ ಬರುವುದು. ಮಾಲೆಕಾರ ಎಂಬ ಉಲ್ಲೇಖ 'ಬಸವರಾಜ ದೇವರ ರಗಳೆ'ಯಲ್ಲಿ ಬರುವುದನ್ನು ಕಾಣಬಹುದು. ಜನ್ನನು ತನ್ನ 'ಅನಂತನಾಥ ಪುರಾಣ'ದಲ್ಲಿ 'ಕಟ್ಟಿಯೂಮೇನೊ ಪೊಸಬಾಸಿಗಮಂ ಮುಡಿವ ಬೋಗಿಗಳಲ್ಲದೆ ಬಾಡಿ ಪೋಪುದು' ಎಂದು ಉಲ್ಲೆಖಿಸಿದುದನ್ನು ಸ್ಮರಿಸಬಹುದು.[೧೨೭] ಹೂಗಾರರು ಹೂಮಾಲೆಯನ್ನು ಕಟ್ಟಿ ಹಾಗೆಯೇ ಇಟ್ಟರೆ ಅದು ಬಾಡಿಹೋಗುವುದು. ಅದನ್ನು ಮುಡಿದುಕೊಳ್ಳುವ ಭೋಗಿಗಳು ಬೇಕು.

ಹೂಗಾರರ ಉಲ್ಲೇಖವನ್ನು ಕನ್ನಡ ಸಾಹಿತ್ಯದುದ್ದಕ್ಕೂ ಕಾಣಬಹುದು. ಬಸವಾದಿ ಶರಣರ ಕಾಲದಲ್ಲಿ ಹೂಪತ್ರಿ ಕೊಡುವ ಕಾಯಕ ಮಾಡಿಕೊಂಡಿದ್ದ ಶರಣ ಹೂಗಾರ ಮಾದಣ್ಣನ

ಪ್ರಸ್ತಾಪವು 'ಬಸವಪುರಾಣ' (ಸಂ.೪೭), 'ಪದ್ಮರಾಜ ಪುರಾಣ' (ಸಂ.೨೨), 'ಗುರುರಾಜ ಚಾರಿತ್ರ' (XIII-೪೯), 'ವೀರಶೈವಾಮೃತ ಮಹಾಪುರಾಣ' (XIII-R) 'ಚೆನ್ನಬಸವ ಪುರಾಣ' ಪು.೬೬೬ ಮುಂತಾದ ಕೃತಿಗಳಲ್ಲಿ ಬರುವುದನ್ನು ಕಾಣಬಹುದು. ಇಷ್ಟೆ ಅಲ್ಲ ಹೂಗಾರ ಮಾದಣ್ಣನನ್ನು ಕುರಿತು ಜನಪದ ಕವಿಗಳು ತ್ರಿಪದಿಗಳಲ್ಲಿ ಅತನ ಚರಿತ್ರೆಯನ್ನು ಅಡಕಗೊಳಿಸಿ ಹಾಡುತ್ತಿದ್ದುದನ್ನು ಬಿ.ಎಸ್.ಗದ್ದಗೀಮಠ ಅವರು ತಮ್ಮ ಕನ್ನಡ 'ಜಾನಪದ ಗೀತೆಗಳು' ಕೃತಿಯಲ್ಲಿ ಸಂಗ್ರಹಿಸಿದ್ದಾರೆ.

ಇನ್ನೂ ಹಲವಾರು ಪ್ರಾಚೀನ ಕಾವ್ಯ ಪುರಾಣಗಳಲ್ಲಿ ಹೂವಿನ ವೃತ್ತಿ ಮಾಡಿಕೊಂಡಿದ್ದ ಹೂಗಾರರ ಉಲ್ಲೇಖ ಬರುವುದನ್ನು ಕಾಣಬಹುದು. ಪುಷ್ಪದ ಸೋಮಯ್ಯ (ಶಿವದಾಸ ಗೀತಾಂಜಲಿ, ಪು. ೨೧–೨೩) ಬಾಹೂರ ಬೊಮ್ಮಯ್ಯ (ಬಸವ ಪುರಾಣ, ಸಂಧಿ–೨೧) ಹೂವಿನ ಅಲ್ಲಮ್ಮ, ಹೂವಿನ ಬಾಚೀದೇವಾ (ಚೆನ್ನಬಸವ ಪುರಾಣ ಸಂ.೫೫ ಪದ್ಯ ೪೭–೪೮) ಬಿಲ್ಪಪತ್ರೆ ಯ ವೀರಣ್ಣಯ್ಯ (ಶಿವತತ್ವ ಚಿಂತಾಮಣಿ, ಪು.೪೧೪) ಮುಂತಾದವರ ಉಲ್ಲೇಖ ಬರುವುದನ್ನು ಕಾಣುವೆವು. ನಿತ್ಯವು ಬೆಳಿಗ್ಗೆ ಎದ್ದು ಹೂಗಳನ್ನು ತಿರುದು ತಂದು ಭಕ್ತರಿಗೆ ಹೂಮಾಲೆ ಮಾಡಿ ಕೊಡುತ್ತಿದ್ದ ಬಾಹೂರ ಬೊಮ್ಮಯ್ಯನ ಉಲ್ಲೇಖ ಬಸವ ಪುರಾಣದಲ್ಲಿ ಬಂದಿದೆ.

ಚಾರು ಚರತಂ ಮತ್ತೆಯುಂ ಬಾ
ಹೊರ ಬೊಮ್ಮಯ್ಯನೆಂಬ ಭಕ್ತನು
ದಾರಕೀರ್ತಿ ನಿರೂಡ ಗಡ ಮಹತ್ವ ತತ್ವಾರ್ಥಿ
ವೀರಶೈವಾಚಾರ ಸುವ್ರತ
ಕಾರಿ ಸುರಿಜಗೋಪಾಕರಿ ವಿ
ಕಾರದೂರನು ಸಾರ ಭಕ್ತಿ ಶರೀರದ ದುರಿತಾರಿ
ಒಲಿದು ಜಂಗಮಲಿಂಗ ಗುರುಪದ
ಜಲಜ ಪರಿಚಯ ಕ್ರಿಯಾ ಸಂ
ಕಲಿತ ಭಕ್ತಿಯೊಳಲಸದಾಗಳು ಮಾಡಬೇಕೆಂದು
ಹಲವು ಹೂದೋಡಗಳನರ್ಜಿಸಿ
ಬೆಳಗು ಜಾಲಿನಲೆದ್ದು ಕುಕ್ಕುಟ
ನುಲಿಯ ಲೊಡನಂತೆಯ್ದಿ ಹೂಗಳನೆಯ್ದೆ ಕೂಯಿತಂದು
ಕುಸುಮ ಮಾಲೆಗಳಂ ರಚಿನ ತಂ
ದೊಸೆದು ಭಕ್ತರಿಗಿತ್ತು ತಾ ನಿ
ತ್ಯಶನ ಕಾಯಕ ಲಬ್ದಿಯಲಿ ಜಂಗಮಕೆ ಮಾಡುತ್ತ
ಪೆಸರು ಪೆಸರಿಸಿ ಕೀರ್ತಿಸುತ್ತದೆ

ವಸುಧೆಯೊಳು ಮತ್ತೊಂದು ವಾದದೊ
ಳಸಮ ಭರ್ಗನೆ ಕರ್ತನೆಂಬುದದಂ ಪ್ರತಿಷ್ಠಿಸಿದ[೨೨]

ಬಾಹೂರ ಬೊಮ್ಮಯ್ಯ ಹೂವಿನ ವೃತ್ತಿ ಮಾಡಿಕೊಂಡಿದ್ದ ಒಬ್ಬ ಶಿವಭಕ್ತನೆಂಬುದು ಈ ಮೇಲಿನ ಪದ್ಯದಿಂದ ವಿಧಿತವಾಗುವುದು. ಈ ಎಲ್ಲಾ ಉಲ್ಲೇಖಗಳನ್ನು ಪರಿಶೀಲಿಸಿದಾಗ ಹೂಗಾರರು ಪ್ರಾಚೀನ ಕಾಲದಿಂದಲೂ ಇದ್ದರೆಂಬುದು ವಿದಿತವಾಗುವುದು. ಇವರು ಹೂ ಕಾಯಿ, ಪತ್ರೆ ಕೊಡುವುದರೊಂದಿಗೆ ಹನುಮಂತ, ಈಶ್ವರ ಲಿಂಗ, ರಾಮಲಿಂಗ ಮುಂತಾದ ದೇವರನ್ನು ಪೂಜಿಸುವ ಕಾಯಕವನ್ನು ಮಾಡಿಕೊಂಡು ಬಂದುದರಿಂದ ಇವರಿಗೆ ಪೂಜಾರರು ಎಂದು ಕರೆಯುತ್ತ ಬಂದುದುಂಟು. ಪೂಜಾರರಲ್ಲಿ ಬೇರೆ ಬೇರೆ ಜಾತಿಯವರು ಇರುವುದುಂಟು. ಕೆಲವಡೆ ಬ್ರಾಹ್ಮಣರಿಗೆ, ಕುರುಬರಿಗೆ, ಕಬ್ಬಲಿಗರಿಗೆ, ಪೂಜಾರರೆಂದು ಕರೆಯುವುದುಂಟು. ಆದರೆ ಹೂವಿನ ವೃತ್ತಿ ಮಾಡಿಕೊಂಡು ಬರುವುದರ ಜೊತೆಗೆ ಪೂಜೆ ಪುನಸ್ಕಾರಗಳಲ್ಲೂ ತೊಡಗಿದ್ದರಿಂದ ಇವರು ಇನ್ನೂಳಿದ ಪೂಜಾರರಿಗಿಂತ ಭಿನ್ನರಾಗಿದ್ದಾರೆ. ಅಂದರೆ ಇವರು ಹೂಗಾರರೆಂದರ್ಥ. ಹೂಗಾರರನ್ನು 'ಜೀರ್' ಮತ್ತು 'ಗುರುವ' ಎಂದು ಕರೆಯುವುದುಂಟು. 'ಜೀರ್' ಪದ ಜೀಯರ್‌ದಿಂದ ಬಂದಿದೆ. ಜೀಯರ್ ಎಂದರೆ ಒಡೆಯರು, 'ಜೀರ್' ಈ ಪದ ಗೌರವಸೂಚಕವಾದುದು. ಪ್ರಾಚೀನ ಶಾಸನಗಳಲ್ಲಿ ಬರುವ ಮಾರಜೀಯ, ದೇವಸಿಂಗಿಜೀಯ, ಶಿವಜೀಯ, ದುರ್ಗಜೀಯ ಮೊದಲಾದ ಕಾಳಾಮುಖ ಆಚಾರ್ಯರು ಹೂಗಾರರೆ ಆಗಿದ್ದರು ಹೂಗಾರರು ಕಾಳಮುಖ ಶೈವರೇ ಆಗಿದ್ದರು. ಹೂಗಾರರಲ್ಲಿ ಕೆಲವರು ಜನಿವಾರ ಧರಿಸಿದರೆ ಇನ್ನೂ ಕೆಲವರು ಲಿಂಗವನ್ನು ಧರಿಸುವುದುಂಟು. ಹೂಗಾರರಿಗೆ ದೇವಸ್ಥಾನದ ಇನಾಮು-ಉಂಬಳಿ ಜಮೀನುಗಳಿರುತ್ತವೆ. ಹಿಂದೆ ಗುರವರು, ಹೂಗಾರರು ಸಾಮಾಜಿಕ ಮತ್ತು ಧಾರ್ಮಿಕ ಉನ್ನತ ಸ್ಥಾನಮಾನವನ್ನು ಹೊಂದಿದ್ದರೆಂಬುದು ಹಲವಾರು ನಿದರ್ಶನಗಳಿಂದ ತಿಳಿದುಬರುತ್ತದೆ. ಈ ಜನಾಂಗದವರು ಹೊಂದಿದ್ದ ಸ್ಥಾನಮಾನವನ್ನು ಪೂಜ್ಯ ಕಾಶಿನಾಥ ಭಗವಂತಸ್ವಾಮಿ ಗುರುವ ಜೀಹಂಕರ ಅವರು 'ಸ್ಥೂಲ ಶೈವಾಗಮ' ಗ್ರಂಥದಲ್ಲಿ ಹೀಗೆ ಬರೆದುದುಂಟು.

ಶುದ್ಧಶೈವ ಇತಿ ಪ್ರೊಕ್ತೊ ಮದ್ಭವಂ ಶೈವ ಮುಚ್ಚಾಲೆ
ತೇಪಿ ಶಿವ ದ್ವಿಜಾಃ ಪ್ರೋಕ್ತೊ ಲೋಕೇ ಪೂಜಾ ಬಹಂತಿ ಹಿ
ಶೈವರೂಪ ಇದಂ ಹೂಗಾರ ಬ್ರಾಹಣವರ್ಣಾ ಇತಿ ಶುದ್ಧ ಶೈವ ಚ
ನಾಮಾನಿ ಇದಮಂ ಶೈವ ಬ್ರಾಹ್ಮಣಂ[೨೩]

ಗುರುವರು ಹೂಗಾರರು ಶೈವ ಬ್ರಾಹ್ಮಣರೆಂದು ಇಲ್ಲಿ ಹೇಳಿದುದು ಗಮನಾರ್ಹವಾಗಿದೆ. ಆದರೆ ಈಗ ಆ ಸ್ಥಾನಮಾನ ಈ ಜನಾಂಗದವರಿಗೆ ಇಲ್ಲದಂತಾಗಿದೆ.

ಗುರುವ ಪೂಜಾರ, ಜೀರ್ ಮತ್ತು ಹೂಗಾರರನ್ನು ಇಂದು ಲಿಂಗಾಯತರಲ್ಲಿ ಒಂದು ಉಪಗುಂಪಿನವರೆಂದು ಪರಿಗಣಿಸುವುದುಂಟು. ಆದರೂ ಇವರು ಆರ್ಥಿಕ ದೃಷ್ಟಿಯಿಂದ ತುಂಬಾ ಹಿಂದೆ ಉಳಿದುದರಿಂದ ಇವರಿಗೆ ಮೊದಲು ಇದ್ದ ಸಾಮಾಜಿಕ ಸ್ಥಾನಮಾನ ಇಂದು ಉಳಿದಿಲ್ಲ. ಲಿಂಗಾಯತರು ಇವರನ್ನು ತಮಗಿಂತ ಕಡಿಮೆ ಎಂದೂ ಭಾವಿಸುವುದುಂಟು. ಸಾಮಾಜಿಕ ಸ್ಥಾನಮಾನ ಆರ್ಥಿಕ ಸ್ಥಿರತೆಯ ಮೇಲೆ ಇಂದು ಹೆಚ್ಚಾಗಿ ಅಳೆಯಲಾಗುತ್ತದೆ. ಹೂಗಾರ, ಜೀರ, ಗುರುವ, ಪೂಜಾರ ಸಮಾಜದವರು ಗ್ರಾಮೀಣ ಪ್ರದೇಶಗಳಲ್ಲಿಯೇ ಹೆಚ್ಚಾಗಿ ವಾಸಿಸುತ್ತಿದ್ದು, ಇವರು ಅಂತಹ ಪ್ರಗತಿಯನ್ನೇನೂ ಸಾಧಿಸಿಲ್ಲ. ಊರ ಜನತೆಯ ಸೇವೆಯನ್ನು ಮಾಡಿಕೊಂಡು, ತಮ್ಮ ಹೆಸರಿನಲ್ಲಿದ್ದ ಹೊಲ ಗದ್ದೆಗಳನ್ನು ಉಳಿಸಿಕೊಂಡು ಜೀವನ ಸಾಗಿಸುವುದನ್ನು ನಾವಿಂದು ಕಾಣುವೆವು.

ಹೂಗಾರರ ವೃತ್ತಿಕಲೆ:

ಹೂ ಪತ್ರಿ, ಬಾಸಿಂಗ, ದಂಡೆ ತಯಾರಿಸುವ ಕಲೆ: 'ಶಿವಪೂಜೆ ಮಾಡುವುದಕ ಮುಂಗಡ ಹೂ ಬೇಕ । ಬಿಲ್ವಪತ್ರೆ ಬೇಕು ನಿತ್ಯದಲಿ' (ಕನ್ನಡ ಜಾನಪದ ಗೀತೆಗಳು–ಪು.೩೨೮) ಈ ರೀತಿ ಪ್ರತಿನಿತ್ಯ ಶಿವಪೂಜೆಗೆ ಬೇಕಾಗುವ ಹೂವು ಪತ್ರಿಗಳನ್ನು ತಂದು ಮನೆಮನೆಗೆ ಅಡ್ಡಾಡಿ ಕೊಡುವುದು ಹೂಗಾರರ ಕಾರ್ಯ. ಬಿಲ್ವಪತ್ರೆ ಗಿಡವನ್ನು ಹೂಗಾರರು ಮಾತ್ರ ಏರುವರು. ಉಳಿದವರು ಏರುವುದಿಲ್ಲ. ಹೂಗಾರರು ಮಳೆ, ಛಳಿ ಎನ್ನದೆ ಸೂರ್ಯೋದಯಕ್ಕೆ ಮುನ್ನವೇ ಸ್ನಾನ ಮಾಡಿ ಮಡಿಯಿಂದ ತೋಟಗಳಲ್ಲಿ ಅಡ್ಡಾಡಿ ಹೂಪತ್ರೆಗಳನ್ನು ಕಿತ್ತುಕೊಂಡು ಬಂದು ಹಂಚುವರು. ಹೂಗಳನ್ನು ಕೆಲ ಹೂಗಾರರು ತಮ್ಮ ತೋಟಗಳಲ್ಲೇ ಬೆಳೆಸುವರು. ಇನ್ನೂ ಕೆಲವರು ಹೊಲಗದ್ದೆ ಇಲ್ಲದವರು ಬೇರೆಯವರ ತೋಟಗಳಿಂದ ಹರಿದು ತರುವರು. ಹೂಗಾರರು ಪತ್ರೆ ಗಿಡ ಏರುವ ಮುನ್ನ ಅದಕ್ಕೆ ನಮಸ್ಕರಿಸುವುದುಂಟು. ಪತ್ರಿಯನ್ನು ಹರಿದು ಜೋಳಿಗೆಯಲ್ಲಿ ತುಂಬಿಕೊಂಡು ತಂದು ಮನೆ ಮನೆಗೆ ಹೋಗಿ ಸಣ್ಣ ಬುಟ್ಟಿಯಲ್ಲಿ ಪತ್ರೆ ಹೂ ಹಾಕಿಕೊಡುವರು. ಭಕ್ತಜನರು ಅದೇ ಬುಟ್ಟಿಯಲ್ಲಿ ಧಾನ್ಯವನ್ನು ಹಾಕಿಕೊಡುವರು. ಊರೆಲ್ಲ ತಿರುಗಾಡಿ ಹೂಗಾರರು ಈ ರೀತಿ ಪತ್ರಿ ಹೂವು ಕೊಡುವರು. ಇದು ಅವರ ಕರ್ತವ್ಯ ಹಾಗೂ ಉಪಜೀವನ ವೃತ್ತಿ.

ಹೂಗಾರರು ಪತ್ರಿ ಹಾಕುವುದರೊಂದಿಗೆ ಹನುಮಂತ, ಬಸವಣ್ಣ, ವೀರಭದ್ರ ದೇವರನ್ನು ಪೂಜಿಸುವರು. ಊರಲ್ಲಿ ಪತ್ರಿ ಹಾಕುವುದನ್ನು ಪೂಜೆ ಮಾಡುವುದನ್ನು ಹೂಗಾರ ಅಣ್ಣತಮ್ಮಂದಿರು ಪರಸ್ಪರ ಒಂದೊಂದು ವರ್ಷ ಹಂಚಿಕೊಂಡು ಪಾಳೆಯ ಮೇಲೆ ಈ ಕರ್ತವ್ಯ ಮಾಡುವರು. ಇತ್ತೀಚೆಗೆ ಪಟ್ಟಣಗಳಲ್ಲಿ ಹೂಗಾರರು ಹೂವಿನ ಹಾರಗಳನ್ನು ಅಂಗಡಿಗಳಲ್ಲಿಯೇ ತಯಾರಿಸಿ ಇಡುವರು. ಭಕ್ತರು, ಸ್ತ್ರೀಯರು ಮಾಲೆಗಳನ್ನು ಅಂಗಡಿಗಳಿಗೆ ಬಂದು ಖರೀದಿಸುವರು. ಕೆಲ ಹೂಗಾರರು ಹೂವಿನ ಹಾರಗಳನ್ನು ತಮ್ಮ ಮನೆಗಳಲ್ಲಿಯೇ ಸಿದ್ಧಪಡಿಸಿಕೊಂಡು ಮನೆ ಮನೆಗೆ

ಅಂಗಡಿ ಅಂಗಡಿಗಳಿಗೆ ಹೋಗಿ ಕೊಟ್ಟು ಪ್ರತಿಯಾಗಿ ಹಣವನ್ನು ಪಡೆಯುವರು. ಇದೊಂದು ಜೀವನ ನಿರ್ವಹಣೆಯ ಕಾಯಕವೇ ಆಗಿದೆ. ಅದರೆ ಹಳ್ಳಿಗಾಡಿನಲ್ಲಿಯ ಹೂಗಾರರಿಗೆ ಹೂವಿನ ವೃತ್ತಿ ಅಂಥ ಲಾಭದಾಯಕವಾದ ಕಾಯಕವೆನ್ನಿಸದಿದ್ದರೂ ಅವರು ತಮ್ಮ ಕುಲಕಸುಬು ಎಂದು ಭಾವಿಸಿ ಈ ಕಾಯಕವನ್ನು ಮಾಡಿಕೊಂಡು ಬಂದಿರುವರು. ಮದುವೆ, ಮರಣ ಇತ್ಯಾದಿ ಸಂದರ್ಭಗಳಲ್ಲಿ ಹೂಗಾರರು ದಂಡೆ ಹೆಣೆದುಕೊಡುವುದು, ಬಾಸಿಂಗ ಸಿದ್ಧಪಡಿಸುವುದು ಮುಂತಾದ ಕಾಯಕಗಳಲ್ಲಿ ತೊಡಗಿದ್ದುದನ್ನು ಕಾಣಬಹುದು. ಇಂತಹ ಕಾಯಕಗಳಿಂದಾಗಿ ಇವರಿಗೆ ಕೆಲವು ಸಂಭಾವನೆ ಹಾಗೂ ಹಕ್ಕುಗಳಿವೆ. ಆಯಾಗಾರರಲ್ಲಿ ಬರುವ ಇವರು ಸುಗ್ಗಿಯ ಕಾಲದಲ್ಲಿ ಹೊಲಗಳಿಗೆ ಕಣಗಳಿಗೆ ಹೋಗಿ ಧಾನ್ಯವನ್ನು ಬೇಡಿ ತರುವರು. ಜನರೂ ಭಕ್ತಿಯಿಂದ ಧಾನ್ಯ ಕೊಡುವರು–ಮದುವೆ ಸಂದರ್ಭಗಳಲ್ಲಂತೂ ಹೂಗಾರರಿಗೆ ಹೆಚ್ಚಿನ ಗೌರವ ಮರ್ಯಾದೆ ಸಲ್ಲುತ್ತದೆ. ಹೂಗಾರರು ಬಾಸಿಂಗ ಹೂವಿನ ದಂಡೆ ತಯಾರಿಸುವರು. ಮದುವೆ ಮನೆಯಿಂದ ಬಾಜಾ ಭಜಂತ್ರಿಯ ದಂಡು ಹೂಗಾರರ ಮನೆಗೆ ಬಂದು ಬಾಸಿಂಗ–ಹೂವಿನ ದಂಡೆ ಒಯ್ಯುವ ಸಂದರ್ಭವಂತೂ ಅತ್ಯಂತ ಗೌರವಯುತವಾದುದು. ಬಾಸಿಂಗ ತರಲು ಹೂಗಾರರ ಮನೆಗೆ ಮದುವೆಯ ಮನೆಯ ಮುತ್ತೈದೆಯರು, ಕಳಸಗಿತ್ತಿಯರು, ಮಕ್ಕಳು, ಗಂಡಸರು ಭಾಜಾಭಜಂತ್ರಿಯ ಮಂಗಲವಾದ್ಯ ನುಡಿಸುವವರೊಂದಿಗೆ ಹೋಗುವರು. ತಾವು ಬಾಸಿಂಗ ಒಯ್ಯಲು ಬರುವುದನ್ನು ಹೂಗಾರರಿಗೆ ಮೊದಲೇ ಸೂಚನೆ ಕೊಟ್ಟಿರುತ್ತಾರೆ. ಹೀಗಾಗಿ ಅವರು ಬಾಸಿಂಗ, ದಂಡಿ ತಯಾರಿಸಿ ಇಟ್ಟಿರುವರು. ಹೂಗಾರರಿಗೆ ಗ್ರಾಮೀಣ ಪ್ರದೇಶದಲ್ಲಿ ಬೆಲ್ಲ, ಹಿಟ್ಟು, ಬ್ಯಾಳಿ ಮುಂತಾದ ಉಲುಪಿ ಸಲ್ಲಿಸಿ ಅವರಿಂದ ಬಾಸಿಂಗ ದಂಡಿ ತರುವರು. ಹೂಗಾರರು ಊರಲ್ಲಿ ನಡೆಯುವ ಮದುವೆಯಲ್ಲಿ ಸಂಭ್ರಮದಿಂದ ಸಂತೋಷದಿಂದ ಪಾಲ್ಗೊಳ್ಳುವರು.

ಈ ಸಂದರ್ಭದಲ್ಲಿ ಹೂಗಾರರಿಗೆ ಸಿಗುವ ಮನ್ನಣೆ ಗಮನಾರ್ಹವಾದುದು. ಕೆಲವು ಕಡೆ ಹೂಗಾರರೇ ಮದುವೆ ಮನೆಗೆ ಭಾಸಿಂಗ ದಂಡೆಗಳನ್ನು ಒಯ್ದುಕೊಡುವುದುಂಟು. ಆಗ ಮದುವೆಯ ಮನೆಯವರು ಬಾಸಿಂಗ ತಂದಣ್ಣಗ, ತೂಗು ಮಂಚ ಕೊಡಿರೆ' ದಂಡಿ ತಂಗಣ್ಣಗ ಹಿಂಡು ಎಮ್ಮಿ ಕೊಡಿರೆ' ಖಂಡಗದ ಹೊಲಗದ್ದೆ ಕೊಡಿರೆ' ಎಂದು ಹೂಗಾರರಿಗೆ ಗೌರವ ಕೊಡುವರು. ಹೀಗೆ ಬಾಸಿಂಗ–ದಂಡೆಗಳನ್ನು ಮದುವೆ ಮನೆಗೆ ತಂದು ಒಪ್ಪಿಸಿದ ಹೂಗಾರರನ್ನು ತಮ್ಮ ಯೋಗ್ಯತಾನುಸಾರ ಬಾಬು–ಹಣಕೊಟ್ಟು ಗೌರವಿಸುವರು.

ಹೂಗಾರರು ಬಾಸಿಂಗವನ್ನು ತಯಾರಿಸುವಲ್ಲಿ ಪರಿಣತರು. ಮದುವೆ ಮುಹೂರ್ತಗಳಲ್ಲಿ ಇರುವ ಬಾಸಿಂಗ ತಯಾರಿಸುವಲ್ಲಿ ತುಂಬಾ ಕ್ರಿಯಾಶೀಲರಾಗಿ ತಮ್ಮನ್ನು ತೊಡಗಿಸಿಕೊಳ್ಳುವರು. ಬಾಸಿಂಗವನ್ನು ಸಾಮಾನ್ಯವಾಗಿ ಜೋಳದ ದಂಟು, ಬಿದಿರು ಇಲ್ಲವೆ ಹುಲಿಬೆಂಡುಗಳಿಂದ ಮಾಡುವರು. ದಾರದಿಂದ ಮೊದಲು ಬಿದಿರು–ಬೆಂಡಿನಿಂದ ಕಟ್ಟಿ ಅದಕ್ಕೆ ಬಣ್ಣಕ್ಕೆ ಹಾಳೆ ಬಣ್ಣದ

ಬ್ಯಾಗಡಿಗಳಿಂದ ಅಂಟಿಸುವರು. ಬಾಸಿಂಗಗಳಲ್ಲಿ ಹೆಡೆ ಬಾಸಿಂಗ, ಗುಡಿಬಾಸಿಂಗ, ಎಂದು ಎರಡು ಪ್ರಕಾರಗಳುಂಟು. ಹೆಡೆ ಬಾಸಿಂಗ ಸಾದಾ ಇದ್ದು ಇದು ಮೂರು, ಐದು, ಏಳು ಹೆಡೆಗಳಿಂದ ಕೂಡಿರುತ್ತದೆ. ಮೂರು ಹೆಡೆಗಳ ಬಾಸಿಂಗವನ್ನೆ ಜನ ಹೆಚ್ಚಾಗಿ ಬಳಸುವುದುಂಟು. ಮೂರು ಹೆಡೆಗಳನ್ನು ಬ್ರಹ್ಮ, ವಿಷ್ಣು, ಮಹೇಶ್ವರಗಳ ಸಂಕೇತವೆಂದು ತಿಳಿಯುವುದುಂಟು. ಈ ಬಾಸಿಂಗವನ್ನು ಗೋಟು, ತುಂಡಿಲು, ಬೊಟ್ಟು, ನಡುವೆ ಈಶ್ವರ ಇಲ್ಲವೆ ಬಸವಣ್ಣ ಇವುಗಳಿಂದ ಅಲಂಕರಿಸುವರು. ಇಂಥ ಬಾಸಿಂಗಗಳನ್ನು ಸಾಮಾನ್ಯವಾಗಿ ಎಲ್ಲರೂ ಉಪಯೋಗಿಸುವುದುಂಟು. ಇನ್ನು ಗುಡಿಬಾಸಿಂಗವನ್ನು ಶ್ರೀಮಂತರು ಬಳಸುವರು. ಹೆಡೆ ಬಾಸಿಂಗದ ಮುಂದೆ ಮೂರು ಬಾಗಿಲು ನಡುವೆ ಈಶ್ವರ, ಛತ್ರಿ, ಚಾಮರ, ಆಪ್ತೇಗರಿಗಳಿಂದ ಅಲಂಕರಿಸಿ ಗುಡಿ ಬಾಸಿಂಗಗಳನ್ನು ಸಿದ್ಧಪಡಿಸುವರು. ಇಲ್ಲಿ ಕುಸುರಿನ ಕೆಲಸ ಬಹಳ–ಹೂಗಾರರು ಈ ಬಾಸಿಂಗ ತಯಾರಿಸುವಲ್ಲಿ ತಮ್ಮ ಕಲಾ ಪ್ರತಿಮೆಯನ್ನು, ವೇಳೆಯನ್ನು ಹೆಚ್ಚಾಗಿ ವ್ಯಯಿಸುವರು, ಇಂಥ ಬಾಸಿಂಗವನ್ನು ತಯಾರಿಸಲು ಸುಮಾರು ಹದಿನೈದು ದಿನ ಹಿಡಿಯುವುದು. ಇದಕ್ಕೆ ಸಂಭಾವನೆಯು ಬಹಳ ಬರುವುದು. ಸಾಮಾನ್ಯವಾಗಿ ಇಂಥಹ ಬಾಸಿಂಗಕ್ಕೆ ಐದುನೂರು ರೂಪಾಯಿಗಳಿಂದ ಐದು ಸಾವಿರ ರೂಪಾಯಗಳ ಸಂಭಾವನೆ ಬರುವುದುಂಟು. ಇಲ್ಲವೆ ಕೆಲವರು ಈ ಬಾಸಿಂಗ ತಂದುದಕ್ಕೆ ಬಂಗಾರವನ್ನು ಕೊಡುವುದುಂಟು. ಕೆಲವರು ಮುತ್ತಿನಬಾಸಿಂಗವನ್ನು ತಯಾರಿಸುತ್ತಾರೆ. ಈಗೀಗ ಈ ಬಾಸಿಂಗಗಳ ಬಳಕೆ ಕಡಿಮೆಯಾಗಿದೆ. ಹೂಗಾರರಲ್ಲೂ ಈ ಬಾಸಿಂಗಗಳನ್ನು ಕುಳಿತು ತಯಾರು ಮಾಡುವ ವ್ಯವಧಾನ ಇಲ್ಲವಾಗಿದೆ. ಬಜಾರಿನಲ್ಲಿಯೇ ತಯಾರಿಸಿದ ಬಾಸಿಂಗಗಳನ್ನು ಕೊಂಡು ತಂದು ಬಳಸುವದೇ ಹೆಚ್ಚು. ಇತ್ತಿತ್ತಲಾಗಿ ಮುತ್ತಿನ ಬಾಸಿಂಗಗಳನ್ನು ಹೆಚ್ಚಾಗಿ ಜನ ಬಳಸುತ್ತಿದ್ದಾರೆ. ಹೂಗಾರರ ಬಾಸಿಂಗ ಮಾಡುವ ವೃತ್ತಿ ಬಹುಕಾಲದಿಂದಲೂ ಬಂದಂಥದ್ದು. ಇವರು ಬಾಸಿಂಗಕ್ಕೆ ಬದಲಿಯಾಗಿ ಉಲುಪಿ, ಹಣ ಪಡೆಯುವರು. ಕೆಲ ಶ್ರಿಮಂತರು ಹೂಗಾರ ಹೆಣ್ಣು ಮಕ್ಕಳಿಗೆ ಸೀರೆ ಉಡುಸುವುದುಂಟು. ಇನ್ನೂ ಕೆಲವರು ಎಮ್ಮೆ, ಆಕಳುಗಳನ್ನು ಕೊಡುವರು. ಇಂದು ಈ ವೃತ್ತಿ ಅಷ್ಟಾಗಿ ಹೂಗಾರರಿಗೆ ಲಾಭದಾಯಕವಾಗಿ ಪರಿಣಮಿಸುತ್ತಿಲ್ಲ. ಜನರೂ ಇಂದು ಹೂಗಾರರ ಕೈಯಿಂದ ಇವನ್ನು ಮಾಡಿಸುವುದನ್ನು ಕಡಿಮೆ ಮಾಡಿದ್ದಾರೆ. ಸಿದ್ಧವಾದ ಬಾಸಿಂಗಗಳನ್ನೇ ತಂದು ಬಳಸುತ್ತಿದ್ದಾರೆ.

ಕೆಲವೆಡೆ ಬ್ರಾಹ್ಮಣರಿಗೆ, ಪಟ್ಟೆಗಾರರಿಗೆ ಬೇಕಾಗುವ ಎಲೆ ಬಾಸಿಂಗವನ್ನು ಹೂಗಾರರೆ ಮಾಡಿಕೊಡುವುದುಂಟು. ಇದು ತ್ರಿಕೋನ ಆಕಾರದ ಮೂರು ಅಥವಾ ಐದು ಎಲೆಗಳಿಂದ ಮಡಲ್ಪಟ್ಟಿರುತ್ತದೆ. ಹೂಗಾರರು ತಮ್ಮ ಮದುವೆಗಳಲ್ಲಿ ಇಂಥಹ ಬಾಸಿಂಗಗಳನ್ನೇ ಕಟ್ಟಿಕೊಳ್ಳುವರು. ಹೆಣ್ಣು ಮಕ್ಕಳು ಹೂವಿನ ದಂಡೆ ಕಟ್ಟಿಕೊಳ್ಳುವರು. ಅಲ್ಲದೆ ಮುಸಲ್ಮಾನರು ಲಗ್ನದಲ್ಲಿ ಮದುಮಗನ ನಿಲುವಿನ ಉದ್ದದ 'ಮಕಾನಾ'ವನ್ನು ಇವರೇ ಮಾಡಿಕೊಡುವರು. ಕಾರು, ವಾಹನಗಳಿಗೂ

ಹೂಹಾರಗಳನ್ನು ಹೂಗಾರರು ತಯಾರಿಸುವರು. ಕಮತಗಿಯ ಶ್ರೀ ಹನುಮಪ್ಪ ಹೂಗಾರ ಇವರು ಮನುಷ್ಯನ ಎತ್ತರದವರೆಗಿನ ಭವ್ಯ ಹಾರಗಳನ್ನು ಕಟ್ಟಿ ಬಾಗಲಕೋಟೆ ಜಿಲ್ಲೆಯಲ್ಲಿಯೇ ಅತ್ಯಂತ ಪ್ರಸಿದ್ಧಿ ಪಡೆದಿದ್ದಾರೆ. ಇವರು ಕಟ್ಟಿದ ಹೂವಿನ ಮಾಲೆಗಳು ಅಲ್ಲಿನ ಸುತ್ತಮುತ್ತಲಿನ ಮಠಮಾನ್ಯಗಳಲ್ಲಿ ಈಗಲೂ ನೋಡಲು ಸಿಗುತ್ತವೆ. ಇದು ಒಂದು ಬಗೆಯ ಕೌಶಲ್ಯವೇ ಆಗಿದೆ. ಆದರೆ ಇಂತಹ ಮಾಲೆಗಳನ್ನು ತಯಾರು ಮಾಡುವುದು ಕಡಿಮೆ. ಆದರೂ ರಾಜಕೀಯ ವ್ಯಕ್ತಿಗಳು, ಮಂತ್ರಿ ಮಹೋದಯರು, ಮಠಾಧಿಕಾರಿಗಳಿಗೆ ಮುಂಗಡ ಪಡೆದು ಹೂಗಾರರು ತಯಾರು ಮಾಡಿಕೊಡುವುದುಂಟು. ಇದು ಲಾಭದಾಯಕ ಉದ್ಯೋಗವೆಂದು ತಿಳಿದು ಬೇರೆ ಬೇರೆ ಜಾತಿಯವರು ವಿಶೇಷವಾಗಿ ಮುಸಲ್ಮಾನರು ಇತ್ತೀಚೆಗೆ ಹೂವಿನಹಾರ ತಯಾರಿಸಿ ಮಾರುವ ಉದ್ಯೋಗದಲ್ಲಿ ತೊಡಗಿಕೊಂಡಿರುವುದನ್ನು ಕಾಣಬಹುದು. ಗುಲ್ಬರ್ಗಾ ಬೀದರ್ ಕಡೆ ಹೂವಿನಹಾರ ಮಾಡುವ ಉದ್ಯೋಗವನ್ನು ಮುಸಲ್ಮಾನರು ಮಾಡುತ್ತಿದ್ದಾರೆ. ಹೂವಿನ ಅಂಗಡಿಗಳನ್ನು ಹೆಚ್ಚಾಗಿ ಇವರೇ ನಡೆಸುತ್ತಿದ್ದಾರೆ.

ಹಳ್ಳಿಗಳಲ್ಲಿ ಇಂದಿಗೂ ಯಾರಾದರೂ ಸತ್ತರೆ ಅವರ ಶವಕ್ಕೆ ಹೂವಿನ ಹಾರವನ್ನು ಹೂಗಾರರೆ ಕಟ್ಟಿಕೊಡುವರು. ಸತ್ತವರು ಹೆಣ್ಣುಮಗಳಾಗಿದ್ದರೆ ದಂಡೆಹೆಣದು ಕೊಡುವರು. ಗಂಡಿದ್ದರೆ ಕೈಯಲ್ಲಿ ತುರಾಯಿ ಕೊಡುವರು. ಕೊರಳಲ್ಲಿ ಹೂಮಾಲೆ ಹಾಕುವರು. ಶವಸಂಸ್ಕಾರದ ಸಮಯದಲ್ಲಿ ಹೂಗಾರರು ಶವಸಂಸ್ಕಾರ ಮಾಡಲು ಬಂದ ಎಲ್ಲರಿಗೂ ಹೂ-ಪತ್ರೆ ಕೊಡುವರು. ಕೆಲವಡೆ ಈ ಕಾರ್ಯವನ್ನು ಮಠಪತಿಯವರು ಮಾಡುವುದುಂಟು. ಹೂಪತ್ರಿ ಕೊಟ್ಟದ್ದಕ್ಕೆ ಹೂಗಾರರಿಗೆ ದಕ್ಷಿಣ ರೂಪದಲ್ಲಿ ಹಣ ಬರುವುದು. ಸತ್ತಾಗ ಧಾನ್ಯವನ್ನು ದಾನ ಮಾಡುವುದುಂಟು ಆ ಧಾನ್ಯದಲ್ಲಿ ಹೂಗಾರರಿಗೂ ಪಡೆಯುವ ಹಕ್ಕುಂಟು.

ಹೂಗಾರರು ಆಯಾಗಾರರಲ್ಲಿ ಪ್ರಮುಖರು. ಊರ ಜನತೆಯ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಿಕೊಂಡು ಬರುತ್ತಿದ್ದ ಇವರು ಸುಗ್ಗಿಯ ಕಾಲದಲ್ಲಿ ಒಕ್ಕಲಿಗರಿಂದ ಧಾನ್ಯ ಪಡೆಯುವರು. ರಾಶಿ ನಡೆದಾಗ ಕಣಗಳಿಗೆ ಇವರು ಹೂವಿನ ಹಾರ ಪತ್ರಿಗಳನ್ನು ಪೂಜೆಗೆಂದು ಒಯ್ದುಕೊಡುವರು. ಹೀಗೆ ಹೂಪತ್ರಿ ಒಯ್ದು ಕೊಡುತ್ತಿದ್ದುದಕ್ಕೆ ಹನ್ನೆರಡನೇ ಶತಮಾನದಲ್ಲಿದ್ದ ಬಸವಾದಿಶರಣರ ಸಮಕಾಲೀನನಾದ ಶಿವಭಕ್ತ ಹೂಗಾರ ಮಾದಣ್ಣನೇ ಸಾಕ್ಷಿಯಾಗಿದ್ದಾನೆ. ಇದನ್ನು ಜಾನಪದ ಕವಿಯೊಬ್ಬ 'ಹಾರಿ ಬರುವುದು ಹುಲುಸು ಏರಿ ಮಾದನ ಪತ್ರಿ' ಎಂದಿದ್ದಾನೆ. ರಾಶಿ ಮಾಡುವಾಗ ಹೂಗಾರನ ಪತ್ರಿ ಏರಿಸಿದಲ್ಲಿ ಆತನ ರಾಶಿ ಹುಲುಸಾಗುವುದೆಂದು ಈತನ ಭಾವನೆ-ಅದಕ್ಕೆ ಪ್ರತಿಯಾಗಿ ಒಕ್ಕಲಿಗ ಹೂಗಾರನಿಗೆ ಧಾನ್ಯವನ್ನು ಉದಾರವಾಗಿ ನೀಡುವನು.

ಒಕ್ಕಲಿಗ ರಾಶಿ ಮಾಡುವಾಗ ಕಣದಲ್ಲಿ ಬೂದುಗನನ್ನು ಹೆಂಡೆಯಲ್ಲಿ ತಯಾರಿಸ್ವಲ್ಪಟ್ಟು ಪೂಜೆ ಸಲ್ಲಿಸುವನು. ಆ ಬೂದುಗನಿಗೂ ಹೂಗಾರರು ಕೊಟ್ಟ ಹೂಪತ್ರಿ ಏರಿಸುವರು. ಇದನ್ನು

ಜಾನಪದ ಕವಿಯೊಬ್ಬ 'ಬೂದುಗನಿಗೆ ಬಾಸಿಂಗ, ಭೂಮಿ ತಾಯಿಗೆ ದಂಡೆ ಸಾಲ ಶರಣರಿಗೆ ಸರಮಾಲೆ ಕಟಗೊಂಡು ಮಾದಯ್ಯ ಗೆದ್ದ ಕೈಲಾಸ'[೧೩೦] ಎಂದು ಹಾಡಿದ್ದಾನೆ. ಇಲ್ಲಿ ಬಾಸಿಂಗ ಎಂದರೆ ಎಲೆ ಪತ್ರಿಗಳ ಮುಕಟ. ಅದನ್ನು ರಾಶಿಯ ದಿವಸ ಒಕ್ಕಲಿಗ ಬೂದುಗನಿಗೆ ಏರಿಸುವನು. ಹೂ ದಂಡೆ ಮೇಲಿಗೆ ಕಟ್ಟಿ ಉಳಿದ ಉಪಕರಣಗಳಿಗೆ ಸಾಲು ಶರಣರೆಂದು ಹೂಮಾಲೆ ಹಾಕಿ ಪೂಜೆ ಮಾಡುವನು. ಒಕ್ಕಲಿಗನು ಪುಟ್ಟಿ ತುಂಬಾ ಜೋಳವನ್ನು ಹೂಗಾರನಿಗೆ 'ಬಾಬು' ಎಂದು ಕೊಡುವನು. ಇಂಥ ಪದ್ಧತಿ ಹಳ್ಳಿಗಾಡಿನ ಪ್ರದೇಶದಲ್ಲಿ ಇಂದಿಗೂ ಅಲ್ಲಲ್ಲಿ ಉಳಿದುಕೊಂಡು ಬಂದಿದೆ. ಆದರೆ ಇಂದು ಒಕ್ಕಲಿಗರು ರಾಶಿಯನ್ನು ಯಂತ್ರಗಳ ಮೂಲಕ ಬೇಗ ಬೇಗನೆ ಮಾಡಿ ಮುಗಿಸುವರು. ಅವರಲ್ಲಿ ಅಂಥ ಉದಾರ ಭಾವನೆ ಉಳಿದಿಲ್ಲ. ಹೂಗಾರರು ಇಂದು ಒಕ್ಕಲಿಗರು ಪ್ರತಿಕಣಗಳಿಗೆ, ರಾಶಿ ನಡೆದಲ್ಲಿ ಹೋಗುವುದು ಕಡಿಮೆಯಾಗಿದೆ. ಆಧುನಿಕತೆಯ ಪ್ರಭಾವ ಪರಿಣಾಮ ಕಾರಣವಾಗಿ ಹೂಗಾರರ ಮೇಲೆ ಇಂದು ಹೊಡೆತ ಬಿದ್ದಿದೆ. ಹೂವಿನ ಉದ್ಯೋಗವನ್ನೇ ಅವರು ಅವಲಂಬಿಸಿ ಬದುಕುವುದು ದುಸ್ತರ. ಮೊದಲಿದ್ದ ಸಹಕಾರ, ಉದಾರ ಭಾವನೆ ಇಂದು ಜನತೆಯಲ್ಲಿ ಕಡಿಮೆಯಾಗಿದೆ. ಇದರಿಂದಾಗಿ ಇಂದು ಹೂವಿನ ವೃತ್ತಿ ಆಯಾಗಾರಿಕೆಯಾಗಿ ಉಳಿಯದೆ ಒಂದು ಬಗೆಯ ವ್ಯಾಪಾರ ವೃತ್ತಿಯಾಗಿದೆ. ಈ ವೃತ್ತಿಯನ್ನು ಇಂದು ಹೂಗಾರರಷ್ಟೇ ಮಾಡುತ್ತಿಲ್ಲ. ಬೇರೆ ಬೇರೆ ಜನಾಂಗದವರು ಹಳ್ಳಿಗಳಲ್ಲಿ ಪಟ್ಟಣ ಪ್ರದೇಶಗಳಲ್ಲಿ ಅಂಗಡಿಗಳನ್ನಿಟ್ಟು ಹೂವಿನ ವೃತ್ತಿ ಮಾಡುವುದನ್ನು ಕಾಣಬಹುದು.

ಹೂಗಾರರೂ ಹೂವಿನ ಹಾರ, ಪತ್ರಿ, ಬಾಸಿಂಗ, ದಂಡೆ, ಮಾಲೆ ಮಾಡಿ ಜನತೆಗೆ ಕೊಡುವುದರ ಮೂಲಕ ಆಯವನ್ನು ಸ್ವೀಕರಿಸಿ ಆಯಾಗಾರರೆಂದು ಕರೆಸಿಕೊಂಡಂತೆ, ಹನುಮಂತ, ಈಶ್ವರ, ರಾಮಲಿಂಗ, ಬಸವಣ್ಣ ಮುಂತಾದ ದೇವರುಗಳನ್ನು ಪೂಜೆ ಮಾಡುವುದರ ಮೂಲಕ ಇವರು ಪೂಜಾರಿಗಳೆಂದು ಕರೆಸಿಕೊಳ್ಳುವರು. ಪೂಜಾರರು ಎಂದಾಕ್ಷಣ ಬ್ರಾಹ್ಮಣರು, ಕಬ್ಬಿಲಿಗರು, ಕುರುಬರು, ಉಪ್ಪಾರರು ಇವರೆಲ್ಲರೂ ನೆನಪಿಗೆ ಬರುವರು. ದೇವಸ್ಥಾನದ ಪೂಜೆ ಮಾಡುವವರೆಲ್ಲರನ್ನೂ ಪೂಜಾರಿಗಳೆಂದೇ ಕರೆಯುವರು. ಆದರೆ ಹೂಗಾರಿಕೆ ವೃತ್ತಿ ಮಾಡಿಕೊಂಡು ಬಂದ ಪೂಜಾರರೇ ಬೇರೆ. ಇವರು ವೀರಶೈವದ ಒಂದು ಭಾಗವಾಗಿದ್ದಾರೆ. ಇವರು ಪೂಜೆಮಾಡುವಾಗ ಸಂಸ್ಕೃತದ ಶ್ಲೋಕಗಳನ್ನು ಹೇಳುವುದಿಲ್ಲ. ಸರಳವಾಗಿ ದೇವರನ್ನು ಹೂಪತ್ರೆ, ಎಲೆಗಳಿಂದ ಸಿಂಗರಸಿ, ಗಂಟೆ ಬಾರಿಸುತ್ತ ಧೂಪದಾರತಿಯನ್ನು ಎತ್ತಿ ಬೆಳಗುವುದರ ಮೂಲಕ ಪೂಜೆ ಮಾಡುವರು. ಹೂಗಾರರು ಹನುಮಂತ ದೇವರ ನೀರೊಕಳಿ, ಹಾಲೋಕಳಿ, ಎಲೆ ಪೂಜೆ ಕಟ್ಟುವುದು, ಹನುಮಂತ ದೇವರ ಕಾರ್ತಿಕೋತ್ಸವ ಕಾರ್ಯಕ್ರಮಗಳನ್ನು ಭಕ್ತರ ನೆರವಿನೊಂದಿಗೆ ನೆರವೇರಿಸುವರು. ಪೂಜಾರಿಗಳು ಇಂದಿಗೂ ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಡಂಗೂರ ಹೊಡೆಯುವುದುಂಟು. ಡಂಗೂರ ಹೊಡೆಯುವ ಕಾಯಕ ಹನುಮಂತ ದೇವರ

ಪೂಜಾರಿಗಳದೆ ಆಗಿದೆ. ಸರಕಾರದ ಸುದ್ದಿಯನ್ನು ಹಾಗೂ ಊರಿನ ಸಮಾಜದ ಯಾವುದೋ ಸುದ್ದಿಯನ್ನು ತಲುಪಿಸಲು ಪೂಜಾರಿಗಳು ಊರೊಳಗೆ ಅಡ್ಡಾಡಿ ಪ್ರಮುಖ ಸ್ಥಳಗಳಲ್ಲಿ ನಿಂತುಕೊಂಡು ಡಂಗೂರ ಹೊಡೆಯುವರು. ಡಂಗೂರ ಹೊಡೆಯಲು ಕಂಚಿನ ಜಾಗಟೆಯನ್ನು ಬಳಸುವರು. ಈ ಕೆಲಸಕ್ಕೆ ಊರ ಗೌಡರಿಂದ, ಕುಲಕರ್ಣಿಗಳಿಂದ ತುಸು ಸಂಭಾವನೆಯನ್ನು ಪಡೆಯುವರು.

ಹೂಗಾರರು ಪೂಜಾರಿಕೆ ಹಾಗೂ ಹೂಗಾರಿಕೆ ವೃತ್ತಿಯ ಜೊತೆಗೆ ಚರ್ಮ ವಾದ್ಯ ಹಾಗೂ ಇತರ ವಾದ್ಯಗಳನ್ನು ನುಡಿಸುವರು. ಹನುಮಂತ ದೇವರ ಪೂಜಾ ಸಮಯದಲ್ಲಿ, ಮದುವೆಯಂತೆ ಮಂಗಲ ಕಾರ್ಯದಲ್ಲಿ ಹಾಗೂ ಯಾರಾದರೂ ಸತ್ತಾಗ ಈ ಸಮಾಜದವರು ಚರ್ಮವಾದ್ಯಗಳನ್ನು ಬಾರಿಸುವುದುಂಟು. ಚರ್ಮವಾದ್ಯ ಬಾರಿಸುವುದರಿಂದ ಇವರಿಗೆ ಜೀರರರೆಂದು ಕರೆಯುವರೆಂಬ ನಂಬಿಕೆ ಇದೆ. ಹೂಗಾರ, ಜೀರ, ಗುರುವ, ಪೂಜಾರ ಎಂದೆಲ್ಲಾ ಕರೆಸಿಕೊಳ್ಳುತ್ತಿರುವ ಇವರೆಲ್ಲರೂ ಸಾಮಾನ್ಯವಾಗಿ ಸಮಾಳ, ದಮ್ಮಡಿ, ತಬಲಾ, ಡಗ್ಗಾ ಇತ್ಯಾದಿ ವಾದ್ಯಗಳನ್ನು ಬಾರಿಸುವರು. ಚರ್ಮವಾದ್ಯ ಬಾರಿಸುವುದರಲ್ಲಿ ಇವರು ನಿಸ್ಸೀಮರು, ಕಲಾಕಾರರೂ, ಸಂಗೀತಗಾರರೂ ಆದ ಇವರು ಹುಟ್ಟಾ ಪ್ರತಿಭಾನ್ವಿತರು. ಸಮಾಳ, ಸಂಪದಾನಿ, ಕರಡಿ, ಮೃದಂಗ, ತಬಲಾ, ತಪ್ಪಡಿ ಮೊದಲಾದ ಚರ್ಮ ವಾದ್ಯಗಳನ್ನು ಬಾರಿಸುವಲ್ಲಿ ಈ ಜನಾಂಗದವರು ಜನ್ಮಜಾತ ಸಿದ್ಧಿ ಪಡೆದಿರುವರು. ಉತ್ಸವ ಸಮಾರಂಭಗಳಲ್ಲಿ ಕರಡಿ, ಸಮಾಳ, ನಾಟಕದಲ್ಲಿ ತಬಲಾ, ಪಿಯಾನೊ ಮೊದಲಾದವುಗಳನ್ನು ಬಾರಿಸುವರು. ಇಂಥ ಕಾರ್ಯಗಳಲ್ಲಿ ಮೊದಲೇ ಕರಾರು ಮಾಡಿಕೊಂಡ ಪ್ರಕಾರ ಸಂಭಾವನೆಯನ್ನು ಪಡೆಯುವರು.

ಶ್ರೀ ಸದಾಶಿವ ಮಲ್ಲಪ್ಪ ಹೂಗಾರ ಇವರು ಸಮಾಳ ಬಾರಿಸುವಲ್ಲಿ ಪರಿಣತರು. ಇವರಿಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಅನೇಕ ಪ್ರಶಸ್ತಿಗಳು ಬಂದಿವೆ. ಹೂಗಾರರು ಊರಿನ ಕೊರವರು ಜನಾಂಗದ ಜೊತೆಗೆ ಸೇರಿ ಕಲಾ ಸೇವೆ ಮಾಡುವರು. ಕೊರವರು ಶಹನಾಯಿ ಊದಿದರೆ ಇವರು ಸಮಾಳ ಬಾರಿಸುವರು.

ಹೂಗಾರಿಕೆಯ ಇಂದಿನ ಸ್ಥಿತಿಗತಿ:

ಹೂಗಾರಿಕೆ, ಚರ್ಮವಾದ್ಯ ನುಡಿಸುವ ಹಾಗೂ ಪೂಜಾರಿಕೆ ಮಾಡುತ್ತಿರುವ ಇವರು ವಿವಿಧ ಕಾರಣಗಳಿಂದಾಗಿ ಸಮಾಜದಲ್ಲಿ ಉನ್ನತ ಸ್ಥಾನ ಕಳೆದುಕೊಳ್ಳುತ್ತಿದ್ದಾರೆ. ಹೂಗಾರಿಕೆ ಇಂದಿನ ಕಾಲದಲ್ಲಿ ಲಾಭದಾಯಕ ವೃತ್ತಿಯಾಗಿ ಉಳಿದಿಲ್ಲ. ಹೂಗಾರಿಕೆಯನ್ನೆ ನಂಬಿಕೊಂಡು ಇಡೀ ಕುಟುಂಬದ ಜೀವನ ನಿರ್ವಹಣೆ ನಡೆಸುವುದು ಕಷ್ಟಕರ. ಹೂಪತ್ರೆ , ಹೂಹಾರ, ದಂಡೆಗಳನ್ನು ಹೆಣೆದು ಊರ ಜನತೆಯ ಮನೆ ಮನೆಗೆ ಒಯ್ದುಕೊಡುವುದು, ಪ್ರತಿಯಾಗಿ ಧಾನ್ಯ ಸ್ವೀಕರಿಸುವುದು, ನೈವೇದ್ಯವನ್ನು ಊರಲ್ಲಿ ತಿರುಗಾಡಿ ಮನೆ ಮನೆಯಿಂದ ಪಡೆದುಕೊಂಡು ಬರುವುದು ಕಷ್ಟ ಸಾಧ್ಯ.

ಹೂಗಾರಿಕೆ ವೃತ್ತಿಗೆ ಮುಖ್ಯವಾಗಿ ಹೂಪತ್ರೆ ಬೇಕು. ಇವುಗಳನ್ನು ದಿನನಿತ್ಯ ಪಡೆದುಕೊಳ್ಳಲು ತಮ್ಮದೇ ಆದ ಹೂವಿನ ತೋಟ ಇರಬೇಕು. ಹೂ ಬೆಳೆಯಲು ಭೂಮಿ ಬೇಕು. ಆದರೆ ಇವರಿಗೆ ಮೊದಲು ಇನಾಮು ಭೂಮಿ ಕೊಡಲಾಗಿತ್ತು. ಆದರೆ ಇಂದು ಅವರಿಗೆ ಲಭ್ಯವಾಗಿಲ್ಲ. ಹೂ ಪತ್ರೆ ಗಳಿಗೆ ಬೇರೆಯವರ ತೋಟಗಳಲ್ಲಿ ಅಲೆದು ಹೂ ತರುವುದು ಕಷ್ಟಕರ. ಇಂದು ಹೂವಿನ ವೃತ್ತಿ ವಾಣಿಜ್ಯೀಕರಣವಾಗಿದೆ. ಇದರಲ್ಲಿ ಬೇರೆ ಬೇರೆ ಜನಾಂಗದವರು ಬಾಗಿಯಾಗಿರುವುದರಿಂದ ಹೂವಿನ ವ್ಯಾಪಾರದ ಪೈಪೋಟಿ ನಡೆಯುತ್ತಿದೆ. ಹೂವನ್ನು ರೈತರಿಂದ ಕೊಂಡು ತಂದು ಹೂ ಹಾರಗಳನ್ನು ಕಟ್ಟಿ ಮನೆಮನೆ ಹಾಗೂ ಊರೂರು ಅಲೆದು ಹೂ ಮಾರಾಟ ಮಾಡಬೇಕಾಗಿದೆ. ಕೇವಲ ಹಬ್ಬ ಹರಿದಿನಗಳಲ್ಲಿ ಹೂವಿನ ವ್ಯಾಪಾರ ಹೆಚ್ಚಾಗಿರುತ್ತದೆ. ಉಳಿದ ದಿನಗಳಲ್ಲಿ ವ್ಯಾಪಾರ ಕಡಿಮೆಯಾಗಿ ಜೀವನ ನಡೆಸುವುದು ಹೂಗಾರರಿಗೆ ಕಷ್ಟ ಸಾಧ್ಯವಾಗಿದೆ.

ಅದೇ ರೀತಿ ಚರ್ಮವಾದ್ಯಗಳನ್ನು ವಿವಿಧ ಜಾತಿ ಜನಾಂಗದವರೂ ವೃತ್ತಿಯನ್ನಾಗಿ ಮಾಡಿಕೊಳ್ಳುತ್ತಿರುವುದರಿಂದ ಹೂಗಾರರು ಅಲ್ಲಿಯೂ ಪೈಪೋಟಿ ನಡೆಸಿ ಜೀವನ ನಡೆಸಬೇಕು. ಈ ಜನಾಂಗದಲ್ಲಿ ವಿದ್ಯಾವಂತರ ಸಂಖ್ಯೆ ಕಡಿಮೆ ಇದೆ. ಕೇವಲ ಹೂಗಾರಿಕೆ, ಪೂಜಾರಿಕೆ, ವಾದ್ಯಗಾರಿಕೆಯಿಂದ ಈ ಜನಾಂಗ ಜೀವನ ಮಾಡುವುದು ಕಷ್ಟಸಾಧ್ಯ. ಉತ್ತಮ ಶಿಕ್ಷಣ ಪಡೆದುಕೊಂಡು, ಬೇರೆ ಬೇರೆ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡು ಉತ್ತಮ ಜೀವನ ನಡೆಸುವುದು ಉತ್ತಮ. ಸರಕಾರ ಈ ಜನಾಂಗವನ್ನು ಅಲ್ಪ ಸಂಖ್ಯಾತರನ್ನಾಗಿ ಪರಿಗಣಿಸಿ ವಿವಿಧ ಸೌಲಭ್ಯಗಳನ್ನು ನೀಡಿ ಆರ್ಥಿಕವಾಗಿ ಸಬಲರಾಗುವಂತೆ ಮಾಡುವುದು ಅಗತ್ಯ.

ವೈದ್ಯ ವೃತ್ತಿ:

ವೈದ್ಯ ಪದ್ಧತಿ ಸಾವಿರಾರು ವರ್ಷಗಳಿಂದಲೂ ಜನಪದರ ಬದುಕಿನೊಂದಿಗೆ ಬೆಸದುಕೊಂಡು ಬಂದಿದೆ. ಜಗತ್ತಿನಾದ್ಯಾಂತ ವೈದ್ಯ ಪದ್ಧತಿಯನ್ನು ಅನುಸರಿಸದ ರಾಷ್ಟ್ರವಿಲ್ಲವೆನ್ನಬಹುದು. ಮನುಷ್ಯ ಕಾಡಿನಲ್ಲಿ ವಾಸಿಸುತ್ತಿದ್ದ ಸಂದರ್ಭದಲ್ಲಿ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲೆದಾಡುತ್ತಿದ್ದ ಸಂದರ್ಭದಲ್ಲಿ ತನಗಾದ ಗಾಯ, ನೋವು ರಕ್ತಸ್ರಾವ, ಇತ್ಯಾದಿ ತೊಂದರೆಗಳನ್ನು ನಿವಾರಿಸಿಕೊಳ್ಳಲು ತನ್ನ ಕೈಗೆ ಸಿಕ್ಕ ಎಲೆ, ಗಿಡ, ಚಿಗುರು, ತೊಗಟೆ, ಕಾಂಡ, ಹಾಲು, ರಸ ಪ್ರಕೃತಿಯಲ್ಲಿದ್ದ ವಸ್ತುಗಳನ್ನು ಬಳಸುತ್ತಿದ್ದ. ಆಹಾರಕ್ಕಾಗಿ ಅಲೆದಾಡುವಾಗ, ಬೇಟೆಯಾಡುತ್ತಿದ್ದಾಗ, ಬಿದ್ದೋ, ಕೈ, ಕಾಲು, ತಲೆ ಒಡೆದೋ, ಪರಚಿಕೊಂಡೋ ಇನ್ನೂ ಅನೇಕ ತೊಂದರೆಗೆ ಒಳಗಾಗುತ್ತಿದ್ದ. ಆಗ ಅವನು ಪ್ರಕೃತಿಯ ಮಡಿಲಲ್ಲಿ ಲಭ್ಯವಿರುವ ವಸ್ತುಗಳನ್ನು ಗಾಯನಿವಾರಣೆಗೆ ಉಪಯೋಗಿಸುತ್ತಿದ್ದ. ಒಂದು ವಸ್ತುವಿನಿಂದ ಸಾಧ್ಯವಾಗುವುದಿಲ್ಲವೆಂದು ಅರಿವಾದಾಗ ಇನ್ನೊಂದು ವಸ್ತುವನ್ನು ಬಳಸುತ್ತಿದ್ದ. ಯಾವ ವಸ್ತುವಿನಿಂದ ಗುಣವಾಯಿತು ಎಂದು ತಿಳಿದು ಅಂತವುಗಳನ್ನು ನೆನೆಪಿಟ್ಟುಕೊಂಡು ಅವಶ್ಯಕತೆ ಬಿದ್ದಾಗ ಬಳಸುತ್ತಾ ಬಂದ. ಅದೇ ಜನಪದ ವೈದ್ಯ. ಕ್ರಮೇಣ ಒಂಟಿಯಾಗಿ, ನಂತರ

ಗುಂಪುಗಳಲ್ಲಿ ಹಾಗೆಯೆ ಮುಂದುವರಿದುಕೊಂಡು ಬಂದ ಪದ್ಧತಿ ಈ ವೈದ್ಯಪದ್ಧತಿ. ಪರಂಪರಾಗತವಾಗಿ ಕೆಲವು ಕುಟುಂಬಗಳು ವೈದ್ಯ ವೃತ್ತಿಯನ್ನು ಅನುಸರಿಸಿಕೊಂಡು ಬಂದಿವೆ.

ಗ್ರಾಮೀಣ ಜನತೆಗೆ ಮತ್ತು ಪ್ರಾಣಿ ಪಕ್ಷಿಗಳಿಗೆ ರೋಗ ರುಜಿನಗಳು ಬಂದಾಗ ಹಳ್ಳಿಯ ಅನುಭವಸ್ಥ ಗಿಡಮೂಲಿಕೆಗಳಿಂದ ಚಿಕಿತ್ಸೆ ನೀಡಿ ರೋಗರುಜಿನಗಳನ್ನು ವಾಸಿ ಮಾಡುತ್ತಿದ್ದ. ಇದನ್ನು ಹಳ್ಳಿ ಔಷಧ, ಹಸಿಔಷಧ, ಮನೆ ಮದ್ದು, ನಾಡ ಔಷಧಿ, ಕಾಡು ಮದ್ದು, ಗವಂಟೆ ಔಷಧಿ, ದೇಸಿ ಔಷಧಿ ಎಂತಲೂ ಕರೆಯುತ್ತಾರೆ. ಈ ಔಷಧಿಗಳನ್ನು ನೀಡುವವನನ್ನು ಹಳ್ಳಿ ವೈದ್ಯ, ನಾಟಿ ವೈದ್ಯ, ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದೆ. ಭೂಮಿಯ ಮೇಲೆ ಜೀವಜಂತುಗಳು ಉಗಮವಾಗುತ್ತಿದ್ದಂತೆಯೇ ರೋಗರುಜಿನಗಳು ಅವುಗಳ ಬೆನ್ನುಹತ್ತಿವೆ. ಅವುಗಳ ನಿವಾರಣೆಗಾಗಿ ಈ ತರಹದ ಚಿಕಿತ್ಸೆಯ ವಿಧಾನಗಳ ನ್ನು ಮಾನವ ಕಂಡು ಕೊಂಡಿದ್ದಾನೆ. ಮಾನವ ಕಂಡುಕೊಂಡು ಈ ವೈದ್ಯ ಪದ್ಧತಿಯನ್ನು ಇಂದಿನವರೆಗೂ ಪ್ರಜ್ಞಾಪೂರ್ವಕವಾಗಿ, ಜತನದಿಂದ ಕಾಪಾಡಿಕೊಂಡು ಬರಲಾಗಿದೆ. ಇಂತಹ ಒಂದು ವೈದ್ಯಕೀಯ ಪರಂಪರೆಯನ್ನು ಗುರುತಿಸುವುದಕ್ಕೆ ನಮ್ಮ ಜನಪದ ವಾಕ್ ಪರಂಪರೆಯೂ ಆಧಾರಸ್ಥಂಭವಾಗಿ ಗಟ್ಟಿಗೊಳಿಸಲಾರದು. ಈ ಆಧಾರಕ್ಕೆ ಗಟ್ಟಿತನವನ್ನು ನೀಡಬೇಕಾದರೆ ನಾವು ಮನುಕುಲದ ಪ್ರಾರಂಭವನ್ನು ಅವಲೋಕಿಸುವುದು ಅಗತ್ಯ. ಮನುಕುಲದ ಮೂಲದಲ್ಲಿ ವೈದ್ಯ ಪದ್ಧತಿಯನ್ನು ಗುರುತಿಸಬೇಕಾದರೆ ಸಾಹಿತ್ಯಿಕ ಮೂಲಗಳನ್ನು ಗಮನಿಸಬೇಕು.

ಸಾವಿರಾರು ವರ್ಷಗಳ ಹಿಂದೆ ಜನಪದ ವೈದ್ಯ ಪದ್ಧತಿ ಉಚ್ರಾಯಸ್ಥಿತಿಯಲ್ಲಿತ್ತೆಂಬುದಕ್ಕೆ ಹಲವು ಪುರಾವೆಗಳಿವೆ. ಇಂದು ಕಂಡುಬರುವ ವಿವಿಧ ವೈದ್ಯಕೀಯ ವಿಭಾಗಗಳು ಅಂದು ಕೂಡ ಇದ್ದವೆಂದು ಸಾಹಿತ್ಯದ ಮೂಲಕ ತಿಳಿದುಬರುತ್ತದೆ. 'ಶಲ್ಯ (ಶಸ್ತ್ರ ಚಿಕಿತ್ಸಕ–Surgeon), ಬಿಷಕ್ ವೈದ್ಯ (ಔಷಧ ಚಿಕಿತ್ಸಕ Physician) ಮತ್ತು ಬಿಷಕ್ ಅರ್ಥಯಡ್ ವೈದ್ಯ ಎಂಬ ಪ್ರತ್ಯೇಕ ಭಾಗಗಳು ಹಾಗೂ ವೈದ್ಯ ವೃತ್ತಿದಾರರು, ಉಪಕರಣಗಳೂ ಇದ್ದವೆಂಬುದಕ್ಕೆ ಮಾಹಿತಿ ಲಭ್ಯವಿದೆ.[೧೩] ಗಾಯಗಳಿಗೆ ನಂಜುಂಟಾಗದಿರಲು ಕೆಲವು ವಿಶಿಷ್ಟ ಕ್ರಮಗಳಿದ್ದವೆಂಬ ಮಾಹಿತಿಗಳಿವೆ. ನೋವಿನ ಉಪಶಮನಕ್ಕೆ ಬಳಕೆಯಾಗುತ್ತಿದ್ದ ಮದ್ದುಗಳ ವಿವರಣೆ ಇದೆ.

ಭಾರತದ ವೈದ್ಯಪದ್ಧತಿಯ ಮೂಲವನ್ನು ಋಗ್ವೇದ ಶ್ಲೋಕಗಳಲ್ಲಿ ಕಾಣಬಹುದು.

"ಮಾತೃ ರೂಪವಾದ ಎಲ್ಲೈ ಔಷಧಿಗಳೇ
ನಿಮ್ಮ ಜನ್ಮಸ್ಥಾನಗಳು ಅಪರಿಮಿತವಾಗಿವೆ
ನಿಮ್ಮ ಬೆಳವಣಿಗೆಗಳು ಅತ್ಯಧಿಕವಾಗಿರುತ್ತದೆ
ನಾನಾಕರ್ಮಗಳಲ್ಲಿ ಉಪಯೋಗಿಸ್ವಲ್ಪಡುವ ಎಲ್ಲೈ ಔಷಧಿಗಳೇ
ನೀವು ನನ್ನ ಪುತ್ರಾದಿ ಜನರನ್ನು ರೋಗರಹಿತವಾಗುವಂತೆ ಮಾಡಿರಿ"[೧೪]

(ಋಗ್ವೇದ-೧೦೯೭.೨ನೇ ಶ್ಲೋಕ)

ವೇದದ ಸಾಲುಗಳು ನಮ್ಮ ವೈದ್ಯ ಪದ್ಧತಿಯ ಪ್ರಾಚೀನತೆಯನ್ನು ಎತ್ತಿ ಹಿಡಿಯುತ್ತವೆ. ವಿವಿಧ ಶಾಸನಗಳಲ್ಲಿ ವೈದ್ಯ ಪದ್ಧತಿಯ ಉಲ್ಲೇಖವಿರುವುದನ್ನು ಕಾಣಬಹುದು. ಕ್ರಿ.ಪೂ.೪೦೦ರಲ್ಲಿ ಸಮಂತಭದ್ರ ಎಂಬ ವೈದ್ಯ ಪದ್ಮಾದೇವಿಯ ಬಸ್ಮಕ ರೋಗವನ್ನು ಗುಣಪಡಿಸಿದ ವಿವರ ದಾಖಲಾಗಿದೆ. ಕ್ರಶ.೧೧೦೦ರಲ್ಲಿ ಕೀರ್ತವರ್ಮನ 'ಗೋವೈದ್ಯ' ಭಾರತೀಯ ಸಾಹಿತ್ಯಿಕ ಆಧಾರಗಳಲ್ಲಿ ಮೊತ್ತಮೊದಲ ವೈದ್ಯ ಗ್ರಂಥ ಎನ್ನುವ ಖ್ಯಾತಿಯನ್ನು ಪಡೆದಿದೆ. ಕ್ರಿ.ಶ.೧೨೨೫ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ 'ನಾಡಮದ್ದಂ ತಿಂದು ಕುತ್ತ ಕೆಡವಿರಬಹುದೇ' ಎನ್ನುವ ಮಾತು ವೈದ್ಯದ ಮಹತ್ವವನ್ನು ನೀಡುತ್ತದೆ. ವೈದ್ಯನನ್ನು ಕುರಿತು ಸರ್ವಜ್ಞ ಈ ಮಾತನ್ನು ಹೇಳಿದ್ದಾನೆ.

"ಬಂಡು ಕೆಂಡವ ಕಾಸಿ
ಉಂಡುಶತಪತವ ನಡೆದು
ಉಂಡು ಎಡದ ಮಗ್ಗಲಲ್ಲಿ ಮಲಗಿ
ವೈದ್ಯನಾ ಭಂಡಾಟವಿಲ್ಲ ಸರ್ವಜ್ಞ"[೧೩]

ಕ್ರಿ.ಶ.೧೧೦೦ರಲ್ಲಿ ರಚಿತವಾಯಿತೆನ್ನಲಾದ ಕೀರ್ತವರ್ಮನ 'ಗೋವೈದ್ಯ' ಎನ್ನುವ ಗ್ರಂಥ, ಕ್ರಿ.ಶ.೧೨೦೦ರ ದೇವೇಂದ್ರ ಮುನಿಯ 'ಬಾಲಗ್ರಹ ಚಿಕಿತ್ಸೆ' ಕ್ರಿ.ಶ.೧೫೦೦ರ ಚಾಮರಸನ ಅಶ್ವವೈದ್ಯ, ಶ್ರೀಧರ ದೇವನ 'ವೈದ್ಯಾಮೃತ' ಕ್ರಶ೧೩೦೦ರಲ್ಲಿ ರಚಿತವೆನ್ನಲಾದ 'ಜ್ವಾಲಿನೀ ಕಲ್ಯಾದಿ ಸಂಗ್ರಹ' ಮುಂತಾದ ಗ್ರಂಥಗಳು ಹಿಂದಿನ ಕಾಲದ ವೈದ್ಯ ಪದ್ಧತಿಗೆ ಆಧಾರಗಳನ್ನು ಕಟ್ಟಿಕೊಡುತ್ತವೆ. ಹಿಂದಿನ ಕಾಲದಲ್ಲಿ ಮಠ, ಮಂದಿರ, ದೇವಸ್ಥಾನಗಳು ವೈದ್ಯಶಾಲೆಗಳನ್ನು ನಡೆಸುತ್ತಿದ್ದ ಉಲ್ಲೇಖಗಳಿವೆ.

ಜಾನಪದ ಒಂದು ಸಂಶೋಧನ ವಿಷಯವೆಂದು ಪ್ರಸಿದ್ಧಿ ಪಡೆದ ಮೇಲೆ ವೈದ್ಯಪದ್ಧತಿಗೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ಹಿಂದಿನಿಂದಲೂ ವೈದ್ಯ ಮನೆತನಗಳಲ್ಲಿ ಅಡಕವಾಗಿದ್ದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಮದ್ರಾಸ್ ವಿಶ್ವವಿದ್ಯಾಲಯ 'ವಿವಿಧ ವೈದ್ಯಗಳು' ಎಂಬ ಗ್ರಂಥವನ್ನು ಹೊರತಂದಿತು. ಈ ಗ್ರಂಥಗಳಲ್ಲಿ ಹಸ್ತಪ್ರತಿಗಳಲ್ಲಿನ ವೈದ್ಯ ಪದ್ಧತಿಯ ವಿಚಾರಗಳು ಹಾಗೂ ಚಿಕಿತ್ಸಾ ಕ್ರಮಗಳನ್ನು ಪ್ರಕಟಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಶಂಕರನಾರಾಯಣಭಟ್ಟ ದೈತೋಟ ಇವರು ತಮ್ಮ ಮನೆತನದಲ್ಲಿ ಪಾರಂಪರಿಕವಾಗಿ ಅನುಸರಿಸಿಕೊಂಡು ಬರುತ್ತಿದ್ದ ವೈದ್ಯ ಪದ್ಧತಿಯನ್ನು 'ಅಜ್ಜಿ ಮದ್ದು', ಜನಪದವೈದ್ಯ, ಮನೆವೈದ್ಯ ಎಂಬ ಹೆಸರಿನಲ್ಲಿ ವೈದ್ಯ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ.

ಕೊರಡ್ಕಲ್ ಶ್ರೀನಿವಾಸರಾಯರು ತಮ್ಮ ಅಜ್ಜಿ ಹೇಳಿದ ವೈದ್ಯ ವಿವರಗಳನ್ನು ಸಂಗ್ರಹಿಸಿ 'ಮನೆಮದ್ದು' ಎಂಬ ವೈದ್ಯ ಗ್ರಂಥವನ್ನು ಪ್ರಕಟಿಸಿದ್ದಾರೆ. ಸೀತಾರಾಮಭಟ್ ಬಡತಿ ಇವರು 'ಗೃಹವೈದ್ಯ' ಎಂಬ ಗ್ರಂಥವು ವನಸ್ಪತಿ ಚಿಕಿತ್ಸೆ ಕ್ರಮಗಳನ್ನು ವಿವರಿಸುತ್ತದೆ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು 'ವಾಗ್ಭೂಷಣ' ಮಾಸಪತ್ರಿಕೆಯನ್ನು ಪ್ರಕಟಿಸುತ್ತದೆ. ಅದರಲ್ಲಿ ಗೃಹವೈದ್ಯ ಎಂಬ ಗ್ರಂಥಮಾಲೆ ಆಯುರ್ವೇದ ವಿವಿಧ ರೋಗಗಳ ಚಿಕಿತ್ಸೆ ಕ್ರಮಗಳನ್ನು ಪ್ರಕಟಿಸುತ್ತಿದೆ. ಹೆಚ್.ಎಲ್.ನಾಗೇಗೌಡರು ಜಾನಪದ ವೈದ್ಯವೃತ್ತಿಗೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿ ತಮ್ಮ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಗಣಪತಿರಾವ್ ಪಟವರ್ಧನ ಅವರ 'ಅನುಭೂತಯೋಗ ಸಂಗ್ರಹ' ಹುಲಿಕುಂಟಿ ಮಠದ ಪೂಜ್ಯ ಶಿವಕುಮಾರ ಸ್ವಾಮೀಜಿಯವರ 'ಆರೋಗ್ಯದರ್ಪಣ' ಎಂ.ಗೋಪಾಲಕೃಷ್ಣರಾಯರ 'ಉಪಯುಕ್ತ ಗಿಡ ಮೂಲಿಕೆಗಳು' ಎಂಬ ಗ್ರಂಥಗಳು ಜನಪದರ ವೈದ್ಯ ಪರಂಪರೆಯನ್ನು ತಿಳಿಸಿಕೊಡುತ್ತವೆ.

ಶ್ರೀ ಮಳಲಿ ವಸಂತಕುಮಾರ ೧೯೭೭ರಲ್ಲಿ ಪ್ರಕಟಿಸಿದ 'ಜನಪದ ವೈದ್ಯ' ಗ್ರಂಥ ಉತ್ತಮವಾದ ಜಾನಪದ ವೈದ್ಯ ಗ್ರಂಥವಾಗಿದೆ. ಆ ಗ್ರಂಥದಲ್ಲಿ ಜನಪದ ವೈದ್ಯದ ಸ್ವರೂಪ, ವ್ಯಾಪ್ತಿ ಮತ್ತು ಲಕ್ಷಣಗಳು ಹಾಗೂ ಅದರ ಇತಿಮಿತಿಗಳನ್ನು ತಿಳಿಸಿದ್ದಾರೆ. ಈ ಗ್ರಂಥದಲ್ಲಿ ವಿವಿಧ ಜಿಲ್ಲೆಗಳಲ್ಲಿ ಬಳಸುತ್ತಿದಂತಹ ವೈದ್ಯ ವಿಧಾನದ ವಿವಿಧ ಪ್ರಕಾರಗಳನ್ನು ವಿವಿಧ ಖಾಯಿಲೆಗಳಿಗೆ ಸಂಬಂಧಿಸಿದಂತೆ ಉತ್ತಮ ರೀತಿಯಲ್ಲಿ ವಿವರಣೆ ನೀಡಿದ್ದಾರೆ.

ಶ್ರೀಮತಿ ರೇಣುಕಾಭಟ್ ಅವರು 'ಊಟ ಬಲ್ಲವನಿಗೆ ರೋಗವಿಲ್ಲ' ಮತ್ತು 'ಹಿತ್ತಲಗಿಡ ಮದ್ದಲ್ಲ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಬೆಂಗಳೂರಿನ ಸಿ.ಬಿ.ಪುರಾಣಿಕ 'ಹಿತ್ತಲ ಮದ್ದು' ಎಂಬ ಅಭೂತಪೂರ್ವ ಗ್ರಂಥ ಪ್ರಕಟಿಸಿದ್ದಾರೆ. ಶ್ರೀಮತಿ ಶಾಂತಿನಾಯಕರ 'ಜನಪದರ ವೈದ್ಯ ಅಡಿಗೆ' ಎಂಬ ಗ್ರಂಥದಲ್ಲಿ ಚಿಕಿತ್ಸೆಗೆ ಸಹಾಯಕವಾಗುವಂತಹ ಅಡಿಗೆಯ ವಿವರಗಳು ದೊರಕುತ್ತವೆ. ಶ್ರೀಮತಿ ಶಾಂತಕುಮಾರಿ ಪಾಟೀಲ್ ಅವರ 'ಜನಪದ ವೈದ್ಯ'ಸಹ ಉತ್ತಮ ಚಿಕಿತ್ಸಕ ಗ್ರಂಥವಾಗಿದೆ.

೧೯೩೩ರಲ್ಲಿ ತ.ರಾಮಕೃಷ್ಣಯ್ಯ ಅವರು 'ಆಯುರ್ವೇದ ಸಾರ' ಭಾಗ-೧ ಮತ್ತು ಭಾಗ-೨ ಎನ್ನುವ ಎರಡು ಆಯುರ್ವೇದ ಸಾರ ಎನ್ನುವ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

೧೯೩೬ರಲ್ಲಿ ಪಂಡಿತ ತಾರಾನಾಥರು 'ಸುಲಭ ಚಿಕಿತ್ಸೆ' ಎನ್ನುವ ಕೃತಿಯಲ್ಲಿ ಸುಮಾರು ೪೨ ರೋಗಗಳ ವಿವರ ಮತ್ತು ರೋಗಗಳ ಲಕ್ಷಣ ಮತ್ತು ಬಳಸಬೇಕಾದ ಔಷಧಿಗಳ ವಿವರಗಳನ್ನು ಸುಧೀರ್ಘವಾಗಿ ಗ್ರಂಥದಲ್ಲಿ ಚರ್ಚಿಸಿದ್ದಾರೆ.

೧೯೫೫ರಲ್ಲಿ ಮಹಾದೇವಶಾಸ್ತ್ರಿಯವರು 'ಚಿಕಿತ್ಸಾ ತತ್ವ ದೀಪಿಕಾ' ಎನ್ನುವ ಜನಪದ ವೈದ್ಯ ಕೃತಿಯನ್ನು ಹೊರತಂದಿದ್ದಾರೆ.

೧೯೭೫ರಲ್ಲಿ ಎಂ. ಗೋಪಾಲಕೃಷ್ಣರಾವ್ ಬಡವರ ವೈದ್ಯ ಭಾಗ-೧, ಭಾಗ-೨ ಎನ್ನುವ ವೈದ್ಯ ಸಂಪುಟಗಳನ್ನು ಹೊರತಂದಿದ್ದಾರೆ. ಅವರಲ್ಲಿ ವಿವಿಧ ರೋಗಗಳ ವಿವರ ಮತ್ತು ಅವುಗಳ ನಿವಾರಣೆಗಾಗಿ ಬಳಸಬಹುದಾದ ಪಾರಂಪರಿಕ ವೈದ್ಯದ ವಿವರಣೆಯನ್ನು ಕೊಟ್ಟಿದ್ದಾರೆ.

ಎ.ವಿ.ನಾವಡ ಅವರು 'ವೈದ್ಯರ ಹಾಡುಗಳು' ಎನ್ನುವ ಕೃತಿಯಲ್ಲಿ ಜಾನಪದ ವೈದ್ಯಕ್ಕೆ ಸಂಬಂಧಿಸಿದಂತೆ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅರ್.ಗುರುದೇವ ಅವರು ೧೯೯೨ರಲ್ಲಿ 'ಜನಪದ ಪಶುರೋಗ ಚಿಕಿತ್ಸೆ' ಎನ್ನುವ ಪಶುವೈದ್ಯ ಕೃತಿಯನ್ನು ಹೊರತಂದಿದ್ದಾರೆ. ಇದರಲ್ಲಿ ಸುಮಾರು ೫೮ ಪಶುರೋಗಗಳ ಲಕ್ಷಣ ಮತ್ತು ಅವುಗಳ ನಿವಾರಣೆಗೆ ಬಳಸಬಹುದಾದ ಔಷಧಿಗಳ ವಿವರಣೆಯನ್ನು ನೀಡಿದ್ದಾರೆ.

ಸಂಶಿಯ ಮುದ್ದೇಬಿಹಾಳ್ ಅವರು 'ಪಶುವೈದ್ಯ ಸಂಜೀವಿನಿ', ಪಶುವೈದ್ಯಚಿಂತಾಮಣಿ' ಮಹತ್ತರವಾದ ವೈದ್ಯಗ್ರಂಥಗಳು. ಕೆ.ಪೂರ್ಣಿಮಾಭಟ್ ಅವರು 'ಕೇರಳಿಯ ಸಾಂಪ್ರದಾಯಿಕ ಚಿಕಿತ್ಸೆಗಳು' ಎನ್ನವ ಉಪಯುಕ್ತವಾದ ಕೃತಿಯನ್ನು ಪ್ರಕಟಿಸಿದ್ದಾರೆ. ನಾ. ಮೊಗಸಾಲೆಯವರು 'ನಿಮ್ಮ ಕೈಯಲ್ಲೇ ನಿಮ್ಮ ಆರೋಗ್ಯ' ಎನ್ನವ ಆರೋಗ್ಯ ಸಲಹೆ-ಅಂಕಣ ಬರಹಗಳ ಸಂಗ್ರಹವನ್ನು ಆದರಿಸಿ ಕೃತಿಯನ್ನು ಹೊರ ತಂದಿದ್ದಾರೆ. ಶ್ರೀಕೃಷ್ಣ ಯಜುರ್ವೇದಿಯನ್ನು ತಂದಿದ್ದಾರೆ. ಇದು ಉತ್ತಮವಾದ ಜನಪದ ವೈದ್ಯರ ಜ್ಞಾನ ಭಂಡಾರವೆನ್ನಬಹುದು.

ವಸಂತಕುಮಾರ ಮಳಲಿಯವರು 'ಕರ್ನಾಟಕ ಜನಪದ ವೈದ್ಯ' ಎನ್ನವ ಕೃತಿಯನ್ನು ಪ್ರಕಟಿಸಿದ್ದಾರೆ. ಎಲ್. ಹೆಗಡೆಯವರು ಜನಪದ ವೇಶ್ಯ ಎನ್ನವ ವಿಮರ್ಶಾತ್ಮಕ ಲೇಖನವನ್ನು ಬರೆದಿದ್ದಾರೆ. ಎಸ್.ಕೆ.ಕರೀಂಖಾನ್‌ರ 'ಕರ್ನಾಟಕ ಜಾನಪದ' ಶ್ರೀರಾಮ ಇಟ್ಟಣ್ಣನವರ 'ನಂಬಿಕೆ ಸಂಪ್ರಾದಾಯಗಳು' ಹೆಚ್.ಜೆ. ಲಕ್ಕಪ್ಪಗೌಡರ 'ಮಲೆನಾಡ ಜನಪದ' ಜನಪದ ವೈದ್ಯ ಪಾಲ್ತಾಡಿ. ರಾಮಕೃಷ್ಣ ಆಚಾರ ಅವರ ' ಜಾನಪದ ಸ್ಪಂದನ' ಮುಂತಾದ ಗ್ರಂಥಗಳು ಜನಪದ ವೈದ್ಯ ಪದ್ಧತಿಯ ಅಂತಃಸತ್ವವನ್ನು ಎತ್ತಿ ಹಿಡಿಯುತ್ತವೆ.

ಜನಪದ ವೈದ್ಯವು ಜನಪದ ಸಂಪ್ರದಾಯಗಳಿಗೆ ಅನುಗುಣವಾಗಿ ಸ್ಥಳದಿಂದ ಸ್ಥಳಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಕಾಲದಿಂದ ಕಾಲಕ್ಕೆ ರೂಪಾಂತರಗೊಳ್ಳುತ್ತಾ, ಬದಲಾವಣೆ ಪಡೆಯುತ್ತಾ, ಕೆಲವು ಹಾಗೇಯೇ ಮುಂದುವರಿಯುತ್ತಾ ಮುನ್ನಡೆಯುತ್ತಿವೆ. ಆಯಾಯ ಭಾಗಗಳಲ್ಲಿ ಪರಿಸರಕ್ಕೆ ಅನುಗುಣವಾಗಿ, ಬೆಳೆಯುವ ಸಸ್ಯಗಳಿಗನುಗುಣವಾಗಿ ಔಷಧಿ ತಯಾರಿಸುವ ವಿಧಾನಗಳು ಬೇರೆ ಬೇರೆಯಾಗಿರುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಕಾಯಿಲೆಗನುಗುಣವಾಗಿ ವಿವಿಧ ಸಸ್ಯಗಳಿಂದ ತಯಾರಾದ ಔಷಧಿಗಳನ್ನೆ ಬಳಸುವುದನ್ನು ಕಾಣಬಹುದು. ಗ್ರಾಮೀಣ ಪ್ರದೇಶಗಳಲ್ಲಿ ಜನಪದ ವೈದ್ಯ ಪದ್ಧತಿ ಬಹಳ ಮಹತ್ವ ಪಡೆದಿದ್ದು ಮೌಲ್ಯಯುತವಾಗಿದೆ. ಹಳ್ಳಿ ವೈದ್ಯರು ಅಥವಾ ಪಂಡಿತರು ಅನಕ್ಷರಸ್ಥರು, ಯಾವುದೇ ಗ್ರಂಥಗಳನ್ನು ಓದಿದವರಲ್ಲ. ಅಲ್ಲದೆ ಶಿಷ್ಟರಿಂದ ವೈದ್ಯಕ್ಕೆ ಪೂರಕವಾಗಿ ಮಾಹಿತಿ ಪಡೆದವರಲ್ಲ. ಜೊತೆಗೆ ಅವರು ಕೊಡುವ ವೈದ್ಯ ಪದ್ಧತಿಯಲ್ಲಿ ವಿಜ್ಞಾನಕ್ಕೆ ಪೂರಕವಾಗಿ ಜೀವಸತ್ವಗಳು

ಇರುತ್ತವೆ ಎಂಬ ಅರಿವು ಅವರಿಗೆ ತಿಳಿದಿರುವುದೆಲ್ಲಿ ಆದರೂ ವೈದ್ಯ ಪದ್ಧತಿಯನ್ನು ರೂಢಿಸಿಕೊಂಡು ಬೇರೆಯವರಿಗೆ ಹೇಗೆ ಉಪಯೋಗ ವಾಗುತ್ತಾರೆ ಎಂಬುದು ಕುತೂಹಲಕರ ಸಂಗತಿ. ಆದರೆ ಜನಪದ ವೈದ್ಯ ತನ್ನ ಅನುಭವದ ಹಿನ್ನಲೆ ಜೊತೆಗೆ ಇತರೆ ಹಿರಿಕರ ಅನುಭವಗಳನ್ನು ನೋಡಿಯೋ, ಕೇಳಿಯೋ ಮತ್ತು ತನ್ನ ಜ್ಞಾನ ಬುತ್ತಿಯಿಂದ ಉಪಯೊಗೀಸಿಕೊಳ್ಳುವನು. ಈ ಎಲ್ಲಾ ಅಂಶಗಳ ಜೊತೆಗೆ ಹಳ್ಳಿಯ ಪರಿಸರದ ಒಡನಾಡಿಯಾಗಿರುವಂತ ಪ್ರಾಣಿ, ಪಕ್ಷಿ, ಸಸ್ಯ ಖನಿಜ, ಜಲ, ಮನುಷ್ಯ, ದೈವ ಹಾಗೂ ನಂಭಿಕೆ ಸಂಪ್ರಾದಾಯಗಳನ್ನು ಸಹಾಯಕ್ಕೆ ಬಳಸಿಕೊಳ್ಳುತ್ತಾನೆ. ಪರಿಸರದಲ್ಲಿ ಕೊರೆಯುವ ಅನೇಕ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ರೋಗಿಗಳಿಗೆ ಔಷಧಿಕೊಡುವುದರಲ್ಲಿ ನಿರತನಾಗಿರುತ್ತಾನೆ. ಗ್ರಾಮೀಣ ಪ್ರದೇಶದಲ್ಲಿ ಸಸ್ಯ ವೈದ್ಯರೂ ಮತ್ತು ಮಾಂತ್ರಿಕ ವೈದ್ಯರು ರೋಗಗಳನ್ನು ಗುಣಪಡಿಸುವಲ್ಲಿ ಕಾರ್ಯನಿರತರಾಗಿರುತ್ತಾರೆ.

ಸಸ್ಯದ ಚಿಗುರು, ನಾರು, ಕೊಂಬೆ, ತೊಗಟೆ, ಖಾಂಡ, ಹಾಲು ಚಕ್ಕೆ, ಬೇರು ಹಾಗೆ ಪ್ರತಿಯೊಂದು ಸಸ್ಯದ ಭಾಗವೂ ನುನುಷ್ಯನಿಗೆ ಒಂದಿಲ್ಲೊಂದು ರೀತಿಯಲ್ಲಿ ಉಪಯೋಗ ವಾಗುವುದರಿಂದ ಸಸ್ಯಗಳು ಜನಪದರಿಗೆ ಸಂಜೀವಿನಿ ಪರ್ವತವಿದ್ದಂತೆ.

ಜನಪದ ವೈದ್ಯರನ್ನು ಸಾಮಾನ್ಯವಾಗಿ ಮೂರು ಭಾಗವಾಗಿ ವರ್ಗಿಕರಿಸಬಹುದು. ತಲತಲಾಂತರದಿಂದ ರೂಢಿಸಿಕೊಂಡು ಬಂದ ವೈದ್ಯರು(ಪರಂಪರೆ ವೈದ್ಯರು), ಮನೆ ವೈದ್ಯರು ಮತ್ತು ಅಲ್ಪಸ್ವಲ್ಪ ಗೊತ್ತಿರುವ ವೈದ್ಯರು ಈ ಪರಂಪರೆ ವೈದ್ಯರ ಜೊತೆಗೆ ಮಾಂತ್ರಿಕ ವೈದ್ಯರೂ ಕೂಡ ಸೇರಿಕೊಂಡಿರುತ್ತಾರೆ. ಇವರು ಸಾಮಾನ್ಯವಾಗಿ ಎಲ್ಲಾ ಖಾಯಿಲೆಗಳಿಗೂ ಔಷಧಿಕೊಡುವ ಪರಂಪರಾಗತ ವೃತ್ತಿಯನ್ನಾಗಿ ಮಾಡಿಕೊಂಡಿರುತ್ತಾರೆ. ಇನ್ನೂ ಕೆಲವರು ಮನೆಯ ಗೌರವಕ್ಕಾಗಿ ಉಚಿತವಾಗಿ ಔಷಧಿ ನೀಡುತ್ತಾ ಬಂದಿದ್ದಾರೆ. ಸಾಮಾನ್ಯವಾಗಿ ಈ ರೀತಿಯ ವೈದ್ಯ ವೃತ್ತಿಯನ್ನು ರೂಢಿಸಿಕೊಂಡು ಬಂದ ಕುಟುಂಬದವರಿಗೆ ಹಳ್ಳಿಗಳಲ್ಲಿ ಗೌರವ, ಮನ್ನಣೆ, ಹೆಸರು ಇದೆ. ಆ ಗ್ರಾಮದ ಜನರು ಬಹಳ ಪ್ರೀತಿ ವಿಶ್ವಾಸದಿಂದ ಅವರನ್ನು ನೋಡಿಕೊಳ್ಳುತ್ತಾರೆ. ಇಂದಿಗೂ ಹಳ್ಳಿಗಳಲ್ಲಿ ಆಚಾರಿ, ಪಂಡಿತ, ಪೂಜಾರಿ. ಹೀಗೆ ಅವರನ್ನು ಗೌರವಯುತವಾಗಿ ನಡೆಸಿಕೊಳ್ಳುವನು.

ಕೆಲವರು ವೈದ್ಯಪದ್ಧತಿಯನ್ನು ಪ್ರಧಾನ ಕುಲಕಸುಬನ್ನಾಗಿ ಮಾಡಿಕೊಂಡು ಬಂದಿದ್ದರೇ, ಇನ್ನೂ ಕೆಲವರು ವೈದ್ಯ ಪದ್ಧತಿಯನ್ನು ಉಪಕಸುಬನ್ನಾಗಿ ಸ್ವೀಕರಿಸಿಕೊಂಡು ಮುಂದುವರಿಯುತ್ತಿದ್ದಾರೆ. ಇವರು ಹಣದಾಹಿಗಳಲ್ಲ. ರೋಗಿ ಪ್ರೀತಿಯಿಂದ ಎಷ್ಟು ಕೊಡುತ್ತಾರೆಯೋ ಅಷ್ಟನ್ನು ಮಾತ್ರ ಸ್ವೀಕರಿಸುತ್ತಾರೆ. ಅದರಲ್ಲೂ ಮೂಕ ಪ್ರಾಣಿಗಳಿಗೆ ಔಷಧವನ್ನು ನೀಡಿದಾಗಂತೂ ಪುಣ್ಯ ಬರುತ್ತದೆ. ಎಂದು ನಂಬುತ್ತಾರೆ. ಹಳ್ಳಿಗಳಲ್ಲಿ ಹಣವನ್ನು ತೆಗೆದುಕೊಂಡರೆ ದೇವರು ನಮ್ಮನ್ನು ಕ್ಷಮಿಸುವುದಿಲ್ಲವೆಂದು ನಂಬಿರುತ್ತಾರೆ. ಕೆಲವು ವೈದ್ಯರು ವೀಳೆಯ ಎಲೆ ಅಡಿಕೆ ಸ್ವಲ್ಪ ಕಾಣಿಕೆ

ಪಡೆಯುತ್ತಾರೆ. ಜನಪದ ವೈದ್ಯರು ನಿಜವಾಗಿಯೂ ಸತ್ಯದ ನೆಲೆಯಲ್ಲಿ ಔಷಧಿಕೊಡುತ್ತಾ ವೈದ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಗ್ರಾಮೀಣ ವೈದ್ಯ ವೃತ್ತಿ ಮಾಡುವವರು ಮನಬಂದಂತೆ ಗಿಡಮೂಲಿಕೆಗಳನ್ನು ಸಂಗ್ರಹ ಮಾಡಿ ಮನಬಂದಂತೆ ಔಷದೋಪಚಾರಗಳನ್ನು ಮಾಡುವುದಿಲ್ಲ. ಗಿಡಮೂಲಿಕೆಗಳನ್ನು ನಿರ್ದಿಷ್ಟ ವೇಳೆಯಲ್ಲಿ ಸಂಗ್ರಹಿಸಿಟ್ಟುಕೊಂಡು ನಿರ್ದಿಷ್ಟ ದಿನದಂದೇ ತಮ್ಮ ಮನೆದೇವರಿಗೆ ಪೂಜೆ ಸಲ್ಲಿಸಿ ರೋಗಿಗಳಿಗೆ ಔಷಧಿ ನೀಡುತ್ತಾರೆ. ಕೆಲವು ವೈದ್ಯರು ಆ ವೇಳೆಯಲ್ಲಿ, ಯಾರು ಸುಳಿದಾಡದ, ಹಾಗೂ ನೋಡದ ಮತ್ತು ಇನ್ನೊಬ್ಬರಿಗೆ ಗಿಡಮೂಲಿಕೆ ಗೊತ್ತಾಗದಂತೆ ಸಂಗ್ರಹಿಸುತ್ತಾರೆ– ಮತ್ತು ಅವುಗಳ ಹೆಸರನ್ನು ಕೂಡ ಹೇಳುವುದಿಲ್ಲ. ಮಂತ್ರ ತಂತ್ರಗಳನ್ನು ಹೇಳುವುದಿಲ್ಲ. ಅವುಗಳ ಹೆಸರನ್ನು ಹೇಳಿದರೆ ರೋಗ ವಾಸಿಯಾಗುವುದಿಲ್ಲ. ಔಷಧಿ ನಾಟುವುದಿಲ್ಲ ಎಂಬ ಬಲವಾದ ನಂಬಿಕೆ ಅವರಲ್ಲಿದೆ.

ಜನಪದ ವೈದ್ಯ ವೃತ್ತಿ ಶತಶತಮಾನಗಳಿಂದ ಪರಂಪರಾಗತವಾಗಿ ಬಂದಿದ್ದು, ಬಾಯಿಂದ ಬಾಯಿಗೆ, ಹರಿಯುತ್ತಾ ಜೊತೆಗೆ ವೈದ್ಯರು ತಮ್ಮ ವೈದ್ಯ ಪದ್ಧತಿಯನ್ನು ಹೇಳಿಕೊಳ್ಳದೇ ಗುಟ್ಟಾಗಿ ಇಟ್ಟುಕೊಂಡು ಬಂದಿದ್ದಾರೆ. ಅಲ್ಲದೆ ತಮ್ಮ ಹತ್ತಿರದ ಸಂಬಂಧಿಕರಿಗೆ, ಶಿಷ್ಯರಿಗೆ ಮತ್ತು ವೈದ್ಯ ಪದ್ಧತಿ ಬಗ್ಗೆ ಬಹಳ ಶ್ರದ್ಧೆ, ಭಕ್ತಿ ಹಾಗೂ ಆಸಕ್ತಿ ಇರುವವರಿಗೆ ಮಾತ್ರ ಹೇಳಿಕೊಡುತ್ತಾರೆ.

ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯ ಕಸುಬು ಮಾಡುತ್ತಿರುವವರು ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಿಗಳನ್ನು ಸಾವಿರಾರು ಜನಪದರು ಉಪಯೋಗಿಸಿಕೊಂಡು ಇಂದಿಗೂ ಹಳ್ಳಿಗಳಲ್ಲಿ ನಾಟಿ ವೈದ್ಯ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಅಲ್ಲದೆ ಇಂತಹವುಗಳಿಂದ ಹೆಚ್ಚು ಉಪಯುಕ್ತವಾಗಿದ್ದು ಜನಪ್ರಿಯವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯ ವೃತ್ತಿಯನ್ನು ಮಾಡುವವರು ಕಾಡು, ಮೇಡುಗಳನ್ನು ಸುತ್ತಿ ಗಿಡಮೂಲಿಕೆಗಳನ್ನು ಸಂಗ್ರಹಿಸುತ್ತಾರೆ. ಪ್ರಮುಖ ಗಿಡಮೂಲಿಕೆಗಳನ್ನು ಈ ಕೆಳಕಂಡಂತೆ ಹೆಸರಿಸಬಹುದು. ಗುಲಗಂಜಿ, ಬಿಳಿ ಎಕ್ಕಾ, ಉತ್ತರಾಣಿ, ಹೊಂಗೆ, ಲೋಳೆಸರ, ದಾಸವಾಳ, ಕೆಂಪುಚಿತ್ತಾಮುಲು, ವೀರಮದ್ದಿನಕಡ್ಡಿ, ಅನೆಬುಲೆ, ಕಣಗಲೆ, ಯಾಸ್ತಿ, ಅಶ್ವಥ್‌ಬಬೀರ, ಗರಿಕೆ, ಆನೆನಗ್ಗಲು, ಗೆಜ್ಜೆಡಕೆ, ಆಡುಮುಟ್ಟದ ಗಿಡ, ಮೆಣಸು, ಲವಂಗ, ಜಾಜಿಕಾಯಿ, ಪತ್ರೆ , ಶುಂಠಿ, ಅರಿಶಿಣ, ಜಾಪತ್ರೆ, ಬಿಳಿದಾಸವಾಳ, ಬೇವಿನಸೊಪ್ಪು, ಸೀತಾಫಲ, ಬಸವನಪಾದ, ತುಂಬೆ ಇತ್ಯಾದಿ ಸಸ್ಯ, ಗಿಡ, ಮರಗಳ ಚಿಗುರು, ಹೂ ಕಾಂಡ ನಾರು ಬೇರು ಇತ್ಯಾದಿಗಳನ್ನು ಸಂಗ್ರಹಿಸಿ ಔಷಧಿಗಳನ್ನು ತಯಾರಿಸುತ್ತಾರೆ.

ಈ ಮೇಲ್ಕಂಡ ಗಿಡಮೂಲಿಕೆಗಳಿಂದ ಬಾಯಿ ಹಲ್ಲಿನ ಹುಳುಕು, ನಾಯಿಕಡಿತದಿಂದಾಗುವ ರೋಗ, ಶೀತ, ನೆಗಡಿ, ಹೊಟ್ಟೆನೋವು, ಗಾಯ, ಕಾಲು ಕೈ ಮುರಿತ, ಸಿಡುಬು, ಕಜ್ಜಿ, ಚರ್ಮದ

ರೋಗಗಳು, ಹಾವು ಕಡಿತ, ಹೆಣ್ಣು ಮಕ್ಕಳ ಬಿಳಿಸೆರಗು, ತೊಡೆಬಾಹು, ರಕ್ತ ಸೋರಿಕೆ, ಕೆಲವು ಗುಪ್ತ ರೋಗಗಳು, ಪೈಲ್ಸ್, ತುರಿತ, ಸಕ್ಕರೆ ಕಾಯಿಲೆ, ಜ್ವರ, ರಕ್ತ ಶುದ್ಧಿ ಮಾಡುವುದು, ಎದೆನೋವು, ಕಣ್ಣಿನ ರೋಗ, ಮೂಲವ್ಯಾಧಿ, ಮೈಕಾಂತಿ, ಮುಖಕಾಂತಿ, ಪಾರ್ಶ್ವವಾಯು, ಜಂತು ಇನ್ನೂ ಮುಂತಾದ ರೋಗ ರುಜಿನಗಳಿಗೆ ಗಿಡಮೂಲಿಕೆ ಔಷಧಿಗಳು ಬಹು ಉಪಯುಕ್ತವಾಗಿವೆ. ಗಿಡಮೂಲಿಕೆ ಔಷಧಿಗಳನ್ನು ನಿಯಮಿತವಾಗಿ ಸೇವಿಸುವುದರಿಂದ ಯಾವುದೇ ಅಡ್ಡ ಪರಿಣಾಮಗಳಾಗುವುದಿಲ್ಲ ಎಂದು ವೈದ್ಯರು ತಿಳಿಸುತ್ತಾರೆ.

ನಾಟಿ ವೈದ್ಯರು ದನಕರು, ಎಮ್ಮೆ, ಕುರಿ ಮೇಕೆ ಇತ್ಯಾದಿ ಸಾಕುಪ್ರಾಣಿಗಳಿಗೆ ಬರುವ ರೋಗಗಳನ್ನು ಪರೀಕ್ಷಿಸಿ ಔಷಧೋಪಚಾರ ಮಾಡುತ್ತಾರೆ. ಪ್ರಾಣಿಗಳಿಗೆ ಬರುವ ಕಪ್ಪುನಾಲಿಗೆ ರೋಗ, ಹುಚ್ಚುರೋಗ, ಕಾಲು ಮುರಿತ, ಹೊಟ್ಟೆಮುರಿತ ಇತ್ಯಾದಿ ರೋಗಗಳಿಗೆ ಔಷಧಿ ನೀಡಿ ರೋಗವಾಸಿ ಮಾಡುತ್ತಾರೆ.

ಕೆಲವು ಸಂದರ್ಭಗಳಲ್ಲಿ ಜನಪದ ವೈದ್ಯರು ಲೋಹ, ಖನಿಜ, ನೀರು ಇತ್ಯಾದಿಗಳನ್ನು ಬಳಸಿ ರೋಗ ನಿವಾರಣೆ ಮಾಡುತ್ತಾರೆ.

ಜಾನಪದ ವೈದ್ಯರು ವಿವಿಧ ರೋಗಗಳಿಗೆ ಗಿಡಮೂಲಿಕೆಗಳಿಂದ ಔಷಧಿ ಸಿದ್ಧಪಡಿಸಿ ರೋಗಿಯನ್ನು ರೋಗಮುಕ್ತಗೊಳಿಸುತ್ತಾರೆ. ಜಾನಪದ ವೈದ್ಯರು ವಿವಿಧ ರೋಗರುಜಿನಗಳಿಗೆ ನೀಡುವ ಗಿಡಮೂಲಿಕೆಗಳ ವಿವರ ಹೀಗಿದೆ.

ಜ್ವರ: ಶುಂಠಿ, ಮೆಣಸು, ಕರಿಮೆಣಸುಗಳನ್ನು ಪುಡಿ ಮಾಡಿ ಅದರಿಂದ ಕಷಾಯವನ್ನು ತಯಾರಿಸಿ ಕುಡಿದರೆ ಜ್ವರ ಕಡಿಮೆಯಾಗುತ್ತದೆ.

ಹೊಟ್ಟೆ ಉಬ್ಬರ: ಬೆಳ್ಳುಳ್ಳಿ ಶುಂಠಿಯನ್ನು ಚೆನ್ನಾಗಿ ಅರೆದು ಕುದಿಸಿ ಆ ನೀರನ್ನು ಕುಡಿಯುವುದರಿಂದ ಹೊಟ್ಟೆ ಉಬ್ಬರ ಕಡಿಮೆಯಾಗುತ್ತದೆ.

ನೆಗಡಿ-ಕೆಮ್ಮು: ಶುಂಠಿ-ಮೆಣಸು ಹಾಗೂ ಗಿಡಮೂಲಿಕೆಗಳನ್ನು ಹಾಕಿ ಚೆನ್ನಾಗಿ ಪುಡಿಮಾಡಿ ಅದಕ್ಕೆ ನೀರು ಹಾಕಿ ಒಲೆ ಮೇಲೆ ಕುದಿಸುತ್ತಾರೆ. ಇದರಿಂದ ಬಂದ ಕಷಾಯವನ್ನು ಕುಡಿಯುವುದರಿಂದ ನೆಗಡಿ-ಕೆಮ್ಮು ಗುಣವಾಗುತ್ತದೆ.

ಭೇದಿ: ಈ ಕಾಯಿಲೆ ಆಹಾರದ ವ್ಯತ್ಯಾಸದಿಂದ ಉಂಟಾಗುವ ಭೇದಿಗೆ ಹಾಗೂ ಅಜೀರ್ಣಕ್ಕೆ ಹರಳೇಕಾಯಿ ರಸ ತೆಗೆದು ಮಜ್ಜಿಗೆ ಇಲ್ಲವೆ ಮೊಸರಿನಲ್ಲಿ ಮಿಶ್ರಣ ಮಾಡಿ ಅನ್ನದಲ್ಲಿ ಊಟ ಮಾಡುವುದರಿಂದ ಭೇದಿ ಕಡಿಮೆಯಾಗುತ್ತದೆ.

ಹಲ್ಲು ನೋವು: ಕರಿಮೆಣಸಿನ ಬೇರು ಅಥವಾ ಲವಂಗವನ್ನು ಮತ್ತು ತಂಬಾಕು ಹಲ್ಲು ನೋಯುವ ಜಾಗದಲ್ಲಿ ಇಟ್ಟುಕೊಂಡರೆ ಹಲ್ಲು ನೋವು ವಾಸಿಯಾಗುತ್ತದೆ.

ವಾಂತಿ: ವಾಂತಿ ಬರುವ ಸಂದರ್ಭಗಳಲ್ಲಿ ಏಲಕ್ಕಿಯನ್ನು ತಿಂದರೆ ವಾಂತಿ ಕಡಿಮೆ ಆಗುತ್ತದೆ. ಇಲ್ಲವಾದರೆ ಹಸಿರು ಮದ್ದನ್ನು ನೀರಿನಲ್ಲಿ ಕುದಿಸಿ, ಆ ನೀರನ್ನು ಸೇವಿಸುವುದರಿಂದ ವಾಂತಿ ನಿಲ್ಲುತ್ತದೆ.

ಗಾಯಗಳಿಗೆ: ಸುಣ್ಣ ತೆಂಗಿನ ಮರದ ಪುಡಿ, ಹಸಿರು ಮದ್ದಿನೊಂದಿಗೆ ಚೆನ್ನಾಗಿ ಅರೆದು ಗಾಯಕ್ಕೆ ಹಚ್ಚಬೇಕು ಅದು ಗಾಯಕ್ಕೆ ಅಂಟಿಕೊಳ್ಳುತ್ತದೆ. ಅದು ಒಣಗಿ ಉದುರುವುದರಲ್ಲಿ ಗಾಯ ವಾಸಿಯಾಗುತ್ತದೆ.

ಸುಟ್ಟಗಾಯ: ಕರಿಮೆಣಸು, ಕರಿತುಳಿಸಿಯನ್ನು ಚೆನ್ನಾಗಿ ಅರೆದು ಕೊಬ್ಬರಿ ಎಣ್ಣೆಯೊಂದಿಗೆ ಬೆರೆಸಿ ಹಚ್ಚುವುದರಿಂದ ಸುಟ್ಟಗಾಯ ಕಡಿಮೆಯಾಗುತ್ತದೆ. ಗಾಯದ ಕಲೆಗೆ ಜೇನುತುಪ್ಪ ಹಚ್ಚಿದರೆ ಕಲೆ ಮಾಯವಾಗುತ್ತದೆ.

ಪಿತ್ತ: ಒಣಶುಂಠಿ, ಲವಂಗ, ಕರಿತುಳಿಸಿ ಇವುಗಳನ್ನು ಸೇರಿಸಿ ಪುಡಿ ಮಾಡಿ ಕೊಂಚ ಸಲನೀರಿನಿಂದ ಕಷಾಯ ತಯಾರಿಸಿ, ಜೇನು ತುಪ್ಪದೊಂದಿಗೆ ಬೆರೆಸಿ ಸೇವಿಸಿದರೆ ಪಿತ್ತ ವಾಸಿಯಾಗುತ್ತದೆ.

ಕಜ್ಜಿ: ಹೊಳೆ ಜವನ ಸೊಪ್ಪನ್ನು ಚೆನ್ನಾಗಿ ಅರೆದು ಅದನ್ನು ಮೈ ತುಂಬಾ ಹಚ್ಚಿಕೊಂಡರೆ, ಅಲ್ಲದೆ ಕರಿ ತುಳಸಿಯ ಜೊತೆ ಸಲಉಪ್ಪು ಹಾಕಿ ಚೆನ್ನಾಗಿ ಅರೆದು ಕಜ್ಜಿಗೆ ಲೇಪಿಸಿದರೆ ಗುಣವಾಗುತ್ತದೆ.

ಕಣ್ಣು ಬೇನೆ: ತುಳಸಿ ರಸ, ಹಸಿರು ಮದ್ದಿನ ರಸವನ್ನು ಒಂದೆರಡು ದಿನ ಬಿಸಿಲಿನಲ್ಲಿ ಇರಿಸಿದರೆ ಲೋಳೆಯಾಗುತ್ತದೆ. ಕಣ್ಣಿನ ರೆಪ್ಪೆಯ ಮೇಲೆ ಲೇಪಿಸಿದರೆ ಕಣ್ಣು ಬೇನೆ ವಾಸಿಯಾಗುತ್ತದೆ.

ಕುರುವು: ಮದ್ದು ರಸದ ಜೊತೆಗೆ ಗಿಡಮೂಲಿಕೆಯನ್ನು ಬೆರಸಿ ಹಚ್ಚಿದರೆ ಕುರುಬಾವು ಕಡಿಮೆಯಾಗುತ್ತದೆ.

ಕಿವಿನೋವು: ಒಳ್ಳೆಣ್ಣೆಯನ್ನು ಕಾಯಿಸಿ ಆರಿದ ಮೇಲೆ ಕಿವಿಯಲ್ಲಿ ಬಿಡುತ್ತಾರೆ. ಅಲ್ಲದೆ ತುಂಬೆ ಗಿಡದ ರಸವನ್ನು ಕಿವಿಯಲ್ಲಿ ಹಿಂಡಿದರೆ ಕಿವಿ ನೋವು ಕಡಿಮೆಯಾಗುತ್ತದೆ.

ಮೈ ಕೈ ನೋವು: ವೀಳ್ಯೆದೆಲೆ, ಬೆಳ್ಳುಳ್ಳಿ, ಹುಂಡೆ ಮೆಣಸು ಬೆರೆಸಿ ಕೊಬ್ಬರಿ ಎಣ್ಣೆಯೊಂದಿಗೆ ಕಾಯಿಸಿ ಮೈಗೆ ಹಚ್ಚುತ್ತಾರೆ. ನಂತರ ಬಿಸಿ ನೀರಿನಲ್ಲಿ ಸ್ನಾನ ಮಾಡಿದರೆ ಮೈ ಕೈ ನೋವು ಕಡಿಮೆಯಾಗುತ್ತದೆ.

ಜಂತು ಹುಳದ ಬಾದೆ: ತುಂಬೆ ಸೊಪ್ಪಿನ ರಸ, ಗಿಡಮೂಲಿಕೆಯ ಬೇರು ಅರೆದು ಹಸುವಿನ ಮಜ್ಜಿಗೆಯೊಂದಿಗೆ ಬೆರಸಿ ಸೇವಿಸಿದರೆ ಹುಳು ಸಾಯುತ್ತದೆ.

ಹಾವು ಕಚ್ಚಿದರೆ: ಹಾವು ಕಚ್ಚಿದ ಭಾಗದಿಂದ ಸಲಮೇಲೆ ಬಿಗಿಯಾಗಿ ಬಟ್ಟೆ ಕಟ್ಟುವುದು. ಕಡಿದ ಜಾಗದಲ್ಲಿ ರಕ್ತ ಹೊರಬರುವಾಗೆ ಮಾಡುವುದು. ಆನಂತರ ಕಟ್ಟಿದ ಜಾಗಕ್ಕೆ ಜೀವಂತ ಕೋಳಿಗಳ ಪೃಷ್ಠ ಭಾಗದಿಂದ ಹಿಡಿಯುವುದು. ಆ ಮೂಲಕ ಕೋಳಿ ವಿಷವನ್ನು ಎಳೆದುಕೊಳ್ಳುತ್ತದೆ. ವ್ಯಕ್ತಿ ವಿಷ ಮುಕ್ತನಾಗುತ್ತಾನೆ.

ಪಶು ವೈದ್ಯ:

ಮನುಷ್ಯರಿಗೆ ಬರುವಂತೆ ಪ್ರಾಣಿಗಳಿಗೆ ಹಲವಾರು ರೋಗರುಜಿನಗಳು ಬರುತ್ತವೆ. ಕಾಡು ಪ್ರಾಣಿಗಳು ವಿವಿಧ ಸಸ್ಯ, ಗಿಡಗಳನ್ನು ತಿಂದೋ ಅಥವಾ ಉಪವಾಸವಿದ್ದೋ ರೋಗ ನಿವಾರಿಸಿಕೊಳ್ಳುತ್ತವೆ. ಆದರೆ ಜನಸಮುದಾಯದೊಂದಿಗೆ ವಾಸಿಸುವ ದನಗಳು ಎಮ್ಮೆ, ಕುರಿಮೇಕೆ, ಕೋಳಿ, ಇತ್ಯಾದಿ ಪ್ರಾಣಿಗಳು ಯಾವುದಾದರೂ ರೋಗ ಬಂದರೆ ಜನಪದ ವೈದ್ಯರು ಚಿಕಿತ್ಸೆ ನೀಡುತ್ತಾರೆ. ಪಶುಪಕ್ಷಿಗಳಿಗೆ ಬರುವ ರೋಗಗಳು ಮತ್ತು ಅವುಗಳಿಗೆ ನೀಡುವ ಚಿಕಿತ್ಸೆಯು ಈ ಕೆಳಗಿನಂತಿದೆ.

ಹೊಟ್ಟೆ ಹುಳು: ಜಾನುವಾರುಗಳ ಹೊಟ್ಟೆಯಲ್ಲಿ ಹುಳುಗಳಿದ್ದರೆ ಆಹಾರವನ್ನು ತೊರೆಯುತ್ತವೆ. ಮಂಕಾಗಿ ಮಲಗುತ್ತವೆ. ದೇಹವು ಸೊರಗುತ್ತದೆ. ಇದಕ್ಕೆ ಚೆಂಡು ಹೂವಿನ ರಸ ಹಾಗೂ ಕರಿ ತುಳಸಿಯ ರಸವನ್ನು ಕುಡಿಸುತ್ತಾರೆ. ಇದರಿಂದ ಹುಳ ಸತ್ತು ಪ್ರಾಣಿಗಳು ಆಹಾರ ಸೇವಿಸುತ್ತವೆ.

ಸೆಲೆರೋಗ: ಜಾನುವಾರುಗಳು ಆಹಾರ ಪಾನೀಯವನ್ನು ತೊರೆದು, ಬಾಯಿಂದ ಜೊಲ್ಲು ಸುರಿಸುತ್ತಾ, ಮಂಕಾಗಿ ಮಲಗುತ್ತವೆ. ದೇಹ ಸೊರಗುತ್ತದೆ. ಜಾನಪದ ವೈದ್ಯರು ಈ ರೋಗವನ್ನು ಗುರುತಿಸಿ ಅದರ ನಿವಾರಣೆಗೆ ಸೆಲೆಗಿಡದ ಬಳ್ಳಿಯನ್ನು ಪಶುಗಳ ಕೊರಳಿಗೆ ಕಟ್ಟುವರು. ಅಲ್ಲದೆ ಬೆಳ್ಳುಳ್ಳಿ, ಶುಂಠಿ, ತುಳಸಿ ಕಾಡು ಬೇವಿನ ತೊಗಟೆ ಮತ್ತು ಗಿಡಮೂಲಿಕೆಗಳೊಂದಿಗೆ ಅರೆದು ಕುಡಿಸುತ್ತಾರೆ. ದನಗಳಿಗೆ ಸೀನು ಬಂದು ಇದರಿಂದ ಮೈ ಹಗುರವಾಗಿ ರೋಗವು ನಿವಾರಣೆಯಾಗುತ್ತದೆ.

ಕಾಲುಬಾಯಿ ರೋಗ: ದನಕರುಗಳ ಬಾಯಿ ಒಣಗುತ್ತದೆ. ಮೇವು ನೀರು ಸೇರುವುದಿಲ್ಲ. ಇದು ಅತ್ಯಂತ ಕೆಟ್ಟ ರೋಗ. ಇದರಿಂದ ದನಕರುಗಳು ಮರಣ ಹೊಂದುತ್ತವೆ. ಈ ಸಂದರ್ಭದಲ್ಲಿ ಕಾಲುಗಳ ಮೇಲೆ ನೊಣಗಳು ಮುತ್ತುತ್ತವೆ. ಗಾಯಗಳಾಗಿ ಹುಳುಗಳು ಬೀಳುತ್ತವೆ. ಇದಕ್ಕೆ ಬೆಳ್ಳುಳ್ಳಿ, ಶುಂಠಿ, ಕಾಡು ಬೇವಿನ ತೊಗಟೆಯನ್ನು ಅರೆದು ಮಜ್ಜಿಗೆಯೊಂದಿಗೆ ಬೆರೆಸಿ ದಿನಕ್ಕೆರಡು ಬಾರಿ ಕುಡಿಸುತ್ತಾರೆ. ನೊಣಗಳು ಮುಟ್ಟದಿರಲೆಂದು ಕರಿತುಳಸಿ ರಸವನ್ನು ಮೈಗೆ ಲೇಪಿಸುತ್ತಾರೆ.

ಈರು ಹುಣ್ಣು: ಪ್ರಾಣಿಗಳ ಕರುಳಿನ ಮೇಲೆ ಹುಣ್ಣು ಆಗುವುದನ್ನು ಈರು ಹುಣ್ಣು ಎಂದು ಕರೆಯುತ್ತಾರೆ. ಈ ರೋಗ ಆಹಾರದ ವ್ಯತ್ಯಾಸದಿಂದ ಬರುತ್ತದೆ. ಇದಕ್ಕೆ ಈರುಳ್ಳಿ, ತುಳಸಿ ಮೂಲಿಕೆಯನ್ನು ಅರೆದು ಮಜ್ಜಿಗೆಯಲ್ಲಿ ಬೆರೆಸಿ ಕುಡಿಸುವುದರಿಂದ ಹುಣ್ಣು ಕರಗಿ ವಾಸಿಯಾಗುತ್ತದೆ.

ಉಬ್ಬಸ: ಜಾನುವಾರುಗಳು ಉಸಿರಾಟದ ತೊಂದರೆಯಿಂದ ಅತ್ತಿಂದಿತ್ತ ಓಡಾಡುತ್ತಿರುತ್ತವೆ. ಇದಕ್ಕೆ ಶುಂಠಿ, ಬೆಳ್ಳುಳ್ಳಿ, ತುಳಸಿ, ಸುಗಂಧ ಬೇರು ಮತ್ತು ಬೇವಿನ ತೊಗಟೆಯನ್ನು ಚೆನ್ನಾಗಿ ಅರೆದು ನೀರಿನೊಂದಿಗೆ ಕುದಿಸುತ್ತಾರೆ. ಇದರಿಂದ ಉಬ್ಬಸ ರೋಗ ವಾಸಿಯಾಗುತ್ತದೆ.

ಧನುರ್ವಾಯು: ಪಶುಗಳ ಕಾಲಲ್ಲಿ ಬಲಹೀನತೆ ಕಂಡುಬಂದು ಓಡಾಡದೆ ಮೈಚಾಚಿ ಮಲಗುತ್ತವೆ. ಕಾಲುಗಳನ್ನು ಜಾಡಿಸುತ್ತಿರುತ್ತವೆ. ಕಣ್ಣಿನಿಂದ ನೀರು ಸುರಿಸುತ್ತದೆ. ಈ ಸಮಯದಲ್ಲಿ ಮೆಂತ್ಯೆ, ಬೆಳ್ಳುಳ್ಳಿ, ಶುಂಠಿ, ಗಿಡಮೂಲಿಕೆಯ ಬೇರು ಚೆನ್ನಾಗಿ ಅರೆದು ನೀರು ಅಥವಾ ಮಜ್ಜಿಗೆಯೊಂದಿಗೆ ಬೆರೆಸಿ ಎರಡು ಮೂರು ದಿನ ಕುಡಿಸುತ್ತಾರೆ. ಇದರಿಂದ ರೋಗ ಗುಣಮುಖವಾಗುತ್ತದೆ.

ಚಪ್ಪೆ ರೋಗ: ಜಾನುವಾರುಗಳಲ್ಲಿ ಕಾಲುಗಳ ಶಕ್ತಿ ಕುಂದಿದಾಗ ನಡೆಯಲಾರದೇ ಕುಸಿದು ಬೀಳುತ್ತವೆ. ಅಲ್ಲದೇ ರೋಗ ಬಂದಾಗ ಕಣ್ಣುಗಳಲ್ಲಿ ಪಿಸಿರು ಗಟ್ಟುತ್ತದೆ. ಹುಲ್ಲು, ನೀರು ಏನನ್ನೂ ತಿನ್ನುವುದಿಲ್ಲ. ಈ ಸಂದರ್ಭಗಳಲ್ಲಿ ಈರುಳ್ಳಿ, ಬೆಲ್ಲ, ವಿಳೆಯದೆಲೆ, ಬೆರೆಸಿ ತಿನ್ನಿಸುತ್ತಾರೆ. ಶುಂಠಿ ಮಜ್ಜಿಗೆಯನ್ನು ಕುಡಿಸುವರು. ಅಲ್ಲದೆ ರಾಗಿ ಅಂಬಲಿಯನ್ನು ಕುಡಿಸುವುದರಿಂದ ಕಾಲುಗಳಲ್ಲಿ ಶಕ್ತಿ ವರ್ಧಿಸಿ ರೋಗವು ವಾಸಿಯಾಗುತ್ತದೆ.

ಹುಣ್ಣು ರೋಗ: ಪ್ರಾಣಿಗಳ ಮೂಗಿನ ಹೊಳ್ಳೆಯಲ್ಲಿ ಸಣ್ಣ ಸಣ್ಣ ಹುಣ್ಣುಗಳಾಗುತ್ತವೆ. ಇದರಿಂದ ಆಹಾರ ಸೇವನೆ ಕಷ್ಟವಾಗುತ್ತದೆ. ಇದಕ್ಕೆ ಗಿಡಮೂಲಿಕೆಯ ರಸವನ್ನು ಹೊಳ್ಳೆಯ ಸಂದಿಗೆ ಎರಡು ಮೂರು ದಿನಗಳ ಕಾಲ ಬಿಟ್ಟರೆ ರೋಗ ನಿವಾರಣೆಯಗುತ್ತದೆ.

ಮೂಳೆ ಮುರಿದರೆ: ಜಾನುವಾರುಗಳ ಯಾವುದೇ ಭಾಗದಲ್ಲಿ ಮೂಳೆ ಮುರಿದರೆ ಅದಕ್ಕೆ ಬೆಲ್ಲ, ಶುಂಠಿ, ಬೆಳ್ಳುಳ್ಳಿ, ಕಾಡು ಬೇವಿನ ಸೊಪ್ಪು ಕರಿತುಳಸಿಯನ್ನು ಚೆನ್ನಾಗಿ ಅರೆದು ಮೂಳೆ ಮುರಿದ ಭಾಗಕ್ಕೆ ಲೇಪಿಸಿ ಎರಡು ಬಿದಿರು ಕಡ್ಡಿಯನ್ನು ಕಟ್ಟಿ ವಿಳೆಯದೆಲೆ ಇಟ್ಟು ಬಟ್ಟೆಯೊಂದಿಗೆ ಬಿಗಿಯುತ್ತಾರೆ. ಇದರಿಂದ ಮೂಳೆ ಕಟ್ಟಿಕೊಳ್ಳುತ್ತದೆ.

ಉಚ್ಚುವುದು: ಆಹಾರದಲ್ಲಿ ಬದಲಾವಣೆಯಾದಾಗ ಈ ಬಾದೆ ಉಂಟಾಗುತ್ತದೆ. ಕೆಲವು ಗಿಡಮೂಲಿಕೆಗಳೊಂದಿಗೆ, ಶುಂಠಿ, ಬೆಳ್ಳುಳ್ಳಿಯನ್ನು ಅರೆದು ಬೆರೆಸಿ ದಿನಕ್ಕೆರಡು ಬಾರಿ ಮಜ್ಜಿಗೆಯಲ್ಲಿ ನಾಲ್ಕೈದು ದಿನ ಕುಡಿಸುವುದರಿಂದ ಉಚ್ಚಿಕೊಳ್ಳುವುದು ನಿಲ್ಲುತ್ತದೆ.

ಕೋಳಿ ರೋಗ: ಈ ರೋಗ ಬಂದರೆ ಅವುಗಳಿಗೆ ಬೆಳ್ಳುಳ್ಳಿ, ಈರುಳ್ಳಿ ಮತ್ತು ಕೆಲವು ಗಿಡಮೂಲಿಕೆಗಳ ರಸವನ್ನು ಬೆರೆಸಿ ಕುಡಿಸಿದರೆ ಕೋಳಿರೋಗ ಕಡಿಮೆಯಾಗುತ್ತದೆ.

ಹೀಗೆ ಜನಪದ ವೈದ್ಯರು ಜನರಿಗೆ ಹಾಗೂ ಪ್ರಾಣಿಗಳಿಗೆ ಸಾಮಾನ್ಯವಾಗಿ ಬರುವಂತಹ ರೋಗರುಜಿನಗಳಿಗೆ ಸರಳವಾಗಿ ಕಾಡಿನಲ್ಲಿ ದೊರೆಯುವ ಶಕ್ತಿಯುತವಾದ ಗಿಡಮೂಲಿಕೆಗಳನ್ನು ಉಪಯೋಗಿಸಿ ಹಲವಾರು ರೋಗಗಳನ್ನು ವಾಸಿ ಮಾಡುತ್ತಾರೆ.

ಜನಪದ ವೈದ್ಯರ ಕಸುಬು ಆಧುನಿಕ ವೈದ್ಯ ಪದ್ಧತಿ ಅಸ್ಥಿತಕ್ಕೆ ಬರುವ ಮುಂಚಿತವಾಗಿಯೇ ಸಮಾಜದಲ್ಲಿ ಉರ್ಜಿತವಾಗಿತ್ತು. ಇಂದು ಆಧುನಿಕತೆ ನಗರ ಪ್ರದೇಶಗಳಿಂದ ಹಳ್ಳಿಯವರೆಗೂ ಹಬ್ಬಿದೆ ಅಂದುಕೊಂಡರೂ ಈಗಲೂ ಹಳ್ಳಿಗಳಲ್ಲಿ ಅನೇಕ ಕಾಯಿಲೆಗಳಿಗೆ ಆಸ್ಪತ್ರೆಗೆ ಹೋಗುವ ಪರಿಪಾಠವಿರುವುದಿಲ್ಲ. ಅನೇಕ ಕಾಯಿಲೆಗಳನ್ನು ತಡೆಗಟ್ಟುವ ಔಷಧಿಗಳನ್ನು ಅವರ ಮನೆಗಳಲ್ಲಿ ಇಲ್ಲಾ ಹಳ್ಳಿಯ ವೈದ್ಯರಿಂದ ಚಿಕಿತ್ಸೆ ಪಡೆಯುವುದು ರೂಢಿಯಲ್ಲದೆ, ಸರ್ಕಾರದ ಆಸ್ಪತ್ರೆಗಳಿಗೆ ಹಳ್ಳಿಗಳಿಂದ ಹೋಗಲು ಸಾಧ್ಯವಾಗುವುದಿಲ್ಲ. ಅದಕ್ಕೆ ಸಾರಿಗೆ, ಹಣಕಾಸಿನ ತೊಂದರೆ ಇರಬಹುದು. ಅಲ್ಲದೆ ವೈಯುಕ್ತಿಕ ಸಮಸ್ಯೆಗಳಿರಬಹುದು. ಪಶು ಪ್ರಾಣಿಗಳಂತೂ ಪಶು ವೈದ್ಯ ಶಾಲೆಗಳನ್ನು ಕಾಣುವುದು ಇನ್ನೂ ದೂರವಾಗಿಯೇ ಉಳಿದಿದೆ. ಒಟ್ಟಾರೆ ಹೇಳುವುದಾದರೆ ನಮ್ಮ ಆರ್ಥಿಕ, ಸಾಮಾಜಿಕ, ಪರಿಸ್ಥಿತಿಯಲ್ಲಿ ಜನಪದ ವೈದ್ಯ ಕಸುಬು ಬಹುಮಹತ್ವ ಪಡೆದಿದೆ. ಈ ಆಧುನಿಕತೆಯ ಭರಾಟೆಯಲ್ಲಿ ಜನಪದರು ಪಟ್ಟಣಗಳಲ್ಲಿ ವೈದ್ಯರಿಗೆ ದುಬಾರಿ ಹಣವನ್ನು ನೀಡಬೇಕಾಗುತ್ತದೆ. ಆಧುನಿಕ ವೈಜ್ಞಾನಿಕ ವೈದ್ಯಕೀಯ ಸಾಮಗ್ರಿಗಳಿಂದ ಚಿಕಿತ್ಸೆ ಪಡೆಯುವ ಮಟ್ಟದಲ್ಲಿ ಜನಸಾಮಾನ್ಯರು ಇರುವುದಿಲ್ಲ. ಅಲ್ಲದೆ ಕಡಿಮೆ ಖರ್ಚಿನಲ್ಲಿ ಅವರ ಕೈಗೆಟಕುವ ಮನೆಮದ್ದು, ನಾಟಿ ವೈದ್ಯ, ತಮ್ಮ ಆಸುಪಾಸಿನಲ್ಲೆ ಸಿಕ್ಕುವುದರಿಂದ ಈ ಆಧುನಿಕತೆ ಹೊತ್ತಿನಲ್ಲಿಯೂ ಜನಪದ ವೈದ್ಯ ಪದ್ಧತಿ ಹಳ್ಳಿಗಳಲ್ಲಿ ನೆಲೆಸಿರುವ ಜನಪದರಲ್ಲಿ ಇನ್ನೂ ಜೀವಂತ ಸಾಕ್ಷಿ.

ಇಂದಿಗೂ ಪಟ್ಟಣಗಳಲ್ಲಿ ನೆಲೆಸಿರುವ ಅನೇಕರು ಜನಪದ ವೈದ್ಯರ ಮೊರೆ ಹೋಗುವುದನ್ನು ಕಾಣುತ್ತೇವೆ. ಆದುನಿಕ ವೈದ್ಯ ಪದ್ಧತಿ ಆಧುನಿಕತೆಯಲ್ಲಿ ಜನಮೆಚ್ಚಿಗೆ ಪಡೆದಿರುವಂತಹದ್ದು. ಆದರೆ ಔಷಧ ರಸಾಯನಿಕ ಅಂಶಗಳಿಂದ ತಯಾರಿಸಿ ಕೊಡುವುದರಿಂದ ಬೇಗ ಕಾಯಿಲೆಗಳು ಗುಣಮುಖ ಹೊಂದಿದರೂ, ಬೇರೆ ಬೇರೆ ಕಾಯಿಲೆಗಳಿಗೆ ರೂಪಾಂತರ ಪಡೆಯುವ ಸಾಧ್ಯತೆ ಇರುತ್ತವೆ. ಈ ಔಷಧಗಳಿಂದ ಅಡ್ಡ ಪರಿಣಾಮಗಳು ಕೂಡ ಹೆಚ್ಚು.

ನಾಟಿ ವೈದ್ಯದಲ್ಲಿ ಔಷಧಿಗೆ ನಿರ್ದಿಷ್ಟ ಅಳತೆ ತೂಕ ಇರುವುದಿಲ್ಲ. ಎಲ್ಲವೂ ಗುರುತು ಹಾಗೂ ರೋಗಿಯ ವಯಸ್ಸನ್ನು ಅವಲಂಬಿಸಿರುತ್ತದೆ. ಅಲ್ಲದೆ ಇಂದಿಗೂ ಮನುಷ್ಯ ಪ್ರಾದೇಶಿಕವಾಗಿ ಸಿಕ್ಕುವಂತಹ ಔಷಧಿಗೆ ಒಗ್ಗಿ ಹೋಗಿರುತ್ತಾನೆ. ಏಕೆಂದರೆ ಮನುಷ್ಯರಿಗಿರಬಹುದು ಅಥವಾ ಪ್ರಾಣಿಗಳಿಗಿರಬಹುದು ಅವುಗಳು ಪ್ರಾದೇಶಿಕವಾಗಿ ಕೆಲವು ರೋಗಗಳು ಭಿನ್ನತೆಯಿಂದ ಕೂಡಿರುತ್ತವೆ. ಇದಕ್ಕೆ ಆಯಾಯ ಪ್ರದೇಶದಲ್ಲಿ ಸೇವಿಸುವ ಆಹಾರ, ಗಾಳಿ, ಮಣ್ಣಿನ ಪರಿಸರ ಕಾರಣವಾಗುತ್ತದೆ. ಇಂತಹ ಕಾಯಿಲೆಗಳಿಗೆ ಔಷಧಿವಾಗಿ ಉಪಯೋಗಿಸುವ ಗಿಡಮೂಲಿಕೆಗಳು ಕೂಡ ಆಯಾಯ ಪ್ರದೇಶದವುಗಳೇ ಆಗಿರುತ್ತವೆ. ಆದುದರಿಂದ ಒಂದು ಪ್ರದೇಶದ ಕಾಯಿಲೆಗೆ ಮತ್ತೊಂದು ಪ್ರದೇಶದ ಔಷಧಿ ಹಾನಿ ಉಂಟುಮಾಡುವುದು ಕಡಿಮೆ ಎಂದರೆ ತಪ್ಪಾಗಲಾರದು. ಇದಕ್ಕೆ ಪೂರಕವಾಗಿ ಉಪಯೋಗಿಸುವ ಔಷಧಿಗಳೂ ಕೂಡ ಆಯಾಯ ಪ್ರದೇಶಗಳಲ್ಲಿ ದೊರೆಯುತ್ತವೆ.

ಹಳ್ಳಿಯಲ್ಲಿ ಸಾಮಾನ್ಯವಾಗಿ ನೆಲೆನಿಂತಿರುವಂತಹ ವೈದ್ಯ ಕಸುಬುದಾರರು ವೃತ್ತಿಪರರಾಗಿರುವುದಿಲ್ಲ. ಒಂದು ರೀತಿಯಲ್ಲಿ ಪ್ರವೃತ್ತಿ ವೈದ್ಯರಾಗಿರುತ್ತಾರೆ. ಕೆಲವರು ವಾರದಲ್ಲಿ ಒಂದೆರಡು ದಿನಗಳನ್ನು ಔಷಧೋಪಚಾರಕ್ಕಾಗಿಯೇ ತಮ್ಮನ್ನು ತೊಡಗಿಸಿಕೊಂಡು ಉಳಿದ ದಿನಗಳಲ್ಲಿ ವಿವಿಧ ರೀತಿಯ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಈ ಕುಲಕಸುಬಿನಿಂದ ಲಭ್ಯವಾಗುವ ಪ್ರತಿಫಲ ಕಡಿಮೆ. ಅವರು ರೋಗಿಗಳಿಂದ ಬಹಳಷ್ಟು ಪ್ರತಿಫಲ ನಿರೀಕ್ಷಿಸುವುದಿಲ್ಲ. ಅವರಾಗಿ ಕೊಟ್ಟರೆ ಮಾತ್ರ ಪಡೆದುಕೊಳ್ಳುತ್ತಾರೆ. ಕಾರಣ ಹಣ ಪಡೆದು ಔಷಧಿ ನೀಡಿದರೆ ಔಷಧಿ ಯಾವುದೇ ರೀತಿಯಲ್ಲಿ ಫಲ ನೀಡುವುದಿಲ್ಲ ಎಂಬ ನಂಬಿಕೆ ಅವರದು. ಔಷಧಿ ಪಡೆದಂತಹ ವ್ಯಕ್ತಿ ಎಲೆಯೊಡನೆ ಕೊಡುವ ಕಾಣಿಕೆಯನ್ನು ಪ್ರೀತಿಯಿಂದ ಸ್ವೀಕರಿಸುವರು. ಪ್ರಾಣಿಗಳಿಗೆ ನೀಡುವ ಔಷಧಿಗಳಿಂದಲೂ ಪ್ರತಿಫಲವನ್ನು ನಾಟಿ ವೈದ್ಯರು ನಿರೀಕ್ಷಿಸುವುದಿಲ್ಲ. ಆದರೆ ಇತ್ತೀಚಿನ ಸಾಮಾಜಿಕ ಆರ್ಥಿಕ ಬದಲಾವಣೆಗಳು ನಾಟಿ ವೈದ್ಯರ ಮೇಲೆ ಪ್ರಭಾವ ಬೀರಿರುವುದರಿಂದ ಅವರು ತಮ್ಮ ಬದುಕಿಗೆ ಅನಿವಾರ್ಯವಾಗಿ ಪ್ರತಿಫಲವನ್ನು ಪಡೆದುಕೊಂಡು ಔಷಧಿಗಳನ್ನು ನೀಡುವುದನ್ನು ಕಾಣಬಹುದು.

ಮಹತ್ವದ ಸಂಗತಿ ಎಂದರೆ ಹೆಚ್ಚು ಪ್ರಚಲಿತದಲ್ಲಿರುವ ಜನಪದ ವೈದ್ಯರನ್ನು ದೂರದೂರದ ಪ್ರದೇಶಗಳಿಂದ ಬಂದು ಔಷೋಧೋಪಚಾರ ಪಡೆದುಕೊಂಡು ಹೋಗುವುದನ್ನು ನೋಡಬಹುದು. ಇಂದಿನ ಅಧುನಿಕ ಕಾಲದಲ್ಲಿಯೂ ಜನಪದ ವೈದ್ಯರನ್ನು ಹುಡುಕಿಕೊಂಡು ಹೋಗಿ ಔಷಧಿಯನ್ನು ಪಡೆದುಕೊಳ್ಳುವುದನ್ನು ಮರೆಯುವಂತಿಲ್ಲ. ಅಲ್ಲದೆ ರೋಗ ಬಂದ ವ್ಯಕ್ತಿ ಇನ್ನೂ ಉಲ್ಬಣಗೊಂಡಿದ್ದಾನೆ ಎಂದು ತಿಳಿದರೆ ಜನಪದ ವೈದ್ಯ ರೋಗಿಯ ಮನೆಯಲ್ಲಿದ್ದು ವೈದ್ಯೋಪಚಾರವನ್ನು ನೀಡುತ್ತಾನೆ. ಆತನ ಮನೆಯವರೂ ಕೂಡ ಇದೊಂದು ಪುಣ್ಯಕಾರ್ಯವೆಂದು ತಿಳಿಯುತ್ತಾರೆ. ಜನಪದ ವೈದ್ಯರು ಅನಕ್ಷರಸ್ಥರಾಗಿದ್ದರೂ, ಮಾನವಿಯತೆಯಿಂದ ಕೂಡಿದ್ದು, ವಿಶಾಲವಾದ ಗುಣ, ಭಾವನೆಗಳಿಂದ ಕೂಡಿದ್ದು ರೋಗಿಗಳ ಹತ್ತಿರ ಒಡನಾಡಿಯಾಗಿ ವರ್ತಿಸುವುದರಿಂದ ಅವರಿಗೆ ಹತ್ತಿರವಾಗಿ ಜೊತೆಗೆ ಮಾನಸಿಕವಾಗಿ ಕಾಯಿಲೆಯೂ ಕೂಡ ಗುಣಮುಖವಾಗುವಲ್ಲಿ ಪ್ರಯತ್ನಿಸುತ್ತಾರೆ. ಇಂದಿಗೂ ನಾಟಿ ವೈದ್ಯ ಪದ್ಧತಿ ಜೀವಂತವಾಗಿರಲು ಕಾರಣವೆಂದರೆ ಅದರ ಸರಳ ಚಿಕಿತ್ಸಾ ವಿಧಾನ. ಜನಪದರು ದಿನನಿತ್ಯ ಉಪಯೋಗಿಸುವ ಆಹಾರವೇ ಔಷಧಿಯಿಂದ ಕೂಡಿರುತ್ತದೆ. ಇದಕ್ಕೆ ಉದಾಹರಣೆ ನೀಡುವುದಾದರೆ ಹೊಲ ಗದ್ದೆಗಳಲ್ಲಿ, ಬಯಲು ಪ್ರದೇಶಗಳಲ್ಲಿ ಬೆಳೆಯುವ ಸೊಪ್ಪುಗಳಾದ ಕುಪ್ಪಸಿಗಿ, ಕರೀಬೇವು, ಬಾಯಿಬಸಳೆ, ಕಾಶಿಕುಡಿ, ಪುಂಡಿ, ರಾಜಗಿರಿ, ಮೆಂತ್ಯೆ, ಹುಣಿಚಿಕೆ, ಪಲಕ, ಕೋಳಿಜುಟ್ಟು, ಹರಿವಿ, ನುಗ್ಗಿ, ಪುದೀನ, ಈರುಳ್ಳಿ ಸೊಪ್ಪು ಇತ್ಯಾದಿಗಳು. ಇವುಗಳನ್ನು ನಿಯಮಿತವಾಗಿ ನಿರಂತರವಾಗಿ ನಮ್ಮ ದಿನನಿತ್ಯದ ಅಹಾರದ ಜೊತೆಗೆ ಉಪಯೋಗಿಸುವುದರಿಂದ ವಿವಿಧ ರೋಗರುಜಿನಗಳನ್ನು ನಿವಾರಿಸಿಕೊಳ್ಳಬಹುದು.[೯೪] ಸೊಪ್ಪಿನ

ರಸ ನಮ್ಮ ಆಧುನಿಕತೆಯ ಟಾನಿಕ್‌ಗಳನ್ನು ಮೀರಿಸುವ ಶಕ್ತಿಯನ್ನು ಪಡೆದಿರುತ್ತದೆ. ಪ್ರಾಣಿಗಳಿಗೂ ಸಹ ವಿವಿಧ ಗಿಡಮೂಲಿಕೆ ಸಸ್ಯಗಳನ್ನು ನೀಡುವುದರಿಂದ ಅವುಗಳ ರೋಗವನ್ನು ನಿವಾರಿಸಬಹುದು.

ಆಧುನಿಕ ವೈದ್ಯ ಪದ್ಧತಿಯ ಅಭಿವೃದ್ಧಿ ಜನಪದ ವೈದ್ಯ ಪದ್ಧತಿ ಹಿನ್ನೆಡೆ ಹೊಂದಲು ಕಾರಣವಾಗಿದೆ. ಜನಸಾಮಾನ್ಯರು ಇಂದು ಆಧುನಿಕ ವೈದ್ಯ ಪದ್ಧತಿಗೆ ಮೊರೆ ಹೋಗುತ್ತಿರುವುದರಿಂದ ಜನಪದ ವೈದ್ಯ ಪದ್ಧತಿ ತನ್ನ ಅಸ್ಥಿತ್ವವನ್ನು ಸಮಾಜದಲ್ಲಿ ಕಳೆದುಕೊಳ್ಳುತ್ತಿದೆ. ಅಲ್ಲದೆ ತಲೆತಲಾಂತರದಿಂದ ನಡೆಸಿಕೊಂಡು ಬಂದಂತಹ ವೈದ್ಯ ವೃತ್ತಿಯನ್ನು ಅವರ ನಾಟಿ ವೈದ್ಯರ ಮಕ್ಕಳು ಮುಂದುವರಿಸಲು ಆಸಕ್ತಿ ವಹಿಸುತ್ತಿಲ್ಲ. ಪ್ರಸ್ತುತ ಈ ವೃತ್ತಿಯನ್ನು ಮುಂದುವರಿಸಲು ಗಿಡಮೂಲಿಕೆಗಳು ಬೇಕು. ಆದರೆ ಅರಣ್ಯಗಳ ನಾಶದಿಂದಾಗಿ ಔಷಧಿ ಸಸ್ಯಗಳು ಸಹ ನಾಶವಾಗುತ್ತಿವೆ. ಔಷಧಿ ಸಸ್ಯಗಳ ಕೊರತೆ ವೃತ್ತಿ ಮುಂದುವರಿಯದಿರಲು ಕಾರಣವಾಗಿದೆ. ಜನರಲ್ಲಿ ನಾಟಿ ವೈದ್ಯ ಪದ್ಧತಿಯಲ್ಲಿ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ.

ತಳವಾರಿಕೆ:

ತಳವಾರಿಕೆ ಎನ್ನುವುದು ತಲಾರಿಕೆ, ತಳವಾರಿಕೆ, ತಳವಾಜಿಕೆ, ತಳಾರಿಕೆ ಇತ್ಯಾದಿ ರೂಪಗಳಲ್ಲಿ ಸಿಗುತ್ತದೆ. ಈ ಎಲ್ಲಾ ರೂಪಗಳಿಗೆ ಸಾಮಾನ್ಯವಾಗಿ ಒಂದೇ ಅರ್ಥ ಅದು ಗ್ರಾಮರಕ್ಷಣೆ.[೧೩೫] ಗ್ರಾಮ ಕಾವಲು, ತಲವಾರ್ (ಕತ್ತಿ) ಹಿಡಿದು, ಗ್ರಾಮವನ್ನು ರಕ್ಷಿಸುವವನು ತಳವಾರ, ಗ್ರಾಮದ ಕಾವಲುಗಾರ ಅಥವಾ ರಕ್ಷಕನನ್ನು ತಳವಾರ ಎಂದು ಕರೆಯಲಾಗುತ್ತದೆ. ಊರ ರಕ್ಷಣೆಯ ಹೊಣೆ ಹೊತ್ತ ಈತನ ಹೆಸರು ಅನೇಕ ಶಾಸನಗಳಲ್ಲೂ ಉಲ್ಲೇಖಿತಗೊಂಡಿದೆ.[೧೩೬] 'ನೆಲತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು'(ಅಕ್ಕಮಹಾದೇವಿ) 'ನೆಲತಳವಾರನಾದಡೆ ಕಳ್ಳಂಗೆಹೋಗಲ ಎಡೆಯುಂಟೆ, (ಮೋಳಿಗೆಯ ಮಾರಯ್ಯ) 'ತಳಾರನಂತೆ ನಿದ್ರೆಗೆಟ್ಟು' (ನಯಸೇನ) ಮುಂತಾದ ಮಾತುಗಳಲ್ಲಿ ಕಳ್ಳಕಾಕರ ಹಾವಳಿಯಿಂದ ಊರನ್ನು ರಕ್ಷಿಸುವ ಜವಾಬ್ದಾರಿ ತಳವಾರನದೆಂಬುದು ಸುಸ್ಪಷ್ಟ. ಈತನು ಕಾರ್ಯ ನಿರ್ವಹಿಸುತ್ತಿರುವ ಸ್ಥಳಕ್ಕೆ 'ತಳವಾರಗಟ್ಟೆ ಅಥವಾ ಕೊತವಾಲನ ಚಾವಡಿ' ಎನ್ನುವರು. 'ತಳವಾರಗಟ್ಟೆ' ಸಾಮಾನ್ಯವಾಗಿ ಅವನು ವಾಸಿಸುವ 'ತಳವಾರಗೇರಿ'ಯಲ್ಲಿಯೇ ಇರುತ್ತದೆ.

ತಳವಾರಿಕೆಯನ್ನು ಹಳ್ಳಿಯ ಗಟ್ಟಿಮುಟ್ಟಾದ ಹಿಂದುಳಿದ ವರ್ಗಗಳ ವ್ಯಕ್ತಿಗಳು ಕೈಗೊಳ್ಳುತ್ತಾ ಬಂದಿದ್ದಾರೆ. ಅದರಲ್ಲೂ ಹೆಚ್ಚಾಗಿ ನಾಯಕ ಅಥವಾ ಬೇಡ ಜನಾಂಗದವರು ಈ ಕಸುಬನ್ನು ಅವಲಂಬಿಸಿದವರು. ಗ್ರಾಮದಲ್ಲಿ ತಳವಾರನು ಮಾಡಬೇಕಾದ ಕಾರ್ಯಗಳು ಅನೇಕ. ಕೈಯಲ್ಲೊಂದು ಕೋಲು, ಅಥವಾ ಕತ್ತಿ ಹಿಡಿದು ಗ್ರಾಮ ಶಾಂತಿಗೆ ಗಸ್ತು ತಿರುಗುವನು. ಗೌಡ-ಕುಲಕರ್ಣಿಗಳ ಜೊತೆಗೆ ತಾಲೂಕು ಕಛೇರಿಗೆ ಕಂದಾಯದ ಹಣ ತುಂಬಲು, ಅವರಿಗೆ ರಕ್ಷಕನಾಗಿ ಹೋಗುವುದು,

ಅಮಲ್ದಾರರ ಕೈಕೆಳಗೆ ನಿಂತು, ಅವರು ಹೇಳಿದ ಕಾರ್ಯಗಳನ್ನು ಮಾಡುವುದು, ಅಲ್ಲದೆ ಸಮಾಜದ ಮಂಗಲ ಕಾರ್ಯಗಳ ಪ್ರಸಂಗಗಳಲ್ಲಿ, ಜಾತ್ರೆ, ಉಚ್ಚಾಯ ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಭಾಗಿಯಾಗಿ ನೆರವು ನೀಡುವುದು, ಮದುವೆಯಲ್ಲಿ ಹಲಗೆ ಬಾರಿಸಲು ಹೊಲೆಯರನ್ನು ಕರೆತರುವುದು, ಡಂಗೂರ ಹೊಡೆಯುವುದು, ಮದುವೆಯ ಊಟಕ್ಕೆ ಊರ ಜನರನ್ನು ಕರೆತರುವುದು, ಮದುಮಕ್ಕಳ ಮೆರವಣಿಗೆಯಲ್ಲಿ ಗ್ಯಾಸ್ ಹೊರುವುದು, ಜಾತ್ರೆ-ಉತ್ಸವಗಳಲ್ಲಿ ಗ್ರಾಮಸ್ಥರನ್ನು ಕೂಡಿಸುವುದು. ನಾಟಕ-ಬಯಲಾಟದ ಸಂದರ್ಭದಲ್ಲಿ ನಿದ್ರೆಗೆಟ್ಟು ಗ್ರಾಮದ ಶಾಂತಿ ಕಾಪಾಡುವುದು, ಜನನ-ಮರಣಗಳ ಸುದ್ದಿಗಳನ್ನು ಗೌಡ-ಕುಲಕರಣಿಗಳಿಗೆ ಮುಟ್ಟಿಸುವುದು, ಗೌಡ ಕುಲಕರ್ಣಿ ಮುಂತಾದವರು ಕಂದಾಯ ವಸೂಲಿಗೆ ಹಳ್ಳಿಗೆ ಬಂದರೆ, ಅವರ ಜೊತೆಗಿದ್ದು ಸಹಕರಿಸುವುದು. ಗೌಡ ಕರೆದಾಗ ಚಾವಡಿಗೆ ಹೋಗುವುದು-ಕುಲಕರ್ಣಿ ಹೇಳಿದವರನ್ನು ಊರಲ್ಲಿ ತಿರುಗಾಡಿ ಕರೆದುಕೊಂಡು ಬರುವುದು ಇತ್ಯಾದಿ ಹತ್ತಾರು ಕೆಲಸ ಕಾರ್ಯಗಳನ್ನು ತಳವಾರ ಮಾಡುತ್ತಾ ಬಂದಿದ್ದಾನೆ.

ಗ್ರಾಮದಲ್ಲಿ ಹೋಳಿ, ಮೊಹರಂ ಮೊದಲಾದ ಹಬ್ಬಗಳನ್ನು ಆಚರಿಸುವಾಗ, ಕೈಯಲ್ಲೊಂದು ಉದ್ದನೆಯ ಕೋಲು ಹಿಡಿದು ಮೆರವಣಿಗೆಯ ಮುಂದೆ ಮುಂದೆಯೇ ತಳವಾರ ನಡೆದಿರುತ್ತಾನೆ. 'ಕೋಲು' ಅಥವಾ 'ಕತ್ತಿ' ಬಿಟ್ಟು ಯಾವುದೇ ಆಯುಧ, ವೇಷಭೂಷಣಗಳಾಗಲೀ ಈತನಿಗಿಲ್ಲ. ಆದರೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ತಳವಾರರು ಧರಿಸಿದ ವೇಶಗಳು, ಹಿಡಿದ ಆಯುಧಗಳನ್ನು ಕನಕದಾಸರು ಮೋಹನತರಂಗಿಣಿಯಲ್ಲಿ ದಾಖಲಿಸಿದ್ದಾರೆ. 'ಹೊಳೆವ ಕಠಾರಿ ಕೈಗತ್ತಿ, ತೋಮರ ಬಿಲ್ಲು, ಬಲುದಡಿ ಪಿಡಿಚಕ್ರದಂ ತಳವರೂರ ಕಾದಿಹರು ಎಂದಿದ್ದಾರೆ.

ತಳವಾರಿಕೆ ಗ್ರಾಮದ ಕೆಲವು ಮನೆತನಕ್ಕೆ ಮಾತ್ರ ಸೀಮಿತವಾದುದು. ಊರಿನ ಎಲ್ಲಾ ತಳವಾರರಿಗೂ ತಳವಾರಿಕೆ ಮಾಡುವ ಹಕ್ಕಿಲ್ಲ. ತಳವಾರನ ಗ್ರಾಮದ ಸೇವೆಗಾಗಿ ವಸತಿ ಜಮೀನುಗಳುಂಟು. ಈತ ಇತರೆ ಕಸುಬುದಾರರಂತೆ ರೈತರಿಂದ ನಿರ್ದಿಷ್ಟ 'ಆಯ' ಪಡೆಯುವುದಿಲ್ಲ. ಸುಗ್ಗಿಯ ಕಾಲದಲ್ಲಿ ಕಣ್ಣಳತೆಯ ಮೇಲೆ ಕಣಗಾಳು ತರುತ್ತಾನೆ. ಮದುವೆ ಮೊದಲಾದ ಮಂಗಲ ಪ್ರಸಂಗಗಳಲ್ಲಿ ಸೀರೆ, ಕುಪ್ಪಸ ಮೊದಲಾದ 'ಚಾಜ' ಪಡೆಯುತ್ತಾನೆ. ಹಬ್ಬ-ಹುಣ್ಣಿಮೆಗಳಲ್ಲಿ 'ಖುಸಿ' ಪಡೆದುಕೊಳ್ಳುವನು.

ತಳವಾರ ಮತ್ತು ಈತನ ತಳವಾರಿಕೆಯ ಬಗೆಗೆ ಹಲವಾರು ಜನಪದ ಹಾಡುಗಳು ಮತ್ತು ಗಾದೆಗಳು ಇವೆ. ಅವೆಲ್ಲ ಹೆಚ್ಚಾಗಿ ಆತನನ್ನು ಹೀಯಾಳಿಸುವಂತವುಗಳೇ, ಸಾಮಾಜಿಕ ಜೀವನದಲ್ಲಿ ಪ್ರಮಾಣಿಕ ಸೇವೆಗೆ ಸಿಗಬಹುದಾದ ಬಹುಮಾನ ಇದಲ್ಲವೆ? ಇಲ್ಲಿ ಕೆಲವು ಸಂದರ್ಭಗಳಲ್ಲಿ ಬಳಸುವ ಅಂಶಗಳನ್ನು ಇಲ್ಲಿ ಗಮನಿಸಬಹುದು. ಗುಳ್ಳವ್ವನ ಹಾಡಿನಲ್ಲಿ ಹಳ್ಳಿಯ ಹೆಣ್ಣುಮಕ್ಕಳು ತಳವಾರರನ್ನು ಬೈಯುವ ರೀತಿಯನ್ನು ಇಲ್ಲಿ ಗಮನಿಸಬಹುದು.

ತಳವಾರ ತಾಟ್ಯ ಹುಚನನ ಹಾಟ್ಯಾ
ಹೊಯ್ಕ ಹೊಯ್ಕ ಗುಳ್ಳವ್ವ ಗುಳ್ಳವ್ವ
ಗುಳ್ಳವ್ವನ ಮುಕಳ್ಯಾಗ ಅಳ್ಳ ಬಿದ್ದಾವ
ಆಕೊಂಡ ತಿನ್ನೊ ತಳವಾರಾ ತಳವಾರಾ[೧೩೭]

ಅದರಂತೆ 'ಅಪ್ಪನ ತಳವಾರಿಕೆಯಲ್ಲಿ ಮಗಳ ಸೂಳೆಗಾರಿಕೆ ಚಂದ' ಗ್ರಾಮದ ಶಾಂತಿಗೆ ತಳವಾರ ತಲೆಬೋಳಿಸಿಕೊಂಡ ಇತ್ಯಾದಿ ಗಾದೆಗಳಲ್ಲಿ ತಳವಾರಿಕೆಯನ್ನು ವಿಡಂಬಿಸಿದ್ದು ಕಂಡುಬರುತ್ತದೆ.

ತಲೆ ತಲಾಂತರದಿಂದ ಮುಂದುವರಿಸಿಕೊಂಡು ಬಂದ ಈ ಕಸುಬು ಇಂದು ಹಳ್ಳಿಗಳಲ್ಲಿ ಕಣ್ಮರೆಯಾಗುತ್ತಿದೆ. ಅವರು ತಳವಾರಿಕೆ ವೃತ್ತಿಯನ್ನು ಬಿಟ್ಟುಕೊಟ್ಟು ಬೇರೆ ಬೇರೆ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಯಾಂತ್ರಿಕ ಜೀವನದಲ್ಲಿ ರೈತ ಹಾಗೂ ಗ್ರಾಮದವರು ಈತನನ್ನು ಅವಲಂಭಿಸುವ ಅಗತ್ಯ ತೋರುತ್ತಿಲ್ಲ. ಕಾರಣ ರಕ್ಷಣೆಯ ಹೊಣೆಗಾರಿಕೆಯನ್ನು ಇಂದು ಅರಕ್ಷಕರು ನಿರ್ವಹಿಸುತ್ತಾರೆ. ಹೀಗಾಗಿ ತಳವಾರನಿಗೆ ತನ್ನ ಕಸುಬಿನಲ್ಲಿ ಆಸಕ್ತಿ ಉಳಿದಿಲ್ಲ. ಜೊತೆಗೆ ಗ್ರಾಮಸ್ಥರು ಅವರಿಗೆ ಪ್ರಾಮುಖ್ಯತೆಯನ್ನು ಇಂದು ನೀಡುತ್ತಿಲ್ಲ. ತಳವಾರ ಮಾಡುವ ಕಾವಲುಗಾರಿಕೆಯನ್ನು ಹನ್ನೆರಡನೇ ಶತಮಾನದ ಶರಣರಲ್ಲಿ ತಳವಾರ ಕಾಮದೇವ ಮತ್ತು ಅವಸರದ ರೇಕಣ್ಣ ಮಾಡುತ್ತಿದ್ದರೆಂಬ ಉಲ್ಲೇಖಗಳಿವೆ.

ಪ್ರಸ್ತುತ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿರುವ ಪ್ರಮುಖ ಹಾಗೂ ಪ್ರಸ್ತುತವಿರುವ ಕುಲಕಸುಬುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವುಗಳೆಂದರೆ ಕುಂಬಾರಿಕೆ, ಕಮ್ಮಾರಿಕೆ, ಪತ್ತಾರಿಕೆ, ಬಡಗಿತನ, ಶಿಲ್ಪಗಾರಿಕೆ, ನೇಕಾರಿಕೆ, ಮೇದಾರಿಕೆ, ಕಲ್ಲುಕುಟಿಗವೃತ್ತಿ, ಸುಣ್ಣಗಾರಿಕೆ, ಚಮ್ಮಾರಿಕೆ, ಕ್ಷೌರಿಕವೃತ್ತಿ, ಮಡಿವಾಳಗಾರಿಕೆ, ಹೂಗಾರಿಕೆ, ಬಳೆಗಾರಿಕೆ, ವೈದ್ಯಗಾರಿಕೆ ಮತ್ತು ತಳವಾರಿಕೆ. ಈ ಎಲ್ಲಾ ಕಸುಬುಗಳ ಚಾರಿತ್ರಿಕ ಹಿನ್ನೆಲೆ, ಉತ್ಪಾದನಾ ವಿಧಾನ, ಉತ್ಪಾದನಾ ಸರುಕುಗಳು, ಮಾರಾಟದ ವಿಧಾನ ಮತ್ತು ವೃತ್ತಿಯಲ್ಲಿನ ಅಡೆತಡೆಗಳನ್ನು ವಿವರವಾಗಿ ಚರ್ಚಿಸಲಾಗಿದೆ. ಕಾಲಮಿತಿಯ ಕಾರಣದಿಂದಾಗಿ ಅತ್ಯಂತ ವಿರಳವಾಗಿರುವ ಕುಲಕಸುಬುಗಳ ವಿಶ್ಲೇಷಣೆಯನ್ನು ಮಾಡಲಾಗಿಲ್ಲ. ಜಿಲ್ಲೆಯಲ್ಲಿ ಅತ್ಯಂತ ವಿರಳವಾಗಿರುವ ಕುಲಕಸುಬುಗಳೆಂದರೆ ದೋಶಿಗಾರಿಕೆ, ಪಿಂಜಾರಿಕೆ, ಉಪ್ಪಾರಿಕೆ, ಓಲೆಕಾರಿಕೆ, ಕೋಲಕಾರಿಕೆ, ಪೌರೋಹಿತ್ಯ, ಅಯ್ಯಗಾರಿಕೆ, ಜೋತಿಷ್ಯಗಾರಿಕೆ, ಕುಲಕರ್ಣಿ ಗೌಡಿಕೆ, ಕೊರವಗಾರಿಕೆ, ಇನ್ನೂ ಮುಂತಾದವುಗಳು ಈ ಕಸುಬುಗಳು ಜಿಲ್ಲೆಯಲ್ಲಿ ಅವಲಂಬಿಸಿದವರ ಸಂಖ್ಯೆ ಅತ್ಯಂತ ವಿರಳವಾಗಿರುವುದು ಕಂಡುಬಂದಿದೆ. ಕೃಷಿ ಎಲ್ಲಾ ಜಾತಿ ಜನಾಂಗಗಳ ಕಸುಬು ಆಗಿರುವುದರಿಂದ ಪ್ರಾಮುಖ್ಯತೆ ನೀಡಿಲ್ಲ. ಆದರೂ ಸಾಮಾಜಿಕ, ಸಾಂಸ್ಕೃತಿಕ

ಮತ್ತು ಆರ್ಥಿಕ ದೃಷ್ಟಿಯಿಂದ ಸೂಕ್ಷ್ಮ ವಿಶ್ಲೇಷಣೆ ಅಗತ್ಯವಿರಬಹುದು. ಅಧ್ಯಯನದ ಮಿತಿಗಳಿಂದಾಗಿ ಅವುಗಳ ಅಧ್ಯಯನ ಸಾಧ್ಯವಾಗಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತಾನೆ.

ಸಾಮಾಜಿಕ ಜೀವನದಲ್ಲಿ ಕುಲಕಸುಬುಗಳು ಜನರ ಸಹಜೀವನ, ಸಮನ್ವಯತೆ, ಸಹಕಾರ, ಸಹಬಾಳ್ವೆ, ಸಾಮೂಹಿಕ ಬೆಳವಣಿಗೆಗೆ ಸಹಕಾರಿಯಾಗಿವೆ. ಆರ್ಥಿಕ ದೃಷ್ಟಿಯಿಂದ ಕುಲಕಸುಬುದಾರರಿಗೆ ದೊಡ್ಡ ಉದ್ದಿಮೆದಾರರುಗಳಿಗೆ ಲಭ್ಯವಾದಷ್ಟು ಲಾಭ ಮತ್ತು ಸೌಲಭ್ಯಗಳು ಸಿಗದಿರುವುದು ವಿಷಾಧನೀಯ.

೩.೫. ಕುಲಕಸುಬುಗಳು ಮತ್ತು ಮಾರುಕಟ್ಟೆ

ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ, ಶ್ರಮ ವಿಭಜನೆ ಹಾಗೂ ವೈಶಿಷ್ಟ್ಯತೆಯ ಆಧಾರದ ಮೇಲೆ ಬೇರೆ ಬೇರೆ ಜನಸಮುದಾಯದವರು ಬೇರೆ ಬೇರೆ ವಸ್ತು ಮತ್ತು ಸೇವೆಗಳನ್ನು ತಯಾರಿಸುವರು. ಉದಾ: ಕುಂಬಾರರು ಕುಡಿಕೆ, ಮಡಕೆಗಳನ್ನು, ಕಮ್ಮಾರರು ಕಬ್ಬಿಣದ ಸಾಧನ ಸಲಕರಣೆಗಳನ್ನು, ಬಡಗಿಗಳು ಮರದ ಸಾಮಗ್ರಿಗಳನ್ನು, ಚಮ್ಮಾರರು ಚರ್ಮದ ವಸ್ತುಗಳನ್ನು, ಪತ್ತಾರರು ಒಡವೆ-ವಸ್ತುಗಳನ್ನು, ನೇಕಾರರು ಬಟ್ಟೆಯನ್ನು, ಮೇದಾರರು ಬಿದಿರು-ಬೆತ್ತದ ಪದಾರ್ಥಗಳನ್ನು ತಯಾರಿಸುವರು. ಹಾಗೆಯೇ ಕ್ಷೌರಿಕರು, ಮಡಿವಾಳರು, ಪೂಜಾರರು, ಹೂಗಾರರು, ಬಳೆಗಾರರು, ತಳವಾರರು ಇತ್ಯಾದಿ ಜನ ಸಮುದಾಯದವರು ಸೇವೆಗಳನ್ನು ನೀಡುತ್ತಾರೆ.

ಈ ವೃತ್ತಿದಾರರು ನೀಡುವ ಮತ್ತು ತಯಾರಿಸುವ ಪದಾರ್ಥಗಳನ್ನು ಜನರಿಗೆ ತಲುಪಿಸುವುದು ಹೇಗೆ? ಇವುಗಳ ಮಾರಾಟದ ವಿಧಾನ ಹೇಗೆ ಮತ್ತು ಎಲ್ಲಿ? ಈ ಹಿನ್ನೆಲೆಯಲ್ಲಿ ಮಾರುಕಟ್ಟೆ, ಕುಲಕಸುಬುದಾರರು ತಯಾರಿಸಿದ ವಸ್ತುಗಳ ಹಂಚಿಕೆಯನ್ನು ನಿರ್ಧರಿಸುತ್ತದೆ. ಅರ್ಥ ವ್ಯವಸ್ಥೆಯಲ್ಲಿ ಸರಕು ಸೇವೆಗಳು ವಿನಿಮಯ ಅತಿ ಮುಖ್ಯವಾಗಿವೆ. ಸರಕು ಸೇವೆಗಳ ಮಾರಾಟವಾಗದೇ ವೃತ್ತಿಗಳ ಅಭಿವೃದ್ಧಿ ಅಸಾಧ್ಯ. ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ ಎಂದರೇನು? ಅದರ ಉದ್ದೇಶಗಳೇನು? ಅದರ ಅವಶ್ಯಕತೆ ಎಷ್ಟಿದೆ? ಹಾಗೂ ಕುಲಕಸುಬುದಾರರ ಮಾರುಕಟ್ಟೆ ಇತರರ ಮಾರುಕಟ್ಟೆಗಿಂತ ಹೇಗೆ ಭಿನ್ನವಾಗಿದೆ? ಏಕೆ ಭಿನ್ನವಾಗಿದೆ? ಹೇಗೆ ಮಾರಾಟ ಪ್ರಕ್ರಿಯೆ ಕೈಗೊಳ್ಳುತ್ತಾರೆ ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಕುಲಕಸುಬುಗಳು ಮತ್ತು ವಸ್ತುವಿನಿಮಯ ಪದ್ಧತಿ:

ನಮ್ಮ ದೇಶ ಕೃಷಿ ಪ್ರಧಾನವಾದದು. ಅದು ಹಳ್ಳಿಗಳ ದೇಶ. ಈ ಹಳ್ಳಿಗಳಲ್ಲಿರುವ ಜನಸಂಖ್ಯೆಯ ಪೈಕಿ ಸುಮಾರು ಶೇ. ೫೦-೫೫ರಷ್ಟು ಬೇಸಾಯ ಮಾಡಿಕೊಂಡಿರುವವರು. ಸುಮಾರು ೩೦ ಪ್ರತಿಶತ ವ್ಯವಸಾಯ ಕಾರ್ಮಿಕರು, ಉಳಿದ ಶೇ.೧೮-೧೯ರಷ್ಟು ಜನರು ಕುಂಬಾರಿಕೆ, ಕಮ್ಮಾರಿಕೆ, ಪತ್ತಾರಿಕೆ, ಮೇದಾರಿಕೆ, ನೇಕಾರಿಕೆ, ಚಮ್ಮಾರಿಕೆ, ಪೂಜಾರಿಕೆ, ಹೂಗಾರಿಕೆ,

ಬಳೆಗಾರಿಕೆ, ಸುಣ್ಣಗಾರಿಕೆ, ತಳವಾರಿಕೆ, ವೈದ್ಯಗಾರಿಕೆ, ಇತ್ಯಾದಿ ವೃತ್ತಿಗಳನ್ನು ಅವಲಂಬಿಸಿಕೊಂಡಿರುವರು. ಕೃಷಿಪ್ರಧಾನ ದೇಶವಾದ್ದರಿಂದ ಭೂಮಿಗೆ ಮಹತ್ವ ಹೆಚ್ಚು. ಈ ಭೂಮಿಯ ಒಡೆಯನಾದ ರೈತನನ್ನು ಕೇಂದ್ರವಾಗಿಟ್ಟುಕೊಂಡು ಉಳಿದ ವೃತ್ತಿಗಳು ರೂಪುಗೊಂಡಿರುತ್ತದೆ. ರೈತಕುಟುಂಬ ಎಲ್ಲರಿಗೂ ಬೇಕಾದ ಆಹಾರವನ್ನು ಉತ್ಪಾದಿಸಿದರೆ, ಈ ರೈತ ಕುಟುಂಬಕ್ಕೆ ಬೇಕಾದ ಸರಕು-ಸೇವೆಗಳನ್ನು ಉಳಿದ ಕುಟುಂಬಗಳು ಅಂದರೆ ಕುಲಕಸುಬುದಾರರು ಸಲ್ಲಿಸುತ್ತಾರೆ. ಈ ವ್ಯವಸ್ಥೆಯಲ್ಲಿ ಆಧುನಿಕ ಮಾರುಕಟ್ಟೆಯ ಲಕ್ಷಣಗಳಾದ ಉತ್ಪಾದನೆ, ಸಂಗ್ರಹಣೆ, ಮಾರಾಟ, ಬೆಲೆ ನಿರ್ಧಾರ ಅಂಶಗಳು ಕಂಡುಬರುವುದಿಲ್ಲ. ಇಲ್ಲಿ ಕಂಡುಬರುವುದು ವಸ್ತು ಮತ್ತು ಸೇವೆಗಳನ್ನು ಇತರೆ ವಸ್ತು ಮತ್ತು ಸೇವೆಗಳಿಗೆ ವಿನಿಮಯ ಮಾಡುವ ಪದ್ಧತಿ.

ರೈತನಿಗೆ ಬೇಕಾದ ನೇಗಿಲು ನೊಗ, ಕುಂಟೆ, ರಂಟೆ, ಕಿಟಕಿ-ಬಾಗಿಲು ಇತ್ಯಾದಿ ಮರದ ಸಾಮಗ್ರಿಗಳನ್ನು ಬಡಗಿ ಮಾಡಿಕೊಟ್ಟರೆ, ಕುಡುಗೋಲು, ಕೊಡಲಿ, ಸಲಿಕೆ, ಗುದ್ದಲಿ ಇತ್ಯಾದಿ ಕಬ್ಬಿಣದ ವಸ್ತುಗಳನ್ನು ಕಮ್ಮಾರ ಒದಗಿಸುತ್ತಾನೆ. ಚಮ್ಮಾರ ಚರ್ಮದ ವಸ್ತುಗಳನ್ನು, ನೇಕಾರ ಬಟ್ಟೆಗಳನ್ನು, ಕುಂಬಾರ ಮಡಕೆ-ಕುಡಿಕೆಗಳನ್ನು, ಸುಣ್ಣಗಾರ ಸುಣ್ಣವನ್ನು, ಬಳೆಗಾರ ಬಳೆಗಳನ್ನು, ಮೇದಾರ ಬಿದಿರು-ಬೆತ್ತದ ವಸ್ತುಗಳನ್ನು ಒದಗಿಸುತ್ತಾರೆ. ಕ್ಷೌರಿಕ, ಅಗಸ, ವೈದ್ಯ, ತಳವಾರ ಇತ್ಯಾದಿ ವೃತ್ತಿದಾರರು ರೈತರಿಗೆ ಸೇವೆಯನ್ನು ಒದಗಿಸುತ್ತಾರೆ. ಇಲ್ಲಿ ಸರಕು-ಸೇವೆಗಳ ವಿನಿಮಯ ಮಾತ್ರ. ವೃತ್ತಿದಾರರೆಲ್ಲರೂ ಹಿಂದಿನ ಕಾಲದಲ್ಲಿ ತಮ್ಮ ಸರಕು ಸೇವೆಗಳನ್ನು ನೀಡಿದ್ದಕ್ಕಾಗಿ ರೈತ ಕುಟುಂಬದಿಂದ ಅಥವಾ ಇತರರಿಂದ ತಾವು ಬೆಳೆದಿದ್ದುದರಲ್ಲಿ ಒಂದು ಪಾಲನ್ನು ಸಂಭಾವನೆಯಾಗಿ ಪಡೆಯುತ್ತಿದ್ದರು. ಇದನ್ನು 'ಆಯ'[೧೩೮]ಎನ್ನುವರು. ಆಯ ತೆಗೆದುಕೊಳ್ಳುವ ಊಳಿಗದವರನ್ನು ಮತ್ತು ಕೈಕಸುಬಿನವರನ್ನು 'ಆಯಾಗಾರರು'[೧೩೯] ಎಂದು ಕರೆಯುತ್ತಾರೆ. ಇಲ್ಲಿ ಕುಲಕಸುಬುದಾರರ ಉತ್ಪನ್ನಗಳ ಮಾರಾಟದ ಮತ್ತು ಮಾರುಕಟ್ಟೆ ಪ್ರಶ್ನೆ ಉದ್ಭವಿಸುವುದಿಲ್ಲ.

ಆಯ ಪದ್ಧತಿಯು 'ಬಲೂತಿ'[೧೪೦] ಎಂಬ ಹೆಸರಿನಿಂದ ಮಹಾರಾಷ್ಟ್ರದಲ್ಲಿ ಸಾರ್ವತ್ರಿಕವಾಗಿ ಕಂಡುಬಂದಿದೆ. 'ಬಲೂತಾ' ಎಂದರೆ ಗ್ರಾಮೀಣ ಕೈಕಸುಬಿನವರಿಗೆ ಕೊಡುವ ಧಾನ್ಯ ರೂಪದ ಸಂಭಾವನೆ ಅಥವಾ ಪಾಲು ಇಂಥ ಸಂಭಾವನೆ ಪಡೆಯುವವರಿಗೆ 'ಬಲೂತೆದಾರ'[೧೪೧] ಎನ್ನುತ್ತಾರೆ. ಮಹಾರಾಷ್ಟ್ರದಲ್ಲಿ ಸಾಮಾನ್ಯವಾಗಿ ಸುತಾರ(ಬಡಗಿ), ಲೋಹಾರ(ಕಮ್ಮಾರ), ಮಹಾರ್, ಮಾಂಗ್, ಕುಂಬಾರ, ಪರೀಟ(ಅಗಸ), ನಾವೀ(ಕ್ಷೌರಿಕ) ಭಟ್(ಪುರೋಹಿತ), ಮುಲಾಣಿ(ಕಟುಕ), ಗುರುವ(ಪೂಜಾರಿ), ತೇಲಿ(ಗಾಣಿಗ), ತಾಂಬೂಳೀ(ಎಲೆಗಾರ), ಸಾಳೀ(ನೇಕಾರ), ಮಾಳಿ(ಹೂಗಾರ), ಜಂಗಮ್, ಸೋನಾರ್(ಅಕ್ಕಸಾಲಿಗ), ಶಿಂಪಿ, ಗೋಂಧಳೀ, ಕೊತವಾಲ, ಫಡಶೀ ಮುಂತಾದವರು ರೈತನಿಂದ ಧಾನ್ಯ ಪಡೆಯುವ ಹಕ್ಕು ಪಡೆಯುತ್ತಾರೆ.

ಆಯ ಪದ್ಧತಿಯು ಜಜಮಾನಿ, ಬಲೂತ ಅಥವಾ ಬೇರೆ ಯಾವುದೇ ಹೆಸರಿನಿಂದ ಕರೆಯಲ್ಪಟ್ಟಿರಲಿ, ಅದು ಗ್ರಾಮೀಣ ಭಾರತದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಇದ್ದಿರಬಹುದೆಂದು ಊಹಿಸಲಾಗಿದೆ. ರೈತರು ತಾವು ಬೆಳೆದ ಧಾನ್ಯಗಳನ್ನು ಕುಲಕಸುಬುದಾರರಿಗೂ ಹಾಗೂ ಕುಲಕಸುಬುದಾರರು ತಾವು ತಯಾರಿಸಿದ ವಸ್ತು ಸೇವೆಗಳನ್ನು ರೈತರಿಗೆ ಹಾಗೂ ಇತರರಿಗೆ ವಿನಿಮಯ ಮಾಡಿಕೊಳ್ಳುವ ಪದ್ಧತಿ, ಆಧುನಿಕ ಮಾರುಕಟ್ಟೆ ಪ್ರಭಾವ ಬೀರುವವರೆಗೂ ಪ್ರಚಲಿತದಲ್ಲಿತ್ತು. ಆಯವು ಕೇವಲ ಪರಸ್ಪರ ವಸ್ತು ವಿನಿಮಯವಲ್ಲ. ಆಯವು ಒಂದು ಕುಳ ಹಾಗೂ ಆಯಾಗಾರರ ನಡುವಿನ ಸಮಗ್ರ ಕೊಡುಕೊಳ್ಳುವಿಕೆಯ ವ್ಯವಸ್ಥೆ. ಅದೇ ರೀತಿ ನಿಮಾನವು ಒಬ್ಬ ಆಯಗಾರ ಮತ್ತು ಇನ್ನೊಬ್ಬ ಆಯಗಾರರ ನಡುವಿನ ಸೀಮಿತ ವಸ್ತು ವಿನಿಮಯ. ಈ ಮೇಲಿನ ಅಂಶಗಳನ್ನು ಗಮನಿಸಿದರೆ ಇಡೀ ಸಮಾಜದಲ್ಲಿರುವ ಸಮುದಾಯಗಳು ವಸ್ತುವಿನಿಮಯ ಪದ್ಧತಿಯಲ್ಲಿ ನಂಬಿಕೆ ಇರಿಸಿಕೊಂಡಿದ್ದವೆಂಬುದು ತಿಳಿದುಬರುತ್ತದೆ.

ಆಯ ಪದ್ಧತಿಯಲ್ಲಿ ಕೆಲವು ಗುಣಲಕ್ಷಣಗಳನ್ನು ಹೊಂದಿದೆ. ಅವುಗಳೆಂದರೆ–

* ಧಾನ್ಯ ರೂಪದಲ್ಲಿ ವಾರ್ಷಿಕವಾಗಿ ಸಂಭಾವನೆ ಕೊಡುವ ಆಯ ಪದ್ಧತಿಯು ಗ್ರಾಮೀಣ ಬದುಕಿಗೆ ಸಂಬಂಧಿಸಿದ ಒಂದು ವ್ಯವಸ್ಥೆ.
* ಅದು ಅಂತರ ಕುಟುಂಬಗಳ ಜಾಲ, ಅಂದರೆ ರೈತ ಮತ್ತು ಕುಲಕಸುಬು ಕುಟುಂಬಗಳೊಡನೆ ಪರಸ್ಪರ ಅವಲಂಬನೆಯ ಸಂಬಂಧವನ್ನು ಸ್ಥಾಪಿಸಿಕೊಂಡಿರುತ್ತವೆ.
* ಆಯದ ಸಂಬಂಧಗಳು ಹೆಚ್ಚು ಕಡಿಮೆ ಶಾಶ್ವತ ಎನಿಸುವ 'ತಾಳಿಕೆ'ಯ ಸಂಬಂಧಗಳು
* ಆಯದ ಕುಳ ಮತ್ತು ಆಯಾಗಾರರ ಸಂಬಂಧಗಳು ಕೇವಲ ಆರ್ಥಿಕ ಸಂಬಂಧಗಳಲ್ಲ.
* ಆಯಗಾರರು ಆಯಾದ ಹೊರಗೆ ನಗದು ಹಣಕ್ಕಾಗಿ ಸೇವೆ ಸಲ್ಲಿಸಬಹುದು.
* ಆಯದಲ್ಲಿ ಗ್ರಾಮದ ಎಲ್ಲರಿಗೂ ಆಶ್ರಯ, ಒಂದಿಷ್ಟು ಹೊಣೆಗಾರಿಕೆಯನ್ನು ವಹಿಸಿಕೊಡುವ ಪ್ರಯತ್ನವಿದೆ.
* ಆಯದಲ್ಲಿ ಸಹಕಾರ ಮತ್ತು ಸ್ಪರ್ಧೆಗಳೆರಡೂ ಇರಬಹುದಾದರೂ ಅದು ಮುಖ್ಯವಾಗಿ ಸಹಕಾರದ ಏರ್ಪಾಟು.

ಆಯ ಪದ್ಧತಿ ಸರ್ವಗ್ರಾಹಿಯದ ಸರ್ವಾಂತರ್ಯಾಮಿಯಾದ ಅದ್ಭುತ ವ್ಯವಸ್ಥೆಯಲ್ಲ. ಹಳ್ಳಿಯ ಸಮಸ್ತ ವ್ಯವಹಾರಗಳು ಆಯದ ಕಕ್ಷೆಯೊಳಗೆ ಬರುವುದಿಲ್ಲ. ಆರ್ಥಿಕ ವ್ಯವಹಾರಗಳಲ್ಲಿ ಕೂಡ ಅನೇಕ ವ್ಯವಹಾರಗಳು ಆಯದ ಹೊರಗೆ ಇರುತ್ತದೆ. ಉದಾಹರಣೆಗೆ, ಒಬ್ಬ ಬಡಗಿಯು ತನಗೆ ಬೇಕಾದ ಮಡಕೆಗಳನ್ನು ಕುಂಬಾರನಿಂದ ಪಡೆದು ಅವನಿಗೆ ಬೇಕಾದ ಮರಮುಟ್ಟುಗಳನ್ನು ಉಪಕರಣಗಳನ್ನು ಅವನಿಗೆ ಕೊಡಬಹುದು ಅಥವಾ ಕ್ಷೌರಿಕನಿಂದ ಸೇವೆ ಪಡೆದುಕೊಂಡು ವಸ್ತು ರೂಪದಲ್ಲೋ, ಧಾನ್ಯ ರೂಪದಲ್ಲೋ ಅವನಿಗೆ ಸಂಭಾವನೆ ಕೊಡಬಹುದು. ಹೀಗೆ ಕೈಕಸುಬಿನವರ ಕುಟುಂಬಗಳು ತಮ್ಮ ತಮ್ಮೊಳಗೆ ವ್ಯವಹಾರ ನಡೆಸುತ್ತವೆ. ಇದು ಆಯಪದ್ಧತಿಗೆ ಸೇರಿದ ವ್ಯವಹಾರವಲ್ಲ.

ಪ್ರಾಚೀನ ಕಾಲದಿಂದಲೂ ನಡೆದು ಬಂದ ಈ ವ್ಯವಹಾರ ಪದ್ಧತಿ(ವಸ್ತು ವಿನಿಮಯ) ನಮ್ಮ ಸಮಾಜದಿಂದ ಕಣ್ಮರೆಯಾಗುತ್ತಿದೆ. ವರ್ತಮಾನದಲ್ಲಿ ಕರಾರುವಕ್ಕಿನ ಸಂಬಂಧಗಳು ಪಾದಾರ್ಪಣೆ ಮಾಡಿವೆ. ಇದಕ್ಕೆ ಕಾರಣವಾದ ಅಂಶಗಳನ್ನು ಇಲ್ಲಿ ಸೂಚಿಸಬಹುದು.

* ಸಮಗ್ರ ಗ್ರಾಮೀಣ ಸಮಾಜ ವ್ಯವಸ್ಥೆಯೂ ಪರಿವರ್ತನೆಯ ಪ್ರಕ್ರಿಯೆಯಲ್ಲಿರುವುದು.
* ಜೀವನೋಪಾಯಕ್ಕಾಗಿ ಕೃಷಿ ಮಾಡುತ್ತಿದ್ದ ಕೃಷಿ ವ್ಯವಸ್ಥೆ ಹೋಗಿ ವಾಣಿಜ್ಯ ಪೇಟೆಗಾಗಿ ಕೃಷಿ ಮಾಡುವುದು ಹೆಚ್ಚುತ್ತಿದೆ.
* ಗ್ರಾಮೀಣ ಸಮಾಜದಲ್ಲಿ ನಗದು ಹಣದ ಬಳಕೆ ಹೆಚ್ಚಿರುವುದರಿಂದ ವಸ್ತುವಿನಿಮಯ ಪದ್ಧತಿ ನಿರುಪಯುಕ್ತವಾಗುತ್ತಿದೆ.
* ಜನಸಂಖ್ಯೆಯ ಹೆಚ್ಚಳದಿಂದಾಗಿ ಕೃಷಿ ಭೂಮಿಯ ಮೇಲೆ ಹೆಚ್ಚು ಒತ್ತಡ ಬಂದು ಗ್ರಾಮೀಣ ಕೃಷಿಯೇತರ ಉದ್ಯೋಗಗಳಲ್ಲಿ ಹೆಚ್ಚಾಗಿ ತೊಡಗಿಕೊಳ್ಳುತ್ತಿರುವುದು.
* ಆಧುನಿಕ ಸಾರಿಗೆ-ಸಂಪರ್ಕಗಳು ಹೆಚ್ಚಿ ಪೇಟೆಯೊಡನೆ ಸಂಬಂಧಗಳು ಬೆಳೆಯುತ್ತಿರುವುದು.
* ಕೃಷಿಯೇತರ ಉದ್ಯೋಗಗಳು ಹೆಚ್ಚು ಪ್ರಮಾಣದಲ್ಲಿ ಲಭ್ಯವಾಗುತ್ತಿವೆ.
* ಜಮೀನುದಾರಿ ಪದ್ಧತಿಯ ನಿರ್ಮೂಲನೆ
* ವೈಜ್ಞಾನಿಕ ಕ್ಷೇತ್ರದ ವ್ಯಾಪಕ ಬೆಳವಣಿಗೆ
* ಹೊಸ ರೀತಿಯ ಯಂತ್ರೋಪಕರಣಗಳ ಬಳಕೆ.
* ವಸ್ತು ವಿನಿಮಯ ಪದ್ಧತಿಯಲ್ಲಿ ಮೌಲ್ಯದ ನಿರ್ಧಾರದ ಕೊರತೆ, ಮೌಲ್ಯ ಸಂಗ್ರಹಣೆಯ ಕೊರತೆ, ವಿಭಜನೆಯ ಕೊರತೆ ಹಾಗೂ ವರ್ಗಾವಣೆಯ ಸಮಸ್ಯೆಗಳು ಕಂಡುಬರುತ್ತವೆ. ಆ ಕಾರಣಗಳಿಂದಾಗಿ ಸಾಂಪ್ರದಾಯಿಕ ಮಾರುಕಟ್ಟೆ (ವಸ್ತುವಿನಿಮಯ) ವ್ಯವಸ್ಥೆ ವರ್ತಮಾನ ಮಾರುಕಟ್ಟೆಯಾಗಿ ಬದಲಾಗಿದೆ.

ಮಾರುಕಟ್ಟೆ

ವಸ್ತುವಿನಿಮಯ ಪದ್ಧತಿ ತನ್ನ ಪ್ರಭಾವವನ್ನು ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಕಳೆದುಕೊಂಡಂತೆ ಆಧುನಿಕ ಮಾರುಕಟ್ಟೆ ವ್ಯವಸ್ಥೆ ಕಾರ್ಯರೂಪಕ್ಕೆ ಬಂದಿದೆ. ಕುಲಕಸುಬುಗಳು ಮತ್ತು ವರ್ತಮಾನ ಮಾರುಕಟ್ಟೆಯ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕಿಂತ ಮುಂಚಿತವಾಗಿ ಮಾರುಕಟ್ಟೆ ಎಂದರೇನು? ಎಂಬುದನ್ನು ವಿವರಿಸುವುದು ಅಗತ್ಯ.

ಬಳಕೆಯ ಭಾಷೆಯಲ್ಲಿ 'ಮಾರುಕಟ್ಟೆ' ಎಂದರೆ ಸರಕುಗಳನ್ನು ಮಾರುವ-ಕೊಳ್ಳುವ ಒಂದು ನಿರ್ದಿಷ್ಟ ಸ್ಥಳವೆಂದು ಅರ್ಥವಾಗುತ್ತದೆ. ಇಲ್ಲಿ ಮಾರುವವರು ಕೊಳ್ಳುವವರ ನಿರೀಕ್ಷೆಯಲ್ಲಿರುತ್ತಾರೆ. ಕೊಳ್ಳುವವರು ಆ ಸ್ಥಳಕ್ಕೆ ಹೋಗಿ ಸರಕುಗಳನ್ನು ಪ್ರತ್ಯೇಕವಾಗಿ ಪರೀಕ್ಷಿಸಿ, ಮಾರುವವರೊಡನೆ

ಚೌಕಾಸಿ ಮಾಡಿಕೊಂಡಿಕೊಳ್ಳುತ್ತಾರೆ. ಉದಾ: ತರಕಾರಿ ಮಾರುಕಟ್ಟೆ, ಹಣ್ಣಿನ ಮಾರುಕಟ್ಟೆ, ಧಾನ್ಯಗಳ ಮಾರುಕಟ್ಟೆ, ಬಟ್ಟೆ ಮಾರುಕಟ್ಟೆ, ವಾಹನಗಳ ಮಾರುಕಟ್ಟೆ ಇತ್ಯಾದಿ. ಆದರೆ ಅರ್ಥಶಾಸ್ತ್ರದ ಪ್ರಕಾರ ಒಂದು ಪ್ರಕಾರದ ಸರಕುಗಳ ಬೆಲೆಯು ಸುಲಭವಾಗಿ ಮತ್ತು ಶೀಘ್ರವಾಗಿ ಒಂದೇ ಮಟ್ಟದಲ್ಲಿ ನಿರ್ಧಾರವಾಗುವಂತೆ ಮಾರುವವರು ಮತ್ತು ಕೊಳ್ಳುವವರು ಯಾವ ಅಡೆತಡೆಗಳು ಇಲ್ಲದೆ ಪರಸ್ಪರ ಸಂಧಿಸಿ ವ್ಯವಹಾರ ಮಾಡುವ ಪ್ರದೇಶ ಅಥವಾ ಸನ್ನಿವೇಶ ಮಾರುಕಟ್ಟೆಯಾಗಿರುತ್ತದೆ.

ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆಯು ಯಾವುದೇ ಸ್ಥಳ ಅಥವಾ ಪ್ರದೇಶವನ್ನು ಪ್ರತಿಬಿಂಬಿಸುವುದಿಲ್ಲ. ಮಾರುವವರು ಮತ್ತು ಕೊಳ್ಳುವವರು ಒಂದೇ ಕಡೆ ಸಂಧಿಸುವ ಅವಶ್ಯಕತೆಯೂ ಇಲ್ಲ. ಅವರು ಅಂಚೆ, ತಂತಿ, ದೂರವಾಣಿ, ಫ್ಯಾಕ್ಸ್ ಪೇಜರ್, ಇ–ಮೇಲ್, ಮೊಬೈಲ್ ಮುಂತಾದ ಮಾಧ್ಯಮಗಳ ಮೂಲಕ ವ್ಯವಹರಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಮಾರುವವರು ಹಾಗೂ ಕೊಳ್ಳುವವರು ಸುಲಭವಾಗಿ ಸಂಪರ್ಕವನ್ನು ಹೊಂದಿರುವ ಯಾವುದೇ ವ್ಯಾಪಾರ ಕ್ಷೇತ್ರವನ್ನು ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ ಎನ್ನುವರು.

ಮಾರುಕಟ್ಟೆ ಕುರಿತು ವಿವಿಧ ಆರ್ಥಿಕ ತಜ್ಞರು ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ.

ಡಬ್ಲ್ಯೂ.ಎಸ್.ಜೀವನ್ ಅವರ ಪ್ರಕಾರ 'ಮಾರುಕಟ್ಟೆ ಎಂದರೆ ಪಟ್ಟಣಗಳಲ್ಲಿನ ಒಂದು ಸಾರ್ವಜನಿಕ ಸ್ಥಳ. ಅಲ್ಲಿ ಹಣವನ್ನು ವಸ್ತುವಿಗೆ ಅಥವಾ ವಸ್ತುಗಳನ್ನು ಹಣಕ್ಕೆ ವಿನಿಮಯಗೊಳಿಸುವ ಉದ್ದೇಶದಿಂದ ಮಾರುವವರು ಮತ್ತು ಕೊಳ್ಳುವವರು ಭೇಟಿಯಾಗುತ್ತಾರೆ.'[೧೪೨]

ಡಾ. ಮಾರ್ಷಲ್ ಅವರ ಪ್ರಕಾರ 'ಕೊಳ್ಳುವವರ ಮತ್ತು ಮಾರುವವರ ಪರಸ್ಪರ ಸಂಬಂಧ ಇರುವ ಪ್ರದೇಶವೇ ಮಾರುಕಟ್ಟೆ.'[೧೪೩]

ಫ್ರೆಂಚ್ ವಿಜ್ಞಾನಿ ಕಾರ್ನಾಟ್ ಅವರ ಪ್ರಕಾರ 'ಮಾರುಕಟ್ಟೆ ಎಂಬ ಪದದಿಂದ ಅರ್ಥಶಾಸ್ತ್ರಜ್ಞರುಗಳು ವಸ್ತುಗಳನ್ನು ಕೊಳ್ಳುವ ಮತ್ತು ಮಾರುವ ಸ್ಥಳ ಎಂದು ತಿಳಿದುಕೊಳ್ಳುವುದಿಲ್ಲ. ಬದಲಿಗೆ ಒಂದೇ ವಸ್ತುವಿನ ಬೆಲೆ ಸುಲಭವಾಗಿ ಮತ್ತು ಶೀಘ್ರವಾಗಿ ಸಮಾನತೆ ಸಾಧಿಸುವಂತೆ ಕೊಳ್ಳುವವರ ಮತ್ತು ಮಾರುವವರ ನಡುವೆ ಪರಸ್ಪರ ಮುಕ್ತ ಸಂಪರ್ಕ ಹೊಂದಿರುವ ಸಮಸ್ತ ಪ್ರದೇಶವನ್ನು ಒಳಗೊಂಡಿರುತ್ತದೆ.'[೧೪೪]

ಫ್ರೆಡ್ರಿಕ್ ಬೆನ್‌ಹ್ಯಾಂ ಅವರ ಪ್ರಕಾರ 'ಮಾರುಕಟ್ಟೆ ಎಂದರೆ ಒಂದು ಭಾಗದ ಬೆಲೆ ಇನ್ನೊಂದು ಭಾಗದ ಬೆಲೆಯ ಮೇಲೆ ಪರಿಣಾಮ ಬೀರುವಷ್ಟು ನೇರವಾಗಿ ಅಥವಾ ಪರೋಕ್ಷವಾಗಿ ವ್ಯಾಪಾರಿಗಳು ಮತ್ತು ಗ್ರಾಹಕರು ನಿಕಟವಾಗಿರುವ ಯಾವುದೇ ಒಂದು ಸ್ಥಳ.'[೧೪೫]

ಕೇರ್ನ್ ಕ್ರಾಸ್ ಅವರ ಪ್ರಕಾರ 'ಮಾರುಕಟ್ಟೆ ಒಂದು ಸ್ಥಳವಲ್ಲ. ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ ಎಂದರೆ ಉತ್ಪಾದನೆ ಮತ್ತು ಉತ್ಪಾದನಾಂಗಗಳಲ್ಲಿನ ಕೊಳ್ಳುವವರು ಮತ್ತು ಮಾರುವವರ ನಡುವಿನ

ವ್ಯವಹಾರಗಳು ನಿರಂತರ ಮತ್ತು ಸಂಘಟಿತವಾಗಿರಬಹುದು. ಅಥವಾ ಕಡಿಮೆ ದರ್ಜೆಯ ಸರಕುಗಳ ಮಾರುಕಟ್ಟೆಯ ರೀತಿಯಲ್ಲಿ ಅವ್ಯವಸ್ಥಿತವೂ ಆಗಿರಬಹುದು.'[೧೪೬]

ಪ್ರೊ. ಜಿ.ಕೆ.ಮೆಹ್ತಾ ಅವರ ಅಭಿಪ್ರಾಯದಲ್ಲಿ 'ಮಾರುಕಟ್ಟೆ ಎಂದರೆ ಒಂದು ಸ್ಥಳದಿಂದ ಮಾರಾಟಕ್ಕೆ ಒದಗಿಸ್ವಲ್ಪಟ್ಟ ವಸ್ತುವಿಗೆ ಬೇಡಿಕೆ ಇರುವ ಸ್ಥಿತಿ.'[೧೪೭]

ಜಿ.ಎಫ್. ಫೈಲ್ ಎಂಬುವರ ಪ್ರಕಾರ 'ಮಾರುಕಟ್ಟೆ ಎಂದರೆ ಕೊಳ್ಳುವ ಮತ್ತು ಮಾರುವ ನಿರ್ದಿಷ್ಟ ಸ್ಥಳವಲ್ಲ. ಆದರೆ ಯಾವುದೇ ಪ್ರದೇಶದಲ್ಲಿ ಕೊಳ್ಳುವವರು ಮತ್ತು ಮಾರುವವರು ಮುಕ್ತ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವುದರಿಂದ ವಸ್ತುವಿನ ಬೆಲೆ ಸುಲಭ ಮತ್ತು ಶೀಘ್ರವಾಗಿ ಸಮಗೊಳ್ಳುವ ಸನ್ನಿವೇಶವೇ ಮಾರುಕಟ್ಟೆ.'[೧೪೮]

ಮಾರುಕಟ್ಟೆ ಎಂದರೆ ಕೊಳ್ಳುವವರು ಮತ್ತು ಮಾರುವವರು ಪರಸ್ಪರ ಮುಕ್ತ ಪೈಪೋಟಿಯಲ್ಲಿರುವ ಸ್ಥಳ ಅಥವಾ ಪ್ರದೇಶ.

ಅಮೇರಿಕನ್ ಮಾರ್ಕೇಟಿಂಗ್ ಆಸೋಶಿಯನ್ ಪ್ರಕಾರ 'ಕೊಳ್ಳುವವರು ಮತ್ತು ಮಾರುವವರು ನಿರ್ಣಯಗಳನ್ನು ಕೈಗೊಳ್ಳುವುದರ ಮೂಲಕ ಸರಕು ಸೇವೆಗಳ ವರ್ಗಾವಣೆ ಮಾಡುವ ಸನ್ನಿವೇಶವೇ ಮಾರುಕಟ್ಟೆ.'[೧೪೯]

ಪಿಲಿಪ್ ಕೊಟ್ಲರ್ ಅವರ ಪ್ರಕಾರ 'ಮಾರುಕಟ್ಟೆಯು ನಿರ್ದಿಷ್ಟ ಬಯಕೆ ಅಥವಾ ಅವಶ್ಯಕತೆಯಲ್ಲಿ ಪಾಲ್ಗೊಳ್ಳುವ ಸಂಭವನೀಯ ಗ್ರಾಹಕರಿಂದ ಕೂಡಿರುತ್ತದೆ. ಅವರು ನಿರ್ದಿಷ್ಟ ಬಯಕೆ ಅಥವಾ ಅವಶ್ಯಕತೆಯನ್ನು ತೃಪ್ತಿಪಡಿಸಲು ವಿನಿಮಯದಲ್ಲಿ ಭಾಗವಹಿಸಲು ಇಷ್ಟವುಳ್ಳವರೂ ಮತ್ತು ಶಕ್ಯರೂ ಆಗಿರುತ್ತಾರೆ'[೧೫೦]

ಬೆಕ್‌ಮನ್ ಮತ್ತು ಡೆವಿಡ್‌ಸನ್ ಎಂಬುವರ ಪ್ರಕಾರ 'ಸರಕುಗಳ ಬೆಲೆಗಳನ್ನು ನಿರ್ಧರಿಸುವ ಒತ್ತಡಗಳು ಕಾರ್ಯ ಪ್ರವರ್ತವಾಗಿರುವ ಮತ್ತು ಸಂಬಂಧಿಸಿದ ಸರಕುಗಳ ಪ್ರತ್ಯೇಕ ಚಲನೆಯೊಂದಿಗೆ ಅವುಗಳ ಒಡೆತನ ವಿನಿಮಯವಾಗುತ್ತಿರುವ ಯಾವುದೇ ಕ್ಷೇತ್ರವು ಮಾರುಕಟ್ಟೆಯಾಗಿದೆ.'[೧೫೧]

ಚಾಪ್‌ಮನ್ ಎಂಬುವರ ಪ್ರಕಾರ "ಮಾರುಕಟ್ಟೆಯ ಒಂದು ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದಂತೆ ಯಾವುದೇ ವಸ್ತುವಿಗೆ ಅಥವಾ ವಸ್ತುಗಳಿಗೆ ಮತ್ತು ನೇರವಾಗಿ ಪರಸ್ಪರ ಪೈಪೋಟಿಗಿಳಿದಿರುವ ಕೊಳ್ಳುವವರು ಮಾರುವವರಿಗೆ ಸಂಬಂಧಿಸಿರುತ್ತದೆ."[೧೫೨]

ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಇಂದು ಮಾರುವವರು ಮತ್ತು ಕೊಳ್ಳುವವರು ಪ್ರತ್ಯೇಕವಾಗಿ ಹಾಜರಿರಬೇಕೆಂಬುದಾಗಲಿ ಅಥವಾ ಅವರು ಭೇಟಿಯಾಗುವ ನಿರ್ದಿಷ್ಟ ಸ್ಥಳವಾಗಲೀ ಅಥವಾ ಪ್ರತ್ಯಕ್ಷವಾಗಿ ಅವರು ಕ್ರಯವಿಕ್ರಯ ಮಾಡಬೇಕೆಂಬುದಾಗಲಿ ಮಾರುಕಟ್ಟೆಯ ಅವಶ್ಯಕವಾದ

ಅಂಶವೆಂದು ಪರಿಗಣಿಸ್ವಲ್ಪಟ್ಟಿಲ್ಲ. ಒಂದೇ ವೇಳೆಗೆ ಒಂದು ವಸ್ತುವಿಗೆ ಒಂದೇ ಬೆಲೆ ಇರುವಂತೆ ಮಾರುವವರು ಮತ್ತು ಕೊಳ್ಳುವವರು ಅನಿರ್ಬಂಧವಾಗಿ ಸಂಪರ್ಕಿಸುವ ಸನ್ನಿವೇಶವೇ ಮಾರುಕಟ್ಟೆ

ಅರ್ಥಶಾಸ್ತ್ರಜ್ಞರ ವ್ಯಾಖ್ಯಾನಗಳಿಂದ ಕಂಡುಬರುವುದೇನೆಂದರೆ ಮಾರುಕಟ್ಟೆಯ ಅರ್ಥ ವಿವರಣೆಯು ವಿಶಾಲವಾಗಿದ್ದು ಅದನ್ನು ಹಲವಾರು ರೀತಿಯಿಂದ ವ್ಯಾಖ್ಯಾನಿಸಲಾಗಿದೆ. ಅದರಲ್ಲಿ ಈ ಕೆಳಗೆ ನಮೂದಿಸಿದ ಯಾವುದೇ ಅಂಶವು ಒಳಗೊಂಡಿರಬಹುದು.

ಮಾರುಕಟ್ಟೆಯು ಕ್ರಯ-ವಿಕ್ರಯಗಳು ನಡೆಯುವ ಯಾವುದೇ ನಿರ್ದಿಷ್ಟ ಬಯಲು ಜಾಗೆ ಅಥವಾ ದೊಡ್ಡ ಕಟ್ಟಡ ಅಥವಾ ಕಟ್ಟಡಗಳಿರುವ ಸ್ಥಳ ಆಗಿರಬಹುದು. ಮಾರುಕಟ್ಟೆಯು ಜನರು ಸರಕುಗಳನ್ನು ಕೊಳ್ಳಲು ಮತ್ತು ಮಾರಲು ಒಂದು ನಿರ್ದಿಷ್ಟ ಸ್ಥಳದಲ್ಲಿ ಮತ್ತು ನಿರ್ದಿಷ್ಟ ಸಮಯಕ್ಕೆ ಸೇರುವ ಸನ್ನಿವೇಶವಾಗಿದೆ. ಇಂಥ ಮಾರುಕಟ್ಟೆಗಳು ಹಳ್ಳಿಗಳಲ್ಲಿ ವಾರಕ್ಕೊಮ್ಮೆ ಅಥವಾ ನಿಯತಕಾಲಿಕವಾಗಿ ನಡೆಯುವ ಜಾತ್ರೆಯ ಅಥವಾ ಉತ್ಸವದ ಸಮಯದಲ್ಲಿ ಕಂಡುಬರುತ್ತವೆ. ಮಾರುಕಟ್ಟೆಯು ಸರಕುಗಳ ವಿನಿಮಯವನ್ನೇರ್ಪಡಿಸುವ ಒಂದು ಸಂಘಟನೆಯಾಗಿರಬಹುದು. ಮಾನವನ ಬಯಕೆಗಳನ್ನು ತೃಪ್ತಿಪಡಿಸಲು ಕೈಗೊಂಡ ಆರ್ಥಿಕ ಕಾರ್ಯವೇ ಕೊಳ್ಳುವ ಮತ್ತು ಮಾರುವ ಚಟುವಟಿಕೆಯಾಗಿದೆ.

ಒಟ್ಟಿನಲ್ಲಿ ಹೇಳಬೇಕೆಂದರೆ ಮಾರುಕಟ್ಟೆಯು ಮಾರುವವರು ಮತ್ತು ಕೊಳ್ಳುವವರು ಕೂಡಿ ವ್ಯವಹರಿಸುವ ಒಂದು ನಿರ್ದಿಷ್ಟ ಸನ್ನಿವೇಶ, ಸ್ಥಳ ಅಥವಾ ಪ್ರದೇಶವಾಗಿದೆ. ಮಾರುವವರು ಅಥವಾ ಕೊಳ್ಳವವರು ಸರಕು ಸೇವೆಗಳನ್ನು ವರ್ಗಾಯಿಸಲು ತೀರ್ಮಾನವನ್ನು ಕೈಗೊಳ್ಳಬಹುದಾದ ಸ್ಥಿತಿಗತಿಗಳ ಅಥವಾ ಅಂಶಗಳ ಕೂಟವಾಗಿದೆ ಮತ್ತು ಸರಕು ಅಥವಾ ಸೇವೆಗೆ ಸಂಭವನೀಯ ಗ್ರಾಹಕರ ಬೇಡಿಕೆಯಿರುವ ಸನ್ನಿವೇಶವಾಗಿದೆ.

ಅರ್ಥಶಾಸ್ತ್ರದ ಪರಿಭಾಷೆಯಲ್ಲಿ 'ಮಾಗುಕಟ್ಟೆ' ಎನಿಸಿಕೊಳ್ಳಬೇಕಾದರೆ ಕೆಲವು ಷರತ್ತುಗಳು ಪೂರೈಸ್ವಲ್ಪಡಬೇಕು. ಅವುಗಳೆಂದರೆ-ಮಾರಾಟಕ್ಕೆ ಒಂದು ಸ್ಥಳವಿರಬೇಕು. ವಸ್ತುವನ್ನು ಮಾರಾಟ ಮಾಡುವವರು ಮತ್ತು ಕೊಳ್ಳುವವರು ಇರಬೇಕು. ವಸ್ತುವಿನ ಬೆಲೆಯ ಬಗ್ಗೆ ವ್ಯಾಪಾರಿಗಳ ಮತ್ತು ಗ್ರಾಹಕರ ನಡುವೆ ಒಪ್ಪಂದ ಇರಬೇಕು. ವ್ಯಾಪಾರದ ವಸ್ತು ಒಂದೇ ರೀತಿಯದಾಗಿರಬಹುದು ಅಥವಾ ವೈವಿಧ್ಯಮಯವಾಗಿರಬಹುದು ಮತ್ತು ವಸ್ತುವಿಗೆ ಹಣದ ರೂಪದ ಮೌಲ್ಯ ಇರಬೇಕು.

ಮಾರುಕಟ್ಟೆಯ ಗಾತ್ರ: ಕೆಲವು ವಸ್ತುಗಳ ಸಂದರ್ಭಗಳಲ್ಲಿ ಮಾರುಕಟ್ಟೆಯು ವಿಶಾಲವಾಗಿದ್ದು ಅದು ಇಡೀ ದೇಶ ಇಲ್ಲವೆ ಪ್ರಪಂಚವನ್ನು ಆವರಿಸಿರುತ್ತದೆ. ಇನ್ನೂ ಕೆಲವು ವಸ್ತುಗಳಿಗೆ ಮಾರುಕಟ್ಟೆಯು ಸೀಮಿತವಾಗಿದ್ದು ಅದು ಗ್ರಾಮ ಪ್ರದೇಶಕ್ಕೆ ಮೀಸಲಾಗಿರುತ್ತದೆ. ಮಾರುಕಟ್ಟೆಯ ಗಾತ್ರವು ಹಲವಾರು ಅಂಶಗಳನ್ನು ಅವಲಂಬಿಸಿರುತ್ತದೆ. ಅವುಗಳೆಂದರೆ

೧. ವಸ್ತುವಿನ ಲಕ್ಷಣ: ಒಂದು ವಸ್ತು ವಿಶಾಲವಾದ ಮಾರುಕಟ್ಟೆ ಹೊಂದಬೇಕಾದರೆ ಅದು ಸುಲಭವಾಗಿ ಸಾಗಿಸುವಂತಿರಬೇಕು, ಬಾಳಿಕೆ ಬರುವಂತಿರಬೇಕು, ಪ್ರದರ್ಶಿಸಲು ಬರುವಂತಿರಬೇಕು, ಪೂರೈಕೆ ಅಧಿಕಗೊಳಿಸುವಂತಿರಬೇಕು.

೨. ಬೇಡಿಕೆಯ ಸ್ವರೂಪ: ಸರಕುಗಳ ಬೇಡಿಕೆ ಸ್ವರೂಪವು ಮಾರುಕಟ್ಟೆಯ ಗಾತ್ರವನ್ನು ನಿರ್ಧರಿಸುತ್ತದೆ. ಚಿನ್ನ, ಬೆಳ್ಳಿ, ವಸ್ತುಗಳಿಗೆ ಪ್ರಪಂಚದಲ್ಲೆಲ್ಲಾ ಬೇಡಿಕೆಯಿದೆ. ಆದುದರಿಂದ ಅದಕ್ಕೆ ವಿಶಾಲವಾದ ಮಾರುಕಟ್ಟೆ ಇದೆ.

೩. ಶಾಂತಿ ಮತ್ತು ಭದ್ರತೆ: ದೇಶದಲ್ಲಿ ಶಾಂತಿ ಮತ್ತು ಭದ್ರತೆ ಇಲ್ಲದಿದ್ದಾಗ ದೂರದ ಪ್ರದೇಶಗಳಿಗೆ ವಸ್ತುಗಳನ್ನು ಕಳಿಸುವುದು ಮತ್ತು ದೂರದ ಪ್ರದೇಶಗಳಿಂದ ವಸ್ತುಗಳನ್ನು ತರಿಸುವುದು ಕಷ್ಟವಾಗುತ್ತದೆ. ಯುದ್ಧ ಕಾಲದಲ್ಲಿ ಮಾರುಕಟ್ಟೆ ಸಂಕುಚಿತಗೊಳ್ಳುತ್ತದೆ. ಹಿಗಾಗಿ ಮಾರುಕಟ್ಟೆಯ ಗಾತ್ರವು ಪ್ರದೇಶದಲ್ಲಿ ನೆಲಸಿರುವ ಶಾಂತಿ ಮತ್ತು ಭದ್ರತೆಯನ್ನು ಅವಲಂಬಿಸಿರುತ್ತದೆ.

೪. ಸಾರಿಗೆ ಮತ್ತು ಸಂಪರ್ಕಗಳು: ಮಾರುಕಟ್ಟೆಯ ಗಾತ್ರವು ದೇಶದ ಸಾರಿಗೆ ಮತ್ತು ಸಂಪರ್ಕಗಳ ಅಭಿವೃದ್ಧಿಯನ್ನು ಅವಲಂಬಿಸಿದೆ. ಉತ್ತಮ ಸಾರಿಗೆ ಸಂಪರ್ಕದಿಂದ ಸರಕು-ಸೇವೆಗಳನ್ನು ವಿನಿಮಯ ಮಾಡಿಕೊಳ್ಳಬಹುದು. ಇದರಿಂದ ಮಾರುಕಟ್ಟೆ ವಿಶಾಲವಾಗುತ್ತದೆ.

೫. ಸರ್ಕಾರದ ನೀತಿ: ಮಾರುಕಟ್ಟೆಯ ಗಾತ್ರವು ಸರ್ಕಾರದ ನೀತಿಯಿಂದಲೂ ನಿರ್ಧರಿಸ್ಪಲ್ಪಡುತ್ತದೆ. ತೆರಿಗೆ, ಸುಂಕಗಳು ಮತ್ತು ಕೋಟಾಗಳು, ರಿಯಾಯ್ತಿಗಳು, ಪ್ರೋತ್ಸಾಹಕಗಳು ಮಾರುಕಟ್ಟೆಯ ಗಾತ್ರವನ್ನು ನಿರ್ಧರಿಸುತ್ತವೆ.

೬. ಶ್ರಮ ವಿಭಜನೆ: ಆಡಂಸ್ಮಿತರ ಪ್ರಕಾರ ಮಾರುಕಟ್ಟೆಯ ಗಾತ್ರವು ಶ್ರಮ ವಿಭಜನೆಗೆ ಅಡ್ಡಿಯಾಗಿದೆ. ಅಂದರೆ ಶ್ರಮ ವಿಭಜನೆಯು ಯಶಸ್ವಿಯಾಗಬೇಕಾದರೆ ಮಾರುಕಟ್ಟೆಯು ವಿಶಾಲವಾಗಿರಬೇಕು. ವಿಶಾಲವಾದ ಮಾರುಕಟ್ಟೆಯಿಂದ ಶ್ರಮ ವಿಭಜನೆಯ ಮೂಲಕ ಅಧಿಕ ಸರಕುಗಳನ್ನು ಉತ್ಪಾದಿಸಿ ಮಾರಾಟ ಮಾಡಬಹುದು. ಇದರಿಂದ ಮಾರುಕಟ್ಟೆ ಗಾತ್ರ ಅಧಿಕಗೊಳ್ಳುತ್ತದೆ.

ದೇಶದ ಆರ್ಥಿಕ ವ್ಯವಸ್ಥೆಯೇ ಆಗಲಿ, ರಾಜ್ಯದ ಆರ್ಥಿಕ ವ್ಯವಸ್ಥೆಯೇ ಆಗಲಿ, ಸಮುದಾಯದ ಆರ್ಥಿಕ ವ್ಯವಸ್ಥೆಯಾಗಲಿ ವಸ್ತುಗಳ ಉತ್ಪಾದನೆ ಎಷ್ಟು ಮುಖ್ಯವೋ ಅವುಗಳ ಮಾರಾಟವು ಅಷ್ಟೇ ಮುಖ್ಯವಾಗಿದೆ. ಉತ್ಪಾದಿಸಿದ ವಸ್ತುವನ್ನು ಮಾರಾಟಕ್ಕೆ ಸಿದ್ಧಪಡಿಸಿಬಿಟ್ಟರೆ ಉತ್ಪಾದನಾ ಕಾರ್ಯ ಕೊನೆಗೊಳ್ಳುತ್ತದೆ. ಅಲ್ಲಿಂದ ಮುಂದಕ್ಕೆ ಅಂದರೆ ವಸ್ತುಗಳು ಉತ್ಪಾದಕನಿಂದ ಬಳಕೆದಾರನ ಕೈಗೆ ಸೇರುವವರೆಗೂ ನಡೆಯುವ ಎಲ್ಲಾ ಪ್ರಯತ್ನಗಳು ಮಾರಾಟದ ಭಾಗವಾಗಿರುತ್ತವೆ. ಅದು ಯಾವುದೇ ತೊಂದರೆಯಿಲ್ಲದೆ. ವಸ್ತುಗಳನ್ನು ಮಾರಾಟ ಮಾಡಲು ಮತ್ತು ಸರಕುಗಳನ್ನು ಕೊಂಡುಕೊಳ್ಳಲು ಎಲ್ಲಾ ಸೌಲಭ್ಯಗಳು ಸಿಗುವಂತೆ ಮಾರುಕಟ್ಟೆ ವ್ಯವಸ್ಥೆ ಇರಬೇಕು.

ಕುಲಕಸುಬುದಾರರು ತಯಾರಿಸಿದ ವಸ್ತುಗಳ ಮಾರಾಟದಲ್ಲಿ ಹಾಗೂ ಕೊಂಡು ತಂದ ವಸ್ತುಗಳ ಮಾರಾಟಕ್ಕಾಗಿ ಇಂತಹ ಸ್ಥಳಗಳು ದೂರವಾಗಿವೆ. ಕಾರಣ ಕುಲಕಸುಬುದಾರರ ಮನೋಭಾವದಲ್ಲಿ ಅಸ್ಪೃಶ್ಯತೆ ಮನೋಭಾವ ಇರಬಹುದು. ಮಾರುಕಟ್ಟೆಯ ನಿಯಮಗಳು ತೆರಿಗೆಗಳು ಇವರಿಗೆ ಒಗ್ಗದ ವಿಷಯವಾಗಿರಬಹುದು. ಇತ್ಯಾದಿ ಕಾರಣಗಳಿಂದ ಕುಲಕಸುಬುದಾರರು ಮಾರುಕಟ್ಟೆಯಿಂದ ದೂರ ಉಳಿದಿದ್ದಾರೆ. ಕುಲಕಸುಬುದಾರರು ತಾವು ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡಬೇಕಾಗಿರುವುದು ಅನಿವಾರ್ಯ. ಮಾರಾಟ ವ್ಯವಸ್ಥೆ ಮೂಲಕ ಮಾರಾಟ ಮಾಡುವುದಲ್ಲದೆ ಮಾರಾಟ ಮಾಡುವ ಹಂತದಲ್ಲಿ ತಮ್ಮದೇ ನಿಯಮ ಕಾರ್ಯಸೂಚಿ ರೂಢಿಸಿಕೊಂಡು ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ.

ಒಂದು ವಸ್ತು ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ವರ್ಗಾವಣೆ ಮಾಡುವುದೇ ವಿನಿಮಯ ಕಾರ್ಯ. ಇಲ್ಲಿ ಇಬ್ಬರು ಕಾರ್ಯದಲ್ಲಿ ಸಮನಾಗಿ ಪಾಲುಗೊಳ್ಳುವರು. ವಿನಿಮಯ ಕಾರ್ಯ ಕೇವಲ ಮಾರುಕಟ್ಟೆಯಲ್ಲಿ ಆಗಬೇಕೆಂದಿಲ್ಲ. ಆದ್ದರಿಂದ ಕುಲಕಸುಬುದಾರರು ಬೀದಿ, ಜನಸಂದಣಿ ಇರುವ ಇತರೆ ಪ್ರದೇಶಗಳಲ್ಲಿ ಹೋಗಿ ಅನುಭೋಗಿಗೆ ಮಾರುತ್ತಾರೆ. ನೇಕಾರರು ತಾವು ನೇಯ್ದ ಬಟ್ಟೆಗಳನ್ನು ಮಧ್ಯವರ್ತಿಗಳಿಗೆ ಮಾರಾಟ ಮಾಡುತ್ತಾರೆ. ಕುಂಬಾರರು ನೇರವಾಗಿ ಅನುಭೋಗಿಗಳನ್ನು ಹುಡುಕಿಕೊಂಡು ಮನೆ ಮನೆಗೆ ಹೋಗಿ ಮಡಕೆಗಳನ್ನು ಮಾರುತ್ತಾರೆ. ವೃತ್ತಿದಾರರು ಅನುಭೋಗಿಗಳನ್ನು ಹುಡುಕಿಕೊಂಡು ಹೋಗಿ ತಮ್ಮ ವಸ್ತುಗಳನ್ನು ಮಾರಲು ಒಂದಲ್ಲ ಒಂದು ತಂತ್ರವನ್ನು ಉಪಯೋಗಿಸುತ್ತಾರೆ. ಕುಂಬಾರ, ಸುಣ್ಣಗಾರ, ಚಮ್ಮಾರ, ಪೂಜಾರ, ಬಳೆಗಾರ, ಕ್ಷೌರಿಕ, ಕಮ್ಮಾರ, ಮುಂತಾದ ವೃತ್ತಿದಾರರು ತಾವು ತಯಾರಿಸಿದ ಸರಕುಗಳೂ ಅಥವಾ ಸೇವೆಗೆ ಸುಗ್ಗಿಯ ಕಾಲದಲ್ಲಿ ರೈತರಿಂದ ಆಯ ಪಡೆದುಕೊಳ್ಳುತ್ತಾರೆ. ಇತರೆಯವರೆಗೆ ತಮ್ಮ ವಸ್ತು ಮತ್ತು ಸೇವೆಗಳನ್ನು ಹಣಕ್ಕೆ ಮಾರುತ್ತಾರೆ.

ವಸ್ತುಗಳು ಭೌತಿಕ ನಿರ್ವಹಣೆ ಎಂದರೆ ಉತ್ಪಾದಕರಿಂದ ಬಳಕೆದಾರ ಅಥವಾ ಉಪಯೋಗಿಸುವವನಿಗೆ ವಸ್ತುಗಳನ್ನು ಸಾಗಿಸುವುದು. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಸ್ತುಗಳನ್ನು ಭೌತಿಕವಾಗಿ ಸಾಗಿಸುವುದು. ಉತ್ಪನ್ನ ಮಾರಾಟವಾಗುವವರೆಗೂ ವಸ್ತುಗಳನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಬೇಡಿಕೆ ಬಂದಾಗ ಮಾರಾಟ ಮಾಡುವ ಸ್ಥಳಕ್ಕೆ ಸಾಗಿಸುತ್ತಾರೆ.

ಸಾಗಣಿಕೆ ವ್ಯವಸ್ಥೆಯಿಂದ ಪ್ರಪಂಚದ ಮಾರಾಟದಲ್ಲಿ ಕ್ರಾಂತಿ ನೆಡದಿದೆ. ಸಾಗಾಣಿಕೆ ವ್ಯವಸ್ಥೆಯಿಂದ ವಸ್ತು ತಲುಪಬೇಕಾದವರಿಗೆ ತಲುಪುತ್ತದೆ. ಇಲ್ಲದಿದ್ದರೆ ವಸ್ತು ನಾಶವಾಗುತ್ತದೆ. ವಸ್ತು ತನ್ನ ಗುಣಮಟ್ಟ ಕಳೆದುಕೊಳ್ಳುತ್ತದೆ. ಪರಿಣಾಮ ಕಸುಬುದಾರ ನಷ್ಟಕ್ಕೆ ಒಳಗಾಗುತ್ತಾನೆ. ಕಸುಬುದಾರರಿಗೆ ಪ್ರತ್ಯೇಕ ಸಾರಿಗೆ ವ್ಯವಸ್ಥೆ ಇಲ್ಲವಾದರೂ ಅನುಕೂಲಕ್ಕೆ ತಕ್ಕಂತೆ ಬಳಕೆದಾರನ ಮನೆ ಬಾಗಲಿಗೆ ಹೋಗಿ ಮಾರಾಟ ಮಾಡುವರು.

ಕುಲಕಸುಬುದಾರ ಸಮುದಾಯಗಳಿಗೆ ಪ್ರತ್ಯೇಕವಾದಂತಹ ಮಾರುಕಟ್ಟೆ ವ್ಯವಸ್ಥೆ ಇರುವುದಿಲ್ಲ. ಮಾರುಕಟ್ಟೆಯಲ್ಲಿ ಇವರಿಗಾಗಿ ಪ್ರತ್ಯೇಕ ಸ್ಥಳ ಕಂಡುಬರುವುದಿಲ್ಲ. ಆದರೂ ಮಾರುಕಟ್ಟೆ ವ್ಯವಸ್ಥೆ ಇರದಿದ್ದರೂ ತಮ್ಮದೇ ವ್ಯವಸ್ಥೆ ಮೂಲಕ ವಸ್ತುಗಳನ್ನು ಮಾರಾಟ ಮಾಡುವರು. ಇದು ಅವರ ಬದುಕಿಗೆ ಅನಿವಾರ್ಯ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಮಾರಾಟದ ವ್ಯಾಪ್ತಿಯನ್ನು ವಿಸ್ತರಿಸುತ್ತ ತಮ್ಮ ತಂತ್ರಗಾರಿಕೆ ಮೂಲಕ ಮಾರಾಟ ಮಾಡುವರು.

ಕುಲಕಸುಬುದಾರರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಸ್ಥಳಗಳೆಂದರೆ ಸಂತೆ, ಜಾತ್ರೆ, ಬೀದಿ, ನಿಲ್ದಾಣ, ಯಾತ್ರಾ ಸ್ಥಳ, ರಸ್ತೆ ಬದಿ, ಜನಸಂದಣಿ ಪ್ರದೇಶಗಳು. ಇವರ ವಸ್ತುಗಳ ಮಾರಾಟಕ್ಕೆ, ನಿಶ್ಚಿತ ಪ್ರದೇಶ ಅಥವಾ ವ್ಯವಸ್ಥೆ ಅಥವಾ ವಿಧಾನವೆಂಬುದಿಲ್ಲ. ಮಾರುಕಟ್ಟೆಯಲ್ಲಿ ಆಧುನಿಕ ಕೈಗಾರಿಕೆಗಳು ತಯಾರಿಸಿದ ವಸ್ತುಗಳು ಕಡಿಮೆ ಬೆಲೆಗೆ ದೊರೆಯುವುದರಿಂದ ಇವರ ವಸ್ತುಗಳ ಮಾರಾಟ ಕಷ್ಟಕರ. ಕೈಮಗ್ಗ ನೇಕಾರರ ವಸ್ತುಗಳಿಗೆ ಆಧುನಿಕ ಬಟ್ಟೆ ಉದ್ಯಮಗಳು ಪೈಪೋಟಿ ನೀಡುತ್ತವೆ. ಕುಂಬಾರಿಕೆಗೆ ಪ್ಲಾಸ್ಟಿಕ್, ಸ್ಟೀಲ್, ಕಂಚು, ಹಿತ್ತಾಳೆ, ಅಲ್ಯೂಮಿನಿಯಂ ಪಾತ್ರೆಗಳು ಪೈಪೋಟಿ ನೀಡುತ್ತಿವೆ. ಮೇದಾರರಿಗೆ ಪ್ಲಾಸ್ಟಿಕ್, ಕಾಗದ ಇತ್ಯಾದಿ ವಸ್ತುಗಳು ಪೈಪೋಟಿ ನೀಡುತ್ತಿವೆ. ಚಿನ್ನಾಭರಣಗಳನ್ನು ಇಂದು ಚಿನ್ನದ ಉದ್ಯಮಗಳು ತಯಾರಿಸುವುದರಿಂದ ಸಾಂಪ್ರದಾಯಿಕವಾಗಿ ಚಿನ್ನಾಭರಣಗಳನ್ನು ತಯಾರಿಸುತ್ತಿದ್ದ ಪತ್ತಾರ ಜನಾಂಗ ಉದ್ಯೋಗ ಕಳೆದುಕೊಳ್ಳುವಂತಾಗಿದೆ. ಆಧುನಿಕ ಚಪ್ಪಲಿ ಉದ್ಯಮಗಳು ಸಾಂಪ್ರದಾಯಿಕ ಚಮ್ಮಾರರಿಗೆ ಸವಾಲಾಗಿ ನಿಂತಿವೆ.

ಒಂದು ವಸ್ತುವಿನ ಉತ್ಪಾದನೆಯು ಸಫಲವಾಗಬೇಕೆಂದರೆ ಆ ವಸ್ತುವು ಅವರ ಅಪೇಕ್ಷೆ ಮತ್ತು ಅವಶ್ಯಕತೆಗಳಿಗನುಗುಣವಾಗಿ ಅನುಭೋಗಿಗಳಿಗೆ ಸೇರಬೇಕು. ಏಕೆಂದರೆ ಉತ್ಪಾದಿಸಿದ ವಸ್ತುಗಳನ್ನು ಹಾಗೆಯೇ ಇಡುವುದು ತಪ್ಪಾಗುತ್ತದೆ. ಇದರ ಗುಣಮಟ್ಟ ಕ್ಷೀಣಿಸುವ ಮೊದಲು ಎಲ್ಲಿ ಸೇರಬೇಕೊ-ಅಲ್ಲಿಗೆ ಸೇರಬೇಕಾಗುತ್ತದೆ. ಹಾಗೆ ಮಾಡುವುದರಿಂದ ಆ ವಸ್ತುಗಳ ಉತ್ಪಾದನೆ ಸಾರ್ಥಕವಾಗುತ್ತದೆ.

ಉತ್ಪಾದಿತ ವಸ್ತುಗಳನ್ನು ಬಳಕೆದಾರರಿಗೆ ಸೇರಿಸುವ ಅಥವಾ ವರ್ಗಾಯಿಸುವ ಕ್ರಿಯೆಯನ್ನು ಮಾರಾಟದ ಪ್ರಕ್ರಿಯೆ ಎಂದು ಕರೆಯುವರು. ಉತ್ಪಾದಕರಿಂದ ಬಳಕೆದಾರರಿಗೆ ನಿಯಂತ್ರಿಸುವ ವ್ಯವಹಾರಿಕ ಚಟುವಟಿಕೆಗಳ ನಿರ್ವಹಣೆ ಮಾರಾಟದ ಪ್ರಕ್ರಿಯೆ ಆಗಿದೆ.

ಕಸುಬುದಾರರು ವಸ್ತುಗಳನ್ನು ಉತ್ಪಾದಿಸಿ ನೇರವಾಗಿ ಮಾರಾಟದಲ್ಲಿ ತೊಡಗುತ್ತಾರಾದರೂ ಉತ್ಪಾದನಾ ವಸ್ತು ವಿವಿಧ ಹಂತದಿಂದ ಹರಿದು ಬರಬೇಕಾಗಿದೆ. ಒಂದು ವಸ್ತುವನ್ನು ಹಲವಾರು ತೊಂದರೆಗಳ ನಡುವೆ ಉತ್ಪಾದಿಸಿ ಅದನ್ನು ತುಂಬಾ ಜಾಗೃತವಾಗಿ ನೇರ ಮಾರಾಟದ ಮೂಲಕ

ಅನುಭೋಗಿಗಳನ್ನು ಹುಡುಕಿಕೊಂಡು ಹೋಗಿ ವಸ್ತುಗಳನ್ನು ಮಾರಾಟ ಮಾಡಬೇಕು. ಕುಲಕಸುಬುದಾರರು ಉತ್ಪಾದಿಸಿದ ವಸ್ತುಗಳು ಗ್ರಾಹಕರಿಗೆ ಆಕರ್ಷಣೆಯುವಾಗಿ ಮಾತುಗಾರಿಕೆ ಮೂಲಕ ಸರಕು ಮಾರಾಟಮಾಡುವ ಕೌಶಲ್ಯ ಹೊಂದಬೇಕಾಗಿದೆ.

ಕುಲಕಸುಬುದಾರರು ತಯಾರಿಸುವ ವಸ್ತು ಅವರ ಶ್ರಮ ಮತ್ತು ಸಂಪ್ರದಾಯದಿಂದ ಕೂಡಿದೆ. ಅವರು ಯಾವ ವಸ್ತುವನ್ನು ಹೇಗೆ ಉತ್ಪಾದಿಸಬೇಕು? ಹೇಗೆ ಅಲಂಕರಿಸಬೇಕು? ಯಾವ ವಸ್ತುವಿಗೆ ಯಾವ ವಿನ್ಯಾಸ ಕೊಡಬೇಕು? ಎಂದು ಮೊದಲೇ ನಿರ್ಧರಿಸುತ್ತಾರೆ. ಇವರು ಲಾಭಕ್ಕಿಂತ ಸೇವೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಕಸುಬುದಾರರು ನಂಬಿಕೆಯ ಮೇಲೆ, ನಯ ವಿನಯದಿಂದ ಬೇಡಿಕೊಂಡು ವಸ್ತುವಿನ ಗುಣಮಟ್ಟ, ತಾಳಿಕೆ ಬಾಳಿಕೆ ಇತ್ಯಾದಿಗಳನ್ನು ಕೂಲಂಕುಶವಾಗಿ ತಿಳಿಸಿ ಮಾರಾಟ ಮಾಡುವರು.

ಕುಲಕಸುಬುದಾರರು ಉತ್ಪಾದಿಸಿದ ವಸ್ತುವಿಗೆ ಬೆಲೆ ಕಟ್ಟುವುದು ಸಹಜ. ಹಾಗೆ ಬೆಲೆ ನಿರ್ಧರಿಸಿದ ಮೇಲೆ ವಸ್ತುವನ್ನು ಜನರು ಹೇಗೆ ಸ್ವೀಕರಿಸುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಬೆಲೆ ನಿರ್ಧಾರವಾಗಬೇಕಾಗುತ್ತದೆ. ಇಲ್ಲಿ ವಸ್ತುವನ್ನು ಉತ್ಪಾದನೆ ಮಾಡಲು ವಸ್ತುವಿನ ಖರ್ಚು ವೆಚ್ಚವನ್ನು ತೆಗೆಯಲಾಗುತ್ತದೆ. ಸಾಮಾನ್ಯವಾಗಿ ಜನರಿಗೆ ತುಂಬಾ ಸರಳವಾಗಿ ಕೈಗೆಟುಕುವ ಬೆಲೆ ನಿರ್ಧರಿಸುತ್ತಾರೆ. ನಿರ್ಧರಿಸಿದ ಬೆಲೆಗಳು ಜಾತ್ರೆ, ಸಂತೆ, ಮಾರುಕಟ್ಟೆ, ಹಬ್ಬ-ಹರಿದಿನ ಹಾಗೂ ಪ್ರವಾಸಿ ಸ್ಥಳಗಳಲ್ಲಿ ಹಾಗೂ ದೇವಸ್ಥಾನ ಇತ್ಯಾದಿಗಳಲ್ಲಿ ಏರಿಕೆ ಅಥವಾ ಇಳಿಕೆಯಲ್ಲಿ ಕಂಡು ಬರಬಹುದು. ಅಲ್ಲಿ ಪರಿಸ್ಥಿತಿಗನುಗುಣವಾಗಿ ವಸ್ತುವನ್ನು ಮಾರುತ್ತಾರೆ.

ಕುಲಕಸುಬುದಾರರ ವಸ್ತುಗಳ ಉತ್ಪಾದನೆಯಲ್ಲಿ ಹಣರೂಪಿ ವೆಚ್ಚಕ್ಕಿಂತ ನೈಜ ವೆಚ್ಚ ಅಧಿಕವಾಗಿದೆ. ಹೆಚ್ಚಾಗಿ ಶ್ರಮ ಇಲ್ಲಿ ವ್ಯಯ ಮಾಡಬೇಕಾಗುತ್ತದೆ. ಶ್ರಮ ತುಂಬಾ ಶ್ರದ್ಧೆಯಿಂದ ಹಂತ ಹಂತವಾಗಿ ಯಾವ ವಯಮಾನದವರು ಎಷ್ಟು ವಿನಿಯೋಗಿಸಬೇಕು. ಎಂತಹ ಕರಕುಶಲತೆ ಬೇಕು ಎಂದು ನಿರ್ಧರಿಸುತ್ತಾರೆ. ಇವರು ಹಣ ಇಲ್ಲದಿದ್ದರೂ ಇವರ ನೈಜ ಶಕ್ತಿಯಿಂದ ವಸ್ತು ಉತ್ಪಾದಿಸಬಲ್ಲರು.

ಉತ್ಪಾದಿಸಿದ ವಸ್ತುವನ್ನು ಮಾರುಕಟ್ಟೆಗೆ ತರುವ ಮುನ್ನ ಅದರ ತಯಾರಿಕೆಗೆ ತಗಲುವ ವೆಚ್ಚವನ್ನು ಅಂದಾಜು ಲೆಕ್ಕ ಹಾಕಿ ಅದಕ್ಕೆ ವಿನಿಯೋಗಿಸಿದ ಸಮಯ, ಸದಸ್ಯರ ಸಂಖ್ಯೆ, ವಸ್ತುಗಳ ಉತ್ಪಾದನೆ, ಕಚ್ಚಾ ವಸ್ತುಗಳೂ, ಶ್ರಮ ಇತ್ಯಾದಿಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು ಬೆಲೆ ನಿರ್ಧಾರ ಮಾಡುವರು. ಏಕೆಂದರೆ ಅಂದಿನ ಸ್ಥಿತಿ, ಸಮಯ ಸಂದರ್ಭ ಮೊದಲಾದ ಅಂಶಗಳು ಪ್ರಭಾವ ಬೀರುವುದರಿಂದ ವ್ಯತ್ಯಾಸ ಆಗುತ್ತದೆ. ಹಾಗೂ ವ್ಯತ್ಯಾಸದ ನಂತರ ಒಂದಿಷ್ಟಾದರೂ ಲಾಭ ಬರುತ್ತದೆ. ವಸ್ತುಗಳು ಯಾರು ಖರೀದಿಸದಿದ್ದಾಗ ಕಡಿಮೆ ಬೆಲೆಗೆ ಮಾರುವರು.

ಕುಲಕಸುಬುದಾರರ ಸರಕು-ಸೇವೆಗಳ ಮಾರಾಟ ಪ್ರಕ್ರಿಯೆಯ ಸಮಸ್ಯೆಗಳು:

ಆಧುನಿಕ ಮಾರಾಟದ ವ್ಯವಸ್ಥೆ ಮಾರುವಿಕೆಯು ಒಂದು ಪ್ರಮುಖವಾದ ಕಾರ್ಯ. ಯಾವುದೇ ವೃತ್ತಿಯ ಯಶಸ್ಸು ಬಹುಮಟ್ಟಿಗೆ ಸರಕುಗಳ ಮಾರಾಟವನ್ನು ಅವಲಂಬಿಸಿದೆ ಸರಕುಗಳ ಮಾರಾಟದಿಂದ ಉತ್ಪಾದಕನಿಗೆ ಆದಾಯ ಬರುತ್ತದೆ. ಇದರಿಂದ ತಮ್ಮ ವೃತ್ತಿಯನ್ನು ಅಭಿವೃದ್ಧಿ ಪಡಿಸಬಹುದು. ಉತ್ಪಾದಿತ ಸರಕುಗಳು ಮಾರಾಟವಾಗದಿದ್ದರೆ ನಷ್ಟ ಸಂಭವಿಸಿ ವೃತ್ತಿಯ ಕಡೆಗೆ ಆಸಕ್ತಿ ಕಡಿಮೆಯಾಗುವುದುಂಟು. ಕುಲಕಸುಬುದಾರರು ಇಂದು ತಮ್ಮ ಸರಕು-ಸೇವೆಗಳ ಮಾರಾಟ ಪ್ರಕ್ರೀಯೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳು ಮಾರಾಟ ಮಾಡುವ ಸರಕುಗಳನ್ನು ಅವಲಂಬಿಸಿರುತ್ತದೆ. ಈ ಸಮಸ್ಯೆಗಳಿಗೆ ಎಲ್ಲಾ ಸರಕುಗಳಿಗೂ ಏಕರೂಪವಾಗಿ ಅನ್ವಹಿಸದೆ ಅವು ಬೇರೆ ಬೇರೆ ಸರಕುಗಳಿಗೆ ಬೇರೆ ಬೇರೆಯಾಗುತ್ತಾ ಹೋಗುತ್ತದೆ. ಕುಂಬಾರಿಕೆ, ಕಮ್ಮಾರಿಕೆ, ಪತ್ತಾರಿಕೆ, ನೇಕಾರಿಕೆ, ಮೇದಾರಿಕೆ, ಬಳೆಗಾರಿಕೆ, ಸುಣ್ಣಗಾರಿಕೆ, ಚಮ್ಮಾರಿಕೆ ಇತ್ಯಾದಿ ಕುಲಕಸುಬುದಾರರು ವರ್ತಮಾನ ಮಾರುಕಟ್ಟೆಯಲ್ಲಿ ತಮ್ಮ ಉತ್ಪನ್ನದ ಮಾರಾಟದ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳೆಂದರೆ.

೧. **ಮಾರುಕಟ್ಟೆಯ ಸಮಾಚಾರ ಮತ್ತು ಸಂಶೋಧನೆ:** ಕುಲಕಸುಬುದಾರರು ಮಾರಾಟದ ಕಾರ್ಯವನ್ನು ನಿರ್ವಹಿಸುವಾಗ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಈ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕಂಡು ಹಿಡಿಯಬೇಕಾದರೆ ಅವರಿಗೆ ಮಾರುಕಟ್ಟೆಯ ಮಾಹಿತಿಯು ಇರಬೇಕು. ಮಾರುಕಟ್ಟೆಯ ಸಮಾಚಾರವನ್ನು ಸಂಗ್ರಹಿಸುವ ಮತ್ತು ವಿಶ್ಲೇಷಿಸುವ ಕಾರ್ಯವನ್ನು ಮಾಡಬೇಕು. ತನ್ನ ಸರಕುಗಳೊಡನೆ ಪೈಪೋಟಿಗಿಳಿದಿರುವ ಸರಕುಗಳ ಬೆಲೆ, ಗುಣಮಟ್ಟ, ಸರಕುಗಳ ಮಾರಾಟದ ಪ್ರಮಾಣ, ಪ್ರತಿಸ್ಪರ್ಧಿಗಳು ನೀಡುತ್ತಿರುವ ಸೌಲಭ್ಯಗಳು, ಗ್ರಾಹಕರ ಅಭಿರುಚಿ ಮೊದಲಾದ ಸಂಗತಿಗಳನ್ನು ಉತ್ಪಾದಕರು ತಿಳಿದುಕೊಂಡಿರಬೇಕಾಗುತ್ತದೆ. ಆದರೆ ನಮ್ಮ ಕುಲಕಸುಬುದಾರರಿಗೆ ಮಾರುಕಟ್ಟೆಯಲ್ಲಿನ ಸ್ಥಿತಿ-ಗತಿಗಳ ಬಗೆಗೆ ಸರಿಯಾದ ಜ್ಞಾನವಿಲ್ಲದೆ ತಮ್ಮ ಉತ್ಪನ್ನದ ಮಾರಾಟ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲಾರರು. ಮಾರುಕಟ್ಟೆಯ ಸರಿಯಾದ ಮಾಹಿತಿಯಿಂದ, ಗ್ರಾಹಕರ ಅವಶ್ಯಕತೆಗಳಿಗೆ ತಕ್ಕಂತೆ ಸರಕುಗಳನ್ನುತ್ಪಾದಿಸಲು, ಸರಿಯಾದ ಬೆಲೆಗೆ, ಸರಿಯಾದ ಪ್ರಮಾಣದಲ್ಲಿ ಪೂರೈಸಲು ಸಾಧ್ಯವಾಗುತ್ತದೆ. ಆದರೆ ಕುಲಕಸುಬುದಾರರಿಗೆ ಗ್ರಾಹಕರು ಯಾವ ಸರಕುಗಳನ್ನು ಕೊಳ್ಳಲು ಇಚ್ಚಿಸುತ್ತಾರೆ? ಯಾವ ಗುಣಮಟ್ಟದ, ಯಾವ ಗಾತ್ರದ, ಯಾವ ಬಣ್ಣದ, ಯಾವ ಆಕಾರದ ಸರಕುಗಳು ಅವರಿಗೆ ಬೇಕಾಗುತ್ತವೆ ಎಂಬ ಮಾಹಿತಿ ಇರುವುದಿಲ್ಲ. ಗ್ರಾಹಕರು ಯಾವ ಪ್ರಮಾಣದಲ್ಲಿ ಕೊಂಡುಕೊಳ್ಳುತ್ತಾರೆ. ಯಾವ ಬೆಲೆಗೆ ಕೊಳ್ಳಲು ಬಯಸುತ್ತಾರೆ. ಯಾವ ಬೆಲೆಯಿಂದ ಲಾಭ ಸಂಪಾದಿಸಲು ಸಾಧ್ಯವಿದೆ, ತನ್ನ ಸರಕುಗಳಿರುವ ಮಾರುಕಟ್ಟೆಯ ವ್ಯಾಪ್ತಿ ಎಷ್ಟು, ಗ್ರಾಹಕರು ತನ್ನ ಸರಕುಗಳನ್ನು ಯಾವ ಸಮಯದಲ್ಲಿ ಕೊಳ್ಳಲು

ಇಚ್ಛಿಸುತ್ತಾರೆ ಎಂಬ ಮಾಹಿತಿಗಳ ಕೊರತೆಯನ್ನು ಎದುರಿಸುತ್ತಾರೆ. ಇದರಿಂದಾಗಿ ಕುಲಕಸುಬುದಾರರು ತಮ್ಮ ಸರಕುಗಳನ್ನು ಮಾರಾಟ ಮಾಡಲಾಗದೆ ಲಾಭ ಸಂಪಾದಿಸಲಾಗದೆ, ವೃತ್ತಿಯ ಬಗೆಗೆ ಆಸಕ್ತಿ ಕಡಿಮೆ ಮಾಡಿಕೊಳ್ಳುತ್ತಾರೆ. ಇದನ್ನು ಸರಿಪಡಿಸಿಕೊಳ್ಳಬೇಕಾದರೆ ಮಾರುಕಟ್ಟೆಯ ಸಮಾಚಾರದ ಅರಿವು ಪ್ರತಿಯೊಬ್ಬ ಕುಲಕಸುಬುದಾರರಿಗೆ ಇರುವುದು ಅತ್ಯಗತ್ಯ.

೨. ಸಾರಿಗೆ ಮತ್ತು ಸಂಪರ್ಕ: ಕುಲಕಸುಬುದಾರರು ಉತ್ಪಾದಿಸಿದ ಸರಕುಗಳನ್ನು ಅವುಗಳ ಉಪಭೋಗದ ಸ್ಥಳಗಳಿಗೆ ಸಾಗುವುದು ಮಹತ್ವದ ಕಾರ್ಯ. ಈ ಕಾರ್ಯಕ್ಕಾಗಿ ಸಾರಿಗೆಯು ಅತ್ಯಾವಶ್ಯಕ. ಸಾರಿಗೆಯ ಸೌಕರ್ಯವಿಲ್ಲದೆ ಸರಕುಗಳ ಸಾಗಾಟವಾಗುವುದಿಲ್ಲ. ಸರಕುಗಳನ್ನು ಅವುಗಳ ಉತ್ಪಾದನಾ ಸ್ಥಳಗಳಿಂದ ಮಾರಾಟವಾಗುವ ಸ್ಥಳಗಳಿಗೆ ಸಾಗಿಸಬೇಕಾದರೆ ಉತ್ತಮ ಸಾರಿಗೆ ಬೇಕು. ಸಾರಿಗೆಯು ಸ್ಥಳ ತುಷ್ಟಿಗುಣವನ್ನೂ, ಸಮಯ ತುಷ್ಟಿಗುಣವನ್ನು ನೀಡುತ್ತದೆ. ಉತ್ಪಾದಿಸಿದ ಸರಕುಗಳನ್ನು ಬಳಕೆದಾರರಿಗೆ ತಲುಪಿಸಿದಾಗಲೇ ಉತ್ಪಾದನಾ ಕಾರ್ಯ ಪೂರ್ಣವಾಗುತ್ತದೆ. ಎಲ್ಲಾ ಸರಕುಗಳು ಉತ್ಪಾದಿಸ್ವಲ್ಪಟ್ಟ ಸ್ಥಳಗಳಲ್ಲಿಯೇ ಮಾರಾಟವಾಗುವುದಿಲ್ಲ. ಅವುಗಳನ್ನು ಬಳಕೆದಾರರಿದ್ದಲ್ಲಿಗೆ ಸಾಗಿಸಬೇಕು. ಬಳಕೆದಾರರಿಗೆ ಬೇಕಾದ ಸಮಯದಲ್ಲಿ ಅವುಗಳನ್ನು ಒದಗಿಸಬೇಕು. ಈ ಕಾರ್ಯವನ್ನು ಸಾರಿಗೆಯು ಮಾಡುತ್ತದೆ. ಸಾರಿಗೆ-ಸಂಪರ್ಕದಿಂದ ಮಾರುಕಟ್ಟೆಯು ವಿಸ್ತಾರವಾಗಿರುತ್ತದೆ. ದೊಡ್ಡ ಪ್ರಮಾಣದ ಉತ್ಪಾದನೆ ಸಾಧ್ಯವಾಗುತ್ತದೆ. ಸರಕುಗಳ ಬೇಡಿಕೆ ಹೆಚ್ಚಿಸುವುದರ ಜೊತೆಗೆ ಉತ್ಪಾದಕರ ಲಾಭದ ಪ್ರಮಾಣವನ್ನು ಹೆಚ್ಚಿಸುತ್ತದೆ. ಆದರೆ ಕುಲಕಸುಬುದಾರರು ಸಣ್ಣ ಪ್ರಮಾಣದ ಉತ್ಪಾದಕರಾಗಿರುವುದರಿಂದ, ಅವರಿಗೆ ಉತ್ತಮ ಸಾರಿಗೆ ಸಂಪರ್ಕದ ಸವಲತ್ತುಗಳು ದೊರೆಯುವುದಿಲ್ಲ. ಹೀಗಾಗಿ ತಮ್ಮ ಉತ್ಪನ್ನವನ್ನು ಸ್ಥಳೀಯ ಸಂತೆ, ಜಾತ್ರೆ, ಉತ್ಸವ ಇತ್ಯಾದಿ ಸಂದರ್ಭದಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡುವ ಸಾಧ್ಯತೆಗಳೇ ಹೆಚ್ಚು. ಕುಲಕಸುಬುದಾರರು ಉತ್ಪನ್ನಗಳ ಸಾಗಾಣಿಕೆಗೆ, ಬಂಡಿ, ಪ್ರಾಣಿಗಳನ್ನೇ ಹೆಚ್ಚಾಗಿ ಅವಲಂಬಿಸಿದ್ದಾರೆ. ಇತ್ತೀಚೆಗೆ ಲಘು ವಾಹನಗಳು ಕುಲಕಸುಬುದಾರರ ಸರಕುಗಳ ಸಾಗಾಣಿಕೆಗೆ ನೆರವಾಗುತ್ತವೆ.

೩. ಪ್ರಮಾಣೀಕರಣ ಮತ್ತು ವರ್ಗೀಕರಣ: ಸರಕುಗಳನ್ನು ಪ್ರಮಾಣೀಕರಿಸುವುದು ಮಾರಾಟದ ಒಂದು ಮಹತ್ವದ ಕಾರ್ಯ. ಸರಕುಗಳ ಸಾಮಾನ್ಯ ಗುಣ ಲಕ್ಷಣಗಳ ಆಧಾರದ ಮೇಲೆ ಅವುಗಳನ್ನು ವರ್ಗೀಕರಿಸಲಾಗುತ್ತದೆ. ಪ್ರಮಾಣೀಕರಿಸ್ವಲ್ಪಟ್ಟ ಸರಕುಗಳು ವಿಶಿಷ್ಟ ಗುಣ ಲಕ್ಷಣಗಳನ್ನು ಹೊಂದಿರುವುದರಿಂದ ಅವುಗಳನ್ನು ಮಾರಾಟ ಮಾಡುವುದು ಬಹಳ ಸುಲಭ. ಪ್ರಮಾಣೀಕರಿಸ್ವಲ್ಪಟ್ಟ ಸರಕುಗಳಲ್ಲಿ ಜನರಿಗೆ ವಿಶ್ವಾಸವಿರುವುದರಿಂದ ಅವರು ಅ ಸರಕುಗಳನ್ನು ಪರೀಕ್ಷಿಸದೆ ಕೊಂಡುಕೊಳ್ಳುತ್ತಾರೆ. ಪ್ರಮಾಣೀಕರಿಸ್ವಲ್ಪಟ್ಟ ಸರಕುಗಳಿಗೆ ಯೋಗ್ಯ ಬೆಲೆ ಸಿಗುವುದರಿಂದ ವೃತ್ತಿದಾರರಿಗೂ ಪ್ರಮಾಣೀಕರಣ ಅನುಕೂಲವಾಗುತ್ತದೆ. ಸರಕುಗಳ ಗುಣಲಕ್ಷಣ ಮತ್ತು ಗಾತ್ರಗಳಿಗನುಗುಣವಾಗಿ

ವಿಂಗಡಿಸಬೇಕು. ಕಾರಣ ಗ್ರಾಹಕರು ಉತ್ತಮ ಗುಣಮಟ್ಟದ ವಸ್ತುಗಳನ್ನೇ ಕೊಳ್ಳಲು ಬಯಸುತ್ತಾರೆ. ಪ್ರಮಾಣೀಕರಣ ಮತ್ತು ವರ್ಗೀಕರಣ ದೊಡ್ಡ ಕೈಗಾರಿಕೆಗಳಲ್ಲಿ ಸಾಧ್ಯವಾಗಿರುವುದರಿಂದ ಅವುಗಳು ತಯಾರಿಸುವ ಸರಕುಗಳ ಬೇಡಿಕೆ ಹೆಚ್ಚು. ಆದರೆ ಕುಲಕಸುಬುದಾರರಾದ ನೇಕಾರ, ಕುಂಬಾರ, ಮೇದಾರ, ಶಿಲ್ಪಿ, ಬಳೆಗಾರ, ಸುಣ್ಣಗಾರ. ಪತ್ತಾರ, ಕಮ್ಮಾರ ಮುಂತಾದವರು ಉತ್ಪಾದನೆ ಮತ್ತು ಮಾರಾಟದಲ್ಲಿ ಸರಕುಗಳು ಪ್ರಮಾಣೀಕರಣ ಮತ್ತು ವರ್ಗೀಕರಣ ಮಾಡುವುದಿಲ್ಲ. ಉತ್ಪಾದಿಸಿದ ಸರಕುಗಳನ್ನು ಸಾರಾ ಸಗಟಾಗಿ ಮಾರುಕಟ್ಟೆಗೆ ತಂದು ಮಾರಲು ಪ್ರಯತ್ನಿಸುತ್ತಾರೆ. ಇದರಿಂದ ಸರಕುಗಳ ಮಾರಾಟದ ಪ್ರಮಾಣ ಕಡಿಮೆ ಆಗಿದೆ ಮತ್ತು ಉತ್ತಮ ಬೆಲೆ ಇಲ್ಲದೆ ಆದಾಯವು ಕಡಿಮೆಯಾಗುತ್ತದೆ.

೪. ಸಂಗ್ರಹಣೆ: ಸರಕುಗಳನ್ನು ಉತ್ಪಾದನಾ ಸಮಯದಿಂದ ಮಾರಾಟದ ಸಮಯದವರೆಗೆ ಯೋಗ್ಯ ಸ್ಥಿತಿಯಲ್ಲಿ ಕಾಯ್ದಿಡುವ ವ್ಯವಸ್ಥೆಗೆ 'ಸಂಗ್ರಹಣೆ' ಎನ್ನುವರು. ಸಂಗ್ರಹಣೆ ಸರಕುಗಳ ಮಾರಾಟದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದರಿಂದ ಉತ್ಪಾದನಾ ಕಾರ್ಯ ಸುಗಮವಾಗಿ ನಡೆಯುವುದಲ್ಲದೆ ವಿತರಣೆಯ ಕಾರ್ಯವು ಸುಲಭವಾಗುವುದು. ಬಳಕೆದಾರರ ಬೇಡಿಕೆಗನುಗುಣವಾಗಿ ಸರಕುಗಳನ್ನು ಪೂರೈಸಲು ಮತ್ತು ಬೆಲೆಗಳಲ್ಲಿಯ ಏರಿಳಿತಗಳನ್ನು ತಡೆಯಲು ಸಂಗ್ರಹಣೆಯಿಂದ ಸಾಧ್ಯವಾಗುವುದು. ಸಂಗ್ರಹಣೆ ಸ್ಥಳ ಮತ್ತು ಸಮಯ ತುಷ್ಟಿಗುಣವನ್ನು ನೀಡುತ್ತದೆ. ಇದರಿಂದ ಉತ್ಪಾದಕರಿಗೂ ಹಾಗೂ ಬಳಕೆದಾರರಿಗೂ ಅನುಕೂಲ. ಆದರೆ ಕುಲಕಸುಬುದಾರರು ಸಂಗ್ರಣೆಯ ಸೌಲಭ್ಯದ ಅನುಕೂಲಗಳಿಂದ ವಂಚಿತರಾಗಿದ್ದಾರೆ. ಕಾರಣ ಅವರ ವಾಸದ ಮನೆ ಚಿಕ್ಕದಾಗಿರುವುದು, ಸಂಗ್ರಹಿಸಲು ಸ್ಥಳಾವಕಾಶದ ಕೊರತೆ. ಸರಕುಗಳ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳನ್ನು ಮತ್ತು ತಯಾರಿಸಿದ ಸಿದ್ಧ ಸರಕುಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಸ್ಥಳ ಹಾಗೂ ಶಕ್ತಿ ಕುಲಕಸುಬುದಾರರಲ್ಲಿ ಇಲ್ಲದಿರುವುದು ಪ್ರಮುಖ ಸಮಸ್ಯೆ. ಈ ಸಮಸ್ಯೆಯು ಕುಲಕಸುಬುದಾರರು ಕಚ್ಚಾ ವಸ್ತುಗಳ ಕೊರತೆಗೆ ಕಾರಣ. ಮತ್ತು ಸರಕುಗಳನ್ನು ಕಾಯ್ದು ಉತ್ತಮ ಬೆಲೆಗೆ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಉತ್ಪಾದಿಸಿದ ತಕ್ಷಣ ಸರಕುಗಳನ್ನು ಮಾರಾಟ ಮಾಡಬೇಕಾಗುತ್ತದೆ. ಇದರಿಂದ ಕುಲಕಸುಬುದಾರರಿಗೆ ತಮ್ಮ ಸರಕುಗಳಿಂದ ಉತ್ತಮ ಆದಾಯ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರವು ಗಮನ ಹರಿಸದಿರುವುದು ವಿಷಾದನೀಯ ಸಂಗತಿ.

೫. ಮಾರಾಟದ ಕಲೆ: ಉತ್ಪಾದಕರ ಜೀವಾಳವೇ ಮಾರಾಟ ಉತ್ಪಾದನೆಯ ಮುಖ್ಯ ಉದ್ದೇಶ ಮಾರಾಟ. ಉತ್ಪಾದಿಸ್ವಲ್ಪಟ್ಟ ಸರಕುಗಳು ಮಾರಾಟವಾಗದಿದ್ದರೆ ಉತ್ಪಾದನೆ ನಿಲ್ಲುತ್ತದೆ. ಆದ್ದರಿಂದ ವೃತ್ತಿಗಳು ಬೆಳೆಯಬೇಕಾದರೆ ಉತ್ಪಾದಿಸಿದ ಸರಕುಗಳು ಮಾರಾಟವಾಗಬೇಕು. ಮಾರಾಟದಿಂದ ಆದಾಯ ಬರುತ್ತದೆ. ಆದಾಯದ ಗಳಿಕೆ ಕಸುಬುದಾರರ ಬದುಕು

ಹಸನುಗೊಳಿಸುತ್ತದೆ. ಇಂದು ಸರಕುಗಳ ಮಾರಾಟದಲ್ಲಿ ತೀವ್ರವಾದ ಪೈಪೋಟಿ ಇದೆ, ಅದ್ದರಿಂದ ಆಧುನಿಕ ವಾಣಿಜ್ಯ ಪ್ರಪಂಚದಲ್ಲಿ ಮಾರಾಟದ ಕಲೆಯು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಮಾರಾಟದ ಕಲೆ ಸರಕುಗಳ ಮಾರಾಟ ಹೆಚ್ಚಿಸುತ್ತದೆ. ಅಲ್ಲದೆ ಹೊಸ ಮಾರುಕಟ್ಟೆ ಸೃಷ್ಟಿಯಾಗಿ ಹೆಚ್ಚಿನ ಮಾರಾಟದಿಂದ ಹೆಚ್ಚಿನ ಲಾಭದ ಗಳಿಕೆಗೆ ನೆರವಾಗುತ್ತದೆ. ಆದರೆ ನಮ್ಮ ಕುಲಕಸುಬುದಾರರಲ್ಲಿ ಮಾರಾಟದ ಕಲೆ ಇರುವುದಿಲ್ಲ. ಕಾರಣ ಅವರು ಅನಕ್ಷರಸ್ಥರು ಅವಿದ್ಯಾವಂತರೂ ಆಗಿದ್ದಾರೆ. ಅವರು ಸರಕುಗಳನ್ನು ಮಾರಾಟ ಮಾಡುವಾಗ ಗ್ರಾಹಕರನ್ನು ಕಾಡಿ ಬೇಡಿ ಮಾರಾಟ ಮಾಡುವುದನ್ನು ಮಾರುಕಟ್ಟೆಯಲ್ಲಿ ಗಮನಿಸಬಹುದು. ಇದರಿಂದ ಕುಲಕಸುಬುದಾರರು ತಮ್ಮ ಸರಕುಗಳನ್ನು ಮಾರಾಟ ಮಾಡಲಾಗದೇ, ಆದಾಯ ಗಳಿಸಲಾಗದೇ ಜೀವನ ನಡೆಸುವುದೇ ಕಷ್ಟವಾಗಿದೆ. ಆದ್ದರಿಂದ ಕುಲಕಸುಬುದಾರರು ಮಾರಾಟದ ಕಲೆಯನ್ನು ರೂಢಿಸಿಕೊಳ್ಳುವುದು ಅತ್ಯಗತ್ಯ.

೬. ಮುದ್ರೆ ಮತ್ತು ವ್ಯಾಪಾರಿ ಚಿನ್ಹೆ: ಆಧುನಿಕ ಅರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದಕರು ಸರಕುಸೇವೆಗಳ ಮಾರಾಟಕ್ಕಾಗಿ ಮುದ್ರೆ ಅಥವಾ ವ್ಯಾಪಾರಿ ಚಿನ್ಹೆ ಉಪಯೋಗಿಸುವುದು ಸಾಮಾನ್ಯ. ಇಂಥ ಮುದ್ರೆ ಮತ್ತು ಚಿನ್ಹೆಗಳನ್ನು ಬಳಕೆದಾರರೂ ಸ್ವಾಗತಿಸಿದ್ದಾರೆ. ಮುದ್ರೆಯಲ್ಲಿ ಹೆಸರು ಮತ್ತು ಚಿತ್ರಗಳ ಸಂಯೋಜನೆಯಿರಬಹುದು ಅಥವಾ ಅದರಲ್ಲಿ ಹೆಸರು ಮತ್ತು ಸಂಕೇತಗಳ ಸಂಯೋಜನೆ ಇರಬಹುದು. ಇದರಿಂದ ಆ ವಸ್ತುವು ಯಾವ ಉತ್ಪಾದಕನಿಗೆ ಸಂಬಂಧಿಸಿರುತ್ತದೆಂದು ಪ್ರತ್ಯೇಕಿಸಿ ಹೇಳಲು ಸಾಧ್ಯ. ಒಂದೇ ಬಗೆಯ ವಸ್ತುಗಳು ಮಾರುಕಟ್ಟೆಗೆ ಬಂದಾಗ ಅವುಗಳಿಗೆ ಇಂಥ ಬ್ರ್ಯಾಂಡ್ ಇರದಿದ್ದರೆ ಯಾವ ವಸ್ತುವು ಯಾವ ಉತ್ಪಾದಕನದು ಎಂಬುದು ತಿಳಿಯದು. ಬ್ರ್ಯಾಂಡ್‌ಗಳಿದ್ದರೆ ಉತ್ಪಾದಕನಾ ವಸ್ತುಗಳನ್ನು ಸುಲಭವಾಗಿ ಕಂಡುಹಿಡಿಯಬಹುದು. ಉದಾಹರಣೆಗೆ ಟಾಟಾ-ಮೋಟಾರುಗಳು, ಮಾರುತಿ ಕಾರುಗಳು, ಬಜಾಜ್ ಸ್ಕೂಟರ್ ಇತ್ಯಾದಿ. ಅಧುನಿಕ ಉತ್ಪಾದಕರೆಲ್ಲರೂ ಸಾಮಾನ್ಯವಾಗಿ ಮುದ್ರೆ ಮತ್ತು ವ್ಯಾಪಾರದ ಚಿನ್ಹೆಗಳನ್ನು ಹೊಂದಿರುತ್ತಾರೆ. ಇವುಗಳ ಕಾನೂನಿನ ಪ್ರಕಾರ ನೊಂದಾಯಿಸಿದಾಗ ಅದಕ್ಕೆ ಕಾನೂನು ರಕ್ಷಣೆ ಸಿಗುತ್ತದೆ. ಕಮ್ಮಾರರು, ಕುಂಬಾರರು, ಪತ್ತಾರರು, ನೇಕಾರರು, ಮೇದಾರರು, ಬಳೆಗಾರರು, ಚಮ್ಮಾರರು, ಕಲ್ಲುಕುಟಿಗರು ಇತ್ಯಾದಿ ಕುಲಕಸುದಾರರು ತಯಾರಿಸುವ ಸರಕುಗಳಿಗೆ ಯಾವುದೇ ಮುದ್ರೆಯಾಗಲಿ ಅಥವಾ ಚಿನ್ಹೆಯಾಗಲಿ ಇರುವುದಿಲ್ಲ, ಬಾಟಾ ಕಂಪನಿ ತಯಾರಿಸುವ ಸಲಕೆ, ಗುದ್ದಲಿಗೆ ಮುದ್ರೆ ಇರುತ್ತದೆ. ಆದರೆ ಕಮ್ಮಾರರು ತಯಾರಿಸುವ ಸಲಕೆ, ಗುದ್ದಲಿಗಳಿಗೆ ಯಾವುದೇ ಮುದ್ರೆ ಇರುವುದಿಲ್ಲ. ಟಾಟಾ ಕಂಪನಿ ತಯಾರಿಸುವ ಚಪ್ಪಲಿ, ಬೂಟುಗಳಿಗೆ ವ್ಯಾಪಾರಿ ಮುದ್ರೆ ಇರುತ್ತದೆ. ಆದರೆ ಚಮ್ಮಾರರು ತಯಾರಿಸುವ ಸರಕುಗಳಿಗೆ ಯಾವುದೇ ಮುದ್ರೆ ಇರುವುದಿಲ್ಲ. ಇದೆ ರೀತಿ ಎಲ್ಲಾ ಕುಲಕಸುಬುದಾರರು ತಯಾರು ಮಾಡುವ ಸರಕುಗಳಿಗೆ ಮುದ್ರೆಯಾಗಲಿ ಅಥವಾ ವ್ಯಾಪಾರಿ ಚಿನ್ಹೆಯಾಗಲಿ ಇರುವುದಿಲ್ಲ. ಸಾಮಾನ್ಯವಾಗಿ ಗ್ರಾಹಕರು ಮುದ್ರೆ ಇರುವ ವಸ್ತುಗಳನ್ನೇ ಕೊಳ್ಳುವುದು

ರೂಢಿಯಾಗಿತ್ತು. ಕೊಟ್ಟೂರು ಹತ್ತಿರವಿರುವ ರಾಂಪುರದಲ್ಲಿ ಉತ್ತಮ ರೇಷ್ಮೆ ಸೀರೆಗಳು ತಯಾರಾಗುತ್ತವೆ. ಆದರೆ ಅವುಗಳಿಗೆ ಯಾವುದೇ ಮುದ್ರೆ ಇಲ್ಲ. ಅಂತಹ ಸಂದರ್ಭದಲ್ಲಿ ನೇಕಾರರ ರೇಷ್ಮೆ ಸೀರೆಗಳನ್ನು ಗ್ರಾಹಕರು ಕೊಂಡುಕೊಳ್ಳುವುದು ಕಡಿಮೆ. ಅದೇ ಸೀರೆಯನ್ನು ಕೆ.ಎಸ್.ಐ.ಸಿ.ಯವರು ಮುದ್ರೆ ಹಾಕಿ ಮಾರಾಟ ಮಾಡಿದರೆ ಗ್ರಾಹಕರು ಯಾವುದೇ ತಕರಾರು ಇಲ್ಲದೆ ಕೊಳ್ಳುತ್ತಾರೆ. ಅಂದರೆ ಕುಲಕಸುಬುದಾರರ ಸರಕುಗಳಿಗೆ ಮುದ್ರೆಗಳನ್ನು ನೀಡುವುದು ಅಗತ್ಯ. ಇದರಿಂದ ವ್ಯಾಪಾರ ವಿಸ್ತರಣೆಗೊಂಡು ಕುಲಕಸುಬುದಾರರ ಆದಾಯವು ಹೆಚ್ಚಾಗುತ್ತದೆ.

೭. ಜಾಹಿರಾತು: ಸರಕುಗಳ ಮಾರಾಟದಲ್ಲಿ ವಿಕ್ರಯ ಕಲೆಯಷ್ಟೇ ಜಾಹಿರಾತಿಗೂ ಸಹ ಮಹತ್ವದ ಪಾತ್ರವಿದೆ. ಆಧುನಿಕ ಪ್ರಪಂಚ ಜಾಹಿರಾತು ಪ್ರಪಂಚವಾಗಿ ಮಾರ್ಪಾಟಾಗಿದೆ. ಉತ್ಪಾದಿಸ್ವಲ್ಪಟ್ಟ ಸರಕುಗಳು ಎಷ್ಟೇ ಉತ್ತಮವಾಗಿರಬಹುದು, ಅವು ಎಷ್ಟೇ ಉಪಯುಕ್ತವಾಗಿರಬಹುದು. ಆದರೆ ಅವು ಗ್ರಾಹಕರಿಗೆ ಗೊತ್ತಾಗದ ಹೊರತು ಮಾರಾಟವಾಗಲಾರವು. ಜಾಹಿರಾತು ಮೂಲಕ ಸರಕುಗಳ ಗುಣಮಟ್ಟ, ಉಪಯುಕ್ತತೆಗಳ ಬಗೆಗೆ ತಿಳಿಸಿ ಹೇಳಬಹುದು. ಜಾಹಿರಾತು ಏಕ ಕಾಲದಲ್ಲಿ ಅತ್ಯಧಿಕ ಸಂಖ್ಯೆಯ ಗ್ರಾಹಕರಿಗೆ ಸಂದೇಶವನ್ನು ತಲುಪಿಸುತ್ತದೆ. ಜಾಹಿರಾತು ಗ್ರಾಹಕರ ಗಮನ ಸೆಳೆದು ಸರಕಿನಲ್ಲಿ ಆಸಕ್ತಿ ಹುಟ್ಟಿಸುವುದು. ಗ್ರಾಹಕರ ಬಯಕೆಯನ್ನು ಜಾಗೃತಗೊಳಿಸುವುದು ಮತ್ತು ಸರಕುಗಳನ್ನು ಕೊಳ್ಳುವಂತೆ ಮಾಡುವುದು. ಜಾಹೀರಾತಿನಿಂದ ತಮ್ಮ ಸರಕುಗಳ ಹೊಸ ಮಾರುಕಟ್ಟೆ ದೊರಕಿಸಲು ಉತ್ಪಾದಕರಿಗೆ ಸಾಧ್ಯವಾಗುತ್ತದೆ, ಸರಕುಗಳ ಮಾರಾಟವು ಅಧಿಕವಾಗುತ್ತದೆ. ಇದರಿಂದ ಉತ್ಪಾದಕರಿಗೆ ಅಧಿಕ ಲಾಭವು ಲಭ್ಯವಾಗುತ್ತದೆ. ಅದ್ದರಿಂದ ಪ್ರತಿಯೊಬ್ಬ ಉತ್ಪಾದಕರು ಜಾಹಿರಾತಿನ ಮೊರೆ ಹೋಗುತ್ತಿದ್ದಾರೆ.

ಆದರೆ ಕುಲಕಸುಬುದಾರರಾದ ಮೇದಾರರು, ನೇಕಾರರು, ಕಮ್ಮಾರರು, ಕುಂಬಾರರು, ಚಮ್ಮಾರರು, ಬಳೆಗಾರರು, ಸುಣ್ಣಗಾರರು, ಕಲ್ಲುಕುಟಿಗರು, ಪತ್ತಾರರು, ಶಿಲ್ಪಿಗಳು ಇತ್ಯಾದಿ ಜನಾಂಗದವರು ಜಾಹಿರಾತು ಮಾಧ್ಯಮವನ್ನು ಬಳಸುತ್ತಿಲ್ಲ. ಕಾರಣ ಜಾಹಿರಾತು ವೆಚ್ಚವನ್ನು ಭರಿಸುವ ಶಕ್ತಿ ಅವರಿಗಿಲ್ಲ. ಇದರಿಂದಾಗಿ ಕುಲಕಸುಬುದರರು ತಯಾರು ಮಾಡುವ ಸರಕುಗಳು ಜನರಿಗೆ ಪರಿಚಯವಾಗದೇ ಬರೀ ಸ್ಥಳೀಯ ಮಾರುಕಟ್ಟೆಯನ್ನೇ ನೆಚ್ಚಿಕೊಂಡಿದ್ದಾರೆ. ಇದರಿಂದ ಅವರ ಮಾರಾಟದ ಪ್ರಮಾಣ ಕಡಿಮೆ, ಆದಾಯವು ಸಹ ಕಡಿಮೆ ಪ್ರಸ್ತುತ ಕೆಲವು ಮಧ್ಯವರ್ತಿಗಳು ಕುಲಸುಬುದಾರರ ಸರಕುಗಳನ್ನು ಕಡಿಮೆ ಬೆಲೆಗೆ ಕೊಂಡು ತಮ್ಮದೇ ಮುದ್ರೆನಾಮವನ್ನು ಅದಕ್ಕಿರಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭಗಳಿಸುತ್ತಿದ್ದಾರೆ. ಆದ್ದರಿಂದ ಕುಲಕಸುಬುದಾರರ ಪರವಾಗಿ ಸರಕಾರವು ಅವರ ಸರಕುಗಳಿಗೆ ಸಂಬಂಧಿಸಿದಂತೆ ಜಾಹಿರಾತು ನೀಡಿದರೇ ಸರಕಾರವೇ ಅವರ ಸರಕುಗಳನ್ನು ಕೊಂಡು ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಿದರೇ ಕುಲಕಸುಬುದಾರರ ಬದುಕು ಹಸನಾಗುವುದರಲ್ಲಿ ಸಂಶಯವಿಲ್ಲ.

೮. ಪೈಪೋಟಿ: ಇಂದು ಮಾರುಕಟ್ಟೆಯಲ್ಲಿ ಪ್ರತಿಯೊಂದು ವಸ್ತುವಿಗೂ ಬಲವಾದ ಪೈಪೋಟಿ ಕಂಡುಬರುತ್ತಿದೆ. ಇಂದಿನ ಮಾರುಕಟ್ಟೆಯು ಅತ್ಯಂತ ಪೈಪೋಟಿಯುತವಾದದ್ದು. ಮಾರುಕಟ್ಟೆಯಾಗಿದೆ. ಪ್ರತಿಯೊಂದು ವಸ್ತುವಿಗೂ ಅನೇಕ ಪರ್ಯಾಯ ಸ್ಪರ್ಧಾತ್ಮಕ ವಸ್ತುಗಳು ಬಲವಾದ ಪೈಪೋಟಿ ಒಡ್ಡಿರುವುದು ಕಂಡುಬರುತ್ತದೆ. ಆದ್ದರಿಂದ ಉತ್ಪಾದಕನು ತನ್ನ ವಸ್ತುಗಳು ತನ್ನ ಪ್ರತಿಸ್ಪರ್ಧಿಗಳ ವಸ್ತುಗಳಿಗಿಂತಲೂ ಶ್ರೇಷ್ಠವಾದವುಗಳೆಂದೂ ತಿಳಿಸಿ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ. ಈ ದಿಸೆಯಲ್ಲಿ ಕುಲಕಸುಬುದಾರರು ತಯಾರಿಸುವ ವಸ್ತುಗಳಿಗೆ ಉದ್ದಿಮೆಗಳ ಸರಕುಗಳು ತೀವ್ರ ಪೈಪೋಟಿ ನೀಡುತ್ತಿವೆ. ಅಧುನಿಕ ಯಂತ್ರೋಪಕರಣಗಳ ಸಹಾಯದಿಂದ ಉದ್ದಿಮೆದಾರರು ತಯಾರಿಸಿದ ಸರಕುಗಳು ಸಹಜವಾಗಿ ಉತ್ತಮ ಗುಣಮಟ್ಟದ್ದು, ಬಾಳಿಕೆ ಬರುವಂತದ್ದು, ಆಕರ್ಷಕವಾದದ್ದು ಹಾಗೂ ಕಡಿಮೆ ಬೆಲೆಯುಳ್ಳದ್ದು ಆಗಿರುತ್ತದೆ. ಅದರಿಂದಾಗಿ ಗ್ರಾಹಕರು ಸಾಮಾನ್ಯವಾಗಿ ದೊಡ್ಡ ಉದ್ದಿಮೆದಾರರ ಸರಕುಗಳನ್ನೇ ಕೊಳ್ಳುತ್ತಾರೆ. ಕುಲಕಸುಬುದಾರರ ವಸ್ತುಗಳಿಗೆ ದಿನದಿಂದ ದಿನಕ್ಕೆ ಬೇಡಿಕೆ ಕಡಿಮೆಯಾಗುತ್ತಿದೆ. ಸಾಂಪ್ರದಾಯಿಕ ವೃತ್ತಿದಾರರಾದ ಕುಂಬಾರರು, ಕಮ್ಮಾರರು, ಪತ್ತಾರರು, ಮೇದಾರರು ಕಲ್ಲುಕಟಿಗರು, ನೇಕಾರರು ಬಳೆಗಾರರು ತಯಾರಿಸುವ ಸಾಂಪ್ರದಾಯಿಕ ಸರಕುಗಳಿಗೆ ಬೇಡಿಕೆ ಕಡಿಮೆಯಾಗುತ್ತಿದೆ. ಇದರಿಂದ ಕುಲಕಸುಬುದಾರರು ಉದಾ: ಕಮ್ಮಾರರು, ಬಡಗಿಗಳು, ಕುಂಬಾರರು, ಚಮ್ಮಾರರು, ನೇಕಾರರು, ಕಲ್ಲುಕುಟಿಗರು ಮುಂತಾದವರು ದೊಡ್ಡ ಕಂಪನಿಗಳಲ್ಲಿ ಕೆಲಸಗಾರರಾಗಿ ದಿನಗೂಲಿಗಾಗಿ ಕೆಲಸ ಮಾಡುವ ಪರಿಸ್ಥಿತಿ ಒದಗಿಬಂದಿದೆ.

೯. ಮಾರಾಟ ಮಳಿಗೆಗಳು: ಉತ್ಪಾದಕರು ತಯಾರಿಸಿದ ಸರಕುಗಳನ್ನು ಮಾರುಕಟ್ಟೆಯ ನಿರ್ದಿಷ್ಟ ಮಳಿಗೆಗಳಲ್ಲಿ ಮಾರಾಟ ಮಾಡುವುದು ಪ್ರಮುಖ ಕಾರ್ಯ. ಇದರಿಂದ ಗ್ರಾಹಕರು ವಿವಿಧ ಕಡೆಗಳಿಂದ ಬಂದು ಅಲ್ಲಿ ಸರಕುಗಳನ್ನು ಕೊಂಡುಕೊಳ್ಳುತ್ತಾರೆ. ಇದು ಮಾರಾಟಕ್ಕೆ ಹಾಗೂ ನಿರಂತರ ಆದಾಯ ಗಳಿಕೆಗೆ ಅನಿವಾರ್ಯ. ಆದರೆ ಕುಲಕಸುಬುದಾರರು ತಾವು ತಯಾರಿಸಿದ ಸರಕುಗಳನ್ನು ಮಾರಾಟ ಮಾಡಲು ಪ್ರತ್ಯೇಕ ಹಾಗೂ ನಿರ್ದಿಷ್ಟಪಡಿಸಿದ ಮಾರಾಟ ಮಳಿಗೆಗಳಿರುವುದಿಲ್ಲ. ಕುಂಬಾರರು ರಸ್ಥೆ ಬದಿಗಳಲ್ಲಿ ಕುಡಿಕೆ–ಮಡಕೆಗಳನ್ನು ಇಟ್ಟು ಮಾರಾಟ ಮಾಡುತ್ತಾರೆ. ಮೇದಾರರು, ಕಮ್ಮಾರರು ಸಹ ತಾವು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ನಿರ್ದಿಷ್ಟ ಮಳಿಗೆಗಳಿಲ್ಲ. ಚಮ್ಮಾರ, ಕಲ್ಲುಕುಟಿಗರು ರಸ್ತೆ ಬದಿಗಳಲ್ಲಿ ಸರಕುಗಳನ್ನು ಮಾರುತ್ತಾರೆ. ಇವು ಸ್ಥಿರವಾದ ಮಾರಾಟ ಸ್ಥಳಗಳಿಲ್ಲ. ಇವು ಬದಲಾವಣೆಯಾಗುತ್ತಿರುತ್ತವೆ. ಮುನಿಸಿಪಾಲಿಟಿ ಅಧಿಕಾರಿಗಳು, ಪೋಲೀಸರು ವಿವಿಧ ಕಾರಣಗಳಿಗಾಗಿ ಕುಲಕಸುಬುದಾರರು ತಮ್ಮ ಸರಕುಗಳನ್ನು ಮಾರಾಟ ಮಾಡಲು ರಸ್ತೆಗಳ ಬದಿಯಲ್ಲಿ ಅಡ್ಡಿಯುಂಟು ಮಾಡುತ್ತಾರೆ. ಬಟ್ಟೆ ನೇಯುವ ನೇಕಾರರು ತಯಾರು ಮಾಡಿದ ಬಟ್ಟೆಯನ್ನು ನೇರವಾಗಿ ಮಧ್ಯವರ್ತಿಗಳಿಗೆ

ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ಕುಲಕಸುಬುದಾರರಿಗೆ ತಮ್ಮ ಸರಕು-ಸೇವೆಗಳನ್ನು ಮಾರಾಟ ಮಾಡಲು ಪ್ರತ್ಯೇಕ ಮಳಿಗೆಗಳು ಇಲ್ಲದಿರುವುದು. ಮತ್ತು ವ್ಯಾಪಾರದಾರರು ಇವರ ಸರಕುಗಳನ್ನು ತಮ್ಮ ಮಳಿಗೆಗಳಲ್ಲಿ ಇಟ್ಟು ಮಾರಾಟ ಮಾಡಲು ಅವಕಾಶ ಕೊಡುವುದಿಲ್ಲ. ಇದರಿಂದಾಗಿ ವಿವಿಧ ರೀತಿಯ ಸರಕುಗಳನ್ನು ತಯಾರಿಸುವ ಕುಲಕಸುಬುಗಳು ಮಾರಾಟದ ವ್ಯವಸ್ಥೆ ಇಲ್ಲದೆ ಮೂಲೆಗುಂಪಾಗುತ್ತಿವೆ.

ಕುಲಕಸುಬುದಾರರು ಸರಕುಗಳನ್ನು ತಯಾರಿಸಲು ಕಚ್ಚಾವಸ್ತುಗಳನ್ನು ಕೊಂಡುಕೊಳ್ಳಲು, ತಯಾರಿಸಿದ ಸರಕುಗಳನ್ನು ಮಾರಾಟ ಮಾಡಲು ಹಣಕಾಸು ಬೇಕು. ಅದರೆ ಈ ಸಮುದಾಯಗಳಿಗೆ ಹಣಕಾಸಿನ ಸಂಸ್ಥೆಗಳು ಹಣಕಾಸು ನೀಡಲು ಮುಂದೆ ಬರುವುದಿಲ್ಲ. ಕೊಟ್ಟ ಸಾಲಕ್ಕೆ ಭರವಸೆ ಅಥವಾ ಹಿಂದಿರುಗಿ ಬರುವ ಸಾಧ್ಯತೆಗಳು ಕಡಿಮೆ ಎಂದು ಬ್ಯಾಂಕುಗಳು ಭಾವಿಸಿಕೊಂಡಿವೆ. ಹೀಗಾಗಿ ಕಸುಬುದಾರರು ತಮಗೆ ಅವಶ್ಯಕತೆ ಇರುವ ಹಣಕಾಸನ್ನು ಲೇವಾದೇವಿ ವ್ಯವಹಾರದಾರರಿಂದ, ಸ್ಥಳೀಯ ಹಣವುಳ್ಳವರಿಂದ ಹೆಚ್ಚಿನ ಬಡ್ಡಿಗೆ ಪಡೆದುಕೊಳ್ಳಬೇಕಾಗುತ್ತದೆ. ತಂದ ಸಾಲವನ್ನು ಸರಿಯಾದ ಸಮಯಕ್ಕೆ ಹಿಂತಿರುಗಿಸಲು ಸಾಧ್ಯವಾಗದ ಸನ್ನಿವೇಶದಲ್ಲಿ ಕುಲಕಸುಬುದಾರರು ಬದುಕುತ್ತಿದ್ದಾರೆ.

ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ತಕ್ಕಂತೆ ಆಧುನಿಕ ಉದ್ದಿಮೆಗಳು ಸರಕುಗಳನ್ನು ವೈವಿಧ್ಯಮಯವಾಗಿ, ಆಕರ್ಷಕವಾಗಿ ತಯಾರಿಸಿ ಉತ್ತಮ ಮಾರಾಟ ಮಳಿಗೆಗಳಲ್ಲಿ ಇಟ್ಟು ಮಾರಾಟ ಮಾಡುತ್ತಿದ್ದಾರೆ. ಆದರೆ ಕುಲಕಸುಬುದಾರರು ತಯಾರಿಸುವ ಸರಕುಗಳಿಗೆ ವೈವಿದ್ಯತೆ ಹಾಗೂ ತಾಳಿಕೆ ಬಾಳಿಕೆ ಆಕರ್ಷಕ ಶಕ್ತಿ ಇಲ್ಲದಿರುವುದರಿಂದ ಇವರ ಸರಕುಗಳ ಬೇಡಿಕೆ ಕಡಿಮೆಯಾಗುತ್ತಿದೆ. ಉದ್ದಿಮೆಗಳ ಪೈಪೋಟಿಯಿಂದಾಗಿ ನೇಕಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಮೇದಾರಿಕೆ, ಸುಣ್ಣಗಾರಿಕೆ, ಗಾಣಗಾರಿಕೆ, ಮಡಿವಾಳಗಾರಿಕೆ, ಬಣ್ಣಗಾರಿಕೆ ಮುಂತಾದ ಹಲವಾರು ವೃತ್ತಿಗಳು ನೆಲಕಚ್ಚಿವೆ, ಮತ್ತೆ ಕೆಲವು ಅಳಿವಿನ ಅಂಚಿನಲ್ಲಿವೆ.

ಕುಲಕಸುಬುದಾರರು ವರ್ತಮಾನ ಮಾರುಕಟ್ಟೆಯಲ್ಲಿ ತಮ್ಮ ಉಳಿವು ಕಂಡುಕೊಳ್ಳಬೇಕಾದರೆ ಹಲವಾರು ಪ್ರಮುಖ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಅವುಗಳೆಂದರೆ

* ಮಾರುಕಟ್ಟೆಯ ಸಮಾಚಾರ ಮತ್ತು ಸಂಶೋಧನೆಗಳನ್ನು ವ್ಯಾಪಕವಾಗಿ ಬಳಸಿಕೊಳ್ಳಬೇಕು.
* ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆಯನ್ನು ಬಳಸಿಕೊಳ್ಳುವುದು.
* ಸರಕುಗಳ ಪ್ರಮಾಣೀಕರಣ ಮತ್ತು ವರ್ಗಿಕರಣ ಮಾಡಿಕೊಳ್ಳುವುದು.
* ಕಚ್ಚಾವಸ್ತು ಮತ್ತು ಸಿದ್ಧವಸ್ತುಗಳ ಸಂಗ್ರಹಣೆಗೆ ವ್ಯವಸ್ಥೆ ಮಾಡಿಕೊಳ್ಳುವುದು.
* ಸರಕುಗಳನ್ನು ಮಾರಾಟ ಮಾಡುವ ಉತ್ತಮ ಮಾರಾಟ ಕಲೆಯನ್ನು ರೂಢಿಸಿಕೊಳ್ಳುವುದು.

* ತಮ್ಮ ಸರಕುಗಳಿಗೆ ಮುದ್ರೆ ಮತ್ತು ಚಿನ್ಹೆಗಳನ್ನು ಬಳಸುವುದು.
* ಉತ್ತಮ ಗುಣಮಟ್ಟದ ಸರಕುಗಳನ್ನು ತಯಾರಿಸಿ ಜಾಗತಿಕ ಪೈಪೋಟಿಯನ್ನು ಎದುರಿಸುವುದು.
* ತಮ್ಮ ಸರಕುಗಳಿಗೆ ಜಾಹಿರಾತು ನೀಡುವುದರ ಮೂಲಕ ಬೇಡಿಕೆಯನ್ನು ನಿರ್ಮಾಣ ಮಾಡಿಕೊಳ್ಳುವುದು.
* ಮಾರಾಟ ಸಂಘಗಳನ್ನು ಸ್ಥಾಪಿಸಿಕೊಳ್ಳುವುದು ಹಾಗೂ ಮಾರಾಟಮಳಿಗೆ ವ್ಯವಸ್ಥೆ ಮಾಡಿಕೊಳ್ಳುವುದು.
* ಆಧುನಿಕ ಮಾರುಕಟ್ಟೆಯ ವಿಧಿ ವಿಧಾನಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದು.
* ಕುಲಕಸುಬುದಾರರ ಸರಕುಗಳಿಗೆ ಸರ್ಕಾರವು ತಾಲೂಕು, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ನಿರಂತರವಾಗಿ ಏರ್ಪಡಿಸುವುದು.

ಈ ಮೇಲಿನ ಎಲ್ಲಾ ವಿಧಾನಗಳನ್ನು ಕುಲಕಸುಬುದಾರರು ಅಳವಡಿಸಿ ಅನುಸರಿಸಿಕೊಂಡು ಹೋಗುವುದಾದರೆ ವರ್ತಮಾನ ಕಾಲದ ಪೈಪೋಟಿಯ ಮಾರುಕಟ್ಟೆಯಲ್ಲಿ ಕುಲಕಸುಬುಗಳನ್ನು ಅವರು ತಯಾರಿಸುವ ಸರಕು-ಸೇವೆಗಳನ್ನು ಉಳಿಸಿ ಬೆಳಸಿಕೊಳ್ಳಬಹುದಾಗಿದೆ.

ಅಡಿಟಿಪ್ಪಣಿಗಳು

೧. ಜಿ.ಶಂ.ಪರಮಶಿವಯ್ಯ, ಜನಪದ ಕಾವ್ಯಪ್ರಕಾರಗಳು, ಪುಟ-೩.

೨. ಅದೇ, ಪುಟ-೬

೩. ಅದೇ, ಪುಟ-೯.

೪. ಅದೇ, ಪುಟ-೯.

೫. ಶಾಂತಾದೇವಿ ಮಾಳವಾಡ, ಜಾನಪದ ಸಾಹಿತ್ಯದಲ್ಲಿ ಶರಣರು, ಪುಟ-೧೭.

೬. ಆರ್.ಎನ್. ನಾಯಕ, ಜಾನಪದ ಸಿಂಹಾವಲೋಕನ, ಪುಟ-೧

೭. ದೇ. ಜವರೇಗೌಡ (ಸಂ), ಜಾನಪದ ಅಧ್ಯಯನ, ಪುಟ-೯.

೮. ಬಸವರಾಜ ಸಬರದ, ಹೊಸ ದಿಕ್ಕು, ಪುಟ-೧೧.

೯. ಜಿ.ಶಂ.ಪರಮಶಿವಯ್ಯ, ಜನಪದ ಕಾವ್ಯ ಪ್ರಕಾರಗಳು, ಪುಟ-೧೦.

೧೦. ಅದೇ, ಪುಟ-೧೧.

೧೧. ಅದೇ, ಪುಟ-೧೨.

೧೨. ಅಂಬಳಿಕೆ ಹಿರಿಯಣ್ಣ, ಜನಪದ ಕೆಲವು ವಿಚಾರಗಳು,ಪುಟ-೧೯

೧೩. ಅದೇ, ಪುಟ-೨೦.

೧೪. ಶಾಂತಾದೇವಿ ಮಾಳವಾಡ, ಜಾನಪದ ಸಾಹಿತ್ಯದಲ್ಲಿ ಶರಣರು, ಪುಟ–೧೭.

೧೫. ಅದೇ, ಪುಟ–೩೧.

೧೬. ಜೈನಕಥಾ ಸಾಹಿತ್ಯ ಮತ್ತು ಜಾನಪದ, ಪುಟ–೮.

೧೭. ಆರ್.ವಿ.ಎಸ್. ಸುಂದರಂ, ಜನಪದ ಸಾಹಿತ್ಯದ ಮೂಲಭೂತ ತತ್ವಗಳು, ಪುಟ–೪೯.

೧೮. ಅದೇ, ಪುಟ–೫೦

೧೯. ಅದೇ, ಪುಟ–೫೫

೨೦. Krober, Anthropology, PP-281-84.

೨೧. Ibid, PP-288-282.

೨೨. ಎಂ. ನಂಜಮಣ್ಣಿ, ಭಾರತೀಯ ಸಾಮಾಜಿಕ ಸಂಸ್ಥೆಗಳು, ಪುಟ–೯೯

೨೩. ಅದೇ, ಪುಟ–೯೯

೨೪. ಅದೇ, ಪುಟ–೧೦೦

೨೫. ಸಿ.ಕೆ. ನಾವಲಿಗಿ, ಜಾನಪದ ಸ್ಪಂದನ, ಪುಟ–೬೧

೨೬. ಅದೇ, ಪುಟ–೬೧

೨೭. ಅದೇ, ಪುಟ–೬೨

೨೮. ಎಂ. ನಂಜಮ್ಮಣ್ಣಿ, ಭಾರತೀಯ ಸಾಮಾಜಿಕ ಸಂಸ್ಥೆಗಳು, ಪುಟ–೬೨

೨೯. ಅದೇ, ಪುಟ–೯೨

೩೦. ಅದೇ, ಪುಟ–೯೨

೩೧. ಕೆ. ಮೋಹನ ಕೃಷ್ಣ ರೈ, ಪ್ರಭುತ್ವ ಮತ್ತು ಜನತೆ, ಪುಟ–೬೧

೩೨. ಅದೇ, ಪುಟ–೬೧

೩೩. ಅದೇ, ಪುಟ–೬೪

೩೪. ಅದೇ, ಪುಟ–೬೫

೩೫. ಅದೇ, ಪುಟ–೬೫

೩೬. ಅದೇ, ಪುಟ–೬೬

೩೭. ಅದೇ, ಪುಟ–೬೬

೩೮. ಎ. ಅಪ್ಪಾದೊರೈ, ಎಕನಾಮಿಕ್ ಕಂಡಿಷನ್ಸ್ ಇನ್‌ಸದರ್ನ್ ಇಂಡಿಯಾ ಕ್ರಿ.ಶ. ೧೦೦೦–೧೫೦೦ ಸಂಪುಟ.೧. ಪುಟ–೨೫

೩೯. ಎಸ್. ಗುರುರಾಜಾಚಾರ್, ಸಬ್ ಆಸ್ಪಕ್ಟ್ಸ್ ಆಫ್ ಇಕನಾಮಿಕ್ ಅಂಡ್ ಸೋಶಿಯಲ್ ಲೈಫ್ ಇನ್ ಕರ್ನಾಟಕ, ಪುಟ-೧೮೯

೪೦. ಎ.ಎಸ್. ಆಲ್ಟೇಕರ್, ರಾಷ್ಟ್ರಕೂಟಾಸ್ ಆಂಡ್ ದೇರ್ ಟೈಮ್ಸ್, ಪುಟ-೧೦೩

೪೧. ಬಿ.ಆರ್. ಹಿರೇಮಠ, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪುಟ-೧೦೩

೪೨. ಅದೇ, ಪುಟ-೧೦೫

೪೩. ಎ.ಎಸ್. ಆಲ್ಟೇಕರ್, ಪೂರ್ವೋಕ್ತ ಪುಟ-೨೫೫.

೪೪. ಎಸ್. ಗುರುರಾಜಾಚಾರ್, ಪೂರ್ವೋಕ್ತ, ಪುಟ-೭೯

೪೫. ಎ.ಎಸ್. ಆಲ್ಟೇಕರ್, ಪೂರ್ವೋಕ್ತ ಪುಟ-೨೫೫.

೪೬. ಕೆ.ಎಸ್. ಕುಮಾರಸ್ವಾಮಿ, ಪ್ರಾಚೀನ ಕರ್ನಾಟಕದ ಶಿಲ್ಪಾಚಾರ್ಯರು, ಪುಟ-೭೨

೪೭. ಅದೇ. ಪುಟ-೭೩.

೪೮. ಅದೇ, ಪುಟ-೭೩.

೪೯. ಅದೇ, ಪುಟ-೭೪.

೫೦. ಅದೇ ಪುಟ-೭೪.

೫೧. ಬಿ.ಆರ್. ಹಿರೇಮಠ ಪೂರ್ವೋಕ್ತ ಪುಟ-೧೦೩-೧೧೨

೫೨. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪುಟ-೩೫೬

೫೩. ಅದೇ, ಪುಟ-೩೫೨

೫೪. ಅದೇ, ಪುಟ-೩೫೪

೫೫. ಬಸವರಾಜ ಕುಂಚನೂರು, ಕುಂಬಾರ ಜನಾಂಗ, ಪುಟ-೭೧

೫೬. ಅದೇ ಪುಟ-೭೧

೫೭. ಅದೇ ಪುಟ-೮೬

೫೮. ದೇವೇಂದ್ರಕುಮಾರ ಹಕಾರಿ, ಸಂಧ್ಯಾರೆಡ್ಡಿ(ಸಂ) ಗ್ರಾಮೀಣ ವೃತ್ತಿಗಳು, ಪುಟ-೧೫.

೫೯. ಜಾನಪದ ಸಾಹಿತ್ಯ ದರ್ಶನ- ಭಾಗ-೨ ಪುಟ. ೧೭೬

೬೦. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೩೫೪

೬೧. ಜಾನಪದ ಸಾಹಿತ್ಯ ದರ್ಶನ ಭಾಗ-೭, ಪುಟ-೧೭೮

೬೨. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೩೫೬

೬೩. ಜಾನಪದ ಸಾಹಿತ್ಯ ದರ್ಶನ ಭಾಗ-೭, ಪುಟ-೧೭೮

೬೪. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೩೫೬

೬೫. ಜಾನಪದ ಸಾಹಿತ್ಯ ದರ್ಶನ : ಭಾಗ-೭, ಪುಟ-೧೬೬.

೬೬. ಅದೇ ಪುಟ-೩೫೬

೬೭. ಅದೇ ಪುಟ-೧೬೬.

೬೮. ಪ್ರವಾಸಿ ಕಂಡ ಇಂಡಿಯಾ, ಸಂಪುಟ-೭, ಪುಟ-೯೪.

೬೯. ಕನ್ನಡ ನಿಘಂಟು, ಸಂ-೧, ಪುಟ-೧೫೪.

೭೦. ಎಸ್.ಎಂ. ವೃಷಬೇಂದ್ರಸ್ವಾಮಿ, ಜನಪದ ದರ್ಶನ, ಪುಟ-೧೫೬

೭೧. ಕೆ.ಎಸ್. ಕುಮಾರಸ್ವಾಮಿ, ಪ್ರಾಚೀನ ಕಾಲದಲ್ಲಿ ಶಿಲ್ಪಾಚಾರಿಯರು ಪುಟ-೭೬

೭೨. ಗ್ರಾಮೀಣ ವೃತ್ತಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಪುಟ-೧೯೮

೭೩. ಅದೇ ಪುಟ ೧೯೯

೭೪. ಅದೇ ಪುಟ ೧೯೯

೭೫. ಅದೇ ಪುಟ ೧೯೯

೭೬. ಅದೇ ಪುಟ ೧೯೯

೭೭. ಅದೇ ಪುಟ ೨೦೦

೭೮. ಎಲ್. ಬಸವರಾಜು (ಸಂ.) ಸರ್ವಜ್ಞನ ವಚನಗಳು, ಪುಟ-೧೬೦

೭೯. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨ ಪುಟ.೨೨೨.

೮೦. ಅದೇ, ಪುಟ-೨೨೨.

೮೧. ಅದೇ, ಪುಟ-೨೨೩.

೮೨. ಬಿ. ಷೇಕ್ ಅಲಿ, ಅ. ಸುಂದರ (ಸಂ) ಕರ್ನಾಟಕ ಚರಿತ್ರೆ -೨.

೮೩. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨ ಪುಟ.೬

೮೪. ಅದೇ ಪುಟ-೬

೮೫. ಅದೇ ಪುಟ-೬

೮೬. ಅದೇ ಪುಟ-೧೨

೮೭. ಶ್ರೀಕಂಠಯ್ಯ ಕೆ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪುಟ-೨೫೪

೮೮. ಅದೇ ಪುಟ-೨೫೫

೮೯. ಅದೇ ಪುಟ-೨೫೫

೯೦. ಕೆ.ಎಂ.ಮೈತ್ರಿ, ಬುಡುಕಟ್ಟು ಕುಲಕಸುಬುಗಳು ಪುಟ-೧೮೨

೯೧. ಅದೇ ಪುಟ-೧೮೩

೯೨. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೧೬೩

೯೩. ಅದೇ ಪುಟ-೧೬೪

೯೪. ಸಿ.ಕೆ. ನಾವಲಗಿ, ಜಾನಪದ ಸ್ಪಂದನ ಪುಟ-೧೦೭

೯೫. ಅದೇ ಪುಟ-೧೦೭

೯೬. ಅದೇ ಪುಟ-೧೦೮

೯೭. ಸಿದ್ಧಯ್ಯ ಪುರಾಣಿಕ, ಶರಣ ಚರಿತಾಮೃತ. ಪುಟ-೫೫೧

೯೮. ಅದೇ ಪುಟ-೫೫೨

೯೯. Suryanath U. Kamath, Gazatteer of India Karnataka state Bangalore Rural district, 1.153.

೧೦೦. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨ ಪುಟ-೨೮೭.

೧೦೧. ಅದೇ, ಪುಟ-೨೮೮.

೧೦೨. ಪಂಚತಂತ್ರ ಪುಟ-(೨೮೨-೨೩)

೧೦೩. ಬಸವಣ್ಣನ ವಚನ -೩೦೯

೧೦೪. ಬಸವಣ್ಣನ ವಚನ-೪

೧೦೫. ಮೊಳಿಗೆ ಮಾರಯ್ಯ (೭೨-೨೮೫)

೧೦೬. ನಾಗಕುಮಾರ ಚರಿತೆ (೯-೮೭)

೧೦೭. ಧರ್ಮಾಮೃತ (೩-೭೩)

೧೦೮. ಪಂಪಭಾರತ (೧೦-೧೦೪)

೧೦೯. ನೇಮಿಪು (೬-೧೪೮)

೧೧೦. ಪಂಪ ಭಾರತ (೩-೩೦)

೧೧೧. ಪಂಪರಾಮಾಯಣ (೭-೫೭)

೧೧೨. ಜಗನ್ನಾಥ ವಿಜಯ (೯-೧೪೮)

೧೧೩. ಪುರಂದರ ದಾಸರ ಕೀರ್ತನೆಗಳು (೨.೧೨-೩)

೧೧೪. ಸಿ.ಕೆ.ನಾವಲಗಿ, ಜಾನಪದ ಸ್ಪಂದನ, ಪುಟ-೬೬

೧೧೫. ಜಾನಪದ ಸಾಹಿತ್ಯ ದರ್ಶನ:(ಸಂ) ಎಸ್.ಎಂ. ವೃಷಭೇಂದ್ರ ಸ್ವಾಮಿ, ಪುಟ-೨೩೭

೧೧೬. ಅದೇ ಪುಟ-೨೩೭

೧೧೭. ಅದೇ ಪುಟ-೨೩೮

೧೧೮. ಅದೇ ಪುಟ-೨೩೮

೧೧೯. ಸಿ.ಕೆ. ನಾವಲಗಿ, ಜಾನಪದ ಸ್ಪಂದನ: ೧೯೮೯ ಪುಟ-೬೯

೧೨೦. ಗ್ಯಾಜೆಟಿಯರ್ ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು ಪುಟ-೧೯೦

೧೨೧. ಜಾನಪದ ಸಾಹಿತ್ಯ ದರ್ಶನ, ಪುಟ-೨೪೧

೧೨೨. ಅದೇ ಪುಟ-೨೪೧.

೧೨೩. ಅದೇ ಪುಟ-೨೪೧.

೧೨೪. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ-೩೬೦

೧೨೫. ಹೂಗಾರ ಸಮಾಜ ವ್ಹಿ. ಜಿ. ಪೂಜಾರ ಪುಟ-೧

೧೨೬. ಇಂಡಿಯನ್ ಆಂಟಿಕ್ವರಿ ಪುಟ-೫೯-೬೦

೧೨೭. ಹೂಗಾರ ಸಮಾಜ, ವ್ಹಿ.ಜಿ. ಪೂಜಾರ. ಪುಟ-೮

೧೨೮. ಬಸವ ಪುರಾಣ ಸಂಧಿ-೨೧, ಪದ್ಯ-೩೬.

೧೨೯. ಶ್ರೀ ಗುರುವರ್ಯ ಹೂಗಾರ ಚರಿತಾಮೃತ-ಪಂ. ಶಂಕರಗುರೂಜಿ ಪುಟ-೧೪.

೧೩೦. ಅದೇ ಪುಟ-೨೪೩

೧೩೧. ಮಳಲಿ ವಸಂತಕುಮಾರ, ಕರ್ನಾಟಕ ಜನಪದ ವೈದ್ಯ, ಪುಟ-೫೮

೧೩೨. ರಂಗೇಗೌಡ ಸಿ.ಆರ್, ಮತ್ತು ಗುರುದೇವ, ಜನಪದ ಸುಲಭ ಚಿಕಿತ್ಸೆ, ಪುಟ-೧೪೦

೧೩೩. ರಾಮಲಿಂಗಯ್ಯ ಉಪ್ಪಿನಕೆರೆ, ವೈದ್ಯಕೀಯ ನಂಬಿಕೆಗಳ ವಿಶ್ಲೇಷಣೆ, ಪುಟ-೨೪೦

೧೩೪. ವೆಣ್ಮತಿಯನ್ ಜಿ.ಪಿ, ಸಿದ್ಧವೈದ್ಯ, ಪುಟ-೧೨೬, ೧೯೯೩.

೧೩೫. ಕನ್ನಡ ನಿಘಂಟು ಸಂ.೩ ಪುಟ-೩೩೮೧

೧೩೬. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ-೩೬೦

೧೩೭. ಸಿ.ಕೆ.ನಾವಲಗಿ, ಜಾನಪದ ಸ್ಪಂದನ.

೧೩೮. ಜಾನಪದ ಸಾಹಿತ್ಯ ದರ್ಶನ-ಭಾಗ-೨, ೧೯೮೨ ಪುಟ-೪೪

೧೩೯. ಅದೇ ಪುಟ-೪೪

೧೪೦. ಅದೇ ಪುಟ-೪೫

೧೪೧. ಅದೇ ಪುಟ-೪೫

೧೪೨. ಎಚ್ಚಾರ್ಕೆ, ವ್ಯವಹಾರಿಕ ಅರ್ಥಶಾಸ್ತ್ರ, ಪುಟ-೧೨೦

೧೪೩. ಅದೇ ಪುಟ-೧೨೦

೧೪೪. ಎಂ.ಗುಪ್ತ, ವ್ಯವಹಾರಿಕ ಅರ್ಥಶಾಸ್ತ್ರ, ಪುಟ-೧೩೯

೧೪೫. ಅದೇ. ಪುಟ-೧೩೯

೧೪೬. ಅದೇ. ಪುಟ-೧೪೦

೧೪೭. ಎಂ.ವಿ.ರಾವ್.ಮಾರಾಟಕಾರ್ಯಗಳು, ಪುಟ-೧೫

೧೪೮. ಅದೇ, ಪುಟ-೧೬

೧೪೯. ಕೆ.ಡಿ.ಬಸವಾ, ಅಧುನಿಕ ವಿಕ್ರಯಶಾಸ್ತ್ರ, ಪುಟ-೨.೫

೧೫೦. ಅದೇ, ಪುಟ-೨.೫

೧೫೧. ಅದೇ, ಪುಟ-೨.೫

೧೫೨. ಕೆ.ಡಿ.ಬಸವಾ, ಮಾರುಕಟ್ಟೆ ನಿರ್ವಹಣೆ, ಪುಟ-೨೭

ಅಧ್ಯಾಯ ೪

ಸಮಾಜೋ–ಆರ್ಥಿಕ ನೆಲೆಯಲ್ಲಿ ಕುಲಕಸುಬುಗಳು

ಸಮಾಜೋ-ಆರ್ಥಿಕ ನೆಲೆಯಲ್ಲಿ ಕುಲಕಸುಬುಗಳು

ಸಮಾಜವೆಂಬುದು ಮಾನವನ ಸಾಂದರ್ಭಿಕ ಒಪ್ಪಂದದ ಒಂದು ಸ್ವರೂಪ. ಅದರ ಹುಟ್ಟು ಬೆಳವಣಿಗೆಗೆ ಸಾವಿರಾರು ವರ್ಷಗಳಷ್ಟು ದೀರ್ಘ ಇತಿಹಾಸವಿದೆ. ಆದಿಮಾನವನು ಅಲೆಮಾರಿಯಾಗಿದ್ದಾಗ ಅವನ ಅಸ್ತಿತ್ವಕ್ಕೆ ಸವಾಲಾಗಿ ನಿಂತ ಅನೇಕ ಗಂಡಾಂತರಗಳಿಂದ ಪಾರಾಗಲು ಅವುಗಳ ನಿವಾರಣೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮತ್ತೊಂದರ, ಮತ್ತೊಬ್ಬರ ಸಹಾಯ ಸಹಕಾರ ಮತ್ತು ಆಸರೆಯ ಅವಶ್ಯಕತೆಯೇ ಮಾನವನ ಕುಟುಂಬದ ಅಸ್ಥಿತ್ವಕ್ಕೆ ನಾಂದಿಯಾಯಿತು. ಈ ಹಿನ್ನೆಲೆಯಲ್ಲಿ ಅನೇಕ ಸಂಶೋಧನೆ, ಅವಿಷ್ಕಾರಗಳಿಗೆ ಕಾರಣವಾಗಿ ಸಾಮಾಜಿಕ ಆರ್ಥಿಕ ಅಂಶಗಳಾದ ಕುಟುಂಬ ವಿವಾಹ, ಧರ್ಮ, ವೃತ್ತಿ, ಮತ್ತು ಆಸ್ತಿಗಳ ಪರಿಕಲ್ಪನೆಗೆ ಕಾರಣವಾಯಿತು. ಇವೆಲ್ಲವುಗಳ ರಕ್ಷಕ ಹಾಗೂ ಪೋಷಕ ಸ್ಥಾನವನ್ನು ಸಮಾಜವು ವಹಿಸಿಕೊಂಡು ಜನಸಮುದಾಯಗಳ ನಡೆ ನುಡಿ ನೀತಿ ನಿಯಮಗಳ ನಿರೂಪಕನ ಸ್ಥಾನಮಾನವನ್ನು ನಿರ್ಧರಿಸುವ ಅಧಿಕಾರವನ್ನು ಸಮಾಜವು ಪಡೆದುಕೊಂಡಿತು. ನಂತರ ಮಾನವನ ಕುಟುಂಬದ ಸ್ವರೂಪವೇ ಬದಲಾಯಿತು. ಆಧುನಿಕತೆ ಮತ್ತು ತಾಂತ್ರಿಕತೆಯೂ ಮಾನವನ ಬೌದ್ಧಿಕತೆಯ ದಿಕ್ಕನ್ನು ಬದಲಾಯಿಸಿ ಹತ್ತಾರು ಬದಲಾವಣೆಗಳೊಂದಿಗೆ ಕುಟುಂಬ ವ್ಯವಸ್ಥೆಯ ರೀತಿ ರೀವಾಜುಗಳು ನಿರ್ಧರಿಸಲ್ಪಟ್ಟವು.

ಸಮಾಜಕ್ಕೆ ಕುಟುಂಬವೇ ಮೂಲಾಧಾರ. ಸಮಾಜದ ಎಲ್ಲಾ ಸಂಸ್ಥೆಗಳು ವೃತ್ತಿಗಳು, ಪಂಗಡಗಳು, ರೀತಿ ನೀತಿಗಳು, ಆಚರಣೆಗಳು ಮುಂತಾದ ಹತ್ತು ಹಲವು ಸಂಗತಿಗಳು ಇಲ್ಲಿ ಸಮಾವೇಶಗೊಳ್ಳುತ್ತವೆ. ಸಮಾಜದಲ್ಲಿ ಜೀವಿಸುವ ಹಲವಾರು ಭಿನ್ನರೀತಿಯ ಕುಲಕಸುಬುದಾರರು ತಮ್ಮದೇ ಆದಂತಹ ಜಾತಿ, ವರ್ಗ, ವರ್ಣದ ನೆಲೆಯಲ್ಲಿ ವಿಭಜನೆಗೊಂಡಿದ್ದಾರೆ. ಈ ಒಂದೊಂದು

ವಿಭಜಿತ ಘಟಕಗಳು ತಮ್ಮದೇ ಆದ ಜೀವನ ವಿಧಾನ, ವಾಸದ ನೆಲೆ, ಆಚಾರ ವಿಚಾರ, ವೃತ್ತಿಗೆ ಸಂಬಂಧಿಸಿದ ಸಂಪ್ರದಾಯಗಳನ್ನು ರೂಢಿಸಿಕೊಂಡಿದ್ದಾರೆ. ಆ ಮೂಲಕ ಸಾಮಾಜಿಕ ಆರ್ಥಿಕ ವ್ಯವಸ್ಥೆಯಲ್ಲಿ ವಿಭಿನ್ನ ಬಗೆಯ ಅಂಶಗಳನ್ನು ಉಳಿಸಿಕೊಂಡಿದ್ದಾರೆ.

ಸಮಾಜ ಕೇವಲ ಕುಟುಂಬಗಳಲ್ಲಿನ ವ್ಯಕ್ತಿಗಳ ಸಮೂಹವಾಗಿರದೇ ಪರಸ್ಪರ ವಿವಿಧ ಬಗೆಯ ಕುಲವೃಂದ ಸಂಬಂಧವುಳ್ಳ ಜನತೆಯ ಆಂತರಿಕ ವ್ಯವಸ್ಥೆ. ವಿವಿಧ ಕಾರಣಗಳಿಗಾಗಿ ಒಂದು ಬಗೆಯ ಏಕತೆಯೂ ಅವರವರ ನಡುವೆ ಏರ್ಪಟ್ಟ ವಾಸ್ತವ ನೆಲೆಯ ಆಂತರಿಕವಾದ ಗಾಢ ನಿಕಟ ಸಂಬಂಧಗಳನ್ನು ಅವಲಂಬಿಸಿರುತ್ತದೆ. ಕೆಲವು ನೀತಿ ಸೂತ್ರ ಶಿಸ್ತುಗಳಿಗೆ ಒಳಪಟ್ಟು ಸುಸಂಘಟಿತ ಸಮುದಾಯವನ್ನು ನಾವು ಸಮಾಜ ಎನ್ನುತ್ತೇವೆ. ಸಾಮಾಜಿಕ ಸಂಸ್ಥೆಗಳಲ್ಲಿ ಕುಟುಂಬವು ಅತ್ಯಂತ ಮುಖ್ಯ ಘಟಕ, ಮೂಲ ಸಂಸ್ಥೆ, ಏಕೆಂದರೆ ಎಲ್ಲಾ ಘಟಕಗಳು ಆಧಾರವಾಗಿರುವುದು ಈ ಕುಟುಂಬದ ಮೇಲೆ. ಕುಟುಂಬವಿಲ್ಲದೇ ಸಮಾಜವಿರಲು ಸಾಧ್ಯವಿಲ್ಲ. ಸಮಾಜದಲ್ಲಿ ವಿವಿಧ ವೃತ್ತಿಗಳನ್ನು ನಿರ್ವಹಿಸುತ್ತಿರುವ ಕುಟುಂಬಗಳು ಸಮಾಜದ ಬೆಳವಣಿಗೆಗೆ ಆಧಾರ. ವಿವಿಧ ಕುಲಕಸುಬುಗಳು ಸಾಮಾಜಿಕ ಆರ್ಥಿಕ ನೆಲೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿವೆ.

ಭಾರತದ ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಲ್ಲಿ ಕುಲಕಸುಬುಗಳು ವಿಶೇಷ ಸ್ಥಾನಮಾನ, ಪ್ರಾಮುಖ್ಯತೆಯನ್ನು ಹೊಂದಿವೆ. ಯೂರೋಪು ಖಂಡವೆಲ್ಲ ಇನ್ನೂ ಅನಾಗರಿಕ ಸ್ಥಿತಿಯಲ್ಲಿದ್ದಾಗಲೇ ಭಾರತದ ಸಮಾಜದಲ್ಲಿ ತನ್ನ ಕುಲಕಸುಬುಗಳ ನಿಪುಣತೆ ಮತ್ತು ಕರಕುಶಲ ವಸ್ತುಗಳಿಗೆ ಹೆಸರುವಾಸಿಯಾಗಿತ್ತು. ಯೂರೋಪು ಖಂಡದ ನಾಗರೀಕತೆಯ ತೊಟ್ಟಿಲು ಎಂದು ಕರೆಸಿಕೊಂಡ ಗ್ರೀಕ್ ಮತ್ತು ಇಟಲಿಗಳು ಇನ್ನೂ ಅನಾಗರಿಕತೆಯಲ್ಲಿದ್ದಾಗಲೇ ಭಾರತವು ಸಂಪತ್ತಿನಲ್ಲಿ ತನ್ನದೇ ಆದ ಸ್ಥಾನ ಪಡೆದಿತ್ತೆಂದು ಎಡ್ವರ್ಡ್ ಥಾರ್ನಟನ್ ತಮ್ಮ 'History of British Empire in India' ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.[೧] ಈ ಅಂಶವು ಭಾರತೀಯ ಸಾಮಾಜಿಕ ಹಾಗೂ ಆರ್ಥಿಕ ನೆಲೆಯಲ್ಲಿ ಗುಡಿಕೈಗಾರಿಕೆಗಳು ಅಥವಾ ಕುಲಕಸುಬುಗಳು ವಿಶ್ವ ಪ್ರಸಿದ್ಧಿ ಪಡಿದಿದ್ದವೆಂಬುದನ್ನು, ಮನವರಿಕೆ ಮಾಡಿಕೊಡುತ್ತದೆ.

ಭಾರತೀಯ ಸಮಾಜದಲ್ಲಿರುವ ಗುಡಿ ಕೈಗಾರಿಕೆಗಳು ವಂಶಪಾರಂಪರ್ಯವಾಗಿ ಬೆಳೆದು ಬಂದವುಗಳು.[೨] ಇವುಗಳು ಕುಟುಂಬದ ಸಹ ಸದಸ್ಯರ ಸಹಾಯದಿಂದ ತಮ್ಮ ತಮ್ಮ ಮನೆಯಲ್ಲೇ ನಡಸಿಕೊಂಡು ಹೋಗಲಾಗುತ್ತಿರುವ ಕಸುಬುಗಳು, ಭಾರತೀಯ ಸಮಾಜದ ಸಮುದಾಯವೆಂದರೆ ನಿಸರ್ಗದ ಮಡಿಲಲ್ಲಿ ಬಾಳುವ ಜನತೆಯೆಂದು ಅಥವಾ ಕೃಷಿಯನ್ನೇ ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡ ಗುಂಪೆಂದೋ ಅಥವಾ ವಿವಿಧ ಕುಲಕಸುಬುಗಳನ್ನು ಒಳಗೊಂಡ ಪ್ರದೇಶವೆಂದು ಹೇಳಬಹುದು.

ಪ್ರಸ್ತುತ ಅಧ್ಯಯನದಲ್ಲಿ ಕುಲಕಸುಬುಗಳ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳನ್ನು ಕಂಡುಕೊಳ್ಳಲು ಕುಲಕಸುಬು ಸಮೂಹಗಳ ಕುಟುಂಬದ ವ್ಯವಸ್ಥೆ, ವಸತಿ ವ್ಯವಸ್ಥೆ, ಆರಾಧಿಸುವ ದೈವಗಳು, ನ್ಯಾಯ ಪದ್ಧತಿ, ಜಾತಿ ಬಹಿಷ್ಕಾರ, ಮತ್ತು ಜಾತಿಗೆ ಸೇರಿಸಿಕೊಳ್ಳುವ ಪ್ರಕ್ರಿಯೆ, ವೈದ್ಯಪದ್ಧತಿ, ಆಹಾರದ ಪದ್ಧತಿ, ಪ್ರಧಾನವಾದ ಕಸುಬು, ಅವುಗಳಲ್ಲಿ ಪುರುಷ ಹಾಗೂ ಮಹಿಳೆಯ ಪಾತ್ರ, ಕುಲಕಸುಬುಗಳಿಗೆ ಸಂಬಂಧಿಸಿದ ಗಾದೆಗಳು, ಸಾಹಿತ್ಯ ಇತ್ಯಾದಿ ಅಂಶಗಳನ್ನು ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ.

ಕುಟುಂಬ ಪದ್ಧತಿ: ಸಾಂಪ್ರದಾಯಿಕ ಆರ್ಥಿಕ ತಜ್ಞರ ಪ್ರಕಾರ ಕುಟುಂಬವನ್ನು ಒಂದು ಅಖಂಡ ಹಾಗೂ ಏಕರೂಪಿ ಘಟಕವನ್ನಾಗಿ ಪರಿಭಾವಿಸಲಾಗುತ್ತದೆ. ಅದು ಮಾನವನ ರಕ್ಷಣೆ ಇಲ್ಲದೆ ಪೋಷಣೆಗೆ ವಿಶೇಷ ಆದ್ಯತೆಯನ್ನು ಕೊಡುತ್ತದಲ್ಲದೆ ಮನುಕುಲದ ರಕ್ಷಣೆ, ಪೋಷಣೆ, ಬೆಳವಣಿಗೆ ಮತ್ತು ಭದ್ರತೆ ಒದಗಿಸುವ ಸಂಪನ್ಮೂಲವುಳ್ಳ ಕಾರ್ಯಗಾರವೆನ್ನಬಹುದು. ಕುಟುಂಬವೆಂದರೆ ಸರ್ವಸದಸ್ಯರ ಆಶಯಗಳನ್ನು ಮನ್ನಿಸುವ, ಕಾಪಾಡುವ ವ್ಯಕ್ತಿ ವ್ಯಕ್ತಿಗಳಲ್ಲಿ ಪರಸ್ಪರ ಸಂಬಂಧಗಳನ್ನು ಗಟ್ಟಿಗೊಳಿಸುವ, ಬೆರಸುವ ಸಂಸ್ಥೆ. ಈ ದಿಸೆಯಲ್ಲಿ ಕುಟುಂಬದ ಪಾತ್ರ ಕುಲಕಸುಬು ಸಮುದಾಯಗಳಲ್ಲಿ ಇನ್ನೂ ಗಮನಾರ್ಹ. ಯಾವುದೇ ಕುಟುಂಬದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಚನೆಯು ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ ಕುಟುಂಬದ ಸ್ವರೂಪ ರಚನೆಯೂ ಮಹತ್ವಪೂರ್ಣ ಪಾತ್ರ ನಿರ್ವಹಿಸುತ್ತದೆ.

ಬಳ್ಳಾರಿ ಜಿಲ್ಲೆಯ ಕುಲಕಸುಬುದಾರರ ಸಮುದಾಯಗಳೂ ಅನೇಕ ಪಾರಂಪರಿಕ ನಡತೆ, ಆಚರಣೆ ಮತ್ತು ವಿವಿಧ ಮೌಢ್ಯತೆಗಳಲ್ಲಿದ್ದಾರೆ. ಅವರು ಆಧುನಿಕತೆಯನ್ನಾಗಲಿ ಶಿಕ್ಷಣದ ಬಗ್ಗೆಯಾಗಲಿ ಮತ್ತು ಜಾಗತೀಕರಣದ ಪರಿಣಾಮಗಳನ್ನಾಗಲಿ ಅರ್ಥಮಾಡಿಕೊಳ್ಳುವ ಮನೋಧರ್ಮವನ್ನು ಬೆಳೆಸಿಕೊಂಡಿಲ್ಲವೆಂದು ಹೇಳಬಹುದು. ಆದರೆ ಈ ಮೇಲಿನ ಎಲ್ಲಾ ಪರಿಣಾಮಗಳು ಅವರ ಕುಟುಂಬದ ದುಡಿಮೆ, ಆದಾಯ ಮತ್ತು ಜೀವನ ಮಟ್ಟದ ಮೇಲೆ ಪ್ರಭಾವವನ್ನುಂಟು ಮಾಡಿರುವುದನ್ನು ತಳ್ಳಿಹಾಕುವಂತಿಲ್ಲ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಆಯ್ಕೆ ಮಾಡಿಕೊಂಡ ಕುಲಕಸುಬು ಕುಟುಂಬಗಳ ಸಾಂಪ್ರದಾಯಿಕ ಮನೋ ಧರ್ಮ ಬದಲಾಗಿರುವುದು ಕಂಡುಬರುತ್ತದೆ. ಒಟ್ಟು ಕುಟುಂಬದ ಸದಸ್ಯರಲ್ಲಿ ವಿವಾಹಿತ ಹಾಗೂ ಅವಿವಾಹಿತರಲ್ಲೂ ಸಾಕಷ್ಟು ಅಂತರಗಳಿವೆ. ಅದಕ್ಕಿಂತ ಮುಖ್ಯವಾಗಿ ಲಿಂಗಸಂಬಂಧ ತಾರತಮ್ಯದ ಅಂತರವನ್ನು ಗಮನಿಸಿದಾಗ ಕುಲಕಸುಬು ಕುಟುಂಬಗಳಲ್ಲಿಯೂ ಆಧುನಿಕತೆಯ ಲಿಂಗಸಂಬಂಧ ವೈಪರೀತ್ಯವನ್ನು ಸ್ಪಷ್ಟವಾಗಿ ಗುರುತಿಸಬಹುದು. ಕುಲಕಸುಬು ಸಮುದಾಯಗಳಲ್ಲಿ 'ವಿವಾಹ' ವೆಂಬುದೊಂದು ಮಹತ್ವಪೂರ್ಣ ಜವಾಬ್ದಾರಿ. ಹೀಗಾಗಿ ಕುಟುಂಬದ ಸಹಸದಸ್ಯರ ಮದುವೆಯನ್ನು ಚಿಕ್ಕವಯಸ್ಸಿಗೆ ಮಾಡಿ ಕುಟುಂಬದ ಜವಾಬ್ದಾರಿಯಿಂದ ಕೈತೊಳೆದುಕೊಳ್ಳಬೇಕೆನ್ನುವುದು ಹಿರಿಯರ ಅಭಿಲಾಷೆ.

ಕುಟುಂಬವು ತನ್ನೆಲ್ಲಾ ಸದಸ್ಯರ ಹಿತಾಸಕ್ತಿಗಳನ್ನು ಸಮಾನವಾಗಿ ಕಾಣುವ, ಕಾಯುವ ಹಾಗು ಪೋಷಿಸುವ ಒಂದು ಬದಲಾವಣೆಯಾಧಾರಿತ ವ್ಯವಸ್ಥೆಯೆಂದೇ ಭಾವಿಸಲಾಗಿದೆ. ಹಾಗೆಂದರೆ ಕುಟುಂಬದೊಳಗೆ ಹೆಣ್ಣು-ಗಂಡುಗಳ ನಡುವೆ ಇರುವ ಅಧಿಕಾರ ತಿರ್ಮಾನ ಮತ್ತು ಆಸ್ತಿ ಒಡೆತನಕ್ಕೆ ಸಂಬಂಧಿಸಿದಂತೆ ಅವಿಭಕ್ತ ಕುಟುಂಬದ ಸ್ವರೂಪದಲ್ಲಿ ಯಾವುದೇ ಭಿನ್ನತೆಯನ್ನು ಗುರುತಿಸುವುದಿಲ್ಲ.

ಕಾಲಕ್ರಮೇಣ ಆರ್ಥಿಕ ಸಾಮಾಜಿಕ ಸ್ಥಿತಿಗಳಲ್ಲಿ ಬದಲಾವಣೆಗಳಾದಂತೆ ಕುಟುಂಬದ ಗಾತ್ರ ಬದಲಾಗುತ್ತ ಅವಿಭಕ್ತ ಮತ್ತು ವಿಭಕ್ತ ಪದ್ದತಿಯ ಕುಟುಂಬಗಳ ಸ್ವರೂಪ ಬದಲಾವಣೆಗೊಂಡಿದೆ. ಅವಿಭಕ್ತ ಕುಟುಂಬ ಎಲ್ಲಾ ಸದಸ್ಯರನ್ನು ಪೋಷಿಸುವ ಹಾಗೂ ಬೆಳೆಸುವ ಹಕ್ಕುದಾರಿಕೆಯು ಕುಟುಂಬದ ಎಲ್ಲಾ ಸದಸ್ಯರಿಗೂ ಸೇರಿರುತ್ತದೆ. ಇಲ್ಲಿ ವಯಕ್ತಿಕ ಆಸೆ ಆಕಾಂಕ್ಷೆಗಳಿಗಿಂತಲೂ ಸಾಮೂಹಿಕವಾದ ಭಾವನೆಗಳಿಗೆ ಹೆಚ್ಚು ಮನ್ನಣೆ ಇರುತ್ತದೆ. ಕುಟುಂಬದಲ್ಲಿನ ಯಾವೊಬ್ಬ ಸದಸ್ಯನಿಗೆ ಕಾಡುವ ಅನಾರೋಗ್ಯ, ನಿರುದ್ಯೋಗ, ಬಡತನದಂತಹ ಅಂಶಗಳು ಸಮಸ್ಯೆಗಳೆಂದೆನಿಸದೇ ಅವುಗಳ ಪರಿಹಾರಕ್ಕಾಗಿ ಸರ್ವರ ಪ್ರಯತ್ನ ಹಾಗೂ ಕುಟುಂಬದ ಕಾರ್ಯ ಯೋಜನೆಯನ್ನು ಕುಲಕಸುಬುದಾರ ಕುಟುಂಬಗಳು ರೂಪಿಸುತ್ತವೆ.

ವಿಭಕ್ತ ಕುಟುಂಬ ವ್ಯವಸ್ಥೆಯು ಆಧುನಿಕತೆ ಮತ್ತು ಕೈಗಾರಿಕರಣದ ಕೊಡುಗೆಯೆಂದು ಕರೆಯಲಾಗುತ್ತದೆ. ಅವಿಭಕ್ತ ಕುಟುಂಬಕ್ಕೆ ಪ್ರತಿರೂಪವಾಗಿ ಬೆಳೆದು ಬಂದ ವಿಭಕ್ತ ಕುಟುಂಬಗಳಲ್ಲಿ ಕೇವಲ ತಂದೆ-ತಾಯಿ ಅವಿವಾಹಿತ ಮಕ್ಕಳಿಂದ ಕೂಡಿರುತ್ತದೆ. ಇಲ್ಲಿ ಪ್ರತಿಯೊಬ್ಬ ಸದಸ್ಯರಿಗೆ ವೈಯಕ್ತಿಕ ಸ್ವಾತಂತ್ರವಿರುತ್ತದೆ. ಯಾವುದೇ ಕೌಟುಂಬಿಕ ನಿಯಂತ್ರಣವಿಲ್ಲದೆ ಸದಸ್ಯರಿಗೆ ಹೆಚ್ಚು ಸ್ವತಂತ್ರವಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಕುಲಕಸುಬು ಕುಟುಂಬಗಳು ಹೆಚ್ಚಾಗಿ ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯಾಗಿರುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಕೆಲವು ಕುಲಕಸುಬು ಕುಟುಂಬಗಳು ಮಾತ್ರ ಅವಿಭಕ್ತ ಕುಟುಂಬ ಪದ್ದತಿಯನ್ನು ಅನುಸರಿಸುವುದು ಕಂಡುಬರುತ್ತದೆ. ಆಧುನಿಕತೆ, ಗಣಿಗಾರಿಕೆ ಮತ್ತು ಕೈಗಾರಿಕರಣದಿಂದಾಗಿ ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯಾಗಿರುವುದು ಕಂಡುಬರುವ ಅಂಶ. ಮತ್ತೊಂದು ಪ್ರಮುಖ ಅಂಶ ಕುಲಕಸುಬು ಕುಟುಂಬಗಳು ಸಾಮಾನ್ಯವಾಗಿ ಪಿತೃ ಪ್ರಧಾನ ಕುಟುಂಬಗಳೇ ಆಗಿವೆ. ಇದರಿಂದಾಗಿ ತಂದೆ ಕಡೆಯ ಸಂಬಂಧಗಳಿಗೆ ಪ್ರಾಮುಖ್ಯತೆ ಹೆಚ್ಚು. ತಂದೆ ಮಕ್ಕಳಿಗೆ ಕುಲಕಸುಬಿನ ವಿಧಿ ವಿಧಾನಗಳನ್ನು ಕಲಿಸಿಕೊಡುತ್ತಾನೆ.

ಕುಲಕಸುಬುದಾರರ ನಂಬಿಕೆ ಮತ್ತು ಆಚರಣೆ: ಆರ್ಥಿಕ ಅಭಿವೃದ್ಧಿಯ ವಿಶ್ಲೇಷಣೆಯಲ್ಲಿ ಸಮಾಜದ ಸಂಪ್ರದಾಯ, ನಂಬಿಕೆ ಹಾಗೂ ಆಚರಣೆಗಳಂತಹ ನಡವಳಿಕೆಗಳು ಅಭಿವೃದ್ಧಿಯಗತಿಗೆ

ದೊಡ್ಡ ತೊಡಕಾಗಿ ಕಂಡುಬರುತ್ತದೆ ಎಂದೇ ಅನೇಕ ಆರ್ಥಿಕ ತಜ್ಞರ ಅಭಿಪ್ರಾಯ. ಈ ಅಂಶವು ಕುಲಕಸುಬುದಾರರಿಗೆ ಸ್ಪಷ್ಟವಾಗಿ ಅನ್ವಹಿಸುತ್ತದೆ. ಆದರೆ ಇತ್ತೀಚಿನ ಪ್ರಗತಿಪರ ಆರ್ಥಿಕ ಚಿಂತಕರ ಪ್ರಕಾರ ಸುಧಾರಣೆ ಅಥವಾ ಅಭಿವೃದ್ಧಿ ಎಂಬುದು ಕೇವಲ ವರಮಾನ, ಉತ್ಪಾದನೆ, ಮಾರುಕಟ್ಟೆ, ತಂತ್ರಜ್ಞಾನ ಹಾಗೂ ವಿಜ್ಞಾನವಾಗಿರದೇ ಒಳ್ಳೆಯ ಶಿಕ್ಷಣ, ಅರೋಗ್ಯ, ರಾಜಕೀಯ ಪ್ರಾತಿನಿಧ್ಯ, ಸಾರ್ವತ್ರಿಕ ಮನ್ನಣೆ ಹಾಗೂ ಸಮುದಾಯಗಳಲ್ಲಿ ಭಾಗವಹಿಸುವಂತಹ ಅವಕಾಶಗಳು ಸಾಕಷ್ಟು ಪ್ರಮಾಣದಲ್ಲಿರಬೇಕೇ ಹೊರತು ಆದಾಯವನ್ನಷ್ಟೇ ಹೆಚ್ಚಿಸಬಾರದು ಎಂಬ ನೀತಿಗೂ ಹೆಚ್ಚು ಬೆಂಬಲ ವ್ಯಕ್ತವಾಗುತ್ತದೆ.

ಕುಲಕಸುಬು ಸಮುದಾಯದಲ್ಲಿರುವ ಅನೇಕ ರೂಢಿ, ಪದ್ಧತಿ, ಸಂಪ್ರದಾಯ, ರಕ್ತ ಸಂಬಂಧ, ಹಿರಿಯರ ಮೇಲಿನ ಗೌರವ, ವಿವಿಧ ಆಚರಣೆಗಳ ಬಗ್ಗೆ ಅವರಲ್ಲಿನ ವಿಶೇಷ ಕಾಳಜಿ ಮತ್ತು ಕುಲಕಸುಬಿನ ಹುಟ್ಟಿನ ಬಗ್ಗೆ ವಿಶೇಷ ಅಭಿಮಾನ ಹೊಂದಿದ್ದಾರೆ. ಜೊತೆಗೆ ಅವುಗಳನ್ನು ಚಾಚು ತಪ್ಪದೆ ಪಾಲಿಸಿಕೊಂಡು ಹೋಗಲು ಆಸಕ್ತರಾಗಿದ್ದಾರೆ. ಇಂತಹ ಹಲವು ಸಂಪ್ರದಾಯಗಳು ಇಂದಿಗೂ ಸಹ ಕುಲಕಸುಬು ಕುಟುಂಬಗಳಲ್ಲಿ ಕಾಣಬಹುದು.

ಶಿಕ್ಷಣದ ಸ್ವರೂಪ: ಕುಲಕಸುಬುದಾರರಿಗೆ ಯಾವುದೇ ರೀತಿಯ ಸ್ತಿರ ಮತ್ತು ಚರಾಸ್ತಿಗಳನ್ನು ಹೊಂದಿಲ್ಲದೇ ಇರುವುದು, ತಮ್ಮ ದೈನಂದಿನ ಜೀವನದ ನಿರ್ವಹಣೆಯೇ ಪ್ರಧಾನವಾಗಿ ಕಂಡುಬರುತ್ತದೆಯೇ ವಿನಹಃ ಶಿಕ್ಷಣ, ಆರೋಗ್ಯ ಹಾಗೂ ಜೀವನ ಮಟ್ಟದ ಸುಧಾರಣೆಗಲ್ಲ. ಅವರೆಲ್ಲರೂ ಕರ್ಮ ಸಿದ್ಧಾಂತಗಳಲ್ಲಿ ನಂಬಿಕೆ ಇಟ್ಟಿರುವುದು ಕಂಡುಬರುತ್ತದೆ. ಕುಲಕಸುಬುದಾರರಲ್ಲಿ ಅನಕ್ಷರತೆ ಪ್ರಮಾಣ ಅಧಿಕವಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಸಮುದಾಯಗಳ ಮೂಢನಂಬಿಕೆ, ಸಂಪ್ರದಾಯ, ಬಡತನ ಹಾಗೂ ಆಧುನಿಕತೆಯೊಂದಿಗಿನ ಅವರ ಕಡಿಮೆ ಒಡನಾಳಗಳಿಂದಾಗಿ ಕುಟುಂಬ ಸಮುದಾಯಗಳು ಶಿಕ್ಷಣದಿಂದ ದೂರ ಉಳಿದಿವೆ.

ಅನಕ್ಷರತೆಯು ಆರ್ಥಿಕ ಸದಾವಕಾಶಗಳಿಂದ ಈ ಸಮುದಾಯುಗಳನ್ನು ವಂಚಿಸುವ ಮೂಲಕ ಇನ್ನಷ್ಟು ಕಡುಬಡವರನ್ನಾಗಿ ಮಾಡಿದೆ. ಹಾಗೆಯೇ ಅನಕ್ಷರತೆಯಿಂದ ಕೂಡಿದ ಕಸುಬುದಾರರು ತಮ್ಮ ಸುತ್ತಲಿನ ಸಮಾಜದ ಶೋಷಣೆಗಳಿಗೆ ದೌರ್ಜನಕ್ಕೆ ಹಾಗೂ ಅನಾದಾರಣೆಗೆ ಗುರಿಯಾಗಲು ಬಹುಮುಖ್ಯ ಕಾರಣವಾಗಿದೆ ಎಂದು ಭಾವಿಸಬಹುದು.

ನ್ಯಾಯ ಪದ್ಧತಿ: ಕುಲಕಸುಬುದಾರ ಕುಟುಂಬಗಳಲ್ಲಿ ಯಾವುದೇ ಕೌಟುಂಬಿಕ ಸಮಸ್ಯೆ ಅಥವಾ ವೃತ್ತಿ ಸಮಸ್ಯೆಗಳೇನಾದರೂ ಕಂಡುಬಂದರೆ ಅವುಗಳನ್ನು ತಮ್ಮ ತಮ್ಮೊಳಗೆ ಬಗೆಹರಿಸಿಕೊಳ್ಳುತ್ತಾರೆ. ಸಮುದಾಯದ ಸಮಸ್ಯೆ ಕುರಿತಂತೆ ಇವರು ಸಮುದಾಯವು ಒಬ್ಬ ಹಿರಿಯ ಮುಖಂಡನನ್ನು ಜಾತಿಯ ಹಿರಿಯರೆಲ್ಲ ಸೇರಿ ಆಯ್ಕೆ ಮಾಡುತ್ತಾರೆ. ಆ ಹಿರಿಯ

ಮುಖಂಡರು ಸಮುದಾಯದ ಸಮಸ್ಯೆಗಳನ್ನು ಬಗೆಹರಿಸುತ್ತಾರೆ. ಹಿಂದಿನ ಕಾಲದಲ್ಲಿ ತಪ್ಪಿತಸ್ಥರಿಗೆ ದಂಡ ವಿಧಿಸುತ್ತಿದ್ದರು. ಅದರೆ, ಇತ್ತೀಚೆಗೆ ದಂಡ ವಿಧಿಸುವ ಪದ್ಧತಿ ಕಡಿಮೆಯಾಗಿದೆ. ಹಿಂದಿನ ಕಾಲದಲ್ಲಿ ಜಾತಿಯಿಂದ ಬಹಿಷ್ಕಾರ ಹಾಕುವ ಪದ್ಧತಿಯೂ ಈಗಲೂ ಕುಲಕಸುಬು ಸಮುದಾಯಗಳಲ್ಲಿ ಮುಂದುವರಿದಿದೆ. ಜಾತಿ ಬಹಿಷ್ಕಾರಕ್ಕೆ ಒಳಗಾದವರು ಸಮುದಾಯದ ಯಾವುದೇ ಶುಭ, ಅಶುಭ ಕಾರ್ಯಕ್ರಮಗಳಲ್ಲಿ ಎಲ್ಲರಂತೆ ಭಾಗವಹಿಸುವಂತಿಲ್ಲ. ಒಂದು ವೇಳೆ ಜಾತಿಯ ಒಳಜಗಳ ಪಂಚಾಯ್ತಿಯು ಬಗೆಹರಿಯದಿದ್ದರೆ, ಈ ಪಂಚಾಯ್ತಿಯನ್ನು ಸಮುದಾಯದ ತಾಲೂಕು ಇಲ್ಲವೇ ಜಿಲ್ಲಾ ಮಟ್ಟದ ಮುಖಂಡರಿಗೆ ವಿಷಯವನ್ನು ಹೇಳಿ ಅವರನ್ನು ಕರೆಸಿ ಸಮಸ್ಯೆಗಳನ್ನು ಬಗೆಹರಿಸುವುದು ಕಂಡುಬರುತ್ತದೆ. ಕುಲಕಸುಬು ಸಮುದಾಯದ ಯಾವುದೇ ಕಾರ್ಯಕ್ರಮಗಳು ಜಾತಿಯ ಮುಖಂಡರ ಸಮ್ಮುಖದಲ್ಲಿಯೇ ನಡೆಯುತ್ತವೆ.

ವಸತಿ ವ್ಯವಸ್ಥೆ: ಮನುಷ್ಯನ ಮೂಲಭೂತ ಅವಶ್ಯಕತೆಗಳಾದ ಆಹಾರ, ನೀರು, ಗಾಳಿ, ಬಟ್ಟೆಯಂತೆ ವಸತಿ ಸಹ ಒಂದು. ಕುಲಕಸುಬುದಾರರು ತಮ್ಮ ಮನೆಯನ್ನು ಕಟ್ಟುವಾಗ ತಮ್ಮ ಆರ್ಥಿಕ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡಿರುವರು. ಹಿಂದಿನ ಕಾಲದಲ್ಲಿ ಇವರ ವಾಸಸ್ಥಾನ, ಕಸುಬಿಗೆ ತಕ್ಕಂತೆ ರಚಿಸಿಕೊಂಡಿದ್ರು, ಇಂದು ಇವರ ವಾಸದ ಮನೆಗಳು ಬದಲಾವಣೆಗೊಂಡಿವೆ. ಕುಲಕಸುಬುದಾರರೆಲ್ಲರೂ ನಿರ್ದಿಷ್ಟ ಓಣಿಯನ್ನು ಆಯ್ಕೆ ಮಾಡಿಕೊಂಡು ಮನೆಗಳನ್ನು ನಿರ್ಮಿಸಲು ಇಷ್ಟಪಡುತ್ತಾರೆ. ಹಿಂದೆ ಕುಂಬಾರ ಓಣಿ, ನೇಕಾರ ಓಣಿ, ಮೇದಾರ ಓಣಿ, ಚಮ್ಮಾರರ ಕೇರಿಗಳೆಂದೇ ಪ್ರತ್ಯೇಕ ಹೆಸರುಗಳನ್ನು ಹೊಂದಿರುವುದು ಕಂಡುಬರುತ್ತದೆ. ಆದರೆ ಇಂದು ಸರಕಾರ ನಿವೇಶನ ಅಥವಾ ಮನೆ ಕಟ್ಟಿಸಿ ಕೊಡುವಾಗ ಜಾತಿಪದ್ಧತಿ ಅನುಸರಿಸದೆ ಸಮಾನ ರೀತಿಯಲ್ಲಿ ವಾಸಸ್ಥಳಗಳನ್ನು ನಿರ್ಮಾಣ ಮಾಡಿ ವಿತರಿಸುತ್ತದೆ. ಸರಕಾರ ನೀಡುವ ಮನೆಗಳನ್ನು ಬಿಟ್ಟರೆ ಕುಲಕಸುಬುದಾರರು ತಮ್ಮ ಯೋಗ್ಯತೆಗೆ ತಕ್ಕಂತೆ, ಗುಡಿಸಲು, ಮಣ್ಣಿನ ಮನೆ, ಹೆಂಚಿನ ಮನೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಕಟ್ಟಿಸುತ್ತಾರೆ. ಕುಲಕಸುಬುದಾರರು ವಾಸಿಸುತ್ತಿರುವ ಮನೆಗಳಲ್ಲಿ ಮೂಲಭೂತ ಸೌಲಭ್ಯಗಳು ಇಲ್ಲದಿರುವುದು ಕಂಡುಬರುತ್ತದೆ. ಮನೆ ಅಥವಾ ಗುಡಿಸಲುಗಳು ಚಿಕ್ಕವಿರುವುದರಿಂದ ಕುಲಕಸುಬು ಚಟುವಟಿಕೆಗಳನ್ನು ವಿಸ್ತರಿಸುವುದು ಅಸಾಧ್ಯವಾಗಿರುವುದು ಕಂಡುಬರುತ್ತದೆ.

ಹಬ್ಬ ಹರಿದಿನ, ಜಾತ್ರೆ, ಉತ್ಸವ ಆಚರಣೆಗಳು: ಸಂಸ್ಕೃತಿಯ ತವರೂರಾದ ಭಾರತವು ವಿವಿಧ ಧರ್ಮ ಮತ್ತು ಜಾತಿಗಳ ಮಹಾ ಸಂಗಮ ಕ್ಷೇತ್ರ. ಈ ದೇಶದಲ್ಲಿ ಪ್ರತಿದಿನವು ಒಂದಲ್ಲಾ ಒಂದು ಜಾತಿಯ ಅಥವಾ ಧರ್ಮದ ಹಬ್ಬ ಮತ್ತು ಆಚರಣೆಗಳು ನಡೆದಿರುತ್ತವೆ. ಇಂತಹ ಹಬ್ಬ ಮತ್ತು ಆಚರಣೆಗಳಿಗೆ ಮುಖಾಮುಖಿಯಾದ ಇನ್ನೊಂದು ಧರ್ಮ, ಇದರ ಪ್ರಭಾವದಿಂದ ತನ್ನದೆಲ್ಲವನ್ನು ಸ್ವೀಕರಿಸುವ ಮತ್ತು ನಿರಾಕರಿಸುವ ಸಂಸ್ಕಾರಕ್ಕೆ ಒಳಗಾಗಿರುತ್ತದೆ. ಇದು ಒಂದು ಸಂಸ್ಕೃತಿಯ ಜೀವಂತಿಕೆಗೆ ಪುಷ್ಟಿಕೊಡುವುದು. ತಮ್ಮ ಪಾರಂಪರಿಕ ಸಂಸ್ಕೃತಿ ಮೌಲ್ಯಗಳನ್ನು ಕಟ್ಟಿ

ಬೆಳಸಿ, ಕಾಪಾಡುವ ಮತ್ತು ಮುಂದುವರಿಸಿಕೊಂಡು ಹೋಗುವ ಎದೆಗಾರಿಕೆಯು ಅನೇಕ ಕುಲಕಸುಬು ಸಮುದಾಯಗಳಿಗೆ ಆದಿ ಕಾಲದಿಂದಲೂ ಬಳವಳಿಯಾಗಿ ಬಂದಿದೆ. ಇಂತಹ ಸಂಸ್ಕಾರ ಮತ್ತು ತಮ್ಮ ಸಂಸ್ಕೃತಿಯ ರಕ್ಷಣೆಗಳಿಗೆ ಹಬ್ಬದ ಆಚರಣೆಗಳು ಪುನಃಶ್ಚೇತನ ತಂದುಕೊಡುತ್ತಾ ಪುನರ್ ಮನನಕ್ಕೆ ದಾರಿ ಮಾಡಿಕೊಡುತ್ತವೆ. ಕುಲಕಸುಬುದಾರರಿಗೆ ದೇವರ ಬಗ್ಗೆ ಅಪಾರವಾದ ನಂಬಿಕೆ, ಏಕೆಂದರೆ ನಮ್ಮ ಕಲ್ಪನೆಗೂ ನಿಲುಕಲಾರದ ಮತ್ತು ಈ ಜಗತ್ತಿನ ಸಕಲ ಜೀವ ಜಂತುಗಳನ್ನು ಕಾಪಾಡುವ ಮತ್ತು ನಿಯಂತ್ರಿಸುವ ಶಕ್ತಿಯ ಬಗ್ಗೆ ಜನಪದರಿಗೆ ಅಪಾರವಾದ ನಂಬಿಕೆ–ಆಸಕ್ತಿಯೇ ದೇವರೆಂದು ಜನಪದರ ನಂಬಿಕೆ.[೩] ದೇವರನ್ನು ಜನಪದರು ಅನೇಕ ಹಬ್ಬ, ಹರಿದಿನ ಮತ್ತು ಆಚರಣೆಗಳಲ್ಲಿ ವಿಶೇಷವಾಗಿ ಪೂಜಿಸುತ್ತಾರೆ. ಇದರ ಮೂಲ ಉದ್ದೇಶ ಕುಲಕಸುಬುಗಳ ಕಾರ್ಯಚಟುವಟಿಕೆಗಳಲ್ಲಿ ಎದುರಾಗುವ ಅನೇಕ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡಿ ಗಂಡಾಂತರಗಳಿಂದ ಪಾರು ಮಾಡಿ ರಕ್ಷಿಸಿ ಕಾಪಾಡಬೇಕೆನ್ನುವುದು ಜನಪದರು ತಮ್ಮ ಕಲ್ಪನೆಗೆ ತಕ್ಕಂತೆ ದೇವರ ಭೌತಿಕ ಆಕಾರವನ್ನು ಸೃಷ್ಟಿಸಿಕೊಂಡು ಆರಾಧಿಸತೊಡಗಿದ್ದಾರೆ.

ಕುಲಕಸುಬುದಾರರಲ್ಲಿ ಏಕ ರೀತಿಯ ಹಬ್ಬ ಹರಿದಿನ ಜಾತ್ರೆ ಹಾಗೂ ಉತ್ಸವಗಳಿಲ್ಲದಿರುವುದು ಕಂಡುಬರುತ್ತದೆ. ತಮ್ಮ ಕುಲಕ್ಕೆ ಸಂಬಂಧಿಸಿದಂತೆ ದೇವರುಗಳನ್ನು ಸೃಷ್ಟಿಸಿಕೊಂಡು ಕಾಲಕ್ಕೆ ತಕ್ಕಂತೆ ಹಬ್ಬ, ಜಾತ್ರೆಗಳನ್ನು ಆಚರಿಸುತ್ತಾರೆ. ಕುಲಕಸುಬುದಾರರು ಊರಿನಲ್ಲಿ ಎಲ್ಲಾ ಜನಾಂಗದವರು ಸಾಮಾನ್ಯವಾಗಿ ಆಚರಿಸುವ ಹಬ್ಬಹರಿದಿನ, ಜಾತ್ರೆ ಉತ್ಸವಗಳನ್ನೂ ಆಚರಿಸುತ್ತಾರೆ. ಇದು ಸಮಾಜದ ಐಕ್ಯತೆಯನ್ನು ರೂಪಿಸುವ ಪ್ರಮುಖವಾದ ಅಂಶವೆಂದು ಪರಿಗಣಿಸಬಹುದು. ಜಿಲ್ಲೆಯಲ್ಲಿ ಪ್ರಾದೇಶಕವಾಗಿ ಪ್ರಸಿದ್ಧವಿರುವ ದೇವರುಗಳಾದ ದುರ್ಗಮ್ಮ, ಹುಲಿಗೆಮ್ಮ, ಅಂಜನೇಯ, ಕೊಟ್ಟೂರೇಶ್ವರ, ಮೈಲಾರಲಿಂಗ, ಕುಮಾರಸ್ವಾಮಿ, ವೀರಭದ್ರೇಶ್ವರ, ಗೋಣಿ ಬಸಪ್ಪ ಇಟಗಿ ಭೀಮವ್ವ, ದೊಡ್ಡ ಬಸವೇಶ್ವರ, ಹಂಪೆ ವಿರೂಪಾಕ್ಷ, ಗುಡ್ಡದ ಮಲ್ಲಯ್ಯ, ವೆಂಕಟೇಶ್ವರ ದೇವತೆಗಳ ಉತ್ಸವ ಹಾಗೂ ಜಾತ್ರೆಗಳನ್ನು ಕಾಲಕಾಲಕ್ಕೆ ಆಚರಣೆ ಮಾಡುತ್ತಾ ಬರುತ್ತಿದ್ದಾರೆ. ಮುಸ್ಲಿಂ ಕುಲಕಸುಬುದಾರರು ಮುಸ್ಲಿಂ ಹಬ್ಬಗಳನ್ನು ಆಚರಿಸುವುದರ ಜೊತೆಗೆ ಹಿಂದುಗಳ ಹಬ್ಬಗಳನ್ನು ಕೂಡ ಆಚರಿಸುತ್ತಿದ್ದಾರೆ. ಕೆಲವು ಹಬ್ಬಗಳನ್ನು ಹಿಂದು ಮತ್ತು ಮುಸ್ಲಿಂ ಸಮುದಾಯಗಳು ಕೂಡಿ ಆಚರಿಸುತ್ತಿರುವುದು ಕಂಡುಬರುತ್ತದೆ.

ಪ್ರಧಾನವಾದ ಕಸುಬು

ಕುಲಕಸುಬುದಾರರು ಪ್ರಾಚೀನ ಕಾಲದಿಂದಲೂ ವಂಶಪಾರಂಪರ್ಯ ವೃತ್ತಿಗಳನ್ನು ರೂಢಿಸಿಕೊಂಡು ಬಂದಿರುವರು. ಕುಲಕಸುಬುಗಳು ಮೂಲಭೂತ ಜೀವನಾವಶ್ಯಕತೆಗಳನ್ನು ಪೂರೈಸುವುದಕ್ಕೋಸ್ಕರವಾಗಿಯೇ ಉದಯವಾಗಿವೆ. ಸಾಮಾಜಿಕ ಜೀವನದಲ್ಲಿ ಜಮೀನು ಇಲ್ಲದವ, ತನಗೆ ಇಷ್ಟವಾದ, ತನ್ನ ಶಕ್ತಿ ಸಾಮಾರ್ಥ್ಯಕ್ಕನುಗುಣವಾಗಿ ಕಸುಬನ್ನು ಆಯ್ಕೆ ಮಾಡಿಕೊಂಡು,

ಅದರಲ್ಲಿ ಪರಿಣತಿಯನ್ನು ಗಳಿಸಿಕೊಂಡು, ಅದನ್ನೇ ತನ್ನ ಉಪಜೀವನ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಹೀಗೆ ಬರಬರುತ್ತ ವಿವಿಧ ಕಸುಬುಗಳನ್ನು ತಮ್ಮ ಉಪಜೀವನ ವೃತ್ತಿಯನ್ನಾಗಿಸಿಕೊಂಡ ಒಂದು ವರ್ಗವೇ ಸಾಮಾಜಿಕ ಜೀವನದಲ್ಲಿ ರೂಪುಗೊಂಡಿತು. ಬಳ್ಳಾರಿ ಜಿಲ್ಲೆಯಾದ್ಯಂತ ಪುರಾತನ ಕಾಲದಿಂದಲೂ ಬೆಳೆದುಕೊಂಡು ಬಂದಿರುವ ಹಲವಾರು ಕುಲಕಸುಬುಗಳನ್ನು ಕಾಣಬಹುದು. ಬಳ್ಳಾರಿ ಜಿಲ್ಲೆಯಲ್ಲಿರುವ ಪ್ರಮುಖ ಕುಲಕಸುಬುಗಳೆಂದರೆ ಕುಂಬಾರಿಕೆ, ಕಮ್ಮಾರಿಕೆ, ಪತ್ತಾರಿಕೆ, ಬಡಗಿತನ, ಶಿಲ್ಪಗಾರಿಕೆ, ಗಾಣಗಾರಿಕೆ, ಕಲ್ಲು ಕುಟಿಗತನ, ಚಮ್ಮಾರಿಕೆ, ಸುಣ್ಣಗಾರಿಕೆ, ಬಳೆಗಾರಿಕೆ, ಕ್ಷೌರಿಕವೃತ್ತಿ, ಮಡಿವಾಳಗಾರಿಕೆ, ಹೂಗಾರಿಕೆ, ಪೂಜಾರಿಕೆ, ದೋಶಿಗಾರಿಕೆ, ಉಪ್ಪಾರಿಕೆ, ಒಕ್ಕಲುತನ, ಪಿಂಜರಿಕೆ, ಪೂಜಾರಿಕೆ, ತಳವಾರಿಕೆ, ವೈದ್ಯಗಾರಿಕೆ, ಮೇದಾರಿಕೆ, ನೇಕಾರಿಕೆ, ಸಿಂಪಿಗಾರಿಕೆ ಮುಂತಾದವುಗಳು ಇವುಗಳೆಲ್ಲವೂ ಪ್ರಾಚೀನ ಕಾಲದಿಂದಲೂ ವಂಶಪಾರಂಪರ್ಯವಾಗಿ ಮಾಡುತ್ತಾ ಬಂದಿರುವ ಕುಲಕಸುಬುಗಳು. ಇವುಗಳನ್ನು ರೂಢಿಸಿಕೊಂಡಿರುವವರು ಕುಲಕಸುಬುದಾರರು. ಕುಲಕಸುಬುಗಳು ತಲತಲಾಂತರದಿಂದ ತಂದೆಯಿಂದ ಮಗನಿಗೆ, ಅತ್ತೆಯಿಂದ ಸೊಸೆಗೆ ಕೊಡಲಾದ ಕರಕೌಶಲ್ಯದ ಕಸುಬು ನಿಧಾನವಾಗಿ ಜಾತಿ, ಪಂಗಡಗಳಾಗಿ ರೂಪಿತವಾದವು.

ಈ ಮೇಲೆ ಸೂಚಿಸಲಾದ ಕುಲಕಸುಬುಗಳಲ್ಲಿ ಕೆಲವು ವರ್ಷದ ಎಲ್ಲಾ ಕಾಲದಲ್ಲಿಯೂ ಕೆಲಸ ಕೊಡುವ ಕಸುಬುಗಳಿವೆ. ಅವುಗಳಲ್ಲಿ ಪ್ರಮುಖವೆಂದರೆ ನೇಕಾರಿಕೆ, ಬಡಗಿತನ, ಪತ್ತಾರಿಕೆ ಚಮ್ಮಾರಿಕೆ, ಬಳೆಗಾರಿಕೆ, ಕ್ಷೌರಿಕವೃತ್ತಿ ಮಡಿವಾಳ ವೃತ್ತಿ, ಪೂಜಾರಿಕೆ, ತಳವಾರಿಕೆ, ವೈದ್ಯಗಾರಿಕೆ, ಮೇದಾರಿಕೆಗಳು. ಅವುಗಳೆಂದರೆ ಕೆಲವು ಕಸುಬುಗಳು ಕೆಲವೇ ಋತುಗಳಲ್ಲಿ ಮಾತ್ರ ಕಾರ್ಯ ನಿರ್ವಹಿಸಬಹುದಾದ ಕಸುಬುಗಳು. ಅವುಗಳೆಂದರೆ ಕಮ್ಮಾರಿಕೆ, ಕುಂಬಾರಿಕೆ, ಒಕ್ಕಲುತನ ಉಪ್ಪಾರಿಕೆ, ಮೀನುಗಾರಿಕೆ, ಗಾಣಗಾರಿಕೆಗಳು.

ಕುಲಕಸುಬುದಾರರು ವರ್ಷದ ಕೆಲವು ತಿಂಗಳು ಪ್ರಧಾನ ಕಸುಬುಗಳಲ್ಲಿ ಕಾರ್ಯನಿರ್ವಹಿಸಿ ಉಳಿದ ತಿಂಗಳುಗಳಲ್ಲಿ ಕೃಷಿ, ಕೈಗಾರಿಕೆ ಇತ್ಯಾದಿ ಚಟುವಟಿಕೆಗಳಲ್ಲಿ ಕೆಲಸ ಮಾಡುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿರುವ ಕೈಗಾರಿಕರಣ ಮತ್ತು ಗಣಿಗಾರಿಕೆ ಕುಲಕಸುಬುಗಳನ್ನು ಮೂಲೆಗುಂಪು ಮಾಡಿವೆ. ಗಣಿಗಾರಿಕೆಯಲ್ಲಿ ನೀಡುವ ಕೂಲಿಯ ಪ್ರಮಾಣ ಹೆಚ್ಚಾಗಿರುವುದರಿಂದ ಕುಲಕಸುಬುದಾರರು ಮೂಲ ವೃತ್ತಿಯನ್ನು ಬಿಟ್ಟುಕೊಟ್ಟು ಕೈಗಾರಿಕೆ ಮತ್ತು ಗಣಿಗಳಲ್ಲಿ ಕೂಲಿಗಳಾಗಿ ದುಡಿಯುತ್ತಿದ್ದಾರೆ. ಮತ್ತೆ ಕೆಲವು ಕುಲಕಸುಬುದಾರರು ತಮಗೂ ಕೆಲಸವಿಲ್ಲದೇ ಬೇರೆ ಕಡೆಯೂ ಕೆಲಸಮಾಡಲು ಇಷ್ಟವಿಲ್ಲದೆ ಅತಂತ್ರ ಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ನೇಕಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಮೇದಾರಿಕೆ, ಗಾಣಗಾರಿಕೆ, ಚಮ್ಮಾರಿಕೆ, ಸುಣ್ಣಗಾರಿಕೆ, ಬಳೆಗಾರಿಕೆ, ಮಡಿವಾಳಗಾರಿಕೆ, ಹೂಗಾರಿಕೆ, ಪೂಜಾರಿಕೆ, ಮುಂತಾದ ಕುಲಕಸುಬುಗಳು ಜಿಲ್ಲೆಯಲ್ಲಿ ವಿನಾಶದ ಅಂಚಿನಲ್ಲಿರುವುದು ಕಂಡುಬರುತ್ತದೆ.

ಗ್ರಾಮೀಣ ಪ್ರದೇಶದಲ್ಲಿರುವ ಕುಲಕಸುಬುದಾರರು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿವುದು ಮತ್ತು ತಮಗೆ ಹೊಂದಾಣಿಕೆಯಾಗದ ಯಾವ ಯಾವುದೋ ಕೆಲಸಗಳಲ್ಲಿ ಸೇರಿಕೊಂಡು ಕೂಲಿಕಾರರಾಗುತ್ತಿರುವುದು ಕಂಡುಬರುತ್ತಿದೆ.

ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಆಗಾಧವಾಗಿ ಬೆಳೆಯುತ್ತಿರುವ ಜನಸಂಖ್ಯೆ, ಬಡತನ, ನಿರುದ್ಯೋಗ, ಅರೆನಿರುದ್ಯೋಗ, ಅನಕ್ಷರತೆ, ಆದಾಯ ಹಂಚಿಕೆಯ ಅಸಮಾನತೆ, ಪ್ರಾದೇಶಿಕ ಅಸಮತೋಲನ, ಭೂ ಹಿಡುವಳಿ ಸಮಸ್ಯೆ, ಪರಿಸರ ಮಾಲಿನ್ಯದ ಸಮಸ್ಯೆ ಇನ್ನು ಮುಂತಾದ ಜ್ವಲಂತ ಸಮಸ್ಯೆಗಳನ್ನು ಇಲ್ಲಿ ಕಾಣಬಹುದು.[೪] ಇಂತಹ ಮೂಲಭೂತ ಸಮಸ್ಯೆಗಳಿರುವ ನಮ್ಮ ದೇಶದಲ್ಲಿ ಗುಡಿ ಕೈಗಾರಿಕೆ ಅಥವಾ ಕುಲಕಸುಬುಗಳು ದೇಶದ ಸಾಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿ ಅಭಿವೃದ್ಧಿ ದೃಷ್ಟಿಯಿಂದ ಮಹತ್ವ ಪಡೆದುಕೊಂಡಿವೆ.

ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಹೇಳುವಂತೆ " ಭಾರತದ ಉದ್ಧಾರ ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿಯಿಂದ ಮಾತ್ರ ಸಾಧ್ಯ"[೫] "ಗುಡಿ ಕೈಗಾರಿಕೆಗಳು ಹಾಳಾದರೆ, ಹಳ್ಳಿಗಳು ಹಾಳೇ, ಹಳ್ಳಿಗಳು ಹಾಳಾದರೆ ಹಿಂದೂಸ್ಥಾನವೂ ಹಾಳೇ, ಆಮೇಲಂತೂ ಅದು ಭಾರತವೇ ಅಲ್ಲ" ಎಂದು ಗಾಂಧಿಯವರು ಅಭಿಪ್ರಾಯಪಟ್ಟಿದ್ದಾರೆ.[೬] ಇಂದಿನ ಹಳ್ಳಿಗಳ ಸ್ಥಿತಿಯನ್ನು ಗಮನಿಸಿದರೆ ಇಂದು ನಗರಗಳು ಆಳುತ್ತಿವೆ, ಹಳ್ಳಿಗಳನ್ನು ಹಿಂಡುತ್ತಿವೆ. ಹಾಗಾಗಿ ಅವು ಮಣ್ಣು ಗೂಡುತ್ತಿವೆ. ಹಳ್ಳಿಗಳ ಶೋಷಣೆಯೇ ಸಂಘಟಿತ ಹಿಂಸೆ. ಸ್ವರಾಜ್ಯವನ್ನು ಅಹಿಂಸೆಯ ಆಧಾರದ ಮೇಲೆ ನಿರ್ಮಿಸ ಬಯಸುವೆವಾದರೆ ಹಳ್ಳಿಗಳಿಗೆ ಹಾಗೂ ಹಳ್ಳಿ ವೃತ್ತಿಗಳಿಗೆ ನಾವು ಯೋಗ್ಯ ಸ್ಥಾನ ಕೊಡಲೇಬೇಕು"[೭] ಗ್ರಾಮ ಉದ್ಯೋಗಗಳು ಮಾಯವಾದ ದೆಸೆಯಿಂದ ನಮ್ಮ ಹಳ್ಳಿಗಳು ವಿನಾಶದ ಅಂಚಿನಲ್ಲಿವೆ. ಗ್ರಾಮ ಉದ್ಯೋಗಗಳ ಪುನರುಜ್ಜೀವನದಿಂದ ಮಾತ್ರವೇ ಹಳ್ಳಿಗಳ ಪುನರುದ್ಧಾರ ಸಾಧ್ಯ."[೮]

ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ಕುಲಕಸುಬುಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿವೆ. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಣೆ ಮಾಡಬಹುದು:

ಕುಲಕಸುಬುಗಳು ಶ್ರಮ ಪ್ರಧಾನವಾದವುಗಳು.[೯] ಅವು ಪುರಾತನ ಕಾಲದಿಂದಲೂ ಬೆಳೆದುಕೊಂಡು ಬಂದಿರುವ ಹಾಗೂ ದೈಹಿಕ ಶ್ರಮಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುವಂತಹವುಗಳು. ಮಿತಿ ಮೀರಿ ಬೆಳೆಯುತ್ತಿರುವ ಜನಸಂಖ್ಯೆ ಲಕ್ಷಾಂತರ ನಿರುದ್ಯೋಗಿಗಳು ಮತ್ತು ಅರೆ ಉದ್ಯೋಗಿಗಳಿರುವ ಭಾರತ ದೇಶದಲ್ಲಿ ಗುಡಿ ಕೈಗಾರಿಕೆಗಳು ಉದ್ಯೋಗ ಸೃಷ್ಟಿ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಬಲ್ಲವು. ದೊಡ್ಡ ಪ್ರಮಾಣದ ಶ್ರಮ ಮತ್ತು ಬಂಡವಾಳದ ಕೊರತೆಯ ಸಮಸ್ಯೆಗಳನ್ನು ಎದುರಿಸುತ್ತಿರುವ ಭಾರತದಲ್ಲಿ ಗುಡಿ ಕೈಗಾರಿಕೆಗಳು ಮಹತ್ವ ಪಡೆಯುತ್ತವೆ.

ಕುಲಕಸುಬುಗಳು ಕೃಷಿ ಅವಲಂಬಿತವಾಗಿರುವುದರಿಂದ ಕೃಷಿ ಬೆಳವಣಿಗೆ ನೆರವಾಗುತ್ತವೆ. ಹಳ್ಳಿಗಾಡಿನ ಜನರಿಗೆ ಉದ್ಯೋಗ ನೀಡುತ್ತಿರುವುದು ಯಾಂತ್ರಿಕರಣದಿಂದಲ್ಲ, ಅವರು ಇಂದಿನ ತನಕ ಅವಲಂಬಿಸಿರುವ ಕುಲಕಸುಬುಗಳು.[೧೦]

ಗುಡಿ ಕೈಗಾರಿಕೆಗಳು ಕೃಷಿ ಅಭಿವೃದ್ಧಿಗೆ ನೆರವಾಗುವುದರ ಜೊತೆಗೆ ಪೂರಕವಾಗಿ ಕೆಲಸ ಮಾಡುತ್ತವೆ. ನೇಕಾರಿಕೆ, ಕಮ್ಮಾರಿಕೆ ಬಡಗಿತನ, ಗಾಣಗಾರಿಕೆ, ಚಮ್ಮಾರಿಕೆ ಮುಂತಾದ ಕಸುಬುಗಳು ಕೃಷಿ ಬೆಳವಣಿಗೆಗೆ ಪೂರಕವಾಗಿವೆ. ಜೊತೆಗೆ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುತ್ತವೆ.

ಕುಲಕಸುಬುಗಳನ್ನು ಪ್ರಾರಂಭಿಸುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಅಲ್ಪ ಪ್ರಮಾಣದ ಹಣಕಾಸು ಸಾಕು. ಬಂಡವಾಳದ ಕೊರತೆ ಎದುರಿಸುತ್ತಿರುವ ನಮ್ಮ ದೇಶದಲ್ಲಿ ಈ ಕಸುಬುಗಳು ವಿಶೇಷ ಮಹತ್ವ ಪಡೆದಿವೆ. ಗುಡಿ-ಕೈಗಾರಿಕೆಗಳಲ್ಲಿ ಬಂಡವಾಳ ಮತ್ತು ಉದ್ಯೋಗ ಪ್ರಮಾಣಗಳ ಅನುಪಾತ ಮಿತವಾಗಿರುತ್ತದೆ. 'ಅರ್ಥಶಾಸ್ತ್ರಜ್ಞ ಪಿ.ಸಿ. ಮಹಲ್‌ನೋಬಿಸ್ ಪ್ರಕಾರ ಗುಡಿ ಕೈಗಾರಿಕೆಗಳು ಕಡಿಮೆ ಬಂಡವಾಳದಲ್ಲಿ ಹೆಚ್ಚು ಪಟ್ಟು ಉದ್ಯೋಗಗಳನ್ನು ಸೃಷ್ಟಿಸುತ್ತವೆ.[೧೧] ಅನಕ್ಷರಸ್ತರು, ಅವಿದ್ಯಾವಂತರು, ಯಾವುದೇ ತರಬೇತಿ ಇಲ್ಲದವರೇ ಹೆಚ್ಚಾಗಿರುವ ಹಾಗೂ ಕೌಶಲ್ಯವಿಲ್ಲದೆ ಕೆಲಸಗಾರರೇ ಬಹಳವಾಗಿ ಸಿಗುವ ನಮ್ಮ ದೇಶದಲ್ಲಿ ಗೃಹ ಕೈಗಾರಿಕೆಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

ಕುಲಕಸುಬುಗಳು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತವೆ. ಸಮಾಜದಲ್ಲಿ ಪ್ರತಿಯೊಬ್ಬರು ಒಂದಲ್ಲ ಒಂದು ಕಸುಬನ್ನು ನಿರ್ವಹಿಸುತ್ತಿರುವುದರಿಂದ ಅವುಗಳಲ್ಲಿ ಪರಸ್ಪರ ಅವಲಂಬನೆಯನ್ನು ಕಾಣಬಹುದು. ಕುಲಕಸುಬುಗಳೆಲ್ಲವೂ ಒಂದಕ್ಕೊಂದು ಪೂರಕವಾಗಿವೆ. ಇದರಿಂದ ಸಮಾಜದಲ್ಲಿ ಸಹಾಯ, ಸಹಕಾರ, ಸಮಾನತೆ, ಏಕತೆ ಮತ್ತು ಐಕ್ಯತೆಯನ್ನು ಕಾಣಬಹುದು. ಸಮಾಜದಲ್ಲಿ ಪ್ರತಿಯೊಬ್ಬರ ನಡುವೆ ಸಾಮರಸ್ಯವನ್ನು ಇವು ಸೃಷ್ಟಿ ಮಾಡಿದೆ.

ಕುಲಕಸುಬುಗಳು ವಂಶಪರಂಪರೆಯಾಗಿ ಬೆಳೆದುಕೊಂಡು ಬ೧ದಿವೆ. ಇವು ಸ್ವಯಂ ಉದ್ಯೋಗವನ್ನು ಕಲ್ಪಿಸಿಕೊಟ್ಟಿವೆ. ಇದರಿಂದಾಗಿ ಜನ ಉದ್ಯೋಗಗಳನ್ನು ಹುಡುಕಿಕೊಂಡು ಹೋಗುವ ಅವಶ್ಯಕತೆ ಇರುವುದಿಲ್ಲ. ತಮ್ಮ ಜಾತಿ ಕಸುಬನ್ನು ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ಆದಾಯವನ್ನು ಗಳಿಸಿಕೊಳ್ಳಬಹುದಾಗಿದೆ. ಕುಲಕಸುಬುಳ್ಳವರು ನಿರುದ್ಯೋಗಿಗಳಾಗಿರುವುದು ಕಡಿಮೆ. ಸಮಾಜದಲ್ಲಿ ಎಲ್ಲರೂ ವಿವಿಧ ರೀತಿಯ ಕಸುಬುಗಳಲ್ಲಿ ತೊಡಗಿರುವುದರಿಂದ ಆದಾಯ ಎಲ್ಲರಲ್ಲೂ ಹಂಚಿಕೆಯಾಗುತ್ತದೆ. ಸಮಾಜದಲ್ಲಿ ಆದಾಯ ಮತ್ತು ಸಂಪತ್ತಿನ ಕೇಂದ್ರೀಕರಣದ ಸಮಸ್ಯೆ ಇರುವುದಿಲ್ಲ.

ಸಮಾಜದಲ್ಲಿನ ಭೂಮಿ ಇಲ್ಲದವರು ಸುಲಭವಾಗಿ ತಮ್ಮ ಕೌಶಲ್ಯಕ್ಕನುಗುಣವಾಗಿ ವೃತ್ತಿಯನ್ನು ಆಯ್ಕೆಮಾಡಿಕೊಂಡು ಜೀವನ ಸಾಗಿಸಬಹುದು. ಉದ್ದಿಮೆಗಳಲ್ಲಿರುವ ಹಾಗೆ ಮತ್ತೊಬ್ಬರನ್ನು ಅವಲಂಬಿಸದೇ ಸ್ವತಂತ್ರವಾಗಿ ಕಾರ್ಯನಿರ್ವಹಿಸಿ ಆದಾಯಗಳಿಸಿಕೊಳ್ಳಬಹುದು.

ಕುಲಕಸುಬುಗಳು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುತ್ತವೆ. ಮತ್ತು ಸ್ಥಳೀಯರ ಅವಶ್ಯಕತೆಗಳಿಗನುಗುಣವಾಗಿ ಸರಕುಗಳನ್ನು ತಯಾರಿಸಿ ಪೂರೈಸುತ್ತವೆ. ಇಲ್ಲಿ ನೈಸರ್ಗಿಕ ಸಂಪನ್ಮೂಲಗಳ ಅಪವ್ಯಯವಾಗುವುದಿಲ್ಲ. ನೈಸರ್ಗಿಕ ಸಂಪನ್ಮೂಲಗಳ ಶೋಷಣೆಯ ಪ್ರಮಾಣ, ಕಡಿಮೆ. ಕುಲಕಸುಬುಗಳು, ದೊಡ್ಡ ಉದ್ದಿಮೆಗಳು ಸೃಷ್ಟಿಸುವ ಜಲ, ವಾಯು, ಶಬ್ದ, ಭೂಮಿ ಮಾಲಿನ್ಯವನ್ನು ಸೃಷ್ಟಿ ಮಾಡುವುದಿಲ್ಲ.

ಕುಲಕಸುಬುಗಳಲ್ಲಿ ಯಂತ್ರಗಳ ಬಳಕೆ ಕಡಿಮೆ. ದುಡಿಯಲು ಆಸಕ್ತಿ ಇರುವ ಯಾರು ಬೇಕಾದರೂ ಈ ವೃತ್ತಿಗಳನ್ನು ಅಳವಡಿಸಿಕೊಳ್ಳಬಹುದು. ಇವುಗಳನ್ನು ಕಲಿಯುವುದು ಸುಲಭ ಯಾವುದೇ ಶಾಲಾ, ಕಾಲೇಜು, ತರಬೇತಿ ಕೇಂದ್ರಗಳಿಗೆ ಹೋಗಿ ಕಲಿಯುವ ಅವಶ್ಯಕತೆ ಇಲ್ಲ. ವೃತ್ತಿದಾರರ ಜೊತೆ ಒಡನಾಟವನ್ನು ಬೆಳೆಸಿಕೊಂಡರೆ ವೃತ್ತಿಯ ಬಗ್ಗೆ ತಿಳಿದುಕೊಳ್ಳಬಹುದು. ಇವುಗಳಲ್ಲಿ ಕೆಲವು ಕಸುಬುಗಳು ವಿರಾಮ ಕಾಲದಲ್ಲಿಯೂ ಮಾಡಬಹುದು.

ಕುಲಕಸುಬುಗಳಲ್ಲಿ ಮಹಿಳೆಯರು ಪ್ರಧಾನವಾಗಿರುವರು. ಬಟ್ಟೆ ನೇಯ್ಗೆ, ಕುಂಬಾರಿಕೆ, ಮೇದಾರಿಕೆ, ಹೂಗಾರಿಕೆ, ಬಳೆಗಾರಿಕೆ, ಯಂತಹ ವೃತ್ತಿಗಳಲ್ಲಿ ಹೆಚ್ಚಾಗಿ ಮಹಿಳೆಯರೇ ಕಾರ್ಯನಿರ್ವಹಿಸುತ್ತಾರೆ. ಮಹಿಳೆಯರು ಮನೆಯಲ್ಲಿಯೇ ವಿರಾಮದ ವೇಳೆಯಲ್ಲಿ ವಿವಿಧ ರೀತಿಯ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡಬಹುದು. ಇದರಿಂದ ಕುಟುಂಬಕ್ಕೆ ಹೆಚ್ಚಿನ ಆದಾಯವನ್ನು ಗಳಿಸಲು ಇಂತಹ ವೃತ್ತಿಗಳು ನೆರವಾಗುತ್ತವೆ. ಗೃಹ ಕೈಗಾರಿಕೆಗಳನ್ನು ತ್ವರಿತವಾಗಿ ಪ್ರಾರಂಭಿಸಲು ಸಾಧ್ಯ. ಇದರಿಂದ ಶೀಘ್ರವಾಗಿ ಉತ್ಪಾದನೆಯನ್ನು ಪ್ರಾರಂಭಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಅವುಗಳಿಂದ ಕ್ಷಿಪ್ರಗತಿಯಲ್ಲಿ ಪ್ರತಿಫಲವನ್ನು ಪಡೆಯಲು ಸಾಧ್ಯ. ದೊಡ್ಡ ಉದ್ದಿಮೆಗಳಂತೆ ಹೆಚ್ಚಿನ ಕಾಲ ಪ್ರತಿಫಲಕ್ಕಾಗಿ ಕಾಯುವ ಸಾಧ್ಯತೆಯಿಲ್ಲ. ಗೃಹ ಅಥವಾ ಗುಡಿ ಕೈಗಾರಿಕೆಗಳನ್ನು ಎಲ್ಲಾ ಸ್ಥಳಗಳಲ್ಲಿ ಸ್ಥಾಪಿಸಬಹುದು. ಅಲ್ಲಿನ ಮಾನವ ಹಾಗೂ ನೈಸರ್ಗಿಕ ಸಂಪತ್ತನ್ನು ಬಳಸಿಕೊಳ್ಳಬಹುದು. ಇದರಿಂದ ಎಲ್ಲಾ ಪ್ರದೇಶಗಳು ಅಭಿವೃದ್ಧಿ ಹೊಂದುತ್ತವೆ. ಪ್ರಾದೇಶಿಕ ಅಸಮತೋಲನದಂತಹ ಸಮಸ್ಯೆ ಕುಲಕಸುಬುಗಳಿಂದ ನಿವಾರಣೆಯಾಗುತ್ತದೆ. ಸರಿಸಮನಾದ ಪ್ರಾದೇಶಿಕಾಭಿವೃದ್ಧಿಯನ್ನು ಸಾಧಿಸುವ ಮೂಲಕ ಸಂಪತ್ತಿನ ಸಮಾನ ಹಂಚಿಕೆಯಲ್ಲಿ ನೆರವಾಗುವುದರ ಮೂಲಕ ಜನಸಾಮಾನ್ಯರ ಜೀವನ ಮಟ್ಟವನ್ನು ಎತ್ತರಿಸಲು ಪೂರಕವಾಗಿ ವ್ಯವಹರಿಸುವುದರ ಮೂಲಕ ಸಮಾಜವಾದಿ ಮಾದರಿಯ ಸಮಾಜದ ಸ್ಥಾಪನೆಗೆ ಕುಲಕಸುಬುಗಳು ವಿಶೇಷವಾಗಿ ಸಹಾಯಕವಾಗಿವೆ.

ಫ್ಯಾಕ್ಟರಿ ಪದ್ಧತಿಯಲ್ಲಿರುವ ಪರಿಸರದ ಸಮಸ್ಯೆಗಳಾಗಲಿ, ಕಾರ್ಮಿಕರ ವಿವಾದವಾಗಲಿ, ಆದಾಯ ಸಂಪತ್ತಿನ ಕೇಂದ್ರಿಕರಣದ ಸಮಸ್ಯೆಗಳು ಕುಲಕಸುಬುಗಳಲ್ಲಿ ಉದ್ಭವಿಸುವುದಿಲ್ಲ. ಗುಡಿ

ಕೈಗಾರಿಕೆಗಳನ್ನು ಸಾಮಾನ್ಯವಾಗಿ ಭೂರಹಿತರು, ಅಲ್ಪಸಂಖ್ಯಾತರು ಹಿಂದುಳಿದವರು, ಪ್ರಾರಂಭಿಸಿರುವುದು ಮತ್ತು ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಮತ್ತು ಅವು ಅವರ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ನೆರವಾಗಿವೆ. ಕುಲಕಸುಬುಗಳು ಬರಗಾಲ, ಅಭಾವದ ವೇಳೆಗಳಲ್ಲಿ ತಕ್ಷಣದ ಪರಿಹಾರ ನೀಡುವುದರಿಂದ ಜನರ ಸಮಸ್ಯೆಗಳು ಕಡಿಮೆಯಾಗುತ್ತವೆ. ಕುಲಕಸುಬುಗಳು ಅದಾಯ ಮತ್ತು ಸಂಪತ್ತಿನ ಸಮಾನ ವಿತರಣೆ, ಉದೋಗ ಸೃಷ್ಟಿ, ಪ್ರಾದೇಶಿಕ ಅಸಮತೋಲನ ನಿವಾರಣ, ಜೀವನಮಟ್ಟದ ಸುಧಾರಣೆ, ಆದಾಯ ವೃದ್ಧಿ ಮುಂತಾದ ಪರಿಣಾಮಗಳ ಮೂಲಕ ಸಮಾಜವಾದಿ ಸಮಾಜದ ನಿರ್ಮಾಣಕ್ಕೆ ದಾರಿ ಮಾಡಿಕೊಡುತ್ತವೆ.

ಕುಲಕಸುಬುಗಳು ಸ್ಥಳೀಯ ಸಂಪನ್ಮೂಲಗಳಾಗಿರುತ್ತವೆ. ಅವು ಸಮತೋಲನ ಅಭಿವೃದ್ಧಿ ಹಾಗೂ ಸಂಪತ್ತಿನ ಸಮಾನ ಹಂಚಿಕೆಗೆ ಅನುಸರಿಸಬಹುದಾದ ಅತ್ಯುತ್ತಮ ಕಸುಬುಗಳು. ಅವು ಸ್ವಯಂ ಉದ್ಯೋಗವನ್ನು ಒದಗಿಸುವುದಕ್ಕೆ ಬದ್ಧವಾಗಿದ್ದು ಕುಶಲ ಕೆಲಸಗಾರರಿಗೆ ಅವರವರ ಮನೆಯಲ್ಲೇ ಉದ್ಯೋಗ ಒದಗಿಸುತ್ತವೆ. ಹಳ್ಳಿಗಳಲ್ಲಿನ ನಿರುದ್ಯೋಗ, ಅರೆನಿರುದ್ಯೋಗಗಳನ್ನು ಇಲ್ಲವಾಗಿಸುತ್ತವೆ. ಅವುಗಳು ಕೈಗಾರಿಕಾ ಕೇಂದ್ರಿಕರಣವನ್ನು ತಪ್ಪಿಸಿ ರಾಷ್ಟ್ರದ ಮೂಲೆ ಮೂಲೆಗಳಲ್ಲಿ ಪಸರಿಸುವುದಕ್ಕೆ ಅಥವಾ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಡುತ್ತವೆ. ಅವು ನಶಿಸಿ ಹೋಗುತ್ತಿರುವ ಭಾರತೀಯ ಕರಕುಶಲತೆಯನ್ನು ವಿಶೇಷವಾಗಿ ಪುನಃಶ್ಚೇತನಗೊಳಿಸುತ್ತವೆ. ಇದನ್ನು ಮನಗಂಡ ಮಹಾತ್ಮಗಾಂಧಿಯವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ. "ನನ್ನ ಆಕ್ಷೇಪಣೆ ಯಂತ್ರಗಳ ವಿರುದ್ಧವಲ್ಲ, ಆದರೆ ಅದಕ್ಕಾಗಿರುವ ಹುಚ್ಚುತನದ ವಿರುದ್ಧ. ನಾನು ವೇಳೆ ಮತ್ತು ಶ್ರಮವನ್ನು ಮಿತವ್ಯಯ ಮಾಡಲು ಇಚ್ಚಿಸುತ್ತೇನೆ, ಆದರೆ ಒಂದು ವಿಶೇಷ ಪಂಗಡಗಳಿಗಲ್ಲ. ಸಂಪೂರ್ಣ ಮಾನವತೆಗೆ[೨] ಗಾಂಧೀಯವರ ಪ್ರಕಾರ ಯಾವ ರಾಷ್ಟ್ರದಲ್ಲಿ ನೌಕರಿ ಕೊಡುವುದಕ್ಕಿಂತ ಹೆಚ್ಚು ಜನ ಇರುವರೋ ಇಲ್ಲಿ ಯಂತ್ರೋಪಕರಣಗಳ ಉಪಯೋಗ ಕೆಟ್ಟದ್ದು, ಯಂತ್ರವು ಶ್ರಮವನ್ನು ಉಳಿಸುತ್ತದೆ. ಆದರೆ ಅದರಿಂದ ಲಕ್ಷಗಟ್ಟಲೇ ಜನರು ಉದ್ಯೋಗದಿಂದ ಹೊರದೂಡಲ್ಪಡುತ್ತಾರೆ. ಉಪವಾಸದಿಂದ ಬೀದಿಗಳಲ್ಲಿ ಅಲೆದಾಡುವಂತಾಗುತ್ತಾರೆ."[೧೩]

ಸಮಾಜದಲ್ಲಿ ಜನರು ಪರಸ್ಪರ ಸಹಾಯ, ಸಹಕಾರ, ಭಾವೈಕ್ಯತೆಯಿಂದ ಬದುಕಲು ದೇಶದ ಅಭಿವೃದ್ಧಿಗೆ ನೆರವಾಗಲು ಕುಲಕಸುಬುಗಳು ಅಗತ್ಯವಾಗಿವೆ. ಗ್ರಾಮ ಉದ್ಯೋಗಗಳು ನಿರ್ನಾಮಗೊಂಡ ಭಾರತದ ಹಳ್ಳಿಗಳ ವಿನಾಶ ಪೂರ್ಣಗೊಂಡಂತೆಯೇ ಹಳ್ಳಿಗಾಡಿನವರಿಗೆ ಉದ್ಯೋಗ ನೀಡುವುದು ಯಾಂತ್ರೀಕರಣದಿಂದಲ್ಲ, ಅವರು ಇಂದಿನ ತನಕ ಅವಲಂಬಿಸಿರುವ ಉದ್ಯೋಗಗಳ ಪುನರುಜ್ಜೀವನದಿಂದಲೇ ಸಾಧ್ಯ ಎಂಬುದನ್ನು ಸರಕಾರ ಮನಗಾಣಬೇಕು. ಆದುದರಿಂದ ಈಗ ಇರುವ ಕುಲಕಸುಬುಗಳಿಗೆ ಉತ್ತೇಜನ ನೀಡುವುದು, ಸಾಧ್ಯವಿದ್ದ ಕಡೆ ಹಾಗೂ ಅಪೇಕ್ಷಣೀಯವಾಗಿದ್ದರೆ ಸಾಯುತ್ತಿರುವ ಅಥವಾ ಸತ್ತು ಹೋಗಿರುವ ಕುಲಕಸುಬುಗಳನ್ನು

ಹಳ್ಳಿಯ ವಿಧಾನಗಳಂತೆ, ಅಂದರೆ ಅನಾದಿಕಾಲದಿಂದ ಅವರು ಮಾಡುತ್ತಿರುವಂತೆ ಹಳ್ಳಿಗರು ತಮ್ಮ ತಮ್ಮ ಮನೆಗಳಲ್ಲೇ ನಡೆಸುವ ರೀತಿಯಲ್ಲಿ ಪುನರುಜ್ಜೀವನಗೊಳಿಸುವುದು ಸರ್ಕಾರದ ಆದ್ಯ ಕೆಲಸವಾಗಬೇಕು.[೧೪]

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಇಂದಿನ ಸಾಮಾಜಿಕ ಆರ್ಥಿಕ ವ್ಯವಸ್ಥೆಯಲ್ಲಿ ಕುಲಕಸುಬುಗಳು ಪ್ರಾಮುಖ್ಯತೆ ಹೊ ಂದಿರುವುದು ಕಂಡುಬರುತ್ತದೆ. ಅವುಗಳನ್ನು ಸಾಮಾಜಿಕ, ಆರ್ಥಿಕ ನೆಲೆಯಲ್ಲಿ ಅಭಿವೃದ್ಧಿಪಡಿಸುವುದು ಅತ್ಯಗತ್ಯ ಮತ್ತು ಅನಿವಾರ್ಯ.

ಅಡಿ ಟಿಪ್ಪಣಿಗಳು:

೧. ದೇವೇಂದ್ರಕುಮಾರ ಹಕಾರಿ, ಸಂಧ್ಯಾರೆಡ್ಡಿ (ಸಂ), ಗ್ರಾಮೀಣ ವೃತ್ತಿಗಳು, ಪು-೨೫.

೨. ಸಿ.ಕೆ.ನಾವಲಗಿ, ಜಾನಪದ ಸ್ಪಂದನ, ಪು-೬೧

೩. ಹೆಚ್.ವಿ.ನಾಗೇಶ, ಗ್ರಾಮಾಂತರ, ಪು-೧೫

೪. ಕೆ. ಭೈರಪ್ಪ, ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ, ಪು-೩೬೨

೫. ಅದೇ, ಪು-೩೬೫

೬. ಎಂ.ಕೆ.ಗಾಂಧಿ, ಅರ್ಥವಿಚಾರ, ಪು.೧೨೩

೭. ಅದೇ, ಪು-೧೨೩

೮. ಅದೇ, ಪು-೧೨೩

೯. ಅದೇ, ಪು-೯೯

೧೦. ಅದೇ, ಪು-೧೦೧

೧೧. S.S.Kanaka, Entrepreneurial Development, P-75

೧೨. ಎಂ.ಕೆ.ಗಾಂಧಿ, ಅರ್ಥವಿಚಾರ, ಪು-೧೯೯

೧೩. ಅದೇ, ಪು-೧೯೯

೧೪. ಅದೇ, ಪುಟ-೨೦೧.

ಅಧ್ಯಾಯ ೫

ಕುಲಕಸುಬುಗಳು ಮತ್ತು ಆಧುನಿಕತೆ

ಕುಲಕಸುಬುಗಳು ಮತ್ತು ಆಧುನಿಕತೆ

ಆಧುನೀಕರಣ ಎಂದರೆ ಎಲ್ಲರೂ ಶಿಕ್ಷಣ ಪಡೆಯುವುದು, ಎಲ್ಲರೂ ಉದ್ಯೋಗ ಹೊಂದುವುದು, ಎಲ್ಲರೂ ಉತ್ಪಾದನೆಯಲ್ಲಿ ಸಮನಾದ ಜವಾಬ್ದಾರಿ ಮತ್ತು ಪಾಲುದಾರಿಕೆಯನ್ನು ಹೊಂದುವುದು; ತಲಾ ಆದಾಯದ ಹೆಚ್ಚಳದ ಜೊತೆಗೆ ಮಾನವನ ಒಟ್ಟು ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ, ತಾಂತ್ರಿಕ, ಬೆಳವಣಿಗೆಯನ್ನು ಅರ್ಥಪೂರ್ಣವಾಗಿ ರೂಪಿಸಿಕೊಳ್ಳುವುದು ಎಂದರ್ಥ.

ಬೌದ್ಧಿಕ ವಿಕಾಸದ ಜೊತೆಗೆ ತಂತ್ರಜ್ಞಾನವನ್ನು ವೃದ್ಧಿಸಿ, ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಬೆಳೆಸುವುದೇ ಆಧುನಿಕತೆ. ರಾಷ್ಟ್ರದ ಆರ್ಥಿಕ, ರಾಜಕೀಯ ಸದೃಢತೆಯನ್ನು ಮಾನವ ಸಂಪನ್ಮೂಲಗಳ ಸಮರ್ಥ ಬಳಕೆಯಿಂದ ಸಮುದಾಯಗಳ ಘನತೆಯನ್ನು ಸರಿದೂಗಿಸಿ ಮುಂದಿನ ತಲೆಮಾರನ್ನು ಬೆಳೆಸುವುದು ಆಧುನಿಕತೆಯ ಮುಖ್ಯ ಗುರಿ.

ಆಧುನಿಕತೆಯ ಪ್ರವಾಹದಲ್ಲಿ ವೃತ್ತಿ ಜನಾಂಗಗಳ ಮನಸ್ಸಿನ ಪ್ರವೃತ್ತಿಯು ಸಮಷ್ಟಿ ಬದುಕಿನ ವಿಕಾಸವಾಗಿ ಘಟಿಸುತ್ತಿರುತ್ತದೆ. ಆಧುನೀಕರಣವು ವೃತ್ತಿದಾರರು ರೂಪಿಸಿಕೊಂಡಿರುವ ಒಂದು ವಿಧಾನ. ವಂಶಪಾರಂಪರ್ಯವಾಗಿ ರೂಪಿಸಿಕೊಂಡು ಬಂದಿರುವ ಕುಲಕಸುಬುದಾರರಿಗೆ ಆಧುನೀಕರಣವನ್ನು ಅರಗಿಸಿಕೊಳ್ಳುವ ಜಾಣ್ಮೆ, ಅರ್ಹತೆ, ಪ್ರಬುದ್ಧತೆ, ಶಕ್ತಿ, ಸಾಮರ್ಥ್ಯ ಹಾಗೂ ಧಾರಣಶಕ್ತಿ ಬಂದಿಲ್ಲವೆಂಬ ಮಾತುಗಳು ಜನಜನಿತ. ಹಾಗೆ ನೋಡಿದರೆ ಎಲ್ಲಾ ಬಗೆಯ ಬದಲಾವಣೆಗಳ ಪ್ರತಿಬಿಂಬವೇ ಆಧುನೀಕರಣ. ನಾಗರಿಕತೆಗಳ ವಿಕಾಸದ ಪ್ರಕ್ರಿಯೆಯೇ ಆಧುನೀಕರಣ. ಕಸುಬುಗಳ ರೂಪಾಂತರ ಅಥವಾ ವಿಕಾಸವೇ ಆಧುನೀಕರಣ ಎನ್ನಬಹುದು. ಆಧುನೀಕರಣ

ವ್ಯಕ್ತಿ ಮತ್ತು ಸಮುದಾಯಗಳ ನಡುವಿನ ಒಂದು ಬೌದ್ಧಿಕ, ತಾಂತ್ರಿಕ ಹಾಗೂ ವೈಚಾರಿಕವಾದ. ವೈಜ್ಞಾನಿಕವಾದವು ಸಂವೇದನೆಯಿಂದ ಸ್ವತಃ ತಮ್ಮ ವೃತ್ತಿಗಳ ಮಿತಿಗಳನ್ನು ಮೀರುತ್ತಾ ವೃತ್ತಿಗಳನ್ನು ಆಧುನೀಕರಿಸಿಕೊಳ್ಳುವುದೂ ಆಗಿದೆ.

ಆಧುನೀಕರಣದ ಮೂಲಕ ವೃತ್ತಿ ಸಮುದಾಯಗಳ ಸ್ಥಿತಿಯಲ್ಲಿ ಹೆಚ್ಚಿನ ಸುಧಾರಣೆಗಳನ್ನು ತರಲು ಸಾಧ್ಯ.[೨] ಇಂದಿನ ಸಮಾಜದಲ್ಲಿ ಕೈಗಾರೀಕರಣ, ಆಧುನೀಕರಣ, ಜಾಗತೀಕರಣ–ಇವೆಲ್ಲ ಒಂದೊಂದು ಹಂತವಾಗಿ ಮನುಷ್ಯನ ಬದುಕನ್ನು ಆವರಿಸಿವೆ. ಇವುಗಳಿಂದ ಬಿಡಿಸಿಕೊಳ್ಳುವ ಮಾತಿನ ಅಗತ್ಯವೇ ಇಲ್ಲ. ಆಧುನೀಕರಣದ ಹೊರತಾಗಿ ಬದುಕುತ್ತೇನೆ ಎಂಬುದು ಅಸಾಧ್ಯವಾದ ಮಾತು. ವೃತ್ತಿಗಳ ಆಧುನೀಕರಣ ಯಾರೋ ಕೆಲವರ ತೀರ್ಮಾನಗಳಿಂದಲ್ಲ. ಸ್ವತಃ ವೃತ್ತಿ ಸಮುದಾಯಗಳ ಅಂತಃ ಪ್ರೇರಣೆಗಳಿಂದಲೇ ಆಧುನೀಕರಣದ ಯಂತ್ರದ ಪ್ರಕ್ರಿಯೆಗಳು ಜರುಗುವುದು. ಆಧುನೀಕರಣ ಎಲ್ಲಾ ವೃತ್ತಿ ಸಮುದಾಯಗಳಲ್ಲಿ ಸಮಾನವಾಗಿ ಪರಿಣಾಮ ಬೀರಲು ಸಾಧ್ಯವಿಲ್ಲ.

ಆಧುನಿಕ ಲೋಕದ ಆವಿಷ್ಕಾರಗಳಿಗೆ ವಿಮುಖರಾಗಿ ಯಾವ ಕಸುಬುದಾರರು ಇರಬೇಕಾಗಿಲ್ಲ. ಬದಲಾವಣೆಗೆ ತಕ್ಕಂತೆ ವೃತ್ತಿಗಳನ್ನು ಮಾರ್ಪಡಿಸಿಕೊಳ್ಳುವುದು ಅತ್ಯಗತ್ಯ. ಆಧುನೀಕರಣ ಮತ್ತು ಜಾಗತೀಕರಣವನ್ನು ಸಕಾರಾತ್ಮಕವಾಗಿ ರೂಪಾಂತರಿಸಿಕೊಳ್ಳುವಂತೆಯೇ ನಕಾರಾತ್ಮಕವಾಗಿ, ವಿಕಾರವಾಗಿ ರೂಪಾಂತರಿಸಿಕೊಳ್ಳುವ ಅಪಾಯಗಳೂ ಇರುತ್ತವೆ. ಅಭಿವೃದ್ಧಿಯ ಕ್ರಮಗಳನ್ನು, ಆಧುನೀಕರಣದ ನೀತಿಗಳನ್ನು, ತಂತ್ರಗಳನ್ನು ರೂಪಿಸುವವರ ದೋಷಗಳಿಂದಾಗಿಯೇ ಎಷ್ಟೋ ಬಾರಿ ಅತ್ಯುತ್ತಮ ಬದಲಾವಣೆಯ ಅಂಶಗಳು ಸೋತುಹೋಗುತ್ತವೆ.

ಬ್ರಿಟಿಷರ ಆಡಳಿತಾವಧಿಯಲ್ಲಿ ಭಾರತದಲ್ಲಿದ್ದ ವಿವಿಧ ಕರಕುಶಲ ವೃತ್ತಿಗಳು ಮತ್ತು ಸಮುದಾಯಗಳು ಮೂಲೆಗುಂಪಾಗಿದ್ದವು. ಸ್ವಾತಂತ್ರ್ಯದ ನಂತರ ಭಾರತದಲ್ಲಿ ವೈವಿಧ್ಯಮಯವಾಗಿ ಬೆಳೆದು ಭಾರತದ ಪರಂಪರೆ ಹಾಗೂ ಆರ್ಥಿಕ ಸ್ಥಿತಿಯನ್ನು ಔನ್ನತ್ಯಕ್ಕೆ ಕೊಂಡೊಯ್ದ ವೃತ್ತಿಗಳು ಅವಸಾನದ ದಾರಿ ಹಿಡಿದವು.[೩] ದೇಶಿ ಉತ್ಪಾದನಾ ವಿಧಾನಕ್ಕೆ ಮಾರುಕಟ್ಟೆಯೇ ಇಲ್ಲದಂತೆ ವ್ಯವಸ್ಥೆಯನ್ನು ರೂಪಿಸಲಾಗಿದೆ. ಜೊತೆಗೆ ಸ್ವಾತಂತ್ರ್ಯ ನಂತರದ ಭಾರತದ ಆರ್ಥಿಕ ಯೋಜನೆಗಳು ದೇಶೀ ತಂತ್ರಜ್ಞಾನದ ವಿಧಾನಗಳನ್ನೇ ಕಡೆಗಾಣಿಸಿ ಯೂರೋಪಿನ ಕೈಗಾರಿಕಾ ಕ್ರಾಂತಿಯ ಪೊಳ್ಳು ಮಾದರಿಗಳನ್ನು ಅನುಕರಿಸುವ ಮೂಲಕ ಅನೇಕ ವೃತ್ತಿ ಸಮುದಾಯಗಳ ಆರ್ಥಿಕ ವ್ಯವಸ್ಥೆಯನ್ನೇ ದುರ್ಬಲಗೊಳಿಸಲಾಯಿತು. ವಿವಿಧ ಜಾತಿಗಳ ಕೈಯಲ್ಲಿದ್ದ ಕರಕುಶಲ ಉದ್ಯೋಗವನ್ನು ಕ್ಷೀಣಿಸುವಂತೆ ಅಥವಾ ಅದಕ್ಕೆ ಯಾವ ಪ್ರಾಮುಖ್ಯತೆ ಇಲ್ಲದಂತೆ ಮಾಡಿತು. ಆಧುನಿಕ ಜಗತ್ತಿನ ಆರ್ಥಿಕ ವ್ಯವಸ್ಥೆಗೆ ಹೊಂದಿಕೊಳ್ಳಲು ಸೂಕ್ತವಾದ ತರಬೇತಿಯೂ, ಸಿದ್ಧತೆಯೂ ವೃತ್ತಿ ಸಮುದಾಯಗಳಿಗೆ ಇಲ್ಲ. ಅದೂ ಅಲ್ಲದೆ ನಮ್ಮ ಎಲ್ಲ ಯೋಜನೆಗಳೂ ಪಶ್ಚಿಮದ ಅಭಿವೃದ್ಧಿಯ ಮಾನದಂಡಗಳನ್ನು ಮಾದರಿಯಾಗಿಟ್ಟುಕೊಂಡು ಬಂದಂತಹವು. ಇವತ್ತಿಗೂ ತಲೆತಲಾಂತರದಿಂದ ಉಳಿಸಿಕೊಂಡು

ಬಂದ ವೃತ್ತಿ ಸಮುದಾಯಗಳಿಗೆ ಅರ್ಥಪೂರ್ಣವಾದ ಯೋಜನೆಗಳೇ ಇಲ್ಲ. ಇಂದು ಕುಲಕಸುಬುದಾರರು ದೊಡ್ಡ ಉದ್ಯಮಗಳಲ್ಲಿ ಕೆಳಮಟ್ಟದ ಕೂಲಿಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಕುಲಕಸುಬುದಾರರು ಅನೇಕ ಸಮಸ್ಯೆಗಳ ನಡುವೆಯೇ ಆರ್ಥಿಕವಾಗಿ ಪರಾವಲಂಬಿಗಳಾಗಿ ರೂಪಾಂತರಗೊಳ್ಳುತ್ತಿದ್ದಾರೆ. ಉತ್ಪಾದನಾ ರೀತಿ ನೀತಿಗಳ ಬದಲಾವಣೆ ಕುಲಕಸುಬುದಾರರ ಮೂಲ ಆಶಯಕ್ಕೆ ತೊಂದರೆಯನ್ನುಂಟು ಮಾಡುತ್ತಿದೆ. ಇಂದು ಕುಲಕಸುಬುದಾರರು ಅನಿವಾರ್ಯವಾಗಿ ವೃತ್ತಿಯೇ ಅಲ್ಲದ ಎಂತೆಂತಹುದೋ ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ. ಅವರ ಬಡತನ, ಅನಾರೋಗ್ಯ, ಶಿಕ್ಷಣ ಮತ್ತು ಉದ್ಯೋಗದ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯೇ ನಮ್ಮ ಯೋಜನೆಗಳಿಗಿಲ್ಲ. ಅವರನ್ನು ಕರೆತಂದು ನಗರಗಳ ಕೊಳಗೇರಿಗಳಲ್ಲಿ ರಸ್ತೆಯಂಚಿನಲ್ಲಿ ಎಸೆದು, ಬೇಕಾದಾಗ ಬಳಸಿಕೊಂಡು ತೋರಿಸಬೇಕಾದಾಗ ಅವರ ಮೇಲೆ ಒಂದಿಷ್ಟು ಸರ್ಕಾರಿ ಸೇವೆಯ ಬೆಳಕು ಚೆಲ್ಲಿ ಮೆರೆಯುವವರೇ ಹೆಚ್ಚು. ಹೀಗಿದ್ದೂ ನೂರಾರು ವರ್ಷಗಳ ಅವಧಿಯಲ್ಲಿ ಕುಲಕಸುಬುದಾರ ಸಮುದಾಯಗಳು ಅನೇಕ ಬಗೆಯ ಆರ್ಥಿಕ, ಸಾಮಾಜಿಕ ರೂಪಾಂತರಗಳಿಗೆ ಒಳಗಾಗುತ್ತಿರುವುದು ಸಮಾಧಾನಕರ ಸಂಗತಿ.

ಆಧುನಿಕತೆಗೂ, ಪ್ರಾಚೀನತೆಗೂ ಸಂಬಂಧವನ್ನು ನಿರೂಪಿಸಲು ಸಾಧ್ಯವಾಗದೆ ಅವೆರಡರ ಮಧ್ಯೆ ವಿಚಿತ್ರ ರೀತಿಯ ಆರ್ಥಿಕ ಅಸಮಾನತೆಗೆ ಒಳಗಾಗುವುದು ಅಭ್ಯಾಸವಾಗಿ ಹೋಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಗುಡಿ ಕೈಗಾರಿಕೆ, ಕುಲಕಸುಬುಗಳ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿದ್ದರೂ ಅವು ಪರಿಣಾಮಕಾರಿಯಾಗಿ ಜಾರಿಗೆ ಬಂದಿಲ್ಲ. ಕುಲಕಸುಬುಗಳನ್ನು ನಿರ್ವಹಿಸುತ್ತ ಬಂದವರು ಇಂದು ಅತ್ಯಂತ ಕಡಿಮೆ ಕೂಲಿಯ, ಅನಿರ್ದಿಷ್ಟ ಕೂಲಿ ಕಾರ್ಮಿಕರಾಗಿ ರೂಪಾಂತರಗೊಳ್ಳುತ್ತಿದ್ದಾರೆ. ತಾಳ್ಮೆಯಿಂದ ಅವರನ್ನು ಉತ್ತಮ ಉತ್ಪಾದಕ ಸಮುದಾಯವಾಗಿ ಬದಲಿಸಲು ಆಗುತ್ತಿಲ್ಲ. ಇತ್ತೀಚೆಗೆ ವಿವಿಧ ಕಾರಣಗಳಿಂದಾಗಿ ವೃತ್ತಿ ಪರಿಣತಿ ಕಡಿಮೆ ಆಗುತ್ತಿದೆ. ಇದರಿಂದ ಅಪಾರವಾದ ಅಮೂಲ್ಯ ಮಾನವ ಸಂಪನ್ಮೂಲ ಅಪವ್ಯಯವಾಗುತ್ತಿದೆ.

ಕುಲಕಸುಬುದಾರರಲ್ಲಿರುವ ಕರಕೌಶಲ್ಯ, ಪ್ರತಿಭೆ, ಕಾರ್ಯವಿಧಾನವು ಆಧುನೀಕರಣದಿಂದಾಗಿ ಸೊರಗುತ್ತಿದೆ, ನಶಿಸಿಹೋಗುತ್ತಿದೆ. ಪ್ರತಿಭೆಯ ವಲಸೆಯನ್ನು ತಡೆದು ಮಾನವ ಸಂಪತ್ತನ್ನು ಮೊದಲು ಸರಿಯಾಗಿ ಉತ್ಪಾದನಾ ನೈಪುಣ್ಯತೆಗೆ ಒಳಪಡಿಸಬೇಕು. ಮಾನವ ಸಂಪತ್ತಿನ ದುರ್ಬಳಕೆ ಕೂಡ ಎಷ್ಟೋ ವೃತ್ತಿ ಸಮುದಾಯಗಳನ್ನು ಅಭಿವೃದ್ಧಿ ರೇಖೆಯಿಂದ ಹೊರಕ್ಕೆ ನೂಕಿದೆ. ಈ ವೃತ್ತಿ ಸಮುದಾಯಗಳ ಮಾನವ ಸಂಪತ್ತು ಪ್ರಧಾನಧಾರೆಯ ಉತ್ಪಾದನಾ ವಾಹಕಕ್ಕೆ ಸೂಕ್ತವಾಗಿ ಇನ್ನೂ ಬಳಕೆಯಾಗಿಲ್ಲ. ನಮ್ಮ ಕುಲಕಸುಬಗಳ ಒಂದೊಂದು ಅತ್ಯುತ್ತಮ ಉತ್ಪಾದನಾ ಘಟಕವಾಗಿ ರೂಪಿಸಲೂ ವ್ಯವಸ್ಥೆಯು ಸೋತಿದೆ. ಸೂಕ್ತವಾದ ಉತ್ಪಾದನಾ ವಿಧಾನಗಳೇ ಘಟಿಸುತ್ತಿಲ್ಲ. ಮಹಾತ್ಮ ಗಾಂಧಿಯವರು ಗುಡಿ ಕೈಗಾರಿಕೆಗಳಿಂದ ದೇಶದ ಸಮಸ್ಯೆಗಳಿಗೆ ಪರಿಹಾರ ಸಾಧ್ಯವೆನ್ನುತ್ತಿದ್ದರು.

'ಗುಡಿ ಕೈಗಾರಿಕೆಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ' ಎಂಬ ಮಾತು ಗಾಂಧಿ ಸಹವರ್ತಿಗಳ ಅಭಿಪ್ರಾಯವಾಗಿತ್ತು. ಆದರೆ ಇಂದಿನ ಸರಕಾರಗಳು ಗಾಂಧಿಯ ಆರ್ಥಿಕ ವ್ಯವಸ್ಥೆಯನ್ನು ಅನುಸರಿಸಲಾರದಷ್ಟು ದೂರಹೋಗಿವೆ. ಇಂದು ದೇಶೀ ನೈಪುಣ್ಯತೆ, ತಂತ್ರಜ್ಞಾನಗಳು ಕೂಡ ತಮ್ಮ ಆಕರ್ಷಣೆ ಮತ್ತು ಸಾಮರ್ಥ್ಯವನ್ನು ಕಳೆದುಕೊಂಡಿವೆ.

ಇಂದಿನ ತೀವ್ರ ಆರ್ಥಿಕಾಭಿವೃದ್ಧಿಯ ದಾರಿಯಲ್ಲಿ ಸಾಗುತ್ತಿರುವ ವೃತ್ತಿ ಸಮುದಾಯಗಳು ಇರುವ ಉತ್ಪಾದನಾ ಸ್ಥಿತಿ ಬಿಟ್ಟು ಕೊಡಲಾರದೆ ಈಗ ಬರುತ್ತಿರುವ ಹೊಸ ಹೊಸ ಆವಿಷ್ಕಾರಗಳ ಆರ್ಥಿಕ ರೂಪಗಳಿಗೂ ತಕ್ಷಣವೇ ಹೊಂದಿಕೊಳ್ಳಲಾರದೆ ಸಂಕಷ್ಟದಲ್ಲಿವೆ. ಈ ಸ್ಥಿತಿಗೆ ನಮ್ಮ ಆರ್ಥಿಕ ಯೋಜನೆಗಳ ತಪ್ಪು ನಿರ್ಧಾರಗಳೇ ಕಾರಣಗಳೆಂದು ಹೇಳಿದರೆ ತಪ್ಪಾಗಲಾರದು. ಈ ಸ್ಥಿತಿಯಲ್ಲಿ ಸರ್ಕಾರದ ಕೃಪಾಕಟಾಕ್ಷಕ್ಕೆ ಈ ವೃತ್ತಿ ಸಮುದಾಯಗಳು ಕಾಯುತ್ತ ಕುಳಿತರೆ ಅವರು ಇನ್ನೂ ಎಷ್ಟೋ ಕಾಲದವರೆಗೆ ಇದೇ ಸ್ಥಿತಿಯಲ್ಲಿರಬೇಕಾಗುತ್ತದೆ. ಉದ್ಯಮ ಶೀಲತೆಯೂ ಇಲ್ಲದಂತಾಗುತ್ತದೆ. ಅವರ ಆರ್ಥಿಕ, ಸಾಮಾಜಿಕ ಸ್ಥಿತಿ ಹೀನಯವಾಗುತ್ತಿದೆ. ಕುಲಕಸುಬುದಾರರಲ್ಲಿರುವ ನೈಪುಣ್ಯ ಮಾನವ ಸಂಪತ್ತನ್ನು ಆಧುನೀಕರಣ ಮತ್ತು ಜಾಗತೀಕರಣದ ಈ ಹೊತ್ತಿನಲ್ಲಿ ಅರ್ಥಪೂರ್ಣ ಆರ್ಥಿಕ ರೂಪಾಂತರಗಳಿಗೆ ಒಳಪಡಿಸಲೇಬೇಕಾದ ಅನಿವಾರ್ಯತೆ ನಮ್ಮೆದುರಿಗಿದೆ.

ಕುಲಕಸುಬುಗಳ ಸಮಸ್ಯೆಗಳ ಬಗ್ಗೆ ಹಾಗೂ ಅವುಗಳನ್ನು ಉಳಿಸಿಕೊಳ್ಳುವ ಕುರಿತು ನಮ್ಮ ಅನೇಕ ಆರ್ಥಿಕ ಹಾಗೂ ಸಾಮಾಜಿಕ ತಜ್ಞರು ವಿವಿಧ ನೆಲೆಗಳಲ್ಲಿ ದೀರ್ಘವಾಗಿ ಚಿಂತಿಸುತ್ತಲೇ ಬಂದಿದ್ದಾರೆ. ಒಟ್ಟು ಇಂದಿನ ಜಾಗತೀಕರಣವನ್ನೇ ಆರ್ಥಿಕ ರೂಪಾಂತರ ಎಂದು ಕರೆದು ಆ ಪ್ರವಾಹದಲ್ಲಿ ಈ ಎಲ್ಲಾ ಅಲಕ್ಷಿತ ಮಾನವ ಸಂಪತ್ತನ್ನು ವಿನಿಯೋಗಿಸಿಕೊಳ್ಳಬೇಕೆಂದು ಹೇಳುತ್ತಲೇ ಬಂದಿದ್ದಾರೆ. ಆದರೆ ಅದು ಹೇಗೆಂಬುದೇ ಬಗೆಹರಿಯದ ಸಮಸ್ಯೆ.

ಇಂದಿನ ಆಧುನಿಕ ತಂತ್ರಜ್ಞಾನ ಬಹಳ ಸೂಕ್ಷ್ಮವಾಗಿ ಉತ್ಪಾದನಾ ವಿಧಾನವನ್ನೇ ಬದಲಿಸಿದೆ. ಅದಕ್ಕಾಗಿಯೇ ಹಿಂದೆಯೇ ಕೈಗಾರಿಕಾ ಕ್ರಾಂತಿಗಳೂ ಘಟಿಸಿವೆ. ತಂತ್ರಜ್ಞಾನ ಇವತ್ತು ಜಗತ್ತನ್ನು ಆಳುತ್ತಿದೆ. ತಾಂತ್ರೀಕೃತ ರಾಜಕಾರಣ ವಿಶ್ವದ ಸ್ಥಿತಿಯನ್ನು ನಿಭಾಯಿಸುತ್ತಿದೆ. ತಂತ್ರಜ್ಞಾನ ಮತ್ತು ವಿಜ್ಞಾನದ ಆವಿಷ್ಕಾರಗಳಿಂದ ಆರ್ಥಿಕ ಜಗತ್ತು ವಿಶಾಲವಾಗಿದೆ. ತಂತ್ರಜ್ಞಾನವಿಲ್ಲದೆ ಇವತ್ತಿನ ನಮ್ಮ ಯಾವ ಮಹತ್ವದ ಯೋಜನೆಗಳೂ ಒಂದಿಂಚೂ ಜರುಗಲಾರವು. ತಂತ್ರಜ್ಞಾನ ಪ್ರಣೀತವಾದ ಆರ್ಥಿಕ ಗುರಿ ಮತ್ತು ಅಭಿವೃದ್ಧಿಯ ಹಂತಗಳು ನಾಗರೀಕತೆಯ ಜೊತೆಯಲ್ಲೇ ಸೂಕ್ಷ್ಮವಾಗಿ ಅಂತರಗಳನ್ನು ಬೆಳೆಸಿಬಿಟ್ಟಿದೆ.[೪] ಹಳೆಯ ಜಗತ್ತಿನ ಆರ್ಥಿಕ ಉತ್ಪಾದನಾ ವಿಧಾನಗಳಿಗೂ ವೈಜ್ಞಾನಿಕ ಕ್ರಾಂತಿಯುಗದ ಆರ್ಥಿಕ ವ್ಯವಸ್ಥೆಗಳಿಗೂ ಹಿಂದಿನಿಂದಲೂ ಸರಿಯಾದ ಸಂಬಂಧಗಳು ಜಗತ್ತಿನ

ಉದ್ದಕ್ಕೂ ಬೆಳೆದಿಲ್ಲ. ತಾಂತ್ರಿಕೃತ ಆರ್ಥಿಕ ವಿಕಾಸಗಳಲ್ಲಿ ಪಾರಂಪರಿಕ ಆರ್ಥಿಕ ಲೋಕ ಸಂಯೋಗವಾಗುವ ಬದಲು ದೂರ ಸರಿಯುವ ಪ್ರವೃತ್ತಿಯಿಂದಾಗಿಯೇ ಸಾಂಪ್ರದಾಯಿಕ ಉತ್ಪದನಾ ವಿಧಾನಕ್ಕೂ ವೈಜ್ಞಾನಿಕ ಉತ್ಪಾದನಾ ವಿಧಾನಕ್ಕೂ ವಿರೋಧಗಳು ಹುಟ್ಟಿಕೊಂಡಿವೆ. ಇದರಿಂದಾಗಿ ಸಾಂಪ್ರದಾಯಿಕ ಕಸುಬುಗಳ ಉಪೇಕ್ಷೆ ಮತ್ತು ನಿರಂತರವಾಗಿ ಅಸಮಾನತೆಗಳನ್ನು ಬೆಳೆಸಿರುವ ಪ್ರಕ್ರಿಯೆ.

ವೈಜ್ಞಾನಿಕ ತಾಂತ್ರಿಕ ಜಗತ್ತು ಆಧುನೀಕರಣದ ಭಾಗವಾಗಿಯೇ ಉತ್ಪಾದನಾ ನೈಪುಣ್ಯತೆಯ ಸಮುದಾಯಗಳನ್ನು ಆಯ್ಕೆ ಮಾಡಿಕೊಂಡು ಸಾಂಪ್ರದಾಯಿಕ ಪ್ರಾಚೀನ ಮುಗ್ಧ ಹಾಗೂ ನೈಪುಣ್ಯರಹಿತ ವೃತ್ತಿ ಸಮುದಾಯಗಳನ್ನು ಕೈಬಿಟ್ಟಿದೆ. ಹೀಗಾಗಿ ಅಭಿವೃದ್ಧಿಯ ಹಂತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವ ಹೆಚ್ಚಾಗಿದೆ. ನಮ್ಮ ಯೋಜನೆಗಳು ಇವುಗಳನ್ನು ಸರಿಯಾಗಿ ಬಳಸಿಕೊಂಡರೆ ಮಾತ್ರ ಸಮತೋಲನ ಬೆಳವಣಿಗೆ ಸಾಧ್ಯ. ಭಾರತದಲ್ಲಿ ಮೂಲತಃ ಇದ್ದುದು ಕರಕುಶಲ ತಾಂತ್ರಿಕ ನೈಪುಣ್ಯತೆಯ ಸಮುದಾಯಗಳೇ. ಈ ತಾಂತ್ರಿಕ ನೈಪುಣ್ಯವನ್ನು ನಾವು ಪಶ್ಚಿಮದ ತಾಂತ್ರಿಕತೆಯ ಜೊತೆಗೆ ಪೈಪೋಟಿಗಿಳಿಸಿ ಸೋತಿವೇ ವಿನಃ ಬೇರೆ ಕಾರಣದಿಂದಲ್ಲ. ಪಾಶ್ಚಿಮಾತ್ಯ ತಾಂತ್ರಿಕ ಉತ್ಪನ್ನದ ನೈಪುಣ್ಯತೆಯ ಎದುರು ಕುಲಕಸುಬು ಸಮುದಾಯಗಳನ್ನು ಸಮರ್ಥಿಸಿಕೊಳ್ಳಬೇಕಾದ ವಿಧಿ ವಿಧಾನಗಳು ನಮ್ಮಲ್ಲಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳ ಎಲ್ಲಾ ಬಗೆಯ ಉತ್ಪಾದನಾ ವಿಧಾನಕ್ಕೂ ಈ ಮಾತನ್ನು ಅನ್ವಯಿಸಲಾಗದಿದ್ದರೂ ನಮ್ಮಲ್ಲಿದ್ದ ಶಕ್ತಿಯನ್ನು ನಾವೇ ನಂಬಲಿಲ್ಲ. ಪಾಶ್ಚಿಮಾತ್ಯ ತಂತ್ರಜ್ಞಾನವನ್ನು ನಮ್ಮ ಪಾರಂಪರಿಕ ಕುಶಲತೆಯ ಜೊತೆ ಸಂಯೋಜಿಸಬೇಕಾಗಿತ್ತು. ಇದಕ್ಕೆ ನಮ್ಮ ಆಡಳಿತಗಾರರ ತಪ್ಪು ಆರ್ಥಿಕ ನೀತಿಗಳು ದಾರಿ ತಪ್ಪಿಸಿವೆ. ನಮ್ಮ ದೇಶಿ ಉತ್ಪನ್ನಗಳಿಗೆ ಮಾರುಕಟ್ಟೆ ಇಲ್ಲದಂತೆ ಮಾಡಿದ್ದರಲ್ಲಿ ನಮ್ಮ ಪಾಲೂ ಇದೆ. ಈಗಲೂ ಅಂತಹದೇ ಸ್ಥಿತಿ ಇದೆ. ದೇಶೀ ಆರ್ಥಿಕ ವ್ಯವಸ್ಥೆಯ ವಿಕಾರಗಳನ್ನು ತೊಡೆದು ಹಾಕುವುದಕ್ಕಾಗಿ ಮಾತ್ರ ಆಧುನೀಕರಣವನ್ನು, ತಾಂತ್ರೀಕರಣವನ್ನು ಅಳವಡಿಸಿಕೊಂಡಿದ್ದರೆ ಇಷ್ಟು ಹೊತ್ತಿಗೆ ಬಹುಪಾಲು ಎಲ್ಲಾ ನಮ್ಮ ಕರಕುಶಲ ತಾಂತ್ರಿಕ ಸಮುದಾಯಗಳು ದೊಡ್ಡ ಮಾನವ ಶಕ್ತಿಯಾಗಿ ಬೆಳೆದು ಬಿಟ್ಟಿರುತ್ತಿದ್ದವು. ಕರಕುಶಲ ಸಮುದಾಯಗಳ ಸಾಮಾಜಿಕ ರಚನೆಯ ವಿಕಾರವನ್ನು ನಿರ್ನಾಮ ಮಾಡಲು ಮಾತ್ರ ನಮಗೆ ಆಧುನೀಕರಣ, ವಿಜ್ಞಾನ, ತಂತ್ರಜ್ಞಾನಗಳು ಬೇಕಾಗಿತ್ತು. ದುರಾದೃಷ್ಟವಶಾತ್ ಆ ಬಗೆಯ ಬಳಕೆ ನಿಮ್ಮಿಂದ ಸಾಧ್ಯವಾಗಲಿಲ್ಲ. ಗುಡಿ ಕೈಗಾರಿಕೆಗಳನ್ನು ಆಧುನಿಕತೆಯ ಎದುರು ಬೆದರುಗೊಂಬೆಯಂತೆ ನಮ್ಮ ಆರ್ಥಿಕ ವ್ಯವಸ್ಥೆ ನಿಲ್ಲಿಸಿತು. ಈ ಬೆದರುಗೊಂಬೆಯ ಆರ್ಥಿಕ ವ್ಯವಸ್ಥೆಯನ್ನು ತಡೆಯಲು ಕಷ್ಟವಾಗಲಿಲ್ಲ. ನಾವೇ ನಮ್ಮ ಪ್ರಾಚೀನ ದೇಶೀ ಉತ್ಪದನಾ ತಂತ್ರಗಳನ್ನು ಶೋಧಿಸಲು ಹೋಗಲಿಲ್ಲ. ಇದು ವಸಾಹತುಶಾಹಿ ದೇಶಗಳ ವಿಪರ್ಯಾಸದ ಕತೆ. ಹೀಗಾಗಿಯೇ ಇವತ್ತಿಗೂ ನಮ್ಮದೇ ಆದ ನಮ್ಮ ಕಸುಬುದಾರರಿಗೆ ಸೂಕ್ತವಾದ

ಆರ್ಥಿಕ ನೀತಿಯನ್ನು ಸಮರ್ಥವಾಗಿ ರೂಪಿಸಿಕೊಳ್ಳಲು ಆಗುತ್ತಿಲ್ಲ. ಪಾಶ್ಚಿಮಾತ್ಯ ಕೈಗಾರಿಕಾ ಕ್ರಾಂತಿಯ ಮಾನವೀಯ ಸಂಬಂಧಗಳನ್ನು ಅದರ ನಾಗರೀಕತೆಯ ಮನುಷ್ಯ ಸಮಾಜಗಳ ಜಾಣತನವನ್ನು ಪ್ರಾದೇಶಿಕ ಸಾಂಸ್ಕೃತಿಕ ಅರಿವಿನ ಜೊತೆ ಹೊಂದಾಣಿಕೆ ಮಾಡಿಕೊಳ್ಳಲೇ ಬೇಕಾದ ಯುಗವಿದು. ಇಲ್ಲಿ ಒಂದು ದಿನ ತಡವಾದರೂ ನಮ್ಮ ಅಭಿವೃದ್ಧಿಯ ಅಂತರಗಳು ಸಾಕಷ್ಟು ದೂರ ಜಾರುತ್ತವೆ. ಸಾಂಪ್ರದಾಯಿಕ ಕ್ರಮದಿಂದ ಇಂದು ವಿಕಾಸವಾಗಿರುವ ಅಲಕ್ಷಿತ ಕುಲಕಸುಬುಗಳ ಮಾನವ ಸಂಪತ್ತು ತಮ್ಮ ಹಿಡಿತಗಳನ್ನು ಸಡಿಲಗೊಳಿಸಿಕೊಳ್ಳುತ್ತವೆ. ಹೀಗಾಗಿಯೇ ದೇಶಿಕರ ಕುಶಲ ತಂತ್ರಜ್ಞಾನದ ಅರ್ಥಪೂರ್ಣ ಸಂವಾದ ಜಾಗತೀಕರಣದ ಜೊತೆ ಆಗಬೇಕಾಗಿದೆ.

ಕುಲಕಸುಬು ಸಮುದಾಯಗಳು ಆರ್ಥಿಕ ಆಧುನಿಕ ರೂಪಾಂತರಗಳಿಗೆ ಬಳಸಿಕೊಳ್ಳುವುದು ಅನಿವಾರ್ಯ. ದೇಶೀಕರಣದಿಂದಲೇ ಪ್ರಾದೇಶಿಕ ಸಮಸ್ಯೆಗಳು ಬಗೆಹರಿಯಲಾರವು. ಹಾಗೆಯೇ ಸಂಪೂರ್ಣ ಆಧುನೀಕರಣ ಹಾಗೂ ಜಾಗತೀಕರಣಗಳಿಂದಲೇ ದೇಶದ ಕುಲಕಸುಬು ಸಮುದಾಯಗಳು ಏಳಿಗೆಯನ್ನು ಪಡೆಯಲಾರವು. ದೇಶೀಕರಣಕ್ಕೆ ಆಧುನೀಕರಣ, ವೈಜ್ಞಾನೀಕರಣ, ತಾಂತ್ರೀಕರಣದ ಸ್ಪರ್ಶವಿಲ್ಲದಿದ್ದರೆ ಜಡವಾಗುತ್ತದೆ. ಇವೆರಡನ್ನೂ ಸಂಯೋಜಿಸುವ ಮಾನವೀಕರಣದ ಪ್ರಕ್ರಿಯೆ ಪ್ರಾದೇಶಿಕವಾಗಿಯೇ ಉಂಟಾದರೆ ನಮ್ಮ ಕುಲಕಸುಬುದಾರರ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಾಧ್ಯವಾದಂತಾಗುತ್ತದೆ.

ವಂಶಪಾರಂಪರ್ಯವಾಗಿ ಬೆಳೆದು ಬಂದಿರುವ ಕುಲಕಸುಬುಗಳ ಮೇಲೆ ಆಧುನಿಕ ಅಂಶಗಳಾದ ಕೈಗಾರೀಕರಣ, ಜಾಗತೀಕರಣ, ವೈಜ್ಞಾನೀಕರಣ, ಯಾಂತ್ರೀಕರಣ, ಶಿಕ್ಷಣ, ತರಬೇತಿ, ಸಂಶೋಧನೆ ಮುಂತಾದವು ಪ್ರಭಾವ ಬೀರಿವೆ. ಕುಲಕಸುಬುಗಳಿಗೆ ಒಂದು ದೀರ್ಘವಾದ ಸಾಂಪ್ರದಾಯಿಕ ಪರಂಪರೆ ಇದೆ. ಮನುಕುಲದ ಚರಿತ್ರೆಯಲ್ಲಿ ಮಹಿಳೆಯರ ಕೈಕಸುಬಾಗಿ ಆರಂಭವಾದ ವೃತ್ತಿಗಳು ಒಂದು ವಿಶೇಷವಾದ ವಿಸ್ಮಯಕರ ಆವಿಷ್ಕಾರವಾಗಿ ಬೆಳೆದು ಬಂದಿವೆ. ನಾಗರೀಕತೆ ಬೆಳೆದಂತೆಲ್ಲಾ ಪಾರಂಪರಿಕ ವೃತ್ತಿಗಳಲ್ಲಿಯೂ ಹೊಸ ಹೊಸ ಆವಿಷ್ಕಾರಗಳು ನಡೆದಿವೆ. ಆದಿಯಲ್ಲಿ ಪಾರಂಪರಿಕ ವೃತ್ತಿಗಳು ಗೃಹೋಪಯೋಗಿ ಹಾಗೂ ವ್ಯವಸಾಯೋಪಯೋಗಿ ಉದ್ಯಮವಾಗಿದ್ದರ ಜೊತೆಗೆ ಪರಿಸರ ಬದ್ಧವಾಗಿದ್ದವು. ಸಮಾಜದ ಜನರ ಸಂಘಟನೆಗೆ, ಕೂಡುಬಾಳ್ವೆಗೆ ಸಹಕಾರಿಯಾಗಿ, ಕೂಡುಕುಟುಂಬವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಪಾರಂಪರಿಕ ವೃತ್ತಿಗಳ ಸ್ಥಾನ ಚಾರಿತ್ರಿಕವಾಗಿ, ಪ್ರಾಕೃತಿಕವಾಗಿ ಮತ್ತು ಸಾಂಪ್ರದಾಯಿಕವಾಗಿ ಬಹುಮುಖ್ಯವಾಗಿತ್ತು. ಆಯಾಯ ಪರಿಸರದಲ್ಲಿ ಕಚ್ಚಾ ಸಾಮಗ್ರಿಗಳೇ ಆಯಾಯ ವೃತ್ತಿಗಳಿಗೆ ವಸ್ತುವಾಗುತ್ತಿದ್ದವು. ಅವುಗಳ ಮುಖಾಂತರ ಕುಶಲಕರ್ಮಿಯು ಕರಕೌಶಲ್ಯ, ನೈಪುಣ್ಯ, ಸೌಂದರ್ಯಪ್ರಜ್ಞೆ ಪ್ರತಿಫಲಿತವಾಗುತ್ತಿತ್ತು. ಪ್ರಪಂಚದಾದ್ಯಂತ ವಿವಿಧ ಬಗೆಯಲ್ಲಿ ಮನುಷ್ಯನ ಪ್ರಜ್ಞೆ, ಬುದ್ದಿವಿಕಾಸವಾದಂತೆಲ್ಲ, ಸರಕುಗಳ ಅಗತ್ಯಗಳ ಪ್ರಮಾಣ ಜಾಸ್ತಿಯಾದಂತೆಲ್ಲಾ ಕರಕುಶಲ ವೃತ್ತಿಗಳಲ್ಲಿಯೂ ಬಗೆ ಬಗೆಯ ಅವಿಷ್ಕಾರಗಳು ನಡೆದವು."

ಪರಿಸರ ಹಾಗೂ ಕಾಲದ ನಿರಂತರತೆಯಲ್ಲಿ ವೃತ್ತಿಗಳ ಬೆಳವಣಿಗೆಯನ್ನು, ತಯಾರಿಕೆಯ ವೈವಿಧ್ಯತೆಯನ್ನು, ಆಕರ್ಷಣೆಯನ್ನು ಪಡೆದುಕೊಂಡವು. ಕುಡಿಕೆ ಮಡಿಕೆಯ ತಯಾರಿಕೆಯಲ್ಲಿ, ಬುಟ್ಟಿ, ಚಾಪೆ ಹೆಣಿಗೆಯಲ್ಲಿ, ಬಟ್ಟೆ ನೇಯುವಲ್ಲಿ, ಚರ್ಮದಿಂದ ವಿವಿಧ ಬಗೆಯ ವಸ್ತುಗಳನ್ನು ತಯಾರಿಸುವಲ್ಲಿ, ವಿವಿಧ ರೀತಿಯ ಒಡವೆ-ವಸ್ತುಗಳನ್ನು ತಯಾರಿಸುವಲ್ಲಿ, ಮನೆ ಕಟ್ಟುವಲ್ಲಿ, ಎಣ್ಣೆ ತಯಾರಿಸುವಲ್ಲಿ, ಕಬ್ಬಿಣದ ಹಾಗೂ ಕಂಚಿನ ವಸ್ತುಗಳ ತಯಾರಿಸುವಲ್ಲಿ, ಶಿಲ್ಪಗಾರಿಕೆಯಲ್ಲಿ, ಬಟ್ಟೆ ಶುಭ್ರಗೊಳಿಸುವಲ್ಲಿ, ಕ್ಷೌರ ಮಾಡುವಲ್ಲಿ-ಹೀಗೆ ಎಲ್ಲಾ ಕರಕುಶಲ ವೃತ್ತಿಗಳಲ್ಲಿ ಸಾಕಷ್ಟು ಸ್ಥಳೀಯ ಸಾಂಪ್ರದಾಯಿಕ ತಿಳುವಳಿಕೆ ಮತ್ತು ಆಧುನಿಕ ತಂತ್ರಜ್ಞಾನದ ಪ್ರಭಾವ ಒಟ್ಟೊಟ್ಟಿಗೆ ಬೆಳೆಯಿತು. ಕೆಲವು ಸರಕುಗಳ ತಯಾರಿಕೆಯ ಹವ್ಯಾಸ ವೃತ್ತಿ ಎಂದು ಹೇಳುವವರೆಗೆ ವಿಕಾಸ ಹೊಂದಿತು. ವೃತ್ತಿದಾರರು ಕೂಡ ತಮ್ಮ ವೃತ್ತಿಗಳಲ್ಲಿ ವೈವಿಧ್ಯತೆಯನ್ನು ರೂಢಿಸಿಕೊಂಡಿದ್ದಾರೆ.

ಆಧುನಿಕತೆ ಮುಖ್ಯವಾಗಿ ಭಾರತದ ಕುಲಕಸುಬುಗಳಾದ ಕಮ್ಮಾರಿಕೆ, ಕುಂಬಾರಿಕೆ, ಪತ್ತಾರಿಕೆ, ಬಡಗಿತನ, ಶಿಲ್ಪಗಾರಿಕೆ, ನೇಕಾರಿಕೆ, ಮೇದಾರಿಕೆ, ಕಲ್ಲುಕುಟಿಗವೃತ್ತಿ, ಬಳೆಗಾರಿಕೆ, ಗಾಣಗಾರಿಕೆ, ಸುಣ್ಣಗಾರಿಕೆ, ಚಮ್ಮಾರಿಕೆ, ಹೂಗಾರಿಕೆ, ವೈದ್ಯಗಾರಿಕೆ, ಮಡಿವಾಳ ವೃತ್ತಿ, ಕ್ಷೌರಿಕ ವೃತ್ತಿ ಮುಂತಾದವುಗಳ ಮೇಲೆ ಬೇರೆ ಬೇರೆ ರೀತಿಯ ಪರಿಣಾಮಗಳನ್ನು ಬೀರಿದೆ. ಆಧುನಿಕತೆಯ ಅಂಶಗಳಾದ ಕೈಗಾರೀಕರಣ, ಜಾಗತೀಕರಣ ದೇಶದ ಅಭಿವೃದ್ಧಿಗೆ ಕಾರಣವಾಗಿರುವಂತೆ, ಕುಲಕಸುಬುಗಳ ಆರ್ಥಿಕ ಹಿಂದುಳಿಯುವಿಕೆಗೂ ಕಾರಣವಾಗಿವೆ. ಮುಖ್ಯವಾಗಿ ಕೈಗಾರೀಕರಣ ಪ್ರಕೃತಿ ಸಂಪತ್ತಿನ ಉತ್ತಮ ಬಳಕೆಯಿಂದ ಜನರ ವಿವಿಧ ಅವಶ್ಯಕತೆಗಳನ್ನು ವೇಗವಾಗಿ ಉತ್ಪಾದಿಸಿ, ಪೂರೈಸುವ ಕೆಲಸ ಮಾಡುತ್ತಿವೆ. ಈ ತ್ವರಿತ ಅಭಿವೃದ್ಧಿ ದೇಶದ ಆದಾಯ, ಉದ್ಯೋಗ, ಉತ್ಪನ್ನಗಳನ್ನು ಹೆಚ್ಚಿಸುವುದಕ್ಕೆ ನೆರವಾಗಿರುವುದು ನಿಜ. ಗ್ರಾಹಕರ ಜೀವನಕ್ಕೆ ಬೇಕಾದ ವೈವಿಧ್ಯಮಯವಾದ ಸುಖದಾಯಕ ಮತ್ತು ಐಷಾರಾಮಿ ಸರಕುಗಳ ಪೂರೈಕೆ ಹೆಚ್ಚಾಗಿ ಅವುಗಳು ಕಡಿಮೆ ಬೆಲೆಗೆ ಲಭ್ಯವಾಗುತ್ತಿರುವುದು ಸಂತೋಷದ ಸಂಗತಿ. ಆಧುನಿಕತೆ ಕುಲಕಸುಬುದಾರರ ವೃತ್ತಿಗಳ ಬದಲಾವಣೆಗೂ ಕಾರಣವಾಗಿದೆ. ನೇಕಾರರು ಕೈಮಗ್ಗಗಳಲ್ಲಿ ಬಟ್ಟೆಗಳನ್ನು ನೇಯ್ಗೆ ಮಾಡುವುದನ್ನು ಬಿಟ್ಟುಕೊಟ್ಟು ಯಾಂತ್ರಿಕ ಮಗ್ಗಗಳಲ್ಲಿ ವಿವಿಧ ಬಣ್ಣದ, ವಿವಿಧ ಗುಣಮಟ್ಟದ ಹಾಗೂ ಬಾಳಿಕೆ ಬರುವಂತ ಗ್ರಾಹಕರ ಬೇಡಿಕೆಗೆ ತಕ್ಕಂತೆ ನೇಯ್ದು ಕೊಡುವಷ್ಟು ಬದಲಾವಣೆ ಹೊಂದುತ್ತಿದ್ದಾರೆ. ಸಾಂಪ್ರದಾಯಿಕ ರೇಷ್ಮೆ ಸೀರೆಗಳ ಮತ್ತು ವಸ್ತ್ರಗಳ ನೇಯ್ಗೆ ವಿಧಾನಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ. ಈ ರೀತಿಯ ಅನುಕೂಲತೆ ಆಧುನಿಕತೆಯಿಂದಾಗಿದೆ. ಆದರೆ ಸಮಸ್ಯೆ ಇರುವುದು ಮಾರಾಟದ ಪ್ರಕ್ರಿಯೆಯಲ್ಲಿ. ಕಾರಣ ಪ್ರತ್ಯೇಕ ಮಾರಾಟ ಮಳಿಗೆಗಳಿಲ್ಲದಿರುವುದು. ಷೋರೂಂ ಹೊಂದಿರುವವರು ತಮ್ಮಲ್ಲಿ ಮಾರಾಟಕ್ಕೆ ಅವಕಾಶ ನೀಡದಿರುವುದು. ಆಧುನಿಕ ಬಟ್ಟೆ ಉದ್ಯಮಗಳು ಕಡಿಮೆ ವೆಚ್ಚದಲ್ಲಿ ಗುಣಮಟ್ಟದಲ್ಲಿ ಬಟ್ಟೆಯನ್ನು ತಯಾರಿಸಿ ಕಡಿಮೆ ಬೆಲೆಗೆ

ಮಾರಾಟ ಮಾಡುವುದರ ಮೂಲಕ ಪೈಪೋಟಿ ನೀಡುತ್ತಿರುವುದು. ಇತ್ತೀಚಿನ ವರ್ಷಗಳಲ್ಲಿ ಬಟ್ಟೆ ಉದ್ಯಮಗಳು ನೇರವಾಗಿ ಸಿದ್ಧಉಡುಪುಗಳನ್ನು ತಯಾರಿಸಿ ಷೋರೂಂಗಳಲ್ಲಿ ಆಕರ್ಷಕವಾದ ಬೆಲೆಗಳಲ್ಲಿ ಮಾರಾಟ ಮಾಡುತ್ತಿರುವುದು ನೇಯ್ಗೆದಾರರ ಬಟ್ಟೆಗಳ ಬೇಡಿಕೆ ಕಡಿಮೆಯಾಗುತ್ತಿರುವುದಕ್ಕೆ ಕಾರಣ. ಸರಕಾರ ನೇಕಾರಿಕೆಗೆ ಧನ ಸಹಾಯ ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ನೀಡುತ್ತಿದ್ದರೂ ಅವರ ಆರ್ಥಿಕ ಬದುಕಿನಲ್ಲಿ ಉತ್ತಮವಾಗಿಲ್ಲದಿರುವುದು ಕಂಡುಬರುತ್ತದೆ.

ಕುಂಬಾರಿಕೆ ಸಾಂಪ್ರದಾಯಿಕ ಕಸುಬು. ಕಸುಬುದಾರರು ತಯಾರಿಸುವ ಮಣ್ಣಿನ ಮಡಕೆ ಮತ್ತು ಕುಡಿಕೆಗಳ ಬಳಕೆ ಇಂದು ಕಡಿಮೆಯಾಗುತ್ತಿದೆ. ಈ ಕಸುಬಿಗೆ ಸ್ಟೀಲ್, ತಾಮ್ರ, ಹಿತ್ತಾಳೆ, ಅಲ್ಯೂಮಿನಿಯಂ ಹಾಗೂ ಪ್ಲಾಸ್ಟಿಕ್ ಸರಕುಗಳು ಬಾರಿ ಪೈಪೋಟಿ ನೀಡಿ ಕುಂಬಾರಿಕೆ ಕಸುಬು ಮೂಲೆ ಗುಂಪಾಗಲು ಕಾರಣವಾಗಿದೆ. ಕುಂಬಾರಿಕೆಯಲ್ಲಿ ಆಧುನಿಕತೆ ಕಾಲಿರಿಸಿದೆ. ಸಾಂಪ್ರದಾಯಿಕ ಚಕ್ರ ಹಾಗೂ ಆವಿಗೆಗಳಿಗೆ ಬದಲಾಗಿ ಯಾಂತ್ರಿಕೃತ ಚಕ್ರ ಆಧುನಿಕ ಆವಿಗೆ ತಂತ್ರಜ್ಞಾನ ಮಾರುಕಟ್ಟೆಯಲ್ಲಿ ಲಭ್ಯವಿದೆ. ಈ ಆಧುನಿಕ ತಂತ್ರಜ್ಞಾನದ ಬಳಕೆ ವೈವಿಧ್ಯಮಯವಾದ ಆಕರ್ಷಕವಾದ, ಅಲಂಕಾರಿಕ ಮಣ್ಣಿನ ಪದಾರ್ಥಗಳ ತಯಾರಿಕೆಯಲ್ಲಿ ನೆರವಾಗುತ್ತದೆ. ಈ ಆಧುನಿಕತೆ ಇಂದು ಕುಂಬಾರಿಕೆಯಲ್ಲಿ ಕಾಲಿಟ್ಟು ಕೆಲವು ತರಬೇತಿ ಹೊಂದಿದ ಕುಂಬಾರರಿಗೆ ಮಾತ್ರ ತುಂಬಾ ಅನುಕೂಲವಾಗಿದೆ. ಅವರು ತಯಾರಿಸುವ ವೈವಿಧ್ಯಮಯವಾದ ಸರಕುಗಳಿಗೆ ನಗರಪ್ರದೇಶಗಳಲ್ಲಿ ತುಂಬಾ ಬೇಡಿಕೆ ಇರುವುದು ಕಂಡುಬರುತ್ತದೆ. ಆಧುನಿಕತೆ ಇಂತಹವರ ಜೀವನ ಉತ್ತಮವಾಗಲು ನೆರವಾಗಿದೆ. ಆದರೆ ಸಾಂಪ್ರದಾಯಿಕ ಕುಂಬಾರರ ಸ್ಥಿತಿ ತುಂಬಾ ಅತ್ಯಂತ ಶೋಚನೀಯ. ಕಾರಣ ಅವರಿಗೆ ಯಂತ್ರಚಾಲಿತ ಚಕ್ರ ಹಾಗೂ ವಿದ್ಯುತ್ ಆವಿಗೆಗಳನ್ನು ಉಪಯೋಗಿಸಿ ಸರಕುಗಳನ್ನು ತಯಾರಿಸುವ ವಿಧಾನ ತಿಳಿದಿಲ್ಲ. ಅವರ ಹೇಳಿಕೆ ಪ್ರಕಾರ ಯಂತ್ರಗಳು ಅವರ ಕಸುಬಿಗೆ ಹೊಂದಾಣಿಕೆಯಾಗುತ್ತಿಲ್ಲ. ಇವರ ನಿಧಾನಗತಿಯ ತಯಾರಿಕೆ, ಯಂತ್ರಗಳ ಜೊತೆ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಹಾಗೂ ಆಧುನಿಕ ಯಂತ್ರ ಸಾಧನಗಳನ್ನು ಕೊಳ್ಳುವ ಆರ್ಥಿಕ ಶಕ್ತಿ ಅವರಿಗಿಲ್ಲ. ಅವರ ಸಾಂಪ್ರದಾಯಿಕ ತಯಾರಿಕೆ, ಮಾರಾಟದ ವಿಧಾನಗಳು ಕುಂಬಾರರ ಜೀವನ ಉತ್ತಮವಾಗಲು ಸಹಕಾರಿಯಾಗದಿರುವುದು ಕಂಡುಬರುತ್ತದೆ.

ಆಧುನಿಕತೆ ಕಮ್ಮಾರಿಕೆಯ ಮೇಲೆ ಬಾರಿ ಪ್ರಭಾವ ಬೀರಿದೆ. ಕಮ್ಮಾರರು ಇಂದು ಕಬ್ಬಿಣ ತಯಾರಿಸುತ್ತಿಲ್ಲ. ಆ ಕಬ್ಬಿಣವನ್ನು ಉದ್ಯಮಗಳು ತಯಾರಿಸುತ್ತಿವೆ. ಇಂದು ಕಮ್ಮಾರರು ಕೇವಲ ಮಾರುಕಟ್ಟೆಯಲ್ಲಿ ಲಭ್ಯವಾಗುವ ಸಿದ್ಧ ಕಬ್ಬಿಣವನ್ನು ತಂದು ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಸರಕುಗಳನ್ನು ತಯಾರಿಸಿಕೊಡುವುದಾಗಿದೆ. ಈ ಕೆಲಸದಲ್ಲಿ ಕಮ್ಮಾರರು ಪ್ರವೀಣತೆ ಹೊಂದಿದ್ದಾರೆ. ಆದರೆ ಇಂದು ಕಬ್ಬಿಣದ ಉದ್ಯಮಗಳು, ಇಂಜಿನಿಯರಿಂಗ್ ಘಟಕಗಳು ಉತ್ತಮ ಗುಣಮಟ್ಟದ ಕಬ್ಬಿಣ ಮತ್ತು ಉಕ್ಕಿನ ಸರಕುಗಳನ್ನು ತಯಾರಿಸಿ ಮಾರುಕಟ್ಟೆಗೆ ಪೂರೈಸುತ್ತಿವೆ. ಇದು ಅವುಗಳಿಗೆ

ತುಂಬಾ ಲಾಭದಾಯಕ. ಮಾರುಕಟ್ಟೆಗಳಲ್ಲಿ ಕಬ್ಬಿಣದ ವಿವಿಧ ವಸ್ತುಗಳು ಆಕರ್ಷಕವಾದ ಬೆಲೆಗೆ ಲಭ್ಯವಾಗುತ್ತಿರುವುದರಿಂದ ಸಾಂಪ್ರದಾಯಿಕ ಕಮ್ಮಾರರಿಂದ ಕಬ್ಬಿಣದ ಸರಕುಗಳನ್ನು ತಯಾರಿಸಲು ಮುಂದೆ ಬರುತ್ತಿಲ್ಲ ಹಾಗೂ ಅವರು ತಯಾರಿಸಿದ ಸರಕುಗಳನ್ನು ಕೊಂಡುಕೊಳ್ಳುವುದು ತುಂಬಾ ಕಡಿಮೆ. ಇದು ಆಧುನಿಕತೆಯ ಪರಿಣಾಮ. ಇದರಿಂದಾಗಿ ಸಾಂಪ್ರದಾಯಿಕ ಕಮ್ಮಾರರು ಕೇವಲ ಕಬ್ಬಿಣದ ಸಾಮಾನುಗಳ ರಿಪೇರಿ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಆದರೆ ಇದು ವರ್ಷದ ಎಲ್ಲಾ ಕಾಲದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕಮ್ಮಾರರು ಕಮ್ಮಾರಿಕೆ ಜೊತೆಗೆ ವಿವಿಧ ವೃತ್ತಿಗಳಲ್ಲಿ ಕಾರ್ಯ ನಿರ್ವಹಿಸುವುದರ ಮೂಲಕ ಜೀವನ ಸಾಗಿಸುತ್ತಿದ್ದಾರೆ. ಕೆಲವು ಕಮ್ಮಾರರು ನಗರಗಳಿಗೆ ವಲಸೆ ಹೋಗಿ ಇಂಜಿನಿಯರಿಂಗ್ ವರ್ಕ್‌ಶಾಪ್‌ಗಳಲ್ಲಿ ಕೂಲಿಕೆಲಸಗಾರರಾಗಿ ದುಡಿಯುತ್ತಿದ್ದಾರೆ.

ಕುಲಕಸುಬುದಾರರಲ್ಲಿ ಇಂದು ಅತಿ ಹೆಚ್ಚಿನ ಬೇಡಿಕೆ ಇರುವವರು ಬಡಗಿಗಳು. ಬಡಗಿ ವೃತ್ತಿಯ ಮೇಲೆ ಆಧುನಿಕತೆಯ ಪ್ರಭಾವ ಹೆಚ್ಚಾಗಿದೆ ಎಂದೇ ಹೇಳಬಹುದು. ಬಡಗಿತನಕ್ಕೆ ಬೇಕಾದ ಆಧುನಿಕ ರೀತಿಯ ಯಂತ್ರೋಪಕರಣಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ಆಧುನಿಕ ಯಂತ್ರೋಪಕರಣಗಳು ಬಡಗಿಗಳ ದೈಹಿಕ ಶ್ರಮವನ್ನು ಕಡಿಮೆ ಮಾಡಿವೆ. ಯಂತ್ರೋಪಕರಣಗಳು ಮರವನ್ನು ಕತ್ತರಿಸುವುದರಿಂದ ಹಿಡಿದು ಅಲಂಕಾರದ ಸರಕುಗಳನ್ನು ತಯಾರು ಮಾಡುವವರೆಗೆ ನೆರವಾಗುತ್ತಿವೆ. ಬಡಗಿತನವು ಇಂದು ಸಾರ್ವತ್ರಿಕ ಕಸುಬಾಗಿದೆ. ಸಮಾಜದಲ್ಲಿ ಎಲ್ಲಾ ಜಾತಿ ಜನಾಂಗಗಳು ಬಡಗಿ ವೃತ್ತಿಯಲ್ಲಿ ಪರಿಣತಿ ಪಡೆದುಕೊಳ್ಳುತ್ತಿವೆ. ಸಾಂಪ್ರದಾಯಿಕ ಬಡಗಿಗಳಿಗೆ ಇದರಿಂದ ಸ್ವಲ್ಪ ತೊಂದರೆಯಾಗಿರಬಹುದು. ಇಂದು ಬಡಗಿಗಳು ಸಾಂಪ್ರದಾಯಿಕ ವೃತ್ತಿದಾರರಾಗಿ ಉಳಿದಿಲ್ಲ. ಅವರು ಗೃಹೋಪಯೋಗಿ, ವ್ಯವಸಾಯೋಪಯೋಗಿ, ಮರದ ಸರಕುಗಳನ್ನು ವೈವಿಧ್ಯಮಯವಾಗಿ ತಯಾರಿಸುತ್ತಿದ್ದಾರೆ. ನಗರ ಪ್ರದೇಶದ ಮಾರುಕಟ್ಟೆಗಳ ಷೋರೂಂಗಳಲ್ಲಿರುವ ಮರದ ಸಾಧನ-ಸಲಕರಣೆಗಳನ್ನು ನೋಡಿದರೆ ಬಡಗಿಗಳ ಕಲಾಕೌಶಲ್ಯತೆ ಕಂಡುಬರುತ್ತದೆ. ಮನೆಗಳಲ್ಲಿ ಗೃಹ ಅಲಂಕಾರಿಕ ಕಿಟಕಿ, ಸೋಪಾಸೆಟ್, ಟಿಪಾಯಿ, ಅಲಂಕಾರಿಕ ವೈವಿಧ್ಯಮಯ ವಸ್ತುಗಳನ್ನು ತಯಾರಿಸುವಲ್ಲಿ ಬಡಗಿಗಳು ಪರಿಣತರಾಗಿದ್ದಾರೆ. ಕೆಲವು ಬಡಗಿಗಳು ಮೂರ್ತಿಗಳನ್ನು, ರಥಗಳನ್ನು ತಯಾರಿಸುತ್ತಿದ್ದಾರೆ. ಇದು ಇಂದು ಲಾಭದಾಯಕ ಕಸುಬಾಗಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿರುವ ಸಾಂಪ್ರದಾಯಿಕ ಬಡಗಿಗಳು ಕೇವಲ ಕೃಷಿ ಸಾಧನ-ಸಲಕರಣೆಗಳನ್ನು ತಯಾರು ಮಾಡುವ ವೃತ್ತಿಯಲ್ಲಿ ಮುಂದುವರಿದಿದ್ದಾರೆ. ಆಧುನಿಕತೆಯಲ್ಲಿ ಅವರ ಜೀವನ ತುಂಬಾ ಕಷ್ಟಕರವಾಗಿರುವುದು ಕಂಡುಬರುತ್ತದೆ. '

ಶಿಲ್ಪಗಾರಿಕೆಯ ಮೇಲೂ ಆಧುನಿಕತೆಯ ಪ್ರಭಾವನ್ನು ಬೀರಿದೆ. ಶಿಲ್ಪಗಾರಿಕೆ ವೃತ್ತಿಯನ್ನು ಕೇವಲ ವಿಶ್ವಕರ್ಮ ಜನಾಂಗ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಹಿಂದೆ ಶಿಲ್ಪಿಗಳು

ಮೂರ್ತಿಗಳನ್ನು ತಯಾರಿಸುವಲ್ಲಿ ಗುಡಿಗೋಪುರಗಳನ್ನು ನಿರ್ಮಿಸುವಲ್ಲಿ ವಿಶಿಷ್ಟ ಪ್ರಾವಿಣ್ಯತೆಯನ್ನು ತೋರಿಸುತ್ತಿದ್ದರು. ರಾಜಮಹಾರಾಜರು ಶಿಲ್ಪಗಾರಿಕೆಗೆ ರಾಜಾಶ್ರಯ ನೀಡಿದ್ದರು. ಆದರೆ ಇಂದು ಶಿಲ್ಪಗಾರಿಕೆಗೆ ಯಾರ ಆಶ್ರಯವು ಇಲ್ಲ. ಸ್ವತಂತ್ರವಾಗಿ ವೃತ್ತಿಯನ್ನು ನಡೆಸುತ್ತಿದ್ದಾರೆ. ಶಿಲ್ಪಿಗಳು ಶಿಲೆ ಮತ್ತು ಲೋಹದಿಂದ ವಿವಿಧ ರೀತಿಯ ಯಂತ್ರಗಳನ್ನು ಬಳಸಿ ಶಿಲೆ ಹಾಗೂ ಲೋಹಗಳಿಂದ ವೈವಿಧ್ಯಮಯವಾದ ಮೂರ್ತಿಗಳನ್ನು ಗ್ರಾಹಕರ ಬೇಡಿಕೆಗನುಗುಣವಾಗಿ ತಯಾರಿಸಿ ಕೊಡುತ್ತಾರೆ. ಆದರೆ ಅವುಗಳ ಬೇಡಿಕೆ ವಿರಳವಾಗಿರುವುದರಿಂದ ಶಿಲ್ಪಗಾರಿಕೆಯಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಸರಕಾರ ಹಾಗೂ ಸಂಘ-ಸಂಸ್ಥೆಗಳು ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ ಶಿಲ್ಪಶಾಸ್ತ್ರವನ್ನು ಶಾಸ್ತ್ರೋಕ್ತವಾಗಿ ಕಲಿಸುವ ಕಾರ್ಯ ಮಾಡಬೇಕಾಗಿದೆ.

ಆಭರಣ ತಯಾರಿಕೆಯಲ್ಲಿ ಅಕ್ಕಸಾಲಿಗ ಅಥವಾ ಪತ್ತಾರರು ಪ್ರಸಿದ್ಧಿ ಪಡೆದಿದ್ದಾರೆ. ಪತ್ತಾರಿಕೆ ವಂಶಪಾರಂಪರಿಕವಾಗಿ ಬೆಳೆದುಬಂದಿರುವ ವೃತ್ತಿ. ಈ ವೃತ್ತಿಯನ್ನು ವಿಶ್ವಕರ್ಮ ಜನಾಂಗ ಹಿಂದಿನಿಂದಲೂ ನಡೆಸಿಕೊಂಡು ಬರುತ್ತಿದೆ. ದೇಶದಲ್ಲಿ ಆಭರಣಗಳ ಬೇಡಿಕೆ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತದೆ. ವಿದೇಶಗಳಲ್ಲೂ ಭಾರತದ ಆಭರಣಗಳಿಗೆ ಬಾರಿ ಬೇಡಿಕೆ ಇರುವುದು ಕಂಡುಬರುತ್ತದೆ. ಹಿಂದೆ ಆಭರಣಗಳ ತಯಾರಿಕೆಯ ಎಲ್ಲಾ ಹಂತಗಳನ್ನು ಒಬ್ಬರೇ ಮಾಡುತ್ತಿದ್ದರು. ಆದರೆ ಇಂದು ಒಂದೊಂದು ಹಂತಕ್ಕೂ ಈ ಆಭರಣ ಹಲವರ ಕೈ ತಲುಪುವ ಹಂತವಿರುತ್ತದೆ. ಅಂದರೆ ಬಂಗಾರವನ್ನು ಕರಗಿಸಿ ಅಚ್ಚಿಗೆ ಹಾಕುವವನೇ ಒಬ್ಬ. ಅಚ್ಚಿನಿಂದ ಗಟ್ಟಿಗೆ ಬೇಕಾದ ಚಿತ್ರ ಬರೆಯುವವನು ಒಬ್ಬ. ಆಕಾರಕ್ಕೆ ಕೊರೆಯುವವ ಇನ್ನೊಬ್ಬ ಅದಕ್ಕೆ ಹರಳು ಕೂರಿಸುವವನು ಮತ್ತೊಬ್ಬ. ಕೂರಿಸಿದ ನಂತರ ಅದನ್ನು ಪಾಲಿಷ್ ಮಾಡುವವ ಬೇರೊಬ್ಬ, ಕೊನೆಯಲ್ಲಿ ನಯವಾಗಿ ಮಾಡುವವನೇ ಒಬ್ಬ. ಹೀಗೆ ಹಲವು ಮಂದಿಯ ಕೈಗಳಿಂದ ಆಭರಣ ಅಣಿಯಾಗುತ್ತದೆ. ಇದು ಆಭರಣ ತಯಾರಿಕೆಯ ಪ್ರಮಾಣ ಹೆಚ್ಚಿಸುವುದಕ್ಕೆ ಅನುಕೂಲ. ಇಂದು ಆಭರಣ ತಯಾರಿಕೆ, ಒಂದು ಉದ್ಯಮವಾಗಿ ಬೆಳೆದಿದೆ. ಉದ್ಯಮ ನಡೆಸುವವರು ಶ್ರೀಮಂತ ಶೇಟ್ ಹಾಗೂ ಶೆಟ್ಟಿಗಳು ಆದರೆ ಆಭರಣ ತಯಾರಿಸುವವರು ಅಕ್ಕಸಾಲಿಗರು, ಇಂದು ಅಕ್ಕಸಾಲಿಗರು ಆಭರಣ ಉದ್ಯಮಗಳಲ್ಲಿ ಕೂಲಿಕಾರರಾಗಿ ದುಡಿಯುತ್ತಿದ್ದಾರೆ. ಅವರ ಕೆಲಸಕ್ಕೆ ತೊಂದರೆ ಇಲ್ಲ. ಆದರೆ ದುಡಿಮೆಯ ಫಲ ಹೆಚ್ಚಾಗಿ ಮಧ್ಯವರ್ತಿಗಳ ಕೈ ಸೇರುತ್ತಿದೆ. ಆಧುನಿಕತೆ ಆಭರಣಗಳ ಬೇಡಿಕೆಗೆ ಕಾರಣವಾದರೂ ಅವುಗಳನ್ನು ತಯಾರಿಸುವ ಪತ್ತಾರರ ಆರ್ಥಿಕ ಸ್ಥಿತಿ ತುಂಬಾ ಕಷ್ಟಕರವಾಗಿರುವುದು ಕಂಡುಬರುತ್ತದೆ. ಹಳ್ಳಿಗಳಲ್ಲಿ ವಾಸವಾಗಿದ್ದ ಪತ್ತಾರ ಜನಾಂಗ ನಗರ ಪ್ರದೇಶಗಳಿಗೆ ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಿರುವುದನ್ನು ಕಾಣಬಹುದು.

ಆಧುನಿಕತೆ ಗಾಣಿಗರ ಸಾಂಪ್ರದಾಯಿಕ ವೃತ್ತಿ ಮೂಲೆಗುಂಪಾಗಲು ಕಾರಣವಾಗಿದೆ. ಅವರು ಉಪಯೋಗಿಸುವ ಸಲಕರಣೆಗಳು ಮೂಲೆ ಸೇರಿವೆ. ಗಾಣದಿಂದ ಎಣ್ಣೆ ತೆಗೆದು ಊರೂರಿಗೆ

ಹೋಗಿ ಮಾರುತ್ತಿದ್ದ ಗಾಣಿಗರು ತಮ್ಮ ವೃತ್ತಿಗೆ ವಿದಾಯ ಹೇಳಿದ್ದಾರೆ. ಎಣ್ಣೆ ಉದ್ಯಮಗಳು ಎಣ್ಣೆ ತಯಾರಿಸಿ ಮಾರುಕಟ್ಟೆಗೆ ವಿವಿಧ ಪ್ರಮಾಣದಲ್ಲಿ ಪೂರೈಸುತ್ತಿವೆ. ಅವುಗಳ ಎದುರು ಪೈಪೋಟಿ ನಡೆಸುವುದು ಅಸಾಧ್ಯ. ಆದ್ದರಿಂದ ಗಾಣಿಗ ಸಮುದಾಯ ತಮ್ಮ ಮೂಲವೃತ್ತಿಯನ್ನು ಸಂಪೂರ್ಣ ಬಿಟ್ಟು ವ್ಯವಸಾಯ, ಕೈಗಾರಿಕೆ, ಗಣಿ ಕೆಲಸಗಳಲ್ಲಿ ಕೂಲಿಗಳಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬರುತ್ತಿದೆ.

ಕಲ್ಲು ವಡ್ಡರು, ಮಣ್ಣು ವಡ್ಡರು, ಕಲ್ಲು ಗಣಿಗಳಲ್ಲಿ ಸಾಂಪ್ರದಾಯಿಕ ವಿಧಾನದಿಂದ ಕಲ್ಲನ್ನು ತೆಗೆದು, ಅದನ್ನು ತುಂಡುಮಾಡಿ ಬಂಡೆ, ಸೈಜುಗಲ್ಲು, ವಿವಿಧ ಗಾತ್ರದ ಕಲ್ಲುಗಳನ್ನು ಎಬ್ಬಿ ಗ್ರಾಹಕರಿಗೆ ಪೂರೈಸುತ್ತಿದ್ದರು. ಅವರು ಉಪಯೋಗಿಸುತ್ತಿದ್ದ ಸಲಕರಣೆಗಳ ಸರಳವಾಗಿದ್ದವು. ಆದರೆ ಹೆಚ್ಚು ದೈಹಿಕ ಶ್ರಮವನ್ನು ಕಲ್ಲು ಗಣಿಗಳಲ್ಲಿ ಉಪಯೋಗಿಸಬೇಕಾಗಿತ್ತು. ಆದರೆ ಮಾರುಕಟ್ಟೆಯಲ್ಲಿ ಇಂದು ಅತ್ಯಾಧುನಿಕ ಯಂತ್ರಗಳು ಲಭ್ಯವಿವೆ. ಅವುಗಳ ಸಹಾಯದಿಂದ ವಿವಿಧ ಗಾತ್ರದ ಕಲ್ಲು ಎಬ್ಬಲು, ತುಂಡರಿಸಲು, ನುಣುಪು ಮಾಡಲು ವಿವಿಧ ಗಾತ್ರದ ಡಿಜೈನುಗಳನ್ನು ಮೂಡಿಸಲು ಸಾಧ್ಯವಾಗಿದೆ. ಇಂದು ಗ್ರಾನೈಟ್ ಉದ್ಯಮ ವ್ಯಾಪಕವಾಗಿ ಬೆಳೆಯುತ್ತಿದೆ. ಮೊದಲು ಕಲ್ಲು ಗಣಿಗಳು ಕಲ್ಲುಕುಟಿಗರ ಅಧೀನದಲ್ಲಿದ್ದವು. ಸರಕಾರವು ಅವುಗಳ ಮೇಲೆ ಯಾವುದೇ ನಿಯಂತ್ರಣಗಳನ್ನು ವಿಧಿಸಿರಲಿಲ್ಲ. ಇದರಿಂದ ಕಲ್ಲುಕುಟಿಗರ ಜೀವನಕ್ಕೆ ಯಾವುದೇ ತೊಂದರೆಗಳಿರಲಿಲ್ಲ. ಆದರೆ ಆಧುನಿಕತೆಯಿಂದ ಕಲ್ಲು ಗಣಿಗಾರಿಕೆಯು ದೊಡ್ಡ ಉದ್ಯಮವಾಗಿ ಬೆಳೆಯಲು ಕಾರಣವಾಗಿದೆ. ಬಳ್ಳಾರಿ, ರಾಯಚೂರು, ಕೊಪ್ಪಳ ಕ್ಷೇತ್ರಗಳಲ್ಲಿ ಕಲ್ಲುಗಣಿಗಳಿವು. ಶ್ರೀಮಂತರ ಅಧೀನದಲ್ಲಿವೆ. ಗಣಿಗಾರಿಕೆಯು ಸಂಪೂರ್ಣ ಯಾಂತ್ರೀಕರಣ ಹೊಂದಿದೆ. ಕಲ್ಲು ತೆಗೆಯುವುದರಿಂದ ಹಿಡಿದು ಅದನ್ನು ಪಾಲಿಷ್ ಮಾಡುವವವರೆಗೆ ಯಂತ್ರಗಳು ಬಳಕೆಯಾಗುತ್ತಿವೆ. ಈ ಉದ್ಯಮ ವಿದೇಶಗಳಿಗೆ ಗ್ರಾನೈಟ್‌ನ್ನು ರಫ್ತು ಮಾಡಿ ಅಪಾರ ಪ್ರಮಾಣದಲ್ಲಿ ವಿದೇಶಿ ವಿನಿಮಯ ಗಳಿಸುತ್ತದೆ. ಆದರೆ ಸಾಂಪ್ರದಾಯಿಕ ಕಲ್ಲುಕುಟಿಗರು ಗಣಿಗಳಲ್ಲಿ ಕೂಲಿಗಳಾಗಿ, ಕಲ್ಲು ಪುಡಿ ಮಾಡುವ, ಗುಂಡುಕಲ್ಲು, ಮುಂತಾದ ಸಣ್ಣಪುಟ್ಟ ಗೃಹ ಉಪಯೋಗಿ ವಸ್ತುಗಳನ್ನು ತಯಾರಿಸುವುದಕ್ಕೆ ಸೀಮಿತವಾಗಿದ್ದಾರೆ. ಆಧುನಿಕತೆ ಕಲ್ಲುಕುಟಿಗರ ಜೀವನದ ಮೇಲೆ ತೀವ್ರವಾದ ಪರಿಣಾಮ ಬೀರಿದೆ.

ಮೇದಾರಿಕೆ ವೃತ್ತಿ ಒಂದು ಕುಲಕಸುಬು. ಮೇದಾರ ಜನಾಂಗ ಪುರಾತನ ಕಾಲದಿಂದಲೂ ಬಿದಿರು ಬೆತ್ತದಿಂದ ವಿವಿಧ ಮಾನವ ಉಪಯೋಗಿ ಸರಕುಗಳನ್ನು ತಯಾರಿಸುತ್ತಿತ್ತು. ಇಂದು ಆಧುನಿಕತೆ ಮೇದಾರಿಕೆ ಕಸುಬಿನಲ್ಲಿ ಕಾಲಿರಿಸಿದೆ. ಮೇದಾರರು ಇಂದು ಕೇವಲ ಸಾಂಪ್ರದಾಯಿಕ ಸರಕುಗಳನ್ನು ತಯಾರಿಸಿ ಮಾರಾಟ ಮಾಡದೆ ಆಧುನಿಕ ಜನಾಂಗ ಬೇಡುವ ವೈವಿಧ್ಯಮಯವಾದ ಪದಾರ್ಥಗಳನ್ನು ಯಾವುದೇ ಯಂತ್ರಗಳ ಬಳಕೆಯಿಲ್ಲದೆ ಕೈಗಳಿಂದಲೇ ತಮ್ಮ ಕರಕುಶಲತೆಯನ್ನು ಸರಕುಗಳ ತಯಾರಿಕೆಯಲ್ಲಿ ತೋರಿಸುತ್ತಿದ್ದಾರೆ. ಅವರ ಜೀನವ ವಿಧಾನದಲ್ಲಿ ಬದಲಾವಣೆಯಾಗಿದೆ.

ಅವರು ಗುಡ್ಡ ಗಾಡುಗಳನ್ನು ತೊರೆದು ನಗರ ಪ್ರದೇಶಗಳಲ್ಲಿ ಕಸುಬನ್ನು ಮುಂದುವರಿಸುವುದರ ಮೂಲಕ ಜೀವನ ಸಾಗಿಸುತ್ತಿದ್ದಾರೆ. ಅವರು ತಯಾರಿಸುವ ಪದಾರ್ಥಗಳಿಗೆ ಸಾಕಷ್ಟು ಬದಲಿ ವಸ್ತುಗಳು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿವೆ. ಇದು ಮೇದಾರಿಕೆ ಹಾಗೂ ಮೇದಾರ ಜನಾಂಗದ ಮೇಲೆ ಪ್ರಭಾವ ಬೀರಿದೆ. ಮೇದಾರ ಜನಾಂಗ ಮೂಲವೃತ್ತಿಯನ್ನು ಬಿಟ್ಟುಕೊಟ್ಟು ಕೂಲಿಗಳಾಗಿ, ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸುಣ್ಣಗಾರಿಕೆ ಮತ್ತು ಬಳೆಗಾರಿಕೆಯ ಮೇಲೂ ಆಧುನಿಕತೆ ಪ್ರಭಾವ ಬೀರಿದೆ. ಸಾಂಪ್ರದಾಯಿಕ ಸುಣ್ಣ ಸುಡುವ ವಿಧಾನ ಕಡಿಮೆಯಾಗಿದೆ. ಕೆಲವು ಸ್ಥಳಗಳಲ್ಲಿ ಸುಣ್ಣ ತಯಾರಿಸುವ ವೃತ್ತಿಯವರಿದ್ದಾರೆ. ಬಣ್ಣ ತಯಾರಿಸುವ ಉದ್ಯಮಗಳು ಸುಣ್ಣವನ್ನು ತಯಾರಿಸಿ ವಿವಿಧ ಬಣ್ಣಗಳಲ್ಲಿ ಮಾರುಕಟ್ಟೆಗೆ ಬಿಟ್ಟಿದ್ದಾರೆ. ಕಂಪನಿಯವರು ತಯಾರಿಸುವ ಸುಣ್ಣಕ್ಕಿರುವ ಬೇಡಿಕೆ ಸಾಂಪ್ರದಾಯಿಕ ಸುಣ್ಣಗಾರರು ತಯಾರಿಸುವ ಸುಣ್ಣಕ್ಕಿಲ್ಲ. ಹೀಗಾಗಿ ಸುಣ್ಣಗಾರಿಕೆ ವೃತ್ತಿ ಸಮಾಜದಿಂದ ಕಣ್ಮರೆಯಾಗುತ್ತಿದೆ. ಹಾಗೆಯೇ ಬಳೆಗಾರ ಜನಾಂಗ ಬಳೆ ತಯಾರಿಸಿ ಮಾರಾಟ ಮಾಡುವ ವೃತ್ತಿಯನ್ನು ಬಿಟ್ಟುಕೊಟ್ಟು ಕಂಪನಿಗಳು ತಯಾರಿಸುವ ವಿವಿಧ ಆಕಾರ, ರೂಪ, ಬಣ್ಣ, ಗಾತ್ರದ ಬಳೆಗಳನ್ನು ಹಾಗೂ ಸ್ತ್ರೀಯರ ಸೌಂದರ್ಯ ವರ್ಧಕಗಳನ್ನು ಮಾರಾಟ ಮಾಡುವ ವೃತ್ತಿಯಲ್ಲಿ ತೊಡಗಿರುವುದು ಕಂಡುಬಂದಿದೆ. ಆಧುನಿಕ ಸ್ತ್ರೀಯರು ಬೇಡುವ ಸರಕುಗಳನ್ನು ವಿವಿಧ ನಗರ ಪ್ರದೇಶಗಳಿಂದ ಕೊಂಡು ತಂದು ಮಾರಾಟ ಮಾಡಿ ಜೀವನ ಮಾಡುತ್ತಿದ್ದಾರೆ. ಕೆಲವು ಬಳೆಗಾರರು ಮೂಲ ವೃತ್ತಿಯನ್ನು ಬಿಟ್ಟುಕೊಟ್ಟು ಕೃಷಿ, ಕೈಗಾರಿಕೆ, ಗಣಿಗಾರಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಚರ್ಮದ ವಸ್ತುಗಳನ್ನು ತಯಾರಿಸುವ ವೃತ್ತಿ ಚಮ್ಮಾರಿಕೆ. ಚಮ್ಮಾರಿಕೆ ವಂಶಪಾರಂಪರ್ಯವಾಗಿ ಬೆಳೆದುಕೊಂಡು ಬಂದು ಆಧುನಿಕತೆಯ ಪ್ರಭಾವಕ್ಕೆ ಒಳಪಟ್ಟಿದೆ. ಸಾಮಾನ್ಯ ಚಮ್ಮಾರನು ತಯಾರಿಸುತ್ತಿದ್ದ ವಸ್ತುಗಳನ್ನು ಇಂದು ದೊಡ್ಡ ದೊಡ್ಡ ಉದ್ದಿಮೆಗಳು ತಯಾರು ಮಾಡಿ ಬಾರಿ ಪ್ರಮಾಣದ ಲಾಭವನ್ನು ಗಣಿಸಿಕೊಳ್ಳುತ್ತಿವೆ. ಚಮ್ಮಾರರು ಚರ್ಮವನ್ನು ಹದ ಮಾಡಲು ಸಾಂಪ್ರದಾಯಿಕ ವಿಧಾನಗಳನ್ನ ಬಳಸುತ್ತಿದ್ದರು. ಆದರೆ ಇಂದು ರಸಾಯನಿಕ ವಸ್ತುಗಳನ್ನು ಬಳಸಿ ವಿವಿಧ ಪ್ರಾಣಿ ಹಾಗೂ ಜೀವಿಗಳ ಚರ್ಮವನ್ನು ಹದಗೊಳಿಸಿ ವೈವಿಧ್ಯಮಯ, ಆಕರ್ಷಕ ಉಪಯುಕ್ತ ವಸ್ತುಗಳನ್ನು ಚರ್ಮದ ಉದ್ದಿಮೆಗಳು ತಯಾರಿಸುತ್ತಿವೆ. ಕಂಪನಿಗಳು ತಯಾರಿಸುವ ಚರ್ಮದ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಅದೇ ಸಾಂಪ್ರದಾಯಿಕ ಚಮ್ಮಾರರು ತಯಾರಿಸುವ ಪದಾರ್ಥಗಳಿಗೆ ಬೇಡಿಕೆ ವಿರಳವಾಗಿದೆ. ಚಮ್ಮಾರರಿಗೆ ಇಂದು ಕಂಪನಿಗಳು ತಯಾರು ಮಾಡಿದ ವಸ್ತುಗಳ ರಿಪೇರಿಯೇ ಮುಖ್ಯ ಕೆಲಸ. ಸರಕಾರ ಲೀಡ್ಕರ್ ಸಂಸ್ಥೆಯ ಮೂಲಕ ಚಮ್ಮಾರರಿಗೆ ಚರ್ಮವನ್ನು ಪೂರೈಸಿ ಚಪ್ಪಲಿ, ಶೂ, ಬೆಲ್ಟ್, ಬ್ಯಾಗ್ ಮುಂತಾದ ವಸ್ತುಗಳನ್ನು ತಯಾರಿಸಿ ಅವುಗಳನ್ನು ಮಾರಾಟ ಮಾಡಲು ಮಳಿಗೆಗಳನ್ನು ನಗರಗಳಲ್ಲಿ ಸ್ಥಾಪಿಸಿದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ

ಎಲ್ಲಾ ಚಮ್ಮಾರರಿಗೆ ಈ ಸೌಲಭ್ಯ ಲಭ್ಯವಾಗಿಲ್ಲ. ಆದ್ದರಿಂದ ಹಳ್ಳಿಗಳಲ್ಲಿರುವ ಚಮ್ಮಾರರು ಚಪ್ಪಲಿ, ಶೂಗಳನ್ನು ರಿಪೇರಿ ಮಾಡುವ ಪಾಲೀಶ್ ಮಾಡುವ ಕಾರ್ಯವನ್ನು ಮುಂದುವರಿಸುತ್ತಾ ಜೀವನ ಮಾಡುತ್ತಿರುವುದು ಆಧುನಿಕತೆಯ ಪರಿಣಾಮವಲ್ಲದೆ ಮತ್ತೇನು ?

ಆಧುನಿಕತೆ ಕ್ಷೌರಿಕ ವೃತ್ತಿಯ ಮೇಲೆ ಒಳ್ಳೆಯ ಪ್ರಭಾವವನ್ನು ಉಂಟುಮಾಡಿದೆಯೆಂದೇ ಹೇಳಬಹುದು. ಮೊದಲು ಕ್ಷೌರಿಕರು ಮನೆಗಳ ಮುಂದೆ ಕುಳಿತು ಕೆಲವೇ ಪರಿಕರಗಳಿಂದ ತಲೆಕೂದಲು, ಗಡ್ಡ ತೆಗೆಯುವ ಕಾರ್ಯ ಮಾಡಿ ಅವರಿಂದ ಸುಗ್ಗಿಯ ಕಾಲದಲ್ಲಿ ಆಯವನ್ನು ಪಡೆದು ಜೀವಿಸುತ್ತಿದ್ದರು. ಆದರೆ ಇಂದು ಕ್ಷೌರಿಕನ ವೃತ್ತಿ ಆಧುನೀಕರಣಗೊಂಡಿದೆ. ಕ್ಷೌರ ಮಾಡುವುದಕ್ಕೆ, ಗಡ್ಡ ತೆಗೆಯುವುದಕ್ಕೆ ತಲೆ ಮತ್ತು ಮೈಕೈಗಳನ್ನು ಮಸಾಜು ಮಾಡುವುದಕ್ಕೆ ವಿವಿಧ ರೀತಿಯ ಸಾಧನ ಸಲಕರಣೆಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಕ್ಷೌರಿಕರು ಇಂದು ಹಳ್ಳಿಯಲ್ಲಿ ಅಥವಾ ನಗರಗಳಲ್ಲಿ ಸಲೂನ್‌ಗಳನ್ನು ತೆರೆದು ದೊಡ್ಡ ಪ್ರಮಾಣದ ಕನ್ನಡಿಗಳನ್ನು, ಕುರ್ಚಿಗಳನ್ನು ಅಳವಡಿಸಿ, ಸೋಪಿಗೆ ಬದಲಾಗಿ ಶೇವಿಂಗ್ ಕ್ರೀಮು, ಎಣ್ಣೆ, ಬ್ಲೇಡ್, ಕತ್ತಿಗಳನ್ನು ಬಳಸಿ ಕ್ಷೌರ ಮಾಡುತ್ತಿರುವರು. ವಿವಿಧ ಎಣ್ಣೆಗಳನ್ನು ಬಳಸಿ ಮೈಕೈಗಳನ್ನು ಮಸಾಜು ಮಾಡಿ ಉತ್ತಮ ಆದಾಯಗಳಿಸುತ್ತಿದ್ದಾರೆ. ಈ ವೃತ್ತಿಯಿಂದ ಉತ್ತಮ ಆದಾಯ ಬರುತ್ತಿರುವುದರಿಂದ ವಿವಿಧ ಜಾತಿ ಜನಾಂಗಗಳು ಈ ವೃತ್ತಿಯನ್ನು ಮಾಡುತ್ತಿವೆ. ಸಾಂಪ್ರದಾಯಿಕ ಕ್ಷೌರಿಕರು ಬೇರೆ ಜಾತಿಯವರಿಂದ ಪೈಪೋಟಿ ಎದುರಿಸುತ್ತಿದ್ದಾರೆ. ಕೆಲವು ಉತ್ತಮ ಸ್ಥಿತಿಯಲ್ಲಿರುವ ಕ್ಷೌರಿಕರು ದೊಡ್ಡ ಪ್ರಮಾಣದ ಹೇರ್‌ಡ್ರೆಸ್ ಸಲೂನುಗಳನ್ನು ತೆರೆದು ಹಲವಾರು ಕ್ಷೌರಿಕರನ್ನು ದಿನಗೂಲಿಯಂತೆ ನೇಮಿಸಿಕೊಂಡು ಸಾಕಷ್ಟು ಆದಾಯವನ್ನು ಗಳಿಸುತ್ತಿದ್ದಾರೆ.

ಮಡಿವಾಳ ಜನಾಂಗ ವಂಶಪಾರಂಪರ್ಯವಾಗಿ ಬಟ್ಟೆಗಳನ್ನು ಶುಭ್ರಗೊಳಿಸುವ ಕಾರ್ಯ ಮಾಡಿಕೊಂಡು ಬರುತ್ತಿದೆ. ಮಡಿವಾಳ ಜನಾಂಗವು ಮಾಡುವ ವೃತ್ತಿಯಲ್ಲಿ ಸಾಕಷ್ಟು ಬದಲಾವಣೆ ಕಂಡಿದೆ. ಬಟ್ಟೆಗಳನ್ನು ದೊಡ್ಡ ಪಾತ್ರೆಗಳಲ್ಲಿ ಬೇಯಿಸಿ, ಎರೆಮಣ್ಣು, ಸವಳು ಮಣ್ಣು ಹಾಕಿ ಬಟ್ಟೆ ಶುಭ್ರಮಾಡಿ ಮನೆಮನೆಗೆ ನೀಡಿ ಆಯ ಪಡೆಯುವ ಪದ್ಧತಿ ಇಂದು ಮಾಯವಾಗಿದೆ. ಜೊತೆಗೆ ಹಳ್ಳಿಗಳಲ್ಲಿರುವ ಮಡಿವಾಳ ಜನಾಂಗ ಹಲವಾರು ಕಾರಣಗಳಿಗಾಗಿ ವೃತ್ತಿಯನ್ನು ಮುಂದುವರಿಸದೇ ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಿದ್ದಾರೆ. ಕೆಲವು ಮಡಿವಾಳರು ಹಳ್ಳಿ ಹಾಗೂ ನಗರಗಳಲ್ಲಿ ಲಾಂಡ್ರಿಗಳನ್ನು ತೆಗೆದು ಬಟ್ಟೆಗಳನ್ನು ಸೋಪು, ರಸಾಯನಿಕ ವಸ್ತುಗಳನ್ನು ಬಳಸಿ ಮಡಿಮಾಡಿ, ಇಸ್ತ್ರಿ ಮಾಡಿಕೊಟ್ಟು ಆದಾಯವನ್ನು ಗಳಿಸಿ ಜೀವನ ನಡೆಸುತ್ತಿದ್ದಾರೆ. ಆದರೂ ಈ ಜನಾಂಗದ ಜೀವನ ಮಟ್ಟ ಉತ್ತವಾಗಿಲ್ಲ.

ಜನಪದ ವೈದ್ಯ ಪದ್ಧತಿ ಆಧುನಿಕ ವೈದ್ಯ ಪದ್ಧತಿ ಅಸ್ತಿತ್ವಕ್ಕೆ ಬರುವ ಮುಂಚೆಯೇ ಸಮಾಜದಲ್ಲಿ ಊರ್ಜಿತವಾಗಿದ್ದಿತು. ಇಂದು ಆಧುನಿಕತೆ ಹಳ್ಳಿಯವರೆಗೂ ಹಬ್ಬಿದೆ ಅಂದುಕೊಂಡರೂ,

ಈಗಲೂ ಹಳ್ಳಿಗಳಲ್ಲಿ ಅನೇಕ ಕಾಯಿಲೆಗಳಿಗೆ ಹಳ್ಳಿ ವೈದ್ಯರು ಚಿಕಿತ್ಸೆ ನೀಡುವುದು ರೂಢಿ. ಪಶುಪ್ರಾಣಿಗಳಿಗೂ ಹಳ್ಳಿ ವೈದ್ಯರು ಔಷಧಿ ನೀಡಿ ರೋಗಗಳನ್ನು ಶಮನಗೊಳಿಸುತ್ತಿದ್ದಾರೆ. ಇಂದಿಗೂ ಪಟ್ಟಣಗಳಲ್ಲಿ ನೆಲಸಿರುವ ಅನೇಕರು ಜನಪದ ವೈದ್ಯರ ಮೊರೆ ಹೋಗುವುದನ್ನು ಕಾಣುತ್ತೇವೆ. ಆದರೂ ಹಳ್ಳಿ, ನಾಟಿ ವೈದ್ಯದಲ್ಲಿ ಔಷಧಿಗೆ ನಿರ್ದಿಷ್ಟ ಅಳತೆ ತೂಕ ಇರುವುದಿಲ್ಲ. ಇದು ರೋಗಗಳನ್ನು ಪೂರ್ಣ ಪ್ರಮಾಣದಲ್ಲಿ ವಾಸಿ ಮಾಡುತ್ತದೆ ಎಂದು ಹೇಳಲಾಗುವುದಿಲ್ಲ. ಜೊತೆಗೆ ಸರಕಾರವು ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿ, ನುರಿತ ವೈದ್ಯರನ್ನು ನೇಮಿಸಿ ರೋಗಿಗಳಿಗೆ ಔಷಧೋಪಚಾರಗಳನ್ನು ನೀಡುತ್ತಿರುವುದರಿಂದ ನಾಟಿ ವೈದ್ಯರಿಗೆ ಬೇಡಿಕೆ ಕಡಿಮೆ. ನಾಟಿ ವೈದ್ಯರಿಗೆ ಬೇಕಾದ ಗಿಡಮೂಲಿಕೆಗಳು ಅರಣ್ಯಗಳ ನಾಶದಿಂದಾಗಿ ಲಭ್ಯವಾಗುತ್ತಿಲ್ಲ. ಇದರಿಂದಾಗಿ ಆಧುನಿಕ ವೈದ್ಯ ಪದ್ಧತಿಯ ಪ್ರಭಾವದಿಂದಾಗಿ ಜನಪದ ವೈದ್ಯಪದ್ಧತಿ ಪ್ರಾಮುಖ್ಯತೆ ಕಳೆದುಕೊಂಡಿದೆ.

ಆಧುನಿಕತೆ ಮತ್ತು ಜಾಗತೀಕರಣ ಇಂದು ಎಲ್ಲಾ ವೃತ್ತಿ ಸಮುದಾಯಗಳ ಮೇಲೂ ಪ್ರಭಾವ ಬೀರಿರುವುದನ್ನು ಕಾಣಬಹುದು. ಹಿಂದಿನ ಕಾಲದಲ್ಲಿ ಪಾರಂಪರಿಕ ವೃತ್ತಿಗಳಿಂದ ಸ್ವಾವಲಂಬಿಗಳಾಗಿದ್ದ ವಿವಿಧ ಕುಲಕಸುಬುದಾರರು ಇಂದು ಆರ್ಥಿಕವಾಗಿ ಶೋಚನೀಯ ಸ್ಥಿತಿಯಲ್ಲಿ ಜೀವನ ಮಾಡುತ್ತಿರುವುದು ಕಂಡುಬರುತ್ತದೆ. ಆಧುನಿಕತೆ ಮತ್ತು ಜಾಗತೀಕರಣ ಕುಲಕಸುಬು ಸಮುದಾಯಗಳ ಬೆಳವಣಿಗೆಗೆ ಯಾವುದೇ ಆಶಾದಾಯಕ ಭಾವನೆ ಮೂಡಿಸದೇ ಇರುವುದನ್ನು ಕಾಣಬಹುದು. ಇಂದು ಹಿಂದುಳಿದ ದೇಶಗಳು ಜಾಗತೀಕರಣದ ಪ್ರಭಾವದಿಂದಾಗಿ ಅಭಿವೃದ್ಧಿ ಹೊಂದಿದ ದೇಶಗಳ ಪೈಪೋಟಿಯನ್ನು ಎದುರಿಸಲು ಅಸಮರ್ಥವಾಗಿವೆ. ಅಮರ್ತ್ಯ ಸೇನ್‌ರು ತಿಳಿಸುವುದು ಇದನ್ನೇ. ಸಾಮರ್ಥ್ಯ ಹೊಂದಿದ ಸಮುದಾಯಗಳು ಜಾಗತೀಕರಣ ಪ್ರಕ್ರಿಯೆಗೆ ತೆರೆದುಕೊಂಡರೆ ಸಾಮರ್ಥ್ಯ ಪಡೆಯದ ಕುಲಕಸುಬು ಸಮುದಾಯಗಳು ಜಾಗತೀಕರಣ ಪ್ರಕ್ರಿಯೆಯಿಂದ ಇನ್ನೂ ಮುದುಡುವ ಸ್ಥಿತಿಗೆ ಇಳಿಯುತ್ತವೆ.

ಆಧುನಿಕತೆ ಹೆಚ್ಚಿದಂತೆ ಕುಲಕಸುಬು ಸಮುದಾಯಗಳೂ ಹೆಚ್ಚಿನ ಆತಂಕಗಳಿಗೆ ಒಳಗಾಗುತ್ತಲೇ ಇವೆ. ಆಧುನಿಕತೆ ಪರಿಣಾಮವಾಗಿ ಕುಲಕಸುಬು ಸಮುದಾಯಗಳು ಜನತೆಯ ಕಣ್ಣಿನಿಂದ ದೂರವಾಗುತ್ತಿವೆ. ಜನತೆ ಕುಲಕಸುಬುಗಳನ್ನು ಗುರುತಿಸುವುದು ಕಷ್ಟ ಸಾಧ್ಯ. ಸಾಮಾಜಿಕ ಹಾಗೂ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಕಳೆದುಹೋಗುತ್ತಿರುವ ಕೆಲವು ಕುಲಕಸುಬುಗಳು ಸವಕಲು ನಾಣ್ಯವಾಗುತ್ತಿವೆ. ಆಧುನಿಕತೆ ಮತ್ತು ಜಾಗತೀಕರಣದಿಂದಾಗಿ ಅಲಕ್ಷ್ಯಕ್ಕೆ ಸಿಲುಕಿರುವ ಕುಲಕಸುಬು ಸಮುದಾಯಗಳು ಆರ್ಥಿಕವಾಗಿ ಹಿಂದುಳಿದಂತೆ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದಿವೆ.

ಆಧುನಿಕತೆ ಮತ್ತು ಜಾಗತೀಕರಣ ದೇಶದ ಆರ್ಥಿಕ, ಸಾಮಾಜಿಕ, ವ್ಯವಸ್ಥೆಯ ಮೇಲೆ ವಿಶೇಷವಾಗಿ ಕುಲಕಸುಬುಗಳು ಮತ್ತು ವಿವಿಧ ಸಮುದಾಯಗಳ ಮೇಲೆ ಬೀರಿರುವ ಪರಿಣಾಮಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

- ಅನಕ್ಷರಸ್ಥರು ಅವಿದ್ಯಾವಂತರ ಪ್ರಮಾಣ ಹೆಚ್ಚಾಗಿರುವ ನಮ್ಮ ದೇಶದಲ್ಲಿ ಆಧುನೀಕರಣ ಮತ್ತು ಜಾಗತೀಕರಣ ದಿನಕೂಲಿ ಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸುತ್ತಿದೆ.
- ಜಾಗತೀಕರಣದ ಪ್ರಭಾವದಿಂದಾಗಿ ಸರಕಾರವು ತನ್ನ ಕಲ್ಯಾಣ ಯೋಜನೆಗಳಿಂದ ಹಿಂದೆ ಸರಿಯುತ್ತಿರುವಾಗ, ಕೃಷಿ, ಕೈಗಾರಿಕೆ ಅಥವಾ ಸೇವಾ ಕ್ಷೇತ್ರಗಳು ಖಾಸಗೀಕರಣಗೊಂಡು ವೇತನ, ಉದ್ಯೋಗ, ಸಾಮಾಜಿಕ ಭದ್ರತೆ ಇತ್ಯಾದಿ ಸೌಕರ್ಯಗಳೆಲ್ಲವೂ ಖಾಸಗಿಯವರ ಕೃಪೆಯಲ್ಲಿರುವ ಕಾರ್ಮಿಕರ ಸ್ಥಿತಿ ಶೋಚನೀಯವಾಗುವ ಸಾಧ್ಯತೆ ಇದೆ.
- ಜಾಗತಿಕ ಮಾರುಕಟ್ಟೆಯಲ್ಲಿ ಕುಲಕಸುಬುದಾರರ ಸರಕು-ಸೇವೆಗಳು ಮಾರಾಟವಾಗುವ ಸಾಧ್ಯತೆಗಳು ಕಡಿಮೆ.
- ಜಾಗತೀಕರಣದಿಂದಾಗಿ ಕುಲಕಸುಬುದಾರರು ನಿರುದ್ಯೋಗಿಗಳಾಗಿ ಬೀದಿ ಪಾಲಾಗುವ, ಭೂಸುಧಾರಣೆ ಕ್ರಮಗಳನ್ನು ತಡೆಹಿಡಿಯುವ, ಭೂ ಒಡೆತನಕ್ಕೆ ಇದ್ದ ಮಿತಿಯನ್ನು ಸಡಿಲಿಸುವ, ಸಾಮಾಜಿಕ ಭದ್ರತೆ ಮತ್ತು ರಕ್ಷಣಾ ಕ್ರಮಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಕಾರ್ಮಿಕರ ಸುಧಾರಣೆಗಳನ್ನು ಯೋಜಿಸುವ ಸಾಧ್ಯತೆಗಳಿವೆ.
- ಕುಲಕಸುಬುದಾರರು ತಮ್ಮ ಮೂಲ ವೃತ್ತಿಗಳನ್ನು ಬಿಟ್ಟುಕೊಟ್ಟು ಕೂಲಿಕಾರರಾಗುವ, ಗುಡಿಕೈಗಾರಿಕೆಗಳ ಬೇಡಿಕೆ ಹಂತ ಹಂತವಾಗಿ ಕಡಿಮೆಯಾಗುವ, ಬ್ಯಾಂಕು ಮತ್ತು ಹಣಕಾಸಿನ ಸಂಸ್ಥೆಗಳ ಖಾಸಗೀಕರಣವು ಗೃಹ, ಸಣ್ಣ ಹಾಗೂ ಕುಲಕಸುಬುದಾರರ ಹಾಗೂ ಹಿಂದುಳಿದವರಿಗೆ ಸಾಲ ನೀಡುವ ಆದ್ಯತೆಯಿಂದ ನಿಧಾನವಾಗಿ ದೂರ ಸರಿಯುತ್ತವೆ.
- ಜಾಗತೀಕರಣದಿಂದ ಆರ್ಥಿಕವಾಗಿ ಹಿಂದುಳಿದಿರುವ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರೆಗೆ ಲಾಭದಾಯಕ ಹುದ್ದೆಗಳು ಸಿಗುವ ಸಾಧ್ಯತೆ ಕಡಿಮೆ.
- ಕೂಲಿಕಾರರು ನಿಶ್ಚಿತ ಕೂಲಿಯಿಂದ ಅನಿಶ್ಚಿತ ಕೂಲಿಯ ಕಡೆಗೆ ಸಾಗುವ, ಕೃಷಿಗೆ ನೀಡುವ ಸಹಾಯಧನ ಕಡಿಮೆ ಅಥವಾ ಇಲ್ಲವಾಗಿಸುವ ಸಾಧ್ಯತೆ ಇರುವುದರಿಂದ ಕೃಷಿ ಉತ್ಪಾದನೆ ಕಡಿಮೆಯಾಗಿ, ಆಹಾರದ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ.
- ಕಾರ್ಮಿಕರ ಉದ್ಯೋಗದ ಭರವಸೆ ಕಡಿಮೆಯಾಗುವ ಹಾಗೂ ಸರ್ಕಾರಿ ಸೇವೆಗಳು ಖಾಸಗಿಗೊಳ್ಳುತ್ತಿರುವಾಗ ಮೀಸಲಾತಿ ನೀತಿ ಅರ್ಥ ಕಳೆದುಕೊಳ್ಳುತ್ತದೆ.
- ಖಾಸಗೀಕರಣದ ಪ್ರಭಾವದಿಂದ ಶೈಕ್ಷಣಿಕ ಸೌಲಭ್ಯಗಳಿಂದ ಹಿಂದುಳಿದ ಜನಾಂಗ ದೂರ ಸರಿಯುತ್ತಾರೆ.
- ಜಾಗತೀಕರಣವು ಬಂಡವಾಳ ಪ್ರಧಾನ ತಂತ್ರಜ್ಞಾನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತದೆ.
- ಆದಾಯ-ಸಂಪತ್ತಿನ ಹಂಚಿಕೆಯಲ್ಲಿ ಅಸಮತೋಲನೆ ಕಂಡುಬರುತ್ತದೆ.

- ಖಾಸಗೀ ಒಡೆತನದ ಉದ್ದಿಮೆಗಳು ಲಾಭದ ಆಸೆಗಾಗಿ ಕಾರ್ಮಿಕರನ್ನು ಶೋಷಿಸುವ, ದೇಶದೊಳಗಿನ ನೈಸರ್ಗಿಕ ಸಂಪನ್ಮೂಲ ಬರಿದಾಗುವ ಸಾಧ್ಯತೆ.
- ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ, ಬಹುರಾಷ್ಟ್ರೀಯ ಕಂಪನಿಗಳು ತಾವು ಅತಿಥೇಯ ದೇಶಗಳಲ್ಲಿನ ಉತ್ಪಾದನೆಯಲ್ಲಿ ಗಳಿಸಿದ ಲಾಭವನ್ನು ಮರುಹೂಡಿಕೆ ಮಾಡುವುದರ ಬದಲು ಸ್ವದೇಶಕ್ಕೆ ಹೊತ್ತೊಯ್ಯಬಹುದು.
- ಬಹುರಾಷ್ಟ್ರೀಯ ಕಂಪನಿಗಳು ನಗರ ಪ್ರದೇಶಗಳಲ್ಲಿ ಸ್ಥಾಪನೆಯಾಗುವುದರಿಂದ ಪ್ರಾದೇಶಿಕ ಅಸಮತೋಲನ ಉಂಟಾಗುವುದು.
- ಆಧುನಿಕತೆ, ಜಾಗತೀಕರಣ ಮತ್ತು ಖಾಸಗೀಕರಣಗಳಿಂದಾಗಿ ಸರಕಾರದ ಸಹಾಯಧನ, ಪ್ರೋತ್ಸಾಹ, ಹಾಗೂ ಇತರೆ ಸೌಲಭ್ಯಗಳ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಿವೆ. ಸಾಮಾಜಿಕ, ಭದ್ರತಾ ಸೌಲಭ್ಯಗಳು ಸಾಕಷ್ಟು ಪ್ರಮಾಣದಲ್ಲಿ ಕುಲಕಸುಬುದಾರರಿಗೆ ದೊರೆಯುತ್ತಿಲ್ಲ.

ಕುಲಕಸುಬುದಾರರು ತಮ್ಮ ವೃತ್ತಿಗಳನ್ನು ಅಧುನೀಕರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವರಿಗೆ ಬೇಕಾದ ಸೂಕ್ತವಾದ ಆಧುನಿಕ ಯಂತ್ರೋಪಕರಣಗಳು, ಸಾಧನ ಸಲಕರಣೆಗಳು ಸುಲಭ ಬೆಲೆಗೆ ಲಭ್ಯವಾಗುತ್ತಿಲ್ಲ. ಹಣಕಾಸಿನ ಸಂಸ್ಥೆಗಳು ಕುಲಕಸುಬುದಾರರಿಗೆ ಸಾಲ ಕೊಡುವ ಆದ್ಯತೆಯಿಂದ ಹಿಂದೆ ಸರಿಯುತ್ತಿವೆ. ತಯಾರಿಸಿದ ಸರಕು ಸೇವೆಗಳ ಮಾರಾಟಕ್ಕೆ ವ್ಯವಸ್ಥೆ ಇಲ್ಲ. ಸರಕುಗಳ ಬೇಡಿಕೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ. ಇಂತಹ ಸನ್ನಿವೇಶದಲ್ಲೆ ಕುಲಕಸುಬುಗಳು ಮುಂದುವರಿಯಲು ಸಾಧ್ಯವೇ? ಅವುಗಳನ್ನು ನಂಬಿ ಜೀವನ ಮಾಡಲು ಕುಲಕಸುಬುದಾರರಿಗೆ ಸಾಧ್ಯತೆ ಇದೆಯೇ? ಎಂಬ ಪ್ರಶ್ನೆಗಳು ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಉದ್ಭವವಾಗುತ್ತಿವೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ಎಷ್ಟೋ ಕುಲಕಸುಬುಗಳು ಕಣ್ಮರೆಯಾಗಿವೆ. ಮತ್ತೆ ಕೆಲವು ಕಣ್ಮರೆಯಾಗುವ ಹಂತದಲ್ಲಿವೆ. ಇಂತಹ ಸನ್ನಿವೇಶದಲ್ಲಿ ಉಳಿದುಕೊಂಡಿರುವ ಪ್ರಮುಖವಾದ ಕುಲಕಸುಬುಗಳ ಮೇಲೆ ಆಧುನೀಕರಣ, ಜಾಗತೀಕರಣದ ಕೆಟ್ಟ ಪರಿಣಾಮಗಳು ಬೀಳದಂತೆ ನೋಡಿಕೊಂಡು ಅವುಗಳನ್ನು ಉಳಿಸಿ ಬೆಳೆಸುವುದು ಸರಕಾರ ಹಾಗೂ ಸಂಘ ಸಂಸ್ಥೆಗಳ ಪ್ರಮುಖ ಜವಾಬ್ದಾರಿಯಾಗಿದೆ.

ಕುಲಕಸುಬುಗಳ ಸ್ಥಿತ್ಯಂತರ

ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಪಾಶ್ಚಿಮಾತ್ಯದ ಆಧುನಿಕತೆ ದಾಪುಗಾಲು ಇಡುತ್ತಿದೆ. ಭಾರತೀಯವಾದ ಅಭಿವೃದ್ಧಿ ಪ್ರಗತಿಗೆ ವಿರೋಧವಿಲ್ಲ. ಆದರೆ ಹೊಸತನದ ಪರಿಣಾಮವಾಗಿ ಜನಪದರು ತಮ್ಮನ್ನು ತಾವೆ ಹೇಗೆ ರಕ್ಷಿಸಿಕೊಳ್ಳಬೇಕೆಂದು ಯೋಚಿಸಬೇಕಾಗಿದೆ. ಒಂದು ಕಡೆ

ಆಧುನಿಕತೆ ಪಟ್ಟಣವಾಸಿಗಳಿಗೆ ಆಕರ್ಷಣೀಯವಾಗುತ್ತಿದ್ದರೆ, ಇನ್ನೊಂದು ಕಡೆ ಆಧುನಿಕತೆಗೆ ಒಗ್ಗಿಕೊಳ್ಳಲಾರದ ಬುಡಕಟ್ಟು ಹಾಗೂ ಕುಲಕಸುಬು ಸಮುದಾಯಗಳು ಸಮಸ್ಯೆಗಳ ಸುಳಿಯಲ್ಲಿವೆ.

ಆಧುನಿಕತೆ ಉತ್ಪಾದನಾ ಕ್ಷೇತ್ರದಲ್ಲಿ ವಿಶೇಷವಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಬಾರಿ ಬದಲಾವಣೆಯನ್ನು ತಂದಿದೆ. ಸಾಂಪ್ರದಾಯಿಕ ಸಣ್ಣ ಹಾಗೂ ಗುಡಿ ಕೈಗಾರಿಕೆಗಳು ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆಗೆ ತಕ್ಕಂತೆ ಬದಲಾಗಲು ಹಾಗೂ ಹೊಂದಿಕೊಳ್ಳಲು ಪ್ರಯತ್ನಿಸುತ್ತಿವೆ. ಆಧುನಿಕ ಕೈಗಾರಿಕೆಗಳು ಮುಖ್ಯವಾಗಿ ರೈತಾಪಿ ಜನ ಸಮುದಾಯದಿಂದ ಹಿಡಿದು ಕುಂಬಾರ, ಕಮ್ಮಾರ, ಪತ್ತಾರ, ಬಡಗಿ, ಕಂಚುಗಾರ, ನೇಕಾರ, ಮೇದಾರ, ಬಣಕಾರ, ಬಳೆಗಾರ, ಶಿಲ್ಪಿ, ಚಮ್ಮಾರ ಕಲ್ಲುಕುಟಿಗ, ಪೂಜಾರ, ಗಾಣಿಗ, ನಾಟಿವೈದ್ಯ, ಕ್ಷೌರಿಕ, ಮಡಿವಾಳ, ಉಪ್ಪಾರ ಮುಂತಾದ ಸಮುದಾಯಗಳ ಕುಲಕಸುಬುಗಳ ಮೇಲೆ ಬೇರೆ ಬೇರೆ ರೀತಿಯ ಪರಿಣಾಮಗಳು ಬೀರಿವೆ. ದೊಡ್ಡ ಕೈಗಾರಿಕೆಗಳ ಬೆಳವಣಿಗೆಯಿಂದ ದೇಶದ ಆದಾಯ, ಉದ್ಯೋಗ ಹಾಗೂ ಉತ್ಪನ್ನದ ಪ್ರಮಾಣ ಹೆಚ್ಚಿದೆ. ಆರ್ಥಿಕ ಬೆಳವಣಿಗೆ ದರ ಹೆಚ್ಚಾಗಿದೆ. ಆದರೆ ತಲೆತಲಾಂತರವಾಗಿ ಬೆಳೆಸಿ-ಉಳಿಸಿಕೊಂಡು ಬಂದಿರುವ ಕುಲಕಸುಬುಗಳು ಮೂಲೆಗುಂಪಾಗಲು, ನಶಿಸಿಹೋಗಲು ಆಧುನಿಕ ಕೈಗಾರಿಕೆಗಳು ಕಾರಣವಾಗಿವೆ. ಆಧುನಿಕ ಕೈಗಾರಿಕೆಗಳು ಜನರ ಆಸೆ-ಆಕಾಂಕ್ಷೆಗಳನ್ನು ವೇಗವಾಗಿ ಪೂರೈಸುವ ಕೆಲಸ ಮಾಡುತ್ತಿವೆ. ಆದರೆ ಈ ತ್ವರಿತ ಅಭಿವೃದ್ಧಿಯ ಜೊತೆಗೆ ಜನಪದರು ತಮ್ಮ ಮೂಲಕಸುಬುಗಳನ್ನು ನಂಬಿಕೊಂಡು ತಮ್ಮ ಬದುಕನ್ನು ಕಂಡುಕೊಳ್ಳುತ್ತಾ ಬಂದಿರುವ ಈ ಜನ ಸಮುದಾಯಗಳು ದಾರಿಕಾಣದೆ ಪರಿತಪಿಸುವಂತಾಗಿದೆ. ಆಧುನಿಕ ಕೈಗಾರಿಕೆಗಳಲ್ಲಿ ಉತ್ಪಾದನೆ, ವಿನಿಮಯ, ವಿತರಣೆಯಂತಹ ವ್ಯವಹಾರಿಕ ಪರಿಭಾಷೆ ಹಾಗೂ ಆ ಮೂಲಕ ಲಾಭ-ನಷ್ಟಗಳೇ ಪ್ರಮುಖವಾಗಿರುತ್ತವೆ. ಆದರೆ ವಂಶಪಾರಂಪರಿಕ ಕುಲಕಸುಬುಗಳನ್ನು ಅವಲಂಬಿಸಿ ಬದುಕುವ ಸಮುದಾಯಗಳಿಗೆ ವ್ಯವಹಾರ ಹೊರತಾಗಿಯೂ ಸಾಂಸ್ಕೃತಿಕ ಅನನ್ಯತೆ ಮುಖ್ಯವಾಗುತ್ತದೆ.

ಆದ್ದರಿಂದ ಕೈಗಾರೀಕರಣ ಆಧುನಿಕ ಬದುಕಿಗೆ ವೇಗವನ್ನು, ಆಕರ್ಷಣೆಯನ್ನು ತಂದದ್ದು ನಿಜವಾದರೂ ಕುಲಕಸುಬು ಸಮುದಾಯಗಳ ಆರ್ಥಿಕ ಜೀವನವನ್ನು ಅಸಹನೀಯವಾಗಿಸಿದೆ. ಕುಲಕಸುಬುದಾರರ ಬದುಕು ಕಷ್ಟಕರ ಸ್ಥಿತಿಯಲ್ಲಿದೆ.

ಆಧುನಿಕತೆಯಿಂದಾಗಿ ಕುಲಕಸುಬುದಾರರ ಸಾಂಪ್ರದಾಯಿಕ ವಸ್ತುಗಳಿಗೆ ಬೇಡಿಕೆ ಕಡಿಮೆಯಗುತ್ತಿದೆ. ಜನರ ರುಚಿ-ಅಭಿರುಚಿಗಳಿಗೆ ತಕ್ಕಂತೆ ವಸ್ತುಗಳನ್ನು ತಯಾರು ಮಾಡುವಲ್ಲಿ, ಮಾರಾಟಮಾಡುವಲ್ಲಿ ಹಿಂದುಳಿಯುತ್ತಿದ್ದಾರೆ. ಕಾರಣ ಕಚ್ಚಾವಸ್ತುಗಳ ಕೊರತೆ, ತಂತ್ರಜ್ಞಾನದ ಕೊರತೆ, ಹಣಕಾಸಿನ ಕೊರತೆ, ಮಾರುಕಟ್ಟೆಯ ಕೊರತೆ, ಮೂಲಸೌಲಭ್ಯಗಳ ಕೊರತೆ ಇವರನ್ನು ಕಾಡುತ್ತಿವೆ. ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ತಯಾರು ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಕುಲಕಸುಬುಗಳೂ ತಯಾರು ಮಾಡುವ ವಸ್ತುಗಳಿಗೆ ಮಾರುಕಟ್ಟೆ

ಇಲ್ಲದೆ ಸೊರಗುತ್ತಿವೆ. ಆದರೂ ಕುಂಬಾರಿಕೆ, ಕಮ್ಮಾರಿಕೆ, ಪತ್ತಾರಿಕೆ, ಬಡಗಿತನ, ಚಮ್ಮಾರಿಕೆ, ಶಿಲ್ಪಗಾರಿಕೆ ಇತ್ಯಾದಿ ವೃತ್ತಿಯಲ್ಲಿ ತೊಡಗಿದವರು ವೃತ್ತಿಯಲ್ಲಿ ಆಧುನಿಕತೆಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಕಸುಬಿನ ಉತ್ಪಾದನಾ ವಿಧಾನಗಳಲ್ಲಿ ಮಾರ್ಪಾಡು ಮಾಡಿಕೊಳ್ಳುತ್ತಿದ್ದಾರೆ. ಕೃಷಿ ಸಾಂಪ್ರದಾಯಿಕ ಪದ್ಧತಿಯಿಂದ ಆಧುನೀಕರಣ ಹೊಂದಿ ವಾಣಿಜ್ಯೀಕರಣವಾಗುತ್ತಿದೆ. ಹನಿ ನೀರಾವರಿ, ತುಂತುರು ನೀರಾವರಿಯಂತಹ ಹೊಸ ನೀರಾವರಿ ಪದ್ಧತಿಗಳನ್ನು ಬಳಸಿ ಹೆಚ್ಚು ಇಳುವರಿಕೊಡುವ ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಒಕ್ಕಲುತನ ಬದಲಾವಣೆಯಾಗುತ್ತದೆ. ಕುಂಬಾರಿಕೆ ಜನರ ಅಭಿರುಚಿಗೆ ತಕ್ಕಂತೆ ಸರಕುಗಳನ್ನು ತಯಾರಿಸಿ ಮಾರಾಟ ಮಾಡುವುದರ ಮೂಲಕ ಬದಲಾವಣೆ ವ್ಯವಸ್ಥೆಗೆ ಹೊಂದಿಕೊಳ್ಳುತ್ತಿದೆ. ಕಮ್ಮಾರರು ಹಾಗೂ ಬಡಗಿಗಳು ಆಧುನಿಕ ಫ್ಯಾಷನ್‌ಗೆ ತಕ್ಕಂತೆ ಒಡವೆ–ವಸ್ತುಗಳನ್ನು ವೈವಿಧ್ಯಮಯ ಹಾಗೂ ಆಕರ್ಷಕವಾಗಿ ತಯಾರಿಸುತ್ತಿದ್ದಾರೆ. ತಯಾರಿಕಾ ವಿಧಿವಿಧಾನಗಳಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬರುತ್ತಿದೆ.

ಚಮ್ಮಾರರು ಕಂಪನಿಗಳು ತಯಾರಿಸುವ ಚರ್ಮದ ವಸ್ತುಗಳನ್ನು ಮಾರಾಟ ಮಾಡುವ ಹಾಗೂ ಅವುಗಳನ್ನು ರಿಪೇರಿ ಮಾಡಿಕೊಡುವ ಮಟ್ಟಿಗೆ ಸ್ಥಿತ್ಯಂತರವಾಗಿದ್ದಾರೆ. ಮೇದಾರಿಕೆ ಬಿದಿರು–ಬೆತ್ತ ವಸ್ತುಗಳನ್ನು ತಯಾರಿಸುವ ವೃತ್ತಿಯ ಜೊತೆಗೆ ಆಧುನಿಕರಿಗೆ ಬೇಕಾದ ಅಲಂಕಾರಿಕ ಹೆಂಚು, ಪೋಲ್ಸ್, ಕಡಪಾ ಬಂಡೆ ಇತ್ಯಾದಿಗಳನ್ನು ಮಾರಾಟ ಮಾಡುವಷ್ಟು ಬದಲಾಗಿದೆ. ನಗರಗಳಲ್ಲಿ ಮೇದಾರರು ಪ್ಲೆಕ್ಸ್ ಚೌಕಟ್ಟುಗಳನ್ನು ತಯಾರಿಸಿ ಕೊಡುತ್ತಾರೆ. ನೇಕಾರಿಕೆ ಬೇರೆಲ್ಲಾ ಕಸುಬುಗಳಿಗಿಂತ ಹೆಚ್ಚಿನ ಸಮಸ್ಯೆಗಳನ್ನು ಎದುರಿಸುತ್ತಿದೆ. ಆಧುನಿಕ ಬಟ್ಟೆ ಉದ್ಯಮಗಳು ಉತ್ತಮ ಗುಣಮಟ್ಟದ ಬಟ್ಟೆಗಳನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿರುವುದರಿಂದ ಕೈಮಗ್ಗದ ಬಟ್ಟೆಗಳಿಗೆ ಬೇಡಿಕೆ ಕಡಿಮೆ ಆಗಿದೆ. ಆದರೂ ನೇಕಾರರು ಯಂತ್ರಮಗ್ಗಗಳನ್ನು ಬಳಸಿ ಉತ್ತಮ ಬಟ್ಟೆಗಳನ್ನು ತಯಾರಿಸಲು ಪ್ರಯತ್ನಿಸುತ್ತಿದ್ದಾರೆ. ಇದೇ ರೀತಿ ಬಣಗಾರಿಕೆ, ಸುಣ್ಣಗಾರಿಕೆ, ಮಡಿವಾಳ ವೃತ್ತಿ, ಕ್ಷೌರಿಕ ವೃತ್ತಿ, ನಾಟಿ ವೈದ್ಯ ವೃತ್ತಿ, ಗಾಣಗಾರಿಕೆ, ಪೂಜಾರಿಕೆ ವೃತ್ತಿಗಳಲ್ಲಿ ಸಾಂಪ್ರದಾಯಿಕ ಉತ್ಪಾದನಾ ವಿಧಾನಗಳಲ್ಲಿ ಬದಲಾವಣೆ ಕಂಡುಬರುತ್ತಿದೆ. ಇವರೆಲ್ಲರೂ ಆಧುನಿಕ ಸ್ಥಿತಿಗತಿಗೆ ತಕ್ಕಂತೆ ಬದಲಾಗುತ್ತಿದ್ದಾರೆ. ವೃತ್ತಿಗಳಲ್ಲಿ ಬದಲಾವಣೆ ತಂದುಕೊಳ್ಳುತ್ತಿದ್ದಾರೆ. ಆಧುನಿಕತೆಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ.

ಆಧುನಿಕ ತಂತ್ರಜ್ಞಾನ ಉತ್ಪಾದನಾ ವಿಧಾನಗಳನ್ನು ಸರಳಗೊಳಿಸುತ್ತಿದೆ. ಮಾನವನ ದೈಹಿಕ ಬಳಕೆಯನ್ನು ಕಡಿಮೆಗೊಳಿಸುತ್ತದೆ. ಇದರಿಂದಾಗಿ ಕುಲಕಸುಬುಗಳ ಕಾರ್ಯವಿಧಾನಗಳಲ್ಲಿ ಬದಲಾಗುತ್ತಿರುವುದು ಒಂದು ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ ಎಂದು ಕೆಲವು ಕುಲಕಸುಬುದಾರರು ಭಾವಿಸಿದ್ದಾರೆ.

ಆಧುನಿಕ ಯಂತ್ರ-ತಂತ್ರ, ವಿಜ್ಞಾನ ಶಿಕ್ಷಣ, ಕೈಗಾರಿಕರಣ ಇವೇ ಮೊದಲಾದ ಕಾರಣಗಳಿಂದ ನಮ್ಮ ಹಳ್ಳಿಯ ಜೀವನ ಬದಲಾಗುತ್ತ ನಡೆದಿದೆ. ಈ ಪ್ರಭಾವ ಪರಂಪರೆ ಯಂತ್ರೋಪಕರಣಗಳಾದ ಟ್ರಾಕ್ಟರ್, ಕಾಂಬೈನ್ಡ್ ಹಾರವೆಸ್ಟರ್, ಟಿಲ್ಲರ್, ಸಸಿ-ನೆಡುವ ಯಂತ್ರಗಳು, ಸುಗ್ಗಿ ಮಾಡುವ ಯಂತ್ರಗಳು, ನೀರೆತ್ತುವ ಯಂತ್ರಗಳು, ಹನಿ-ನೀರಾವರಿ, ತುಂತುರು ನೀರಾವರಿ ಪದ್ಧತಿಗಳು ಸಾಂಪ್ರದಾಯಿಕ ಕೃಷಿಯನ್ನು ಬದಲಾಯಿಸಿದೆ. ಹೆಚ್ಚು ಇಳುವರಿಕೊಡುವ ಬೀಜದ ತಳಿಗಳು, ರಸಾಯನಿಕ ಗೊಬ್ಬರ, ಕ್ರಿಮಿಕೀಟನಾಶಕಗಳು, ಆಧುನಿಕ ಮಾರುಕಟ್ಟೆ, ಬ್ಯಾಂಕಿಂಗ್ ಸೌಲಭ್ಯಗಳು, ಶೀಥಲೀಕರಣ ಹಾಗೂ ಉಗ್ರಾಣ ವ್ಯವಸ್ಥೆ ಒಕ್ಕಲುತನವನ್ನು ಆಧುನೀಕರಿಸಿದೆ. ಬೆಳೆಗಳನ್ನು ಕಟಾವು ಮಾಡಿ ಸುಗ್ಗಿಮಾಡಲು ನೂರಾರು ಕೃಷಿಕಾರ್ಮಿಕರು ಬೇಕಾಗಿದ್ದ ಹಿಂದಿನ ವ್ಯವಸ್ಥೆ ಇಂದು ಕೇವಲ ಒಂದೇ ಒಂದು ಯಂತ್ರ ಈ ಎಲ್ಲಾ ಕಾರ್ಯವನ್ನು ನಿರ್ವಹಿಸುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತನಾಟಿ ಮಾಡುವ ಹಾಗೂ ಸುಗ್ಗಿ ಮಾಡುವ ಕಾರ್ಯವನ್ನು ಸಂಪೂರ್ಣವಾಗಿ ಯಂತ್ರಗಳೇ ಮಾಡುತ್ತಿವೆ.

ಕೃಷಿ ಯಂತ್ರಗಳು ಒಕ್ಕಲಿಗನ ಜೀವನದ ಚಿತ್ರಣವನ್ನು ಸಂಪೂರ್ಣವಾಗಿ ಬದಲಿಸಿವೆ. ಕೇವಲ ಜೀವನಾಧಾರವಾಗಿ ಮಾಡುತ್ತಿದ್ದ ಒಕ್ಕಲುತನ ಇಂದು ವಾಣಿಜ್ಯೀಕರಣವಾಗಿದೆ. ಬಾನುಲಿಕೇಂದ್ರ, ದೂರದರ್ಶನ, ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿ ಮತ್ತು ಇಲಾಖೆಗಳು ಒಕ್ಕಲಿಗರ ಅಭಿವೃದ್ಧಿಗೆ ಪಣತೊಟ್ಟು ನಿಂತಿವೆ. ಇಂದು ಒಕ್ಕಲಿಗರು ಯಾವುದೇ ಆಯಗಾರರ ನೆರವಿಲ್ಲದೆ ಸ್ವತಂತ್ರವಾಗಿ ಕಸುಬನ್ನು ನಿರ್ವಹಿಸುತ್ತಿದ್ದಾರೆ. ತನಗೆ ಬೇಕಾದ ಕೃಷಿ ಸಾಧನ-ಸಲಕರಣೆಗಳನ್ನು ಮಾರುಕಟ್ಟೆಯಿಂದ ಕೊಂಡು ತರುತ್ತಾನೆ, ಕೃಷಿ ವಸ್ತುಗಳನ್ನು ಹಣಕ್ಕೆ ಮಾರಿ ಆದಾಯ ಗಳಿಸುತ್ತಿದ್ದಾನೆ, ಇಂದು ಒಕ್ಕಲಿಗ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಪ್ರಬಲನಾಗಿದ್ದಾನೆ. ಇಂದು ರೈತರು ರಾಜ್ಯ ಮತ್ತು ರಾಷ್ಟ್ರದ ರಾಜಕಾರಣದಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದಾರೆ. ಇವೆಲ್ಲಕ್ಕೂ ಕೃಷಿಯ ಸ್ಥಿತ್ಯಂತರವೇ ಕಾರಣವೆನ್ನಬಹುದು.

ಅಂಬು ಬಿಲ್ಲಗೆ ಲೇಸು ಇಂಬು ಕೋಣಿಗೆ ಲೇಸು
ಸಂಬಾರ ಲೇಸು ಸಾರಿಗಾ ಊರಿಂಗೆ
ಕುಂಬಾರ ಲೇಸು ಸರ್ವಜ್ಞ

ಸರ್ವಜ್ಞನ ಮಾತು ಊರಿಗೆ ಕುಂಬಾರನ ಅಗತ್ಯತೆಯನ್ನು ಬಿಂಬಿಸುತ್ತದೆ. ಕೌಟುಂಬಿಕ ಜೀವನದಲ್ಲಿ ಕುಂಬಾರಿಕೆ ಪಾತ್ರ ಅತ್ಯಂತ ಹಿರಿದಾದುದು. ಎಲ್ಲಾ ಕೈಕಸುಬುಗಳಂತೆ, ಮಾನವನ ಅವಿಭಾಜ್ಯ ಅಂಗವಾಗಿ ಅರಳಿದ ಈ ಕುಂಬಾರಿಕೆಯನ್ನು ನಿರ್ವಹಿಸುವವ ಕುಂಬಾರ. ಈ ಕಲೆ ಆದಿ ಮಾನವನ ಕಾಲದಿಂದ, ಇಂದಿನವರೆಗೆ, ಎಲ್ಲಾ ಸಂಸ್ಕೃತಿಗಳ ಎಲ್ಲಾ ಜನಾಂಗಗಳಲ್ಲಿ ಅತ್ಯಂತ ಪ್ರಚಲಿತವಾಗಿರುವ ಉಪಯುಕ್ತ ಕಸುಬು. ಮಣ್ಣಿನಿಂದ ಮಡಿಕೆ-ಕುಡಿಕೆ, ಪಾತ್ರೆ-ಪಡುಗಗಳನ್ನು

ಬಂಡಿಗಾಲಿಯಂತಹ ಚಕ್ರದ ಸಹಾಯದಿಂದ ಅರ್ಲಿಗೆ ಒಂದು ಆಕಾರ ನೀಡಿ ಮಣ್ಣಿನ ಪಾತ್ರೆಗಳನ್ನು ತಯಾರಿಸುವ ವೃತ್ತಿ ಕೌಶಲ್ಯ ಕುಂಬಾರಿಕೆಯಲ್ಲಿದೆ. ಕುಂಬಾರಿಕೆಯು ಕಂಚು, ಹಿತ್ತಾಳೆ, ಅಲ್ಯೂಮಿನಿಯಂ, ಸ್ಟೀಲ್ ಹಾಗೂ ಪ್ಲಾಸ್ಟಿಕ್ ಪಾತ್ರೆ ಪಡುಗಗಳು ಮಾರುಕಟ್ಟೆಗೆ ಬರುವವರಿಗೆ ಪ್ರಸಿದ್ಧಿಯಲ್ಲಿತ್ತು. ಆದರೆ ಈ ಮೇಲಿನ ಬಾಳಿಕೆ ಬರುವ ಹಾಗೂ ಆಕರ್ಷಕವಾಗಿರುವ ಪದಾರ್ಥಗಳು ಬಂದ ಮೇಲೆ ಕುಂಬಾರಿಕೆ ವೃತ್ತಿ ಮೂಲೆಗುಂಪಾಯಿತು. ಆದರೂ ಸಾಂಪ್ರದಾಯಿಕ ಕುಂಬಾರರು ಕುಂಬಾರಿಕೆಯನ್ನು ರೂಪಾಂತರಗೊಳಿಸಿದ್ದಾರೆ. ಅವರು ಮಾರುಕಟ್ಟೆಯಲ್ಲಿ ಲಭ್ಯವಿರುವ ಆಧುನಿಕ ಯಂತ್ರ ಸಾಧನ–ಸಲಕರಣೆಗಳನ್ನು ಕುಂಬಾರಿಕೆಯಲ್ಲಿ ಬಳಸುತ್ತಿದ್ದಾರೆ. ಜನರ ಅಭಿರುಚಿಗೆ ತಕ್ಕಂತೆ ಹೂ ಕುಂಡಗಳು, ತೂಗು ಕುಂಡಗಳು, ನೀರು ಶೇಖರಣ ಹೂಜಿಗಳು, ಅಲಂಕರಣ ಆಕರ್ಷಕ ಮಣ್ಣಿನ ಆಕೃತಿಗಳನ್ನು ತಯಾರು ಮಾಡಿ ಪೇಟೆ ಪಟ್ಟಣಗಳಲ್ಲಿ ಉತ್ತಮ ಬೆಲೆಗೆ ಮಾರುತ್ತಿದಾರೆ. ಸರ್ಕಾರದ ಧನಸಹಾಯ, ಆಧುನಿಕ ಯಂತ್ರೋಪಕರಣಗಳ ಲಭ್ಯತೆ ಕುಂಬಾರರ ಜೀವನದ ಬದಲಾವಣೆಗೆ ಕಾರಣವಾಗಿದೆ. ಇಂದು ಕುಂಬಾರಿಕೆ ವೈವಿಧ್ಯಮಯ ಸರಕುಗಳನ್ನು ತಯಾರಿಸುವ ಮೂಲಕ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡಿದೆ.

ಒಕ್ಕಲುತನದ ದೃಷ್ಟಿಯಿಂದ, ಕಮ್ಮಾರ ಕಸುಬು ಸಹ ಮಿಕ್ಕ ಕೈ ಕಸುಬುಗಳಂತೆಯೇ ಪ್ರಮುಖವಾದುದು. ಮಾನವನ ಇತಿಹಾಸದಲ್ಲಿ ಕಮ್ಮಾರ ವೃತ್ತಿ ಕಬ್ಬಿಣ ಯುಗದಷ್ಟೆ ಪ್ರಾಚೀನವಾದುದು. ಕಮ್ಮಾರರು ಯುದ್ದ ಶಾಲೆಗಳಿಗೆ ವಿವಿಧ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದ್ದರಿಂದ ರಾಜ ಮಹಾರಾಜರು ಈ ವೃತ್ತಿಯ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಿದ್ದರು. ಕಮ್ಮಾರರು ಒಕ್ಕಲುತನಕ್ಕೆ ಅನಿವಾರ್ಯ. ಒಕ್ಕಲಿಗನಿಗೆ ಬೇಕಾದ ಎಲ್ಲಾ ಸರಕುಗಳನ್ನು ತಯಾರಿಸಿ ಪೂರೈಸುತ್ತಿದ್ದ ಇವನು ಆಯಾಗಾರ. ರೈತನು ಬೆಳೆದ ಬೆಳೆಯಲ್ಲಿ ಇವನಿಗೂ ಪಾಲಿತ್ತು. ಹಿಂದೆ ರೈತ ಹಾಗೂ ಕಮ್ಮಾರ ಸಂಬಂಧ ಉತ್ತಮವಾಗಿತ್ತು ಆದರೆ ಇಂದು ಬದಲಾದ ಒಕ್ಕಲುತನದ ವ್ಯವಸ್ಥೆಯಲ್ಲಿ ಹಳ್ಳಿ ಕಮ್ಮಾರನ ಪಾತ್ರ ಕಡಿಮೆಯಾಗಿದೆ. ಒಕ್ಕಲಿಗರು ತಮಗೆ ಬೇಕಾದ ಕಬ್ಬಿಣದ ಎಲ್ಲಾ ಸಾಮಗ್ರಿಗಳನ್ನು ನಗರದ ಮಾರುಕಟ್ಟೆಯಿಂದ ಕೊಂಡು ತರುತ್ತಿದ್ದಾನೆ. ಇದರಿಂದ ಹಳ್ಳಿಗಳಲ್ಲಿ ಕಮ್ಮಾರಿಕೆ ವೃತ್ತಿ ಮೂಲೆಗುಂಪಾಗಿದೆ. ಕಮ್ಮಾರರು ಇಂದು ನಗರಗಳಲ್ಲಿ ವಾಸವಾಗಿದ್ದು ಕೈಗಾರಿಕೆಗಳು ತಯಾರು ಮಾಡಿದ ಯಂತ್ರಗಳ ರಿಪೇರಿ ಮಾಡುವ ಅಥವಾ ವೆಲ್ಡಿಂಗ್ ಕೆಲಸ ಮಾಡುವ ವೃತ್ತಿಗೆ ಪರಿವರ್ತನೆಯಾಗಿದ್ದಾರೆ. ಈ ವೃತ್ತಿಯ ಸ್ಥಿತ್ಯಂತರ ಕಮ್ಮಾರನ ಆದಾಯ ಹೆಚ್ಚಲು ಕಾರಣವಾಗಿದೆ. ಇಂದು ಆಧುನಿಕ ಯಂತ್ರೋಪಕರಣಗಳನ್ನು ಬಳಸಿ ಗೃಹಪಯೋಗಿ ಹಾಗೂ ವ್ಯವಸಾಯೋಪಯೋಗಿ ವಸ್ತುಗಳನ್ನು ತಯಾರಿಸಿ ಉತ್ತಮ ಆದಾಯ ಗಳಿಸುತ್ತಿರುವುದು ಕ್ಷೇತ್ರ ಕಾರ್ಯದಿಂದ ತಿಳಿದು ಬಂದಿದೆ. ಜಿಲ್ಲೆಯಲ್ಲಿ ಕೆಲವು ಕಮ್ಮಾರ ಕುಟುಂಬಗಳು ಕಮ್ಮಾರಿಕೆಯ ಜೊತೆಗೆ ಬಡಗಿತನವನ್ನು ವೃತ್ತಿಯನ್ನಾಗಿಸಿಕೊಂಡಿದ್ದಾರೆ.

ಬಡಗಿತನ ಪಾರಂಪರಿಕವಾಗಿ ಬೆಳೆದುಕೊಂಡು ಬಂದಿರುವ ಕಸುಬು. ಈ ಕಸುಬನ್ನು ಬಳ್ಳಾರಿ ಜಿಲ್ಲೆಯ ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿ ಕಾಣಬಹುದು. ಬಡಗಿಗಳು ವಿವಿಧ ರೀತಿಯ ಮರ ಮುಟ್ಟುಗಳಿಂದ ಗೃಹಪಯೋಗಿ ಹಾಗೂ ಕೃಷಿ ಉಪಯೋಗಿ ಸಾಧನ-ಸಲಕರಣೆಗಳನ್ನು ತಯಾರಿಸುತ್ತಾರೆ. ಒಕ್ಕಲುತನದಲ್ಲಿ ಬಡಗಿಯ ಪಾತ್ರ ಪ್ರಮುಖವಾದುದು. ಸಾಂಪ್ರದಾಯಿಕ ಬಡಗಿದಾರರು ರೈತರಿಗೆ ನೇಗಿಲು, ರಂಟೆ, ಕುಂಟೆ, ಕೂರಿಗೆ, ಮಡಿಕುಂಟೆ ಇತ್ಯಾದಿ ಮರದ ಸಲಕರಣೆಗಳನ್ನು ತಯಾರಿಸಿ ಕೊಡುತ್ತಿದ್ದರು. ಹಾಗೆಯೇ ರೈತರಿಂದ ಅಯವನ್ನು ಪಡೆದುಕೊಳ್ಳುತ್ತಿದ್ದರು. ಆದರೆ ಇಂದು ಗ್ರಾಮೀಣ ಪ್ರದೇಶಗಳಲ್ಲಿ ರೈತರು ಮಾರುಕಟ್ಟೆಯಲ್ಲಿ ಲಭ್ಯವಾಗುವ ಹಾಗೂ ಕೃಷಿ ಇಲಾಖೆ ಪೂರೈಸುವ ಬಾಳಿಕೆ ಬರುವ ಕಬ್ಬಿಣದ ರಂಟೆ, ಕುಂಟೆ, ನೇಗಿಲುಗಳನ್ನು ಬಳಸುತ್ತಿದ್ದಾರೆ. ಇದರಿಂದಾಗಿ ಬಡಗಿಗಳು ಅನಿವಾರ್ಯವಾಗಿ ವೃತ್ತಿಯನ್ನು ಸ್ಥಿತ್ಯಂತರಗೊಳಿಸಿಕೊಂಡಿದ್ದಾರೆ. ಅವರು ಇಂದು ಹೊಸಮನೆಗಳಿಗೆ ಬೇಕಾದ ಕಿಟಿಕಿ, ಬಾಗಿಲು, ಮಂಚ, ಟೇಬಲ್, ಕುರ್ಚಿ, ದಿವಾನ, ಸೋಪಾಸೆಟ್, ವಾರ್ಡ್‌ರೋಬ್‌ಗಳನ್ನು ತಯಾರಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಂದು ಬಡಗಿಗಳಿಗೆ ಬಿಡುವಿಲ್ಲದ ಕೆಲಸ. ಇವರುಗಳ ಕೆಲಸಕ್ಕೆ ಬೇಕಾದ ಆಧುನಿಕ ಸಲಕರಣೆಗಳನ್ನು ಮಾರುಕಟ್ಟೆಯಿಂದ ಕೊಂಡು ಉಪಯೋಗಿಸುತ್ತಿದ್ದಾರೆ. ಇದರಿಂದ ಅವರ ದೈಹಿಕಶ್ರಮ ಕಡಿಮೆಯಾಗಿದೆ. ಎಲ್ಲಾ ರೀತಿಯ ಮರದ ಸಲಕರಣೆಗಳನ್ನು ವಿದ್ಯುತ್ ಉಪಯೋಗಿಸಿ, ಯಂತ್ರಗಳನ್ನು ಬಳಸಿ ವೈವಿಧ್ಯಮಯವಾಗಿ ಆಕರ್ಷಕ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಇಂದು ಸಾಂಪ್ರದಾಯಿಕ ಬಡಗಿ ಸಮುದಾಯದವರ ಜೊತೆಗೆ ಇತರೆ ಸಮುದಾಯ ಹಾಗೂ ಜನಾಂಗದವರು ಈ ವೃತ್ತಿಯನ್ನು ಅನುಸರಿಸಿ ಉತ್ತಮ ಉದ್ಯಮವನ್ನಾಗಿ ಮಾಡಿಕೊಂಡು ಆದಾಯ ಗಳಿಸಿಕೊಳ್ಳುತ್ತಿದ್ದಾರೆ. ಇದರಿಂದ ಸಾಂಪ್ರದಾಯಿಕ ಬಡಗಿಗಳಿಗೆ ಸ್ವಲ್ಪ ಸಮಸ್ಯೆಯಾಗಿದೆ ಎಂಬುದು ಬಳ್ಳಾರಿ ಜಿಲ್ಲೆಯ ಬಡಗಿಗಳ ಸಮುದಾಯದವರನ್ನು ಮುಕ್ತ ಭೇಟಿಯಿಂದ ಅರಿತುಕೊಂಡಿದ್ದೇನೆ. ಮರದ ಸಾಧನ-ಸಲಕರಣೆಗಳನ್ನು ತಯಾರಿಸಲು ಮರದ ಕೊರತೆ ಎದುರಾಗಿದ್ದು ಸರಕಾರದ ಹಾಗೂ ಪರಿಸರವಾದಿಗಳ ನಿಯುಮಗಳು ಕಠಿಣವಾಗುತ್ತಿರುವುದರಿಂದ ಕಾಡುಗಳಿಂದ ಮರಮುಟ್ಟುಗಳನ್ನು ತರಿಸುವುದು ಕಷ್ಟವಾಗುತ್ತದೆ. ಅನುಭೋಗಿಗಳು ಮರದ ವಸ್ತುಗಳಿಗೆ ಬದಲಾಗಿ, ಕಬ್ಬಿಣ, ಹಾಗೂ ಆಧುನಿಕ ತಂತ್ರಜ್ಞಾನದ ಮೂಲಕ ತಯಾರಿಸಿದ ಸಿದ್ಧವಿರುವ ಗೃಹ ಹಾಗೂ ವ್ಯವಸಾಯದ ವಸ್ತುಗಳನ್ನು ಬಳಸುತ್ತಿದ್ದಾರೆ. ಇದರಿಂದಾಗಿ ಬಡಗಿ ಕಸುಬು ದಿನನಿತ್ಯ ಕೆಲಸ ಒದಗಿಸಿಕೊಡುತ್ತಿಲ್ಲ.

ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ತಯಾರಿಸುವವರು ಪತ್ತಾರರು ಅಥವಾ ಅಕ್ಕಸಾಲಿ ಜನಾಂಗ. ಈ ಕಸುಬನ್ನು ಪರಂಪರಾಗತವಾಗಿ, ವಂಶಪಾರಂಪರ್ಯವಾಗಿ ಪತ್ತಾರ ಜನಾಂಗ ಮಾಡಿಕೊಂಡು ಬರುತ್ತಿದೆ. ಅಕ್ಕಸಾಲಿಗರು ಒಂದು ಕಾಲದಲ್ಲಿ ಎಷ್ಟು ಘನತೆ

ಹೊಂದಿದ್ದರೆಂದರೆ ಅವರು ಬ್ಯಾಂಕಿಂಗ್ ಉದ್ಯಮದ ಮೂಲ ಪುರುಷರಾಗಿದ್ದರು. ಇಂಗ್ಲೆಂಡಿನ ಬ್ಯಾಂಕಿಂಗ್ ಉದ್ಯಮದ ಮೂಲಪುರುಷರಲ್ಲಿ ಮೂರರಲ್ಲಿ ಅಕ್ಕಸಾಲಿಯೂ ಒಬ್ಬ. ಇಂದು ಪ್ರಚಲಿತವಿರುವ ಬ್ಯಾಂಕಿಂಗ್ ಚೆಕ್ ಪದ್ಧತಿಗೆ ಅಕ್ಕಸಾಲಿಗನೇ ಮೂಲ ಕಾರಣ ಆದನಂತೆ. ಆಧುನಿಕ ಸಮಾಜದಲ್ಲಿ ಒಡವೆ-ವಸ್ತುಗಳಿಗೆ ಎಲ್ಲಿಲ್ಲದ ಬೇಡಿಕೆ. ಇಂದು ಒಡವೆ-ವಸ್ತುಗಳು ಅಪಾರ ಪ್ರಮಾಣದಲ್ಲಿ ವಿದೇಶಗಳಿಗೆ ರಫ್ತಾಗುತ್ತವೆ. ಸಾಂಪ್ರದಾಯಿಕ ಅಕ್ಕಸಾಲಿಗರು ಇಂದು ಹಳ್ಳಿಗಳಲ್ಲಿ ಕೆಲಸವಿಲ್ಲದೆ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಕೆಲವು ಅಕ್ಕಸಾಲಿಗರು ಸ್ವಂತ ಅಂಗಡಿ ಮುಂಗಟ್ಟುಗಳನ್ನು ಇಟ್ಟುಕೊಂಡು ಚಿನ್ನ-ಬೆಳ್ಳಿಯ ವ್ಯಾಪಾರ ಮಾಡುವುದರ ಮೂಲಕ ಆದಾಯ ಗಳಿಸುತ್ತಿದ್ದಾರೆ. ಅದರೆ ಸಣ್ಣ ಪುಟ್ಟ ಅಕ್ಕಸಾಲಿಗರು ಇಂದು ಸಾರಫ್ ಹಾಗೂ ಸೆಟ್ಟಿ ಅಂಗಡಿಗಳಲ್ಲಿ ಚಿನ್ನ-ಬೆಳ್ಳಿಯ ಸಾಧನ ಸರಕುಗಳನ್ನು ತಯಾರಿಸುವ ಕೂಲಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಂದಿನ ಅಕ್ಕಸಾಲಿಗನ ಸ್ಥಿತಿ ದಾರುಣವಾಗಿದೆ. ಸದಾ ಕಾಲ ರಸಾಯನಿಕ ವಸ್ತುಗಳ ಜೊತೆಗೆ ಕೆಲಸ ಮಾಡುತ್ತಿರುವುದರಿಂದ ಬಹಳಷ್ಟು ಪತ್ತಾರರು ಅನಾರೋಗ್ಯ ಪೀಡಿತರಾಗಿದ್ದಾರೆ. ಅವರಿಗೆ ಯಾವುದೇ ಸಾಮಾಜಿಕ ಭದ್ರತೆ ಸೌಲಭ್ಯಗಳಿಲ್ಲ. ಬಹಳಷ್ಟು ಪತ್ತಾರರು ನಗರ ಪ್ರದೇಶಗಳಿಗೆ ವಲಸೆಹೋಗಿ ಅಲ್ಲಿಯೇ ವಾಸವಾಗಿದ್ದಾರೆ. ಇಂದು ಆಧುನಿಕ ಯಂತ್ರೋಪಕರಣಗಳನ್ನು ಬಳಸಿಕೊಳ್ಳುವುದರ ಮೂಲಕ ವೈವಿಧ್ಯಮಯವಾದ ಹಾಗೂ ಆಕರ್ಷಕ ಒಡವೆ-ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಜನರು ನಿರೀಕ್ಷಿಸುವ ಅಭಿರುಚಿಗೆ ತಕ್ಕಹಾಗೆ ತಮ್ಮ ಕೌಶಲ್ಯತೆಯನ್ನು ಉತ್ಪನ್ನಗಳಲ್ಲಿ ತೋರಿಸುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಈ ಜನಾಂಗಕ್ಕೆ ವಾಸದ ಮನೆಗಳಿಲ್ಲದೆ ಸ್ಲಂ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಸರಕಾರದ ಸೌಲಭ್ಯಗಳು ಇವರಿಗೆ ಲಭ್ಯವಾಗಿಲ್ಲ.

ಒಕ್ಕಲುತನದ ನಂತರದ ಪ್ರಮುಖ ಕಸುಬು ನೇಕಾರಿಕೆ, ನೇಕಾರರ ಪ್ರಮುಖ ವೃತ್ತಿ ನೇಯ್ಗೆ. ಈ ವೃತ್ತಿಯನ್ನು ಮಾಡುವವರು ದೇವಾಂಗ ಅಥವಾ ಜಾಡ ಸಮುದಾಯದವರು. ಇವರು ನೂಲು ನೇಯುವುದು ಹಾಗೂ ಬಣ್ಣ ಹಾಕುವುದು. ಮುಂತಾದ ಕೆಲಸ ಮಾಡುತ್ತಾರೆ. ಇವರ ನೇಯ್ಗೆಯ ಪ್ರಮುಖ ಸಾಧನ ಕೈಮಗ್ಗ. ಸರಿ, ಗಂಜಿ, ಕುಂಚಿಗೆ, ಎಳೆ, ಎಳೆಕಟ್ಟು, ಮಗ್ಗಕುಳಿ, ಚೌಸೆರಗು, ಉಂಕಿ, ಅಣಿಮೆಟ್ಟುವುದು, ಸಮಗಾಲು, ಆಣಿ, ಲಾಳಿ, ಮುಳ್ಳು ಕಂಡಿಕೆ ಮುಂತಾದ ಸಾಧನ ಸಲಕರಣೆಸಗಳ ಸಹಾಯದಿಂದ ಸೀರೆ, ಕುಪ್ಪಸ, ಧೋತರ, ಗುಡಾರ, ಚವಾಳಿ ಇತ್ಯಾದಿಗಳನ್ನು ನೇಯುತ್ತಾರೆ. ಕೆಲವರು ರೇಷ್ಮೆ ಸೀರೆಗಳನ್ನು ನೇಯುತ್ತಾರೆ. ಇವರು ಆಯಗಾರರಲ್ಲ ತಾವು ಮಾಡಿದ ಶ್ರಮಕ್ಕೆ, ಹಾಕಿದ ಬಂಡವಾಳಕ್ಕೆ ಲಾಭವಾಗುವ ರೀತಿಯಲ್ಲಿ ಬಟ್ಟೆಗಳಿಗೆ ಬೆಲೆಯನ್ನು ನಿಗದಿಪಡಿಸಿ, ಮಾರಿ ಬಂದ ಹಣದಿಂದ ಜೀವನ ನಡೆಸುವರು. ಆದರೆ ಯಾಂತ್ರಿಕ ಜೀವನದಲ್ಲಿಂದು ಸಾಂಪ್ರದಾಯಿಕ ನೇಯ್ಗೆ ಮಾಯವಾಗುತ್ತಿದೆ. ಕೈಮಗ್ಗದ ಬದಲು

ಯಾಂತ್ರಿಕ ಮಗ್ಗಗಳು ನೇಯ್ಗೆಯಲ್ಲಿ ಬಳಕೆಯಾಗುತ್ತಿವೆ. ತಾವೆ ನೂಲು ತಯಾರಿಸುವುದನ್ನು ಬಿಟ್ಟು ಮಾರುಕಟ್ಟೆಯಲ್ಲಿ ಸಿಗುವ ನೂಲನ್ನು ಹಾಗೂ ಬಣ್ಣಗಳನ್ನು ಉಪಯೋಗಿಸಿ ಬಟ್ಟೆಗಳನ್ನು ತಯಾರಿಸುತ್ತಾರೆ. ಅದರೆ ಸಾಂಪ್ರದಾಯಿಕ ನೇಯ್ಗೆಯ ಬಟ್ಟೆಗಳ ಬೇಡಿಕೆ ಕಡಿಮೆ ಇರುವುದರಿಂದ, ನೇಕಾರರು ತಮ್ಮ ಉತ್ಪಾದನ ಕ್ರಿಯೆಗಳಲ್ಲಿ ಬದಲಾವಣೆ ತಂದುಕೊಂಡಿದ್ದಾರೆ. ಆಧುನಿಕ ರೀತಿಯ ಯಂತ್ರಗಳ ಸಹಕಾರದಿಂದ ಬಟ್ಟೆ ನೇಯ್ಗೆ ಸಹಕಾರ ಸಂಘಗಳಿಗೆ ಮಾರುತ್ತಿದ್ದಾರೆ. ಸ್ವಂತ ಮಗ್ಗ ಇಲ್ಲದವರೂ ಕೂಲಿಕಾರ ನೇಕಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಟ್ಟೆ ತಯಾರಿಕೆ ಕೈಗಾರಿಕೆಗಳ ಆಗಮನ, ನೇಕಾರರ ಬದುಕನ್ನು ದಾರುಣಸ್ಥಿತಿಗೆ ತಂದು ನಿಲ್ಲಿಸಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇವರ ವೃತ್ತಿಯ ಸ್ಥಿತ್ಯಂತರಕ್ಕೆ ಪ್ರೋತ್ಸಾಹ ನೀಡುತ್ತಿದೆ. ಹಣಕಾಸಿನ ಸಂಸ್ಥೆಗಳ ಮೂಲಕ ಕಡಿಮೆ ಬಡ್ಡಿದರಕ್ಕೆ ಸಾಲಸೌಲಭ್ಯ ಒದಗಿಸುತ್ತಿದೆ. ಹಲವಾರು ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ ತರಬೇತಿ ನೀಡುತ್ತಿವೆ. ಹೊಸ ಡಿಜೈನ್ ಕೇಂದ್ರಗಳನ್ನು ಸ್ಥಾಪಿಸಿ ಯಂತ್ರೋಪಕರಣಗಳನ್ನು ಪೂರೈಸಿದೆ. ಆದರೂ ನೇಕಾರರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯಲ್ಲಿ ಬದಲಾವಣೆ ಆಗಿಲ್ಲ. ವೈವಿಧ್ಯಮಯ ಹಾಗೂ ಆಕರ್ಷಕ ಬಟ್ಟೆ ತಯಾರಿಸಿ ಕಡಿಮೆ ಬೆಲೆಗೆ ಮಾರುವ ಬಟ್ಟೆ ಕೈಗಾರಿಕೆಗಳ ಭರಾಟೆಯಲ್ಲಿ ನೇಕಾರರ ಜೀವನ ಚಿಂತಾಜನಕವಾಗಿರುವುದು ಬಳ್ಳಾರಿ ಜಿಲ್ಲೆಯಲ್ಲಿರುವ ನೇಕಾರರನ್ನು ಮುಕ್ತವಾಗಿ ಭೇಟಿ ಮಾಡಿ ಚರ್ಚಿಸಿದಾಗ ಅವರು ಸಮಸ್ಯೆಗಳ ಸರಮಾಲೆಯನ್ನು ಹೊಂದಿದ್ದಾರೆ. ಜಿಲ್ಲೆಯಲ್ಲಿ ಕೈಮಗ್ಗ ಕೇಂದ್ರಗಳು ರೇಷ್ಮೆ ತಯಾರಿಕಾ ಕೇಂದ್ರಗಳು ಹೊಸಪೇಟೆ, ಬಳ್ಳಾರಿ, ಮರಿಯಮ್ಮನಹಳ್ಳಿ, ಕಂಪ್ಲಿ, ಅನಂತಶಯನಗುಡಿ, ಆಲೂರು, ರಾಮಪುರ ಮುಂತಾದ ಕಡೆಗಳಲ್ಲಿ ಹತ್ತಿಬಟ್ಟೆ ನೇಯುವ ಮತ್ತು ಖಾದಿ ಬಟ್ಟೆ ನೇಯುವ ಕೇಂದ್ರಗಳಿವೆ.

ಬಿದಿರು, ಬೆತ್ತಗಳನ್ನು ಸೀಳಿ ಗೃಹೋಪಯೋಗಿ ಹಾಗೂ ವ್ಯವಸಾಯೋಪಯೋಗಿ ಪದಾರ್ಥಗಳನ್ನು ತಯಾರಿಸುವವರು ಮೇದಾರ ಜನಾಂಗ. ಮೇದಾರರು ಅರಣ್ಯಗಳಲ್ಲಿರುವ ಬಿದಿರು, ಬೆತ್ತಗಳನ್ನು ಕಡಿದು ತಂದು, ಸೀಳಿ, ಸಿಬಿರುಗಳನ್ನು ತಯಾರು ಮಾಡಿಕೊಂಡು, ನೀರಿನಲ್ಲಿ ಸ್ವಲ್ಪ ಕಾಲ ನೆನೆಸಿ, ಮಿದುಗೊಳಿಸಿ ವಿವಿಧ ರೀತಿ, ಆಕಾರ ಹಾಗೂ ಗಾತ್ರದ ಬಿದಿರು ಬೆತ್ತದ ಸಾಮಾನುಗಳನ್ನು ತಯಾರಿಸುತ್ತಾರೆ. ಈ ವಸ್ತುಗಳ ತಯಾರಿಕೆಗೆ ಮೇದಾರರು ಹರಿತವಾದ ಚಿಕ್ಕ ಕುಡುಗೋಲು, ಚಿಕ್ಕ ಕೊಡಲಿ ಮತ್ತು ಬಿದಿರು ಸೀಳುವ ಮಚ್ಚು-ಆಯುಧಗಳನ್ನು ಬಳಸುತ್ತಾರೆ. ಇಲ್ಲಿ ಯಂತ್ರಗಳ ಬಳಕೆ ಕಡಿಮೆ. ಕೇವಲ ತಮ್ಮ ಕರಕುಶಲ ಕಲೆಯಿಂದ ಬಿದಿರು-ಬೆತ್ತದ ಸಾಮಾನುಗಳನ್ನು ತಯಾರಿಸುತ್ತಾರೆ. ತಯಾರಿಸಿದ ಪದಾರ್ಥಗಳನ್ನು ಊರೂರು ಅಲೆದು, ಮನೆ ಮನೆಗೆ ಹೋಗಿ ಮಾರಿ ಕಾಳು-ಕಡಿ ಅಥವಾ ಹಣವನ್ನು ಪಡೆಯುತ್ತಾರೆ. ಮೇದಾರರು ಆಯಗಾರರಲ್ಲ. ಹಳ್ಳಿಗಳಲ್ಲಿ ಇವರಿಗೆ ಪ್ರಾಮುಖ್ಯತೆ ಇಲ್ಲದಿರುವುದರಿಂದ ನಗರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ನಗರಗಳಲ್ಲಿ ಒಂದು ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ ಸಮುದಾಯದವರೆಲ್ಲರೂ ವಾಸಮಾಡುತ್ತ

ಅಲ್ಲಿಯ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅನುಭೋಗಿಗಳು ಅವರು ಇರುವ ಪ್ರದೇಶಗಳಿಗೆ ಬಂದು ವಸ್ತುಗಳನ್ನು ಕೊಂಡುಹೋಗುತ್ತಾರೆ. ಆಧುನಿಕ ಕೈಗಾರಿಕೆಗಳ ಭರಾಟೆ ಮೇದಾರಿಕೆ ವೃತ್ತಿಯ ಮೇಲೂ ಬೀರಿವೆ. ಪ್ಲಾಸ್ಟಿಕ್ ಹಾಗೂ ಪೇಪರಿನಿಂದ ತಯಾರಿಸಿದ ವಸ್ತುಗಳು ಮಾರುಕಟ್ಟೆಯಲ್ಲಿ ಸುಲಭ ಬೆಲೆಗೆ ದೊರೆಯುತ್ತಿವೆ. ಕಾರಣ ಮೇದಾರರ ವಸ್ತುಗಳ ಬೇಡಿಕೆ ಕಡಿಮೆಯಾಗಿದೆ. ಆದರೂ ಮೇದಾರ ಜನಾಂಗ ತಮ್ಮ ವೃತ್ತಿಯನ್ನು ಸ್ವಲ್ಪ ಮಾರ್ಪಡಿಸಿಕೊಂಡಿದ್ದಾರೆ. ಬಿದಿರು ಬೆತ್ತದ ವಸ್ತುಗಳನ್ನು ತಯರಿಸುವುದರ ಜೊತೆಗೆ ಬೊಂಬುಗಳ, ಏಣಿ, ಬಿದಿರು ಚಾಪೆ, ಬುಟ್ಟಿ, ಹೆಂಚು, ಕಡಪ ಕಲ್ಲಿನ ಬಂಡೆಗಳನ್ನು ವಿವಿಧ ಮರದ ಪೋಲುಗಳನ್ನು ಮಾರುವ ವೃತ್ತಿಯನ್ನು ಮಾಡುತ್ತಿದ್ದಾರೆ. ಅರಣ್ಯ ಕಾನೂನುಗಳನ್ನು ಕಠಿಣವಾಗಿರುವುಧರಿಂದ ಇವರಿಗೆ ಬಿದಿರು ಬೆತ್ತಗಳು ಸರಳವಾಗಿ ದೊರೆಯುವುದಿಲ್ಲ. ಮಧ್ಯವರ್ತಿಗಳ ಸಹಾಯದಿಂದ ಇವುಗಳನ್ನು ಪಡೆದು ವ್ಯವಹಾರ ಮಾಡುತ್ತಿದ್ದಾರೆ. ಇತ್ತೀಚೆಗೆ ಮೇದಾರರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುತ್ತಿದ್ದಾರೆ. ಅವರು ತಮ್ಮ ಮಕ್ಕಳನ್ನು ತಮ್ಮ ವೃತ್ತಿಯಲ್ಲಿ ಮುಂದುವರಿಸಲು ಇಷ್ಟಪಡುತ್ತಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಮೇದಾರ ಜನಾಂಗ ಕೊಟ್ಟೂರು, ಹ.ಬೊ. ಹಳ್ಳಿ, ಕೂಡ್ಲಿಗಿ, ಹಡಗಲಿ, ಹೊಸಪೇಟೆ, ಬಳ್ಳಾರಿ, ಕಂಪ್ಲಿ ಹಾಗೂ ಸಿರುಗುಪ್ಪದಲ್ಲಿ ಇವರ ನೆಲೆಗಳನ್ನು ಕಾಣಬಹುದು.

ಎಣ್ಣೆ ಬೀಜಗಳಾದ ಶೆಂಗಾ, ಎಳ್ಳು, ಕುಸುಬೆ, ಸೂರ್ಯಕಾಂತಿ ಬೀಜಗಳಿಂದ ಎಣ್ಣೆ ತೆಗೆಯುವ ಕಸುಬು ಗಾಣಗಾರಿಕೆ. ಈ ಕಸುಬು ಮಾಡುವವರನ್ನು ಗಾಣಿಗರು ಎಂದು ಕರೆಯುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಕರಿಗಾಣಿಗರು, ಬಿಳಿಗಾಣಿಗರು ಎಂಬ ಎರಡು ಪಂಗಡಗಳಿವೆ. ಇವರು ರೈತರು ಕೊಟ್ಟ ಎಣ್ಣೆ ಬೀಜಗಳಿಂದ ಎಣ್ಣೆ ತೆಗೆದು ಕೊಟ್ಟು ಹಣ ಪಡೆಯುತ್ತಿದ್ದಾರೆ. ಗಾಣಿಗರು ಎಣ್ಣೆ ತೆಗೆಯುವುದರಲ್ಲಿ ನಿಪುಣರು. ಆದುದರಿಂದಲೇ 'ಎಳ್ಳುಗಾಣಿಗ ಬಲ್ಲ' ಎಂದು ಸರ್ವಜ್ಞ ಅವರ ವೃತ್ತಿ ನಿಪುಣತೆಯನ್ನು ಕುರಿತು ಹೇಳಿದ್ದಾನೆ. ಎತ್ತಿನ ಗಾಣದಿಂದ ಎಣ್ಣೆಯನ್ನು ತೆಗೆಯುವ ವಿಧಾನ ಸಾಂಪ್ರದಾಯಿಕವಾದುದು. ಆದರೆ ಇಂದು ಆ ಸ್ಥಳದಲ್ಲಿ ಯಂತ್ರಗಳು ಬಂದಿವೆ. ಯಂತ್ರಗಳ ಸಹಾಯದಿಂದ ಇಂದು ಎಣ್ಣೆ ತೆಗೆಯುತ್ತಿದ್ದಾರೆ. ಇಂದು ಗಾಣಗಾರಿಕೆ ಬಳ್ಳಾರಿ ಜಿಲ್ಲೆಯಲ್ಲಿ ಮಾಯವಾಗುತ್ತದೆ. ಆಧುನಿಕ ಎಣ್ಣೆ ಉದ್ಯಮಗಳು ವಿವಿಧ ರೀತಿಯ ಎಣ್ಣೆ ತಯಾರಿಸಿ ಪ್ರತಿಯೊಂದು ಹಳ್ಳಿಗಳಲ್ಲಿಯೂ ಎಣ್ಣೆ ದೊರೆಯುವ ಹಾಗೆ ಮಾಡಿದ್ದಾರೆ. ಅದ್ದರಿಂದ ಗಾಣಿಗರು ಎಣ್ಣೆ ತೆಗೆಯುವ ವೃತ್ತಿಯನ್ನು ಬಿಟ್ಟುಕೊಟ್ಟು ಕೃಷಿಕರಾಗಿ, ಕೂಲಿಗಳಾಗಿ, ಸರಕಾರಿ ಉದ್ಯೋಗಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಗಾಣಿಗ ಸಮುದಾಯದ ಜನಸಂಖ್ಯೆ ಹೆಚ್ಚಾಗಿದ್ದರೂ ಗಾಣವೃತ್ತಿ ಮಾಡುವವರು ತುಂಬಾ ವಿರಳ.

ಕಗ್ಗಲ್ಲನ್ನು ಒಡೆದು, ಕಡೆದು ಮಾನವೋಪಯೋಗಿ ಸಾಮಾನುಗಳನ್ನು ತಯಾರಿಸುವುದೇ ಕಲ್ಲುಕುಟಿಕೆ ವೃತ್ತಿ. ಈ ಕಸುಬು ಮಾಡುವವನನ್ನು ಕಲ್ಲುಕುಟಿಗ, ಕಲ್ಲೊಡ್ಡ ಇತ್ಯಾದಿ ಹೆಸರುಗಳಿಂದ

ಕರೆಯುವರು. ಇವರನ್ನು ಭೋವಿಗಳೆಂತಲೂ ಕರೆಯುವುದು ವಾಡಿಕೆ. 'ಕಲ್ಮಡಿಗನ ಕೈಯಲ್ಲಿ ಕಲ್ಲುಳಿ ಕೊಟ್ಟಡೆ, ಕೊಟ್ಟಂತಲ್ಲದೆ ಕಲ್ಲು ರೂಪಾಗಿ' ಎಂಬ ಸಿದ್ಧರಾಮನ ವಚನ 'ಕಲ್ಲುಕುಟಿಕೆಯ ಕಸುಬನ್ನು ಸೂಚಿಸುತ್ತದೆ. ಇವರು ಗೃಹೋಪಯೋಗಿ ಕಲ್ಲುಗಳಾದ ಹಾಸುಕಲ್ಲು, ಬಚ್ಚಲುಕಲ್ಲು, ಕಡಪಕಲ್ಲು ಕಲ್ಲುಕಂಬ, ಮುಂತಾವುಗಳನ್ನು ಹಾರೆಯಿಂದ ಅಗೆದು, ಕಡೆದು ಕಲ್ಲು ಕುಣಿಯಿಂದ ಹೊರ ತೆಗೆದು ಬಂಡಿಗಳ ಮೂಲಕ ಹಳ್ಳಿ, ನಗರಗಳಿಗೆ ಸಾಗಿಸಿ ಮಾರಾಟ ಮಾಡುತ್ತಾರೆ. ಕರಿಕಲ್ಲು, ಬಿಳಿಕಲ್ಲುಗಳಿಂದ ಬೀಸುವ ಕಲ್ಲು, ಹೂರಣಕಲ್ಲು, ಒರಳುಕಲ್ಲು, ಗುಂಡುಕಲ್ಲು ರುಬ್ಬುಗಲ್ಲು ಮೊದಲಾದ ಉಪಕರಣಗಳನ್ನು ತಯಾರಿಸಿ ಮನೆಮನೆಗೆ ಅಲೆದು ಮಾರಿ ಕಾಳುಕಡಿ, ಹಣ ಸಂಗ್ರಹಿಸುತ್ತಾರೆ. ತಮ್ಮ ವೃತ್ತಿಯಲ್ಲಿ ಪ್ರಮುಖವಾಗಿ ಹಾರೆ, ಸುತ್ತಿಗೆ, ಉಳಿ, ಮತ್ತು ಚಾಣಗಳನ್ನು ಆಯುಧಗಳನ್ನಾಗಿ ಬಳಸುವರು. ಬಂಡೆಗಳನ್ನು ಒಡೆಯಲು ಮದ್ದುಗುಂಡುಗಳನ್ನು ಹಾರಿಸುವರು. ಇಂದು ಸಾಂಪ್ರದಾಯಿಕ ಕಲ್ಲು ಕುಟಿಗ ವೃತ್ತಿ ವಾಣಿಜ್ಯೀಕರಣ ಹೊಂದಿದೆ. ಕೆಲವು ದೊಡ್ಡ ಉದ್ದಿಮಿಗಳು ಕಲ್ಲು ಕುಣಿಗಳನ್ನು ಕಾಂಟ್ರಾಕ್ಟ್ ತೆಗೆದುಕೊಂಡು ಯಂತ್ರೋಪಕರಣಗಳಿಂದ ಆಧುನಿಕ ರೀತಿ ಬಳಸಿ ವಿವಿಧ ರೀತಿಯ ಕಲ್ಲು ಸಾಮಗ್ರಿಗಳನ್ನು ತಯಾರಿಸಿ ಮಾರುಕಟ್ಟೆಗೆ ತರುತ್ತಾರೆ. ಇಂದು ಕಲ್ಲೋದ್ಯಮ ಹೆಚ್ಚು ಆದಾಯಗಳಿಸುವ ಉದ್ಯಮವಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಕಲ್ಲೋದ್ಯಮ ಪ್ರಮುಖ್ಯತೆಯನ್ನು ಪಡೆದುಕೊಂಡಿದೆ. ಬಳ್ಳಾರಿ ಜಿಲ್ಲೆಯಾದ್ಯಂತ ಕಲ್ಲು ಗುಡ್ಡ-ಬೆಟ್ಟಗಳಿರುವುದರಿಂದ ಬೇರೆ ಬೇರೆ ರಾಜ್ಯಗಳಿಂದ ಬಂದ ಕಲ್ಲುಕುಟಿಗರು ಜಿಲ್ಲೆಯ ವಿವಿಧ ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ. ಇದರಲ್ಲಿ ಪ್ರಮುಖವಾಗಿ ತೆಲುಗು ಮತ್ತು ತಮಿಳು ಕಲ್ಲು ಕುಟಿಗರೆ ಹೆಚ್ಚಾಗಿದ್ದಾರೆ. ಆದರೆ ಆಧುನಿಕ ಉದ್ಯಮಿಗಳ ಭರಾಟೆ, ಬಂಡವಾಳದಾರರ ಕಂಟ್ರಾಕ್ಟ ಪದ್ಧತಿ ಸಾಂಪ್ರದಾಯಿಕ ಕಲ್ಲುಕುಟಿಗರ ಜೀವನವನ್ನು ದಾರುಣ ಸ್ಥಿತಿಗೆ ತಳ್ಳಿದೆ. ಇಂದು ಕಲ್ಲುಕುಟಿಗ ಜನಾಂಗ ಬಂಡವಾಳದಾರರ ಉದ್ಯಮದಲ್ಲಿ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ವಸತಿ ಸೌಲಭ್ಯವಿಲ್ಲ. ಗುಡಿಸಲುಗಳಲ್ಲಿ ಜೀವನ, ಅನಕ್ಷರಸ್ಥರೆ ಹೆಚ್ಚು, ಯಾವುದೇ ಸಾಮಾಜಿಕ ಸೌಲಭ್ಯಗಳಿಲ್ಲ. ಇವರ ಬದುಕು ಧಾರುಣ ಸ್ಥಿತಿಯಲ್ಲಿದೆ. ಕ್ಷೇತ್ರಕಾರ್ಯದಲ್ಲಿ ಇವರನ್ನು ಭೇಟಿ ಮಾಡಿದಾಗ ಹಲವಾರು ಸಮಸ್ಯೆಗಳನ್ನು ನನ್ನ ಮುಂದಿಟ್ಟಿದ್ದಾರೆ. ಸರ್ಕಾರದ ಕಾನೂನು, ಅಧಿಕಾರಿಗಳ ಕಿರುಕುಳ, ಮಧ್ಯವರ್ತಿಗಳ ಉಪಟಳ ಇವರ ಸಾಂಪ್ರದಾಯಿಕ ವೃತ್ತಿ ಮೂಲೆಗುಂಪಾಗುವಂತೆ ಮಾಡಿವೆ.

ಗ್ರಾಮೀಣ ಜನರಿಗೆ ಮತ್ತು ದನಕರುಗಳಿಗೆ ರೋಗ-ರುಜಿನಗಳು ಬಂದಾಗ, ಹಳ್ಳಿಯ ಅನುಭವಸ್ಥ, ಗಿಡಮೂಲಿಕೆಗಳಿಂದ ಚಿಕಿತ್ಸೆ ನೀಡುವ ವಿಧಾನವೇ ವೈದ್ಯಗಾರಿಕೆ. ಇದನ್ನು ಹಳ್ಳಿ ಔಷಧಿ, ಹಸಿ ಔಷಧಿ, ಮನೆಮದ್ದು, ನಾಟಿ ಔಷಧಿ ಎಂತಲೂ ಕರೆಯುತಾರೆ. ಈ ಔಷಧಿ ಕೊಡುವವನನ್ನು ಗ್ರಾಮೀಣ ಪಂಡಿತ, ನಾಟಿವೈದ್ಯ ಎಂದು ಕರೆಯುತ್ತಾರೆ. ಈತ ರೋಗಿಯ

ರೋಗವನ್ನು ಕಂಡುಹಿಡಿದು ಅನೇಕ ವಿಧದಲ್ಲಿ ಔಷಧಿ ಕೊಡುವನು. ನಾಟಿ ವೈದ್ಯ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಸಾಮಾನ್ಯ ರೋಗರುಜಿನಗಳಾದ ಜ್ವರ, ಕೆಮ್ಮು, ಆಮಶಂಕೆ, ಗಾಯ, ಚರ್ಮದ ರೋಗ, ಕಜ್ಜಿ, ಹಾವು ಚೇಳು ಕಡಿತಕ್ಕೆ, ಹಾಗೂ ಮುಂತಾದವುಗಳಿಗೆ ಗಿಡ ಮೂಲಿಕೆಗಳಿಂದ ತಯಾರಿಸಿದ ಔಷಧಿಯನ್ನು ನೀಡಿ ರೋಗರುಜಿನವನ್ನು ಗುಣಪಡಿಸುವರು. ಹಾಗೆಯೆ ದನಗಳಿಗೆ ಬರುವ ಸಾಮಾನ್ಯ ರೋಗಗಳಿಗೆ ಔಷಧಿ ನೀಡುವರು. ಇವುಗಳಿಂದ ಇವರಿಗೆ ಬರುವ ಆದಾಯ ಕಡಿಮೆ. ನಾಟಿ ವೈದ್ಯರು ಸಾಮಾನ್ಯವಾಗಿ ತಮ್ಮ ಮುಖ್ಯ ವೃತ್ತಿಯ ಜೊತೆಗೆ ವೈದ್ಯ ವೃತ್ತಿಯನ್ನು ಉಪವೃತ್ತಿಯನ್ನಾಗಿ ಇಟ್ಟುಕೊಂಡಿರುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಗುಡ್ಡ ಬೆಟ್ಟಗಳು ಹೆಚ್ಚಾಗಿವೆ. ಸಂಡೂರು ಬಳ್ಳಾರಿ ಜಿಲ್ಲೆಯ ಮಲೆನಾಡು. ಸಂಡೂರು ಬೆಟ್ಟಗಳಲ್ಲಿ ವೈವಿಧ್ಯಮಯವಾದ ಔಷಧಿ ಗಿಡಮೂಲಿಕೆಗಳು ಕಂಡುಬರುತ್ತವೆ. ಸಂಡೂರಿನ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ನಾಟಿ ವೈದ್ಯರು ಹೆಚ್ಚಾಗಿದ್ದಾರೆ. ಅವರು ವಿವಿಧ ಕಸುಬುಗಳ ಜೊತೆಗೆ ವೈದ್ಯ ವೃತ್ತಿಯನ್ನು ಉಪವೃತ್ತಿಯನ್ನಾಗಿ ರೂಢಿಸಿಕೊಂಡಿದ್ದಾರೆ. ಆದರೆ ಇಂದು ಆಧುನಿಕ ರೀತಿಯ ವೈದ್ಯ ಸೌಲಭ್ಯಗಳು ಲಭ್ಯವಾಗುತ್ತಿವೆ. ಇದರಿಂದ ನಾಟಿ ಔಷಧಿಗಳನ್ನು ಪಡೆದುಕೊಳ್ಳುವವರು ಕಡಿಮೆ. ಈ ವೃತ್ತಿಯನ್ನು ಅವಲಂಬಿಸಿ ಜೀವನ ಮಾಡುವುದು ಕಷ್ಟವಾಗಿದೆ ಎಂದು ನಾಟಿ ವೈದ್ಯರು ತಿಳಿಸಿದ್ದಾರೆ. ಆದರೂ ಬಳ್ಳಾರಿ ಜಿಲ್ಲೆಯ ಹಲವಾರು ಹಳ್ಳಿಗಳಲ್ಲಿ ನಾಟಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ.

ಬಳ್ಳಾರಿ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಕಾಣಬಹುದಾದ ಸಾಮಾನ್ಯ ವೃತ್ತಿ ಚಮ್ಮಾರಿಕೆ. ಚಮ್ಮಾರರು ಕೃಷಿಗೆ ಬೇಕಾದ ವಿವಿಧ ಪದಾರ್ಥಗಳನ್ನು ತಯಾರಿಸಿಕೊಳ್ಳುತ್ತಾರೆ. ಚಮ್ಮಾರರು ಕೃಷಿಗೆ ಆಯಗಾರರಾಗಿದ್ದಾರೆ. ಚಮ್ಮಾರರು ಸಮಾಜದ ಕೆಳಸ್ತರದಲ್ಲಿರುವವರು. ಚಮ್ಮಾರರು ಜಿಲ್ಲೆಯಾದ್ಯಂತ ಪ್ರತಿ ಹಳ್ಳಿಗಳಲ್ಲಿದ್ದರೂ ಅವರು ಭೂ ಒಡೆತನ ಹೊಂದಿರುವವರು ಬಹಳ ಕಡಿಮೆ. ಈ ಜನಾಂಗ ಚಮ್ಮಾರಿಕೆ ಜೊತೆಗೆ ಕೂಲಿ ಕೆಲಸಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಜಿಲ್ಲೆಯಲ್ಲಿ ಗಣಿಗಾರಿಕೆ ವ್ಯಾಪಿಸಿರುವುದರಿಂದ ಗಣಿಗಳಲ್ಲಿ ದಿನಗೂಲಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಆರ್ಥಿಕ ಸ್ಥಿತಿ ದಾರುಣವಾಗಿದೆ. ಸಾಂಪ್ರದಾಯಿಕ ಕುಲಕಸುಬನ್ನು ಮುಂದುವರಿಸಿರುವವರು ನಗರ ಪ್ರದೇಶಗಳಲ್ಲಿ ಚಪ್ಪಲಿ ತಯಾರಿಸುವ ಅಥವಾ ರಿಪೇರಿ ಮಾಡುವ ವೃತ್ತಿ ಮುಂದುವರಿಸಿದ್ದಾರೆ. ಹಳ್ಳಿಗಳಲ್ಲಿ ಪ್ರಾಣಿಗಳ ಚರ್ಮವನ್ನು ಸುಲಿದು ಚರ್ಮದ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಆದರೆ ಈ ಸರಕುಗಳ ಬೇಡಿಕೆ ಕಡಿಮೆಯಾಗುವುದರಿಂದ ಇದೇ ವೃತ್ತಿಯ ಮೇಲೆ ಅವಲಂಬನೆಯಾಗಿ ಜೀವಿಸುವುದು ಕಷ್ಟಕರ ಎಂದು ಚಮ್ಮಾರರು ತಿಳಿಸಿದ್ದಾರೆ. ಕೃಷಿಕರು ಕೃಷಿಗೆ ಬೇಕಾದ ಚರ್ಮದ ಸಿದ್ಧ ಸಾಮಾನುಗಳನ್ನು ಪೇಟೆಯಿಂದ ಕೊಂಡು ತರತೊಡಗಿದ್ದಾನೆ. ಹೀಗಾಗಿ ಚರ್ಮಕಾರರಿಗೆ ಕೆಲಸವಿಲ್ಲದಂತಾಗಿ, ಅವರು ಅನಿವಾರ್ಯವಾಗಿ ಬೇರೆ ಮಾರ್ಗ ಹಿಡಿದಿದ್ದಾರೆ. ಹಮಾಲರೂ, ಕೂಲಿಗಳೂ, ಜಾಡಮಾಲಿಗಳೂ, ಕಾರ್ಮಿಕರೂ, ಆಫೀಸಿನ ನೌಕರರೂ ಅಗಿ ಹೊಟ್ಟೆ

ಹೊರೆಯುತ್ತಿದ್ದಾರೆ. ಚಮ್ಮಾರಿಕೆ ಸಾಂಪ್ರದಾಯ ವಿಧಾನ ಬಿಟ್ಟುಕೊಟ್ಟು ಆಧುನಿಕತೆಗೆ ಸ್ಥಿತ್ಯಂತರಗೊಂಡಿದೆ.

ಬಟ್ಟೆಗಳನ್ನು ಶುಭ್ರಗೊಳಿಸುವ ವೃತ್ತಿ ಅಗಸನ ಕುಲಕಸುಬು. ಮಡಿವಾಳ ಜನಾಂಗ ಪುರಾತನ ಕಾಲದಿಂದಲೂ ಈ ವೃತ್ತಿ ಮಾಡಿಕೊಂಡು ಬರುತ್ತಿದ್ದಾರೆ. ಮಡಿವಾಳ ಜನಾಂಗ ಮೇಲ್ವರ್ಗದವರ ಬಟ್ಟೆಗಳನ್ನು ಮಡಿ ಮಾಡಿಕೊಡುತ್ತಾರೆ. ಬಟ್ಟೆ ಮಡಿ ಮಾಡಲು ಚವಳು ಮಣ್ಣು, ಜಾಹಿ ಕಾಯಿಗಳನ್ನು ಮೊದಲು ಉಪಯೋಗಿಸುತ್ತಿದ್ದರು. ಇಂದು ಬಟ್ಟೆ ಹೊಗೆಯುವ ಸೋಪು, ನೀಲಿ ಮತ್ತು ವಿವಿಧ ರೀತಿಯ ರಸಾಯನಿಕ ವಸ್ತುಗಳನ್ನು ಉಪಯೋಗಿಸಿ ಬಟ್ಟೆ ಶುಭ್ರಗೊಳಿಸುತ್ತಾರೆ. ಇದರ ಜೊತೆಗೆ ನೀಟಾಗಿ ಇಸ್ತ್ರೀ ಮಾಡಿಕೊಡುತ್ತಾರೆ. ಅಂದು ಹಳ್ಳಿಗಳಲ್ಲಿ ಮಡಿವಾಳರು ಪ್ರಮುಖ ಆಯಾಗಾರರಾಗಿದ್ದರು. ಆಯದ ಮೂಲಕ ಜೀವನ ನಡೆಸುತ್ತಿದ್ದರು. ಅಂದು ಹಳ್ಳಿಗಳಲ್ಲಿ ಹಳ್ಳ, ಕೊಳ್ಳ, ಕೆರೆಗಳು ಇದ್ದವು. ಅಲ್ಲಿ ಬಟ್ಟೆಗಳನ್ನು ಒಗೆದು ಮಡಿ ಮಾಡಿ ಆಯಾ ಪಡೆದುಕೊಳ್ಳುತ್ತಿದ್ದರು. ಆದರೆ ಇಂದು ಬಳ್ಳಾರಿ ಜಿಲ್ಲೆಯ ಹಳ್ಳಿಗಳಲ್ಲಿ ಆಯಾಕ್ಕಾಗಿ ದುಡಿಯುವ ಮಡಿವಾಳರಿಲ್ಲ. ಬಹಳಷ್ಟು ಜನ ನಗರ ಪ್ರದೇಶಗಳಲ್ಲಿ ಆಯಾಕ್ಕಾಗಿ ದುಡಿಯುವ ಮಡಿವಾಳರಿಲ್ಲ. ಬಹಳಷ್ಟು ಜನ ನಗರ ಪ್ರದೇಶಗಳಲ್ಲಿ ವಾಸವಾಗಿ ಲಾಂಡ್ರಿ ಅಂಗಡಿ ಇಟ್ಟುಕೊಂಡು ಜೀವಿಸುತ್ತಿದ್ದಾರೆ. ಇಂದು ಹಳ್ಳಿಗಳಲ್ಲಿ ಕೆರೆ ಕಟ್ಟೆಗಳು ಬತ್ತಿವೆ, ತೆರೆದ ಬಾವಿಗಳಿಲ್ಲ. ಎಲ್ಲಿ ನೋಡಿದರೂ ಕೊಳವೆ ಬಾವಿಗಳು. ರೈತ ಸಹ ಅಲ್ಲಿ ಬಟ್ಟೆ ಸ್ವಚ್ಛಮಾಡಲು ಅವಕಾಶ ಮಾಡಿಕೊಡುತ್ತಿಲ್ಲ. ಹೀಗಾಗಿ ಹಳ್ಳಿಗಳಲ್ಲಿ ಮಡಿವಾಳ ಜನಾಂಗ ಕುಲಕಸುಬನ್ನು ಬಿಟ್ಟುಕೊಟ್ಟು ಕೃಷಿ ಕೆಲಸದ ಕೂಲಿಗಳಾಗಿ, ಗಣಿಗಾರಿಕೆಯಲ್ಲಿ ಕೆಲಸಗಾರರಾಗಿ, ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಜೀವನ ತುಂಬಾ ಧಾರುಣ ಸ್ಥಿತಿಯಲ್ಲಿದ್ದಾರೆ. ಈ ಕಸುಬಿನ ಬಗೆಗೆ ಗೌರವ ಭಾವನೆ ಸಮಾಜದಲ್ಲಿ ಉಳಿದಿಲ್ಲ. ಮಡಿವಾಳರಲ್ಲಿಯೂ ಉಳಿದಿಲ್ಲ. ಏನೋ ಪೂರ್ವಜರಿಂದ ಬಂದ ಉದ್ಯೋಗ ಬಿಡಬಾರದೆಂದು ಕೆಲವರು ಅಲ್ಲಿ-ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಬಟ್ಟೆ ಸ್ವಚ್ಛ ಮಾಡುವ ಆಧುನಿಕ ಸೌಕರ್ಯ ಈಗ ಲಭ್ಯವಿರುವುದರಿಂದ ಈ ವೃತ್ತಿಯ ಕಾರ್ಯ ಹಿಂದಾಗುತ್ತಿದೆ. ನಗರ ಪ್ರದೇಶಗಳಲ್ಲಿ ಕೆಲವು ಮಡಿವಾಳರು ಡ್ರೈಕ್ಲೀನಿನಂತಹ ಅಂಗಡಿಗಳನ್ನು ತೆರೆದು ಜೀವನ ಸಾಗಿಸುತ್ತಿದ್ದಾರೆ. ಮಡಿವಾಳರು ಸಾಂಪ್ರದಾಯಿಕ ಬಟ್ಟೆ ಹೊಗೆಯುವ ವಿಧಾನ ಬಿಟ್ಟುಕೊಟ್ಟು ಹೊಸ ವಿಧಾನಗಳನ್ನು ಬಳಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಸೋಪು ಇತ್ಯಾದಿ ರಸಾಯನಿಕ ವಸ್ತುಗಳನ್ನು ಬಳಸುತ್ತಿದ್ದಾರೆ.

ಗ್ರಾಮೀಣ ವೃತ್ತಿಗಳಲ್ಲಿ ಕ್ಷೌರಿಕ ವೃತ್ತಿಯು ಪ್ರಮುಖವಾದುದು. ತಲೆ ಕೂದಲನ್ನು ತೆಗೆಯುವ, ಮುಖ ಕ್ಷೌರ ಮಾಡುವ ಕ್ಷೌರಿಕರು ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲೂ ಇದ್ದಾರೆ. ಜಿಲ್ಲೆಯ ಪ್ರತಿ ಗ್ರಾಮದಲ್ಲಿ ಸುಮಾರು ಒಂದು ಅಥವಾ ಎರಡು ಕ್ಷೌರಿಕ ಮನೆಗಳಿರುತ್ತಿವೆ. ಕ್ಷೌರಿಕ ವೃತ್ತಿಯಿಂದಲೇ ಇವರು ಉಪಜೀವನ ನಡೆಸುತ್ತಾರೆ. ಹಿಂದಿನ ಕಾಲದಲ್ಲಿ ಇವರು ಹಳ್ಳಿಯ ಆಯಾಗಾರರು.

ಆದರೆ ಕ್ಷೌರಿಕರು ಇಂದು ಆಯದ ಕೆಲಸ ಮಾಡುತ್ತಿಲ್ಲ. ತಾವು ಹಳ್ಳಿ ಹೊರಭಾಗದಲ್ಲಿ ಒಂದು ಶೆಡ್ ಹಾಕಿಕೊಂಡು ವೃತ್ತಿಯನ್ನು ಮುಂದುವರಿಸುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಮನೆ ಮನೆಗಳಿಗೆ ಹೋಗಿ ವೃತ್ತಿ ಮಾಡುತ್ತಿದ್ದರು. ಬೆಳಗಿನಿಂದ ಸಂಜೆಯವರೆಗೂ ಕಾರ್ಯ ನಿರ್ವಹಿಸುವ ಕ್ಷೌರಿಕರು ಆಧುನಿಕ ಕ್ಷೌರಿಕ ಸಾಧನಗಳನ್ನು ಇಂದು ಬಳಸುತ್ತಿದ್ದಾರೆ. ಜೊತೆಗೆ ಎಣ್ಣೆ ಹಚ್ಚಿ ಮಸಾಜು ಮಾಡುತ್ತಾರೆ. ಕ್ಷೌರಿಕರು ಅಧುನಿಕ ರೀತಿಯ ಸುಸಜ್ಜಿತವಾದ ಸಲೂನ್ ತೆರೆದು ಆಧುನಿಕ ಯಂತ್ರೋಪಕರಣಗಳನ್ನು ಬಳಸುತ್ತಿದ್ದಾರೆ. ಇಂದು ಅವುಗಳು ಬ್ಯೂಟಿ ಪಾರ್ಲರ್‌ಗಳಾಗಿ ಕಾರ್ಯನಿರ್ವಹಿಸುತ್ತಿವೆ. ಕ್ಷೌರಿಕರು ತಮ್ಮ ವೃತ್ತಿಯ ಜೊತೆ ಬ್ಯಾಂಡ್‌ವಾದ್ಯ ಬಾರಿಸುವ ವೃತ್ತಿಯನ್ನು ಕೈಗೊಂಡಿದ್ದಾರೆ. ಹಬ್ಬ-ಹರಿದಿನ, ಜಾತ್ರೆ, ಉಚ್ಚಾಯ, ಮದುವೆ, ಮುಂಜಿ ಇತ್ಯಾದಿ ಸಂದರ್ಭಗಳಲ್ಲಿ ಬ್ಯಾಂಡ್‌ವಾದ್ಯ ಬಾರಿಸುವ ಕಾಯಕ ಮಾಡುತ್ತಿದ್ದಾರೆ. ಈ ವೃತ್ತಿದಾರರಲ್ಲಿ ಅನಕ್ಷರಸ್ಥರು ಹೆಚ್ಚಾಗಿರುವುದು ಕ್ಷೇತ್ರ ಕಾರ್ಯದಲ್ಲಿ ಕಂಡುಬಂದಿದೆ. ಕ್ಷೌರಿಕರು ಹಳ್ಳಿಗಳನ್ನು ಬಿಟ್ಟು ನಗರಗಳಿಗೆ ವಲಸೆ ಹೋಗಿದ್ದಾರೆ. ಸರಕಾರ ನೀಡಿರುವ ನೀವೇಶನಗಳಲ್ಲಿ ಸಣ್ಣ ಪುಟ್ಟ ಮನೆಗಳನ್ನು ಕಟ್ಟಿಕೊಂಡು ಜೀವಿಸುತ್ತಿದ್ದಾರೆ. ಕೆಲವರು ಆಧುನಿಕ ಕ್ಷೌರದ ಸಲೂನುಗಳಲ್ಲಿ ದಿನಗೂಲಿಗಳಾಗಿ ಅಥವಾ ನಿರ್ದಿಷ್ಟಪಡಿಸಿದ ವೇತನಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿರುವ ಕ್ಷೌರಿಕರು ತಮ್ಮ ವೃತ್ತಿಯ ಜೊತೆಗೆ ಕೃಷಿ ಕೆಲಸಗಾರರಾಗಿ, ಬ್ಯಾಂಡ ವಾದ್ಯ ನುಡಿಸುವವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾವಂತ ಕ್ಷೌರಿಕರು ಸರಕಾರಿ ಹಾಗೂ ಖಾಸಗಿ ವೃತ್ತಿಗಳಲ್ಲಿ ನೌಕರರಾಗಿದ್ದಾರೆ. ಅವರಿಗೆ ತಮ್ಮ ಕುಲಕಸುಬಿನ ಬಗ್ಗೆ ಗೌರವ ಉಳಿದಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ ಕಂಚುಗಾರಿಕೆ ಕಸುಬಿನಲ್ಲಿ ನಿರತರಾದವರ ಸಂಖ್ಯೆ ಬಹಳ ಕಡಿಮೆ. ಪಾಂಚಾಳರಲ್ಲಿ ಒಂದು ಬಣಕ್ಕೆ ಸೇರಿದ ಉಪಜಾತಿಯವರು ಈ ವೃತ್ತಿಯನ್ನು ಕೈಗೊಂಡಿದ್ದಾರೆ, ಇವರು ತಾಮ್ರ, ಹಿತ್ತಾಳೆ, ಸೀಸ ಈ ಮೂರರ ವಿಶ್ರಣದಿಂದ ಕಂಚನ್ನು ತಯಾರಿಸುತ್ತಾರೆ. ಇವರು ಹಿಂದೆ ದೀಪ, ಜಗ್ಗು, ಹೂಜಿ, ತಟ್ಟೆ, ಹಂಡೆ ಮೊದಲಾದ ವಸ್ತುಗಳನ್ನು ತಯಾರಿಸುತ್ತಿದ್ದರು ಆದರೆ ಇವರ ಸಂಖ್ಯೆ ಅಪರೂಪವಾಗುತ್ತದೆ. ಅ ಜನಾಂಗ ಬಳ್ಳಾರಿ ಹಾಗೂ ಹೊಸಪೇಟೆ ನಗರದಲ್ಲಿದ್ದಾರೆ. ಆದರೆ ಅವರು ಈ ವೃತ್ತಿಯನ್ನು ಮಾಡುತ್ತಿಲ್ಲ. ಅದರ ಬದಲಿಗೆ ಕಂಚಿನ ಹಾಗೂ ಹಿತ್ತಾಳೆ ಸಾಮಾಗ್ರಗಳನ್ನು ತಮಿಳುನಾಡಿನಿಂದ ಕೊಂಡು ತಂದು ಇಲ್ಲಿ ಮಾರಾಟ ಮಾಡುತ್ತಿದ್ದಾರೆ. ಆ ವಸ್ತುಗಳ ಮಾರಾಟದ ಪ್ರಮಾಣ ತುಂಬಾ ಕಡಿಮೆ ಇರುವುದರಿಂದ ಕಂಚುಗಾರರು ಬೇರೆ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಕೆಲವರು ತಾಮ್ರ ಹಿತ್ತಾಳೆಯ ಪಾತ್ರೆಗಳನ್ನು ರಿಪೇರಿ ಮಾಡಿಕೊಡುತ್ತಾರೆ.

ರೈತರ ಮನೆಗಳಿಗೆ ಹೂ-ಪತ್ರಿಗಳನ್ನು ಕೊಡುವ, ದೇವಸ್ಥಾನಗಳಲ್ಲಿ ಪೂಜಾದಿಗಳಿಗಾಗಿ ಹೂ-ಪತ್ರಿಗಳನ್ನು ತಂದುಕೊಡುವ ಒಂದು ಸಮುದಾಯ ಕರ್ನಾಟಕದಲ್ಲಿದೆ. ಈ ಜನಾಂಗ

ಹೆಚ್ಚಾಗಿ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿದ್ದಾರೆ. ಇವರು ವೀರಶೈವ ಜನಾಂಗದ ಒಂದು ಉಪಪಂಗಡದವರು. ಇವರು ವಂಶಪಾರಂಪರ್ಯವಾಗಿ ಹೂಗಾರಿಕೆ ವೃತ್ತಿಯನ್ನು ಮಾಡಿ ಜೀವನ ನಡೆಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಇವರು ಆಯಾಗಾರರಾಗಿದ್ದರು. ರೈತರು ಕೊಡುವ ಕಾಳು-ಕಡಿಯಿಂದಲೇ ಜೀವನ ಸಾಗಿಸುತ್ತಿದ್ದರು. ಬಳ್ಳಾರಿ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಈ ಜನಾಂಗ ವಾಸವಾಗಿದ್ದಾರೆ. ಇವರನ್ನು ಜೀರರೆಂತಲೂ, ಹೂಗಾರರೆಂತಲೂ, ಮಾಲೆಗಾರರೆಂತಲೂ ಕರೆಯುತ್ತಾರೆ. ಹಳ್ಳಿಗಳಲ್ಲಿ ವಾಸವಾಗಿರುವ ಹೂಗಾರರು ಇಂದು ಈ ವೃತ್ತಿಯನ್ನು ಮಾಡುತ್ತಿಲ್ಲ. ಅವರೆಲ್ಲರೂ ಕೃಷಿಕರಾಗಿ, ನೌಕರರಾಗಿ, ವಿವಿಧೆಡೆ ವಿವಿಧ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ನಗರ ಪ್ರದೇಶದಲ್ಲಿರುವ ಹೂಗಾರರು ನಗರದ ಮಾರುಕಟ್ಟೆಗಳಲ್ಲಿ ಹೂಮಾಲೆ ಮಾಡಿ, ಹೂ ಹಾರಗಳನ್ನು ಜನರ ಅಭಿರುಚಿಗೆ ತಕ್ಕಂತೆ ತಯಾರಿಸಿಕೊಡುತ್ತಿದ್ದಾರೆ.

ಹೊಸಪೇಟೆ, ಬಳ್ಳಾರಿ, ಹೂವಿನ ಹಡಗಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ನಗರಗಳಲ್ಲಿ ಹೂಗಾರಿಕೆ ವೃತ್ತಿ ಮಾಡುವವರನ್ನು ಹೆಚ್ಚಾಗಿ ಕಾಣಬಹುದು. ಹೊಸಪೇಟೆ ಹೂಗಾರರು ಚಿತ್ರದುರ್ಗ ಹಾಗೂ ಬೆಂಗಳೂರಿನಿಂದ ಗುಲಾಬಿ, ಸೇವಂತಿಗೆ, ದುಂಡು ಮಲ್ಲಿಗೆ ಅರಳು ಮಲ್ಲಿಗೆಗಳನ್ನು ದಿನ ನಿತ್ಯವೂ ಬಸ್ಸುಗಳ ಮೂಲಕ ತರಿಸುತ್ತಾರೆ. ಕೆಲವು ಹೂಗಾರರು ದೊಡ್ಡ ಪ್ರಮಾಣದಲ್ಲಿ ವಿವಿಧ ರೀತಿಯ ಹೂಗಳನ್ನು ತರಿಸಿ, ಮಾಲೆ ತಯಾರಿಸಿ ಮಾರುವವರಿಗೆ ಪೂರ್ಣ ಬೆಲೆ ದರದಲ್ಲಿ ಮಾರುತ್ತಾರೆ. ಹೂಗಾರರ ಮಹಿಳೆಯರು ಮನೆಗಳಲ್ಲಿ ಹೂಮಾಲೆ, ಹೂವಿನ ಗುಚ್ಚಗಳನ್ನು ತಯಾರಿಸುತ್ತಾರೆ. ಹೂವಿಗೆ ಹಬ್ಬ, ಹರಿದಿನ, ಜಾತ್ರೆ, ರಾಜಕೀಯ ಸಮಾರಂಭಗಳು ಜರುಗುವ ಸಂದರ್ಭಗಳಲ್ಲಿ ಹೆಚ್ಚಿನ ಬೇಡಿಕೆ ಇರುತ್ತದೆ. ಹೂಗಾರರ ಯುವ ಜನಾಂಗ ಈ ವೃತ್ತಿಯನ್ನು ಮಾಡಲು ಇಚ್ಛಿಸುವುದಿಲ್ಲವೆಂದು ಹಿರಿಯರು ತಮ್ಮ ಅಳಲನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಈ ಜನಾಂಗ ವಿದ್ಯಾಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಈ ಜನಾಂಗದವರು ಸರಕಾರದ ಉತ್ತಮ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿರುವ ಹೂಗಾರರು ಈ ಕುಲಕಸುಬಿನ ಜೊತೆಗೆ 'ಸಮಾಳ ಬಾರಿಸುವುದು' ಮತ್ತೊಂದು ವೈಶಿಷ್ಟ್ಯವಾಗಿದೆ. ಸಮಾಳ-ಹೂಗಾರರ ಮೂಲ ಚರ್ಮವಾದ್ಯ. ಪೂಜಾಕಾಲದಲ್ಲಿ, ಹಬ್ಬಹರಿದಿನಗಳಲ್ಲಿ ಜಾತ್ರೆ ವಿವಿಧ ಸಭೆ, ಸಮಾರಂಭ ಹಾಗೂ ಮೆರವಣಿಗೆಗಳಲ್ಲಿ ಸಮಾಳ ಬಾರಿಸುತ್ತಾರೆ. ಸಮಾಳ ಬಾರಿಸುವ ಕಲೆ ಈ ಜನಾಂಗಕ್ಕೆ ಕರಗತವಾಗಿದೆ ಎಂದು ಹೂಗಾರರು ವ್ಯಕ್ತಪಡಿಸಿದ್ದಾರೆ. ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ಹೂಗಾರಿಕೆ ವೃತ್ತಿಯಿಂದ ಜೀವನ ನಡೆಸುವುದು ಕಷ್ಟ ಹಾಗೂ ಹೂ ಬೆಳೆಯುವ ರೈತರು ಸಂಖ್ಯೆ ಕಡಿಮೆ. ಇದರಿಂದ ಬೇಡಿಕೆಗೆ ತಕ್ಕಂತೆ ಹೂ ಪೂರೈಕೆಯಾಗುತ್ತಿಲ್ಲ. ಇದು ಕೆಲವೇ ತಿಂಗಳುಗಳಲ್ಲಿ ನಡೆಸಬಹುದಾದ ವೃತ್ತಿ ಇದರ ಮೂಲಕ ಜೀವನ ಸಾಗಿಸುವುದು ಕಷ್ಟ ಸಾಧ್ಯವೆಂದು ಹೂಗಾರರು ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ.

ಬಟ್ಟೆಯನ್ನು ಹೊಲೆಯುವ ವೃತ್ತಿಯನ್ನು ಸಾಂಪ್ರದಾಯಿಕವಾಗಿ ಮಾಡುತ್ತ ಬಂದವರಿಗೆ ಸಿಂಪಿಗರು, ಸಿಂಪಿಗ್ಯಾರು ಎಂದು ಕರೆಯುವುದು ರೂಢಿ. ಹಿಂದಿನ ಕಾಲದಲ್ಲಿ ಶಿವಸಿಂಪಿಗರು, ಜನಿವಾರ ಸಿಂಗರು, ನಾಮದೇವ ಸಿಂಪಿಗರು ಈ ಸಿಂಪಿಗ ವೃತ್ತಿಯನ್ನು ಮಾಡಿಕೊಂಡು ಬರುತ್ತಿದ್ದರು. ಆದರೆ ಇಂದು ಎಲ್ಲಾ ಜನಾಂಗದವರೂ ಸಹ ಸಿಂಪಿಗ ವೃತ್ತಿಯನ್ನು ಅಳವಡಿಸಿಕೊಂಡಿದ್ದಾರೆ. ಇದು ಜೀವನದ ಒಂದು ಉತ್ತಮ ಮಾರ್ಗವೆಂದು ಎಲ್ಲಾ ಸಮುದಾಯದವರ ಭಾವನೆ. ಬಳ್ಳಾರಿ ಜಿಲ್ಲೆಯ ಹಡಗಲಿ ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಶಿವಸಿಂಪಿಗರ ಸಂಖ್ಯೆ ಹೆಚ್ಚಾಗಿದೆ. ಬಳ್ಳಾರಿ, ಸಂಡೂರು, ಶಿರುಗುಪ್ಪ ಭಾಗದಲ್ಲಿ ಜನಿವಾರ ಹಾಗೂ ನಾಮದೇವ ಸಿಂಪಿಗರು ಹೆಚ್ಚಾಗಿ ಕಂಡುಬರುತ್ತಾರೆ. ಅವರು ತಮ್ಮ ಜನಾಂಗದ ಕುಲಕಸುಬಿನ ಕುರಿತು, ತಮ್ಮ ವಂಶಜರ ಐತಿಹ್ಯಗಳ ಕುರಿತು ಮತ್ತು ಇಂದು ಅವರು ಎದುರಿಸುವ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾರೆ. ಸಿಂಪಿಗರ ಹಳೆವಯೋಮಾನದವರು ಹಾಗೂ ಮಹಿಳೆಯರು ಇಂದೂ ಕೂಡ ಈ ವೃತ್ತಿಯನ್ನು ಮುಂದುವರಿಸಿದ್ದಾರೆ. ಅದರೆ ಯುವಜನಾಂಗ ಈ ವೃತ್ತಿಯನ್ನು ಮುಂದುವರಿಸಲು ಇಚ್ಚಿಸುತ್ತಿಲ್ಲ, ಅವರು ಉತ್ತಮ ಶಿಕ್ಷಣ ಪಡೆದು ಸರ್ಕಾರಿ ಉದ್ಯೋಗಗಳಿಗೆ ಸೇರಲು ಇಚ್ಚೆ ವ್ಯಕ್ತಪಡಿಸಿದ್ದಾರೆ. ಹಳೆಯ ಕಾಲದ ಸಿಂಪಿಗರು ಕೂಡ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಒಳ್ಳೆಯ ಕೆಲಸಕ್ಕೆ ಸೇರಲು ಪ್ರೋತ್ಸಾಹಿಸುತ್ತಿದ್ದಾರೆ. ಆದರೆ ಸಿಂಪಿಗ ಜನಾಂಗದ ಮಹಿಳೆಯರು ಕುಟುಂಬ ನಿರ್ವಹಣೆಗೆ ಸಿಂಪಿಗ ವೃತ್ತಿಯನ್ನು ಮಂದುವರಿಸಿದ್ದಾರೆ. ಇಂದು ಎಲ್ಲಾ ಜಾತಿಗಳ ಜನ ಈ ವೃತ್ತಿ ಮಾಡುತ್ತಿದ್ದಾರೆ. ವೃತ್ತಿಯಲ್ಲಿ ಸಾಕಷ್ಟು ಪೈಪೋಟಿ ಇದೆ. ಕಸುಬಿನಲ್ಲಿ ಸಾಕಷ್ಟು ಸ್ಥಿತ್ಯಂತರವಾಗಿದೆ. ಹೊಸ ರೀತಿಯ ಹೊಲಿಗೆ ಯಂತ್ರಗಳು ಸರಳ ಸಾಧನ ಸಲಕರಣಿಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಹೊಸ ಹೊಸ ಡಿಜೈನ್, ಪ್ಯಾಷನ್ ಬಟ್ಟೆಗಳನ್ನು ಹೊಲೆದು ಕೊಡುವವರಿಗೆ ಬೇಡಿಕೆ ಹೆಚ್ಚಾಗಿದೆ. ಸಾಂಪ್ರದಾಯಿಕವಾಗಿ ಬಟ್ಟೆ ಹೊಲಿಯುವವರಿಗೆ ಬೇಡಿಕೆ ಕಡಿಮೆ ಇದರಿಂದ ವಂಶಪಾರಂಪರ್ಯವಾಗಿ ವೃತ್ತಿ ನಡೆಸಿಕೊಂಡು ಬಂದವರು, ಕೇವಲ ಹಳೆಯ ಬಟ್ಟೆಗಳ ರಿಪೇರಿ ಕೆಲಸಗಳಿಗೆ ಸೀಮಿತವಾಗಿದೆಯೆಂದು ವಕ್ತೃಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಳ್ಳಾರಿ ನಗರದಲ್ಲಿ ಸಿದ್ಧಉಡುಪುಗಳನ್ನು ತಯಾರುಮಾಡುವ ದೊಡ್ಡ ಉದ್ಯಮಗಳೆ ಪ್ರಾರಂಭವಾಗಿವೆ. ಬಳ್ಳಾರಿ ಜೀನ್ಸ್‌ಗೆ ಹೆಸರುವಾಸಿ. ಸಿದ್ಧ ಉಡುಪುಗಳ ತಯಾರಿಕೆ ಸಾವಿರಾರು ಜನರಿಗೆ ಬದುಕನ್ನು ಜೀವನವನ್ನು ಒದಗಿಸಿಕೊಟ್ಟಿದೆ. ಬಳ್ಳಾರಿ ಟೈಲರಿಂಗ್ ತರಬೇತಿ ಸಂಸ್ಥೆ ಮಹಿಳೆಯರಿಗೆ ಹಾಗೂ ಪುರಷರಿಗೆ ತರಬೇತಿ ನೀಡುತ್ತದೆ. ಇದರಲ್ಲಿ ಎಲ್ಲಾ ಜಾತಿ ಜನಾಂಗಗಳು ತರಬೇತಿ ಪಡೆದು ಈ ವೃತ್ತಿಯನ್ನು ಅನುಸರಿಸುತ್ತಿವೆ. ಇದು ಉತ್ತಮ ಆದಾಯದ ಗಳಿಕೆಗೆ ಮಾರ್ಗವಾಗಿದೆ ಎಂದು ವಕ್ತೃಗಳು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಸಾಂಪ್ರದಾಯಿಕವಾಗಿ

ವೃತ್ತಿಯನ್ನು ಅನುಸರಿಸಿಕೊಂಡು ಬಂದವರು ಪೈಪೋಟಿಯಿಂದಾಗಿ ವೃತ್ತಿ ಮುಂದುವರಿಸಲು ಸಾಧ್ಯವಾಗದೆ ಬೇರೆ ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ. ಇಂದು ಮಾರಾಠಿಗರು, ಮುಸಲ್ಮಾನರು ಹೆಚ್ಚಾಗಿ ಈ ವೃತ್ತಿಯನ್ನು ಅನುಸರಿಸುತ್ತಿದ್ದಾರೆ. ಜನರ ಅಭಿರುಚಿ ಹಾಗೂ ಪ್ಯಾಷನ್‌ಗಳ ಪ್ರಭಾವ ಗ್ರಾಮೀಣ ಪ್ರದೇಶದ ಸಿಂಪಿಗರಿಗೆ ಸವಾಲಾಗಿ ಪರಿಗಣಿಸಿದೆ. ಹಳ್ಳಿಗರು ಇಂದು ಸಿದ್ಧ ಉಡುಪುಗಳ ಮೊರೆ ಹೋಗುತ್ತಿದ್ದಾರೆ. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿರುವ ಸಿಂಪಿಗರು ಅನಿವಾರ್ಯವಾಗಿ ವೃತ್ತಿ ಬದಲಾವಣೆ ಅಥವಾ ನಗರಗಳಿಗೆ ವಿಶೇಷವಾಗಿ ಬಳ್ಳಾರಿಗೆ ವಲಸೆ ಹೋಗಿ ಅಲ್ಲಿ ಸಿದ್ಧ ಉಡುಪು ತಯಾರಿಕಾ ಉದ್ಯಮಗಳಲ್ಲಿ ಕೂಲಿಕಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಳ್ಳಾರಿಯಲ್ಲಿಯೆ ವಾಸವಾಗಿರುವ ಕುಟುಂಬದವರಿಗೆ, ಉದ್ಯಮದವರು ಬಟ್ಟೆಯನ್ನು ಪೂರೈಸಿ ಸಿದ್ಧ ಉಡುಪು ತಯಾರಿಸಲು ಹೇಳುತ್ತಾರೆ. ಸಿದ್ಧಪಡಿಸಿದ ಉಡುಪಿಗೆ ಇಂತಿಷ್ಟು ಹಣ ಎಂದು ನಿರ್ಧರಿಸುತ್ತಾರೆ. ಆದರೆ ಇದು ಬಹಳ ಕಡಿಮೆ. ಯಾವುದೇ ಸಾಮಾಜಿಕ ಭದ್ರತಾ ಸೌಕರ್ಯಗಳನ್ನು ಸರಕಾರದ ನಿಯಮದಂತೆ ನೀಡದೆ ಸಿಂಪಿಗರನ್ನು ಶೋಷಣೆ ಮಾಡುತ್ತಿದ್ದಾರೆಂದು ವಕ್ತೃಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸಿದ್ಧ ಉಡುಪಿನ ಹೆಚ್ಚಿನ ಲಾಭ ಉದ್ಯಮಕ್ಕೆ ಸೇರುತ್ತದೆಯೇ ವಿನಃ ಸಿಂಪಿಗರಿಗಲ್ಲ ಹೀಗಾಗಿ ನಗರದಲ್ಲಿ ವಾಸವಾಗಿರುವ ಸಿಂಪಿಗರ ಸ್ಥಿತಿ ಧಾರುಣವಾಗಿದೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಬಳ್ಳಾರಿಯಲ್ಲಿ ಬಳೆಗಾರಿಕೆ ಉದ್ಯಮ ಉತ್ತಮ ಸ್ಥಿತಿಯಲ್ಲಿತ್ತು. ಈ ಸ್ಥಳಗಳಲ್ಲಿ ಬಳೆಗಾರರು ಕಾಜುಕರಗಿಸಿ ವಿವಿಧ ಗಾತ್ರದ, ವಿವಿಧ ಬಣ್ಣಗಳ ಬಳೆಯನ್ನು ತಯಾರಿಸುತ್ತಿದ್ದರು. ಈ ವೃತ್ತಿಯನ್ನು ವೀರಶೈವ ಜನಾಂಗದ ಬಳೆಗಾರರು ತಯಾರಿಸುತ್ತಿದ್ದರು. ತಯಾರಿಸಿದ ಬಳೆಗಳನ್ನು ಮಹಿಳೆಯರು ಹಾಗೂ ಪುರುಷರು ಹಳ್ಳಿ ಹಳ್ಳಿಗಳಿಗೆ ಮನೆ ಮನೆಗಳಿಗೆ ತಿರುಗಿ ಬಳೆಮಾರಿ ಜೀವನ ಸಾಗಿಸುತ್ತಿದ್ದರು. ಹಬ್ಬ ಹಾಗೂ ಜಾತ್ರೆಗಳ ಸಂದರ್ಭದಲ್ಲಿ ಬಳೆಗಾರರಿಗೆ ಬಳೆಯ ಉದ್ಯೋಗ ಬೇರೆಯ ದಿನಗಳಲ್ಲಿ ಬಳೆಮಾರುವ ಪ್ರಮಾಣ ಕಡಿಮೆ. ಬಳ್ಳಾರಿ ಜಿಲ್ಲೆಯಲ್ಲಿ ಬಳೆಗಾರ ಕುಟುಂಬಗಳಿವೆ. ಅದರೆ ಬಳೆ ತಯಾರು ಮಾಡುತ್ತಿಲ್ಲ. ಈ ಜನಾಂಗ ಬೆಳಗಾವಿಯ ಕಿತ್ತೂರು, ಮುರಗೊಡು ಹಾಗೂ ಬೆಂಗಳೂರಿನಿಂದ ಬಳೆ ತರಿಸಿ ಮಾರಾಟ ಮಾಡುತ್ತಿದ್ದಾರೆ. ಹಳ್ಳಿಗಳನ್ನು ಸುತ್ತಿ ಬಳೆಮಾರುವ ಪ್ರಮಾಣ ಇಂದು ಕಡಿಮೆಯಾಗಿದೆ. ದೊಡ್ಡ ಊರುಗಳಲ್ಲಿ, ನಗರಗಳಲ್ಲಿ ಬಳೆ ಅಂಗಡಿಗಳನ್ನು ತೆರೆದು ತಮ್ಮ ಕುಲಕಸುಬನ್ನು ಮುಂದುವರಿಸುತ್ತಿದ್ದಾರೆ. ಬಳೆಗಾರ ಕುಟುಂಬದ ನೆಲೆಗಳು ಮುಖ್ಯವಾಗಿ ಹಗರಿಬೊಮ್ಮನಹಳ್ಳಿ, ಹಡಗಲಿ, ಕೂಡ್ಲಿಗಿ, ಕಾನಾಹೊಸಹಳ್ಳಿ, ಸಂಡೂರು, ಹೊಸಪೇಟೆ, ಕಮಲಾಪುರ, ಕಂಪ್ಲಿ, ಕುಡುತಿನಿ, ಶಿರುಗುಪ್ಪ, ಕುರುಗೋಡು, ಹಾಗೂ ಬಳ್ಳಾರಿ ನಗರದಲ್ಲಿ ಕಾಣಬಹುದು. ಈ ಕಸುಬು ಇಂದು ನಗರ ಕೇಂದ್ರತವಾಗಿದೆ. ಈ ಜನಾಂಗ ಬಳೆ ಅಂಗಡಿಯ ಜೊತೆಗೆ, ಸ್ತ್ರೀಯರಿಗೆ ಬೇಕಾದ ವಿವಿಧ ಆಕರ್ಷಕ, ಪ್ಯಾಷನ್ ಭರಿತ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿರುವ ಈ ಜನಾಂಗದವರು ವ್ಯವಸಾಯ ಹಾಗೂ ಇತರೆ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸುಣ್ಣ ತಯಾರಿಸಿ ಮಾರುವವರು ಸುಣ್ಣಗಾರರು. ಸುಣ್ಣ ತಯಾರಿಸುವುದು ಈ ಜನಾಂಗದ ಪ್ರಮುಖ ಕಸುಬು ಬಳ್ಳಾರಿ ಜಿಲ್ಲೆಯಲ್ಲಿ ಇವರ ನೆಲೆಗಳಿವೆ. ಇವು ಮುಖ್ಯವಾಗಿ ಹಳ್ಳಿಗಳಲ್ಲಿವೆ. ಹಳ್ಳಿಯ ಜನ ಹಬ್ಬ ಹರಿದಿನ, ಜಾತ್ರೆ, ಉಚ್ಚಾಯಗಳಲ್ಲಿ ತಮ್ಮ ಮನೆಗಳನ್ನು ಸ್ವಚ್ಚಗೊಳಿಸಿ ಸುಣ್ಣ ಬಳಿಸುತ್ತಾರೆ. ಹಳ್ಳಿಗರಿಗೆ ಸುಣ್ಣಗಾರರು ಕಾಳು-ಕಡಿ ಅಥವಾ ಹಣಕ್ಕೆ ಸುಣ್ಣ ಮಾರಾಟ ಮಾಡುತ್ತಾರೆ. ಕತ್ತೆಗಳ ಮೇಲೆ ಸುಣ್ಣದ ಚೀಲಗಳನ್ನು ಊರಿಂದ ಊರಿಗೆ ಸಾಗಿಸುತ್ತಾರೆ. ಕೆಲವು ಸುಣ್ಣಗಾರ ಕುಟುಂಬಗಳು ಮನೆ, ಮಠ, ದೇವಸ್ಥಾನಗಳಿಗೆ ಸುಣ್ಣ ಬಳಿಯುವ ಕಾಯಕ ಮಾಡುತ್ತಾರೆ, ಇವರ ಜೀವನ ಅತ್ಯಂತ ದುಸ್ತರವಾಗಿದೆ. ಸುಣ್ಣ ಸುಡಲು ಕಚ್ಚಾವಸ್ತು ಹಾಗೂ ಕಟ್ಟಿಗೆ ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲ. ಮಳೆಗಾಲದಲ್ಲಿ ಈ ವೃತ್ತಿದಾರರಿಗೆ ಕೆಲಸ ಇರುವುದಿಲ್ಲ. ಅಧುನಿಕ ಬಣ್ಣ ತಯಾರಿಕಾ ಸಂಸ್ಥೆಗಳು ವಿವಿಧ ನಮೂನೆಯ, ಬಣ್ಣದ ಸುಣ್ಣವನ್ನು ತಯಾರಿಸಿ ಮಾರುಕಟ್ಟೆಗೆ ಪೂರೈಸುತ್ತಿವೆ. ಇದರಿಂದಾಗಿ ಸುಣ್ಣಗಾರರ ಸುಣ್ಣಕ್ಕೆ ಬೇಡಿಕೆ ಇಲ್ಲ. ಸುಣ್ಣ ಸುಡುವ ಗುಮ್ಮಿಗಳನ್ನು ನೋಡಿಕೊಳ್ಳುವುದು ಸಹ ಕಷ್ಟಸಾಧ್ಯವಾಗಿದೆ ಎಂಬುದು ಸುಣ್ಣಗಾರರ ಅಭಿಮತ.

ಬಳ್ಳಾರಿ ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಹಲವಾರು ರೀತಿಯ ಕುಲಕಸುದಾರರನ್ನು ಕಾಣಬಹುದು. ಗೌಳಿಗ ವೃತ್ತಿ, ಕೋಲಕಾರಿಕೆ, ದೋಶಿಗಾರಿಗೆ, ಪಿಂಜಾರಿಕೆ, ಉಪ್ಪಾರಿಕೆ, ಕುರುಬಗಾರಿಕೆ, ಪೂಜಾರಿಕೆ, ಜೋತಿಷ್ಯ, ಪೌರೋಹಿತ್ಯ, ವಾಲಿಕಾರಿಕೆ, ಲಾಳಗಾರಿಕೆ, ತಳವಾರಿಕೆ ಮುಂತಾದ ಕುಲಕಸುಬುಗಳನ್ನು ನಿರ್ವಹಿಸಿಕೊಂಡು ಜೀವಿಸುತ್ತಿರುವ ಸಮುದಾಯಗಳು ಕಡಿಮೆ ಸಂಖ್ಯೆಯಲ್ಲಿವೆ. ಈ ಕಸುಬುಗಳೆಲ್ಲವೂ ಸ್ಥಿತ್ಯಂತರಗೊಂಡಿವೆ. ಈ ಕಸುಬುದಾರರು ತಮ್ಮ ಮೂಲ ವೃತ್ತಿಗಳ ಜೊತೆಗೆ ಇತರೆ ವೃತ್ತಿಗಳಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಕೆಳವರ್ಗದ ಈ ಜನಾಂಗ ಹೆಚ್ಚಾಗಿ ಕೂಲಿ ಕೆಲಸಗಳಿಗೆ ಹೋಗುತ್ತಿದ್ದಾರೆ. ಜಿಲ್ಲೆಯ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು ಗಣಿಗಳಲ್ಲಿ ಹಾಗೂ ಕೃಷಿ ಚಟುವಟಿಕೆಗಳಲ್ಲಿ ಕೂಲಿ ಕಾರ್ಮಿಕರಾಗಿದ್ದಾರೆ.

ಗ್ರಾಮೀಣ ಜೀವನದಲ್ಲಿ ಕುಲಕಸುಬುಗಳು ಗ್ರಾಮೀಣರು ಒಂದುಗೂಡಿ ಬಾಳುವುದಕ್ಕೆ ತುಂಬಾ ನೆರವಾಗಿದೆ. ಆದುದರಿಂದ ಇವು ಸಾಮಾಜಿಕ ವ್ಯವಸ್ಥೆಯಲ್ಲಿ ಮಾನ್ಯತೆ ಪಡೆದಿವೆ. ಆದರೆ ಇಂದಿನ ಬದುಕಿನ ಸ್ಥಿತ್ಯಂತರದಲ್ಲಿ ನಶಿಸಿ ಹೋಗುವ ಎಷ್ಟೋ ಸಂಗತಿಗಳಲ್ಲಿ ಕುಲಕಸುಬುಗಳು ಸೇರಿವೆ. ಕೈಗಾರೀಕರಣ, ಯಂತ್ರಗಳ ಆಗಮನ, ಜನರ ರುಚಿ ಅಭಿರುಚಿಗಳಲ್ಲಿ, ಪ್ಯಾಷನ್‌ಗಳಲ್ಲಿ ಬದಲಾವಣೆ ಕುಲಕಸುಬುಗಳ ವಿನಾಶಕ್ಕೆ ಕಾರಣವಾಗಿವೆ. ಲಕ್ಷಾಂತರ ಕುಟುಂಬದ ಉಪಜೀವನ ವೃತ್ತಿಗಳಾದ ಕುಲಕಸುಬುಗಳು ಕಚ್ಚಾವಸ್ತುಗಳ ಕೊರತೆ, ಹಣಕಾಸಿನ ಕೊರತೆ, ಸೂಕ್ತ ಯಂತ್ರಗಳ ಕೊರತೆ, ಮಾರುಕಟ್ಟೆಯ ಕೊರತೆಯಿಂದಾಗಿ ವಿನಾಶದ ಅಂಚಿನಲ್ಲಿವೆ. ಸರಕಾರದ ಹಲವಾರು ಸುಧಾರಣಾ ಕ್ರಮಗಳು ಜಾರಿಗೆ ಬಂದರೂ ಇವರ ಬದುಕು ಹಸನಾಗಿಲ್ಲ.

ಅಡಿಟಿಪ್ಪಣಿಗಳು

೧. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೪೭.

೨. ದೇವೇಂದ್ರಕುಮಾರ ಹಕಾರಿ, ಕೆ.ಆರ್. ಸಂಧ್ಯಾರೆಡ್ಡಿ(ಸಂ), ಗ್ರಾಮೀಣ ವೃತ್ತಿಗಳು, ಪುಟ-೨೦೭.

೩. ಅದೇ, ಪುಟ-೨೬೧.

೪. ಮೊಗಳ್ಳಿ ಗಣೇಶ, ದಲಿತರು ಮತ್ತು ಜಾಗತೀಕರಣ, ಪುಟ-೧೧೪.

೫. ಅದೇ ಪುಟ-೧೧೫.

೬. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಪುಟ-೪೯.

ಅಧ್ಯಾಯ ೬

ಕುಲಕಸುಬುಗಳು–ಸಮಸ್ಯೆ, ಸವಾಲು ಮತ್ತು ಪರಿಹಾರಗಳು

ಕುಲಕಸುಬುಗಳು–ಸಮಸ್ಯೆ, ಸವಾಲು ಮತ್ತು ಪರಿಹಾರಗಳು

ಕುಲಕಸುಬುಗಳು ದೈನಂದಿನ ಬದುಕಿನ ಉಪಯೋಗಿ ನೆಲೆಯಿಂದ ಹುಟ್ಟಿಕೊಂಡಿವೆ. ಮಾನವನ ಕರಕೌಶಲ್ಯ ಸೃಜನಶೀಲವಾದುದು. ಅದರ ಜೊತೆಗೆ ಮಾನವನ ಕಲ್ಪನೆ, ಪ್ರಯೋಗಶೀಲತೆ ಮತ್ತು ತಂತ್ರಕೌಶಲ್ಯವು ಸೇರಿ ತನಗೆ, ತನ್ನ ಕುಟುಂಬಕ್ಕೆ, ಜನಾಂಗದ ಉಪಯೋಗಕ್ಕೆ ಬೇಕಾದ ವಸ್ತು, ಉಪಕರಣ, ಪರಿಕರ, ಸಾಧನ, ಸಲಕರಣೆಗಳನ್ನು ತಯಾರಿಸಿಕೊಂಡ, ಹಾಗೆಯೆ ತಯಾರಿಸಿದ ವಸ್ತುಗಳು ಹಾಗು ನೀಡುವ ಸೇವೆಗಳು ತನ್ನ ಬದುಕಿನ ಅವಶ್ಯಕ ಭಾಗವಾಗಿ ದಾಖಲಾದವು. ಕುಲಕಸುಬುಗಳಿಗೆ ಒಂದು ದೀರ್ಘವಾದ ಸಾಂಪ್ರದಾಯಿಕ ಪರಂಪರೆ ಹಾಗೂ ಇತಿಹಾಸವಿದೆ.

ನಾಗರೀಕತೆ ಬೆಳೆದಂತೆಲ್ಲಾ ಕುಲಕಸುಬುಗಳು ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಾ ಹೊಸದನ್ನು ಅಳವಡಿಸಿಕೊಳ್ಳುತ್ತಾ ಬಂದಿವೆ. ಪ್ರಪಂಚದಾದ್ಯಂತ ವಿವಿಧ ಬಗೆಯ ಮನುಷ್ಯ ಪ್ರಜ್ಞೆ ವಿಕಾಸವಾದಂತೆಲ್ಲಾ ವಿವಿಧ ಬಗೆಯ ವೃತ್ತಿಗಳು ಉಗಮವಾದವು. ಇಂದು ವಿಶ್ವದ ಎಲ್ಲಾ ದೇಶಗಳಲ್ಲಿ ಪರಂಪರಾಗತವಾಗಿ, ವಂಶಪಾರಂಪರ್ಯವಾಗಿ ಬೆಳೆದುಬಂದಿರುವ ವೃತ್ತಿಗಳನ್ನು ಕಾಣಬಹುದು. ಭಾರತ ದೇಶದಲ್ಲಿ ಪುರಾತನ ಕಾಲದಿಂದಲೂ ಕೆಲವು ಸರಕು ಸೇವೆಗಳಿಗೆ ಪ್ರಸಿದ್ಧವಾಗಿದೆ. ನಮ್ಮ ದೇಶದ ವಿವಿಧ ಭಾಗದ ಜನರು ತಮ್ಮ ಕರಕೌಶಲ್ಯದಿಂದ ತಯಾರಿಸಿದ ಸರಕುಗಳನ್ನು ದೇಶ ವಿದೇಶಗಳಲ್ಲಿ ಮಾರಾಟ ಮಾಡಿರುವುದನ್ನು ಇತಿಹಾಸದಲ್ಲಿ ದಾಖಲಾಗಿದೆ. ಕುಂಬಾರಿಕೆ, ಕಮ್ಮಾರಿಕೆ, ಪತ್ತಾರಿಕೆ, ನೇಕಾರಿಕೆ, ಮೇದಾರಿಕೆ, ಚಮ್ಮಾರಿಕೆ ವೃತ್ತಿಯನ್ನು ಅವಲಂಬಿಸಿದವರಿಗೆ ಅಂದು ಸಮಾಜದಲ್ಲಿ ಉತ್ತಮ ಸ್ಥಾನಮಾನಗಳನ್ನು ನೀಡಲಾಗಿತ್ತು. ಅವರ ಸೇವೆಗಳನ್ನು ಅವಶ್ಯಕ ಸೇವೆಗಳೆಂದು ಪರಿಗಣಿಸಿ ಸಮಾಜ ಅವರಿಗೆ ಮನ್ನಣೆಯನ್ನು ನೀಡಿತ್ತು. ಇಂದು ಸಹ ಭಾರತದಾದ್ಯಂತ ಇಂತಹ ಕುಲಕಸುಬುಗಳನ್ನು ಕಾಣಬಹುದು.

ಬಳ್ಳಾರಿ ಜಿಲ್ಲೆಯ ಇತಿಹಾಸ ಕ್ರಿ.ಪೂ. ೩೫೦೦ರಿಂದ ಕ್ರಿ.ಪೂ ೧೦೦೦ದ ಅವಧಿಯಲ್ಲಿ ಹಳೆಯ ಶಿಲಾಯುಗದ ಜನರಿಂದ ಪ್ರಾರಂಭವಾಗುತ್ತದೆ.[೧] ತೆಕ್ಕಲಕೋಟೆ, ಜೋಗ, ಸಂಗನಕಲ್ಲು ಮೊದಲಾದ ಸ್ಥಳಗಳಲ್ಲಿ ಹಳೆ ಶಿಲಾಯುಗದ ಜನರ ನೆಲೆಗಳನ್ನು ವಿದ್ವಾಂಸರು ಶೋಧಿಸಿದ್ದಾರೆ.[೨] ಆನಂತರ ವಿವಿಧ ರಾಜಮನೆತನದವರು ಬಳ್ಳಾರಿ ಜಿಲ್ಲೆಯನ್ನು ಆಳಿದ್ದಾರೆ. ಬಳ್ಳಾರಿ ಜಿಲ್ಲೆಯ ಬಹುಭಾಗಗಳು ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಗಂಗರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಸೇವುಣರು, ಹೊಯ್ಸಳರು, ವಿಜಯನಗರದ ಅರಸರು, ಮರಾಠರು, ಪಾಳೆಗಾರರ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಾಗಿದ್ದವು.[೩] ಈ ಎಲ್ಲಾ ರಾಜಮನೆತನಗಳ ಆಳ್ವಿಕೆಯಲ್ಲಿ ವಿವಿಧ ಕಸುಬುದಾರರಿದ್ದರೆಂಬುದು ಇತಿಹಾಸದ ಪುಟಗಳಲ್ಲಿ ದಾಖಲಾಗಿರುವುದು ಕಂಡುಬರುತ್ತದೆ.

ವಿಜಯನಗರದ ಅರಸರ ಕಾಲದಲ್ಲಿ ವಿವಿಧ ವೃತ್ತಿಗಳ ವರ್ಣನೆಯನ್ನು ಇತಿಹಾಸಕಾರರು ದಾಖಲೆ ಮಾಡಿದ್ದಾರೆ. ಕವಿಗಳು ಕೊಡುವ ಪುರವರ್ಣನೆಯ ಚಿತ್ರದಲ್ಲಿ ನಾನಾ ವೃತ್ತಿ ಬಾಂಧವರು ವಾಸಿಸುತ್ತಿದ್ದ ಕೇರಿಗಳ ಚಿತ್ರಣವು ದೊರೆಯುತ್ತದೆ. ಬಡಗಿ, ಕಮ್ಮಾರ, ವಸುವಿಭೇದಕ(ಅಕ್ಕಸಾಲೆ) ತಾಮ್ರಮರ್ದನ(ಲೋಹಕಾರ), ಮಸಗ(ಸಾಣೆ ಹಿಡಿಯುವವ), ಮುಚ್ಚಿಗ(ಗಾರೆ ಕೆಲಸದವ) ರಜಕ, ಚಿತ್ರಿಕ(ಮಾಂಸ ಮಾರುವವ), ಕಲುಕುಟಿಕ, ಕುಸುಮ ಮಾಲಿಕ, ಹಾವಾಡಿಗರಿಂದೆಸವ ಹರಿದರ (ವ್ಯಾಪಾರಿ) ದೂಸಿಗ(ಸೀರೆ ವ್ಯಾಪಾರಿ), ಬೂಸಗಂದಿಗ ಚಿಪ್ಪಿಗ, ಬಚ್ಚರಣಿ(ವಜ್ರ ಕತ್ತರಿಸುವವನು) ಬಳೆಗಾರ, ಬೋಗಾರ(ಲೋಹಕಾರ) ತಂಬಲಿಗ, ಜಂಗಮ, ಕರುಣಿಕ, ಮಡಿವಾಳ, ಕಂಚುಗಾರ, ಬಡಗಿ, ಸಮ್ಮಗಾರ, ಅಚ್ಚುಗಾರ, ಬಣ್ಣಕಾರ ಮುಂತಾದ ವೃತ್ತಿಗಾರರನ್ನು ಚಿತ್ರಿಸಲಾಗಿದೆ.[೪] ವಿಜಯನಗರದ ವೈಭವದ ಬೆಳವಣಿಗೆಯಲ್ಲಿ ವಿವಿಧ ವೃತ್ತಿದಾರರ ಕೊಡುಗೆ ಅಪಾರ.

ವಿಜಯನಗರದ ಅರಸರ ಆಳ್ವಿಕೆ ನಂತರ ಪಾಳೆಗಾರರು, ಮೈಸೂರು ಅರಸರು ಹೈದರಾಲಿ, ಟಿಪ್ಪುಸುಲ್ತಾನ್ ಈ ಭಾಗವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ನಂತರ ಬ್ರಿಟಿಷರ ಆಡಳಿತಕ್ಕೆ ಬಳ್ಳಾರಿ ಜಿಲ್ಲೆ ಒಳಪಟ್ಟಿತ್ತು. ಇವರ ಕಾಲದಲ್ಲೂ ವಿವಿಧ ವೃತ್ತಿದಾರರು ತಮ್ಮ ವೃತ್ತಿಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಭಾರತದ ಸ್ವಾತಂತ್ರ್ಯ ನಂತರ ಭಾಷಾವಾರು ರಾಜ್ಯಗಳು ನಿರ್ಮಾಣವಾದವು. ಬಳ್ಳಾರಿಯು ಹಲವಾರು ಹೋರಾಟಗಳ ನಡುವೆ ಮೈಸೂರು ರಾಜ್ಯಕ್ಕೆ ಸೇರ್ಪಡೆಯಾಯಿತು. ಹಿಂದೆ ಎಂಟು ತಾಲೂಕುಗಳನ್ನು ಹೊಂದಿದ್ದ ಬಳ್ಳಾರಿ ಜಿಲ್ಲೆ ಇಂದು ಏಳು ತಾಲೂಕುಗಳನ್ನು ಹೊಂದಿದೆ. ಹರಪನಹಳ್ಳಿ ತಾಲೂಕನ್ನು ದಾವಣಗೆರೆ ಜಿಲ್ಲೆಗೆ ಸೇರಿಸಲಾಗಿದೆ. ಇಂದು ಬಳ್ಳಾರಿ ಜಿಲ್ಲೆ ಹೊಸಪೇಟೆ, ಸಂಡೂರು, ಸಿರುಗುಪ್ಪ, ಬಳ್ಳಾರಿ, ಹಡಗಲಿ, ಕೂಡ್ಲಿಗಿ ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕುಗಳನ್ನು ಒಳಗೊಂಡಿದೆ. ಬಳ್ಳಾರಿಯು ಜಿಲ್ಲಾ ಕೇಂದ್ರವಾಗಿದ್ದು, ಹೊಸಪೇಟೆ ವಿಭಾಗೀಯ ಕೇಂದ್ರಸ್ಥಾನವಾಗಿದೆ.

ಬಳ್ಳಾರಿ ಜಿಲ್ಲೆ ಕೃಷಿ, ಗಣಿಗಾರಿಕೆ, ಪಶುಪಾಲನೆ ಮತ್ತು ಕಬ್ಬಿಣ-ಉಕ್ಕು ಕೈಗಾರಿಕೆಗಳಿಗೆ ಹೆಸರಾಗಿದೆ. ಜಿಲ್ಲೆಯಲ್ಲಿ ಪುರಾತನ ಕಾಲದಿಂದಲೂ ಪರಂಪರಾಗತವಾಗಿ ರೂಢಿಸಿಕೊಂಡು ಬಂದಿರುವ ಕುಲಕಸುಬುಗಳನ್ನು ಕಾಣಬಹುದು. ಗಣಿಗಾರಿಕೆ ಹಾಗೂ ಕೈಗಾರಿಕರಣದ ಭರಾಟೆಯಲ್ಲೂ ಕುಲಕಸುಬುಗಳು ಜಿಲ್ಲೆಯಲ್ಲಿ ಪ್ರಾಮುಖ್ಯತೆಯನ್ನು ಹೊಂದಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಕುಲಕಸುಬುಗಳೆಂದರೆ ಕುಂಬಾರಿಕೆ, ಕಮ್ಮಾರಿಕೆ, ಮೇದಾರಿಕೆ, ಪತ್ತಾರಿಕೆ, ನೇಕಾರಿಕೆ, ಚಮ್ಮಾರಿಕೆ, ಶಿಲ್ಪಗಾರಿಕೆ, ಬಡಗಿತನ, ಸುಣ್ಣಗಾರಿಕೆ, ಬಳೆಗಾರಿಕೆ, ಕಲ್ಲುಕುಟಿಗ ವೃತ್ತಿ, ಗಾಣಗಾರಿಕೆ, ದೋಶಿಗ, ಕ್ಷೌರಿಕ, ಮಡಿವಾಳ ವೃತ್ತಿ, ಹೂಗಾರಿಕೆ, ಪೂಜಾರಿಕೆ, ಅಯ್ಯಗಾರಿಕೆ, ಉಪ್ಪಾರಿಕೆ, ತಳವಾರಿಕೆ, ಪಿಂಜಾರಿಕೆ, ನಾಟಿವೈದ್ಯ, ಕುರುಬಗಾರಿಕೆ, ಸಿಂಪಿಗಾರಿಕೆ, ಕೊರವ, ಗೌಳಿಗ ವೃತ್ತಿ, ಜ್ಯೋತಿಷ್ಯ, ಕಂಚುಗಾರಿಕೆ ಇತ್ಯಾದಿ. ಪ್ರಸ್ತುತ ಪ್ರಬಂಧದಲ್ಲಿ ಕೆಲವು ಪ್ರಮುಖವಾದ ಕುಲಕಸುಬುಗಳನ್ನು ವಿಶ್ಲೇಷಣೆಗೆ ಒಳಪಡಿಸಿದೆ.

ಜಿಲ್ಲೆಯ ಜನರ ಪ್ರಮುಖ ಕಸುಬು ಒಕ್ಕಲುತನ. ಈ ಕಸುಬು ಯಾವುದೆ ಒಂದು ಜಾತಿಗೆ ಸೀಮಿತವಾಗಿಲ್ಲ. ಈ ಕಸುಬನ್ನು ಸಮಾಜದ ಎಲ್ಲಾ ಜಾತಿ-ಜನಾಂಗಗಳು ನಿರ್ವಹಿಸುತ್ತಿವೆ. ಆದರೆ ಜಿಲ್ಲೆಯಲ್ಲಿ ಹೆಚ್ಚಾಗಿ ಒಕ್ಕಲುತನ ಮಾಡುತ್ತಿರುವವರು ವೀರಶೈವ ಲಿಂಗಾಯತರು, ಕುರುಬರು, ನಾಯಕರು ಮತ್ತು ಅಲ್ಪ ಪ್ರಮಾಣದಲ್ಲಿ ಇತರೆ ಜಾತಿಯವರು. ಜಿಲ್ಲೆಯಲ್ಲಿ ತುಂಗಭದ್ರಾ ಆಣೆಕಟ್ಟು ಹಾಗೂ ಕೆರೆ ಕಾಲುವೆ, ಹಳ್ಳ ಕೊಳ್ಳಗಳು ಹೆಚ್ಚಾಗಿರುವುದರಿಂದ ಒಕ್ಕಲುತನ ಉತ್ತಮ ಸ್ಥಿತಿಯಲ್ಲಿದೆ. ಒಕ್ಕಲಿಗರು ಆಹಾರ, ಹಾಗೂ ಆಹಾರೇತರ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಜಿಲ್ಲೆಯ ಕೃಷಿ ಆಧುನಿಕರಣಗೊಳ್ಳುತ್ತಿದೆ.

ಬಳ್ಳಾರಿ ಜಿಲ್ಲೆಯಲ್ಲಿ ನೇಕಾರಿಕೆ ಮತ್ತೊಂದು ಪ್ರಮುಖವಾದ ಕುಲಕಸುಬು. ನೇಕಾರರು ಖಾದಿ ಬಟ್ಟೆ, ಹತ್ತಿಬಟ್ಟೆ, ರೇಷ್ಮೆ ವಸ್ತ್ರಗಳನ್ನು ಸೀರೆ, ದೋತ್ರಗಳನ್ನು ತಯಾರಿಸುತ್ತಾರೆ. ಜಿಲ್ಲೆಯಲ್ಲಿ ಇವರ ನೆಲೆಗಳು ಪ್ರಮುಖವಾಗಿ ಬಳ್ಳಾರಿ, ಕಂಪ್ಲಿ, ಕಮಲಾಪುರ, ಚಿತ್ತವಾಡಿಗಿ, ಆಲೂರು, ತಂಬ್ರಹಳ್ಳಿ, ಹೊಸಹಳ್ಳಿ, ರಾಂಪುರ, ಅನಂತಶಯನಗುಡಿ, ಸಂಡೂರು, ಕುರುಗೋಡು, ಶಿರುಗುಪ್ಪ ಮೊದಲಾದುವುಗಳು. ನೇಕಾರರಲ್ಲಿ ಕೆಲವರು ಹತ್ತಿ ಹಿಂಜಿ, ನೂಲು ತೆಗೆದು ಖಾದಿ ಬಟ್ಟೆ ತಯಾರಿಸುತ್ತಾರೆ. ಕೆಲವು ನೆಕಾರರು ಹತ್ತಿ ಮಿಲ್ಲಿನಿಂದ ನೂಲು ತರಿಸಿ ಬಟ್ಟೆ ನೆಯುತ್ತಾರೆ. ಬಳ್ಳಾರಿ ಮತ್ತು ರಾಂಪುರದ ನೇಕಾರರು ಮೊಳಕಾಲ್ಮೂರಿನಿಂದ ರೇಷ್ಮೆ ನೂಲನ್ನು ತಂದು ರೇಷ್ಮೆ ಸೀರೆ, ಪಂಚೆ ಹಾಗೂ ವಸ್ತ್ರಗಳನ್ನು ತಯಾರಿಸುತ್ತಾರೆ. ನೇಕಾರ ಸಂಘಗಳು ನೇಕಾರರಿಗೆ ವಿವಿಧ ರೀತಿಯಲ್ಲಿ ನೆರವನ್ನು ನೀಡುತ್ತಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಮೇದಾರ ಜನಾಂಗ ಕರ್ನಾಟಕದ ಮಲೆನಾಡು ಜಿಲ್ಲೆಗಳಿಂದ, ಗೋವಾದಿಂದ, ಆಂಧ್ರ ಪ್ರದೇಶದಿಂದ ಬೊಂಬುಗಳ ಬೆತ್ತಗಳನ್ನು ತರಿಸಿ ಬಿದಿರು ಬೆತ್ತದ ಸಾಮಗ್ರಿಗಳನ್ನು

ತಯಾರಿಸುತ್ತಾರೆ. ಇವರು ನಗರ ಹಾಗೂ ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲಿ ನೆಲೆಸಿದ್ದಾರೆ. ಇವರು ಗೃಹಪಯೋಗಿ, ವ್ಯವಸಾಯ, ಕೈಗಾರಿಕಾ ಕ್ಷೇತ್ರಕ್ಕೆ ಮತ್ತು ಹೋಟೆಲ್ ಉದ್ಯಮಗಳಿಗೆ ಬೇಕಾದ ಸಾಮಗ್ರಿಗಳನ್ನು ತಯಾರು ಮಾಡಿ ಮಾರಾಟ ಮಾಡುತ್ತಾರೆ. ಇವರ ಮುಖ್ಯ ನೆಲೆಗಳೆಂದರೆ ಹೊಸಪೇಟೆ, ಕಂಪ್ಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಹಡಗಲಿ, ಬಳ್ಳಾರಿ, ಕುಡುತಿನಿ, ಶಿರುಗುಪ್ಪ, ಕುರುಗೋಡು. ಹಳ್ಳಿಗಳಲ್ಲಿ ಇವರ ನೆಲೆ ಕಡಿಮೆ.

ಕುಂಬಾರಿಕೆ ಪುರಾತನ ಕಸುಬು. ಈ ಕಸುಬಿನವರು ಮಣ್ಣಿನಿಂದ ಆಕರ್ಷಕವಾದ ಸಾಮಗ್ರಿಗಳನ್ನು ತಯಾರಿಸುತ್ತಾರೆ. ಇವರ ನೆಲೆಗಳು ಹೆಚ್ಚಾಗಿ ಗ್ರಾಮೀಣ ಭಾಗದಲ್ಲಿವೆ. ಕಂಪ್ಲಿ, ಕಮಲಾಪುರ, ಮಲಪನಗುಡಿ, ಹಗರಿಬೊಮ್ಮನಹಳ್ಳಿ, ಹಾರೋನಹಳ್ಳಿ, ಹೊಸಹಳ್ಳಿ, ಮರಿಯಮ್ಮನಹಳ್ಳಿ, ಕುಡುತಿನಿ, ಸಂಡೂರು, ಹಡಗಲಿ, ತಂಬ್ರಹಳ್ಳಿ, ಹೊಸಹಳ್ಳಿ, ಕೂಡ್ಲಿಗಿ, ಕುರುಗೋಡು ಬಳ್ಳಾರಿ ಹಾಗೂ ಇನ್ನಿತರ ಗ್ರಾಮಗಳಲ್ಲಿ ಕುಂಬಾರಿಕೆ ಕಸುಬನ್ನು ಕಾಣಬಹುದು.

ಬಡಗಿತನ ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲೂ ಕಾಣಬಹುದು. ಶಿಲ್ಪಗಾರರು ಹಂಪಿ, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹಡಗಲಿ ಮತ್ತು ಬಳ್ಳಾರಿಯಲ್ಲಿ ಕಾಣಬಹುದು. ಹಂಪೆಯಲ್ಲಿರುವ ಬಸವರಾಜ ಆಚಾರ, ಹೊಸಪೇಟೆಯ ಸುರೇಶ ಆಚಾರ, ನಾಗರಾಜ ಆಚಾರ, ಶಿಲ್ಪ ತಯಾರಿಕೆಯಲ್ಲಿ ರಾಜ್ಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಕಮ್ಮಾರಿಕೆ ಜಿಲ್ಲೆಯಲ್ಲಿ ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದೆ. ವಿಜಯನಗರ ಕಾಲದಲ್ಲಿ ಕಮ್ಮಾರರು ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದ್ದರು. ಮೊದಲು ಹಳ್ಳಿಗಳಲ್ಲಿದ್ದ ಕಮ್ಮಾರರು ಇಂದು ನಗರ ಪ್ರದೇಶಗಳಲ್ಲಿ ವೃತ್ತಿ ನಿರ್ವಹಿಸುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯ ಪ್ರಮುಖ ಹಳ್ಳಿಗಳಲ್ಲಿ ಕಮ್ಮಾರರ ಕುಟುಂಬಗಳು ಕಮ್ಮಾರಿಕೆ ವೃತ್ತಿಯಲ್ಲಿ ತೊಡಗಿವೆ.

ಪತ್ತಾರ ಜನಾಂಗ ನಗರಗಳಲ್ಲಿ ಚಿನ್ನ-ಬೆಳ್ಳಿಯ ಒಡವೆ-ವಸ್ತುಗಳನ್ನು ತಯಾರಿಸಿ ಕೊಡುತ್ತಾರೆ. ಇವರಲ್ಲಿ ಹೆಚ್ಚಿನವರು ಶೇಟ್ ಹಾಗೂ ಶೆಟ್ಟರ ಚಿನ್ನ-ಬೆಳ್ಳಿಯ ಅಂಗಡಿಯವರ ಆಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ನೆಲೆಗಳು ಮುಖ್ಯವಾಗಿ ಹೊಸಪೇಟೆ, ಬಳ್ಳಾರಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಕಂಪ್ಲಿ ಹಾಗೂ ಸಿರುಗುಪ್ಪಗಳಾಗಿವೆ.

ಆಂಧ್ರಪ್ರದೇಶ ಮತ್ತು ತಮಿಳುನಾಡಿನಿಂದ ವಲಸೆ ಬಂದಿರುವ ಕಲ್ಲುಕುಟಿಗರು ಹೊಸಪೇಟೆ, ಬಳ್ಳಾರಿ, ಕೂಡ್ಲಿಗಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಕಲ್ಲಿನ ಗಣಿಗಳಿರುವ ಕಡೆ ಇವರು ನೆಲೆಸಿರುತ್ತಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಗಾಣಿಗ ಜನಾಂಗವಿದ್ದರೂ ಅವರು ಇಂದು ಗಾಣದ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿಲ್ಲ. ಬಳ್ಳಾರಿ, ಹೊಸಪೇಟೆ, ಹಗರಿಬೊಮ್ಮನಹಳ್ಳಿ ಹಾಗೂ ಹಡಗಲಿಯಲ್ಲಿ ಮಾತ್ರ ಎಣ್ಣೆಗಾಣಗಳನ್ನು ಕಾಣಬಹುದು.

ಚಮ್ಮಾರಿಕೆಯನ್ನು ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಕಾಣಬಹುದು. ಆದರೆ ಇವರು ಚರ್ಮದ ಪದಾರ್ಥಗಳನ್ನು ತಯಾರುಮಾಡುವ ಪ್ರಮಾಣ ಕಡಿಮೆ. ಆಧುನಿಕ ಚಪ್ಪಲಿ ಉದ್ಯಮಗಳು ತಯಾರು ಮಾಡುವ ಚಪ್ಪಲಿಗಳನ್ನು ಮಾರಾಟ ಮಡುವ ಅಥವಾ ಅವುಗಳನ್ನು ರಿಪೇರಿ ಮಾಡುವ ಕಾಯಕದಲ್ಲಿ ತೊಡಗಿದ್ದಾರೆ.

ಕ್ಷೌರಿಕ ವೃತ್ತಿಯವರು ಪ್ರತಿಯೊಂದು ಹಳ್ಳಿಗಳಲ್ಲಿ ಒಂದೊ ಅಥವಾ ಎರಡು ಕುಟುಂಬಗಳಿರಬಹುದು. ಆದರೆ ಎಲ್ಲಾ ಹಳ್ಳಿಗಳಲ್ಲಿ ಈ ಜನಾಂಗವಿಲ್ಲ. ಇವರು ನಗರ ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ. ಹಳ್ಳಿ ಹಾಗೂ ನಗರಗಳಲ್ಲಿ ಸಲೂನ್‌ಗಳನ್ನು ತೆರೆದು ವೃತ್ತಿಯನ್ನು ಮುಂದುವರಿಸಿದ್ದಾರೆ.

ಮಡಿವಾಳ ಜನಾಂಗ ಬಟ್ಟೆಗಳನ್ನು ಶುಭ್ರಗೊಳಿಸಿ ಮಡಿಮಾಡಿ ಕೊಡುವ ಜನಾಂಗ. ಹಿಂದೆ ಇವರು ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲಿ ವಾಸವಾಗಿದ್ದು ಈ ವೃತ್ತಿಯನ್ನು ಮಾಡುತ್ತಿದ್ದರು. ಆದರೆ ವಿವಿಧ ಕಾರಣಗಳಿಗಾಗಿ ಇಂದು ಈ ಜನಾಂಗದವರು ವ್ಯವಸಾಯ ಹಾಗೂ ಕೂಲಿ ಕೆಲಸ ಮಾಡುತ್ತಿದ್ದಾರೆ. ಮತ್ತೆ ಕೆಲವರು ನಗರ ಪ್ರದೇಶಗಳಲ್ಲಿ ಲಾಂಡ್ರಿಗಳನ್ನು ತೆರೆದು ಕೆಲಸ ಮಾಡುತ್ತಾರೆ. ಈ ಎಲ್ಲಾ ಕಸುಬುದಾರರ ಜೊತೆಗೆ ಹೂಗಾರ, ಬಳೆಗಾರ, ಬಣಕಾರ, ಉಪ್ಪಾರ, ನಾಟಿವೈದ್ಯ, ಕೊರವ, ಗೌಳಿಗ, ಪಿಂಜಾರ ಮುಂತಾದ ಜನಾಂಗದವರು ತಮ್ಮ ಮೂಲ ಕಸುಬುಗಳನ್ನು ಕೆಲವರು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಆದರೆ ಈ ಪ್ರಮಾಣ ತುಂಬಾ ಕಡಿಮೆ.

ಕುಲಕಸುಬುಗಳ ಬೆಳವಣಿಗೆ:

ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರೀಕರಣ, ಗಣಿಗಾರಿಕೆ, ಕೃಷಿಯ ಆಧುನಿಕರಣ ಪ್ರಕ್ರಿಯೆಯ ಸಂದರ್ಭದಲ್ಲಿ ಕೆಲವು ಕುಲಕಸುಬುಗಳು ಸವಾಲುಗಳನ್ನು ಮೆಟ್ಟಿ ನಿಂತಿವೆ. ಜಿಲ್ಲೆಯ ಕುಲಕಸುಬುಗಳ ಬೆಳವಣಿಗೆ ಕುರಿತು ಈ ಕೆಳಗೆ ವಿವರಣೆ ನೀಡಲಾಗಿದೆ.

- ಬಳ್ಳಾರಿ ಜಿಲ್ಲೆಯ ಎಲ್ಲಾ ಪ್ರದೇಶಗಳಲ್ಲಿ ವಿವಿಧ ಕುಲಕಸುಬುಗಳ ನೆಲೆಗಳನ್ನು ಕಾಣಬಹುದು.
- ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಮತ್ತು ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲಿ ಕುಲಕಸುಬುದಾರ ಕುಟುಂಬಗಳ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ.
- ಕುಲಕಸುಬುಗಳಲ್ಲಿ ಸಾಮಾನ್ಯವಾಗಿ ಅನಕ್ಷರಸ್ಥರು ಅಥವಾ ಪೂರ್ಣ ತರಬೇತಿ ಇಲ್ಲದವರು ನೆಲೆ ನಿಂತಿದ್ದಾರೆ.
- ಕುಲಕಸುಬುಗಳು ಕೆಲವು ಋತುಮಾನಕ್ಕೆ ಸಂಬಂಧಿಸಿದವುಗಳು, ಆದ್ದರಿಂದ ಅವು ವರ್ಷದ ಕೆಲವೇ ತಿಂಗಳು ಕಾರ್ಯನಿರ್ವಹಿಸುತ್ತವೆ.
- ಪತ್ತಾರಿಕೆ, ಮೇದಾರಿಕೆ, ನೇಕಾರಿಕೆ, ಶಿಲ್ಪಗಾರಿಕೆಯಂತಹ ಕುಲಕಸುಬುಗಳು ಹಳ್ಳಿಗಳಲ್ಲಿ ಕಡಿಮೆಯಾಗುತ್ತ ಪಟ್ಟಣಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

- ಇತ್ತೀಚೆಗೆ ಕುಲಕಸುಬುದಾರರು ಅಗತ್ಯವೆನಿಸಿದಾಗ ಕೂಲಿಕಾರರನ್ನು ನೇಮಿಸಿಕೊಳ್ಳುವರು.
- ಕುಲಕಸುಬುದಾರರು ಹಣವನ್ನು ಸಾಮಾನ್ಯವಾಗಿ ಜಮೀನುದಾರರಿಂದ, ಲೇವಾದೇವಿ ವ್ಯವಹಾರದಾರರಿಂದ ಹಾಗೂ ಸಂಬಂಧಿಕರಿಂದ ಪಡೆದುಕೊಳ್ಳುತ್ತಾರೆ.
- ಕೆಲವು ಕಸುಬುಗಳಿಗೆ ತರಬೇತಿ ನೀಡಲು ಪ್ರತ್ಯೇಕ ತರಬೇತಿ ಕೇಂದ್ರಗಳಿಲ್ಲ.
- ಕುಲಕಸುಬುದಾರರು ವಂಶಪಾರಂಪರ್ಯವಾಗಿ ಪಡೆದುಕೊಂಡ ಕೌಶಲ್ಯತೆ, ತರಬೇತಿಯನ್ನು ಬಳಸಿ ಸಾಮಗ್ರಿಗಳನ್ನು ತಯಾರಿಸುವರು.
- ಕುಲಕಸುಬುದಾರರು ಉಪಯೋಗಿಸುವ ಸಾಧನ-ಸಲಕರಣೆಗಳು ಹಳೆಯ ಮಾದರಿಗಳಾಗಿರುತ್ತವೆ.
- ಕುಲಕಸುಬುದಾರರು ಶಾಲಾ ಕಾಲೇಜುಗಳಿಂದ ಶಿಕ್ಷಣ ಪಡೆದುಕೊಳ್ಳುವ ಪ್ರಮಾಣ ಕಡಿಮೆ.
- ಮಕ್ಕಳನ್ನು ಶಾಲಾ-ಕಾಲೇಜುಗಳಿಗೆ ಕಳಿಸುವ ಪ್ರಮಾಣ ಕಡಿಮೆ.
- ಕಾಲೇಜು ಶಿಕ್ಷಣ ಪಡೆದುಕೊಂಡ ಕುಲಕಸುಬುದಾರರ ಸಂಖ್ಯೆ ತುಂಬಾ ವಿರಳ.
- ಕೆಲವು ಕುಲಕಸುಬುಗಳ ಅಭಿವೃದ್ಧಿಗೆ ಸರ್ಕಾರದ ಸೌಲಭ್ಯಗಳು ವಿರಳವಾಗಿವೆ.
- ಕುಲಕಸುಬುದಾರರಲ್ಲಿ ಉತ್ತಮ ಸಂಘಟನೆಗಳಿಲ್ಲ.
- ಕುಲಕಸುಬುದಾರರು ಸಾಮಾನ್ಯವಾಗಿ ಸಮಾಜದಲ್ಲಿ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರಾಗಿರುವರು.
- ಬಳ್ಳಾರಿ ಜಿಲ್ಲೆಯಲ್ಲಿ ಭೂಮಿ ಇಲ್ಲದವರು ಹೆಚ್ಚಾಗಿ ಕುಲಕಸುಬುಗಳ ಮೇಲೆ ಅವಲಂಬನೆಯಾಗಿದ್ದಾರೆ.

ಸಮಸ್ಯೆ ಮತ್ತು ಸವಾಲುಗಳು:

ಉತ್ಪಾದನೆಯಲ್ಲಿ ಕುಲಕಸುಬುಗಳ ಪ್ರಮಾಣ ಕಡಿಮೆ ಇದ್ದರೂ, ಉದ್ಯೋಗಾವಕಾಶಗಳನ್ನು ಒದಗಿಸುವುದರಲ್ಲಿ ಅವುಗಳ ಪ್ರಮಾಣ ದೊಡ್ಡದು. ಸರಕಾರವು ಕುಲಕಸುಬುಗಳ ಅಭಿವೃದ್ಧಿಗೆ ಅನೇಕ ಕ್ರಮಗಳನ್ನು ಕೈಗೊಂಡಿದ್ದರೂ ಅವುಗಳ ಪ್ರಗತಿ ನಿರೀಕ್ಷಿಸಿದಷ್ಟು ಆಗಿಲ್ಲ. ಅವು ಅನೇಕ ತೊಂದರೆಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ವಿವರಿಸಲಾಗಿದೆ.

೧. **ಕಚ್ಚಾ ಸರಕುಗಳ ಅಭಾವ:** ಕುಲಕಸುಬುದಾರರಿಗೆ ಬೇಕಾಗುವ ಕಚ್ಚಾ ಸರಕುಗಳು ಸಾಕಷ್ಟು ಪ್ರಮಾಣದಲ್ಲಿ ಯೋಗ್ಯ ಬೆಲೆಯಲ್ಲಿ ಸಿಗುತ್ತಿಲ್ಲ. ಉದಾ: ಮೇದಾರರಿಗೆ ಬೊಂಬುಗಳ ಬೆತ್ತ, ಕುಂಬಾರರಿಗೆ-ಉತ್ತಮ ಮಣ್ಣು, ನೇಕಾರರಿಗೆ,-ಕಚ್ಚಾ ಹತ್ತಿ, ನೂಲು ಪತ್ತಾರರಿಗೆ ಚಿನ್ನ-ಬೆಳ್ಳಿ, ಶಿಲ್ಪಿಗಳಿಗೆ ಉತ್ತಮವಾದ ನಯವಾದ ಕಲ್ಲು, ಕಲ್ಲುಕುಟಿಗರಿಗೆ ಕಲ್ಲು, ಚರ್ಮಕಾರರಿಗೆ-ಚರ್ಮ, ಕಮ್ಮಾರರಿಗೆ-ಕಬ್ಬಿಣ, ಬಡಗಿಗಳಿಗೆ-ಉತ್ತಮವಾದ ಮರ-ಮುಟ್ಟು, ಸುಣ್ಣಗಾರರಿಗೆ-ಕಚ್ಚಾ ಸುಣ್ಣ, ಬಳೆಗಾರರಿಗೆ-ಖಾಜು-ಸೀಸ, ಹೂಗಾರರಿಗೆ-ಹೂಗಳು, ಇನ್ನೂ ಮುಂತಾದ ಕುಲಕಸುಬುದಾರರಿಗೆ

ಕಚ್ಚಾ ವಸ್ತುಗಳು ಸಕಾಲಕ್ಕೆ ಸರಿಯಾಗಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲ. ಕಚ್ಚಾ ವಸ್ತುಗಳ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿದ್ದು ಅವುಗಳನ್ನು ಪಡೆದುಕೊಳ್ಳಲು ಕುಲಕಸುಬುದಾರರು ಹರಸಾಹಸ ಪಡಬೇಕಾಗಿದೆ. ಕುಲಕಸುಬುದಾರರಲ್ಲಿ ಹಣಕಾಸಿನ ತೊಂದರೆ ಇರುವುದರಿಂದ ಅವರು ಸೋವಿ ದರದ, ಕಡಿಮೆ ಗುಣಮಟ್ಟದ ಕಚ್ಚಾ ಸರಕುಗಳನ್ನು ಉಪಯೋಗಿಸುತ್ತಾರೆ. ಇದರಿಂದ ಅವರು ತಯಾರಿಸಿದ ವಸ್ತುಗಳ ಗುಣಮಟ್ಟವು ಸ್ವಾಭಾವಿಕವಾಗಿ ಕಡಿಮೆ ಇರುತ್ತದೆ.

ಕುಲಕಸುಬುದಾರರು ಕಚ್ಚಾವಸ್ತುಗಳ ಕೊರತೆಯ ಜೊತೆಗೆ ವಿದ್ಯುತ್, ಸೀಮೆ ಎಣ್ಣೆ, ಡೀಸೆಲ್. ಇತ್ಯಾದಿ ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿದ್ದಾರೆ. ನಿರಂತರ ವಿದ್ಯುತ್ ಕಡಿತ, ದುಬಾರಿ ಬೆಲೆ ಕುಲಕಸುಬುದಾರರ ಉತ್ಪಾದನೆಯ ಮೇಲೆ ಹೊರೆಯಾಗಿ ಪರಿಣಮಿಸಿದೆ. ಈ ಕಸುಬುದಾರರ ಉತ್ಪಾದನಾ ಸಾಮರ್ಥ್ಯ ಸಂಪೂರ್ಣವಾಗಿ ಸದುಪಯೋಗವಾಗುತ್ತಿಲ್ಲ.

೨. ಹಣಕಾಸು ಕೊರತೆ: ಕುಲಕಸುಬುದಾರರು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಹಣಕಾಸಿನ ಕೊರತೆಯು ತುಂಬಾ ಗಂಭೀರ ಸಮಸ್ಯೆಯಾಗಿದೆ. ಇವರಿಗೆ ಹಣಕಾಸು ಪೂರೈಸಲು ಸಾಕಷ್ಟು ಹಣಕಾಸಿನ ಸಂಸ್ಥೆಗಳು ಸ್ಥಾಪನೆಯಾಗಿಲ್ಲ. ಇವರಿಗೆ ಅಗ್ಗದ ಬಡ್ಡಿದರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹಣಕಾಸು ಸಿಕ್ಕುತ್ತಿಲ್ಲ. ಸಾಮಾನ್ಯವಾಗಿ ಅವರು ಅತಿ ಹೆಚ್ಚು ಬಡ್ಡಿದರದಿಂದ ಸ್ಥಳೀಯ ಸಾಹುಕಾರರು, ಶೇಟ್‌ರು, ಶೆಟ್ಟಿಗಳು ಹಾಗೂ ವಿವಿಧ ಲೇವಾದೇವಿ ವ್ಯವಹಾರದಾರರಿಂದ ಸಾಲ ಪಡೆಯುತ್ತಾರೆ. ಇಂತಹ ಸಾಲವನ್ನು ಬೇಗನೆ ಹಿಂತಿರುಗಿಸಲು, ತಾವು ತಯಾರಿಸಿದ ಸರಕುಗಳನ್ನು ಅವರು ಶೀಘ್ರ ಮಾರಾಟ ಮಾಡಬೇಕಾಗುವುದರಿಂದ ಅವರ ಸರಕುಗಳಿಗೆ ಹೆಚ್ಚಿನ ಬೆಲೆ ಸಿಗುತ್ತಿಲ್ಲ. ಇವರಿಗೆ ಸಾಲ ಹಿಂತಿರುಗಿಸುವ ಶಕ್ತಿ ಸಾಮರ್ಥ್ಯ ಕಡಿಮೆ. ಸಾಲಕ್ಕೆ ಭದ್ರತೆ ನೀಡಲು ಇವರಲ್ಲಿ ಆಸ್ತಿಗಳಿಲ್ಲದೆ ಇರುವುದು ಸಾಲವನ್ನು ಪಡೆದುಕೊಳ್ಳುವುದು ಕಷ್ಟಕರವಾಗಿದೆ. ಹಣಕಾಸು ಇಲ್ಲದೆ ಕಚ್ಚಾ ವಸ್ತುಗಳನ್ನು ಕೊಳ್ಳುವುದಾಗಲಿ, ಯಂತ್ರ ಸಾಮಗ್ರಿಗಳನ್ನು ಕೊಂಡು ಉಪಯೋಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದು ಅವರ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗಲು ಹಾಗೂ ಸಾಲದ ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕುಲಕಸುಬುಗಳು ರೋಗಗ್ರಸ್ತವಾಗಲು ಹಾಗೂ ಅವುಗಳ ಅಳಿವಿನ ಹಂಚಿಗೆ ಹಣಕಾಸಿನ ಕೊರತೆಯೆ ಮೂಲಕಾರಣ.

೩. ಮಾರಕಟ್ಟೆಯ ಸಮಸ್ಯೆ : ಕುಲಕಸುಬುಗಳ ಅತ್ಯಂತ ಪ್ರಮುಖ ಸಮಸ್ಯೆಯೆಂದರೆ ಮಾರುಕಟ್ಟೆಯದು. ಇವುಗಳಿಗೆ ಯಾವುದೇ ರೀತಿಯ ಸಂಘಟಿತ ಮಾರುಕಟ್ಟೆ ವ್ಯವಸ್ಥೆಯನ್ನು ಹೊಂದಿಲ್ಲ. ಇವರಿಗೆ ಮಾರುಕಟ್ಟೆಯ ಬಗ್ಗೆ ಪೂರ್ಣ ಮಾಹಿತಿ ಇರುವುದಿಲ್ಲ. ಉತ್ಪನ್ನಗಳ ಗುಣಮಟ್ಟ ಕಡಿಮೆ ಇದೆ ಹಾಗೂ ಉತ್ಪನ್ನಗಳ ಬೆಲೆ ನಿಷ್ಕರ್ಷ, ವಿಂಗಡಣೆ, ಪ್ರಚಾರ, ಸಾರಿಗೆ ವ್ಯವಸ್ಥೆ ಮುಂತಾದ ಸೌಲಭ್ಯಗಳು ದೊರೆಯದೆ ಕುಲಕಸುಬುದಾರರು ತಮ್ಮ ಸರಕುಗಳನ್ನು ಮಾರಾಟಮಾಡಲು ಸಾಧ್ಯವಾಗುತ್ತಿಲ್ಲ. ಕುಲಕಸುಬುದಾರರು ತಮ್ಮ ಉತ್ಪನ್ನವನ್ನು ಊರೂರು

ಅಲೆದು, ಮನೆ–ಮನೆಗೆ ಹೋಗಿ ಮಾರಾಟ ಮಾಡುತ್ತಾರೆ. ಇವರಿಗೆ ವಾರದ ಸಂತೆ, ಜಾತ್ರೆ, ಹಬ್ಬ, ಉಚ್ಛಾಯ ಇತ್ಯಾದಿಗಳೇ ಮಾರಾಟದ ಕೇಂದ್ರಗಳು. ನಗರದಲ್ಲಿ ಜನಸಾಂದ್ರತೆ ಹೆಚ್ಚು ಇರುವ, ಸಾರ್ವಜನಿಕ ಸ್ಥಳ, ರಸ್ತೆ ಬದಿಗಳಲ್ಲಿ ಉತ್ಪನ್ನಗಳನ್ನು ಇಟ್ಟು ಮಾರಾಟ ಮಾಡುತ್ತಾರೆ. ಇವುಗಳಿಗೆ ನಿರ್ದಿಷ್ಟ ಬೆಲೆ ಎಂಬುದು ಇಲ್ಲ. ಜೊತೆಗೆ ದೊಡ್ಡ ಉದ್ದಿಮೆದಾರರ ಪೈಪೋಟಿ ಹಾಗೂ ಜಾಹಿರಾತು ಭರಾಟೆಯಲ್ಲಿ, ಇವರ ವಸ್ತುಗಳನ್ನು ಕೊಳ್ಳುವವರಿಲ್ಲವಾಗಿದೆ. ಮಾರುಕಟ್ಟೆಯ ಅಭಾವ ಮತ್ತು ಹಣದ ಅಡಚಣೆಯಿಂದಾಗಿ ಅವರು ತಮ್ಮ ಸರಕುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲು ಹಿಂಜರಿಯುವುದಿಲ್ಲ. ಇದರಿಂದ ಅವರಿಗೆ ಸಿಗುವ ಲಾಭದ ಪ್ರಮಾಣವೂ ಕಡಿಮೆ.

೪. ಯೋಗ್ಯ ಉಪಕರಣಗಳ ಅಭಾವ: ದೊಡ್ಡ ಕೈಗಾರಿಕೆಗಳಿಗೆ ಬೇಕಾಗುವಂತೆ ಕುಲಕಸುಬುದಾರರಿಗೆ ಬಾರಿ ಯಂತ್ರೋಪಕರಣಗಳೇನೂ ಬೇಕಾಗುವುದಿಲ್ಲ. ಅವುಗಳಿಗೆ ಬೇಕಾದುದು ಸಣ್ಣ ಮತ್ತು ಸೂಕ್ತ ಯೋಗ್ಯ ಯಂತ್ರೋಪಕರಣಗಳು ಮಾತ್ರ. ಆದರೆ ಅವು ಸಹ ತುಂಬಾ ಕೊರತೆಯಲ್ಲಿವೆ. ಕೆಲವು ಕಸುಬುಗಳಿಗೆ ಯಂತ್ರೋಪಕರಣಗಳೇ ಇಲ್ಲ. ಅವರು ತಮ್ಮ ಕೈಗಳಿಂದಲೇ ಸರಕುಗಳನ್ನು ತಯಾರಿಸುತ್ತಾರೆ. ಕುಂಬಾರಿಕೆಗೆ, ಬಡಗಿತನಕ್ಕೆ, ಪತ್ತಾರಿಕೆಗೆ ಹಲವು ಯಂತ್ರಗಳಿದ್ದರೂ ಅವುಗಳ ಮಾರುಕಟ್ಟೆಯ ಬೆಲೆ ಹೆಚ್ಚಾಗಿರುವುದರಿಂದ ಮತ್ತು ತಮ್ಮ ಸಾಂಪ್ರದಾಯಿಕ ಜ್ಞಾನಕ್ಕೆ ಸರಿಹೊಂದದೆ ಇರುವುದರಿಂದ ಅವುಗಳ ಬಳಕೆಯಾಗುತ್ತಿಲ್ಲ. ಆಧುನಿಕ ಯಂತ್ರೋಪಕರಣಗಳು ತುಂಬಾ ದುಬಾರಿಯಾಗಿದ್ದು ಅವುಗಳನ್ನು ಪಡೆಯುವುದು ಕುಲಕಸುಬುದಾರರಿಗೆ ಸಾಧ್ಯವಾಗುತ್ತಿಲ್ಲ. ಅವರು ಸಾಮಾನ್ಯವಾಗಿ ಹಳೆಯ ಉತ್ಪಾದನಾ ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಅವರು ಉತ್ಪಾದಿಸುವ ವಸ್ತುಗಳು ಹಳೆಯ ಮಾದರಿಯವುಗಳಾಗಿವೆ. ಕುಲಕಸುಬುದಾರರು ಹೆಚ್ಚಾಗಿ ನಿರಕ್ಷರಿಗಳೂ, ಅಜ್ಞಾನಿಗಳೂ, ಮತ್ತು ಸಂಪ್ರದಾಯ ಶರಣರೂ ಆಗಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಕುಲಕಸುಬುಗಳನ್ನು ಅಭಿವೃದ್ಧಿಗೊಳಿಸುವುದು ಕಠಿಣವಾಗಿದೆ.

೫. ತರಬೇತಿ ಮತ್ತು ಸಂಶೋಧನೆ ಸೌಲಭ್ಯದ ಕೊರತೆ: ಕುಲಕಸುಬು ಕುರಿತ ತರಬೇತಿಯಾಗಲಿ ಮತ್ತು ಅವುಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಕಾರ್ಯ ಚಟುವಟಿಕೆಗಳ ಕೊರತೆ ಇದೆ. ಕುಲಕಸುಬುಗಳು ವಂಶಪಾರಂಪರ್ಯವಾಗಿ ಬೆಳೆದು ಬಂದವುಗಳು. ಮನೆಯ ಹಿರಿಯರು ನೀಡಿದ ತರಬೇತಿ ಹಾಗೂ ಮಾಹಿತಿಗಳೇ ಇವುಗಳಿಗೆ ಆಧಾರ. ಕೆಲಸಗಳನ್ನು ನೋಡಿ–ತಿಳಿದು ಕಲಿತುಕೊಳ್ಳಬೇಕಾಗಿದೆ. ಅವುಗಳಿಗೆ ಸಂಬಂಧಿಸಿದಂತೆ ಶಾಲೆ–ಕಾಲೇಜು ಹಾಗೂ ಇತರೆ ಸಂಸ್ಥೆಗಳಲ್ಲಿ ಮಾಹಿತಿ ಮತ್ತು ತರಬೇತಿ ವ್ಯವಸ್ಥೆ ಇಲ್ಲ. ಇದರಿಂದಾಗಿ ಕುಲಕಸುಬುಗಳ ಆಧುನೀಕರಣ ಸಾಧ್ಯವಾಗುತ್ತಿಲ್ಲವಾದ ಕಾರಣ ಅವುಗಳ ಉತ್ಪಾದನಾ ವೆಚ್ಚ ಹೆಚ್ಚಿದೆ ಹಾಗೂ ಸರಕುಗಳ ಗುಣಮಟ್ಟ ಕಡಿಮೆ ಇದೆ. ಅವುಗಳ ಸ್ಥಿತ್ಯಂತರ ನಿಧಾನಗತಿಯಲ್ಲಿ ನಡೆಯುತ್ತಿದೆ.

೬. ಕೈಗಾರಿಕಾ ವಸ್ತುಗಳ ಪೈಪೋಟಿ: ಕುಲಕಸುಬುದಾರರು ತಯಾರಿಸುವ ಅನೇಕ ವಸ್ತುಗಳನ್ನು ದೊಡ್ಡ ಕೈಗಾರಿಕೆಗಳು ಉತ್ಪಾದಿಸುತ್ತಿವೆ. ದೊಡ್ಡ ಕೈಗಾರಿಕೆಗಳ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳನ್ನು ಬಳಸಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸುತ್ತವೆ. ಅವುಗಳ ಉತ್ಪಾದನಾ ವೆಚ್ಚವೂ ಕಡಿಮೆ, ಬೆಲೆಯೂ ಕಡಿಮೆ ಹಾಗೂ ಹೆಚ್ಚುಕಾಲ ಬಾಳಿಕೆ ಬರುತ್ತವೆ. ಆದರೆ ಕುಲಕಸುಬುದಾರರ ಸರಕುಗಳ ಉತ್ಪಾದನಾ ವೆಚ್ಚ ಹೆಚ್ಚು, ಗುಣಮಟ್ಟ ಕಡಿಮೆ ಹಾಗೂ ಬಾಳಿಕೆಯು ಕಡಿಮೆ ಇರುವುದರಿಂದ ಬೇಡಿಕೆ ಕಡಿಮೆ. ದೊಡ್ಡ ಕೈಗಾರಿಕೆಗಳು ಒಡ್ಡುವ ಪೈಪೋಟಿಯನ್ನು ಎದುರಿಸುವ ಶಕ್ತಿ ಹೊಂದಿಲ್ಲ.

ಇಂದಿನ ಮಾರುಕಟ್ಟೆಯಲ್ಲಿ ಕುಡಿಕೆ-ಮಡಿಕೆಗಳಿಗೆ ಬದಲಾಗಿ ಸ್ಟೀಲ್, ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ, ಇಂಡಾಲಿಯಂ ಹಾಗೂ ಪ್ಲಾಸ್ಟಿಕ್ ವಸ್ತುಗಳ ಲಭ್ಯತೆಯಿಂದಾಗಿ ಕುಂಬಾರನ ಸರುಕುಗಳ ಬೇಡಿಕೆ ಕಡಿಮೆಯಾಗಿದೆ. ಆಧುನಿಕ ಬಟ್ಟೆ ಕೈಗಾರಿಕೆಗಳ ಪೈಪೋಟಿಯಿಂದಾಗಿ ಖಾದಿ ಮತ್ತು ಕೈಮಗ್ಗದ ಬಟ್ಟೆಗಳಿಗೆ ಬೇಡಿಕೆ ಕಡಿಮೆ. ಪ್ಲಾಸ್ಟಿಕ್ ವಸ್ತುಗಳಿಂದಾಗಿ ಮೇದಾರರ ಬಿದಿರು-ಬೆತ್ತದ ಸರಕುಗಳಿಗೆ ಬೇಡಿಕೆ ಕಡಿಮೆಯಾಗಿದೆ. ಚಿನ್ನ-ಬೆಳ್ಳಿಯ ಒಡವೆ-ವಸ್ತುಗಳನ್ನು ಆಧುನಿಕ ಯಂತ್ರೋಪಕರಣಗಳು ತಯಾರು ಮಾಡುತ್ತಿರುವುದರಿಂದ ಪತ್ತಾರರ ಸಾಂಪ್ರದಾಯಿಕ ಒಡವೆ-ವಸ್ತುಗಳಿಗೆ ಬೇಡಿಕೆ ಬರುತ್ತಿಲ್ಲ. ಕೃಷಿ, ಕೈಗಾರಿಕೆ, ಗೃಹ ನಿರ್ಮಾಣ ಕ್ಷೇತ್ರಗಳಲ್ಲಿ ಕಬ್ಬಿಣ, ಉಕ್ಕು ಬಳಕೆ ಹೆಚ್ಚಾಗುತ್ತಿರುವುದರಿಂದ ಬಡಗಿ ಕೆಲಸಕ್ಕೆ ಸಂಚಕಾರ ಬಂದಿದೆ. ಬಣ್ಣ ತಯಾರಿಸುವ ಕೈಗಾರಿಕೆಗಳು ಹಳ್ಳಿಯ ಸುಣ್ಣಗಾರರ ಬದುಕನ್ನು ಮೂಲೆ ಗುಂಪಾಗಿಸಿದೆ. ಚಪ್ಪಲಿ, ಬೂಟು ಹಾಗೂ ಚರ್ಮದ ವಸ್ತುಗಳನ್ನು ತಯಾರಿಸುವ ಉದ್ಯಮಗಳು ಚಮ್ಮಾರರ ಕೆಲಸವನ್ನು ಕಸಿದುಕೊಂಡಿವೆ. ಕಲ್ಲು ಕುಟಿಗ ಅಥವಾ ವಡ್ಡ ಕಲ್ಲು-ಗಣಿಗಳ ಉದ್ಯಮದ ಪೈಪೋಟಿಯಿಂದಾಗಿ ಅವನ ಸರಕುಗಳಿಗೆ ಬೇಡಿಕೆ ಕಡಿಮೆಯಾಗಿದೆ. ಆಧುನಿಕ ಮಾರುಕಟ್ಟೆಯಲ್ಲಿ ಕೈಗಾರೀಕರಣದ ಪ್ರಭಾವದಿಂದಾಗಿ ಕುಲಕಸುಬುಗಳು ತೀವ್ರ ಪೈಪೋಟಿ ಎದುರಿಸುತ್ತಿವೆ.

ಇಂದು ಕುಲಕಸುಬುಗಳು ತಂತ್ರಜ್ಞಾನದ ಸಮಸ್ಯೆ, ಕಚ್ಚಾವಸ್ತುಗಳ ನಿರಂತರ ಪೂರೈಕೆಯ ಸಮಸ್ಯೆ, ಸಂಘಟನೆಯ ಕೊರತೆ, ಮಾರುಕಟ್ಟೆಯ ಕೊರತೆ, ಸಾಲ ಸೌಲಭ್ಯಗಳ ಸಮಸ್ಯೆ, ನಿರ್ವಹಣೆ ಕೌಶಲ್ಯದ ಕೊರತೆ, ಮೂಲ ಸೌಲಭ್ಯಗಳ ಕೊರತೆ, ಶಕ್ತಿ ಸಂಪನ್ಮೂಲಗಳ ಕೊರತೆ, ಸಾರಿಗೆ-ಸಂಪರ್ಕದ ಕೊರತೆ, ವಾಸಕ್ಕೆ ಯೋಗ್ಯವಾದ ಮನೆ ಹಾಗೂ ಕಾರ್ಯ ನಿರ್ವಹಣೆಗೆ ಸ್ಥಳದ ಕೊರತೆ, ಸಾಮಾಜಿಕ ಭದ್ರತಾ ಸೌಲಭ್ಯಗಳ ಕೊರತೆ ಹಾಗೂ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿವೆ.

ಬಳ್ಳಾರಿ ಜಿಲ್ಲೆಯ ಕುಲಕಸುಬು ಹಾಗೂ ಕುಲಕಸುಬುದಾರರಲ್ಲಿ ಹಲವಾರು ಮಿತಿ ಮತ್ತು ದೋಷಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

- ಬಳ್ಳಾರಿ ಜಿಲ್ಲೆಯಲ್ಲಿ ಬಹಳಷ್ಟು ಕುಲಕಸುಬುಗಳು ಅಳಿವಿನಂಚಿನಲ್ಲಿವೆ.
- ಜಿಲ್ಲೆಯ ಗಣಿಗಾರಿಕೆ, ಕೈಗಾರಿಕರಣ, ಮತ್ತು ತುಂಗಭದ್ರಾ ಆಣೆಕಟ್ಟಿನ ನೀರಾವರಿ ಸೌಲಭ್ಯಗಳಿಂದಾಗಿ ಕುಲಕಸುಬುಗಳ ಬೆಳವಣಿಗೆ ಕುಂಟಿತವಾಗಿದೆ.
- ಜಿಲ್ಲೆಯಲ್ಲಿ ಕುಲಕಸುಬುಗಳು ಕ್ರಿಯಾಶೀಲ ಸಂಘಗಳನ್ನು ಹೊಂದಿಲ್ಲ.
- ಕುಲಕಸುಬುದಾರರಲ್ಲಿ ಉತ್ತಮ ಸಂಘಟನೆಯಿಲ್ಲ. ಕುಲಕಸುಬುಗಳು ಅಸಂಘಟಿತ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ.
- ಕುಲಕಸುಬುದಾರರು ಹಳೆಯ ಮಾದರಿಯ ಯಂತ್ರೋಪಕರಣ ಹಾಗೂ ಉತ್ಪಾದನಾ ವಿಧಾನಗಳ ಮೂಲಕ ಕಾರ್ಯನಿರ್ವಹಿಸುತ್ತಿದ್ದಾರೆ.
- ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಸಿಕ್ಕಷ್ಟು ಮಾನ್ಯತೆ ಸರ್ಕಾರದಿಂದ ಕುಲಕಸುಬುಗಳಿಗೆ ಸಿಕ್ಕುತ್ತಿಲ್ಲ.
- ಕುಲಕಸುಬು ಘಟಕಗಳ ಉತ್ಪಾದನಾ ಸಾಮರ್ಥ್ಯ ಮತ್ತು ಪ್ರಮಾಣ ಕಡಿಮೆ.
- ಕುಂಬಾರಿಕೆ, ಮೇದಾರಿಕೆ, ಕಲ್ಲು ಕುಟಿಗತನ, ನೇಕಾರಿಕೆ, ಬಳೆಗಾರಿಕೆ, ಸಿಂಪಿಗಾರಿಕೆಯಲ್ಲಿ ಹೆಚ್ಚಾಗಿ ಮಹಿಳೆಯರೇ ಕಾರ್ಯನಿರ್ವಹಿಸುತ್ತಿದ್ದಾರೆ.
- ಕುಲಕಸುಬುಗಳನ್ನು ನಿರ್ವಹಿಸುವವರು ಹಾಗೂ ಕೆಲಸಗಾರರು ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರಾಗಿದ್ದಾರೆ.
- ಕುಲಕಸುಬುಗಳು ಕಚ್ಚಾ ವಸ್ತುವಿನ ಕೊರತೆಯನ್ನು ಎದುರಿಸುತ್ತಿವೆ.
- ಕುಲಕಸುಬುಗಳಿಗೆ ಹಣಕಾಸಿನ ಕೊರತೆ ಇದೆ.
- ಕುಲಕಸುಬುದಾರರ ಸರಕುಗಳ ಗುಣಮಟ್ಟ ಕಡಿಮೆ
- ಸರಕುಗಳ ಗಾತ್ರ ಹಾಗೂ ಗುಣಮಟ್ಟದಲ್ಲಿ ಏಕರೂಪತೆ ಇರುವುದಿಲ್ಲ.
- ಕುಲಕಸುಬುದಾರರ ಸರಕುಗಳಿಗೆ ಮಾರುಕಟ್ಟೆ ಸೌಲಭ್ಯವಿಲ್ಲ. ಸ್ಥಳೀಯ ವಾರದ ಸಂತೆ, ಜಾತ್ರೆ, ಉಚ್ಚಾಯ, ಇತ್ಯಾದಿಗಳೇ ಮಾರುಕಟ್ಟೆ ಕೇಂದ್ರಗಳಾಗಿವೆ.
- ಸರಕು ಸೇವೆಗಳ ಬೆಲೆ ನಿರ್ಧಾರಕ್ಕೆ ಯಾವುದೇ ವೈಜ್ಞಾನಿಕ ಮಾನದಂಡಗಳನ್ನು ಅಳವಡಿಸಿಕೊಂಡಿರುವುದಿಲ್ಲ.
- ಕುಲಕಸುಬುಗಳಲ್ಲಿ ಹೆಚ್ಚಿನವು ಋತುಮಾನ ಉದ್ಯೋಗಗಳು ವರ್ಷದ ಎಲ್ಲಾ ಕಾಲಗಳಲ್ಲಿ ಇವುಗಳನ್ನು ನೆಚ್ಚಿಕೊಂಡು ಜೀವನ ಸಾಗಿಸುವುದು ಕಷ್ಟ.
- ಕುಲಕಸುಬುಗಳು ವಿದ್ಯುತ್, ಡೀಸೆಲ್, ಸೀಮೆಎಣ್ಣೆ, ಕಲ್ಲಿದ್ದಲು ಇತ್ಯಾದಿ ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿವೆ.
- ಕುಲಕಸುಬುದಾರರಿಗೆ ತರಬೇತಿ ಹಾಗೂ ಸಂಶೋಧನಾ ಕೇಂದ್ರಗಳಿಲ್ಲ.
- ವಸತಿ ಹಾಗೂ ಶೆಡ್‌ಗಳ ಸ್ಥಾಪನೆಗೆ ಸ್ಥಳದ ಕೊರತೆ ಇದೆ.

- ಕುಲಕಸುಬುಗಳು ಆಧುನಿಕ ಕೈಗಾರಿಕೆಗಳಿಂದ ಪೈಪೋಟಿ ಎದುರಿಸುತ್ತಿವೆ.
- ಕುಲಕಸುಬುದಾರರ ಸರಕುಗಳಿಗೆ ಬ್ರಾಂಡ್ ನೇಮ್ ಇರುವುದಿಲ್ಲ.
- ವಸ್ತು ವಿನಿಮಯ ಪದ್ಧತಿ ಇನ್ನೂ ಹಳ್ಳಿಗಳಲ್ಲಿ ಜಾರಿಯಲ್ಲಿದೆ.
- ಸರಕುಗಳ ತಯಾರಿಕೆಯಲ್ಲಿ ಸೋವಿ ಬೆಲೆಯ ಹಾಗೂ ಕಡಿಮೆ ಗುಣಮಟ್ಟದ ಕಚ್ಚಾ ವಸ್ತುಗಳ ಬಳಕೆ ಕಂಡುಬರುತ್ತದೆ.
- ಹಣಕಾಸಿನ ಸಂಸ್ಥೆಗಳಿಂದ ಸಾಲ ಸೌಲಭ್ಯ ಪಡೆದುಕೊಳ್ಳುವುದು ಕಷ್ಟಕರ.

ಕುಲಕಸುಬುದಾರರ ಕುಟುಂಬಗಳಲ್ಲಿ ಹೆಚ್ಚಿನವು ಅವಿಭಕ್ತ ಕುಟುಂಬಗಳು ಮತ್ತು ಅವರ ಜೀವನಮಟ್ಟ ಕಡಿಮೆ.

ಕುಲಕಸುಬುಗಳಿಗಿರುವ ಅಡೆತಡೆಗಳು:

ಬಳ್ಳಾರಿ ಜಿಲ್ಲೆಯ ಕುಲಕಸುಬುಗಳು ಆಧುನಿಕ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಹಲವಾರು ಅಡೆತಡೆಗಳನ್ನು ಎದುರಿಸುತ್ತಿವೆ.

- ಉತ್ಪಾದನಾ ವೆಚ್ಚದಲ್ಲಿನ ಹೆಚ್ಚಳ.
- ಜೀವನ ವೆಚ್ಚದಲ್ಲಿ ಹೆಚ್ಚಳ ಆಧುನಿಕ ಕೈಗಾರಿಕೆಗಳಿಂದ ಪೈಪೋಟಿ.
- ಹಳೆಯ ವೃತ್ತಿಗಳು ಸುಧಾರಣೆಗೊಳ್ಳದಿರುವುದು.
- ಸೂಕ್ತವಾದ ಯಂತ್ರೋಪಕರಣಗಳು ಲಭ್ಯವಾಗದಿರುವುದು.
- ಕುಲಕಸುಬುದಾರರು ಬೇರೆ ಬೇರೆ ಉದ್ಯೋಗಗಳಲ್ಲಿ ಸೇರುತ್ತಿರುವುದು.
- ಪದೆ ಪದೆ ವೃತ್ತಿಗಳನ್ನು ಬದಲಾಯಿಸುವುದು.
- ಗ್ರಾಮೀಣ ಪ್ರದೇಶಗಳಲ್ಲಿ ಕುಲಕಸುಬುದಾರರ ಸರಕು/ಸೇವೆಗಳಿಗೆ ಬೇಡಿಕೆ ಕಡಿಮೆಯಾಗುತ್ತಿರುವುದು.
- ಸಕಾಲಕ್ಕೆ ಸರಿಯಾಗಿ ಸಾಲ ಸೌಲಭ್ಯ ದೊರೆಯದೆ ಇರುವುದು.
- ಉತ್ತಮ ಮಾರುಕಟ್ಟೆಯ ಸೌಲಭ್ಯವಿಲ್ಲದಿರುವುದು.
- ಉತ್ತಮ ಸಾರಿಗೆ ಸಂಪರ್ಕದ ಕೊರತೆ.
- ಮಾರುಕಟ್ಟೆ ಮಾಹಿತಿಗಳ ಕೊರತೆ.
- ವಸ್ತುಗಳ ಗುಣಮಟ್ಟವನ್ನು ನಿರ್ಧರಿಸುವ ಸರಿಯಾದ ಮಾನದಂಡಗಳಿಲ್ಲದಿರುವುದು.
- ವೈಜ್ಞಾನಿಕ ಬೆಲೆ ನಿರ್ಧರಿಸುವ ವಿಧಾನಗಳಿಲ್ಲದಿರುವುದು. ವಸ್ತುಗಳ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳದಿರುವುದು.
- ವೃತ್ತಿ ತರಬೇತಿ ಸಂಸ್ಥೆಗಳಿಲ್ಲದಿರುವುದು.
- ಸರಕಾರ ಕುಲಕಸುಬುಗಳ ಅಭಿವೃದ್ಧಿಗೆ ಗಮನಹರಿಸದಿರುವುದು.

– ಕುಲಕಸುಬುದಾರರು ಅನಕ್ಷರಸ್ಥರು, ಅವಿದ್ಯಾವಂತರೂ ಹಾಗೂ ಸಮಾಜದ ಕೆಳವರ್ಗಗಳಿಗೆ ಸೇರಿರುವುದು.

ಪರಿಹಾರ:

ಬಳ್ಳಾರಿ ಜಿಲ್ಲೆಯಲ್ಲಿನ ಕುಲಕಸುಬುದಾರರು ಆರ್ಥಿಕ, ತಾಂತ್ರಿಕ, ಸಾಮಾಜಿಕ ಹಾಗೂ ಸಂಘಟನಾತ್ಮಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳ ಪರಿಹಾರಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೈಗಾರಿಕಾ ನೀತಿಗನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ. ಗುಡಿ ಕೈಗಾರಿಕೆಗಳ ಸಮಸ್ಯೆಗಳ ಪರಿಹಾರಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

ಸಂಘಟನಾ ಸಹಾಯ: ಸಣ್ಣ ಮತ್ತು ಗುಡಿ ಕೈಗಾರಿಕೆಗಳನ್ನು ನಿರ್ವಹಿಸುವವರಲ್ಲಿ ಸಂಘಟನಾ ಕೊರತೆ ಇದೆ. ಈ ಸಂಘಟನಾ ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ. ಮುಖ್ಯವಾಗಿ ಅನೇಕ ಸಂಘ ಸಂಸ್ಥೆಗಳನ್ನು ಅದು ಸ್ಥಾಪಿಸಿದೆ. ತಾಂತ್ರಿಕ ಮತ್ತು ಮಾರಾಟದ ವಿಷಯಗಳಲ್ಲಿ ಸಲಹೆ ನೀಡಲು 'ಕೇಂದ್ರೀಯ ಸಣ್ಣ ಕೈಗಾರಿಕೆಗಳ ಸಂಘ', ಕೈಗಾರಿಕಾ ಎಸ್ಟೇಟುಗಳನ್ನು ಸಂಘಟಿಸಲು ಮತ್ತು ಕಚ್ಚಾ ಸಾಮಗ್ರಿಗಳು ಹಾಗೂ ಬಿಡಿ ಭಾಗಗಳನ್ನು ಪೂರೈಸಲು 'ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ'ವನ್ನು ಸ್ಥಾಪಿಸಿದೆ. ಇದಲ್ಲದೆ ವಿವಿಧ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ರಾಷ್ಟ್ರ ಮಟ್ಟದ ಮಂಡಳಿಗಳನ್ನು ಸ್ಥಾಪಿಸಿದೆ. ಅವುಗಳಲ್ಲಿ ಮುಖ್ಯವಾದವುಗಳು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಗೃಹ ಕೈಗಾರಿಕಾ ಮಂಡಳಿ, ಅಖಿಲ ಭಾರತ ಕುಶಲ ಕೈಗಾರಕಾ ಮಂಡಳಿ, ಅಖಿಲ ಭಾರತ ಕೈಮಗ್ಗ ಮಂಡಳಿ, ಕೇಂದ್ರೀಯ ರೇಷ್ಮೆ ಮಂಡಳಿ, ನಾರು ನಿಗಮ ಮುಂತಾದುವುಗಳು ಸಣ್ಣ ಮತ್ತು ಗುಡಿಕೈಗಾರಿಕೆಗಳ ಅಭಿವೃದ್ಧಿಗೆ ಶ್ರಮಿಸುತ್ತಿವೆ.

ತಾಂತ್ರಿಕ ಸಹಾಯ: ಕುಲಕಸುಬುಗಳು, ಗುಡಿಕೈಗಾರಿಕೆಗಳು ವಂಶಪಾರಂಪರ್ಯವಾಗಿ ಹಳೆಯ ಯಂತ್ರ, ಸಾಧನ ಸಲಕರಣೆಗಳನ್ನು ಬಳಸಿಕೊಂಡು ಬರುತ್ತಿವೆ. ಇದರಿಂದಾಗಿ ಅವು ತಯಾರಿಸುವ ವಸ್ತುಗಳ ಗುಣಮಟ್ಟ ಮತ್ತು ಗಾತ್ರಗಳು ಉತ್ತಮವಾಗಿಲ್ಲ. ಆದ್ದರಿಂದ ಸರಕಾರಗಳು ಇವುಗಳಿಗೆ ತಾಂತ್ರಿಕ ಸಹಾಯ ನೀಡುವ ಕ್ರಮ ಕೈಗೊಂಡಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಹೊಸ ಉತ್ಪಾದನಾ ಕ್ಷೇತ್ರದ ಶೋಧನೆ, ಉತ್ಪಾದನಾ ತಂತ್ರದ ಸಂಶೋಧನೆ, ಸಲಕರಣೆಗಳ ಪೂರೈಕೆ, ಸ್ಥಾವರ ಮತ್ತು ಯಂತ್ರೋಪಕರಣಗಳ ಸ್ಥಾಪನೆಗೆ ನೆರವು, ಇತ್ಯಾದಿ. ಈ ಕಸುಬುಗಳಿಗೆ ತಾಂತ್ರಿಕ ನೆರವನ್ನು ನೀಡಲು ಸರ್ಕಾರ 'ಕೇಂದ್ರೀಯ ಸಣ್ಣ ಕೈಗಾರಿಕಾ ಸಂಸ್ಥೆ'ಯನ್ನು ಸ್ಥಾಪಿಸಿದ್ದು ಇದು ೧೬ ಸಣ್ಣ ಕೈಗಾರಿಕಾ ಕೇಂದ್ರಗಳು ಮತ್ತು ೬೫ ವಿಸ್ತರಣಾ ಕೇಂದ್ರಗಳನ್ನು ಹೊಂದಿದೆ. ಇವುಗಳು ತಾಂತ್ರಿಕ ಸಹಾಯ, ಉದ್ಯಮ ಸ್ಥಾಪನೆ, ಮಾದರಿ ಯೋಜನೆ ತಯಾರಿ, ವಸ್ತುಗಳ ಮಾರಾಟಕ್ಕೆ

ಪ್ರಚಾರ ಮುಂತಾದ ವಿಷಯಗಳಲ್ಲಿ ನೆರವು ಮತ್ತು ಸಲಹೆ ನೀಡುತ್ತದೆ. ಗುಡಿ ಕೈಗಾರಿಕೆಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ದೇಶೀಯವಾಗಿ ತಯಾರಿಸಲು ಎರಡು ಮಾದರಿ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಿದೆ. ಪ್ರತಿಯೊಂದು ರಾಜ್ಯದಲ್ಲೂ ಇಂತಹ ಕೇಂದ್ರ ಸ್ಥಾಪನೆಗೊಳ್ಳಬೇಕೆಂದು ಸರ್ಕಾರ ಸೂಚಿಸಿದೆ. ಯಂತ್ರಗಳು ಮತ್ತು ಸರಕುಗಳ ಮಾದರಿಯನ್ನು ಭಾರತೀಯ ಪರಿಸ್ಥಿತಿಗೆ ಹೊಂದುವಂತೆ ತಯಾರಿಸಲು 'ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಫಾರ್ ಇಂಡಸ್ಟ್ರಿಯಲ್ ಡಿಸೈನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದೆ. ಗುಡಿ ಕೈಗಾರಿಕೆಗಳಲ್ಲಿ ಸಂಶೋಧನೆಗೆ ನೆರವಾಗಲು ಸಣ್ಣ ಕೈಗಾರಿಕೆಗಳ ಸಂಶೋಧನಾಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿದೆ. ಈ ಮಂಡಳಿಗಳ ನೆರವನ್ನು ವಿವಿಧ ಕುಲಕಸುಬುದಾರರು ಪಡೆದುಕೊಂಡು ತಮ್ಮ ಉದ್ಯೋಗಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

ಹಣಕಾಸಿನ ಸಹಾಯ: ಮೂಲಭೂತವಾಗಿ ಸಣ್ಣ ಮತ್ತು ಗುಡಿ ಕೈಗಾರಿಕೆಗಳು ಹಣಕಾಸಿನ ಕೊರತೆಯಿಂದಾಗಿ ಮೂಲೆ ಗುಂಪಾಗುತ್ತಿವೆ. ಹಣಕಾಸಿನ ಕೊರತೆಯನ್ನು ನಿವಾರಿಸಲು ಸರ್ಕಾರ ಅವುಗಳನ್ನು ಆದ್ಯತಾ ವಲಯ ಎಂದು ಪರಿಗಣಿಸಿದೆ. ರಾಜ್ಯ ಹಣಕಾಸಿನ ಸಂಸ್ಥೆಗಳು ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲವನ್ನು ನೀಡುತ್ತಿವೆ. ಸಣ್ಣ ಮತ್ತು ಗುಡಿ ಕೈಗಾರಿಕೆಗಳಿಗೆ ಹಣಕಾಸು ಪೂರೈಸಲು 'ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಧಿ, ರಾಷ್ಟ್ರೀಯ ಈಕ್ವಿಟಿ ನಿಧಿ, ಏಕ ಕಿಂಡಿ ಸೌಲಭ್ಯ, ಭಾರತದ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳನ್ನು ಸ್ಥಾಪಿಸಿದೆ. ಇವಲ್ಲದೆ ವಾಣಿಜ್ಯ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳೂ, ಸಹಕಾರಿ ಸಂಘಗಳು, ಭಾರತೀಯ ಸ್ಟೇಟ್ ಬ್ಯಾಂಕ್‌ಗಳು ಸಹ ಈ ಘಟಕಗಳಿಗೆ ಹಣಕಾಸಿನ ನೆರವನ್ನು ನೀಡುತ್ತವೆ. ಕುಲಕಸುಬುದಾರರು ಈ ಹಣಕಾಸಿನ ಸಂಸ್ಥೆಗಳು ನೀಡುವ ಧನಸಹಾಯ ಪಡೆದು ತಮ್ಮ ವೃತ್ತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

ಕಚ್ಚಾ ಸಾಮಗ್ರಿಗಳ ಪೂರೈಕೆ: ಸಾಮಾನ್ಯವಾಗಿ ಎಲ್ಲಾ ಕುಲಕಸುಬುದಾರರು ಎದುರಿಸುವ ಮೂಲ ಸಮಸ್ಯೆ ಕಚ್ಚಾವಸ್ತುಗಳ ಪೂರೈಕೆಯಲ್ಲಿನ ಕೊರತೆ. ಈ ಸಮಸ್ಯೆಯನ್ನು ನಿವಾರಿಸಲು ಪ್ರಮುಖ ಕಚ್ಚಾ ಸಾಮಗ್ರಿಗಳನ್ನು ರಾಜ್ಯ ಸಣ್ಣ ಕೈಗಾರಿಕಾ ನಿಗಮಗಳ ಮೂಲಕ ವಿತರಿಸಲು ಕ್ರಮ ಕೈಗೊಂಡಿದೆ. ಸರ್ಕಾರ ಕಚ್ಚಾ ವಸ್ತುಗಳ ಪೂರೈಕೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಲು ಕಚ್ಚಾ ಸರಕುಗಳ ಕಾಪು ದಾಸ್ತಾನು ಸೌಲಭ್ಯವನ್ನು ಜಾರಿಗೆ ತಂದಿದೆ. ಸರ್ಕಾರಿ ವ್ಯಾಪಾರಿ ನಿಗಮವು ಕೆಲವು ಕಚ್ಚಾ ಸರಕುಗಳನ್ನು ಆಮದು ಮಾಡಿಕೊಂಡು ವಿತರಿಸಲು ವ್ಯವಸ್ಥೆ ಮಾಡಿದೆ. ಕುಲಕಸುಬುದಾರರು ಸರ್ಕಾರದ ಈ ಸೌಲಭ್ಯವನ್ನು ಬಳಸಿಕೊಂಡು ಕಚ್ಚಾವಸ್ತುಗಳ ಕೊರತೆಯನ್ನು ನಿವಾರಿಸಿಕೊಳ್ಳಬಹುದು.

ಮಾರುಕಟ್ಟೆಯ ಸಹಾಯ: ಕುಲಕಸುಬುದಾರರು ತಯಾರಿಸಿದ ಸರಕುಗಳನ್ನು ಮಾರಾಟ ಮಾಡುವುದು ಬಹುದೊಡ್ಡ ಸಮಸ್ಯೆ. ಇವರಿಗೆ ಬೃಹತ್ ಕೈಗಾರಿಕಾ ವಸ್ತುಗಳ ಪೈಪೋಟಿ ಇದೆ. ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ. ಕುಲಕಸುಬುದಾರರ ಕೆಲವು ನಿರ್ದಿಷ್ಟ ಸರಕುಗಳನ್ನು ಸರ್ಕಾರವೇ ಕೊಳ್ಳುವುದು, ಪೈಪೋಟಿ ಸಾಮರ್ಥ್ಯ ಹೆಚ್ಚಿಸುವ ಸಲುವಾಗಿ ಗುಣಮಟ್ಟ ಮಾರಾಟಕ್ಕಾಗಿ ಸಹಕಾರಿ ಸಂಘಗಳ ಸ್ಥಾಪನೆ ಮುಂತಾದವು. ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ ಮಾರುಕಟ್ಟೆ ಸೌಲಭ್ಯ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಸಣ್ಣ ಗುಡಿಕೈಗಾರಿಕೆಗಳ ಸರಕುಗಳ ಪ್ರಚಾರ ಮತ್ತು ಅವುಗಳ ಪ್ರದರ್ಶನ ಕಾರ್ಯಕ್ರಮಗಳನ್ನು ಸರ್ಕಾರ ತಾಲೂಕು, ಜಿಲ್ಲಾ, ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಏರ್ಪಡಿಸುತ್ತಿದೆ. ಅಲ್ಲದೆ ಸರಕುಗಳ ಮಾರಾಟಕ್ಕಾಗಿ ಸಗಟು ಮಾರಾಟ ಕೇಂದ್ರಗಳನ್ನು ಸ್ಥಾಪಿಸಿದೆ. ಜೊತೆಗೆ ಈ ಸರಕುಗಳನ್ನು ಧನಸಹಾಯದೊಂದಿಗೆ ಮಾರಾಟಮಾಡುವ ವ್ಯವಸ್ಥೆ ಮಾಡಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಣ್ಣ ಮತ್ತು ಗುಡಿಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಯನ್ನು ಪ್ರೋತ್ಸಾಹಿಸಲು ಅನೇಕ ಉತ್ತೇಜನಗಳನ್ನು ನೀಡುತ್ತಿದೆ. ಅವುಗಳಲ್ಲಿ ಬಂಡವಾಳ ಸಹಾಯಧನ, ಸುಂಕದ ವಿನಾಯಿತಿ, ಕುಶಲಕರ್ಮಿಗಳ ನೈಪುಣ್ಯತೆ ಹೆಚ್ಚಿಸಲು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಉತ್ತೇಜನ ನೀಡಲು 'ಗ್ರಾಮೀಣ ಕೈಗಾರಿಕಾ ಯೋಜನೆ, ಗ್ರಾಮೀಣ ಕುಶಲಕರ್ಮಿ ಯೋಜನೆ ಜಾರಿಗೆ ತಂದಿದೆ. ಇವುಗಳ ಅಭಿವೃದ್ಧಿಗಾಗಿ ರಾಷ್ಟ್ರದಾದ್ಯಂತ ಕೈಗಾರಿಕಾ ಎಸ್ಟೇಟುಗಳು, ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸರ್ಕಾರ ಸ್ಥಾಪಿಸಿದೆ. ನಿರಂತರವಾಗಿ ಇಂಧನ ಮತ್ತು ವಿದ್ಯುತ್ ಪೂರೈಸುವ ಯೋಜನೆಗಳನ್ನು ಜಾರಿಗೆ ತಂದಿದೆ. ಇವುಗಳ ಸಹಾಯ, ಸೌಲಭ್ಯಗಳನ್ನು ಉಪಯೋಗಿಸಿಕೊಂಡು ವಿವಿಧ ಕುಲಕಸುಬುದಾರರು ತಮ್ಮ ವೃತ್ತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ವಿವಿಧ ವೃತ್ತಿದಾರರ ಅಭಿವೃದ್ಧಿಗೆ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿದೆ. ಗ್ರಾಮೀಣ ವೃತ್ತಿದಾರರಲ್ಲಿ ಉದ್ಯಮಶೀಲತೆಯನ್ನು ಗುರುತಿಸಿ, ಅವಶ್ಯಕ ಮಾಹಿತಿ ಪೂರೈಸಿ, ತರಬೇತಿ ನೀಡಿ, ನಂತರದ ಸಹಾಯ ಮಾಡಿ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸೃಷ್ಟಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವೃತ್ತಿದಾರರು ಸ್ವಾವಲಂಬಿಗಳಾಗಲು ಸರ್ಕಾರ ಪ್ರತಿ ಜಿಲ್ಲೆಗೊಂದರಂತೆ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿದೆ. ಇವುಗಳು ಚಿಕ್ಕ, ಗುಡಿಕೈಗಾರಿಕೆಗಳು ಹಾಗೂ ವಂಶಪಾರಂಪರ್ಯವಾಗಿ ಬೆಳೆದು ಬಂದ ವೃತ್ತಿಗಳ ಅಭಿವೃದ್ಧಿಗೆ ಅವಶ್ಯವಿರುವ ಎಲ್ಲಾ

ಸೇವೆಗಳನ್ನು ನೀಡುತ್ತಿವೆ. ವಿವಿಧ ವೃತ್ತಿದಾರರು ಈ ಸಂಸ್ಥೆಗಳಲ್ಲಿ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ನಂತರ ಈ ಸಂಸ್ಥೆ ಅವರಿಗೆ ಬೇಕಾದ ಉದ್ದಿಮೆಯ ಜಾಗ, ವಿದ್ಯುತ್, ಹಣಕಾಸು, ತೆರಿಗೆ ರಿಯಾಯತಿ, ಕಚ್ಚಾ ಸಾಮಗ್ರಿ ಪೂರೈಕೆ ಮತ್ತು ಸರ್ಕಾರಿ ಸಂಸ್ಥೆಗಳ ಮೂಲಕ ಉತ್ಪಾದಿತ ಸರಕುಗಳನ್ನು ಮಾರುವ ಸೌಲಭ್ಯವನ್ನು ಒದಗಿಸುತ್ತಿವೆ. ಈ ಸಂಸ್ಥೆಗಳು ವೃತ್ತಿದಾರರ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸುತ್ತದೆ.

ರಾಜ್ಯ ಹಣಕಾಸಿನ ನಿಗಮವು ಕರಕುಶಲರಿಗೆ, ದೈಹಿಕ ಅಂಗವಿಕಲರಿಗೆ, ಪರಿಶಿಷ್ಟ ಜಾತಿ/ಪಂಗಡದವರಿಗೆ, ಮಹಿಳಾ ಉದ್ಯಮಶೀಲರಿಗೆ ಹಣಕಾಸಿನ ನೆರವು ನೀಡುತ್ತದೆ.

ತಾಂತ್ರಿಕ ಸಲಹಾ ಸಂಸ್ಥೆಗಳು ಗ್ರಾಮೀಣ ಪ್ರದೇಶಗಳಲ್ಲಿರುವ ವಿವಿಧ ವೃತ್ತಿದಾರರಿಗೆ ತಾಂತ್ರಿಕ ಮತ್ತು ನಿರ್ವಹಣಾ ವಿಷಯಗಳ ಕುರಿತು ಸಲಹೆ ಸೂಚನೆಗಳನ್ನು ನೀಡುವುದು. ಗ್ರಾಮೀಣ ಜನರಲ್ಲಿ ಉದ್ಯಮಶೀಲತೆ ಬೆಳೆಯಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವೃತ್ತಿದಾರರಿಗೆ ಒಂದೇ ಸೂರಿನಡಿ ಸೇವೆ, ತಾಂತ್ರಿಕ, ನಿರ್ವಹಣೆಯ ಹಾಗೂ ಮಾರುಕಟ್ಟೆಯ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಒದಗಿಸುವುದು.

ರಾಜ್ಯ ಕೈಗಾರಿಕಾ ಅಭಿವೃದ್ಧಿ ನಿಗಮ ಚಿಕ್ಕ ಮತ್ತು ಗುಡಿಕೈಗಾರಿಕೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು. ಚಿಕ್ಕ ಕೈಗಾರಿಕಾ ಸೇವಾ ಸಂಸ್ಥೆಗಳು ತಾಂತ್ರಿಕ ಸಮಾಲೋಚನೆ, ಸಲಹಾ ಸೇವೆಗಳು, ವಿನ್ಯಾಸಗಳ ಪೂರೈಕೆ, ತರಬೇತಿ ಕಾರ್ಯಗಾರ ಸೌಲಭ್ಯ, ಗುಣಮಟ್ಟ ಪರೀಕ್ಷೆಯ ಸೌಲಭ್ಯ ಮತ್ತು ಮಾರುಕಟ್ಟೆಯ ಸಹಾಯ ನೀಡುವುದು. ಸೀಡಾಟ್ ಕರ್ನಾಟಕ ಉದ್ಯಮಶೀಲತೆ ಅಭಿವೃದ್ಧಿ ಕೇಂದ್ರ ಯುವಕರಲ್ಲಿ ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿಗಾಗಿ ಸಂಶೋಧನೆ ಹಾಗೂ ತರಬೇತಿ ಕಾರ್ಯಗಾರ ನಡೆಸುತ್ತಿದೆ. ರಾಷ್ಟ್ರೀಯ ಚಿಕ್ಕ ಕೈಗಾರಿಕಾ ನಿಗಮ ದೇಶದಾದ್ಯಂತ ಪ್ರಾದೇಶಿಕ ಶಾಖೆಗಳನ್ನು ಹೊಂದಿದೆ. ಚಿಕ್ಕ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳ ಪೂರೈಕೆ ಹಾಗೂ ಮಾರುಕಟ್ಟೆ ಚಟುವಟಿಕೆಗಳಿಗೆ ಸಹಕರಿಸುವುದು.

ಗ್ರಾಮೀಣ ಭಾಗದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಉತ್ತೇಜನ ನೀಡುವುದಕ್ಕಾಗಿ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅವು ಸ್ಥಳೀಯ ಗ್ರಾಹಕರ ಬೇಡಿಕೆಯ ವಸ್ತುಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತವೆ. ಈ ಘಟಕಗಳಿಗೆ ಅವಶ್ಯಕ ಸೌಕರ್ಯ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ಚಿಕ್ಕ ಕೈಗಾರಿಕಾ ಅಭಿವೃದ್ಧಿ ಸಂಸ್ಥೆ. ಹಣಕಾಸು ಸಂಸ್ಥೆಗಳು ಮತ್ತು ಸೇವಾ ಸಂಘಗಳ ಮಧ್ಯ ಸಂಪರ್ಕ ಏರ್ಪಡಿಸುವ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತದೆ. ಈ ಸಂಸ್ಥೆ ಚಿಕ್ಕ ಹಾಗೂ ಗುಡಿ ಕೈಗಾರಿಕೆಗಳಿಗೆ ಬೇಕಾಗಿರುವ ಕಚ್ಚಾ ವಸ್ತುಗಳನ್ನು ಅಂದಾಜು ಮಾಡುವುದು. ರಾಷ್ಟ್ರೀಯ ಉದ್ಯಮಶೀಲತೆ ಮತ್ತು ಚಿಕ್ಕ ಉದ್ದಿಮೆ

ಅಭಿವೃದ್ಧಿ ಸಂಸ್ಥೆ ದೇಶದಾದ್ಯಂತ ವೃತ್ತಿಗಾರರ ಆಯ್ಕೆ, ತರಬೇತಿ, ಹಾಗೂ ಸಂಶೋಧನಾ ಕಾರ್ಯಗಾರಗಳನ್ನು ಏರ್ಪಡಿಸುತ್ತದೆ. ಭಾರತೀಯ ಚಿಕ್ಕ ಅಭಿವೃದ್ಧಿ ಬ್ಯಾಂಕ್ ಸಣ್ಣ ಮತ್ತು ಗುಡಿಕೈಗಾರಿಕೆಗಳ ಸ್ಥಾಪನೆ ಮತ್ತು ತರಬೇತಿಯನ್ನು ವೃದ್ಧಿಸುವ ಈ ಬ್ಯಾಂಕು ಉನ್ನತಮಟ್ಟದ ಸಂಸ್ಥೆಯಾಗಿದೆ. ಚಿಕ್ಕ ಚಿಕ್ಕ ಕೈಗಾರಿಕಾ ರಂಗದಲ್ಲಿ ತೊಡಗಿರುವ ಎಲ್ಲಾ ಸಂಸ್ಥೆಗಳ ನಡುವೆ ಸಮನ್ವಯ ಸಾಧಿಸುವ ಕಾರ್ಯ ಮಾಡುತ್ತದೆ. ಈ ಬ್ಯಾಂಕು ಸಣ್ಣ ಪ್ರಮಾಣದ ಘಟಕಗಳ ಆಧುನೀಕರಣ, ವಿಸ್ತರಣಾ ಕಾರ್ಯ ಕೈಗೊಳ್ಳುವುದು. ಗ್ರಾಮೀಣ, ಗುಡಿ ಮತ್ತು ಅತೀ ಚಿಕ್ಕ ಉದ್ದಿಮೆಗಳಿಗೆ ವಿವಿಧ ಯೋಜನೆಗಳನ್ನು ರೂಪಿಸುವುದು.

ಪ್ರಧಾನಮಂತ್ರಿ ರೋಜಗಾರ ಯೋಜನೆ ಗ್ರಾಮೀಣ ಯುವಕರಿಗೆ ಉದ್ಯೋಗ ನೀಡುವುದು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಸ್ವಯಂ ಉದ್ಯೋಗದಲ್ಲಿ ತೊಡಗುವುದೇ ನಿರುದ್ಯೋಗ ನಿವಾರಿಸುವ ದಾರಿಯೆಂಬುದು ಈ ಯೋಜನೆಯ ಘೋಷಣೆ. ೧೮ ರಿಂದ ೨೫ ವರ್ಷದೊಳಗಿನ ಯುವಕರು ಸ್ವಂತ ಉದ್ಯೋಗ ಕೈಗೊಳ್ಳಲು ಹಣಕಾಸಿನ ನೆರವು, ತರಬೇತಿ ಸೌಲಭ್ಯಗಳನ್ನು ಒದಗಿಸುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿರುವ ವಿವಿಧ ಕಸುಬುದಾರರಿಗೆ ಉತ್ತೇಜನ ನೀಡುವಂತಹ ಹಲವಾರು ತರಬೇತಿ ಯೋಜನೆಗಳನ್ನು ರಾಷ್ಟ್ರೀಯ ಚಿಕ್ಕ ಉದ್ದಿಮೆಗಳ ವಿಸ್ತರಣಾ ಸಂಸ್ಥೆ ನಿರ್ವಹಿಸುತ್ತದೆ.

ಪ್ರಧಾನಿ ಪಂಡಿತ ನೆಹರು ಅವರು ಒಂದು ಸಂದರ್ಭದಲ್ಲಿ "ಮಹಿಳೆಯರು ಮುಂದುವರಿದರೆ ಕುಟುಂಬ, ಗ್ರಾಮ ಮತ್ತು ದೇಶ ಮುಂದುವರಿಯುತ್ತದೆ" ಎಂದು ಹೇಳಿದ್ದರು. ದೇಶದ ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರ ಪಾತ್ರವನ್ನು ಈ ಹೇಳಿಕೆ ವಿಷದಪಡಿಸುತ್ತದೆ. ಗ್ರಾಮೀಣ ಮಹಿಳೆಯರು ನೇಕಾರಿಕೆಯಲ್ಲಿ, ಮೇದಾರಿಕೆ ವೃತ್ತಿ, ಒಕ್ಕಲುತನ ಮುಂತಾದ ವೃತ್ತಿಯಲ್ಲಿ ಗಮನಾರ್ಹ ಸಾಧನೆಗೈಯುತ್ತಿದ್ದಾರೆ. ಇಂದಿನ ದಿನಗಳಲ್ಲಿ ಗ್ರಾಮೀಣ ಮಹಿಳೆಯರು ಉನ್ನತ ಶಿಕ್ಷಣ, ಆರ್ಥಿಕ ಚಟುವಟಿಕೆಗಳು, ರಾಜಕೀಯ ಬೆಂಬಲ ಮತ್ತು ಸಾಮಾಜಿಕವಾಗಿ ಗುರುತಿಸುವಿಕೆಯಲ್ಲಿ ಸಾಕಷ್ಟು ಅತ್ಯುತ್ತಮ ಅವಕಾಶಗಳನ್ನು ಪಡೆಯುತ್ತಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಪುರುಷರಿಗೆ ಸಮನಾಗಿ ನಿಲ್ಲುವ ಆತ್ಮಸ್ಥೈರ್ಯ ಹೊಂದಿದ್ದು, ಸಾಧ್ಯವಾದರೆ ಪುರುಷರನ್ನು ಮೀರಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಮಹಿಳೆಯರು ಪ್ರತಿಯೊಂದು ರಂಗದಲ್ಲಿ ಪ್ರವೇಶಿಸುತ್ತಿರುವುದು ಸಾಮಾನ್ಯವಾಗಿದೆ. ಮಹಿಳೆಯರು ವಿವಿಧ ಕಾರ್ಯ ಕ್ಷೇತ್ರಗಳಲ್ಲಿ ಪ್ರವೇಶಿಸಿ ಯಶಸ್ಸು ಗಳಿಸುತ್ತಿದ್ದಾರೆ. ಮಹಿಳೆಯರು ಮಣ್ಣಿನ ಪಾತ್ರೆ, ಸಾಬೂನು ತಯಾರಿಕೆ, ಊದು ಬತ್ತಿ, ಬೆಲ್ಲ ತಯಾರಿಕೆ, ಮೇಣದಬತ್ತಿ, ಉಪ್ಪಿನಕಾಯಿ, ಹಪ್ಪಳ, ಚಟ್ನಿಪುಡಿ, ಮಸಾಲೆ, ರೊಟ್ಟಿ ಇತ್ಯಾದಿ ಪದಾರ್ಥಗಳನ್ನು ತಯಾರಿಸುವ ಕ್ಷೇತ್ರಗಳಲ್ಲಿ ಯಶಸ್ಸನ್ನು ಕಾಣುತ್ತಿದ್ದಾರೆ.

ಭಾರತದಲ್ಲಿನ ಮಹಿಳಾ ವೃತ್ತಿದಾರರನ್ನು ಅಭಿವೃದ್ಧಿ ಹೊಂದಿದ ದೇಶಗಳೊಡನೆ ಹೋಲಿಸಿದರೆ ಪ್ರಗತಿಯು ಸಮಾಧಾನಕರ ಎನಿಸುವುದಿಲ್ಲ. ಮಂದಗತಿಯ ಪ್ರಗತಿಗೆ ಹಲವು ಕಾರಣಗಳಿವೆ. ಮುಖ್ಯವಾಗಿ ಭಾರತೀಯ ಸಮಾಜ ಪುರುಷ ಪ್ರಧಾನ ಸಮಾಜ. ಅಂದರೆ ಪುರುಷರು ಕೆಲಸಕ್ಕಾಗಿ ಮನೆಯ ಹೊರಗೆ ಹೋಗಬೇಕು ಮಹಿಳೆಯರು ಮನೆಯ ಕೆಲಸಕಾರ್ಯಗಳನ್ನು ನಿರ್ವಹಿಸಬೇಕು. ಶಿಕ್ಷಣದ ಮಟ್ಟ ಹಾಗೂ ಪ್ರತ್ಯೇಕ ತರಬೇತಿ ವ್ಯವಸ್ಥೆ ಇಲ್ಲದಿರುವುದರಿಂದ ಇವರಲ್ಲಿ ಉದ್ಯಮಶೀಲತೆ ಯೋಗ್ಯತೆಯ ಕೊರತೆ ಕಂಡುಬರುತ್ತದೆ. ಇವರಿಗೆ ಯಾವುದೇ ಹಣಕಾಸಿನ ಸಂಸ್ಥೆಗಳು ಹಣಕಾಸು ಒದಗಿಸುವುದಿಲ್ಲ. ಕಾರಣ ಇವರು ಹೆಸರಿಗೆ ಯಾವುದೇ ಆಸ್ತಿ ಹೆಸರಿನಲ್ಲಿರುವುದಿಲ್ಲ. ಇವರು ವಿವಿಧ ವೃತ್ತಿಗಳನ್ನು ನಡೆಸುತ್ತಿದ್ದರೂ ಕಚ್ಚಾ ಸಾಮಗ್ರಿಗಳ ಕೊರತೆ, ವಸ್ತುಗಳ ಮಾರಾಟದ ಸಮಸ್ಯೆ ಸಾರಿಗೆ ಸಂಪರ್ಕದ ಸಮಸ್ಯೆಗಳನ್ನು ಎದುರಿಸುತ್ತಾರೆ. ಆದರೆ ಸರಕಾರಗಳು ಮಹಿಳಾ ಉದ್ಯಮಶೀಲತೆಯನ್ನು ಹೆಚ್ಚಿಸುವ ಪ್ರಯತ್ನ ಮಾಡುತ್ತಿರುವುದು ಆಶಾದಾಯಕವೆನಿಸುತ್ತದೆ.

ಭಾರತೀಯ ಸ್ತ್ರೀ ಪುರುಷರಲ್ಲಿರುವ ಅನಕ್ಷರತೆ, ಅಂಧಕಾರ, ಮೂಡನಂಬಿಕೆ ಇತ್ಯಾದಿ ಅಂಶಗಳು ಕರಕುಶಲಕಲೆಗಳು, ಗ್ರಾಮೀಣ ವೃತ್ತಿಗಳು ಹಾಗೂ ವಿವಿಧ ಕುಲಕಸುಬುಗಳು ಸರಿಯಾದ ಬೆಳವಣಿಗೆಯನ್ನು ಕಾಣದೇ ಇರಲು ಕಾರಣವಾಗಿದೆ.

ಸಮಕಾಲೀನತೆಯ ಸಂದರ್ಭದಲ್ಲಿ ಕುಲಕಸುಬುಗಳಿಗೆ ಹೆಚ್ಚಿನ ಸದಾವಕಾಶಗಳಿರುವುದು ಕಂಡುಬರುತ್ತದೆ. ಅಂತಹವುಗಳನ್ನು ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

- ಕುಲಕಸುಬುದಾರರು ವೃತ್ತಿ ಸಂಘಗಳನ್ನು ರಚಿಸಿಕೊಳ್ಳಬೇಕು.
- ಕುಲಕಸುಬುದಾರರೆಲ್ಲರೂ ತಮ್ಮ ವೃತ್ತಿ ಸಂಘಗಳಲ್ಲಿ ಕಡ್ಡಾಯವಾಗಿ ಸದಸ್ಯತ್ವವನ್ನು ಪಡೆದು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕು.
- ಕುಲಕಸುಬುದಾರರೆಲ್ಲರೂ ಒಟ್ಟಾಗಿ ಕೂಡಿಕೊಂಡು ಪ್ರಮುಖ ವಿಷಯಗಳ ಕುರಿತು ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.
- ಕುಲಕಸುಬುಗಳ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳಬೇಕು.
- ವೃತ್ತಿ ಸಂಘಗಳು ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ಆಗಾಗ್ಗೆ ಏರ್ಪಡಿಸಬೇಕು.
- ವೃತ್ತಿ ಕುರಿತ ಸರ್ಕಾರದ ಧೋರಣೆಗಳನ್ನು ಸಂಘದ ಸದಸ್ಯರೆಲ್ಲರೂ ಕೂಡಿ ಚರ್ಚಿಸಿ ಅದರ ಅನುಕೂಲ ಹಾಗೂ ಅನಾನುಕೂಲಗಳನ್ನು ತಿಳಿದುಕೊಳ್ಳಬೇಕು.
- ಸರ್ಕಾರದ ಸೌಲಭ್ಯಗಳು ಎಲ್ಲಾ ಕುಲಕಸುಬುದಾರರಿಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು.
- ವೃತ್ತಿ ಸಂಘಗಳು ಕಸುಬುದಾರರಿಗೆ ಆಧುನಿಕ ಯಂತ್ರೋಪಕರಣಗಳ ಮಾಹಿತಿ ನೀಡಿ ಅವುಗಳನ್ನು ಬಳಸಿಕೊಳ್ಳಲು ನೆರವಾಗಬೇಕು.

- ಕುಲಕಸುಬುದಾರರು ಮತ್ತು ಅವರ ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆದುಕೊಳ್ಳಬೇಕು.
- ಹಣಕಾಸಿನ ಸಂಸ್ಥೆಗಳಿಂದ ಸಕಾಲಕ್ಕೆ ಸರಿಯಾಗಿ ಕಡಿಮೆ ಬಡ್ಡಿ ದರದಲ್ಲಿ ಸಾಲ ದೊರೆಯುವಂತೆ ಮಾಡಬೇಕು.
- ಹಣಕಾಸಿನ ಸಂಸ್ಥೆಗಳು ನೀಡುವ ಹಣಕಾಸನ್ನು ಕೇವಲ ಉತ್ಪಾದಕ ಚಟುವಟಿಕೆಗಳಲ್ಲಿ ಮಾತ್ರ ಬಳಸಿಕೊಳ್ಳಬೇಕು.
- ಕುಲಕಸುಬುದಾರರು ತಮ್ಮ ಕೆಲಸದ ಕುಶಲತೆಯನ್ನು ಉತ್ತಮಪಡಿಸಿಕೊಳ್ಳಬೇಕು.
- ಕುಲಕಸುಬುದಾರರು ಕುಡಿತ ಮತ್ತು ಜೂಜಾಟಗಳಿಂದ ದೂರವಿರಬೇಕು.
- ವೃತ್ತಿ ಉತ್ಪನ್ನಗಳ ಪ್ರತ್ಯೇಕ ಮಾರಾಟ ಮಳಿಗೆಗಳನ್ನು ಸ್ಥಾಪಿಸಿಕೊಳ್ಳಬೇಕು.
- ಮಧ್ಯವರ್ತಿಗಳ ವ್ಯಾಪಾರವನ್ನು ನಿಯಂತ್ರಿಸಬೇಕು.
- ಸರಕುಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ ತಾಲೂಕು, ಜಿಲ್ಲಾ, ರಾಜ್ಯ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಮೇಳಗಳನ್ನು ಏರ್ಪಡಿಸಬೇಕು.
- ಸರಕಾರದ ಅಧಿಕಾರಿ ವರ್ಗ ಕುಲಕಸುಬುಗಳಿಗೆ ಸರಕಾರ ನೀಡುವ ಸೌಲಭ್ಯಗಳನ್ನು ಫಲಾನುಭವಿಗಳಿಗೆ ನೇರವಾಗಿ ತಲುಪಿಸುವ ವ್ಯವಸ್ಥೆ ಮಾಡಬೇಕು.
- ಸರಕಾರವು ಸರಕುಗಳಿಗೆ ವೈಜ್ಞಾನಿಕ ರೀತಿಯಲ್ಲಿ ಬೆಲೆಯನ್ನು ನಿಗದಿ ಮಾಡಿ, ಬೆಂಬಲ ಬೆಲೆಗಳನ್ನು ನೀಡಬೇಕು.
- ಸರಕಾರವು ವೃತ್ತಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ, ಕರಕುಶಲಗಾರರಿಗೆ ಉಚಿತ ತರಬೇತಿ ನೀಡಬೇಕು.
- ಸರಕಾರದ ಸೌಲಭ್ಯಗಳು ಮಧ್ಯವರ್ತಿಗಳ ಪಾಲಾಗದಂತೆ ನೋಡಿಕೊಳ್ಳಬೇಕು.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕುಲಕಸುಬುಗಳ ಅಭಿವೃದ್ಧಿಗೆ ವಿಶೇಷ ಧನಸಹಾಯ ಹಾಗೂ ಕಾರ್ಯಕ್ರಮಗಳನ್ನು ನೀಡಬೇಕು.
- ಕುಲಕಸುಬುದಾರರಿಗೆ ಆರೋಗ್ಯ ಕವಚದ ಸೌಲಭ್ಯ ಹಾಗೂ ಉಚಿತ ವಿಮಾ ಸೌಲಭ್ಯ ಒದಗಿಸಬೇಕು.
- ಕುಲಕಸುಬುದಾರರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕು.
- ಕುಲಕಸುಬುಗಳು ಆಧುನಿಕತೆಗೆ ತಕ್ಕಂತೆ ಬದಲಾವಣೆ ಹೊಂದಬೇಕು.
- ಕುಲಕಸುಬುದಾರರು ಅನುಭೋಗಿಗಳ ಅಭಿರುಚಿಗೆ ತಕ್ಕಂತೆ ಸರಕುಗಳನ್ನು ತಯಾರಿಸಬೇಕು.
- ಕುಲಕಸುಬುದಾರರು ವಲಸೆ ಹೋಗದ ಹಾಗೆ ವಿವಿಧ ಮೂಲ ಸೌಲಭ್ಯಗಳನ್ನು ಪೂರೈಸಬೇಕು.
- ಕುಲಕಸುಬುದಾರರ ಮಕ್ಕಳು ಕುಲಕಸುಬುಗಳನ್ನು ಮುಂದುವರಿಸಲು ಇಚ್ಛಿಸಿದರೆ ಅವರಿಗೆ ತರಬೇತಿ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಿಕೊಡಬೇಕು.

ಕುಲಕಸುಬುಗಳ ಅಭಿವೃದ್ಧಿಯಲ್ಲಿ ಸರಕಾರದ ಪಾತ್ರ:

ಪುರಾತನ ಕಾಲದಿಂದ ವಂಶಪಾರಂಪರ್ಯವಾಗಿ ಬೆಳೆದು ಬಂದಿರುವ ಕುಲಕಸುಬುಗಳು ಆಧುನಿಕರಣದ ಹಾಗೂ ಜಾಗತೀಕರಣದ ಪ್ರಭಾವದಿಂದಾಗಿ ಸಮಸ್ಯೆಗಳನ್ನು ಎದುರಿಸುತ್ತಿವೆ. ಕೆಲವು ಕುಲಕಸುಬುಗಳು ಸಮಾಜದಿಂದ ಕಣ್ಮರೆಯಾಗುತ್ತಿವೆ. ಇವುಗಳ ಉಳಿಯುವಿಕೆಗೆ, ಅಭಿವೃದ್ಧಿಗೆ ಸಮಾಜ ಹಾಗೂ ಸರಕಾರದ ಪಾತ್ರ ಅನನ್ಯವಾದುದು. ಇಲ್ಲಿ ಸರಕಾರ ಕೈಗೊಳ್ಳಬೇಕಾದ ಅಭಿವೃದ್ಧಿ ಕ್ರಮಗಳನ್ನು ಸೂಚಿಸಲಾಗಿದೆ.

- ಕುಲಕಸುಬುಗಳಿಗೆ ಸಂಬಂಧಿಸಿದಂತೆ ಸರ್ಕಾರಿ ನೀತಿಯ ರಚನೆ.
- ಕುಲಕಸುಬುಗಳು ಮತ್ತು ಅವುಗಳನ್ನು ಅನುಸರಿಸಿಕೊಂಡು ಬಂದಿರುವವರ ಸಂಪೂರ್ಣ ಅಂಕಿ–ಅಂಶಗಳ ಸಂಗ್ರಹ.
- ವೃತ್ತಿ ತರಬೇತಿ ಸಂಸ್ಥೆಗಳ ಸ್ಥಾಪನೆ.
- ತರಬೇತಿ ಪಡೆಯುವವರಿಗೆ ಶಿಷ್ಯ ವೇತನ ಹಾಗೂ ವೃತ್ತಿಗೆ ಸಂಬಂಧಿಸಿದ ಸಾಮಗ್ರಿಗಳ ಕಿಟ್ ನೀಡುವುದು.
- ಕುಲಕಸುಬುಗಳಿಗೆ ಹಣಕಾಸು ನೀಡುವ ಹಣಕಾಸಿನ ಸಂಸ್ಥೆಗಳ ಸ್ಥಾಪನೆ.
- ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಿಕೆ.
- ರಿಯಾಯ್ತಿ ದರದಲ್ಲಿ ಕಚ್ಚಾ ವಸ್ತುಗಳ ಪೂರೈಕೆ.
- ಮಾರುಕಟ್ಟೆ ಸೌಲಭ್ಯ
- ದಾಸ್ತಾನು ಮಳಿಗೆಗಳ ಸ್ಥಾಪನೆ.
- ಕುಲಕಸುಬುದಾರರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಬೇಕು.
- ಸರಕು ಸೇವೆಗಳಿಗೆ ಬೆಂಬಲ ಬೆಲೆ ನೀಡುವುದು.
- ಕುಲಕಸುಬುದಾರರಿಗೆ ಪ್ರತ್ಯೇಕ ಕೈಗಾರಿಕಾ ವಸಾಹತು ಸ್ಥಾಪನೆ.
- ರಿಯಾಯ್ತಿ ದರದಲ್ಲಿ ವಿದ್ಯುತ್ ಹಾಗೂ ಶಕ್ತಿ ಸಂಪನ್ಮೂಲಗಳ ನೀಡಿಕೆ.
- ಕುಲಕಸುಬುದಾರರ ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ನೆರವು.
- ಕುಲಕಸುಬುದಾರರಿಗೆ ವಸತಿ ಸೌಲಭ್ಯ.
- ಕುಲಕಸುಬುದಾರರಿಗೆ ಉಚಿತ ಪಡಿತರ.
- ಕುಲಕಸುಬುದಾರರಿಗೆ ಹಾಗೂ ಅವರ ಕುಟುಂಬಕ್ಕೆ ವೈದ್ಯಕೀಯ ನೆರವು.
- ಕಲ್ಯಾಣ ನಿಧಿಯ ಸ್ಥಾಪನೆ
- ಆಧುನಿಕ ಯಂತ್ರೋಪಕರಣಗಳ ಪೂರೈಕೆ.
- ವೃತ್ತಿ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹ

– ಧನಸಹಾಯ ಮತ್ತು ತೆರಿಗೆ ಪ್ರೋತ್ಸಾಹಗಳನ್ನು ನೀಡುವುದು.

– ಸಾರಿಗೆ ಮತ್ತು ಸಂಪರ್ಕವನ್ನು ರಿಯಾಯ್ತಿ ದರದಲ್ಲಿ ಒದಗಿಸುವುದು.

ಸರಕಾರದ ಪ್ರಮುಖವಾದ ಯೋಜನೆಗಳು

ಗುಡಿಕೈಗಾರಿಕೆ/ಗ್ರಾಮ ವೃತ್ತಿಗಳ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಲವು ಪ್ರಮುಖ ಯೋಜನೆಗಳನ್ನು ಜಾರಿಗೆ ತಂದಿವೆ. ಅವುಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

– ಖಾದಿ ಮತ್ತು ಗ್ರಾಮೋದ್ಯೋಗ ಯೋಜನೆ

– ಕೇಂದ್ರ ಸಣ್ಣ ಕೈಗಾರಿಕಾ ಸಂಸ್ಥೆ

– ಚಿಕ್ಕ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ

– ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ

– ಭಾರತದ ಉದ್ಯಮ ಸಾಹಸಿಗಳ ಅಭಿವೃದ್ಧಿ ಕೇಂದ್ರ

– ಖಾದಿ ಮತ್ತು ಗ್ರಾಮೊದ್ಯೋಗ ಮಂಡಳಿ

– ಸಣ್ಣ ಕೈಗಾರಿಕಾ ಮಂಡಳಿ

– ಗೃಹ ಕೈಗಾರಿಕಾ ಮಂಡಳಿ

– ಅಖಿಲ ಭಾರತ ಕೈಮಗ್ಗ ಮಂಡಳಿ

– ಅಖಿಲ ಭಾರತ ಕುಶಲ ಕೈಗಾರಿಕಾ ಮಂಡಳಿ

– ಕೇಂದ್ರ ರೇಷ್ಮೆ ಮಂಡಳಿ

– ಟೆಕ್ನಿಕಲ್ ಕನ್ಸಂಟೆನ್ಸಿ ಆರ್ಗನೈಜೇಶನ್

– ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

– ರಾಜ್ಯ ಹಣಕಾಸಿನ ನಿಗಮಗಳು

– ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ

– ಕೈಗಾರಿಕಾ ಸಹಕಾರ ಸಂಘಗಳು

– ಸಾಲ ಹಣ ಭದ್ರತಾ ಯೋಜನೆ

– ಭಾರತದ ಚಿಕ್ಕ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕು.

– ಚಿಕ್ಕ ಕೈಗಾರಿಕೆಗಳ ಅಭಿವೃದ್ಧಿ ನಿಧಿ

– ಏಕಗವಾಕ್ಷಿ ಯೋಜನೆ

– ಜಿಲ್ಲಾ ಕೈಗಾರಿಕಾ ಕೇಂದ್ರಗಳು

– ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್‌ಸಿಡಿ ಸ್ಕೀಂ

– ಸಣ್ಣ ಕೈಗಾರಿಕೆಗಳ ಸೇವಾ ಕೇಂದ್ರ

– ಗ್ರಾಮೀಣ ಉದ್ಯೋಗ ದಿಡೀರ್ ಯೋಜನೆ
– ಸಾಂದ್ರ ಗ್ರಾಮೀಣ ಉದ್ಯೋಗ ಪೈಲೆಟ್ ಯೋಜನೆ
– ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ
– ಗ್ರಾಮೀಣ ಭೂ ರಹಿತರ ಉದ್ಯೋಗ ಖಾತ್ರಿ ಯೋಜನೆ
– ಸ್ವಯಂ ಉದ್ಯೋಗ ಯೋಜನೆಗಳು
– ಜವಾಹರ್ ರೋಜ್‌ಗಾರ್ ಯೋಜನೆ
– ಇಂದಿರಾ ಆವಾಸ್ ಯೋಜನೆ
– ವಿಶೇಷ ಉದ್ಯೋಗ ಯೋಜನೆಗಳು
– ಉದ್ಯೋಗ ಭರವಸೆ ಯೋಜನೆ
– ಸ್ವರ್ಣಜಯಂತಿ ರೋಜಗಾರ ಯೋಜನೆ
– ಸ್ವರ್ಣ ಜಯಂತಿ ಸ್ವರೋಜ್‌ಗಾರ್ ಯೋಜನೆ
– ಪ್ರಧಾನ ಮಂತ್ರಿ ಗ್ರಾಮ ಸಡಾಕ್ ಯೋಜನೆ
– ವಾಲ್ಮೀಕಿ ಅಂಬೇಡ್ಕರ ಆವಾಸ ಯೋಜನೆ
– ರಾಷ್ಟ್ರೀಯ ಉದ್ಯೋಗ ಭರವಸೆ ಯೋಜನೆ
– ಸ್ವರೋಜಗಾರ್ ಕ್ರೆಡಿಟ್ ಕಾರ್ಡ ಸ್ಕೀಂ
– ವಿಶ್ವ ಯೋಜನೆ
– ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ
– ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ
– ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮ
– ಸ್ವಸಹಾಯ ಸಂಘಗಳು

ಕರ್ನಾಟಕ ಸರಕಾರವು ಗೃಹ ಕೈಗಾರಿಕೆಗಳ ಹಾಗೂ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಬಳ್ಳಾರಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಿದೆ. ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಿದೆ. ಜಿಲ್ಲಾ ಕೈಗಾರಿಕಾ ಕೇಂದ್ರವು ಗೃಹ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಮತ್ತು ಸ್ಥಾಪನೆಗಾಗಿ ವಿವಿಧ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದೆ. ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿ ಗುಡಿ ಕೈಗಾರಿಕೆಗಳು ಹಾಗೂ ಸಣ್ಣ ಕೈಗಾರಿಕೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಉತ್ತೇಜನೆ ನೀಡುತ್ತದೆ. ಜಿಲ್ಲಾ ಕೈಗಾರಿಕಾ ಕೇಂದ್ರ ವಿವಿಧ ವೃತ್ತಿದಾರರಿಗೆ, ಯುವಕರಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸುತ್ತಿದೆ. ಶಿಬಿರಗಳಲ್ಲಿ ಭಾಗವಹಿಸುವವರಿಗೆ ಶಿಷ್ಯ ವೇತನವನ್ನು ನೀಡಿ ಪ್ರೋತ್ಸಾಹಿಸುತ್ತದೆ. ವೃತ್ತಿ ಸಾಧನ–ಸಾಮಗ್ರಿಗಳ ಕಿಟ್‌ನ್ನು ಸಹ ಪೂರೈಸುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿರುವ ಕೈಗಾರಿಕೆ ವಸಹತುಗಳು

ಕ್ರಸಂ	ಕೈಗಾರಿಕಾ ವಲಯದ ಹೆಸರು	ಪ್ರದೇಶ ಎಕರೆಗಳಲ್ಲಿ	ಪ್ಲಾಟ್‌ಸಂ
೦೧.	ಕೈಗಾರಿಕಾ ವಲಯ ಅನಂತಪುರ ರಸ್ತೆ, ಬಳ್ಳಾರಿ	೨೧.೭೯	೨೯
೦೨.	ಕೈಗಾರಿಕಾ ವಲಯ ಮುಂಡರಗಿ ರಸ್ತೆ, ಬಳ್ಳಾರಿ	೫೨.೫೯	೪೮
೦೩.	ಕೈಗಾರಿಕಾ ವಲಯ ಮುಂಡರಗಿ ೨ನೇ ಹಂತ ಬಳ್ಳಾರಿ	೧೬೭.೩೨	೧೨
೦೪.	ಕೈಗಾರಿಕಾ ವಲಯ ಮುಂಡರಗಿ ೩ನೇ ಹಂತ ಬಳ್ಳಾರಿ	೮೫.೭೨	೮೭
೦೫.	ಕೈಗಾರಿಕಾ ವಲಯ ಸಂಕಲಾಪುರ ಹೊಸಪೇಟೆ	೧೦೨.೫೧	೪೨

ಮೂಲ ಮಾಹಿತಿ: ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ಬಳ್ಳಾರಿ ಜಿಲ್ಲೆಯಲ್ಲಿ ಈ ಕೆಳಗಿನ ಪ್ರದೇಶಗಳಲ್ಲಿ ಕೈಗಾರಿಕಾ ವಸಾಹತು ಕೇಂದ್ರಗಳನ್ನು ಸ್ಥಾಪಿಸಿದೆ.

ಕ್ರಸಂ	ವಿವರ	ಪ್ರದೇಶ (ಎಕರೆಗಳಲ್ಲಿ)	ಪ್ಲಾಟ್‌ಗಳ ಸಂಖ್ಯೆ	ಶೆಡ್‌ಗಳ ಸಂಖ್ಯೆ
೧	ಕೈಗಾರಿಕಾ ವಸಾಹತು ಬಳ್ಳಾರಿ	೨೫	೨೪	೫೦
೨	ಕೈಗಾರಿಕಾ ವಸಾಹತು ಮುಂಡರಗಿ	೭೫	೩೫	೦೪
೩	ಕೈಗಾರಿಕಾ ವಸಾಹತು ಹೊಸಪೇಟೆ	೨೫	೭೪	೫೪
೪	ಕೈಗಾರಿಕಾ ವಸಾಹತು ಸಿರುಗುಪ್ಪ	೦೮	೩೫	೦೪
೫	ಕೈಗಾರಿಕಾ ವಸಾಹತು ಹಡಗಲಿ	೫.೫	೩೫	–

ಮೂಲಮಾಹಿತಿ: ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ

ಅಡಿ ಟಿಪ್ಪಣಿಗಳು:

೧. ಜೆ.ಎಂ. ನಾಗಯ್ಯ, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪು-೧

೨. ಅದೇ, ಪು-೧

೩. ಕೆ.ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು-೩೨೬.

೪. ಅದೇ. ಪು-೩೨೭.

ಅಧ್ಯಾಯ ೭

ಸಮಾರೋಪ

ಅನುಬಂಧಗಳು

- ಅಂಕಿ-ಅಂಶಗಳು
- ವೃತ್ತಿ ಪದಕೋಶ
- ಪ್ರಶ್ನಾವಳಿ
- ವಕ್ತೃಗಳ ವಿವರ
- ಪರಾಮರ್ಶನ ಗ್ರಂಥಗಳು
- ಛಾಯಾಚಿತ್ರಗಳು

ಸಮಾರೋಪ

ಭಾರತವು ವಿವಿಧತೆಯಿಂದ ಕೂಡಿದ ದೇಶ. ಭಾಷೆ, ಕುಲ, ಜಾತಿ, ಪಂಗಡ, ಸಂಸ್ಕೃತಿ, ಆಚಾರ, ವಿಚಾರಗಳಲ್ಲಿ ಇಲ್ಲಿ ಭಿನ್ನತೆ ಕಂಡುಬರುತ್ತದೆ. ಇದು ಬಹು ಸಂಸ್ಕೃತಿಯ ದೇಶ ಹಾಗೂ ಬಹು ಜನಾಂಗೀಯ ದೇಶವೂ ಹೌದು. ದೇಶದ ಭವ್ಯ ಚರಿತ್ರೆಗೆ, ಸಾಂಸ್ಕೃತಿಕ ಶ್ರೀಮಂತಿಕೆಗೆ ವೈವಿಧ್ಯತೆ, ಅನನ್ಯತೆಗಳಿಗೆ ಇಲ್ಲಿ ನೆಲಸಿರುವ ಸಮಸ್ತ ಜನಾಂಗಗಳ ದೇಣಿಗೆ ಇದೆ. ಈ ಸಮಸ್ತ ಜನರ ಶ್ರಮದ ದುಡಿಮೆ ಮತ್ತು ಬೆವರಿನಿಂದ ದೇಶ ನಿರ್ಮಾಣವಾಗಿದೆ. ಸಂಸ್ಕೃತಿ ನಿರ್ಮಾಣಗೊಂಡಿದೆ. ಆದಿಯಿಂದ ಸಮಕಾಲೀನ ಸಂದರ್ಭದವರೆಗೂ ಭಾರತದ ಭೂಮಿಯಲ್ಲಿ ಬಾಳಿ ಬದುಕಿ ಹೆಜ್ಜೆ ಮೂಡಿಸಿದ ಜನರೆಲ್ಲರೂ ಈ ಸಂಸ್ಕೃತಿಯ ವಾರಸುದಾರರಾಗಿದ್ದಾರೆ.

ಭಾರತದಲ್ಲಿ ಪ್ರತಿಯೊಂದು ಜಾತಿ ಅಥವಾ ಕುಲ ತಮ್ಮ ಉತ್ಪಾದನಾ ಸಾಮರ್ಥ್ಯದಿಂದಾಗಿ ಸ್ವಯಂ ಪೂರ್ಣ ಘಟಕಗಳಂತೆ ಇವೆ. ಇಂದು ಸಮಾಜದಲ್ಲಿ ಕಾಣುತ್ತಿರುವ ಪ್ರತಿ ಸಮುದಾಯವು ನಿಶ್ಚಿತವಾದ ತಮ್ಮ ಕುಲಕಸುಬುಗಳನ್ನು ಮಾಡಿಕೊಂಡು ಬರುತ್ತಿವೆ. ಇಂತಹ ವೃತ್ತಿಗಳು ಅವುಗಳು ನಿರ್ವಹಿಸುವ ಕಾರಣದಿಂದಾಗಿ ಶ್ರೇಷ್ಠ, ಮಧ್ಯಮ ಹಾಗೂ ಕನಿಷ್ಠತಮವಾದವು ಎಂದು ಗುರುತಿಸಲ್ಪಟ್ಟಿವೆ. ಹೀಗೆ ಗುರುತಿಸುವ ಸಮುದಾಯಗಳು ಕಾಲಾನಂತರದಲ್ಲಿ ಆರ್ಥಿಕ ಒಡೆತನದ ನಿರಾಕರಣೆ ಹಾಗೂ ಮೇಲ್ಜಾತಿಗಳ ತಿರಸ್ಕಾರ ಮನೋಭಾವನೆ ಒಂದು ರೀತಿಯ ಬಿಕ್ಕಟ್ಟಿಗೆ ಒಳಗಾಗಿವೆ. ಈ ತರಹ ಬಿಕ್ಕಟ್ಟು ಕೇವಲ ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿರದೇ ಆರ್ಥಿಕವಾಗಿಯೂ ಮುಂದುವರೆಯುತ್ತಿದೆ.

ವ್ಯಕ್ತಿ ವಿಶಿಷ್ಟವಾದ ನೀತಿ ನಡವಳಿಕೆಗಳು ಮತ್ತು ಸಮುದಾಯದ ನಂಬಿಕೆ, ಆಚರಣೆಗಳ ನಡುವಿನ ಸಂಬಂಧ ಶಿಥಿಲಗೊಳ್ಳುತ್ತಿದೆ. ಒಂದು ಕಾಲದಲ್ಲಿ ಸಾಂಪ್ರದಾಯಿಕ ಸಮಾಜವನ್ನು

ಹಾಗೂ ಅದರ ಜಾತಿಯತೆಯನ್ನು ಸಡಿಲಿಸಿ ಶತಶತಮಾನಗಳಿಂದ ತುಳಿತಕ್ಕೊಳಗಾಗಿದ್ದ ಸಮುದಾಯಗಳಿಗೆ ಆಧುನಿಕತೆ ಎನ್ನುವುದು ಒಂದು ರೀತಿಯ ಮುಕ್ತತೆಯನ್ನು ತಂದುಕೊಟ್ಟಿತು. ಈ ಸಮುದಾಯಗಳ ಮೂಲಕಸುಬುಗಳು ವೇಗದ ಆಧುನಿಕತೆಯನ್ನು ಪಡೆಯುತ್ತ ಆಕರ್ಷಣೀಯ ಮಾರುಕಟ್ಟೆಯನ್ನು ಸೃಷ್ಟಿಸಿಕೊಂಡವು. ಸಮುದಾಯಗಳ ವಿಶಿಷ್ಟ ವೃತ್ತಿ ಮತ್ತು ಉತ್ಪಾದನೆಗಳು ಮಾರುಕಟ್ಟೆಯ ಸಂಸ್ಕೃತಿಗೆ ತಕ್ಕಂತೆ ರೂಪುಗೊಳ್ಳುತ್ತದೆ.

ಜಾಗತೀಕರಣದ ಪರಿಣಾಮವಾಗಿ ಉದಾರೀಕರಣ ಹಾಗೂ ಖಾಸಗೀಕರಣ ಪ್ರಕ್ರಿಯೆಗಳು ಇಡೀ ಆರ್ಥಿಕತೆಯ ಸ್ವರೂಪವನ್ನೇ ಬದಲಾಯಿಸಿದೆ. ಪ್ರತಿಯೊಂದು ಉತ್ಪಾದನಾ ವಲಯವು ಉನ್ನತ ತಂತ್ರಜ್ಞಾನಕ್ಕೆ ಒಳಗಾಗಿ ಈ ಹಿಂದಿನ ಎಲ್ಲಾ ಉತ್ಪಾದನಾ ಸಂಬಂಧಗಳನ್ನು ತಿರುವು ಮುರುವುಗೊಳಿಸಿದೆ. ಯಾವುದೇ ವಸ್ತುವಿನ ಉತ್ಪಾದನೆ ಹಾಗೂ ವಿತರಣೆಯ ಮಧ್ಯೆ ಇರಬೇಕಾದ ಅಂತರವು ಮಾನವೀಯ ಮೌಲ್ಯದಿಂದ ಕೂಡಿರದೆ ವ್ಯಾಪಾರೀಕರಣದ ನೆಲೆಯಲ್ಲಿ ಉತ್ಪಾದನೆಯ ಪ್ರತಿಹಂತದ ಕಾರ್ಯ ಚಟುವಟಿಕೆಗಳು ನಿರ್ಧಾರಗೊಳ್ಳುತ್ತಿವೆ. ಇಂತಹ ತಾಂತ್ರಿಕ ಸ್ವರೂಪದ ಬೆಳವಣಿಗೆಯೂ ಕೇವಲ ಉತ್ಪಾದನಾ ಚಟುವಟಿಕೆಗಳಿಗೆ ಸೀಮಿತವಾಗಿರದೆ ಮಾನವನ ಮಾನಸಿಕ ಹಾಗೂ ಬೌದ್ಧಿಕ ನಡೆ ನುಡಿಗಳ ಮೇಲೆ ಹತ್ತಾರು ಪರಿಣಾಮಗಳನ್ನುಂಟು ಮಾಡಿದೆ. ಅಲ್ಲದೆ ಜನರ ಹಾಗೂ ಸಮುದಾಯಗಳ ಆಲೋಚನಾ ಕ್ರಮವನ್ನೇ ಬದಲಾಯಿಸಿದೆ. ಅವರ ಪ್ರತಿಯೊಂದು ನಡೆ ನುಡಿಯಲ್ಲಿ ವೈಜ್ಞಾನಿಕತೆಯ ಯಾವುದಾದರೂ ಕುರುಹುಗಳು ಹಾಸುಹೊಕ್ಕಾಗಿರುವುದು ಸಹಜವೆಂಬಂತೆ ಕಂಡುಬರುತ್ತದೆ. ಇಂತಹ ಅಭಿವೃದ್ಧಿ ಪ್ರಕ್ರಿಯೆ ಸಾರ್ವತ್ರಿಕವಾಗಿರದೆ ಪಾರ್ಶ್ವಮುಖಿಯಾಗಿದ್ದು ಇಡೀ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಅದು ಪೂರಕವಾಗಿಲ್ಲ. ಹೀಗಾಗಿ ವಾಸ್ತವಿಕತೆಯಲ್ಲಿ ನಿರುದ್ಯೋಗ, ಬಡತನ, ಅನಾರೋಗ್ಯ, ಅಜ್ಞಾನ, ಅಂದಾನುಕರಣೆ, ಭ್ರಷ್ಟಾಚಾರ, ದಬ್ಬಾಳಿಕೆ, ಹಾಗೂ ದೌರ್ಜನ್ಯದ ಸಂಗತಿಗಳು ದಿನೇ ದಿನೇ ವೃದ್ಧಿಗೊಳ್ಳುತ್ತ ಜನ ಸಮುದಾಯಗಳ ಆರ್ಥಿಕ, ಸಾಮಾಜಿಕ ಬದುಕಿನ ಗ್ರಹಿಕೆಯನ್ನು ಬದಲಾಯಿಸಿದೆ. ಶ್ರೀಮಂತಿಕೆ, ಸಂಪತ್ತಿನ ಸಂಗ್ರಹ ಮತ್ತು ಸುಖಲೋಲುಪತೆಯಲ್ಲಿ ತೇಲಾಡುತ್ತಿರುವ ದೊಡ್ಡ ಉದ್ದಿಮೆದಾರರು ಒಂದು ಕಡೆ ಇದ್ದರೆ ನಿರುದ್ಯೋಗ, ಬಡತನ, ಅನಾರೋಗ್ಯ ಹಾಗೂ ಅಸಹಾಯಕತೆಯಲ್ಲಿ ತಮ್ಮ ಬದುಕಿಗಾಗಿ ಹಾಗೂ ವೃತ್ತಿಗಳನ್ನು ಉಳಿಸಿಕೊಳ್ಳಲು ಪರದಾಡುತ್ತಿರುವ ಜನ ಸಮುದಾಯಗಳು ಮತ್ತೊಂದು ಕಡೆ ಕಂಡುಬರುತ್ತಿವೆ.

ಆಧುನೀಕರಣ, ತಾಂತ್ರಿಕರಣ, ಕೈಗಾರೀಕರಣ, ಜಾಗತೀಕರಣದಿಂದಾಗಿ ದೇಶದ ಮಾರುಕಟ್ಟೆಯು ಲಾಭಕಾರಿಯಲ್ಲದ, ಅಸ್ತಿತ್ವವಿಲ್ಲದ ಅರ್ಥವಿಲ್ಲದಂತೆ ಕಾಣುತ್ತದೆ. ದೇಶೀಯ ಕುಲಕಸುಬುದಾರರ ಉತ್ಪನ್ನಗಳಿಗೆ ಸರಿಯಾದ ಬೆಲೆ ಇಲ್ಲದೆ ಕುಲಕಸುಬುದಾರರು, ವೃತ್ತಿನಿರತರು ಬಿಕ್ಕಟ್ಟಿನಲ್ಲಿದ್ದಾರೆ. ಜಾಗತೀಕರಣ ತಂದಿಟ್ಟಿರುವ ಈ ಬಿಕ್ಕಟ್ಟಿನಿಂದ ಪಾರಾಗುವುದು ಇಂದಿನ ಪ್ರಶ್ನೆಯಾಗಿ ಉಳಿದಿಲ್ಲ.

ಬದಲಾಗಿ ನಮ್ಮ ಎಲ್ಲಾ ಬಗೆಯ ಕುಲಕಸುಬುಗಳು, ಅವುಗಳ ಕಲಾತ್ಮಕತೆ, ಉತ್ಪಾದನಾ ವಿಧಾನಗಳನ್ನು ಜೀವಂತವಾಗಿ ಉಳಿಸಿಕೊಳ್ಳುತ್ತ ಸಾಮಾಜಿಕ, ಚಲನೆಗೆ ಸಂವೇದನೆ ತೋರಿಸುವ ಬಗ್ಗೆ ಯೋಚಿಸಬೇಕಾಗಿದೆ. ಉತ್ಪನ್ನಗಳ ಬಗ್ಗೆ ಅವುಗಳ ತಯಾರಿಕೆಯ ಬಗ್ಗೆ, ಮಾರಾಟದ ಬಗ್ಗೆ ಕುರಿತು ಯೋಚಿಸಬೇಕಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ನಮ್ಮ ಸಮಾಜದಲ್ಲಿರುವ ವೃತ್ತಿ ಸಮುದಾಯಗಳು ರೂಪಿಸಿಕೊಂಡು, ಬೆಳೆಸಿಕೊಂಡು ಬಂದಿರುವ ಕುಲಕಸುಬುಗಳು, ಹುಟ್ಟು, ವಿಕಾಸ, ಸ್ವರೂಪ ಹಾಗೂ ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ರೀತಿಯ ಅಧ್ಯಯನವನ್ನು ಮಾಡಲು ಜನಪದಕ್ಕಿರುವಷ್ಟು ಸಾಧ್ಯತೆ ಬೇರೆ ಜ್ಞಾನ ಶಿಸ್ತುಗಳಿಗಿರುವುದಿಲ್ಲ. ಏಕೆಂದರೆ ಜಾನಪದ ಎನ್ನುವುದು ಜನಪದರ ಜೀವನ ವಿಧಾನದ ಅಧ್ಯಯನವಾಗಿರುವಂತೆಯೇ ಅವರ ಜೀವನ ವಿಧಾನ, ಕಾರ್ಯವಿಧಾನ, ಮಾರುಕಟ್ಟೆಯ ವಿಧಾನಗಳೊಂದಿಗೆ ವಿಶ್ಲೇಷಣೆ ಮಾಡುವುದಾಗಿದೆ. ಆಧುನಿಕತೆಯ ವ್ಯವಸ್ಥೆಯಲ್ಲಿ ಜನಪದರ ಕುಲಕಸುಬುಗಳ ಸ್ಥಿತಿಗತಿ, ಸವಾಲುಗಳನ್ನು ಅಧ್ಯಯನ ಮಾಡುವ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಪ್ರಮುಖ ಕುಲಕಸುಬುಗಳನ್ನು ಕುರಿತು ಅಧ್ಯಯನ ಮಹತ್ವವಾದುದು. ಕುಲಕಸುಬುಗಳ ಉಳಿಕೆಗಾಗಿ ಮಾರ್ಗೋಪಾಯಗಳನ್ನು ಕಂಡುಹಿಡಿಯುವುದು ಅಗತ್ಯವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ 'ಕುಲಕಸುಬುಗಳು ಮತ್ತು ಆಧುನಿಕತೆ' ಇದನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಭಾರತದ ಎಲ್ಲಾ ಪ್ರದೇಶಗಳಲ್ಲಿರುವಂತೆ, ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿಯೂ ವಿವಿಧ ಕುಲಕಸುಬುಗಳಿವೆ. ಸಾವಿರಾರು ಕುಲಕಸುಬುದಾರರು ವಿವಿಧ ರೀತಿಯ ತಮ್ಮ ವೃತ್ತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಕುಲಕಸುಬುಗಳು ತಲೆ ತಲಾಂತರದಿಂದ ಬಂದಿವೆಯಾದರೂ ಆಧುನಿಕತೆಯ ಕಾಲಘಟ್ಟದಲ್ಲಿ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿವೆ. ಕೆಲವು ಅವಸಾನದ ಅಂಚಿನಲ್ಲಿವೆ. ಹೊಸ ಹೊಸ ವೃತ್ತಿಗಳಿಗೆ ಹೋಗಲು ಈ ಜನಾಂಗದವರಿಗೆ ಅವಕಾಶವಿದ್ದರೂ ಬಹುಪಾಲು ಜನರು ಹೊಸ ಉದ್ಯೋಗಗಳಿಗೆ ಹೋಗಲು ಮಾನಸಿಕವಾಗಿ ಸಿದ್ಧರಾಗಿಲ್ಲ. ಪುರಾತನ ಕಾಲದಿಂದ ನಡೆಸಿಕೊಂಡು ಬಂದಿರುವ ಕಸುಬನ್ನು ಬಿಡಲು ಸಿದ್ಧರಿಲ್ಲ. ಇದ್ದುದರಲ್ಲೇ ಜೀವನ ಸಾಗಿಸಲು ನಿರ್ಧರಿಸುತ್ತಿದ್ದಾರೆ. ಕೆಲವರಿಗೆ ಬೇರೆ ಕೆಲಸಗಳೇ ಗೊತ್ತಿಲ್ಲ. ಕೆಲವರು ಹೊಸ ವೃತ್ತಿಗೆ ಸೇರಿದರೂ ಅಲ್ಲಿಯೂ ಹೊಂದಾಣಿಕೆಯಾಗದೆ ಮಾನಸಿಕ ತುಮುಲಕ್ಕೊಳಗಾಗಿದ್ದಾರೆ.

ಪ್ರಸ್ತುತ ಕೈಗಾರೀಕರಣ, ಜಾಗತೀಕರಣ ಸಂದರ್ಭದಲ್ಲಿ ಕುಲಕಸುಬುದಾರರ ಸಾಮಾಜಿಕ, ಆರ್ಥಿಕ ಸ್ಥಿತಿ ತೀವ್ರವಾದ ಬಿಕ್ಕಟ್ಟಿಗೆ ಒಳಗಾಗಿ, ಮೂಲಭೂತ ಅವಶ್ಯಕತೆಗಳಿಗೂ ಪರದಾಡುವ ಸ್ಥಿತಿಯಲ್ಲಿದ್ದಾರೆ. ಜೊತೆಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳು ಸಂಪೂರ್ಣವಾಗಿ ಸಿಗುತ್ತಿಲ್ಲ.

ಸರಕಾರದ ವಿಶೇಷ ಸವಲತ್ತುಗಳು ಮಧ್ಯವರ್ತಿಗಳ ಹಾಗೂ ಅಧಿಕಾರಿಗಳ ಉದಾಸೀನದಿಂದಾಗಿ ದೊರೆಯುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮಹಾಪ್ರಬಂಧದಲ್ಲಿ ಕುಲಕಸುಬು ಸಮುದಾಯದವರ ಜೀವನದಲ್ಲಿ ಸಮಸ್ಯೆಗಳಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.

ಪ್ರಸ್ತುತ ಮಹಾಪ್ರಬಂಧವು 'ಕುಲಕಸುಬುಗಳು ಮತ್ತು ಆಧುನಿಕತೆ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)' ಎಂಬ ಶೀರ್ಷಿಕೆ ಹೊಂದಿದ್ದು, ಅದು ಕುಲಕಸುಬುಗಳ ವಿವರಣೆ ಹಾಗೂ ಕುಲಕಸುಬುದಾರರ ಸಮಸ್ಯೆ, ಸವಾಲುಗಳನ್ನು, ಅವುಗಳ ಸಾಮಾಜಿಕ ಹಾಗೂ ಆರ್ಥಿಕ ಮಹತ್ವವನ್ನು ಕೂಲಂಕಶವಾಗಿ ಅರಿಯಲು ಪ್ರಯತ್ನಿಸಿದೆ. ಕುಲಕಸುಬುಗಳ ಸಮಸ್ಯೆಗಳ ನಿವಾರಣೆಗೆ ಕೈಗೊಳ್ಳಬೇಕಾದ ಪರಿಹಾರೋಪಾಯಗಳನ್ನು ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಅಧ್ಯಯನದ ಫಲಿತಗಳು:

ಮಹಾಪ್ರಬಂಧದ ಅಧ್ಯಯನದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕುಲಕಸುಬುಗಳ ವಿವಿಧ ಆಯಾಮಗಳನ್ನು ಪರಿಶೀಲಿಸಿದಾಗ ಕಂಡುಬಂದ ಫಲಿತಗಳ ವಿವರಣೆ ಈ ಕೆಳಕಂಡಿಂತಿವೆ.

* ಬಳ್ಳಾರಿ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಕುಲಕಸುಬುಗಳಿಗೆ ಚಾರಿತ್ರಿಕ ಹಿನ್ನೆಲೆ ಇರುವ ಅಂಶ ಕಂಡುಬರುತ್ತದೆ.
* ಕುಲಕಸುಬುಗಳನ್ನು ಭೂರಹಿತ ಹಾಗೂ ಹಿಂದುಳಿದ ಸಮುದಾಯಗಳು ಉಪಜೀವನಕ್ಕಾಗಿ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಅವರ ಕುಟುಂಬಗಳ ಸದಸ್ಯರ ಪ್ರಮಾಣ ಅಧಿಕವಾಗಿರುವುದರಿಂದ ಅವರ ಕುಟುಂಬವನ್ನು ಬಡತನ, ಅನಾರೋಗ್ಯ, ಅನಕ್ಷರತೆ ಮತ್ತು ನಿರುದ್ಯೋಗಗಳು ಸಹಜವಾಗಿ ಕಾಡುತ್ತಿವೆ.
* ಕುಟುಂಬದ ನಿರ್ವಹಣೆಗೆ ದುಡಿಮೆಯು ಗಂಡಿನಷ್ಟೇ ಹೆಣ್ಣನ್ನು ಸಮಾನವಾಗಿ ಅವಲಂಬಿಸಿದೆ.
* ಕುಲಕಸುಬುದಾರರ ಕುಟುಂಬಗಳಲ್ಲಿ ಕಡಿಮೆ ಪ್ರಮಾಣದ ಕುಟುಂಬ ಯೋಜನೆಯ ಫಲಾನುಭವಿಗಳಿದ್ದಾರೆ.
* ಕುಲಕಸುಬುಗಳ ಮೇಲೆ ಆಧುನೀಕರಣದ ಪ್ರಭಾವ ಬೀರಿರುವುದು ಕಂಡುಬರುತ್ತದೆ.
* ಕುಲಕಸುಬುಗಳನ್ನು ನಿರ್ವಹಿಸುವ ಪರಿಸರ ಉತ್ತಮವಾಗಿಲ್ಲ.
* ಬಹಳಷ್ಟು ಕುಲಕಸುಬುಗಳು ಹಳೆಯ ಉತ್ಪಾದನಾ ವಿಧಾನಗಳನ್ನು ಅಳವಡಿಸಿಕೊಂಡಿರುವುದು.
* ಸರಕುಗಳ ಸಂಗ್ರಹಣೆ ಸಮರ್ಪಕವಾಗಿಲ್ಲ. ಕಚ್ಚಾವಸ್ತುಗಳ ಸಮಸ್ಯೆ ನಿರಂತರವಾಗಿರುವುದು.
* ಕುಲಕಸುಬುದಾರರು ತಯಾರಿಸುವ ಸರುಕುಗಳಿಗೆ ಯಾವುದೇ ಬ್ರಾಂಡ್ ನೇಮ್ (Brand name) ಇಲ್ಲದಿರುವುದು ಕಂಡುಬರುತ್ತದೆ.
* ಸಿದ್ಧವಸ್ತುಗಳ ಮಾರಾಟದ ಸಮಸ್ಯೆ ಕಂಡುಬರುತ್ತದೆ. ಸಂತೆ, ಜಾತ್ರೆ, ಜನಸಂದಣಿ ಪ್ರದೇಶಗಳೇ ಮಾರಾಟದ ಸ್ಥಳಗಳಾಗಿವೆ.

* ಕುಲಕಸುಬುದಾರರಲ್ಲಿ ಆಧುನಿಕತೆಯ ಬಗ್ಗೆ ಪ್ರಶಂಸೆ ಹಾಗೂ ಮೆಚ್ಚುಗೆ ವ್ಯಕ್ತವಾದರೂ ತಮ್ಮ ವೃತ್ತಿಯಲ್ಲಿನ ಅಸ್ಥಿರತೆಯಿಂದ ಅವರ ಅಂತರಾಳದಲ್ಲಿ ಆಧುನಿಕತೆಯ ಬಗ್ಗೆ ಆತಂಕ, ಭಯ ಆವರಿಸಿದೆ.
* ಕುಲಕಸುಬುದಾರರಲ್ಲಿ ಹೆಚ್ಚಾಗಿ ಅನಕ್ಷರಸ್ಥರು ಕಂಡುಬರುತ್ತಾರೆ.
* ಕುಲಕಸುಬುದಾರರು ತಮ್ಮ ಮಕ್ಕಳನ್ನು ಶಾಲಾ–ಕಾಲೇಜುಗಳಿಗೆ ಕಳಿಸುವ ಪ್ರಮಾಣ ಕಡಿಮೆ ಇದೆ. ಪ್ರಾಥಮಿಕ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಿದರೂ ನಂತರದ ಶಿಕ್ಷಣಕ್ಕೆ ಕಳುಹಿಸುವ ಪ್ರಮಾಣ ಕಡಿಮೆ.
* ಕುಲಕಸುಬುದಾರರ ಸಮುದಾಯಗಳಿಗೆ ಸರ್ಕಾರ ಜಾರಿಗೊಳಿಸಿರುವ ಶಿಕ್ಷಣ, ಹಾಗೂ ಇತರೆ ಸೌಲಭ್ಯಗಳ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ.
* ಕುಲಕಸುಬುದಾರರು ತಮ್ಮ ಮಕ್ಕಳು ಕುಲಕಸುಬುಗಳನ್ನು ಅನುಸರಿಸಲು ಇಷ್ಟಪಡುತ್ತಿಲ್ಲ.
* ಕುಲಕಸುಬುದಾರರ ಕುಟುಂಬಗಳಲ್ಲಿ ಜನನ ಮತ್ತು ಮರಣ ಪ್ರಮಾಣ ಹೆಚ್ಚಾಗಿರುವುದು ಕಂಡುಬರುತ್ತದೆ.
* ಹಿರಿಯ ತಲೆಮಾರಿನ ಕುಲಕಸುಬುದಾರರು ದೇವರು, ದೆವ್ವ, ಕರ್ಮ, ಮೂಢನಂಬಿಕೆಗಳ ಬಗ್ಗೆ ನಂಬಿಕೆ ಹೊಂದಿದ್ದಾರೆ.
* ಕುಲಕಸುಬುದಾರರು ವರ್ಷಕ್ಕೊಮ್ಮೆ ತಮ್ಮ ಕುಲದೇವರ ಮತ್ತು ಹಿರಿಯರ ಹಬ್ಬ ಉತ್ಸವಗಳನ್ನು ಆಚರಿಸುವ ಸಂಸ್ಕೃತಿಯನ್ನು ಹೊಂದಿದ್ದಾರೆ.
* ಕುಲಕಸುಬುದಾರ ದುಡಿಮೆಗೆ ಅವಶ್ಯಕವಾದ ಸಾಮಾಜಿಕ ಭದ್ರತೆಯ ಸೌಕರ್ಯಗಳಿಲ್ಲ.
* ಇತ್ತೀಚಿನ ವರ್ಷಗಳಲ್ಲಿ ಕುಲಕಸುಬುದಾರರು ಗಣಿಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿರುವರು.
* ಕುಲಕಸುಬುದಾರರ ಆದಾಯವು ನಿಶ್ಚಿತ ಹಾಗೂ ನಿರಂತರವಾಗಿರುವುದಿಲ್ಲ.
* ಬಹಳಷ್ಟು ಕುಲಕಸುಬುದಾರರಿಗೆ ಸ್ಥಿರ ಹಾಗೂ ಚರ ಸ್ವರೂಪಗಳಲ್ಲಿ ಯಾವುದೇ ನಿಶ್ಚಿತವಾದ ಆದಾಯದ ಮೂಲಗಳು ವಿರಳವಾಗಿವೆ.
* ಕುಲಕಸುಬುದಾರರು ಹಳ್ಳಿಗಳಿಂದ ನಗರಗಳಿಗೆ ವಲಸೆ ಹೋಗುತ್ತಿರುವುದು ಕಂಡುಬರುತ್ತದೆ.
* ಹೆಚ್ಚಿನ ಕುಲಕಸುಬುದಾರರಿಗೆ ಉತ್ತಮ ರೀತಿಯ ವ್ಯವಸ್ಥಿತವಾದ ವಸತಿ ಸೌಕರ್ಯಗಳಿಲ್ಲ.
* ಕುಲಕಸುಬುದಾರರ ಮನೆಗಳಿಗೆ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಪರಿಪೂರ್ಣವಾಗಿಲ್ಲ.
* ಕುಲಕಸುಬುಗಳ ಸಂಘಟನೆ ಸದೃಢವಾಗಿಲ್ಲ.
* ಕುಲಕಸುಬುದಾರರಿಗೆ (ನೇಕಾರರನ್ನು ಹೊರತುಪಡಿಸಿ) ಸಂಬಂಧಿಸಿದಂತೆ ಸರ್ಕಾರದ ನಿರ್ದಿಷ್ಟವಾದ ಯೋಜನೆಗಳಿಲ್ಲ.

* ದೊಡ್ಡ ಕೈಗಾರಿಕೆಗಳು ಗುಡಿಕೈಗಾರಿಕೆಗಳಿಗೆ ತುಂಬಾ ಪೈಪೋಟಿ ನೀಡುತ್ತಿವೆ.
* ಕುಲಕಸುಬುದಾರರಲ್ಲಿ ಕ್ಷಯ, ಅಸ್ತಮ, ಹೃದಯ ಸಂಬಂಧಿ ಕಾಯಿಲೆಗಳು ಸಹಜವೆಂಬಂತಿವೆ.
* ಕುಲಕಸುಬುಗಳಿಗೆ ಪ್ರತ್ಯೇಕ ಆರೋಗ್ಯ ಸೌಲಭ್ಯಗಳಿಲ್ಲ.
* ಕೈಗಾರೀಕರಣ ಮತ್ತು ಗಣಿಗಾರಿಕೆಯು ಕುಲಕುಸುಬುಗಳ ಮೇಲೆ ಕೆಟ್ಟ ಪ್ರಭಾವ ಬೀರಿದೆ.
* ಜಿಲ್ಲೆಯಲ್ಲಿನ ಕೈಗಾರಿಕೀಕರಣ ಮತ್ತು ಗಣಿಕಾರಿಕೆಯಿಂದಾಗಿ ಕುಲಕಸುಬುಗಳು ಅವನತಿಯ ಹಾದಿ ಹಿಡಿದಿವೆ.
* ಜಿಲ್ಲೆಯಲ್ಲಿರುವ ವಿವಿಧ ಕುಲಕಸುಬುಗಳ ಹಾಗೂ ಕುಲಕಸುಬುದಾರರ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿಲ್ಲದಿರುವುದು ಕಂಡುಬರುತ್ತದೆ.

ಉಪಯುಕ್ತ ಅಂಶಗಳು:

ಬಳ್ಳಾರಿ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡು ಫಲಿತಗಳ ಆಧಾರದ ಮೇಲೆ, ಕುಲಕಸುಬುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗಾಗಿ ಮತ್ತು ಅವುಗಳು ಎದುರಿಸುವ ಸಮಸ್ಯೆಗಳ ನಿವಾರಣೆಗಾಗಿ ಈ ಕೆಳಗಿನ ಕೆಲವು ಪ್ರಮುಖವಾದ ಉಪಯುಕ್ತ ಅಂಶಗಳನ್ನು ನೀಡಲಾಗಿದೆ.

* ಜಿಲ್ಲೆಯಲ್ಲಿನ ಕುಲಕಸುಬುಗಳ ಸಂಖ್ಯೆ ಮತ್ತು ಅವುಗಳಲ್ಲಿ ತೊಡಗಿಕೊಂಡಿರುವವರ ಸಂಪೂರ್ಣ ಮಾಹಿತಿ ಸಂಗ್ರಹಿಸುವುದು.
* ಕುಲಕಸುಬುದಾರರಿಗೆ ಮೂಲ ಸವಲತ್ತುಗಳಾದ ವಾಸಿಸಲು ಮನೆ, ಕಾರ್ಯ ನಿರ್ವಹಿಸಲು ಅಗತ್ಯವಾದ ಶೆಡ್‌ಗಳನ್ನು ನಿರ್ಮಿಸಿಕೊಡುವುದು.
* ವೃತ್ತಿಗೆ ಸೂಕ್ತವಾದ ಆಧುನಿಕ ಯಂತ್ರೋಪಕರಣಗಳನ್ನು ಪೂರೈಸುವುದು.
* ವೃತ್ತಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ ಕುಲಕಸುಬುದಾರರಿಗೆ ತಮ್ಮ ವೃತ್ತಿಗೆ ಸಂಬಂಧಿಸಿದಂತೆ ತರಬೇತಿ ನೀಡುವುದು.
* ತರಬೇತಿಯಲ್ಲಿ ಉಚಿತ ಊಟ, ವಸತಿ ಹಾಗೂ ವೃತ್ತಿಯ ಉಪಕರಣಗಳನ್ನು ನೀಡುವುದು.
* ವೃತ್ತಿ ತರಬೇತಿ ಪಡೆದು ಕೊಂಡವರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯವನ್ನು ಒದಗಿಸುವುದು.
* ಕುಲಕಸುಬುದಾರರಿಗೆ ಅವಶ್ಯಕತೆಗೆ ತಕ್ಕಂತೆ ಕಡಿಮೆ ಬಡ್ಡಿ ದರದಲ್ಲಿ ಅಲ್ಪಾವಧಿ ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡುವುದು.
* ಕೈಗಾರಿಕರಣ ಹಾಗೂ ಜಾಗತೀಕರಣದ ಈ ಸಂದರ್ಭದಲ್ಲಿ ಸರ್ಕಾರಿ ಮತ್ತು ಅರೆ ಸರ್ಕಾರಿ ಹುದ್ದೆಗಳು ಕಡಿಮೆಯಾಗುತ್ತಿರುವುದರಿಂದ ಗುಣಾತ್ಮಕ ಶಿಕ್ಷಣದ ಮೂಲಕ ವಿಶೇಷ ಕೌಶಲ್ಯ ಪಡೆದುಕೊಂಡು ಯಾವುದೇ ತರಹದ ಕೌಶಲ್ಯಾಧಾರಿತ ವೃತ್ತಿಗಳನ್ನು ಮಾಡುವಂತೆ ಯುವಕರು ತಯಾರಾಗುವಂತೆ ನೋಡಿಕೊಳ್ಳುವುದು.

* ಕುಲಕಸುಬುದಾರರಿಗೆ ಅಗತ್ಯವಾದ ಕಚ್ಚಾವಸ್ತುಗಳು ಹಾಗೂ ವಿದ್ಯುತ್‌ನ್ನು ಕಡಿಮೆ ಬೆಲೆಯಲ್ಲಿ ನಿರಂತರವಾಗಿ ಪೂರೈಸುವುದು.
* ಕುಲಕಸುಬುದಾರರ ಮಕ್ಕಳಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ನಿಗದಿಪಡಿಸುವುದು.
* ಆರ್ಥಿಕವಾಗಿ ಹಿಂದುಳಿದಿರುವ ಕುಲಕಸುಬುದಾರರನ್ನು ಹಿಂದುಳಿದ ವರ್ಗಗಳಿಗೆ ಸೇರಿಸಿ ವಿಶೇಷ ಸೌಲಭ್ಯಗಳನ್ನು ನೀಡುವುದು.
* ಕುಲಕಸುಬುದಾರರು ತಯಾರಿಸುವ ವಸ್ತು ಮತ್ತು ಸೇವೆಗಳಿಗೆ ವೈಜ್ಞಾನಿಕ ಬೆಲೆಯನ್ನು ನಿರ್ಧರಿಸುವುದು.
* ಕುಲಕಸುಬುದಾರರಿಗೆ ಪ್ರತ್ಯೇಕ ಮಾರುಕಟ್ಟೆ, ಮಳಿಗೆ ಹಾಗೂ ಉಗ್ರಾಣಗಳ ವ್ಯವಸ್ಥೆ ಮಾಡುವುದು.
* ತಾಲ್ಲೂಕು, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ವಸ್ತುಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯನ್ನು ಕಲ್ಪಿಸುವುದು.
* ಕುಲಕಸುಬುದಾರರು ತಮ್ಮ ಮೂಲ ವೃತ್ತಿಯನ್ನು ಮುಂದುವರಿಸಿಕೊಂಡು ಬರುವವರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸುವುದು.
* ಕುಲಕಸುಬುದಾರ ಮಹಿಳೆಯರಿಗೆ ಶಿಕ್ಷಣ ಕಡ್ಡಾಯಗೊಳಿಸುವುದು.
* ಕುಲಕಸುಬುಗಳಿಗೆ ಪ್ರತ್ಯೇಕ ಕೈಗಾರಿಕಾ ವಸಾಹತು ಸ್ಥಾಪಿಸುವುದು.
* ಕುಲಕಸುಬು ಸಮುದಾಯದ ಜನರಲ್ಲಿ ಜಾಗೃತಿಯುಂಟು ಮಾಡುವುದು. ನೈರ್ಮಲ್ಯ, ಕುಟುಂಬ ಯೋಜನೆ, ಶಿಕ್ಷಣ ವಿಷಯಗಳ ಕುರಿತು ಜಾಗೃತಿ ಶಿಬಿರಗಳನ್ನು ಏರ್ಪಡಿಸುವುದು.
* ಕುಲಕಸುಬುದಾರರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಆಗಿಂದಾಗ್ಗೆ ಸಮೀಕ್ಷೆಗಳನ್ನು ಕೈಗೊಳ್ಳುವುದು.
* ವೃತ್ತಿ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿ, ವೃತ್ತಿದಾರರೆಲ್ಲರೂ ಕಡ್ಡಾಯವಾಗಿ ಸಂಘಗಳ ಸದಸ್ಯತ್ವವನ್ನು ಪಡೆದುಕೊಳ್ಳಲು ಪ್ರೇರೇಪಿಸುವುದು.
* ಕುಲಕಸುಬುಗಳನ್ನು ಮಾಡುತ್ತಿರುವ ಮಹಿಳೆಯರಿಗೆ ನೈತಿಕ ಬೆಂಬಲ ನೀಡುವುದು.
* ರಾಜ್ಯಮಟ್ಟದಲ್ಲಿ ಕುಲಕಸುಬುಗಳ ನಿಗಮಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಕುಲಕಸುಬುಗಳ ಅಭಿವೃದ್ಧಿಗೆ ಬೇಕಾದ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುವುದು.
* ಸರಕಾರದ ಸೌಲಭ್ಯಗಳು ಕುಲಕಸುಬುದಾರರಿಗೆ ನೇರವಾಗಿ ಲಭ್ಯವಾಗುವಂತೆ ನೋಡಿಕೊಳ್ಳುವುದು.
* ಆಕಸ್ಮಿಕವಾಗಿ ಸಂಭವಿಸುವ ಅನಾಹುತಗಳಿಗೆ ಸೂಕ್ತ ಪರಿಹಾರ ಹಾಗೂ ಕುಟುಂಬದ ಭದ್ರತೆಗಾಗಿ ಸರಕಾರ ನೆರವಿನ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.

ಈ ಪ್ರಬಂಧದ ಅಧ್ಯಯನದ ದೃಷ್ಟಿಯಿಂದ ಕೈಗೊಂಡ ಸಂಶೋಧನಾ ಸಂದರ್ಭದಲ್ಲಿ ಈ ಮೇಲ್ಕಾಣಿಸಿದ ವಿಷಯಗಳ ಅವಶ್ಯಕತೆಯು ಕುಲಕಸುಬುದಾರರಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಪ್ರಸ್ತುತ ಆಧುನಿಕತೆ ಮತ್ತು ಜಾಗತೀಕರಣದ ಸನ್ನಿವೇಶವು ಹಲವಾರು ವೈಪರಿತ್ಯಗಳನ್ನು ಹುಟ್ಟು ಹಾಕುವುದರಿಂದ ಈಗಾಗಲೇ ಅನೇಕ ಕುಲಕಸುಬುಗಳು ನಾಶಗೊಂಡಿವೆ. ದೈಹಿಕ ಸಾಮರ್ಥ್ಯವನ್ನು ನಂಬಿ ತಮ್ಮ ಬದುಕನ್ನು ಕಟ್ಟಿಕೊಂಡ ನೂರಾರು ಕುಲಕಸುಬುದಾರರು ನಿರುದ್ಯೋಗಿಗಳಾಗಿ, ನಿರ್ಗತಿಕರಾಗಿ ತಮ್ಮ ಜೀವನ ಕಳೆಯುವಂತಾಗಿದೆ. ಇಂತಹ ಭಯಾನಕ ವ್ಯವಸ್ಥೆಯಲ್ಲಿ ಕುಲಕಸುಬುದಾರರು ಬದುಕುತ್ತಿರುವುದರಿಂದ ಅವರ ದೈನಂದಿನ ಜೀವನ ಕಷ್ಟಕರವಾಗಿದೆ. ಅವರ ವೃತ್ತಿ ಜೀವನದ ಬದಲಾವಣೆಗೆ ಪೂರಕವಾದ ಸಂಕ್ರಮಣ ಕಾಲ ಘಟ್ಟದಲ್ಲಿದ್ದಾರೆಂಬುದು ಕ್ಷೇತ್ರ ಕಾರ್ಯದಿಂದ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಘನ ಸರ್ಕಾರಗಳು, ಅಧಿಕಾರಿ ವರ್ಗದವರು, ರಾಜಕೀಯ ನಾಯಕರು, ಸಂಘ-ಸಂಸ್ಥೆಗಳು, ಒಗ್ಗೂಡಿ ಕುಲಕಸುಬುಗಳ ರಕ್ಷಣೆಗೆ ಅಗತ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕಾಗಿದೆ. ಇಂದು ನಾವು ಆಧುನೀಕರಣ ಹಾಗೂ ಜಾಗತೀಕರಣದ ಸಂದರ್ಭದಲ್ಲಿ ಕೇವಲ ಲಾಭದ ಬೆನ್ನು ಹತ್ತಿ, ಆಧುನಿಕ ತಂತ್ರಜ್ಞಾನಕ್ಕೆ ಮನಸೋಲುವುದು ಸರ್ವಥಾ ಸಲ್ಲದು. ಏಕೆಂದರೆ ಸಮಾಜದ ಬಹು ಮುಖ್ಯವಾದ ಕುಲಕಸುಬುಗಳು ಅವನತಿ ಹೊಂದಿ ಕುಲಕಸುಬುದಾರರು ನಿರುದ್ಯೋಗಿಗಳಾಗುವ ಸಂಭವವಿದೆ. ಕೇವಲ ದೈಹಿಕ ಶ್ರಮವನ್ನು ನೆಚ್ಚಿಕೊಂಡ ಅನೇಕ ಕುಲಕಸುಬು ಸಮುದಾಯಗಳಿಗೆ ಬದಕುಲು ಅವಕಾಶ ಮಾಡಿಕೊಡಬೇಕಾಗಿದೆ. ಶಿಕ್ಷಣ, ತಂತ್ರಜ್ಞಾನ, ಹಾಗೂ ಆಧುನೀಕರಣದ ಜ್ಞಾನವನ್ನು ಅವರಿಗೆ ಒದಗಿಸಲು. ವ್ಯವಸ್ಥಿತವಾದ ಕಾರ್ಯ ಯೋಜನೆಗಳನ್ನು ಕೈಗೊಳ್ಳುವುದು ಸೂಕ್ತ. ಇಲ್ಲವಾದರೆ ನಿರುದ್ಯೋಗಿಗಳ ಹೆಚ್ಚಳದಿಂದಾಗಿ ಬಡತನ, ಅನಾರೋಗ್ಯ, ಅಶಾಂತಿ ಹೆಚ್ಚುವುದರಲ್ಲಿ ಸಂಶಯವೇ ಇಲ್ಲ.

ಇಂತಹ ಅಸಂಬದ್ಧ ಬೆಳವಣಿಗೆಯು ನಮ್ಮ ಸುತ್ತಲಿನ ವ್ಯವಸ್ಥೆಯಲ್ಲಿ ಸರಕಾರ ಕುಲಕಸುಬುದಾರರ ಸಾಮಾಜಿಕ, ಆರ್ಥಿಕ ಬೆಳವಣಿಗೆಗೆ ಪೂರಕ ಕಾರ್ಯ ಯೋಜನೆಗಳನ್ನು ಕೈಗೊಳ್ಳಲು ಮುಂದಾಗಬೇಕಾಗಿದೆ. ಅಂದಾಗ ಮಾತ್ರ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಾದ ಸೇವೆ, ಸಹಕಾರ, ಭದ್ರತೆ ಒದಗಿ ಬಂದು ಶಾಂತಿ ಸರ್ವರ ಪಾಲಿಗೆ ಸೇರುತ್ತದೆ. ಇದಕ್ಕಾಗಿ ಕುಲಕಸುಬುಗಳು ಮತ್ತು ಅವನ್ನು ಅವಲಂಬಿಸಿ ಜೀವನ ಮಾಡುವವರ ಬಗ್ಗೆ ಸಮಾಜ, ಸಹಾಯ, ಸಹಕಾರಗಳನ್ನು ನೀಡುವುದು ಅಗತ್ಯ.

ಮುಂದಿನ ಅಧ್ಯಯನದ ಸಾಧ್ಯತೆಗಳು:

ಜಿಲ್ಲೆಯ ಕುಲಕಸುಬುಗಳ ಅಧ್ಯಯನದ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಸಂಶೋಧಕರು, ಅಧ್ಯಯನಕಾರರು ಇಂತಹ ಕಸುಬುಗಳ ಬಗ್ಗೆ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಮಾನವಶಾಸ್ತ್ರೀಯ ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡುವ ಸಾಧ್ಯತೆಗಳಿವೆ.

ಕರ್ನಾಟಕದ ಉದ್ದಗಲಕ್ಕೂ ಕಂಡುಬರುವ ಕುಲಕಸುಬುಗಳು ಕುರಿತು ಅಧ್ಯಯನ ಮಾಡುವವರಿಗೆ ಪ್ರಸ್ತುತ ಈ ಮಹಾಪ್ರಬಂಧ ಮಾರ್ಗ ಸೂಚಿಯಾಗಬಹುದು. ಒಟ್ಟಿನಲ್ಲಿ ಬಳ್ಳಾರಿ ಜಿಲ್ಲೆಯ ಕುಲಕಸುಬುಗಳು ಮತ್ತು ಆಧುನಿಕತೆ ಎಂಬೀ ವಿಷಯದ ಪ್ರಬಂಧ ಕುಲಕಸುಬುಗಳ ಕುರಿತು ಮಾಹಿತಿ ದೊರಕಿಸಿಕೊಡಬಲ್ಲ ಒಂದು ಪ್ರಾಮಾಣಿಕ ಪ್ರಯತ್ನವಾಗಿದೆ. ಆದಾಗ್ಯೂ ನನ್ನ ಗಮನಕ್ಕೆ ಬರದೆ ಇರುವ ಸಂಶೋಧನಾಂಶಗಳು ಉಳಿದಿರುವ ಸಾಧ್ಯತೆಗಳಿವೆ. ಆಸಕ್ತ ಸಂಶೋಧಕರು ಹಾಗೂ ಅಧ್ಯಯನಕಾರರು ಈ ಬಗೆಗೆ ಹೆಚ್ಚಿನ ಅಧ್ಯಯನ ಕೈಗೊಳ್ಳಲು ವಿಪುಲವಾದ ಅವಕಾಶಗಳಿವೆ.

ಅನುಬಂಧಗಳು

ಅಂಕಿ–ಅಂಶಗಳು

ವೃತ್ತಿ ಪದಕೋಶ


ಪ್ರಶ್ನಾವಳಿ

ವಕ್ತೃಗಳ ವಿವರ

ಪರಾಮರ್ಶನ ಗ್ರಂಥಗಳು

ಛಾಯಾಚಿತ್ರಗಳು

ಬಳ್ಳಾರಿ ಜಿಲ್ಲೆ


ರಾಯಚೂರು
ಸಿರಗುಪ್ಪ
ಆಂಧ್ರಪ್ರದೇಶ
ಕೊಪ್ಪಳ
ಹೊಸಪೇಟೆ
ಬಳ್ಳಾರಿ
ಗದಗ
ಹ.ಬೊ.ಹಳ್ಳಿ
ಸಂಡೂರು
ಹೂ.ಹಡಗಲಿ
ಕೂಡ್ಲಿಗಿ
ಹಾವೇರಿ
ಚಿತ್ರದುರ್ಗ
ದಾವಣಗೆರೆ

ಬಳ್ಳಾರಿ ಜಿಲ್ಲೆಯ ಅಂಕಿ-ಅಂಶಗಳು

ಕ್ರಸಂ.	ವಿವರ	ಸಂಬಂಧಿಸಿದ ಅವಧಿ	ಜಿಲ್ಲೆ
೧.	ಒಟ್ಟು ಗ್ರಾಮಗಳು	೨೦೦೧ರ ಜನಗಣತಿ	೫೫೪
	* ಜನವಸತಿ ಇರುವ ಗ್ರಾಮಗಳು	"	೫೨೪
	* ಜನವಸತಿ ಇಲ್ಲದಿರುವ ಗ್ರಾಮಗಳು	"	೩೦
೨.	ಒಟ್ಟು ಜನಸಂಖ್ಯೆ	"	೨೦,೨೭,೧೪೦
	* ಗ್ರಾಮೀಣ ಜನಸಂಖ್ಯೆ	"	೧೩,೨೦,೨೯೦.
	* ನಗರ ಜನಸಂಖ್ಯೆ	"	೭,೦೬,೮೫೦
	* ಪರಿಶಿಷ್ಟ ಜಾತಿ ಜನಸಂಖ್ಯೆ	"	೩,೭೪,೨೧೮
	* ಪರಿಶಿಷ್ಟ ಪಂಗಡ ಜನಸಂಖ್ಯೆ	"	೩,೬೪,೬೩೮
೩.	ಜನಸಾಂದ್ರತೆ (ಚ.ಕೀ)	"	೨೪೦
೪.	ಕೆಲಸಗಾರರ ಸಂಖ್ಯೆ	"	೯,೨೦,೮೨೦
೫.	ಕೆಲಸಗಾರರಲ್ಲದವರು	"	೧೧,೦೬,೩೧೯
೬.	ಕೃಷಿ ಕಾರ್ಮಿಕರ ಸಂಖ್ಯೆ	"	೩,೬೧,೪೩೩
೭.	ವ್ಯವಸಾಯಗಾರರ ಸಂಖ್ಯೆ	"	೨,೫೧,೨೦೭
೮.	ಒಟ್ಟು ಭೌಗೋಳಿಕ ಪ್ರದೇಶ		೮,೧೩,೧೯೬ ಹೆ
	* ಅರಣ್ಯ ಪ್ರದೇಶ		೯೭,೦೧೭ ಹೆ
	* ಒಟ್ಟು ಬಿತ್ತನೆಯಾದ ಪ್ರದೇಶ	೨೦೦೬-೦೭ರ ಬೆಳೆವರದಿ	೫,೯೫,೬೮೭ ಹೆ
	* ನೀರಾವರಿ ಒಟ್ಟು ಪ್ರದೇಶ	೨೦೦೬-೦೭ರ ಬೆಳೆವರದಿ	೨,೪೭,೮೪೯ ಹೆ
೯.	ಪಂಪು ಸೆಟ್‌ಗಳ ವಿದ್ಯುದೀಕರಣ	೩೧.೦೩.೨೦೦೭	೧,೯೫,೦೭೪.

೧೦.	ಒಟ್ಟು ಬ್ಯಾಂಕುಗಳು	೩೧.೦೩.೨೦೦೭	೧೯೯
೧೧.	ಸಹಕಾರ ಸಂಘಗಳು	೩೧.೦೩.೨೦೦೭	೧೪೭
೧೨.	ಸಹಕಾರ ಸಂಘಗಳ ಸದಸ್ಯರು	೩೧.೦೩.೨೦೦೭	೩,೯೯,೨೬೦
೧೩.	ಒಟ್ಟು ಮೋಟಾರು ವಾಹನಗಳು	೩೧.೦೩.೨೦೦೭	೧,೯೫,೦೭೪
೧೪.	ರಸ್ತೆಯ ಉದ್ದಳತೆ	೩೧.೦೩.೨೦೦೭	೬೯೪೨.೩೮ ಕಿ.ಮೀ.
೧೫.	ಅಂಚೆ ಕಛೇರಿಗಳು	೩೧.೦೩.೨೦೦೭	೩೯೨
೧೬.	ದೂರವಾಣಿಗಳ ಸಂಖ್ಯೆ	೩೧.೦೩.೨೦೦೭	೫೦,೧೯೧
೧೭.	ಆದಾಯ (ಚಾಲ್ತಿ ಬೆಲೆಗಳಲ್ಲಿ)	೨೦೦೪-೦೫	೫,೯೦,೧೧೯ ಲಕ್ಷ
೧೮.	ತಲಾ ಆದಾಯ (ಚಾಲ್ತಿ ಬೆಲೆಗಳಲ್ಲಿ)	೨೦೦೪-೦೫	೨೭,೮೦೮
೧೯.	ಪ್ರಾಥಮಿಕ ಶಾಲೆಗಳು	೩೧.೦೩.೨೦೦೭	೧೭೩೮
೨೦.	ಪ್ರೌಢ ಶಾಲೆಗಳು	೩೧.೦೩.೨೦೦೭	೩೧೪
೨೧.	ಪದವಿಪೂರ್ವ ಕಾಲೇಜುಗಳು	೩೧.೦೩.೨೦೦೭	೭೧
೨೨.	ಪದವಿ ಕಾಲೇಜುಗಳು (ಸಾಮಾನ್ಯ)	೩೧.೦೩.೨೦೦೭	೨೧
೨೩.	ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳು	೩೧.೦೩.೨೦೦೭	೦೭
೨೪.	ಪ್ರಾಥಮಿಕ ಆರೋಗ್ಯ ಕೇಂದ್ರಗಳು	೩೧.೦೩.೨೦೦೭	೫೪
೨೫.	ನ್ಯಾಯಬೆಲೆ ಅಂಗಡಿಗಳು	೩೧.೦೩.೨೦೦೭	೬೦೬
೨೬.	ಅನಕ್ಷರಸ್ಥ ವಯಸ್ಕ ಮಹಿಳೆಯರು	೨೦೦೧ರ ಜನಗಣತಿ	೬೭.೭೬ ಶೇ.
೨೭.	ಮಹಿಳೆ ಸಾಕ್ಷರತೆ ದರ	"	೩೨.೨೪ ಶೇ.
೨೮.	ಪುರಷ ಸಾಕ್ಷರತೆ ದರ	"	೬೯.೫೯ ಶೇ.
೨೯.	ಒಟ್ಟಾರೆ ಸಾಕ್ಷರತೆ ದರ	"	೫೭.೪೦ ಶೇ.

ಆಧಾರ : ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳ ನೋಟ-೨೦೦೬-೦೭.

ಕರ್ನಾಟಕ ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕುಗಳ ಅಂಕಿ-ಅಂಶಗಳ ಸ್ಥೂಲನೋಟ

ಕ್ರ ಸಂ.	ವಿವರಗಳು		ಕರ್ನಾಟಕ	ಬಳ್ಳಾರಿ ಜಿಲ್ಲೆ	ಹಡಗಲಿ	ಹ.ಬೊ.ಹಳ್ಳಿ	ಹೊಸಪೇಟೆ	ಸಿರುಗುಪ್ಪ	ಬಳ್ಳಾರಿ	ಸಂಡೂರು	ಕೂಡ್ಲಿಗಿ
೦೧	ಜನಸಂಖ್ಯೆ (೨೦೦೧)	ಒಟ್ಟು	೫೨,೮೫೦,೫೬೨	೨,೦೨೭,೧೪೦	೧೬೮,೧೧೮	೧೫೯,೮೮೬	೩೭೪,೯೪೯	೨೩೫,೩೪೪	೬೨೫,೪೯೪	೧೯೧,೧೬೬	೨೭೨,೧೮೩
		ಗಂಡು	೨೬,೮೯೮,೯೧೮	೧,೦೨೯,೭೧೪	೮೫,೦೫೧	೮೦,೭೭೦	೧೮೯,೬೭೪	೧೧೭,೭೩೧	೩೧೯,೦೦೮	೯೮,೨೭೮	೧೩೯,೨೦೨
		ಹೆಣ್ಣು	೨೫,೯೫೧,೬೪೪	೯೯೭,೪೨೬	೮೩,೦೬೭	೭೯,೧೧೬	೧೮೫,೨೭೫	೧೧೭,೬೧೩	೩೦೬,೪೮೬	೯೨,೮೮೮	೧೩೨,೯೮೧
	ಗ್ರಾಮೀಣ	ಒಟ್ಟು	೩೪,೮೮೯,೦೩೩	೧,೩೨೦,೨೯೦	೧೪೪,೭೦೪	೧೫೯,೮೮೬	೧೫೩,೪೯೯	೧೬೮,೮೪೨	೩೦೮,೭೨೮	೧೫೬,೯೯೮	೨೨೭,೬೩೩
		ಗಂಡು	೧೭,೬೪೮,೯೫೮	೬೬೮,೫೩೪	೭೩,೧೭೭	೮೦,೭೭೦	೭೭,೧೭೭	೮೪,೩೨೨	೧೫೬,೩೦೯	೮೦,೪೬೪	೧೧೬,೩೧೮
		ಹೆಣ್ಣು	೧೭,೨೪೦,೦೭೫	೬೫೧,೭೫೬	೭೧,೫೨೭	೭೯,೧೧೬	೭೬,೩೨೨	೮೪,೫೨೦	೧೫೨,೪೧೯	೭೬,೫೩೪	೧೧೧,೩೧೮
	ನಗರ	ಒಟ್ಟು	೧೭,೯೬೧,೫೨೯	೭೦೬,೮೫೦	೨೩,೪೧೪	–	೨೨೧,೪೫೦	೬೬,೫೦೨	೩೧೬,೭೬೬	೩೪,೧೬೮	೪೪,೫೫೦
		ಗಂಡು	೯,೨೪೯,೯೬೦	೩೬೧,೧೮೦	೧೧,೮೭೪	–	೧೧೨,೪೯೭	೩೩,೪೦೯	೧೬೨,೬೯೯	೧೭,೮೧೪	೨೨,೮೮೭
		ಹೆಣ್ಣು	೮,೭೧೧,೫೬೯	೩೪೫,೬೭೦	೧೧,೫೪೦	–	೧೦೮,೯೫೩	೩೩,೦೯೩	೧೫೪,೦೬೭	೧೬,೩೫೪	೨೧,೬೬೩
೦೨	ಜನಸಂಖ್ಯೆ ಬೆಳವಣಿಗೆ ದರ (೧೯೯೧-೨೦೦೧)		೧೭.೫	೨೨.೪	೧೪.೧	೧೮.೪	೧೯.೮	೨೪.೨	೨೬.೩	೨೨.೨	೨೪.೦
೦೩.	ವಿಸ್ತೀರ್ಣ ಚ.ಕಿ.ಮೀ.		೧೯೧೭೯೧.೦೦	೮೪೫೦.೦೦	೯೪೭.೮೨	೯೭೩.೯೫	೯೦೪.೧೭	೧೦೩೬.೧೭	೧೬೮೮.೫೯	೧೧೫೨.೪೨	೧೬೧೮.೮೭
೦೪.	ಜನಸಾಂದ್ರತೆ (ಪ್ರತಿ. ಚ.ಕಿ.ಮೀ)		೨೭೬	೨೪೦	೧೭೭	೧೬೪	೪೧೫	೨೨೭	೩೭೦	೧೬೬	೧೬೮
೦೫.	ಲಿಂಗ ಪ್ರಮಾಣ ಪ್ರತಿ ಸಾವಿರಕ್ಕೆ ಗಂಡಸರು		೯೬೫	೯೬೯	೯೭೭	೯೮೦	೯೭೭	೯೯೯	೯೬೧	೯೪೫	೯೫೫
೦೬.	ಸಾಕ್ಷರತೆ (೭ ವರ್ಷ ಮತ್ತು ಮೇಲ್ಪಟ್ಟು)	ಒಟ್ಟು	೬೬.೬	೫೭.೪	೬೦.೩	೫೮.೧	೬೦.೯	೪೩.೬	೫೯.೭	೫೩.೩	೫೯.೫
		ಗಂಡು	೭೬.೧	೬೯.೨	೭೨.೧	೭೦.೮	೭೧.೬	೫೬.೯	೭೦.೮	೬೫.೨	೭೧.೧
		ಹೆಣ್ಣು	೫೬.೯	೪೫.೩	೪೮.೨	೪೫.೨	೫೦.೦	೩೦.೩	೪೮.೨	೪೦.೪	೪೬.೪
೦೭.	ನಗರ ಜನಸಂಖ್ಯೆ (ಶೇಕಡಾವಾರು)		೩೪.೦	೩೪.೯	೧೩.೯	೦.೦	೫೯.೧	೨೮.೩	೫೦.೬	೧೭.೯	೧೬.೪
೦೮.	ಒಟ್ಟು ಜನಸಂಖ್ಯೆಯಲ್ಲಿ ಮುಖ್ಯ ಕೆಲಸಗಾರರು	ಒಟ್ಟು	೩೬.೬	೩೯.೫	೩೯.೭	೩೬.೬	೩೮.೪	೪೭.೮	೩೮.೩	೩೫.೫	೪೧.೨
		ಗಂಡು	೫೧.೭	೫೧.೨	೫೦.೩	೪೯.೦	೫೧.೭	೫೫.೨	೫೧.೩	೫೦.೪	೪೯.೦
		ಹೆಣ್ಣು	೨೧.೧	೨೭.೫	೨೮.೮	೨೪.೦	೨೪.೮	೪೦.೩	೨೪.೮	೧೯.೮	೩೩.೦
೦೯.	ಒಟ್ಟು ಕೆಲಸಗಾರರು (ಶೇಕಡಾವಾರು)		೨೯.೨	೨೭.೩	೨೮.೩	೩೦.೫	೧೬.೭	೨೫.೭	೨೩.೭	೩೦.೬	೪೩.೯
	ಕೃಷಿ ಕಾರ್ಮಿಕರು		೨೬.೫	೩೯.೩	೫೨.೩	೪೯.೩	೩೬.೧	೫೬.೧	೩೦.೩	೩೨.೮	೩೬.೨
	ಗುಡಿಕೈಗಾರಿಕೆ ಕೆಲಸಗಾರರು		೪.೧	೨.೮	೩.೦	೩.೦	೨.೯	೧.೯	೩.೦	೧.೭	೩.೭
	ಇತರೆ ಕೆಲಸಗಾರರು		೪೦.೨	೩೦.೭	೧೬.೪	೧೭.೨	೪೪.೩	೧೬.೪	೪೩.೦	೩೪.೯	೧೬.೩
೧೦.	ಪರಿಶಿಷ್ಟ ಜಾತಿ (ಶೇಕಡಾವಾರು)		೧೬.೨	೧೮.೫	೨೨.೪	೧೮.೭	೨೦.೨	೧೯.೩	೧೬.೨	೧೬.	೧೯.೨
೧೧.	ಪರಿಶಿಷ್ಟ ಜನಾಂಗ (ಶೇಕಡಾವಾರು)		೬.೬	೧೮.೦	೭.೮	೧೩.೬	೧೬.೧	೧೭.೯	೧೬.೩	೨೭.೧	೨೭.೧
೧೨.	ಗ್ರಾಮಗಳ ಸಂಖ್ಯೆ		೨೯,೪೦೬	೫೫೪	೫೭	೫೬	೭೪	೮೪	೧೦೩	೮೯	೯೧
೧೩.	ನಗರಗಳ ಸಂಖ್ಯೆ		೨೭೦	೧೧	೦೧	೦೦	೦೩	೦೨	೦೧	೦೨	೦೨

ಮೂಲ: ಬಳ್ಳಾರಿ ಜಿಲ್ಲಾ ಅಂಕಿ-ಅಂಶಗಳ ನೋಟ

ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕುವಾರು ಗುಡಿಕೈಗಾರಿಕೆ ಕೆಲಸಗಾರರು (ಶೇಕಡಾವಾರು)

ವಿವರ	ಕರ್ನಾಟಕ	ಬಳ್ಳಾರಿ ಜಿಲ್ಲೆ	ಹಡಗಲಿ	ಹ.ಬೊ.ಹಳ್ಳಿ	ಹೊಸಪೇಟೆ	ಸಿರುಗುಪ್ಪ	ಬಳ್ಳಾರಿ	ಸಂಡೂರು	ಕೂಡ್ಲಿಗಿ
ಗುಡಿ ಕೈಗಾರಿಕೆ ಕೆಲಸಗಾರರು	೪.೧	೨.೮	೩.೦	೩.೦	೨.೯	೧.೯	೩.೦	೧.೭	೩.೭
ಮಾಹಿತಿ : ಬಳ್ಳಾರಿ ಜಿಲ್ಲಾ ಅಂಕಿ–ಅಂಶಗಳ ನೋಟ ಪು–									

ಮಾನವ ಅಭಿವೃದ್ಧಿ ಸೂಚಿಗಳು ಮತ್ತು ಸೂಚ್ಯಾಂಕ

		ಸೂಚಿಗಳು				ಎಚ್.ಡಿ.ಪಿ.			
		ಆರೋಗ್ಯ		ಶಿಕ್ಷಣ		ವರಮಾನ		ಸೂಚ್ಯಾಂಕ	
		ಮೌಲ್ಯ	ಸ್ಥಾನ	ಮೌಲ್ಯ	ಸ್ಥಾನ	ಮೌಲ್ಯ	ಸ್ಥಾನ	ಮೌಲ್ಯ	ಸ್ಥಾನ
ಕರ್ನಾಟಕ	೧೯೯೧	೦.೬೧೮	–	೦.೬೦೨	–	೦.೪೦೨	–	೦.೫೪೧	–
	೨೦೦೧	೦.೬೮೦	–	೦.೭೧೨	–	೦.೫೫೯	–	೦.೬೫೦	–
ಬಳ್ಳಾರಿ	೧೯೯೧	೦.೬೩೦	೧೦	೦.೫೦೬	೨೩	೦.೩೯೯	೦೯	೦.೫೧೨	೧೮
	೨೦೦೧	೦.೬೮೫	೦೭	೦.೬೧೮	೨೩	೦.೫೪೯	೦೯	೦.೬೧೭	೧೮
ಮಾಹಿತಿ : ಅಭಿವೃದ್ಧಿ ಅಧ್ಯಯನ, ಸಮಾಜವಿಜ್ಞಾನ ಪತ್ರಿಕೆ.									

ಕಳೆದ ಐದು ದಶಕಗಳಲ್ಲಿ ಜನಸಂಖ್ಯಾ ಬೆಳವಣಿಗೆ

ಕ್ರ.ಸಂ.	ತಾಲ್ಲೂಕು	೧೯೬೧	೧೯೭೧	೧೯೮೧	೧೯೯೧	೨೦೦೧
೦೧.	ಬಳ್ಳಾರಿ	೨೦೨೮೩೭	೨೬೫೨೯೪	೩೮೬೦೧೪	೪೯೫೪೩೭	೬೨೫೪೯೪
೦೨.	ಹಡಗಲಿ	೧೧೦೩೩೪	೧೨೭೪೫೨	೧೧೫೪೫೯	೧೪೭೩೦೯	೧೬೮೧೧೮
೦೩.	ಹಗರಿಬೊಮ್ಮನಹಳ್ಳಿ	೨೮೫೫೯	೩೫೯೩೩	೯೮೮೧೪	೧೩೫೦೨೬	೧೫೯೮೮೬
೦೪.	ಹೊಸಪೇಟೆ	೧೫೩೭೧೩	೧೮೭೮೩೦	೨೬೪೦೭೧	೩೧೨೮೯೭	೩೭೪೯೪೯
೦೫.	ಕೂಡ್ಲಿಗಿ	೧೩೫೯೭೧	೧೫೭೪೫೬	೧೬೫೬೭೯	೨೧೯೪೮೦	೨೭೨೧೮೩
೦೭.	ಸಂಡೂರು	೬೭೫೯೫	೯೨೯೦೪	೧೨೬೬೫೮	೧೫೬೪೦೯	೧೯೧೧೬೬
೦೭.	ಸಿರುಗುಪ್ಪ	೮೭೫೪೭	೧೧೦೧೦೩	೧೪೮೯೨೯	೧೮೯೪೪೨	೨೩೫೩೪೪
ಜಿಲ್ಲಾ ಮೊತ್ತ		೭೮೬೫೫೬	೯೭೬೯೭೨	೧೩೦೫೬೨೪	೨೦೨೭೧೪೦	೨೦೨೭೧೪೦
ಮಾಹಿತಿ : ಬಳ್ಳಾರಿ ಜಿಲ್ಲಾ ಅಂಕಿ–ಅಂಶಗಳ ನೋಟ ಪು–೧೭						

ಕುಲಕಸುಬು ಪದಕೋಶ

ಅಡಿಗಲ್ಲು	–	ಕಮ್ಮಾರರು ಲೋಹದ ವಸ್ತುಗಳನ್ನು ಇಟ್ಟು ಬಡಿಯಲು ಆಸರೆಯಾಗಿ ಉಪಯೋಗಿಸುವ ಕಬ್ಬಿಣದ ಗಟ್ಟಿ ತುಂಡು
ಅರ	–	ಕಬ್ಬಿಣದ ವಸ್ತುಗಳನ್ನು ಹರಿತ ಮಾಡಿಕೊಳ್ಳುವ ಉಪಕರಣ
ಇಕ್ಕಳ	–	ಕಾದ ಕಬ್ಬಿಣ ಹಿಡಿದುಕೊಳ್ಳಲು ಬೇಕಾದ ಉಪಕರಣ
ಕಾನಾಸ್	–	ಕುಡುಗೋಲುಗಳನ್ನು ತಿಕ್ಕಿ ಚೂಪು ಮಾಡಲು ಬೇಕಾದ ಉಪಕರಣ, ಅರ
ಕುಲುಮೆ	–	ಕಮ್ಮಾರರು ಕಬ್ಬಿಣ ಕೆಲಸ ಮಾಡಲು ಬೆಂಕಿ ಮಾಡಿಕೊಳ್ಳುವ ಒಲೆ
ಗನ್ನು	–	ಚಮ್ಮಟಿಗೆ
ಚಾಣ	–	ಕಬ್ಬಿಣ ಕತ್ತರಿಸಲು ಬೇಕಾದ ಉಪಕರಣ
ಚಿಮುಟ	–	ಕಾದ ಕಬ್ಬಿಣವನ್ನು ಹಿಡಿದುಕೊಳ್ಳಲು ಬಳಸುವ ಸಾಧನ.
ತಿದಿ	–	ತಿತ್ತಿ, ಕುಲುಮೆಗೆ ಗಾಳಿ ಒದಗಿಸುವ ಚರ್ಮದ ಚೀಲ
ಬ್ಲೋವರ್	–	ಕೈಯಿಂದ ತಿರುಗಿಸಿ ಕುಲುಮೆಗೆ ಗಾಳಿ ಒದಗಿಸುವ ಆಧುನಿಕ ಯಂತ್ರ
ಸುತ್ತಿಗೆ	–	ಕಬ್ಬಿಣವನ್ನು ಬಡಿಯಲು ಬೇಕಾದ ಉಪಕರಣ
ಹುಸಿ ಪೆಟ್ಟು	–	ಯಾವುದೇ ವಸ್ತು ತಯಾರಿಕೆಯಲ್ಲಿ ವಸ್ತುಗಳನ್ನು ಬಡಿಯುವಾಗ ಏಟು ವಸ್ತುವಿನ ಮೇಲೆ ಬೀಳದೆ ಬೇರೆಡೆ ಬಿದ್ದರೆ ಅದು ಹುಸಿ ಪೆಟ್ಟು.
ಕಮ್ಮಾರ	–	ಕಂಬಾರ, ಕಮ್ಮಟಿ, ಕುಲುಮೆಗಾರ, ಕಬ್ಬಿಣದ ಕೆಲಸ ಮಾಡುವವನು.
ಬಯಲು ಕಮ್ಮಾರ	–	ಕಮ್ಮಾರರ ಒಂದು ಪಂಗಡ

ಕಮ್ಮಾರ ತೆರಿಗೆ	–	ಕಮ್ಮಾರರು ಸಲ್ಲಿಸುವ ತೆರಿಗೆ
ಬಳ್ಳಾರ	–	ಸುಣ್ಣ ತರಹದ ಕಲ್ಲು, ಇದನ್ನು ಕಬ್ಬಿಣ ಬೆಸೆಯಲು ಬಳಸುತ್ತಾರೆ.
ತಿಗರಿ	–	ಕುಂಬಾರಿಕೆ ಚಕ್ರ
ಈಸುಕೋಲು	–	ಮಣ್ಣಿನಿಂದ ಕಸಕಡ್ಡಿಯನ್ನು ಬೇರ್ಪಡಿಸಲು ಉಪಯೋಗಿಸುವ ಸಪೂರದ ತಂತಿ
ಆವೆ	–	ಮಣ್ಣಿನ ಪಾತ್ರೆಗಳನ್ನು ಸುಡುವ ಒಲೆ
ಸೇಡಿ ಮಣ್ಣು	–	ಗದ್ದೆಗಳಲ್ಲಿ ಸಿಗುವ ಬಿಳಿ ಮಣ್ಣು
ಬೈ ಹುಲ್ಲು	–	ಮಣ್ಣಿನ ಪಾತ್ರೆಗಳನ್ನು ಆವಿಗೆಯಲ್ಲಿ ಸುಡಲು ಮಧ್ಯೆ ಇಡಲು ಬಳಸುವ ಹುಲ್ಲು
ಬಾನಿ	–	ನೀರನ್ನು ಸಂಗ್ರಹಿಸಲು ಬಳಸುವ ದೊಡ್ಡ ಮಣ್ಣಿನ ಪಾತ್ರೆ
ವಾಡೆ	–	ಧಾನ್ಯಗಳನ್ನು ಸಂಗ್ರಹಿಸಲು ಬಳಸುವ ದೊಡ್ಡ ಮಣ್ಣಿನ ಪಾತ್ರೆ
ಸೊಳ	–	ಮಡಕೆ ತಟ್ಟುವ ಬಡಿಗೆ
ಗುಂಡಪ್ಪ	–	ಲಿಂಗದಾಕಾರದ ಕಲ್ಲು
ತಿತ್ತಿ	–	ಚರ್ಮದ ಚೀಲ
ಗೂಡೆ	–	ಧಾನ್ಯ ಸಾಗಿಸಲು ಚಕ್ಕಡಿಗಳಲ್ಲಿ ಬಳಸುವ ಸಾಧನ
ಪಣತ	–	ಧಾನ್ಯ ತುಂಬುವ, ಸಂರಕ್ಷಿಸುವ ಪರಿಕರ
ಅಗ್ಗಿಷ್ಟಿಗೆ	–	ಅಕ್ಕಸಾಲಿಗರು ಚಿನ್ನ, ಬೆಳ್ಳಿ, ಲೋಹ, ಆಭರಣ ಕಾಯಿಸುವ, ಕರಗಿಸುವ ಒಲೆ, ಕುಮಟಿ
ಅಸಂಗಿ	–	ಒಡವೆ, ವಸ್ತುಗಳ ತಗ್ಗನ್ನು ಎತ್ತುವುದಕ್ಕಾಗಿ ಬಳಸುವ ಉಪಕರಣ
ಉಂಗುರದ ಸ್ಕೇಲ್	–	ಉಂಗುರದ ಅಳತೆಗೆ ಬಳಸುವ ಪ್ಲಾಸ್ಟಿಕ್ ಮಾದರಿಗಳು
ಒರೆಗಲ್	–	ಚಿನ್ನ, ಬೆಳ್ಳಿ, ಒರೆಗೆ ಹಚ್ಚುವ ಕಲ್ಲು
ಕಂಬಚ್ಚು	–	ಚಿನ್ನ ಬೆಳ್ಳಿಯ ಕೆಲಸದಲ್ಲಿ ಪದಾರ್ಥಗಳಿಗೆ ರೂಪುಕೊಡಲು ತಂತಿ ಎಳೆದು ಉದ್ದ ಮಾಡಲು ಬಳಸುವ ರಂಧ್ರಗಳುಳ್ಳ ಲೋಹದ ಪಟ್ಟಿ.
ಗಿರ್ಮುಟ್ಟಿ	–	ಹರಳು ಕೂರಿಸಲು ಹಳ್ಳ ಮಾಡಲು ಬೇಕಾದ ಉಪಕರಣ
ಶ್ರಾವಣ	–	ಸಣ್ಣ ವಸ್ತುಗಳನ್ನು ಹಿಡಿಯಲು ಬಳಸುವ ಉಪಕರಣ
ದೋಣಿ	–	ಲೋಹ ಕರಗಿಸಿ ಸುರಿಯಲು ಹಿಂದೆ ಬಳಸುತ್ತಿದ್ದ ಬಳಪದ ಕಲ್ಲಿನ ಪಾತ್ರೆ

ಪಂಕ	–	ಗಾಳಿ ಚಕ್ರ
ಪಾಲಿಷ್ ಗಡ್ಡೆ	–	ಆಭರಣಗಳಿಗೆ ಒಳಪು ಭರಿಸುವ ವಸ್ತು
ಪೋಗರ್	–	ಕೆತ್ತನೆ ಕೆಲಸಕ್ಕೆ ಬೇಕಾದ ಉಪಕರಣ
ಬಂಪಡ್	–	ಬೆಸಿಗೆ ಹಾಕಲು ಬೇಕಾದ ಉಪಕರಣ
ಮೂಸೆ	–	ಲೋಹ ಕರಗಿಸುವ ಪಾತ್ರೆ
ರಂಪ	–	ಗರಗಸ
ಉಳಿಬಾಯಿ ಸುತ್ತಿಗೆ	–	ಒಂದು ಕಡೆ ಚೂಪಾಗಿದ್ದು, ಒಂದು ಕಡೆ ಚೌಕಾಕಾರಕ್ಕಿರುವ ಸುತ್ತಿಗೆ.
ಅಪರಂಜಿ	–	ಶುದ್ಧ ಚಿನ್ನ
ಅರಗು	–	ಕರಗುವ ವಸ್ತು
ಓಜ	–	ಅಕ್ಕಸಾಲಿಗ
ನವಸಾರ	–	ಬಂಗಾರವನ್ನು ಶುದ್ಧೀಗೊಳಿಸಲು ಬೆಸುಗೆ ಹಾಕಲು ಬಣ್ಣ ಮಾಡಲು ಬೇಕಾದ ರಸಾಯನಿಕ
ಪಟಗ	–	ಚಿನ್ನಕ್ಕೆ ಒಳಪು ಭರಿಸಲು ಬಳಸುವ ರಸಾಯನಿಕ
ಕಾಗೆ ಬಂಗಾರ	–	ಇತರೆ ಲೋಹ ಹೆಚ್ಚಿದ್ದು ಕಡಿಮೆ ಬಂಗಾರ ಇರುವ ಕಡಿಮೆ ದರ್ಜೆಯ ಬಂಗಾರ
ಬೆಳ್ಗಾರ	–	ಲೋಹ ಬೆಸೆಯುವಾಗ ಬಳಸುವ ವಸ್ತು.
ಅಡಿಕಡ್ಡಿ	–	ಅಳತೆಯ ಉಪಕರಣ
ಉಜ್ಜುಗೊರಡು	–	ಒರಟಾದ ಮರದ ಮೇಲ್ಮೈಯನ್ನು ಉಜ್ಜಿ ನಯಗೊಳಿಸುವ ಉಪಕರಣ
ಉಳಿ	–	ಮರ ರಂಧ್ರ ಮಾಡಲು ಬೇಕಾದ ಉಪಕರಣ
ಎಮ್ರಿಕಲ್	–	ಆಯುಧಗಳನ್ನು ಹರಿತಗೊಳಿಸಲು ಬೇಕಾದ ಸಾಣಿಕಲ್ಲು.
ಬಾಚಿ	–	ಮರ ಕೆತ್ತುವ ಉಪಕರಣ
ಟಚ್‌ವುಡ್	–	ಮರದ ಸಂರಕ್ಷಣೆಗೆ ಬಳಸುವ ರಸಾಯನಿಕ
ಕತ್	–	ಕಟ್ಟಿಗೆಯ ಅಳತೆ ನೋಡಲು ಬಳಸುವ ರಸಾಯನಿಕ
ಕಳಾಸಗಿ	–	ಉಳಿ ಅಥವಾ ಬಾಚಿಯ ಹಿಂಭಾಗ
ಕಾವು	–	ಬಾಚಿ ಕೊಡಲಿಗಳ ಹಿಡಿ
ಕೊಡ್ತಿ	–	ಮರದ ಸುತ್ತಿಗೆ

ಗರಗಸ	–	ಮರ ಕೊಯ್ಯಲು ಬೇಕಾದ ಸಾಧನ
ಗಿರ್ಮಿಟ್ಟು	–	ಮರದಲ್ಲಿ ರಂಧ್ರ ಕೊರೆಯಲು ಬೇಕಾದ ಉಪಕರಣ, ಬೈರ್ಗೆ
ಗ್ರಾಂಪ್	–	ವಸ್ತುವನ್ನು ಹಿಡಿದುಕೊಳ್ಳಲು ಬಳಸುವ ಯಂತ್ರ
ಡ್ರಿಲ್	–	ಮರಕ್ಕೆ ರಂಧ್ರ ಮಾಡುವ ಯಂತ್ರ
ಪ್ಲೇನಿಂಗ್ ಮೆಷಿನ್	–	ಮರ ನಯಗೊಳಿಸುವ ಯಂತ್ರ
ಸ್ಕ್ರೂ ಡ್ರೈವರ್	–	ಮೊಳೆಗಳನ್ನು ಹಾಕಿ ತಿರುವಲು ಬೇಕಾದ ಉಪಕರಣ
ಹತ್ರಿ	–	ಉಜ್ಜುಗೊರಡು
ಗಡ್ಡಿ	–	ಬಂಡಿ ಚಕ್ರದ ಕೇಂದ್ರವಸ್ತು
ಕೂರ್ಗೆ	–	ರೈತರು ಬಿತ್ತನೆ ಮಾಡಲು ಬಳಸುವ ಉಪಕರಣ
ತೀರು	–	ಮರದ ಉದ್ದವಾದ ಪಟ್ಟಿ
ಪೆವಿಕಾಲ	–	ಮರದ ಜೋಡಣೆಗೆ ಬಳಸುವ ಅಂಟುದ್ರವ.
ಅರ	–	ಶಿಲ್ಪದ ಒರಟಾದ ಭಾಗಗಳನ್ನು ಉಜ್ಜಿ ನಯಗೊಳಿಸಲು ಬೇಕಾದ ಉಪಕರಣ
ದಬ್ಬೆ ಅರ	–	ಮೂರ್ತಿಯ ಕೆಲವು ಭಾಗಗಳನ್ನು ಉಜ್ಜಲು ಬೇಕಾದ ಅರ
ಪಟ್ಟಿ ಅರ	–	ಮೂರ್ತಿಯ ಮೇಲ್ಭಾಗದ ಅಂಗಾಂಗಳನ್ನು ಹಸನುಗೊಳಿಸುವ ಸಾಧನ
ಅಷ್ಟ ಪೈಲ್	–	ಸೂಕ್ಷ್ಮ ಕೆಲಸಗಳಿಗೆ ಬಳಕೆಯಾಗುವ ಸುತ್ತಿಗೆ
ಉಳಿ	–	ಕಲ್ಲಿನ ಕೆಲಸದಲ್ಲಿ ಕೆತ್ತಲು, ರೂಪುಕೊಡಲು ಬಳಸುವ ಉಪಕರಣ
ನೈಸ್ ಉಳಿ	–	ನಯಗೊಳಿಸುವ ಉಳಿ
ಭೈರಿಗೆ ಉಳಿ	–	ರಂಧ್ರದ ಕೆಲಸಕ್ಕೆ ಬೇಕಾದ ಉಳಿ
ಕೊಡ್ತಿ	–	ಮರದಿಂದ ತಯಾರಿಸುವ ಸುತ್ತಿಗೆ
ಚಾಣ	–	ಕಲ್ಲನ್ನು ನಯವಾಗಿ ಕೆತ್ತಲು ಬಳಸುವ ಉಪಕರಣ
ಫೈಲ್	–	ಶಿಲ್ಪದ ವಿವಿಧ ಭಾಗಗಳನ್ನು ಉಜ್ಜಿ ನಯಗೊಳಿಸಿ ಆಕಾರಕ್ಕೆ ತರಲು ಬಳಸುವ ಆರದ ರೀತಿಯ ಉಪಕರಣ
ಕಣಜ ಕಲ್ಲು	–	ಮೂರ್ತಿ ಕೆತ್ತನೆಗೆ ಬೇಕಾದ ಕಲ್ಲು
ಬೆಂಚಗಲ್ಲು	–	ಕಪ್ಪು, ಬಿಳಿ ಮಿಶ್ರಿತ ಒರಟು ಕಲ್ಲು
ಬಳಪದ ಕಲ್ಲು	–	ಮೃದು ಕಲ್ಲು

ಗದ್ದಿಗಿ	–	ಮೂರ್ತಿಯ ತಳಭಾಗ
ಅಮೃತ ಶಿಲೆ	–	ಬಿಳಿಯ ಕಲ್ಲು
ಕೃಷ್ಣ ಶಿಲೆ	–	ಕಪ್ಪು ಕಲ್ಲು
ಗನೆ	–	ದೊಡ್ಡ ಸುತ್ತಿಗೆ
ಗಣ	–	ಸಣ್ಣ ಸುತ್ತಿಗೆ
ಚಾಣ	–	ಕಲ್ಲು ಕತ್ತರಿಸಲು ಬಳಸುವ ಕಬ್ಬಿಣದ ಉಪಕರಣ
ಮುಳ್ಳು ಇಕ್ಕಳ	–	ಕಾದ ಕಬ್ಬಿಣದ ಸಾಮಾನು ಹಿಡಿದುಕೊಳ್ಳಲು ಬಳಸುವ ಉಪಕರಣ
ಹಾರೆ	–	ಕಲ್ಲು ಎಬ್ಬಲು ಬಳಸುವ ಉದ್ದವಾದ ಕಬ್ಬಿಣದ ಕೋಲು
ಚಿಚಿರಿ	–	ಕಲ್ಲು ತುಂಡು ಮಾಡಲು ಬಳಸುವ ಕಬ್ಬಿಣದ ಉಪಕರಣ
ಬೀಸುವ ಕಲ್ಲು	–	ಆಹಾರ ಧಾನ್ಯಗಳನ್ನು ಹಿಟ್ಟು ಮಾಡಲು ಬಳಸುವ ಕಲ್ಲಿನ ಉಪಕರಣ
ಜೆಲ್ಲೆ	–	ದೊಡ್ಡ ಬಿದಿರಿನ ಪುಟ್ಟಿ
ಕೂಳಿ	–	ಮೀನುಗಳನ್ನು ಹಿಡಿಯಲು ಬಳಸುವ ಬೋನು
ತಟ್ಟಿ	–	ಪುಟ್ಟಿ
ಹೂದಂಡೆ	–	ಹೂವಿನ ಹಾರ
ಬಾಸಿಂಗ	–	ಮದುವೆ ಮುಹೋರ್ತಗಳಲ್ಲಿ ವಧು, ವರರ ತಲೆಗೆ ತೊಡಿಸುವ ಅಲಂಕಾರಿಕ ವಸ್ತು
ಆಯ	–	ಕಸುಬುದಾರರ ಸೇವೆಗೆ ರೈತನು ನೀಡುವ ಆಹಾರ ಧಾನ್ಯಗಳ ಬಾಬು.
ಅಚ್ಚು	–	ಮಗ್ಗದ ಹಾಸಿನ ಎಳೆಗಳನ್ನು ಲಾಳಿ ಓಡಾಡಲು ಮೇಲೆ ಕೆಳಗೆ ಮಾಡಲು ಇರುವ ಸಾಧನ.
ಅಡ್ಡಮರ	–	ನೇಕಾರ ನಿಂತುಕೊಳ್ಳಲು ಅಡ್ಡಲಾಗಿ ಹಾಕಿಕೊಂಡಿರುವ ಮರ
ಅಣಿಗೆ	–	ನೇಯ್ಗೆಯವರ ಮಗ್ಗದ ಅಚ್ಚು
ಉಕ್ಕಾ	–	ಬಿಗಿಯಾಗಿ ಎಳೆದು ಹಿಡಿದಿರುವಂತೆ ಬಳೆಯನ್ನು ಕಟ್ಟಲು ಉಪಯೋಗಿಸುವ ಸಣ್ಣ ಹಗ್ಗ
ಉಸಕಿನ ಹಾಳಿ	–	ಲಾಳಿಯ ಬದಿಗಳನ್ನು ನುಣುಪು ಮಾಡಿಕೊಳ್ಳಲು ಬಳಸುವ ಮರಳಿನ ಕಾಗದ
ಊಸಿ	–	ತಟ್ಟಿನ ಒಳಗೆ ಎಳೆ ತುಂಬುವ ಸಾಧನ.
ಐಳೆ ಹುಗುಲು	–	ರಾಟೆಯಲ್ಲಿ ಕದಿರನ್ನು ಸಿಕ್ಕಿಸಲು ಕೊರೆದಿರುವ ಭಾಗ

ಪಳಿ ಕಟಿಗೆ	–	ಕುಂಟೆ ಮರ ತಿರುಗಿಸುವ ಗೂಟ
ಕಂಡಿಕೆ	–	ಲಾಳಿಯಲ್ಲಿ ಸೇರಿಸುವ ನೂಲು ಸುತ್ತಿರುವ ಗಣಿಕೆ ಕೆಂಡೆ
ಗೂಟಕಲ್ಲು	–	ನೆಲದಲ್ಲಿ ಹುದುಗಿಸುವ ಹಗ್ಗ ಬಿಗಿಯಲು ಬಳಸುವ ಕಲ್ಲು
ಕವಾಟ	–	ಮಗ್ಗವನ್ನು ಒಂದು ಮಟ್ಟಕ್ಕೆ ನಿಲ್ಲಿಸಿಕೊಳ್ಳಲು ಸಹಾಯಕವಾದ ಕಬ್ಬಿಣದ ಮೊಳೆ
ಕುಂಚಗಿ	–	ಒಂದು ಬಗೆಯ ಗಿಡದ ಬೇರಿನಿಂದ ಮಾಡಿದ ನೂಲನ್ನು ಬಾಚಲು ಬಳಸುವ ಬ್ರಶ್ನಿನಾಕಾರದ ಸಾಧನ.
ಕುಂಟಿ	–	ನೇಯ್ದ ಬಟ್ಟೆಯನ್ನು ಸುತ್ತುವ ಮರ
ಕುದುರಿ	–	ಮಗ್ಗದ ಮೇಲೆ ಲಾಳಿ ಅತ್ತಿಂದಿತ್ತ ಓಡಾಡಿಸಲು ಜಗ್ಗುವ ದಾರದ ಹಿಡಿ ಕುಚ್ಚುಗುಂಡು.
ಅಣಿಕೋಲು	–	ಹಾಸಿನ ಎಳೆಗಳನ್ನು ಗೋಜಲಾಗದಂತೆ ಬೇರ್ಪಡಿಸಲು ಎಳೆಗಳ ಮಧ್ಯೆ ಸೇರಿಸಿರುವ ಬಿದಿರು ಕೋಲು.
ಬುಟ್ಟಾ ಗಣಿಕಿ	–	ಸೀರೆಯ ನಡುವಿನ ಬುಟ್ಟಾ ಹೂಗಳನ್ನು ನೇಯಲು ಬಳಸುವ ಬುಟ್ಟಾ ಸುತ್ತಿರುವ ಗಣಿಕೆ
ಚಡಿ	–	ಕಬ್ಬಿಣದ ಸರಳು
ಚರಕ	–	ನೂಲು ಸುತ್ತುವ ಸಾಧನ ರಾಟೆ
ಜಕಾಡ್	–	ಸೆರೆಗಿನಲ್ಲಿ ಅಥವಾ ಒಡಲಿನಲ್ಲಿ ಬಗೆ ಬಗೆಯ ವಿನ್ಯಾಸಗಳನ್ನು ರೂಪಿಸಿಕೊಳ್ಳಲು ಸಹಾಯ ಮಾಡುವ ಸಾಧನ.
ಕುಚ್ಚು ದಾರ	–	ಲಾಳಿ ಓಡಾಡಿಸಲು ಸಹಾಯಕವಾದ ಕುಚ್ಚು ಕಾಯಿಂದ ಪಿರಿಕೀರೆಗೆ ಕಟ್ಟಿರುವ ದಾರಗಳು
ಪಿಕೀರು	–	ಲಾಳಿ ಹೊರ ಹೋಗದಂತೆ ತಡೆಯುವ ಮತ್ತು ಮುಂದಕ್ಕೆ ತಳ್ಳುವ ಮರದ ಅಥವಾ ಪ್ಲಾಸ್ಟಿಕ್ ಸಾಧನ.
ಮಗ್ಗ	–	ನೇಯ್ಗೆ ಮಾಡಲು ಬಳಸುವ ಸಾಧನ
ಏಕಾಂಡ್ಲ ಮಗ್ಗ	–	ಪೂರ್ತಿ ಒಂದು ಕಂಬಳಿ ನೇಯಬಹುದಾದ ಮಗ್ಗ
ಕಣದ ಮಗ್ಗ	–	ಖಣ ನೇಯುವ ಮಗ್ಗ
ಕಯ್ ಮಗ್ಗ	–	ಮಾನವ ಚಾಲಿತ ಮಗ್ಗ
ಗುಳಿ ಮಗ್ಗ	–	ನೇಕಾರ ನಿಲ್ಲುವ ಸ್ಥಳದಲ್ಲಿ ಗುಳಿ ಇರುವ ಮಗ್ಗ

ನೀಲು ಮಗ್ಗ	–	ನೆಲದ ಮಟ್ಟದಲ್ಲಿ ನಿಲ್ಲಿಸಿದ ಮಗ್ಗ
ಸಾದಾ ಮಗ್ಗ	–	ತಾಪೀಟಿನ ಸಹಾಯವಿಲ್ಲದೇ ನೇಯುವ ಮಗ್ಗ
ಸೀರಿ ಮಗ್ಗ	–	ಸೀರೆ ನೇಯುವ ಮಗ್ಗ
ಲಾಳಿ	–	ಅಡ್ಡೆಳೆಯನ್ನು ಹಾಸಿನಲ್ಲಿ ಸೇರಿಸುವ ಉಪಕರಣ
ಕುರುಹಿನ ಶೆಟ್ಟಿ	–	ನೇಕಾರರ ಒಂದು ಪಂಗಡ, ಬಿಳಿ ಮಗ್ಗದವರು
ಜಾಡ	–	ಶೈವ ಸಂಪ್ರದಾಯಕ್ಕೆ ಸೇರಿದ ನೇಕಾರರ ಸಂಘ
ತಟಗಾರ	–	ಮಗ್ಗದ ತಟ್ಟನ್ನು ಸಿದ್ಧ ಮಾಡಿಕೊಡುವವರು
ತೊಗಟರು	–	ನೇಕಾರರ ಒಂದು ಪಂಗಡ
ದೇವಾಂಗ	–	ನೇಕಾರರ ಒಂದು ಪಂಗಡ
ಪದ್ಮಶಾಲಿ	–	ನೇಕಾರರ ಒಂದು ಪಂಗಡ

ಕುಲಕಸುಬುದಾರರ ಮಾಹಿತಿ

ಸಾಮಾನ್ಯ ವಿವರ

೧. ಸಂದರ್ಶನ ದಿನಾಂಕ
೨. ಸಂದರ್ಶಿಸಲ್ಪಟ್ಟವರು
೩. ಗ್ರಾಮ
೪. ತಾಲ್ಲೂಕು
೫. ಜಿಲ್ಲೆ
೬. ಮನೆತನದ ಹೆಸರು
೭. ಮಾತೃಭಾಷೆ
೮. ಆಡುವ ಇತರೆ ಭಾಷೆಗಳು
೯. ಮನೆ ದೇವರು
೧೦. ಬೆಡಗು/ಗೋತ್ರ

೧೧. ಪೂಜಿಸುವ ದೇವರುಗಳು
a)
b)
c)
೧೨. ಆಚರಿಸುವ ಹಬ್ಬ/ಜಾತ್ರೆಗಳು
೧೩. ಕುಲಕಸುಬು
೧೪. ಇತರೆ ಕಸುಬು
೧೫. ಕುಲಗುರು
೧೬. ಭೂ ಹಿಡುವಳಿ
- ಒಣಭೂಮಿ
- ನೀರಾವರಿ

೧೭. ಮನೆ ಮಾದರಿ
- ಗುಡಿಸಲು
- ಹೆಂಚಿನ ಮನೆ
- ಮಾಳಿಗೆ ಮನೆ
- ಶೆಡ್
- ಆರ್.ಸಿ.ಸಿ.

೧೮. ಮನೆ - ಸ್ವಂತ
- ಬಾಡಿಗೆ

೧೯. ಸೌಲಭ್ಯಗಳು
- ಶಿಕ್ಷಣ
- ಪಡಿತರ ಚೀಟಿ
- ಮನೆ
- ನಿವೇಶನ
- ವಿದ್ಯುತ್
- ಬಂಡಿ
- ಸೈಕಲ್
- ಸ್ಕೂಟರ್
- ಬೈಕ್
- ಆಟೋರಿಕ್ಷಾ
- ಸಾಕುಪ್ರಾಣಿಗಳು

೨೦. ತಯಾರಿಸುವ ವಸ್ತುಗಳು
೨೧. ಮಾರಾಟ ವಿಧಾನ

ವೈಯಕ್ತಿಕ ಮಾಹಿತಿ

ಕುಟುಂಬದ ಸದಸ್ಯರ ಹೆಸರು	ಸಂಬಂಧ ಮುಖ್ಯಸ್ಥರು	ಲಿಂಗ	ವಯಸ್ಸು	ವಿವಾಹ ಆಗಿದೆಯಾ	ಶೈಕ್ಷಣಿಕ ಮಟ್ಟ	ಕುಲಕಸುಬು	ವೃತ್ತಿ	ವರಮಾನ	ಸರಕಾರಿ ಸೌಲಭ್ಯಗಳು		
									ವೃದ್ಧಾಪ್ಯ ವೇತನ	ವಿಧವಾ ವೇತನ	ಅಂಗವಿಕಲ ವೇತನ
೧.											
೨.											
೩.											
೪.											
೫.											
೬.											

ಎಸ್.ವೈ. ತಿಮ್ಮಾರೆಡ್ಡಿ
ಸಂಶೋಧಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಡಾ. ಹೆಬ್ಬಾಲೆ ಕೆ. ನಾಗೇಶ್
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ವಕ್ತೃಗಳ ವಿವರ

ಕ್ರ.ಸಂ.	ಹೆಸರು	ವಯಸ್ಸು	ಊರು	ಉದ್ಯೋಗ
೧.	ರಾಮಪ್ಪ	೭೮	ಹೊಸಪೇಟೆ	ಕುಂಬಾರಿಕೆ
೨.	ಹೇಮಂತ	೨೫	ಮಲಪನಗುಡಿ	ಕುಂಬಾರಿಕೆ
೩.	ವಿರುಪಾಕ್ಷ	೩೪	ಮಲಪನಗುಡಿ	ಕುಂಬಾರಿಕೆ
೪.	ಕುಂಬಾರ ವೆಂಕಟೇಶ	೪೮	ಚೌಡಾಪುರ	ಕುಂಬಾರಿಕೆ
೫.	ಕುಂಬಾರ ತಿಪ್ಪಣ್ಣ	೫೨	ಚೌಡಾಪುರ	ಕುಂಬಾರಿಕೆ
೬.	ಶಿವಲಿಂಗಮ್ಮ	೬೦	ಕಮಲಾಪುರ	ಕುಂಬಾರಿಕೆ
೭.	ಕುಂಬಾರ ಶಿವಣ್ಣ	೬೨	ಹಾರೋನಹಳ್ಳಿ	ಕುಂಬಾರಿಕೆ
೮.	ಬಸಣ್ಣ	೫೪	ಕೂಡ್ಲಿಗಿ	ಕುಂಬಾರಿಕೆ
೯.	ಲೋಕೇಶಪ್ಪ	೪೩	ಬಳ್ಳಾರಿ	ಕುಂಬಾರಿಕೆ
೧೦.	ನಾಗರಾಜಪ್ಪ	೬೦	ಬಂಡೆ ಬಸಾಪುರ	ಕಮ್ಮಾರಿಕೆ
೧೧.	ಕಮ್ಮಾರ ಸಕ್ರಪ್ಪ	೭೧	ಬಂಡೆ ಬಸಾಪುರ	ಕಮ್ಮಾರಿಕೆ
೧೨.	ಹೇಮಣ್ಣ ಆಚಾರ	೫೪	ಕಮಲಾಪುರ	ಕಮ್ಮಾರಿಕೆ
೧೩.	ಶಂಕರಾಚಾರಿ	೪೩	ಕಂಪ್ಲಿ	ಕಮ್ಮಾರಿಕೆ
೧೪.	ಹನುಮಣ್ಣ ಆಚಾರ	೫೫	ಹಡಗಲಿ	ಕಮ್ಮಾರಿಕೆ
೧೫.	ಮೆಹಬೂಬ್ ಹುಸೇನ್	೫೨	ಹೊಸಪೇಟೆ	ಕಮ್ಮಾರಿಕೆ
೧೬.	ಪೂರ್ವಾಚಾರಿ	೬೦	ಚೌಡಾಪುರ	ಬಡಗಿತನ
೧೭.	ವೀರಭದ್ರಾಚಾರಿ	೫೪	ಮರಿಯಮ್ಮನಹಳ್ಳಿ	ಬಡಗಿತನ

೧೮.	ಬಡಗಿ ಶಿವಮೂರ್ತಪ್ಪ	೫೨	ಕುಡಿತಿನಿ	ಬಡಗಿತನ
೧೯.	ಶ್ರೀನಿವಾಸಚಾರ್	೪೩	ಬೈಲುವದ್ದಿಗೆರೆ	ಬಡಗಿತನ
೨೦.	ಹನುಮಂತಾಚಾರ	೫೬	ಹಡಗಲಿ	ರಥಶಿಲ್ಪಿ
೨೧.	ಮಾನಾಚಾರ	೬೫	ಕುರುಗೋಡು	ರಥಶಿಲ್ಪಿ
೨೨.	ಚಾಂದಬಾಷಾ	೪೦	ಹೊಸಪೇಟೆ	ಬಡಗಿತನ
೨೩.	ಅಶೋಕ ಪತ್ತಾರ	೫೦	ಹೊಸಪೇಟೆ	ಉಪನ್ಯಾಸಕ
೨೪.	ಉಮಾಪತಿ ಪತ್ತಾರ	೪೯	ಹೊಸಪೇಟೆ	ಉಪನ್ಯಾಸಕ
೨೫.	ವೀರಭದ್ರಾಚಾರ	೫೮	ಹೊಸಪೇಟೆ	ಪತ್ತಾರಿಕೆ
೨೬.	ಶಂಕರಾಚಾರಿ	೪೮	ಬಳ್ಳಾರಿ	ಪತ್ತಾರಿಕೆ
೨೭.	ನಾಗಲಿಂಗಾಚಾರ	೫೮	ಕಂಪ್ಲಿ	ಪತ್ತಾರಿಕೆ
೨೮.	ಸುರೇಶ ಆಚಾರ	೪೫	ಹೊಸಪೇಟೆ	ಶಿಲ್ಪಗಾರಿಕೆ
೨೯.	ಕೊಟ್ರೇಶಚಾರ	೪೩	ಹೊಸಪೇಟೆ	ಶಿಲ್ಪಗಾರಿಕೆ
೩೦.	ವರದಾಚಾರ	೩೮	ಹೊಸಪೇಟೆ	ಶಿಲ್ಪಗಾರಿಕೆ
೩೧.	ಬಸವರಾಜ್ ಆಚಾರ	೪೨	ಹಂಪಿ	ಶಿಲ್ಪಗಾರಿಕೆ
೩೨.	ನಾಗರಾಜಚಾರ	೪೫	ಹೊಸಪೇಟೆ	ಲೋಹಶಿಲ್ಪಿ
೩೩.	ಗಜೇಂದ್ರ	೩೦	ಹೊಸಪೇಟೆ	ಲೋಹಶಿಲ್ಪಿ
೩೪.	ಸುರೇಂದ್ರಚಾರ	೪೨	ಹಡಗಲಿ	ಲೋಹಶಿಲ್ಪಿ
೩೫.	ಕೆ.ಸಿ. ಸಜ್ಜನ್	೪೮	ಬಳ್ಳಾರಿ	ಉಪನ್ಯಾಸಕ
೩೬.	ಟಿ. ಜಯಮ್ಮ	೪೫	ಹ.ಬೊ.ಹಳ್ಳಿ	ಉಪನ್ಯಾಸಕಿ
೩೭.	ಎಂ.ಜೆ.ಹುಲುಗಪ್ಪ	೭೮	ಹೊಸಪೇಟೆ	ಮೇದಾರಿಕೆ
೩೮.	ಶಿವಲಿಂಗಪ್ಪ	೪೫	ಹೊಸಪೇಟೆ	ಮೇದಾರಿಕೆ
೩೯.	ಎಂ.ಸೀನಪ್ಪ	೫೫	ಹೊಸಪೇಟೆ	ಮೇದಾರಿಕೆ
೪೦.	ಹಂಪಮ್ಮ	೭೦	ಹೊಸಪೇಟೆ	ಮೇದಾರಿಕೆ
೪೧.	ಗುಬ್ಬಿ ಶಿವಣ್ಣ	೬೦	ಹ.ಬೊ.ಹಳ್ಳಿ	ಮೇದಾರಿಕೆ
೪೨.	ಮೇದಾರ ಹನುಮಣ್ಣ	೫೫	ಬಳ್ಳಾರಿ	ಮೇದಾರಿಕೆ
೪೩.	ಶಿವಮ್ಮ	೫೮	ಕಂಪ್ಲಿ	ಮೇದಾರಿಕೆ
೪೪.	ರತ್ನಮ್ಮ	೪೦	ಅನಂತಶಯನಗುಡಿ	ನೇಕಾರಿಕೆ

೪೫.	ಮಾಲಾಶ್ರೀ	೨೨	ಅನಂತಶಯನಗುಡಿ	ನೇಕಾರಿಕೆ
೪೬.	ಶಿವಣ್ಣ	೩೫	ಮರಿಯಮ್ಮನಹಳ್ಳಿ	ನೇಕಾರಿಕೆ
೪೭.	ಮಲ್ಲಿಕಾರ್ಜುನಪ್ಪ	೫೫	ಹೊಸಪೇಟೆ	ಕಾರ್ಯದರ್ಶಿ
೪೮.	ನೇಕಾರ ತಿಪ್ಪೇಸ್ವಾಮಿ	೫೫	ಕಾನಾಹೊಸಹಳ್ಳಿ	ಬಟ್ಟೆ ವ್ಯಾಪಾರಿ
೪೯.	ನೇಕಾರ ಜಯಣ್ಣ	೪೮	ರಾಂಪುರ	ರೇಷ್ಮೆ ನೇಕಾರಿಕೆ.
೫೦.	ಚೆಲುವಮ್ಮ	೩೮	ಬಳ್ಳಾರಿ	ನೇಕಾರಿಕೆ
೫೧.	ನಾಗರಾಜಪ್ಪ	೫೫	ಹೊಸಪೇಟೆ	ಚಮ್ಮಾರಿಕೆ
೫೨.	ಶೀನಪ್ಪ	೫೨	ಹೊಸಪೇಟೆ	ಚಮ್ಮಾರಿಕೆ
೫೩.	ಮಂಜುನಾಥ	೫೨	ಅನಂತಶಯನಗುಡಿ	ಗುಮಾಸ್ತ
೫೪.	ರುದ್ರಪ್ಪ	೫೫	ಕೂಡ್ಲಿಗಿ	ಚಮ್ಮಾರಿಕೆ
೫೫.	ತಿಪ್ಪೇರುದ್ರಪ್ಪ	೪೮	ಕಾನಾಹೊಸಹಳ್ಳಿ	ಚಮ್ಮಾರಿಕೆ
೫೬.	ಶಾಂತಿವೀರಪ್ಪ	೫೮	ಹ.ಬೊ.ಹಳ್ಳಿ	ಕ್ಷೌರಿಕ
೫೭.	ಪರಮೇಶಪ್ಪ	೪೫	ಹ.ಬೊ.ಹಳ್ಳಿ	ಕ್ಷೌರಿಕ
೫೮.	ಶಿವು	೩೦	ಅನಂತಶಯನಗುಡಿ	ಕ್ಷೌರಿಕ
೫೯.	ಗೋವಿಂದಪ್ಪ	೪೭	ಕೂಡ್ಲಿಗಿ	ಕ್ಷೌರಿಕ
೬೦.	ರಾಮಾಂಜನಿ	೪೩	ಬುಕ್ಕಸಾಗರ	ಕ್ಷೌರಿಕ
೬೧.	ನರೆಗಲ್ಲಪ್ಪ	೩೮	ಹೊಸಪೇಟೆ	ಕ್ಷೌರಿಕ
೬೨.	ದೇವೇಂದ್ರಪ್ಪ	೩೫	ಹೊಸಪೇಟೆ	ಕ್ಷೌರಿಕ
೬೩.	ಕೊಟ್ರಮ್ಮ	೩೦	ಹೊಸಪೇಟೆ	ಬಳೆ ಮಾರಾಟ
೬೪.	ನಾಗರಾಜ	೪೮	ಹೊಸಪೇಟೆ	ಬಳೆ ಮಾರಾಟ
೬೫.	ಭಾಗ್ಯಮ್ಮ	೫೦	ಹೊಸಪೇಟೆ	ಶಿಕ್ಷಕಿ
೬೬.	ವಲ್ಲಿಸಾಬ್	೫೨	ಹೊಸಪೇಟೆ	ಬಳೆ ಮಾರಾಟ
೬೭.	ಮಹಮ್ಮದ್ ಹುಸೇನ್	೪೮	ಹೊಸಪೇಟೆ	ಬಳೆ ಮಾರಾಟ
೬೮.	ಕೆ. ದಿವಾಕರ	೫೦	ಚೌಡಾಪುರ	ಉಪನ್ಯಾಸಕ
೬೯.	ನಾಗರಾಜ	೪೦	ಹೊಸಪೇಟೆ	ಉಪನ್ಯಾಸಕ
೭೦.	ವೆಂಕಟೇಶಪ್ಪ	೫೦	ಹೊಸಪೇಟೆ	ಮಡಿವಾಳ
೭೧.	ಮಹಂತಪ್ಪ	೪೫	ಹಡಗಲಿ	ಮಡಿವಾಳ

೭೨.	ಹಿಮಾಮ್‌ಸಾಬ್	೫೫	ಹೊಸಪೇಟೆ	ಸುಣ್ಣಗಾರಿಕೆ
೭೩.	ವರದಾನ್‌ಸಾಬ್	೫೨	ಹೊಸಪೇಟೆ	ಸುಣ್ಣಗಾರಿಕೆ
೭೪.	ಆಶಮ್ಮ	೪೮	ಧರ್ಮಸಾಗರ	ಸುಣ್ಣಗಾರಿಕೆ
೭೫.	ಚಾಂದಬಾಷಾ	೪೫	ಧರ್ಮಸಾಗರ	ಸುಣ್ಣಗಾರಿಕೆ
೭೬.	ವೆಂಕಟೇಶ	೫೦	ಗಾದಿಗನೂರು	ಸುಣ್ಣಗಾರಿಕೆ
೭೭.	ಬಸವರಾಜ ಹೂಗಾರ	೪೫	ಹೊಸಪೇಟೆ	ಹೂಗಾರಿಕೆ
೭೮.	ಸುರೇಶ	೫೦	ಹೊಸಪೇಟೆ	ಹೂಗಾರಿಕೆ
೭೯.	ಬಸಮ್ಮ ಹೂಗಾರ	೫೫	ಹಡಗಲಿ	ಹೂಗಾರಿಕೆ
೮೦.	ಬಸವರಾಜ ಪೂಜಾರ	೪೫	ಹಡಗಲಿ	ಹೂಗಾರಿಕೆ
೮೧.	ಹನುಮಂತಪ್ಪ ಪೂಜಾರ	೪೫	ಕಂಪ್ಲಿ	ಹೂಗಾರಿಕೆ
೮೨.	ಚೆನ್ನಪ್ಪ	೫೯	ಬಸವನದುರ್ಗ	ಕಲ್ಲುಕುಟಿಗ
೮೩.	ಸುಡುಗಾಡಪ್ಪ	೫೬	ಬಸವನದುರ್ಗ	ಕಲ್ಲುಕುಟಿಗ
೮೪.	ಮಾಳಮ್ಮ	೪೫	ಹೊಸಪೇಟೆ	ಕಲ್ಲುಕುಟಿಗ
೮೫.	ಸೀನಪ್ಪ	೫೮	ಹೊಸಪೇಟೆ	ಕಲ್ಲುಕುಟಿಗ
೮೬.	ಅಯ್ಯಾಳಿ ಅಂಬಮ್ಮ	೫೮	ಅನಂತಶಯನಗುಡಿ	ಕೂಲಿ
೮೭.	ಮಲ್ಲೇಶಪ್ಪ	೭೭	ಶಿರುಗುಪ್ಪ	ಕೂಲಿ
೮೮.	ಯಲ್ಲಪ್ಪ	೭೦	ಜೋಗ	ವ್ಯವಸಾಯ
೮೯.	ಕೆ. ನಾರಾಯಣರಾವ್	೮೦	ಗೋಟೂರು	ವ್ಯವಸಾಯ
೯೦.	ಗಂಡಿಬೋರಪ್ಪ	೬೮	ಚೊರನೂರು	ಕೂಲಿ

ಪರಾಮರ್ಶನ ಗ್ರಂಥಗಳು

ಅಂಗಡಿ ಎಸ್.ಎಸ್, ೨೦೦೦, *ಸಂಕೀರ್ಣ ವೃತ್ತಿಪದ ಕೋಶ* , ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಅಬ್ದುಲ್ ಅಜೀಜ್, ಕೆ.ಜಿ.ವಾಸುಕಿ(ಸಂ), ೧೯೯೭, *ಕರ್ನಾಟಕ ಆರ್ಥಿಕತೆ,* ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಅರ್ಜುನ ಗೊಳಸಂಗಿ, ೨೦೦೪, *ದಲಿತರ ಬದುಕು ಮತ್ತು ಸಂಸ್ಕೃತಿ,* ವಿಮೋಚನಾ ಪ್ರಕಾಶನ, ಅಥಣಿ,

ಅಂಬಳಿಕೆ ಹಿರಿಯಣ್ಣ, ೧೯೮೮, *ಜಾನಪದ ಪರಿಶೋಧನ,* ಪ್ರಜ್ವಲ್ ಪ್ರಕಾಶನ, ಮೈಸೂರು,

ಅರ್ಜುನ್ ಯು ಗೊಳಸಂಗಿ, ೧೯೯೩, *ಗೊಳಸಂಗಿ ಗ್ರಾಮ : ಒಂದು ಸಾಂಸ್ಕೃತಿಕ ಅಧ್ಯಯನ,* ಮಲ್ಲಿಕಾರ್ಜುನ ಪ್ರಕಾಶನ, ಗೊಳಸಂಗಿ,

ಇಮ್ರಾಪುರ ಎಸ್.ಜಿ. ೧೯೮೯, *ಜನಪದ ಒಗಟುಗಳು,* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಗಾಂಧಿ, ಎಂ.ಕೆ., ೧೯೬೯, *ಅರ್ಥವಿಚಾರ,* ಗಾಂಧಿಸ್ಮಾರಕ ನಿಧಿ, ಕರ್ನಾಟಕ ಶಾಖೆ, ಬೆಂಗಳೂರು.

ಎಚ್ಚಾರ್ಕೆ, *ಭಾರತದ ಆರ್ಥಿಕ ವ್ಯವಸ್ಥೆ,* ಸಪ್ನ ಬುಕ್ ಹೌಸ್, ಮೈಸೂರು

ಎಚ್.ಜಿ.ಬೆಂಗೇರಿ, (ಸಂ), ೨೦೦೯, *ಹಳಗನ್ನಡ (ಉಪ ಪಂಗಡಗಳ ದಾಖಲೀಕರಣ)* ವಿಜಯ ಮಹಾಂತೇಶ ಎಜುಕೇಶನ್ ಸೊಸೈಟಿ, ಇಳಕಲ್.

ಕರೀಗೌಡ ಬೀಚನಹಳ್ಳಿ (ಸಂ), ೨೦೦೦, *ಕರಕುಶಲ ಕಲೆಗಳು,* ಕನ್ನಡ ವಿಶ್ವವಿದ್ಯಾಲಯ ಕೋಶ–೨, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೆ.ಡಿ.ಬಸವಾ, ೨೦೦೫, *ಆಧುನಿಕ ಭಾರತದ ಆರ್ಥಿಕಾಭಿವೃದ್ಧಿ,* ವಿದ್ಯಾವಾಹಿನಿ ಪ್ರಕಾಶನ, ಹುಬ್ಬಳ್ಳಿ

ಕಾಳೇಗೌಡ ನಾಗವಾರ, ೧೯೯೭, *ಜನಪದ ಸಾಹಿತ್ಯ,* ಯುಗಾದಿ ಪ್ರಕಾಶನ, ಬೆಂಗಳೂರು.

ಕುಮಾರ ಆರ್.ಬಿ., ೨೦೦೭, *ಮುದ್ದೆ ಕುಂಬಾರರು,* ಸಾರಾ ಎಂಟರ್ ಪ್ರೈಸಸ್, ಮೈಸೂರು.

ಕೃಷ್ಣಮೂರ್ತಿ ಹನೂರು, ೧೯೯೩, ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಕುಲಕರ್ಣಿ ಆರ್.ಹೆಚ್, ೧೯೯೨, ಕಿನ್ನಾಳ ಚಿತ್ರಕಲೆ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು

ಕುಮಾರಸ್ವಾಮಿ ಕೆ.ಎಸ್, ೧೯೯೬, ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಖಂಡೋಬ ಪಿ.ಕೆ., ೧೯೯೧, ಕರ್ನಾಟಕದ ಲಂಬಾಣಿಗಳು:ಒಂದು ಸಾಂಸ್ಕೃತಿಕ ಅಧ್ಯಯನ ದಿ. ತೇಜಸಿಂಗ್ ರಾಠೋಡ್ ಮೆಮೊರಿಯಲ್ ಟ್ರಸ್ಟ್, ಗುಂಥಿಕ್

ಗೋರೂರು ಚೆನ್ನಬಸಪ್ಪ, ೧೯೭೭, ಕರ್ನಾಟಕ ಜಾನಪದ ಕಲೆಗಳು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಗೀತಾ ನಾಗಭೂಷಣ, ೧೯೯೩, ದುರುಗ ಮುರುಗಿಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಗುರುರಾಜರಾವ್ ಬಿ.ಕೆ, ೧೯೭೦, *ಕರ್ನಾಟಕ ಲೋಹಯುಗ ಸಂಸ್ಕೃತಿಗಳು*, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು

ಚಂದ್ರಶೇಖರ ಕಂಬಾರ (ಸಂ), ೧೯೮೫, *ಕನ್ನಡ ಜಾನಪದ ವಿಶ್ವಕೋಶ ೧-೨*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚಿದಾನಂದಮೂರ್ತಿ ಎಂ., ೨೦೦೨, *ಜನ, ಜನಪದ, ಜಾನಪದ*, ಚಿದಾನಂದ ಸಮಗ್ರ ಸಂಪುಟ – ೩ ಸ್ವಪ್ನಬುಕ್ ಹೌಸ್

ಚಂದ್ರಪೂಜಾರಿ ಎಂ., ೨೦೦೮, *ದೇಶಿಯತೆ ನೆರಳಲ್ಲಿ ವಿಕೇಂದ್ರಿಕರಣ*, ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಚಂದ್ರಪೂಜಾರಿ ಎಂ., ೨೦೦೨, *ಸಮುದಾಯ ಮತ್ತು ಸಹಬಾಗಿತ್ವ*, ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಚಿದಾನಂದಮೂರ್ತಿ ಎಂ., ೧೯೭೯, *ಕನ್ನಡ ಶಾಸನಗಳ ಅಧ್ಯಯನ*, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ದೇವೇಂದ್ರಕುಮಾರ ಹಕಾರಿ, ೨೦೦೦, ಕೆ.ಆರ್.ಸಂದ್ಯಾರೆಡ್ಡಿ (ಸಂ), *ಗ್ರಾಮೀಣ ವೃತ್ತಿಗಳು*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ದೇವರಕೊಂಡಾರೆಡ್ಡಿ (ಸಂ) ೧೯೯೮, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧*, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇ. ಜವರೆಗೌಡ, ೧೯೮೬, *ಜನಪದ ಅಧ್ಯಯನ*, ಮೈಸೂರು ವಿಶ್ವವಿದ್ಯಾಲಯ ಮೈಸೂರು.

ನಂಜಮ್ಮಣ್ಣಿ ಎಂ., ೨೦೦೩, *ಭಾರತೀಯ ಸಾಮಾಜಿಕ ಸಂಸ್ಥೆಗಳು*, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನಾರಾಯಣ ಎಂ.ವಿಶ್ವ, ೧೯೮೯, *ಭಾರತೀಯ ಸಮಾಜ ಅಧ್ಯಯನ*, ಆರ್.ಎಂ.ಪ್ರಕಾಶನ, ಮೈಸೂರು,

ನಾಯಕ ಹಾ.ಮಾ, ೨೦೦೩, *ಜಾನಪದ ಸ್ವರೂಪ*, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೀತಾ ಬುಕ್‌ಹೌಸ್, ಮೈಸೂರು.

ನಾಯಕ. ಡಿ.ಬಿ, ಲಂಬಾಣಿ, ೧೯೯೪, *ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ನಾರಾಯಣ ಕೆ.ವಿ. *ಕೃಷಿ ಪದಕೋಶ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗೇಶ ಕೆ.ವಿ. *ಗ್ರಾಮಾಂತರ*, ೧೯೮೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ನಾಗಯ್ಯ ಜೆ.ಎಂ., ೨೦೦೨ *ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ ಸಂಪುಟ ೧*, ಲೋಹಿಯಾ ಪ್ರಕಾಶನ ಬಳ್ಳಾರಿ.

ನರಸಿಂಹಾಚಾರ ಎಸ್.ಜಿ. ೧೯೭೯, *ಕೆಲವು ಸಸ್ಯಗಳ ವೈಜ್ಞಾನಿಕ ಕುಟುಂಬ*, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.

ತಪಸ್ವಿಕುಮಾರ, ನಂ. ೧೯೮೧, *ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ*, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ನಿಂಗಣ್ಣ ಸಣ್ಣಕ್ಕಿ, ೧೯೯೩, *ಗೊಂದಲಿಗರ ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಪರಮಶಿವಯ್ಯ ಜಿ.ಎಂ., ೧೯೭೯, *ದಕ್ಷಿಣ ಕರ್ನಾಟಕ ಜಾನಪದ ಕಾವ್ಯ ಪ್ರಕಾರಗಳು*, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪನ್ನಂಗದರ, ೨೦೦೪, *ಮೇದಾರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ*, ಪಿಎಚ್.ಡಿ ಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುರುಷೋತ್ತಮ ಬಿಳಿಮಲೆ, ೧೯೯೦, *ಕರಾವಳಿ ಜಾನಪದ*, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

ಪ್ರಭಾಕರ ಶಿಶಿಲ, ೧೯೯೨, *ಅಭಿವೃದ್ಧಿ ಮತ್ತು ಯೋಜನಾ ಅರ್ಥವ್ಯವಸ್ಥೆ*, ಕಲಾ ಪ್ರಕಾಶನ, ಮಂಗಳೂರು,

ಪ್ರಶಾಂತ ಹೆಚ್.ಡಿ.(ಸಂ) ೨೦೦೦, *ಜನಸಮುದಾಯ ಸಂಪುಟ ಕರ್ನಾಟಕ ರಾಜ್ಯಕೋಶ ೪*, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪ್ರಭಾಕರ ಎ.ಎಸ್. *ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು*, ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಬಸವರಾಜ ಎಲ್.(ಸಂ), ೧೯೯೦, *ಸರ್ವಜ್ಞನ ವಚನಗಳು*, ಗೀತಾ ಬುಕ್‌ಹೌಸ್, ಮೈಸೂರು,

ಬಸವರಾಜ ಕಲ್ಗುಡಿ (ಸಂ), ೨೦೦೯, *ಸುವರ್ಣ ಕರ್ನಾಟಕ ಸಾಹಿತ್ಯ*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಬೆನಕನಹಳ್ಳಿ ಜಿ. ನಾಯಕ, ೧೯೮೬, *ಕರ್ನಾಟಕದ ಕರಕುಶಲಕಲೆಗಳು*, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

ಭದ್ರಾಪುರ ವ್ಹಿ. ಎಸ್. (ಸಂ), ೨೦೦೦, *ಸಮಾಜ ದರ್ಶನ ೯೯*.

ಭೈರಪ್ಪ ಕೆ. ೨೦೦೨, *ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ*, ಚೇತನ ಬುಕ್ ಹೌಸ್, ಮೈಸೂರು.

ಭಾನುಮತಿ ವೈ.ಸಿ., ೧೯೯೪, *ಮಲೆನಾಡು ಶೈವ ಒಕ್ಕಲಿಗರು*, ಜಾನಪದೀಯ ಅಧ್ಯಯನ ಕೇಶವ ಪ್ರಕಾಶನ, ಮೈಸೂರು.

ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ವಿ.ಎಸ್, (ಸಂ), *ಬುಡಕಟ್ಟು ಅಧ್ಯಯನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೋರಲಿಂಗಯ್ಯ ಹಿ.ಚಿ. ೧೯೯೬, *ಕರ್ನಾಟಕ ಜಾನಪದ ಕಲೆಗಳ ಕೋಶ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೃತ್ಯುಂಜಯ ಹೊರಕೇರಿ, ೨೦೦೫, *ಮಧುರ ಜಾನಪದ*, ಅಮರ ಪ್ರಕಾಶನ, ಗುಲ್ಬರ್ಗ.

ಮಳಲಿ ವಸಂತ ಕುಮಾರ, ೧೯೭೯, *ಕರ್ನಾಟಕ ಜಾನಪದ ವೈದ್ಯ*, ಪಂಪ ಪ್ರಕಾಶನ ಮೈಸೂರು.

ಮಲ್ಲಿಕಾರ್ಜುನ ಜಿ.ಎಸ್., ೧೯೯೮, *ಬೋಧಿ ವೃಕ್ಷದ ಕೆಳಗೆ*, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ

ಮಂಜುನಾಥ ಬೇವಿನಕಟ್ಟಿ, ೧೯೯೫, ಸುಪ್ಪತ್ತಿಗೆಯ ಹಿಂದಿನ ಬದುಕು, ಪಿಂಜಾರರ ಜನಾಂಗೀಯ ಅಧ್ಯಯನ

ಮಹದೇವ ಸಿ. ೨೦೦೨, *ಹೊಸಪೇಟೆ ದರ್ಶನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮರುಳಸಿದ್ದಯ್ಯ ಹೆಚ್. ಎಂ., ೧೯೭೦, *ಮಾನವ ಸಮಾಜ ಮತ್ತು ಸಮಾಜಶಾಸ್ತ್ರ*, ಭಾರತ ಬುಕ್ ಡಿಪೊ ಮತ್ತು ಪ್ರಕಾಶನ,

ಮಾತೆ ಮಹಾದೇವಿ, ೧೯೯೫, *ಬಸವಧರ್ಮ ಸಂಸ್ಕಾರಗಳು*, ವಿಶ್ವಕಲ್ಯಾಣ ಮಿಶನ್, ಬಸವ ಮಂಟಪ, ಬೆಂಗಳೂರು.

ಮಹೇಶ್ವರಯ್ಯ ಹೆಚ್.ಎಂ. ೨೦೦೪, *ಅರ್ಥವಿಜ್ಞಾನ ಸಾಧನೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೋಹನಕೃಷ್ಣ ರೈ, ೨೦೦೪, *ಪ್ರಭುತ್ವ ಮತ್ತು ಜನತೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರವೀಂದ್ರನಾಥ ಕೆ. (ಸಂ), ೨೦೦೫, *ಬಳ್ಳಾರಿ ಜಿಲ್ಲಾ ದರ್ಶನ*, ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗ.

ರಾಜಪ್ಪ ಡಿ.ಸಿ, ೨೦೦೬, *ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕುಶಲಕಲೆಗಳು*, ಅಕ್ಷರ ಪ್ರಕಾಶನ ಹೆಗ್ಗೋಡು, ಕರ್ನಾಟಕ.

ರಾಜಪ್ಪ ದಳವಾಯಿ ಆರ್. ೧೯೯೩, *ಹಕ್ಕಿಪಕ್ಕಿಯರ ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ರಾಜೇಂದ್ರ ಡಿ.ಕೆ., ೧೯೮೬, *ಗ್ರಾಮೀಣ ಜಾನಪದ, ವಿಶಿಷ್ಟ ಜಾನಪದ*, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ರಾಜರಾಮ ಹೆಗಡೆ (ಸಂ), ೨೦೦೪, *ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ರಾಮಚಂದ್ರರಾವ್ ಎಸ್.ಕೆ., ೧೯೭೫, *ಮೂರ್ತಿಶಿಲ್ಪ ನೆಲೆ, ಹಿನ್ನೆಲೆ*, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರಾಜೇಂದ್ರ ಚೆನ್ನಿ, ಸಿರಾಜ್ ಅಹಮದ್ (ಸಂ), ೨೦೦೪, *ಜಾಗತೀಕರಣ ಒಂದು ಸಮಗ್ರ ಮಂಥನ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಲಲಿತ ಎ.ಪಿ. ೧೯೯೩, *ಕಾಡು ಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಲಕ್ಕಪ್ಪಗೌಡ ಹೆಚ್. ಜೆ. ೧೯೯೭, *ಜಾನಪದ ಕೈಪಿಡಿ, ಕರ್ನಾಟಕ ಸರ್ಕಾರ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,

ವಿ.ಜಿ. ಪೂಜಾರ, ೨೦೦೮, *ಹೂಗಾರ ಸಮಾಜ*, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ.

ವೀರೇಶ ಬಡಿಗೇರ, ೧೯೯೭, *ಅಡಿಗಲ್ಲು*, ಮಯ ಪ್ರಕಾಶನ, ಕಮಲಾಪುರ.

ವಿವೇಕ ರೈ, ಬಿ.ವಿ. ೧೯೮೮, *ಕರ್ನಾಟಕ ಜಾನಪದ ನಂಬಿಕೆಗಳು*, ಕರ್ನಾಟಕ ಜಾನಪದ.

ವೃಷಬೇಂದ್ರಸ್ವಾಮಿ, ೧೯೮೭, *ಜಾನಪದ ದರ್ಶನ ೧೦*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವೆಂಕಟರಮಣಯ್ಯ ಟಿ.ವಿ. ೧೯೯೯, *ಕನ್ನಡ ಗಾದೆಗಳ ಕೋಶ*, ಸಮಾಜ ಪುಸ್ತಕಾಲಯ, ಧಾರವಾಡ,

ವೆಂಕಟಸುಬ್ಬಯ್ಯ (ಸಂ), ೧೯೭೭, *ಕನ್ನಡ ನಿಘಂಟು*, ೩ನೇ ಸಂಪುಟ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು,

ವೆಂಕಟ ರಂಗೋಕಟಿ (ಅನು), ೧೯೮೪, ಗೆಜೇಟಿಯರ್, ಮುಂಬಾಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಏಶಿಯನ್ ಎಜುಕೇಶನ್ ಸರ್ವಿಸಸ್, ಹೊಸದೆಹಲಿ.

ಶಾಮಚರಣ ದುಬೆ, ೧೯೯೦, *ಭಾರತೀಯ ಸಮಾಜ*, ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ.

ಶೇಷಾದ್ರಿ ಬಿ. ಮತ್ತು ಚಂದ್ರಶೇಖರ್. ಟಿ.ಆರ್. (ಸಂ), ೧೯೯೮, ಬಳ್ಳಾರಿ *ಜಿಲ್ಲೆ ಸ್ವಾತಂತ್ರ ಹೋರಾಟಗಾರರು* ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀಕಂಠಶಾಸ್ತ್ರಿ.ಎಸ್, ೨೦೦೬, *ಭಾರತೀಯ ಸಂಸ್ಕೃತಿ*, ಸುವರ್ಣ ಸಾಹಿತ್ಯ ಗ್ರಂಥಮಾಲೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

ಶ್ರೀಕಂಠಯ್ಯ, ೧೯೮೨, *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ*, ಗೀತಾ ಬುಕ್ ಹೌಸ್, ಮೈಸೂರು.

ಸಜ್ಜನ ಜಿ.ಟಿ (ಸಂ), ೨೦೦೪, *ಗಾಣಸಿರಿ*, ಅಖಿಲ ಭಾರತ ಗಾಣಿಗರ ಸಂಘ ರಿ. ಜಿಲ್ಲಾ ಘಟಕ, ಬಿಜಾಪುರ

ಸಿದ್ದಯ್ಯ ಪುರಾಣಿಕ, ೧೯೭೭, *ಶರಣ ಚರಿತಾಮೃತ*, ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಸಾಂಬಮೂರ್ತಿ, ೨೦೦೦, *ನೇಕಾರ ಮತ್ತು ಪದಕೋಶ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸುಧಾಕರ, ೨೦೦೯, *ಜಾನಪದ ನುಡಿಕಟ್ಟುಗಳ ಕೋಶ*, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸುಧಾಕರ, ೧೯೭೯, *ನಮ್ಮ ಸುತ್ತಿನ ಗಾದೆಗಳು*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಸುಂದರ ಅ (ಸಂ), ೧೯೯೭, *ಕರ್ನಾಟಕ ಚರಿತ್ರೆ, ಸಂ-೧,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ ನೇತಿ, ೨೦೦೩, *ಅಭಿವೃದ್ಧಿ ಅರ್ಥಶಾಸ್ತ್ರ,* ಹಿಮಾಲಯ ಪಬ್ಲಿಷಿಂಗ್ ಹೌಸ್, ಮುಂಬೈ.

ಸೋಮಶೇಖರ ಇಮ್ರಾಪುರ,(ಸಂ), ೧೯೯೮, *ಆಯ್ದ ಜನಪದ ಒಗಟುಗಳು,* ಚೇತನ ಪ್ರಕಾಶನ, ಧಾರವಾಡ,

ಸೋಮಶೇಖರ ಇಮ್ರಾಪುರ, ೧೯೮೨, *ಜಾನಪದ ಸಾಹಿತ್ಯ ದರ್ಶನ-೨* ಅಕ್ಕಸಾಲೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,

ಸಿ.ಮಹದೇವ (ಸಂ), ೨೦೦೯, *ನೇಕಾರ ಸಮಾಜ, ಸಂಸ್ಕೃತಿ ಮತ್ತು ಆರ್ಥಿಕ ಸ್ಥಿತಿಗತಿ,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಿ.ಕೆ.ನಾವಲಗಿ, ೧೯೮೯, *ಜಾನಪದ ಸ್ಪಂದನ,* ಭರತ ಪ್ರಕಾಶನ, ಗೋಕಾಕ್,

ಹಿರೇಮಠ ಎಸ್.ಎಸ್., ೧೯೯೩, *ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಭಾಗ-೨ ಜಾತ್ರೆಗಳು,* ಸಮತಾ ಪ್ರಕಾಶನ, ಹೊಸಪೇಟೆ,

ಹೆಬ್ಬಾಲೆ ಕೆ. ನಾಗೇಶ್, *ಕರ್ನಾಟಕ ವೃತ್ತಿಗಳ ಸಿಂಹಾವಲೋಕನ* (ಅಪ್ರಕಟಿತ ಲೇಖನ)

Ananth Krishna Iyer K. and Najundaiah H.V., *The Mysore tribes and Castes,* University of Mysore, Mysore

Arnold, Mathew, *Culture and Anarchy,* 1869, Cambridge university press, London,

Abbe J.A Dubois, *Hindu Customs and Cermonies,* Clarendon press Oxford

Edgar Thurston K.Rangachari, 1987, *Caste and Tribes of Southern India* vol.11 Ctoj Aisian Educational Services New-Delhi Madras,

Richard M. Dorson (Ed) 1968, *Peasant customs and Savage Myths,* 2 vol, R & Paul, London,

Jorapur P.B., *Occupational mobility and industries workers,* Extension service & publication, Karnataka University Dharwad.

K. Aswathappa, 2001, *Essential & Business Environment VII Ed,* Himalaya Publishing house, Mumbai.

Ishwar C. Dhingra, *The Indian Economy, Environment and Policy,* 16th Ed 2005, Sultan chand & sons, New Delhi.

Ruddar Datt, 2010, K.P.M. Sundaram, *Indian Economy* 33 Ed. S. chand & Co. Ramnagar, New Delhi.

S.S. Kanaka, 2004, *Entrepreneurial Development,* S. Chand & Co. Ramnagar, New-Delhi

R.N. Sharms, 1996, *Indian Social Problem,* Media Promotors & Publication Pvt. Ltd- Bombay.

Upadhyaya M.N., *Handicrafts of India,* Andra Pradesh Book Distribution.

ಛಾಯಾಚಿತ್ರಗಳು



ಮಡಕೆಗೆ ಬೇಕಾದ ಹದವಾದ ಮಣ್ಣು



ಮಡಕೆ ತಯಾರಿಸುವ ಕುಂಬಾರ



ಮಡಕೆ ತಯಾರಿಸುವ ಕುಂಬಾರ



ಮಡಕೆ ಸುಡುತ್ತಿರುವುದು



ಮಾರಾಟಕ್ಕೆ ಸಿದ್ಧವಾದ ಮಡಕೆಗಳು



ಮಾರಾಟಕ್ಕೆ ಇಡಲಾದ ಮಡಕೆಗಳು



ಕಬ್ಬಿಣದ ಸಾಧನ ಸಲಕರಣೆಗಳನ್ನು ಅಣಿಗೊಳಿಸುತ್ತಿರುವ ಕಮ್ಮಾರ



ಕೃಷಿ ಸಲಕರಣೆಗಳನ್ನು ತಯಾರಿಸುವ ಕಮ್ಮಾರ



ಆಭರಣಗಳನ್ನು ತಯಾರಿಸುವ ಪತ್ತಾರ



ಆಭರಣಗಳನ್ನು ತಯಾರಿಸುವ ಪತ್ತಾರ



ಲೋಹದ ಮೂರ್ತಿ ತಯಾರಿಸುತ್ತಿರುವ ಶಿಲ್ಪಿ



ರಥಶಿಲ್ಪ ತಯಾರಿಸುತ್ತಿರುವ ಶಿಲ್ಪಿ



ಕಲ್ಲಿನ ಮೂರ್ತಿ ತಯಾರಿಸುತ್ತಿರುವ ಶಿಲ್ಪಿ



ಕೃಷಿ ಉಪಕರಣಗಳನ್ನು ತಯಾರಿಸುವ ಬಡಗಿ



ಗೃಹೋಪಯೋಗಿ ಉಪಕರಣಗಳನ್ನು ತಯಾರಿಸುವ ಬಡಗಿ



ಬಟ್ಟೆ ನೇಯುತ್ತಿರುವ ನೇಕಾರ ಮಹಿಳೆ



ಬಣ್ಣಕ್ಕೆ ಅಣಿಗೊಳಿಸುತ್ತಿರುವ ದಾರ



ಬಟ್ಟೆ ತಯಾರಿಕೆಯಲ್ಲಿ ಆಧುನಿಕ ಉಪಕರಣಗಳ ಬಳಕೆ



ಸಿದ್ಧ ಉಡುಪುಗಳನ್ನು ಹೊಲಿಯುತ್ತಿರುವ ಮಹಿಳೆಯರು



ಏಣಿಗಳನ್ನು ತಯಾರಿಸುತ್ತಿರುವ ಮೇದಾರ



ಬುಟ್ಟಿ ತಯಾರಿಸುತ್ತಿರುವ ಮೇದಾರ ಮಹಿಳೆ



ಮೊರ ಮೊದಲಾದ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಮೇದಾರ ಮಹಿಳೆ



ಬಿದಿರಿನ ಆಧುನಿಕ ವಸ್ತುಗಳ ಮಾರಾಟ



ಚಪ್ಪಲಿಗಳನ್ನು ಹೊಲಿಯುತ್ತಿರುವ ಚಮ್ಮಾರ









ಚಪ್ಪಲಿಗಳನ್ನು ಮಾರಾಟಕ್ಕೆ ಸಿದ್ಧಗೊಳಿಸುತ್ತಿರುವ ಚಮ್ಮಾರ



ಒಂದೆತ್ತಿನ ಗಾಣದಲ್ಲಿ ಎಣ್ಣೆ ತೆಗೆಯುತ್ತಿರುವ ಗಾಣಿಗರು



ಬಂಡೆಗಳನ್ನು ಅಣಿಗೊಳಿಸುತ್ತಿರುವ ವಡ್ಡರು



ಗೃಹೋಪಯೋಗಿ ಒರಳನ್ನು ಕಡೆಯುತ್ತಿರುವ ಕಲ್ಲುಕುಟಿಗ



ಸುಣ್ಣ ತಯಾರಿಸುವ ಸುಣ್ಣಗಾರ ಮತ್ತು ಸುಣ್ಣದ ಗುಮ್ಮಿ



ಸುಣ್ಣದ ಗುಮ್ಮಿ ಮತ್ತು ಸುಣ್ಣದ ಕಲ್ಲು



ಸುಣ್ಣ ಮಾರಾಟ ಮಾಡುತ್ತಿರುವ ಸುಣ್ಣಗಾರ ಮಹಿಳೆ



ಬಳೆ ತಯಾರಿಸುತ್ತಿರುವ ದೃಶ್ಯ



ಬಳೆ ತಯಾರಿಸುತ್ತಿರುವ ಬಳೆಗಾರ









ಬಳೆ ತಯಾರಿಕೆಯಲ್ಲಿ ಮಕ್ಕಳು



ಬಳೆ ತೊಡಿಸುತ್ತಿರುವ ಮಹಿಳೆ



ದೋಬಿಘಾಟ್‌ನಲ್ಲಿ ಬಟ್ಟೆ ಶುಭ್ರಗೊಳಿಸುತ್ತಿರುವ ಮಹಿಳೆಯರು



ತಲೆಗೂದಲನ್ನು ಕತ್ತರಿಸಿ ಶುಚಿಗೊಳಿಸುವ ಕ್ಷೌರಿಕ



ಹೂವಿನ ಹಾರ ಕಟ್ಟುತ್ತಿರುವ ಹೂಗಾರ ಮಹಿಳೆ




ಔಷಧಿ ಕೊಡುವ ನಾಟಿವೈದ್ಯ



ಔಷಧಿ ತಯಾರಿಸುತ್ತಿರುವ ನಾಟಿವೈದ್ಯ



ಎತ್ತುಗಳಿಗೆ ಲಾಳ ಕಟ್ಟುತ್ತಿರುವುದು



ಪತ್ರಿಕೆಗಳಲ್ಲಿ ಕುಲಕಸುಬುಗಳ ಸ್ಥಿತಿಗತಿ





